ಅಥಣಿ ಪರಿಸರದ ವಾಲ್ಮೀಕಿ ಸಮುದಾಯ

(ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಪ್ರೇಮಾನಂದ ಬಿ.

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೯

ಅಥಣಿ ಪರಿಸರದ ವಾಲ್ಮೀಕಿ ಸಮುದಾಯ

(ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಪ್ರೇಮಾನಂದ ಬಿ.

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

ಪ್ರಮಾಣ ಪತ್ರ

ಅಥಣಿ ಪರಿಸರದ ವಾಲ್ಮೀಕಿ ಸಮುದಾಯ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ.ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಸಂಶೋಧನ ಮಹಾಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕ
Bpm
ಪ್ರೇಮಾನಂದ ಬಿ.
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೧೮.೧೧.೨೦೦೯

ದೃಢೀಕರಣ ಪತ್ರ

ಶ್ರೀ ಪ್ರೇಮಾನಂದ ಅವರು ಅಥಣಿ ಪರಿಸರದ ವಾಲ್ಮೀಕಿ ಸಮುದಾಯ ಎಂಬ ಶೀರ್ಷಿಕೆಯ ಪ್ರೌಢಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಲೆಂದು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಈ ಪ್ರೌಢಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇತರ ಉದ್ದೇಶಗಳಿಗಾಗಲಿ ಇವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು
ಡಾ.ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩.೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೧೮.೧೧.೨೦೦೯

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಡಾ.ಬಿ.ಎ.ವಿವೇಕ ರೈ ಹಾಗೂ, ಡಾ.ಎ.ಮುರಿಗೆಪ್ಪ ಅವರಿಗೆ, ಮಾನ್ಯ ಕುಲಸಚಿವರಾದ ಶ್ರೀ ವಿ.ಶಂಕರ್, ಶ್ರೀ ಎಸ್.ಎಸ್.ಪೂಜಾರ ಅವರಿಗೆ ಅಧ್ಯಯನಾಂಗದ ಹಿಂದಿನ ನಿರ್ದೇಶಕರಾದ ಡಾ.ಪಾಂಡುರಂಗಬಾಬು ಮತ್ತು ಇಂದಿನ ನಿರ್ದೇಶಕರಾದ ಡಾ.ವೀರೇಶ ಬಡಿಗೇರ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಅಧ್ಯಯನಕ್ಕೆ ತಾಳ್ಮೆಯಿಂದ ಮಾರ್ಗದರ್ಶನ ಮಾಡಿದ ಮಾರ್ಗದರ್ಶಕರು ಹಾಗೂ ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ಮಂಜುನಾಥ ಬೇವಿನಕಟ್ಟಿ ಅವರಿಗೆ ನಾನು ಋಣಿಯಾಗಿರುತ್ತೇನೆ.

ಅಧ್ಯಯನದ ಅವಧಿಯಲ್ಲಿ ವಿವಿಧ ರೀತಿಯಲ್ಲಿ ಸಹಕರಿಸಿದ ಜಾನಪದ ಅಧ್ಯಯನ ವಿಭಾಗದ ಡಾ.ಸ.ಚಿ.ರಮೇಶ್, ಡಾ.ಮೊಗಳ್ಳಿ ಗಣೇಶ್, ಡಾ.ಹೆಬ್ಬಾಲೆ ನಾಗೇಶ್, ದಿವಂಗತ ಡಾ.ಹರಿಶ್ಚಂದ್ರ ದಿಗ್ಸಂಗೀಕರ್, ವಿಭಾಗದ ಸಿಬ್ಬಂದಿಗಳಾದ ಶ್ರೀ ಅಜಿತ ಹಡಪದ ಹಾಗೂ ಶ್ರೀ ಖಾಸಿಂಭಾಷಾ ಅವರುಗಳಿಗೂ ಅಭಿನಂದನೆಗಳು.

ಯಾವಾಗಲೂ ನನ್ನ ಯಶಸ್ಸನ್ನು ನೋಡಿ ಸಂತೋಷಪಡುವ, ನನ್ನ ಶೈಕ್ಷಣಿಕ ಪ್ರಗತಿಗೆ ಸದಾ ಹರಸುತ್ತಾ ಬಂದಿರುವ ಅವ್ವ ಅನ್ನಪೂರ್ಣಮ್ಮನಿಗೆ ನನ್ನ ನಮನಗಳು. ಹಾಗೆಯೇ ಯಾವತ್ತೂ ತಮ್ಮ ಪ್ರೀತಿಯನ್ನು ಧಾರೆ ಎರೆದು ಸಹಾಯ-ಸಹಕಾರ ಕೊಡುತ್ತಾ ಬಂದ ಅಣ್ಣ ಅತ್ತಿಗೆಯರಾದ ಕಿಶೋರಕುಮಾರ, ವಿಜಯಲಕ್ಷ್ಮಿ, ಪುಟಾಣಿಗಳಾದ ಶೃತಿ, ಸ್ವಾತಿ, ಶ್ರೀನಿವಾಸನಿಗೆ ನನ್ನ ಕೃತಜ್ಞತೆಗಳು.

ಸಹೋದರರಾದ ಅಶೋಕಕುಮಾರ, ಪ್ರತಾಪ, ಮಾರುತಿ, ಬಸವರಾಜನಿಗೂ ಅತ್ತಿಗೆಯರಾದ ಭಾಗ್ಯಲಕ್ಷ್ಮೀ, ವಿಶಾಲಾಕ್ಷಿ, ಸೊಸೆಯಂದಿರಾದ ಸರಸ್ವತಿ, ಮಂಜುಳ, ಮಕ್ಕಳಾದ ಅಶ್ವಿನಿ, ರೋಹಿಣಿ, ಬಸಂತಿ, ಐಶ್ವರ್ಯ, ಸುದೀಪನಿಗೆ ನನ್ನ ನೆನಹುಗಳು. ನಾನು ಬರೆಯುತ್ತಾ ಕುಳಿತಾಗಲೆಲ್ಲ ಅಡ್ಡಡ್ಡ ಬಂದು ಗೀಚುತ್ತಾ ಹಾಳೆಯನ್ನು ಹರಿಯುತ್ತಿದ್ದ ಮಗಳು ಸ್ನೇಹಗಳಿಗೆ ನನ್ನ ನೆನಹು. ನಾನು ಬರೆಯುವುದನ್ನು ನೋಡುತ್ತಾ, ಅತ್ತು ಆಡಿ, ನಗುತ್ತಿದ್ದ ತಮ್ಮನ ಅವಳಿ ಮಕ್ಕಳಾದ ಸುಬ್ಬು, ಸುಬ್ಬಿಗೆ ನನ್ನ ನೆನಹುಗಳು.

ನಾನು ಪಿಎಚ್.ಡಿ. ಅಧ್ಯಯನಕ್ಕೆ ತೊಡಗುವುದಕ್ಕೆ ಕಾರಣೀಭೂತರಾದ ನನ್ನ ಅತ್ತೆ ಕಾಮಾಕ್ಷಮ್ಮ, ಮಾವನವರಾದ ಎನ್.ತಿಮ್ಮಯ್ಯನವರಿಗೂ ನನ್ನ ಕೃತಜ್ಞತೆಗಳು. ಸದಾ ನನ್ನ ಶ್ರೇಯಸ್ಸನ್ನೇ ಬಯಸುವ ಹೆಂಡತಿಯಾದ ಶ್ರೀಮತಿ ಸುಜಾತ ಇವರಿಗೆ ನನ್ನ ನೆನಹು.

ಅಧ್ಯಯನಕ್ಕೆ ಪೂರಕವಾದ ಸಲಹೆ-ಸೂಚನೆಗಳನ್ನು ನೀಡಿ, ತಿದ್ದಿ, ತೀಡಿ ಬರೆಯಲು ನನ್ನ ಜೊತೆಗಿದ್ದು, ಸಹಾಯ ಮಾಡಿದ ಗೆಳೆಯ ಕೆ.ಸಿ.ಸುರೇಶ ಅವರಿಗೆ ವಿಶೇಷ ಕೃತಜ್ಞತೆಗಳು.

ಅಥಣಿಯ ಎಸ್.ಎಸ್.ಎಂ.ಎಸ್.ಮಹಾವಿದ್ಯಾಲಯದ ಉಪನ್ಯಾಸಕಿಯಾದ ಶ್ರೀಮತಿ ವಸಂತಾ ಕಲ್ಯಾಣಿಯವರಿಗೆ, ಜಾಧವಜಿ ಶಿಕ್ಷಣ ಸಂಸ್ಥೆಯ ಕಾರ್ಯಾಧ್ಯಕ್ಷರು ಆದ ಶ್ರೀ ಆರ್.ವಿ.ದೇಶಪಾಂಡೆಯವರಿಗೆ,

ನನ್ನ ಜೊತೆಗೆ ಐದಾರು ವರ್ಷಗಳಿಂದ ಸೇವೆಸಲ್ಲಿಸುತ್ತಿರುವ ನನ್ನ ಎಲ್ಲಾ ಸಹೋದ್ಯೋಗಿ ಮಿತ್ರರಿಗೂ, ಸದ್ಯ ನಾನು ಸೇವೆ ಸಲ್ಲಿಸುತ್ತಿರುವ ಕೆ.ಆರ್.ಇ.ಎಸ್.ಪದವಿಪೂರ್ವ ಮಹಾವಿದ್ಯಾಲಯ, ಐನಾಪುರದ ಆಡಳಿತ ಮಂಡಳಿಯವರಿಗೂ, ಪ್ರಾಚಾರ್ಯರು, ಎಲ್ಲಾ ನನ್ನ ಸಹೋದ್ಯೋಗಿ ಮಿತ್ರರಿಗೂ ನನ್ನ ನಮನಗಳು. ಸ್ನೇಹಿತರಾದ ನಾರಾಯಣ ಕಂದಗಲ್, ಎಚ್.ಮಲ್ಲಿಕಾರ್ಜುನ, ಜಗದೀಶ ಕುಮಾರ ನಾಯಕ, ಎ.ಡಿ.ಬಸವರಾಜ್, ದೇವರಕುರಿ ಓಬಯ್ಯ ಇವರಿಗೆ ನನ್ನ ನೆನಪುಗಳು.

ಛಾಯಾ ಚಿತ್ರಗಳನ್ನು ತೆಗೆದುಕೊಟ್ಟ ಮಿತ್ರ ರಮೇಶ ಬಿ.ನಾಯಕನಿಗೂ ಈ ಪ್ರಬಂಧವನ್ನು ಸುಂದರವಾಗಿ ಮುದ್ರಿಸಿಕೊಟ್ಟ ಗೆಳೆಯ ಕೆ.ವೀರೇಶನಾಯಕನಿಗೂ ನೆನಹುಗಳು.

ಪ್ರೇಮಾನಂದ ಬಿ.

ದಿನಾಂಕ: ೧೮.೧೧.೨೦೦೯

ಸ್ಥಳ: ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕರ್ನಾಟಕದ ಬೆಳಗಾವಿ ಜಿಲ್ಲೆಯಲ್ಲಿರುವ ತಾಲೂಕು ಸ್ಥಳವೇ ಅಥಣಿ. ಈ ಅಥಣಿ ಪಟ್ಟಣವು ಸಾಹಿತ್ಯಿಕ, ಭಾಷಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ. ಶ್ರೀ ಮುರುಘೇಂದ್ರ ಮಹಾ ಸ್ವಾಮಿಗಳ ಕರ್ಮ ಭೂಮಿ ಹಾಗೂ ತಪೋಭೂಮಿಯಾಗಿ ನಗರದ ಪೂರ್ವ ದಿಕ್ಕಿನಲ್ಲಿ ಪುಣ್ಯ ಕ್ಷೇತ್ರವಾದ ಗಚ್ಚಿನ ಮಠವು ಅಥಣಿಯಲ್ಲಿದೆ. ಇಲ್ಲಿನ ಶ್ರೀಗಳವರ ಜನ್ಮಭೂಮಿ ನದಿ-ಇಂಗಳಗಾವಿ. ಇಲ್ಲಿ ತಪೋನಿಧಿಗಳ ಗದ್ದುಗೆ ಇದ್ದು, ಆಧ್ಯಾತ್ಮಿಕ ದೃಷ್ಟಿಯಲ್ಲಿಯೂ ಮಹತ್ತರವಾದ ಸ್ಥಾನವನ್ನು ಪಡೆದಿದೆ. ಅಲ್ಲದೆ ಧರ್ಮ, ಸಂಸ್ಕೃತಿ, ಸಾಮಾಜಿಕ, ರಾಜಕೀಯ, ಪರಂಪರೆಯನ್ನು ಉಳ್ಳ ಪ್ರದೇಶವು ಇದಾಗಿದ್ದು, ಇಲ್ಲಿನ ಆರಾಧ್ಯ ದೈವವಾದ ಮುರುಘೇಂದ್ರ ಶಿವಯೋಗಿಗಳು ವೀರಶೈವ ಧರ್ಮಕ್ಕೆ ಸಂಬಂಧಿಸಿದ ದೈವವಾಗಿದ್ದರೂ, ವೀರಶೈವರಷ್ಟೇ ಅಲ್ಲದೆ ಊರಿನ ಎಲ್ಲಾ ವರ್ಗದ, ಎಲ್ಲಾ ಸಮುದಾಯದ ಜನರು ಮತೀಯ ಭೇದ-ಭಾವ ಮರೆತು ಈ ದೇವರಿಗೆ ನಡೆದುಕೊಳ್ಳುತ್ತಾರೆ. ಶ್ರೀ ಶಿವಯೋಗಿಗಳ ಮಠವು ಬಹಳ ಹಳೆಯ ಕಾಲದ್ದಾಗಿದೆ. ಅಲ್ಲದೆ ಅಥಣಿಯಲ್ಲಿ ಗಚ್ಚಿನಮಠ, ಶೆಟ್ಟರಮಠ, ಮೋಟಗಿಮಠ, ರಾಘವೇಂದ್ರಸ್ವಾಮಿಗಳ ಮಠ, ಗೋಟಖಿಂಡಿಮಠ ಮುಂತಾದ ಮಠಗಳು ಕಂಡುಬರುತ್ತವೆ. ಹಾಗೂ ಶ್ರೀ ಸಿದ್ದೇಶ್ವರ ದೇವಸ್ಥಾನವು ಪ್ರಾಚೀನವಾಗಿದ್ದು, ಭವ್ಯವಾಗಿದೆ. ಇದು ಹಿಂದು ಮಹಮದಿಯರ ಐಕ್ಯತೆಯ ಸಂಕೇತವಾಗಿದೆ. ಪುರಾತನೇಶ್ವರ ಮಂದಿರ, ಶ್ರೀ ಅಮೃತ ಲಿಂಗೇಶ್ವರ ಮಂದಿರ, ಶ್ರೀ ವೆಂಕಟೇಶ್ವರ ಮಂದಿರ, ಶ್ರೀ ರಾಮ ಮಂದಿರ, ಗಣಪತಿ ಮಂದಿರ, ಇಲ್ಲಿ ಪ್ರಸಿದ್ಧವಾಗಿವೆ. ಇನ್ನುಳಿದಂತೆ ಗುಡಿಗುಂಡಾರಗಳು, ಜೈನ ಮಂದಿರಗಳು ಅಥಣಿ ಪರಿಸರದಲ್ಲಿ ಕಂಡುಬರುತ್ತವೆ. ಇಂತಹ ಧಾರ್ಮಿಕ ಪರಂಪರೆಯುಳ್ಳ ಪರಿಸರದಲ್ಲಿ ಹಲವಾರು ಜನಾಂಗದ, ಮತದ ಜನರು ವಾಸವಾಗಿದ್ದಾರೆ.

ಮಾನವನ ವಿಕಾಸದ ಹಂತಗಳನ್ನು ಗಮನಿಸದಾಗ ಆದಿಮಾನವನು ಅಲೆಮಾರಿಯಾಗಿದ್ದನು. ಆಗ ಅವನಿಗೆ ಆಹಾರದ ಅನ್ವೇಷಣೆ ಮುಖ್ಯವಾಗಿತ್ತು. ಪ್ರಾಣಿ ಪಕ್ಷಿಗಳ ಬೇಟೆಯಿಂದಲೇ ತನ್ನ ಆಹಾರಗಳಿಸುತ್ತಿದ್ದ ವಾಸಕ್ಕೆ ವಿಶಿಷ್ಟವಾದ ಯಾವುದೇ ಸ್ಥಳ ಇರಲಿಲ್ಲ. ವ್ಯವಸಾಯವನ್ನು ಕಲಿತ ನಂತರ ಆಹಾರದ ಗಳಿಕೆಯ ಮಾರ್ಗ ಬೇರೆಯಾಯಿತು. ತನ್ನ ನೆನಪಿನ ಶಕ್ತಿಯ ಮೂಲಕ ಅಥವಾ ಗುರುತಿಸುವುದರ ಮೂಲಕ ತನ್ನ ಬದುಕಿನ ಅಂಶಗಳನ್ನು ದಾಖಲಿಸುವ ಪರಿಪಾಠವನ್ನು ಬೆಳಸಿಕೊಂಡನು. ಸಾಮೂಹಿಕವಾಗಿ ಜನರು ತಳವೂರಿದ ಸ್ಥಳವು ಊರಾಯಿತು. ಎಡೆ, ತಾಣ, ಹಟ್ಟಿ, ಗ್ರಾಮ ಮೊದಲಾದ ಹೆಸರುಗಳು ಕ್ರಮೇಣ ಬಳಕೆಗೊಂಡವು. ಹೀಗೆ ಕ್ರಮೇಣವಾಗಿ ಊರುಗಳಲ್ಲಿ ವಾಸಿಸಲು ಮುಂದಾದ ಸಮುದಾಯಗಳಲ್ಲಿ ವಾಲ್ಮೀಕಿ

ಸಮುದಾಯವೂ ಒಂದು. ವಾಲ್ಮೀಕಿ ಸಮುದಾಯವು ಕರ್ನಾಟಕದಾದ್ಯಂತ ವಾಸವಾಗಿದ್ದು, ಹರಪನಹಳ್ಳಿಯ ಪಾಳೆಯಗಾರರು, ಚಿತ್ರದುರ್ಗದ ನಾಯಕರು ಎಂದು ಖ್ಯಾತಿಯನ್ನು ಹೊಂದಿದ ಈ ಸಮುದಾಯವು ಬಹಳಷ್ಟು ಸಂಖ್ಯೆಯಲ್ಲಿ ವಾಸವಾಗಿದ್ದು, ಉತ್ತರ ಕರ್ನಾಟಕದ ಹಲವಾರು ಭಾಗಗಳಲ್ಲಿ ಕಂಡುಬರುತ್ತಾರೆ. ಅಂತೆಯೇ ಅಥಣಿ ಪರಿಸರದಲ್ಲಿ ಈ ಸಮುದಾಯದ ಜನರು ತಾಲೂಕಿನಾದ್ಯಂತ ವಾಸವಾಗಿದ್ದಾರೆ.

ಅಥಣಿ ಪರಿಸರದ ಕೊಟ್ಟಲಗಿ, ಕೊಕ್ಕಟನೂರು, ಬಡಚಿ, ಸತ್ತಿ, ಸವದಿ, ಶೇಡಬಾಳ, ಕೋಹಳ್ಳಿ, ಅಡಾಳಹಟ್ಟಿ, ಬೇಡರ ಹಟ್ಟಿ, ಕಲ್ಲೋತ್ತಿ, ಐನಾಪುರ, ಮುರಗುಂಡಿ, ಅವರಖೋಡ ಮುಂತಾದ ಊರುಗಳಲ್ಲಿ ವಾಲ್ಮೀಕಿ ಸಮುದಾಯದವರು ವಾಸಿಸುತ್ತಿದ್ದಾರೆ. ಹಾಗೆಯೇ ಈ ಪರಿಸರದಲ್ಲಿ ವಾಲ್ಮೀಕಿ ಸಮುದಾಯಕ್ಕೆ ಎಲ್ಲಿಲ್ಲದ ಮಹತ್ವ. ಏಕೆಂದರೆ ಈ ಪರಿಸರವು ದೇಶದ ಸ್ವಾತಂತ್ರ್ಯಕ್ಕಾಗಿ ತನ್ನನ್ನು ಮತ್ತು ತನ್ನ ಬಂಧುಗಳನ್ನು ಸಮರ್ಪಿಸಿಕೊಂಡ ವೀರನಾಯಕ ಸಿಂಧೂರ ಲಕ್ಷ್ಮಣನಿಗೆ ಜನ್ಮಕೊಟ್ಟಿದೆ. ಈತನ ಹೋರಾಟ ಇತಿಹಾಸ ದಲ್ಲಿಯೇ ರೋಮಾಂಚನಕಾರಿಯಾದುದು. ಬ್ರಿಟೀಷರಿಗೆ ಮತ್ತು ಬ್ರಿಟೀಷರಂತೆಯೇ ಇರುವ ಸ್ಥಳೀಯರೊಂದಿಗೆ ಲಕ್ಷ್ಮಣನು ನಡೆಸಿದ ಹೋರಾಟ, ಘರ್ಷಣೆ, ಅನನ್ಯ. ಲಕ್ಷ್ಮಣನ ತಾಯಿಯ ಜನ್ಮಸ್ಥಳ ಅಥಣಿ ಪರಿಸರದ ರಡ್ಡೇರಹಟ್ಟಿ ಎನ್ನುವ ಒಂದು ಪುಟ್ಟಹಳ್ಳಿ. ಅಲ್ಲದೆ ಬ್ರಿಟೀಷರ ವಿರುದ್ಧ ಸ್ವತಂತ್ರ ಸಂಗ್ರಾಮದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಹೋರಾಡಿದಂತಹ ವೀರನಾಯಕರಾದ ಹಲಗಲಿಯ ಬೇಡರಿಗೆ ಅಥಣಿ ಸುತ್ತಲಿನ ಪರಿಸರವು ಜನ್ಮ ನೀಡಿದೆ. ಹೀಗೆ ವಾಲ್ಮೀಕಿ ಸಮುದಾಯದ ಇನ್ನು ಹಲವಾರು ಚಿಕ್ಕ ಪುಟ್ಟ ಪಾಳೆಯಗಾರರಿಗೂ ಈ ಪರಿಸರ ಜನ್ಮ ನೀಡಿದೆ.

ಸಿಂಧೂರ ಲಕ್ಷ್ಮಣನು ಓಡಾಡಿದ ನೆಲ. ಹಲಗಲಿಯ ಬೇಡರು ಈ ಪರಿಸರಕ್ಕೆ ಸಂಬಂಧಿಸಿರುವುದರ ಜೊತೆಗೆ ಇವರುಗಳು ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮೊದಲ ಕನ್ನಡಿಗರು ಎನ್ನುವ ಹೆಗ್ಗಳಿಕೆಯು ಇವರದಾಗಿದೆ. ಇವರೆಲ್ಲ ವಾಲ್ಮೀಕಿ ಸಮುದಾಯಕ್ಕೆ ಸೇರಿದವರು. ಇಂದಿಗೂ ಇವರಿಗೆ ಈ ಪರಿಸರದಲ್ಲಿ ಪ್ರಾಮುಖ್ಯತೆ ಇದೆ. ವಾಲ್ಮೀಕಿ ಸಮುದಾಯವು ಇಲ್ಲಿನ ಮಠಮಾನ್ಯಗಳೊಂದಿಗೆ ಸಹೋದರ ಭಾವನೆಯಿಂದ ನಡೆದುಕೊಂಡು ಬಂದಿದ್ದಾರೆ. ಅಂದರೆ ಇಲ್ಲಿನ ನಾಯಕರು ವೀರಶೈವರೊಂದಿಗೆ ಹಾಗೂ ಇತರೆ ಸಮುದಾಯದವರೊಂದಿಗೂ ಅನನ್ಯತೆ ಹಾಗೂ ಸಾಮರಸ್ಯದಿಂದ ಜೀವನ ನಡೆಸಿಕೊಂಡು ಬಂದು, ಇಲ್ಲಿಯ ಒಂದು ಘಟಕವಾಗಿ ಬೆಳೆದು ನಿಂತಿದ್ದಾರೆ. 'ದೇಶದ ಬಗ್ಗೆ ಹೆಮ್ಮೆಪಡುವುದಕ್ಕಿಂತ ದೇಶವೇ ತನ್ನ ಬಗ್ಗೆ ಹೆಮ್ಮೆ ಪಡುವಂತೆ ಬದುಕಬೇಕು' ಎನ್ನುವ ಅಬ್ರಹಾಂ ಲಿಂಕನ್ ಅವರ ಮಾತಿನಂತೆ ಭಾರತದ ಇತಿಹಾಸದಲ್ಲಿ ಪಾರತಂತ್ರ್ಯದ ತಪಸ್ಸಿನಿಗೂ ತನ್ನದೆ ಆದ ಸ್ಥಾನವಿರುವಂತೆ, ಈ ತಮಂಧದ ಕಬಂದ (ಕಬಂಧ) ಬಾಹುಗಳಿಂದ ಭಾರತ ಮಾತೆಯನ್ನು ಬಿಡಿಸುವುದಕ್ಕಾಗಿ ಹೋರಾಡಿ, ಬಲಿದಾನಗೈದ ಅಮರ ಪೌರುಷಮಯ ಜೀವಿಗಳನ್ನು ನೆನೆಯುವುದೊಂದು ನನ್ನ ಅಧ್ಯಯನದ ಒಂದು ಅಮೃತಗಳಿಗೆಯೇ ಸರಿ. ಸ್ವಾತಂತ್ರ್ಯವೆಂದರೆ ಒಂದು ಆರ್ಭಟವಲ್ಲ. ಅದು ಒಂದು ಸಮುದಾಯದ ಅಂತರಂಗದಲ್ಲಿ ನಿರಂತರವಾಗಿ ಹರಿವ, ಸರಾಗವಾದ ಅದೃಶ್ಯ ದುನಿ. ಒಂದೇ ಗುರಿಯಿಟ್ಟುಕೊಂಡು, ಈ ಸ್ವಾತಂತ್ರ್ಯ

ಕುಂಡದಲ್ಲಿ ತನ್ನನ್ನು ಸಮರ್ಪಿಸಿಕೊಂಡ ಒಂದು ಇಡೀ ಸಮುದಾಯದ ಅಮೋಘ ಯಶೋಗಾಥೆ ಇದಾಗಿದೆ. ಭರತಭೂಮಿಯ ಅಗಾಧ ಸಾಗರದ ಚಿಕ್ಕ ಬಿಂದುವಾದ ಅಥಣಿ ತನ್ನಿಂದ ಹಲವಾರು ಝರಿಗಳನ್ನು ಇದಕ್ಕೆ ಸೇರಿಸಿದೆ.

ಅಥಣಿ ತಾಲೂಕು ರಾಜ್ಯದ ವಾಯುವ್ಯದಲ್ಲಿರುವ ಬೆಳಗಾವಿ ಜಿಲ್ಲೆಯ ಉತ್ತರಕ್ಕೆ ಇದ್ದು ಇಲ್ಲಿ ಕೃಷ್ಣಾನದಿ ಹರಿದು ಬಂದಿರುವುದರಿಂದ ಸೃಷ್ಟಿ ಸೌಂದರ್ಯದ ತವರೂರು ಆಗಿದೆ. ಕೃಷ್ಣಾನದಿಯು ಈ ಪರಿಸರದ ಜೀವನಾಡಿಯಾಗಿದೆ. ಕರುನಾಡ ನಾಲ್ಕು ಸಾವಿರ ಹಳ್ಳಿಗಳ ಭೂಭಾಗವಾದ ಇದು ಕ್ರಿ.ಶ. ೧೦೩೦ರಲ್ಲಿ ಕಲ್ಯಾಣಿ ಚಾಲುಕ್ಯರ ಆರನೇ ವಿಕ್ರಮಾದಿತ್ಯನ ಪ್ರದೇಶದಲ್ಲಿ ಅಥಣಿಯೂ ಒಂದಾಗಿತ್ತು. ಈ ಪ್ರದೇಶವು ಕ್ರಿ.ಶ. ೪೭೯ರವರೆಗೆ ಬನವಾಸಿಯ ಕದಂಬರ ಕೈವಶದಲ್ಲಿತ್ತು. ಇವರು ಕನ್ನಡವನ್ನು ಮೊದಲು ಆಡಳಿತ ಭಾಷೆಯನ್ನಾಗಿಸಿ ಶಿಲಾಶಾಸನಗಳನ್ನು ಕನ್ನಡದಲ್ಲಿ ಕೆತ್ತಿಸಿದರು. ಹಲ್ಮಿಡಿ ಶಾಸನವು ಕೂಡ ಇವರ ಕಾಲದ್ದಾಗಿದೆ.

ಇಂತಹ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ ಅಥಣಿ ತಾಲೂಕಿನಲ್ಲಿ ವೀರಶೈವರು, ಜೈನರು, ಬ್ರಾಹ್ಮಣರು, ಮರಾಠರು, ಅಂಬಿಗರು, ತಳವಾರರು, ವಡ್ಡರು, ಕುರುಬರು, ಬೇಡರು, ಸಮಗಾರರು, ಹೊಲೆಯ, ಮಾದಿಗ ಹಾಗೂ ಮುಸಲ್ಮಾನರು ಮುಂತಾದ ಸಮುದಾಯದ ಜನರು ವಾಸಿಸುತ್ತಾರೆ. ಆದಾಗಲೂ ಬಹುಸಂಖ್ಯೆಯಲ್ಲಿ ವೀರಶೈವರು ಕಂಡುಬರುತ್ತಾರೆ. ಇವರಲ್ಲಿ ಕೆಲವರು ವ್ಯಾಪಾರವನ್ನು ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಇಲ್ಲಿ ಜೈನರ ಸಂಖ್ಯೆಯೂ ಹೆಚ್ಚಾಗಿದ್ದು, ಹೆಚ್ಚುಮಂದಿ ದಿಂಗಂಬರ ಪಂಗಡದವರಿದ್ದಾರೆ. ಇವರಲ್ಲಿ ಕೆಲವರು ಬೇಸಾಯವನ್ನು ಮಾಡುತ್ತಿದ್ದಾರೆ. ಅಲ್ಲದೆ ಅಂಬಿಗರು, ಟೋಕ್ರಿಕೋಳಿ, ಮಹದೇವ ಕೋಳಿ, ತಳವಾರ, ಬಾರಿಕ ಹೀಗೆ ಒಳಪಂಡಗಳು ಇವೆ. ಇಲ್ಲಿನ ವಡ್ಡರು ಶ್ರಮಜೀವಿಗಳು. ಶೇಡಬಾಳ, ಬೇಡರಹಟ್ಟಿ, ರಡ್ಡೇರಹಟ್ಟಿ, ಕಲ್ಲೊತಿ, ಕೋಹಳ್ಳಿ, ಅಡಾಳಹಟ್ಟಿಯಲ್ಲಿ ಬೇಡಸಮುದಾಯದವರು ಹೆಚ್ಚು ಸಂಖ್ಯೆಯಲ್ಲಿ ಕಂಡುಬರುತ್ತಾರೆ.

ಮಾನವನು ಸಂಘಜೀವಿ. ಸಮಾನ ಆಸಕ್ತಿಗಳನ್ನು ಹಾಗೂ ರೀತಿ-ನೀತಿಗಳನ್ನು ಹೊಂದಿದ ವ್ಯಕ್ತಿಗಳ ಗುಂಪಿನಲ್ಲಿ ಬದುಕಲು ಅಪೇಕ್ಷಿಸುತ್ತಾನೆ. ಇಂತಹ ಗುಂಪನ್ನು ಸಮಾಜ ಎಂದು ಕರೆಯಬಹುದು. ಈ ಸಮಾಜ ಎನ್ನುವುದು ಒಂದು ಘಟಕ ಎಂದು ಪರಿಭಾವಿಸಿದರೆ, ಈ ಘಟಕವು ಅಥವಾ ಸಮಾಜವು ತನ್ನದೇ ಆದ ರೀತಿ-ನೀತಿ, ವಿಧಿ-ನಿಷೇಧಗಳನ್ನು ರೂಢಿಸಿಕೊಂಡಿರುತ್ತದೆ. ಇಂತಹ ರೀತಿ-ನೀತಿ, ವಿಧಿ-ನಿಷೇಧಗಳು ಆಯಾ ಸಮಾಜದ ಸಮುದಾಯದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಅಂದರೆ ಪ್ರತಿಯೊಂದು ಸಮುದಾಯಕ್ಕೂ ಅದರದ್ದೇ ಆದ ಸಂಸ್ಕೃತಿ ಇರುತ್ತದೆ. ಇಂತಹ ಸಮಾಜದಲ್ಲಿ ವಾಲ್ಮೀಕಿ ಸಮುದಾಯವು ಕರ್ನಾಟಕದ ತುಂಬಾ ಕಂಡುಬರುತ್ತಿದ್ದೂ, ಪ್ರಾದೇಶಿಕವಾಗಿ ಅಲ್ಪ-ಸ್ವಲ್ಪ ಬದಲಾವಣೆಯನ್ನು ಹೊಂದಿರುತ್ತದೆ. ಆಚರಣೆ, ಸಂಪ್ರದಾಯ, ನಡೆ-ನುಡಿಗಳಲ್ಲಿ ಹಲ ಕೆಲವು ವ್ಯತ್ಯಾಸಗಳನ್ನು ಹೊಂದಿದ್ದು, ಅಥಣಿ ಪರಿಸರದ ವಾಲ್ಮೀಕಿ ಸಮುದಾಯವು ಇದಕ್ಕೆ ಹೊರತಲ್ಲ. ಹಾಗಾಗಿ ಈ ಪರಿಸರದ ವಾಲ್ಮೀಕಿ

ಸಮುದಾಯದ ಆಚರಣೆಗಳು, ಸಂಪ್ರದಾಯಗಳು, ವಿಧಿ-ನಿಷೇಧಗಳು, ಇವರ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಹಾಗೂ ಈ ಪರಿಸರದ ಚಾರಿತ್ರಿಕ ಹಿನ್ನೆಲೆ ಅಲ್ಲದೆ ಸ್ವಾತಂತ್ರ್ಯ ಹೋರಾಟದಲ್ಲಿ ಇವರು ಧುಮುಕಿದ್ದು ಏಕೆ? ಇವರಿಗೆ ಪ್ರೋತ್ಸಾಹ ಸಿಕ್ಕಿದ್ದು ಹೇಗೆ? ಅಥವಾ ಇವರು ಸ್ವತಃ ಕಲಿಗಳೇ? ಅಲ್ಲದೆ ಭಾರತ ಸ್ವಾತಂತ್ರ್ಯಕ್ಕೆ ಇವರ ಕೊಡುಗೆ ಏನು? ಎಂಬುದಾಗಿ ಇಲ್ಲಿಯ ವಾಲ್ಮೀಕಿ ಸಮುದಾಯದ ಸಾಮಾಜಿಕ ಜೀವನದ ಪರಿಯನ್ನು ಕುರಿತು ಅಧ್ಯಯನ ನಡೆಸಲು ಮುಂದಾಗಬೇಕಾಗಿದೆ. ವಾಲ್ಮೀಕಿ ಸಮುದಾಯವನ್ನು ಈ ರೀತಿಯ ಹತ್ತು ಹಲವು ಮಗ್ಗಲುಗಳಿಂದ ಅಧ್ಯಯನ ಮಾಡುವುದು ಅನಿವಾರ್ಯ ಹಾಗೂ ಇಲ್ಲಿನ ಉದ್ದೇಶವೂ ಆಗಿದೆ.

ಇಡೀ ಭಾರತ ದೇಶವನ್ನು ಪರಿಗಣಿಸಿ ಭಾರತೀಯ ಸಂಸ್ಕೃತಿ ಎಂದು ಕರೆಯಲಾಗಿದ್ದು, ಈ ಸಂಸ್ಕೃತಿಯ ಒಂದು ಘಟಕ ಈ ವಾಲ್ಮೀಕಿ ಸಮುದಾಯ. ಇದು ತನ್ನದೇ ಆದ ವೈಶಿಷ್ಟ್ಯ ಪೂರ್ಣ ಸಂಸ್ಕೃತಿಯನ್ನು ಒಳಗೊಂಡಿದೆ. ಈ ಸಮುದಾಯದ ಬಗೆಗೆ ಅಥಣಿ ಪರಿಸರವನ್ನು ಅನುಲಕ್ಷಿಸಿ ಸಂಪೂರ್ಣ ವಾಗಿ ಅಧ್ಯಯನ ಮಾಡುವುದರ ಜೊತೆಗೆ ಉಳಿದ ಸಮುದಾಯಗಳೊಂದಿಗೆ ಇರುವ ಸಂಬಂಧವನ್ನು ಅಭ್ಯಾಸಿಸುವುದನ್ನು ಉದ್ದೇಶವಾಗಿಟ್ಟುಕೊಂಡು ಇಲ್ಲಿನ ಭೌಗೋಳಿಕ ವಿವರಣೆ, ಜನಸಂಖ್ಯೆ ಪ್ರಮುಖ ಉದ್ದೇಶ, ಆಯಾ ಜಾತಿಗೆ ಅನ್ವಯಿಸಿದಂತೆ ಈ ಅಧ್ಯಯನದಲ್ಲಿ ವಿವರಿಸಲಾಗಿದೆ. ಹಾಗೆಯೇ ಇಲ್ಲಿನ ಪ್ರಮುಖ ಬೆಳೆಗಳು, ಇಲ್ಲಿಯವರ ಜನಜೀವನ ಕುರಿತು ಅಧ್ಯಯನ ಮಾಡುವುದೂ ಕೂಡ ಪ್ರಮುಖ ಉದ್ದೇಶವಾಗಿದೆ.

ಭಾರತವು ಹಳ್ಳಿಗಳ ನಾಡು. ಇಲ್ಲಿಯ ಗ್ರಾಮಗಳು ವೈಶಿಷ್ಟ್ಯಗಳಿಂದ ಕೂಡಿವೆ. ಇಲ್ಲಿ ಕೃಷಿಯು ಪ್ರಧಾನವಾದ ವೃತ್ತಿ. ಅಂತೆಯೇ ಕೃಷಿ ಪ್ರಧಾನವಾದ ಚಟುವಟಿಕೆಗಳನ್ನು ಹಬ್ಬಗಳನ್ನಾಗಿ ಆಚರಿಸಿಕೊಂಡು ಬಂದಿದೆ. ವಾಲ್ಮೀಕಿ ಸಮುದಾಯವು ಕೂಡ ಆಯಾ ಗ್ರಾಮಕ್ಕೆ ಸರಿಹೊಂದುವಂತಹ ಆಚರಣೆಗಳನ್ನು ಕ್ರೀಡೆಗಳನ್ನು ಹಬ್ಬಗಳನ್ನು ಆಚರಿಸಿಕೊಂಡು ಬಂದಿದ್ದಾರೆ. ನಮ್ಮ ಭಾರತದ ನೆಲವನ್ನು ಬಹುಪಾಲು ಅರಣ್ಯವು ಆಕ್ರಮಿಸಿಕೊಂಡಿದೆ. ಇಂತಹ ಅರಣ್ಯದ ಬಹುಪಾಲು ಭಾಗದಲ್ಲಿ ಆದಿವಾಸಿಗಳ ವಾಸವು ನಡೆದಿದೆ. ಕೆಲವು ಬುಡಕಟ್ಟುಗಳಂತೂ ಆರಣ್ಯವನ್ನು ಬಿಟ್ಟು ಬರಲು ನಿರಾಕರಿಸುತ್ತವೆ. ಅಂತಹ ಬುಡಕಟ್ಟುಗಳಲ್ಲಿ ವಾಲ್ಮೀಕಿ ಸಮುದಾಯವು ಹಲವಾರು ಸ್ಥಿತ್ಯಂತರಗಳನ್ನು ದಾಟಿ ಮೇಲೆ ಬರಲು ಪ್ರಯತ್ನಿಸುತ್ತಿದೆ. ಈ ಮೂಲ ನಿವಾಸಿಗಳನ್ನು ಕುರಿತು ಆದ್ಯಗ್ರಂಥಗಳಲ್ಲಿ ಉಕ್ತವಾಗಿರುವಂತೆ ಇವರನ್ನು ಕಿರಾತರು, ನಿಷಾಧರು, ಪುಳಿಂದರು, ವ್ಯಾಧರು, ಬೇಡರು ಎಂದು ಗುರುತಿಸುವುದು ಕಂಡುಬರುತ್ತದೆ. ಇದರಿಂದ ಇವರು ಆರ‍್ಯರ ವೈರಿಗಳಾಗಿದ್ದರು ಎಂದು ತಿಳಿದುಬರುತ್ತದೆ. ಹಾಗೆಯೇ ಆರ‍್ಯರು ದ್ರಾವಿಡರಿಗಿಂತಲೂ ಮೊದಲೇ ಈ ಸಮುದಾಯದವರು ಇದ್ದಿರಬೇಕು. ಹಾಗಾಗಿ ಈ ಸಮುದಾಯದ ಜೀವನ ಶೈಲಿ ಹೇಗೆ ಬದಲಾವಣೆಯನ್ನು ಹೊಂದುತ್ತಾ ಬಂದಿದೆ. ಈಗ ಯಾವ ರೀತಿ ಇದೆ. ಎಂದು ಅಥಣಿ ಪರಿಸರಕ್ಕನುಗುಣವಾಗಿ ಇಲ್ಲಿ ನೋಡಲಾಗಿದೆ.

ಇನ್ನು ಅಥಣಿ ಪರಿಸರದ ಹಲವಾರು ಗ್ರಾಮಗಳು ವಿವಿಧ ರೀತಿಯ ಐತಿಹ್ಯಗಳನ್ನು ಹೊಂದಿರುವ ಪ್ರದೇಶಗಳಾಗಿವೆ. ಅಥಣಿಗೆ ಕ್ರಿ.ಶ. ೧೬೭೩ರಲ್ಲಿ ಆಗಮಿಸಿದ ಜರ್ಮನ್ ಪ್ರವಾಸಿಗ ಮಂಡೆಲ್ ಸ್ಲೊ ಎಂಬುವರು ಅಥಣಿಯನ್ನು ಅಟ್ಟನಿ ಎಂದು ಕರೆದಿದ್ದಾನೆ. ಆಗ ಇದು ಬಿಜಾಪುರ-ಗೋವೆಯ ನಡುವೆ ವ್ಯಾಪಾರ ಕೇಂದ್ರವಾಗಿತ್ತು. ಕ್ರಿ.ಶ. ೧೬೭೫ರಲ್ಲಿ ಆಗಮಿಸಿದ ಆಂಗ್ಲ ಪ್ರವಾಸಿಗ ಫ್ರೇಯರ್ ಇದಕ್ಕೆ 'ಹಟ್ಟನಿ' ಎಂದು ಹೆಸರಿಸಿದ್ದಾನೆ. ಹಸ್ತಿನಿ (ಹೆಣ್ಣಾನೆ)-ಅಸ್ತಿನಿ-ಅಥಣಿ ಆಗಿರಬೇಕು ಎಂದು ಕೆಲವರ ಹೇಳಿಕೆ. ಬಿ.ಎಂ. ಶ್ರೀಕಂಠಯ್ಯನವರು ಕ್ರಿ.ಶ. ೧೯೩೪ರಲ್ಲಿ ಅಥಣಿಯಲ್ಲಿ ಜರುಗಿದ ಬೆಳಗಾವಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮಾತನಾಡಿದ ಅಭಿಪ್ರಾಯದಂತೆ ಗ್ರೀಸ್ ದೇಶದ ರಾಜಧಾನಿ ಅಥೇನ್ಸ್ ಜಗತ್ತಿನ ಪ್ರಮುಖ ಪಟ್ಟಣಗಳಲ್ಲಿ ಒಂದಾಗಿತ್ತು. ಅಥಣಿ ಬಹಳಷ್ಟು ಹೆಸರುಗಳಿಸಿದ್ದರಿಂದ ಈ ನಗರಕ್ಕೆ ಅಥೇನ್ಸ್ ಎಂದಿರಬೇಕು. ಅದು ಮುಂದೆ ಅಥಣಿ ಆಗಿರಬೇಕು ಎಂಬುದು ಶ್ರೀ ಅವರ ವಿಚಾರ. ಅಥಣಿ ತಾಲೂಕಿನ ಗಡಿಯ ಗ್ರಾಮವಾಗಿರುವ ಕಕಮರಿಯು ಇಲ್ಲಿಂದ ೧೯-೨೦ ಕಿ.ಮೀ. ದೂರದಲ್ಲಿದ್ದು, ಅಲ್ಲಿಗೆ ದಿನಕ್ಕೆ ಒಂದಾದರೂ ಬಸ್ಸುಗಳು ಓಡಾಡುತ್ತಿರಲಿಲ್ಲ. ಈ ಕಕಮರಿಯೂ ಒಂದಾನೊಂದು ಕಾಲಕ್ಕೆ ಗೋಸಂಪತ್ತು ಸಮೃದ್ಧವಾದ ಊರಾಗಿತ್ತು. ಊರಿನ ಆಚೆಗೆ ಕಾಣುವ ಗುಡ್ಡದಲ್ಲಿ ಹೋರಿಗಳಿಗೆ ಮೇಯಲು ಸಾಕಷ್ಟು ಹುಲ್ಲು ದೊರೆಯುತ್ತಿತ್ತು. ಸುತ್ತಮುತ್ತಲಿನ ಪರಿಸರವು ಸಮೃದ್ಧಿಯಿಂದ ಕೂಡಿದ್ದು, ಸುಂದರ ತಾಣವಾಗಿದೆ. ಶುಕ್ರ ಋಷಿಗಳ ಆಶ್ರಮವು ಹೋಗಿ ದಂಡಕಾರಣ್ಯವೆಂದು ಪ್ರಸಿದ್ಧವಾದ ಸ್ಥಳ ಇದಾಗಿದೆ. ಶೂದ್ರ ಋಷಿಗಳು ಕ್ರೋಧಗೊಂಡು ಆತನ ರಾಜ್ಯ ನಾಶಗೊಂಡು ದಂಡಕಾರಣ್ಯವಾಗಲೆಂದು ಹಾಗೂ ಆತನ ಮಗಳಿಗೆ ಹುಲಿಯಾಗೆಂದು ಶಾಪಕೊಟ್ಟರು. ಕಾರಣ ಆಕೆ ಅವರಲ್ಲಿ ವಿನಮ್ರಳಾಗಿ ಬೇಡಿಕೊಂಡಾಗ ಹೆಣ್ಣು ಹುಲಿಯ ಸ್ಥಾನದಲ್ಲಿ ಒಂದು ಸುಂದರ ಸ್ತ್ರೀರೂಪ ತಾಳುತ್ತಾಳೆ. ಅವಳೇ ಕಾಕುಮಾರಿ ಎಂದು ಅವಳ ಹೆಸರೆ ಕಕಮರಿ ಎಂದು ಐತಿಹ್ಯ.

ಇನ್ನು ರಾಮತೀರ್ಥದ ಶ್ರೀ ಉಮಾರಾಮೇಶ್ವರ. ಕೋಹಳ್ಳಿಯ ಸಂಗಮೇಶ್ವರ, ಕೊಟ್ಟಲಗಿಯ ಸಿದ್ಧೇಶ್ವರ, ಜತ್ತಾದ ಬಂಕೇಶ್ವರ, ಮಂಚುಂಡೆಯ ಮುಚುಕುಂದೇಶ್ವರ ಇವರ ಬಗ್ಗೆಯೂ ಒಂದೊಂದು ಕಥೆಯೇ ಇದೆ. ಹಾಗೆಯೇ ಅವರಖೋಡ ಆಂಜನೇಯ, ಖಿಳೇಗಾಂವ್ ಬಸವಣ್ಣ ಮುಂತಾದ ದೇವರುಗಳು ಇಂತಹ ಐತಿಹ್ಯಗಳಿಗೆ ದಾರಿ ಮಾಡುಕೊಡುತ್ತವೆ.

ಅಲ್ಲದೆ ರಾಮಾಯಣದ ಕಾಲದಲ್ಲಿ ರಾಮನು ಸೀತೆಯನ್ನು ಅರಸುತ್ತಾ, ದಕ್ಷಿಣಾಭಿಮುಖವಾಗಿ ಹೊರಟು ಕೋಹಳ್ಳಿಯ ಋಷಿಯ ಆಶ್ರಮಕ್ಕೆ ಬಂದಿದ್ದನಂತೆ ಕಹೋಳ ಋಷಿಯ ಸಲಹೆಯ ಮೇರೆಗೆ ಓಂಕಾರೇಶ್ವರನು ಹಾಗೂ ಕೋಹಳ್ಳಿ ಋಷಿಯನ್ನು ಪೂಜಿಸಿದ್ದಕ್ಕಾಗಿ ತನ್ನ ಹೆಸರು ಸಮ್ಮಿಲಿತವಾಗಿ ರಾಮೇಶ್ವರ ಎಂಬ ಹೆಸರನ್ನು ಧರಿಸಬೇಕೆಂಬ ಹಾಗೂ ಅಂದಿನಿಂದ ಆ ಗ್ರಾಮ ರಾಮತೀರ್ಥ ಎಂದು ನಾಮಕರಣವಾಗಬೇಕೆಂದು ಈಶ್ವರನನ್ನು ಕೇಳಿಕೊಂಡಂತೆ ಅರ್ಜುನನು ಪಾಶುಪತಾಸ್ತ್ರ ಪಡೆದುಕೊಂಡದ್ದು ಕೂಡ ಈಶ್ವರನನ್ನು ಆರಾಧಿಸಿಯೇ ಎಂದು ಹೇಳುವುದುಂಟು.

ಈ ರೀತಿ ಅಥಣಿ ಪರಿಸರಕ್ಕೆ ಸೇರ್ಪಡೆಯಾದ ೧೨೦ ಹಳ್ಳಿಗಳು, ಅಲ್ಲಿನ ಐತಿಹಾಸಿಕ ಹಿನ್ನೆಲೆ ಹಾಗೂ ಧಾರ್ಮಿಕ ತಾಣಗಳು ಸಾಮಾಜಿಕ ಜೀವನದ ವ್ಯವಸ್ಥೆಯನ್ನು ಕುರಿತು ಅಧ್ಯಯನ ಮಾಡಲು ತೊಡಗಿ ವಾಲ್ಮೀಕಿ ಸಮುದಾಯವು ವಾಸಿಸುವ ಪರಿಸರಗಳ ಪರಿಚಯ ಹಾಗೂ ಈ ಸಮುದಾಯದ ಹಿನ್ನೆಲೆ, ಇತಿಹಾಸ ಮತ್ತು ಪರಂಪರೆ, ಕುರಿತು ಅಧ್ಯಯನ ಮಾಡಲಾಗಿದೆ. ಹಾಗೆಯೇ ವಾಲ್ಮೀಕಿ ಸಮುದಾಯದ, ಆಚರಣೆ, ನಂಬಿಕೆ, ವಿಧಿ-ನಿಷೇಧಗಳು ಹಾಗೂ ಹರಕೆಗಳನ್ನು ಕುರಿತು ಅಧ್ಯಯನ ಮಾಡಿರುವುದು ಇಲ್ಲಿನ ಉದ್ದೇಶವಾಗಿರುತ್ತದೆ. ಅಲ್ಲದೆ ಭೌತಿಕ ಜಾನಪದ ಮತ್ತು ಈ ಸಮುದಾಯದವರು ಇತರೆ ಸಮುದಾಯದವರೊಂದಿಗೆ ಹೊಂದಿದ ಸಂಬಂಧ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳು ಇವರ ಸಾಹಿತ್ಯ ಮತ್ತು ಕಲೆಗಳು ಕುರಿತಾಗಿ ಅಧ್ಯಯನ ಮಾಡಲಾಗಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ವಾಲ್ಮೀಕಿ ಸಮುದಾಯದ ಮೇಲೆ ಹೆಚ್ಚಿನ ಬೆಳಕು ಚೆಲ್ಲಲು ಪ್ರಯತ್ನಿಸಿರುವ ಈ ನನ್ನ ಅಧ್ಯಯನವು ಈ ಪರಿಸರಕ್ಕನುಗುಣವಾಗಿ ಬಹುಮುಖ್ಯವೆನಿಸಿದೆ.

ಮಾನವನ ಸಮಾಜ ವ್ಯವಸ್ಥೆಯ ಸಮಗ್ರ ಅಧ್ಯಯನದ ದೃಷ್ಟಿಯಿಂದ, ಒಟ್ಟು ಮಾನವ ಸಂಸ್ಕೃತಿಯನ್ನು ಅದರ ಸಮಗ್ರ ಹಿನ್ನೆಲೆಯಲ್ಲಿ ಅರಿಯುವ ಕಾರಣದಿಂದ, ಪ್ರತಿಯೊಂದು ಸಮಾಜವನ್ನು ಬಿಡಿ ಬಿಡಿಯಾಗಿ ಅಧ್ಯಯನ ಮಾಡುವ ಕೆಲಸವು ಇಂದು ಭರದಿಂದ ಸಾಗಿದೆ. ಸಮಾನ ಗುಣ-ಸ್ವಭಾವವುಳ್ಳ ಹಲವಾರು ಸಮಾಜಗಳು ಒಟ್ಟಾಗಿ ಕೂಡಿ ಬಾಳುವೆ ಮಾಡುವ, ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ ಒಂದೊಂದು ಸಮಾಜವು ವಿಶಿಷ್ಟವಾದ ಸಂಸ್ಕೃತಿಯನ್ನು ಹೊಂದಿರುವುದು ಸಹಜ. ಯಾವುದೇ ಸಂಸ್ಕೃತಿಯಾಗಲಿ ಒಂದು ಗೊತ್ತಾದ ಸಮುದಾಯದ ಜೀವನ ಕ್ರಮವೇ ಆಗಿರುತ್ತದೆ. ಹೀಗೆ ಒಂದು ಸಮುದಾಯ ಕುರಿತ ಅಧ್ಯಯನ ಮಾಡುವಾಗ, ಒಂದು ಸಮುದಾಯದ ಸಂಸ್ಕೃತಿ ಕುರಿತ ವಿಚಾರ ಬಂದಾಗ ಆ ಸಂಸ್ಕೃತಿಯ ಸಮಸ್ತಾಂಶವೂ ಅದರಲ್ಲಿ ಅಂತರ್ಗತವಾಗಿರುತ್ತದೆ.

ಹೀಗೆ ಒಂದು ಸಮುದಾಯದ ಅಧ್ಯಯನವೆಂದಕೂಡಲೇ, ಆ ಸಮುದಾಯದ ಸಾಂಸ್ಕೃತಿಕ ವಿವರಗಳನ್ನು ಕಲೆಹಾಕುವುದು ಅಷ್ಟೇ ಅಲ್ಲದೆ, ಅದರ ಆಚೆಗೂ ಒಂದು ಸಮುದಾಯದ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಿದಾಗ ಪ್ರತಿಯೊಂದು ಸಮುದಾಯವು ಒಂದೊಂದು ಹೊಸ ದಾರಿಯನ್ನು ತೋರಿಸುವಲ್ಲಿ ಮುಂದಾಗುತ್ತವೆ. ಅಂದರೆ ಆಯಾ ಸಮುದಾಯಗಳು ನಡೆದುಬಂದದಾರಿ, ಅನುಭವಿಸಿದ ನೋವು-ನಲಿವು, ಹಾಡು, ಕಥೆ, ಕುಣಿತ, ಹೋರಾಟ, ಹತ್ತು ಹಲವು ಬಗೆಯ ಆಂತರಿಕ ಭಾವನೆಯನ್ನು ಹೊರಹಾಕುತ್ತವೆ. ಈ ಹಿನ್ನೆಲೆಯಲ್ಲಿ ಅಥಣಿ ಪರಿಸರದ ವಾಲ್ಮೀಕಿ ಸಮುದಾಯದ ಒಟ್ಟು ಸಾಂಸ್ಕೃತಿಕ ವಿವರಗಳನ್ನು ಕೂಡಿ ಹಾಕುತ್ತಲೇ ವಿಶ್ಲೇಷಣೆಗೆ ಒಳಪಡಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಈ ಅಧ್ಯಯನವನ್ನು ಒಂದು ಶಿಸ್ತಿಗೆ ಒಳಪಡಿಸುವಲ್ಲಿ ಉಪಯುಕ್ತವಾದ ಪುಸ್ತಕಗಳು, ಬಿಡಿಲೇಖನಗಳು, ಮಾಹಿತಿಯನ್ನು ಒದಗಿಸುವ ಸಮುದಾಯದ ಹಿರಿಯರು ಮತ್ತು ಅವರ ಅನುಭವಗಳನ್ನು ಈ ಅಧ್ಯಯನಕ್ಕೆ ಮೂಲ ಆಕರಗಳಾಗಿ ಬಳಸಿಕೊಳ್ಳಲಾಗಿದೆ. ಯಾವುದೇ ಒಂದು ಪರಿಸರದ ಜನ

ಸಮುದಾಯವು ಅಲ್ಲಿಯ ಸಂಸ್ಕೃತಿಯನ್ನು, ಚರಿತ್ರೆಯನ್ನು, ಪರಂಪರೆಯನ್ನು ಭಾಷೆಯನ್ನು, ಇನ್ನು ಸಾಕಷ್ಟು ಅಂಶಗಳನ್ನು ಮೌಖಿಕ ರೂಪದಲ್ಲಿ ಬಳಸಿಕೊಂಡು ಬಂದಿರುತ್ತಾರೆ. ಲಿಖಿತ ಪರಂಪರೆಯು ಒದಗಿಸುವಷ್ಟು ಮಾಹಿತಿಯನ್ನು ಮೌಖಿಕ ಪರಂಪರೆಯು ಒದಗಿಸುತ್ತಾ ಬರುತ್ತದೆ. ವಿಚಿತ್ರವೆಂದರೆ ಕೆಲಸಂದರ್ಭಗಳಲ್ಲಿ ಮೌಖಿಕ ಮತ್ತು ಲಿಖಿತ ಸಾಮಾಗ್ರಿಗಳಲ್ಲಿ ಸಾಮ್ಯತೆ ಕಂಡು ಬರುವುದಿಲ್ಲ. ಇದು ಈ ಅಧ್ಯಯನದ ಉದ್ದೇಶವೂ ಅಲ್ಲ. ನನ್ನ ಅಧ್ಯಯನವು ಸಂಪೂರ್ಣ ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿ ರುವುದರಿಂದ ಅಲ್ಲಿ ಸಿಕ್ಕುವ ಮೌಖಿಕ ಪರಂಪರೆಯನ್ನು ಹೆಚ್ಚಿನದಾದ ರೀತಿಯಲ್ಲಿ ಬಳಸಿಕೊಂಡಿದ್ದೇನೆ. ಒಮ್ಮೊಮ್ಮೆ ಜನಪದರು ಹೇಳುವ ಐತಿಹ್ಯಗಳನ್ನು, ನಂಬಿಕೆಗಳನ್ನು, ಆಚರಣೆಗಳನ್ನು, ಕಥೆಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಅಧ್ಯಯನಕ್ಕೆ ಅಳವಡಿಸಲಾಗಿದೆ.

ಒಂದು ಕಾಲಕ್ಕೆ ಜನಪದ ಗೀತೆಗಳ ಸಂಗ್ರಹ ಕಾರ್ಯಕ್ಕೆ ಮಾತ್ರ ಸೀಮಿತಗೊಂಡ ಕರ್ನಾಟಕ ಜಾನಪದ ಕ್ಷೇತ್ರವು ಬರಬರುತ್ತ ಅದರ ಅಧ್ಯಯನವು ಇತರೆ ಅಂಶಗಳಡೆಗೆ ತಿರುಗಿತು. ಹಾಗಾಗಿ ಜಾನಪದದ ಬಗೆಗಿನ ಪರಿಕಲ್ಪನೆ ಬದಲಾಗುತ್ತ ಬಂದು, ಇಂದು ಜನಪದ ಕತೆ, ಗೀತೆ, ಐತಿಹ್ಯಕಷ್ಟೇ ಸೀಮಿತವಾಗಿರದೆ ಅದರ ಇತರೆ ಉಪಅಂಗಗಳನ್ನು ಸಂಕೀರ್ಣತೆಯೊಂದಿಗೆ ಅಧ್ಯಯನ ಮಾಡಲು ಪ್ರಯತ್ನಿಸುತ್ತದೆ. ಜಾನಪದವು ಕೇವಲ ಹಳ್ಳಿಗಳಲ್ಲಿ ಮಾತ್ರವಲ್ಲ, ಅದಕ್ಕಂಟಿಕೊಂಡಂತೆ ಇರುವ ಪಟ್ಟಣ ಪ್ರದೇಶಗಳಲ್ಲಿ ಹುದುಗಿರುತ್ತದೆ ಎಂದು ಅರಿತ ಹಲವರಂತೆ ನಾನು ಅಥಣಿ ನಗರ ಪ್ರದೇಶವನ್ನೊಳಗೊಂಡಂತೆ ಈ ಪರಿಸರದ ಹಲವಾರು ಹಳ್ಳಿಗಳ ಅದರಲ್ಲೂ, ವಾಲ್ಮೀಕಿ ಸಮುದಾಯದವರ ಸಂಸ್ಕೃತಿಯ ಅಧ್ಯಯನದಲ್ಲಿ ತೊಡಗಿ, ಒಂದು ಬುಡಕಟ್ಟು ಸಮುದಾಯದ ಅಧ್ಯಯನದಷ್ಟೇ ಅಲ್ಲದೇ ನಗರ ಜೀವನದ ಅಧ್ಯಯನ ಹಾಗೂ ಮುಂದುವರಿದ ಸಮುದಾಯಗಳ ಆಚಾರ-ವಿಚಾರ, ನಡೆ-ನುಡಿ, ಸಂಸ್ಕೃತಿಗಳ ಕಡೆಗೆ ಗಮನಹರಿಸಿ ಸಂಪೂರ್ಣವಲ್ಲದಿದ್ದರೂ ಇತರೆ ಸಮುದಾಯದವರ ಜೊತೆಗೆ ಹೇಗೆ ಸಾಮರಸ್ಯದಿಂದ ಹೊಂದಿಕೊಂಡು ಒಂದು ಬುಡಕಟ್ಟು ತನ್ನ ಇರುವಿಕೆಯನ್ನು ಹೇಗೆ ಸಾಬೀತುಪಡಿಸುತ್ತಿದೆ ಎನ್ನುವುದನ್ನು ಈ ಅಧ್ಯಯನದಿಂದ ತಿಳಿಯುವ ಪ್ರಯತ್ನ ಮಾಡಲಾಗಿದೆ.

ಈ ಹಿನ್ನೆಲೆಯಲ್ಲಿ ಜಾನಪದ ಅಧ್ಯಯನಕ್ಕೆ ಮುಂದಾಗುವ ವಿದ್ಯಾರ್ಥಿಗಳು ಗ್ರಾಮಗಳ ಕಡೆಗೆ ಮುಖಮಾಡಬೇಕಾಗಿದೆ, ಮಾಡುತ್ತಲಿದ್ದಾರೆ. ಈ ಹಿನ್ನೆಲೆಯಲ್ಲಿ ಅಥಣಿ ಪರಿಸರದ ವಾಲ್ಮೀಕಿ ಸಮುದಾಯದ ಜಾನಪದೀಯ ಅಧ್ಯಯನ ನನ್ನ ಪ್ರಮುಖ ಉದ್ದೇಶವಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಸಂಶೋಧನೆಗೆ ಪೂರಕವಾದ ಅಧ್ಯಾಯಗಳನ್ನು ರಚಿಸಿ ಈ ಮೂಲಕ ಅಥಣಿ ಪರಿಸರದ ವಾಲ್ಮೀಕಿ ಸಮುದಾಯಕ್ಕೆ ಸಂಬಂಧಿಸಿದಂತೆ ಹಾಗೂ ಅಥಣಿ ಕ್ಷೇತ್ರ ಪರಂಪರೆಯ ಸಂಸ್ಕೃತಿಯನ್ನು ತಿಳಿಯಲು ಪ್ರಯತ್ನ ಮಾಡಲಾಗಿದೆ. ಈ ಅಧ್ಯಯನದಲ್ಲಿ ಭೌಗೋಳಿಕ, ಚಾರಿತ್ರಿಕ, ಸಮುದಾಯದ ಹಿನ್ನೆಲೆ, ಪರಿಸರ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಜಾನಪದೀಯ, ರಾಜಕೀಯ ವೈವಿಧ್ಯತೆಯನ್ನು ಗುರುತಿಸಲಾಗಿದೆ.

ಈ ಪರಿಸರದಲ್ಲಿ ಹಲವಾರು ಧರ್ಮದ, ಸಮುದಾಯದ ಜನರು ವಾಸವಾಗಿರುವುದರಿಂದ ಸಹಜ ವಾಗಿಯೇ ಅವರ ಬದುಕು ಭಿನ್ನವಾಗಿದ್ದು, ಅವರಿಗೆ ಹೊಂದಿಕೊಳ್ಳುವಂತೆ ವಾಲ್ಮೀಕಿ ಸಮುದಾಯದವರು

ಜೀವನ ನಡೆಸಿಕೊಂಡು ಬಂದಾಗಲೂ ಅವರದೇ ಆದಂತಹ ಆಚರಣೆಗಳನ್ನು ನಂಬಿಕೆ ವಿಧಿ-ನಿಷೇಧಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಆದಾಗ್ಯೂ ಇತರೆ ಸಮುದಾಯದವರ ಜೊತೆಗೆ ಸಾಮರಸ್ಯ ಹೊಂದಿ, ಕೊಡು-ಕೊಳೆಯು ಇವರಲ್ಲಿ ನಡೆಯುತ್ತದೆ.

ಪ್ರಸ್ತುತ ಅಧ್ಯಯನವು ಜಾನಪದೀಯ ಅಧ್ಯಯನವಾಗಿದ್ದರೂ, ಹಲವಾರು ವಿದ್ವಾಂಸರುಗಳು ಈಗಾಗಲೇ ದಾಖಲಿಸಿದಂತಹ ದಾಖಲೆಗಳನ್ನು, ಮಾಹಿತಿಯನ್ನು, ಲೇಖನಗಳನ್ನು, ಸಂಶೋಧನಾತ್ಮಕ ಪ್ರಬಂಧಗಳನ್ನು ಸಾಧ್ಯವಿದ್ದಲ್ಲಿ ಬಳಸಿಕೊಳ್ಳಲಾಗಿದೆ. ಅಥಣಿ ಪರಿಸರ ವಾಲ್ಮೀಕಿ ಸಮುದಾಯದವರ ಆಚಾರ-ವಿಚಾರಗಳು, ನಂಬಿಕೆ ವಿಧಿ-ನಿಷೇಧಗಳು, ಗಾದೆ, ಒಡಪು, ಒಗಟುಗಳನ್ನು ನೋಡಿದಾಗ ಕರ್ನಾಟಕದ ಇನ್ನಾವುದೇ ಪರಿಸರದವರಂತೆ ಮೇಲ್ನೋಟಕ್ಕೆ ಕಂಡುಬಂದರೂ ಇವುಗಳಲ್ಲಿ ನಮಗೂ ಇಲ್ಲಿಯವರಿಗೇನು ಬಹಳಷ್ಟು ವಿಶೇಷತೆಯು ಕಂಡುಬರುವುದಿಲ್ಲ ಎಂದು ಮತ್ತೊಂದು ಭಾಗದ ಸಮುದಾಯದ ಅಧ್ಯಯನ ಕೈಗೊಂಡವರಿಗೆ ಅನ್ನಿಸಿದರೂ ಈ ಅಧ್ಯಯನ ಅಥಣಿ ಪರಿಸರದ ವಾಲ್ಮೀಕಿ ಸಮುದಾಯದ ಅಧ್ಯಯನವೇ ಆಗಿರುತ್ತದೆ. ಅಥಣಿ ಪರಿಸರದ ಈ ಸಮುದಾಯದವರ ಆಚರಣೆಗಳನ್ನು ಕುರಿತಾದ ಛಾಯಾಚಿತ್ರಗಳನ್ನು ಒದಗಿಸಲಾಗಿದೆ. ನಾನು ಈ ಪರಿಸರ ಅಧ್ಯಯನಕ್ಕೆ ತೊಡಗಿ ಕಂಡುಕೊಂಡ ಅಂಶಗಳನ್ನು ಕೊನೆಯಲ್ಲಿ ವಿವರಿಸಿದ್ದೇನೆ.

'ಅಥಣಿ ಪರಿಸರದ ವಾಲ್ಮೀಕಿ ಸಮುದಾಯ' ಎಂಬ ಶೀರ್ಷಿಕೆಯ ಅಡಿಯಲ್ಲಿ ಅಧ್ಯಯನ ಮಾಡಲು ತೊಡಗಿರುವ ನನಗೆ ಈ ಅಧ್ಯಯನದ ರೂಪುರೇಷಗಳನ್ನು ಹೇಳುವುದು ಸರಿ ಎನಿಸುತ್ತದೆ. ಭಾರತದಲ್ಲಿ ವಾಲ್ಮೀಕಿ ಬುಡಕಟ್ಟು ಸಮುದಾಯವು ತನ್ನ ಅನನ್ಯತೆಯನ್ನು ಇಂದಿಗೂ ಉಳಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಒಂದೆಡೆ ಧರ್ಮಗಳ ಪ್ರಭಾವ ಇನ್ನೊಂದೆಡೆ ಜಾತಿ-ಮತಗಳಿಂದ ತತ್ತರಿಸಿ ಹೋಗಿದ್ದರೂ, ಮೂಲ ಸತ್ವವನ್ನು ದೇಶದ ಯಾವುದೇ ಭಾಗದಲ್ಲಿ ವಾಸಿಸುವ ಈ ಸಮುದಾಯ ಕಳೆದುಕೊಂಡಿಲ್ಲ. ಈ ಸಮುದಾಯವು ಜಾತ್ಯಾತೀತ ಲಕ್ಷಣಗಳಿಂದ ಕೂಡಿದೆ. ಪ್ರಸ್ತುತ ಸಂದರ್ಭದಲ್ಲಿ ಎಲ್ಲ ಸಮುದಾಯದವರ ಜೊತೆಗೂ ಆತ್ಮೀಯ ಸಂಬಂಧವನ್ನು ಹೊಂದಿರುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಅಥಣಿ ಪರಿಸರದಲ್ಲಿ ವಾಲ್ಮೀಕಿ ಸಮುದಾಯದ ಸ್ಥಾನಮಾನ, ಇತರ ಸಮುದಾಯದೊಂದಿಗಿನ ಸಂಬಂಧವನ್ನು ಕುರಿತು ಅಧ್ಯಯನ ಮಾಡುವುದು ಮುಖ್ಯ ಉದ್ದೇಶವಾಗಿದೆ.

ಅಥಣಿ ಪರಿಸರದಲ್ಲಿ ಬರುವ ಸುಮಾರು ೧೨೦ ಹಳ್ಳಿಗಳಲ್ಲಿ ವಾಲ್ಮೀಕಿ ಸಮುದಾಯದವರು ಚದುರಿಹೋಗಿದ್ದರೂ, ವಿಶೇಷವಾಗಿ ಅಧ್ಯಯನಕ್ಕೆ ಅನುಕೂಲವಾಗುವಂತೆ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿರುವ ೧೮-೧೯ ಹಳ್ಳಿಗಳಲ್ಲಿ ಪ್ರಾತಿನಿಧಿಕವಾಗಿ ಕ್ಷೇತ್ರಕಾರ್ಯ ಕೈಕೊಂಡು ಅಧ್ಯಯನ ಮಾಡಲಾಗಿದೆ. ಈ ಸಮುದಾಯದವರು ಈ ಪರಿಸರದಲ್ಲಿ ಕಡಿಮೆ ಜನಸಂಖ್ಯೆಯನ್ನು ಹೊಂದಿದ್ದು, ಇವರಲ್ಲಿ ಸಂಘಟನೆಯ ಮನೋಭಾವ ಕಡಿಮೆ. ರಾಜಕೀಯವಾಗಿಯೂ ಇವರು ಅಷ್ಟಾಗಿ ಮುಂದುವರಿದಿಲ್ಲ. ಇವರು ತಮ್ಮ ಸಮುದಾಯಕ್ಕಿಂತ ಸ್ವಲ್ಪ ಮೇಲಿರುವ ಸಮುದಾಯದ ಸಂಸ್ಕೃತಿಯನ್ನು ಅನುಸರಿಸುತ್ತಾ ಬಂದಿದ್ದಾರೆ. ಈ

ಹಿನ್ನೆಲೆಯಲ್ಲಿ ಇವರ ಆಚರಣೆಗಳು, ಹಬ್ಬ-ಹರಿದಿನ, ಮದುವೆ ಮುಂತಾದ ಸಂದರ್ಭಗಳನ್ನು ಕುರಿತು ವಿಶ್ಲೇಷಿಸುವುದು ಇಲ್ಲಿಯ ಮುಖ್ಯ ಉದ್ದೇಶವಾಗಿದೆ.

ಅಧ್ಯಯನದ ಸಂದರ್ಭದಲ್ಲಿ ಮುಖ್ಯವಾಗಿ ಕ್ಷೇತ್ರಕಾರ್ಯದ ಮುಖಾಂತರ ಇಡೀ ಅಥಣಿ ಪರಿಸರದ ಪ್ರಮುಖ ದೇವಾಲಯಗಳನ್ನು ನೋಡುವಾಗ ಆ ದೇವಾಲಯದ ವಿವರಗಳನ್ನು ತಿಳಿದುಕೊಳ್ಳಲು ಆಯಾ ಸಮುದಾಯದವರನ್ನು ಸಂದರ್ಶಿಸಿ ಸಾಂಸ್ಕೃತಿಕ, ಧಾರ್ಮಿಕ, ಗೃಹಿಕೆಗಳನ್ನು ಪಡೆಯಲು ಪ್ರಯತ್ನಿಸಲಾಗಿದೆ. ಹಾಗೆಯೇ ಭೌಗೋಳಿಕ ವಿವರ ತಿಳಿಯಲು ಕ್ಷೇತ್ರಕಾರ್ಯ ಮಾಡುವುದರ ಜೊತೆಗೆ ಹಲವಾರು ಕಛೇರಿಗಳಿಗೆ ಭೇಟಿನೀಡಿ ಮಾಹಿತಿ ಸಂಗ್ರಹಿಸಲಾಗಿದೆ. ಅವುಗಳಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯ ತಾಲೂಕು ಕಛೇರಿ ಮುಂತಾದವುಗಳು ಒಳಗೊಂಡಿವೆ.

ಒಂದು ಸಮುದಾಯದ ಅಧ್ಯಯನಕ್ಕೆ ತೊಡಗಿರುವ ನನಗೆ ಆ ಸಮುದಾಯವು ವಾಸಿಸುವ ಸ್ಥಳಗಳ ಕ್ಷೇತ್ರಕಾರ್ಯ ಅನಿವಾರ್ಯವಾಗಿ ತೋರಿ, ಪ್ರಮುಖ ಹಳ್ಳಿಗಳನ್ನು ಅಂದರೆ ವಾಲ್ಮೀಕಿ ಸಮುದಾಯವು ಹೆಚ್ಚಾಗಿ ವಾಸಿಸುವ ಹಳ್ಳಿಗಳಾದ-ಬೇಡರ ಹಟ್ಟಿ, ರಡ್ಡೇರ ಹಟ್ಟಿ, ಶೇಡಬಾಳ, ಐನಾಪುರ, ಕಲ್ಲೊತ್ತಿ ಮುಂತಾದ ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡು ಬಹಳಷ್ಟು ಸಂಖ್ಯೆಯಲ್ಲಿ ಅನಕ್ಷರಸ್ತರಾಗಿರುವ ಈ ಸಮುದಾಯದ ಮೌಖಿಕ ವಿವರಗಳನ್ನು ಪಡೆದು ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸುತ್ತ, ಯಾವುದು ಸರಿ, ಯಾವುದು ತಪ್ಪು ಎಂದು ತಿಳಿಯುವ ಪ್ರಯತ್ನ ಮಾಡಲಾಗಿದೆ. ತಪ್ಪು ಎಂದು ತಿಳಿದುಬಂದಲ್ಲಿ ಈ ಸಮುದಾಯದವರಲ್ಲಿ ಜಾಗೃತಿಯನ್ನು ಮೂಡಿಸುವ ಪ್ರಯತ್ನ ಮಾಡಲಾಗಿದೆ. ಇವರು ಒದಗಿಸುವ ಮಾಹಿತಿಯಲ್ಲಿ ಸಂಶಯ ಕಲ್ಪನೆಗಳನ್ನು ವಾಸ್ತವಿಕತೆಯ ದೃಷ್ಟಿಕೋನದಲ್ಲಿಟ್ಟು ಹುಡುಕುವ ಪ್ರಯತ್ನ ನಿಜಕ್ಕೂ ಸಂತೋಷವನ್ನುಂಟು ಮಾಡುವುದು. ಒಮ್ಮೊಮ್ಮೆ ನಿರಾಶೆಯನ್ನು ಹೊಂದಿದೆಯಾದರು ಅವರ ಜೀವನದ ಅನುಭವಗಳನ್ನು ಹಿಡಿದಿಡುವ ಪ್ರಯತ್ನ ಮಾಡಲಾಗಿದೆ.

ಸಮುದಾಯದ ಹಿರಿಯ ಮಹಿಳೆ ಮತ್ತು ಪುರುಷರ ಮಾಹಿತಿ, ಯುವಕ, ಯುವತಿಯರ ನಡುವಿನ ಚರ್ಚೆ, ಸಂವಾದಗಳೊಂದಿಗೆ ಮುಂದುವರಿದುಕೊಂಡು ಬಂದ ಕ್ಷೇತ್ರಕಾರ್ಯವು ನಿಜಕ್ಕೂ ಸಮುದಾಯದ ಅಧ್ಯಯನಗಳಲ್ಲಿ ತುಂಬಾ ಸಹಕಾರಿಯಾದುದು. ಒಂದು ಸಮುದಾಯವನ್ನು ಅಧ್ಯಯನ ಮಾಡಲು ಹೋದಾಗ ಅಲ್ಲಿಯ ಹಿರಿಯರ ಅನುಭವದ ಮಾಹಿತಿಯು, ವಯಸ್ಕ ವಕ್ತೃಗಳ ವಿವರಣೆ, ಯುವಜನತೆಯ ಚರ್ಚೆ ಎಲ್ಲವೂ ಮುಖ್ಯ. ಮನುಷ್ಯನ ವಿವಿಧ ಘಟ್ಟಗಳೊಂದಿಗೆ ನಡೆಸುವ ಈ ಕ್ಷೇತ್ರಕಾರ್ಯ ನಿಜಕ್ಕೂ ಅರ್ಥಪೂರ್ಣವಾದುದು ಎನಿಸುತ್ತದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಉದಾ: ಕಲ್ಲೊತ್ತಿ, ಬೇಡರ ಹಟ್ಟಿ, ರಡ್ಡೇರಹಟ್ಟಿ, ಅಡಹಳ್ಳಿ, ಅಥಣಿ, ಕೋಹಳ್ಳಿ, ಶೇಡಬಾಳ, ಐನಾಪುರ ಗ್ರಾಮಗಳಲ್ಲಿರುವ ಈ ಸಮುದಾಯದವರ ಮನೆ-ಮನೆಗೂ ಹೋಗಿ, ಇಲ್ಲವೆ ಗುಡಿ ಗುಂಡಾರಗಳಲ್ಲಿ ಕುಳಿತು ಸಮುದಾಯದ ಹಿರಿಯರನ್ನು ಕರೆಯಿಸಿಕೊಂಡು ಅವರ ಜೊತೆಯಲ್ಲಿ ಅವರ ಮೂಲಕ್ಕೆ ಸಂಬಂಧಿಸಿದ ಪ್ರಶ್ನಾವಳಿ, ಕಸುಬು, ಆಚರಣೆ, ಸಾಮಾಜಿಕ, ಆರ್ಥಿಕ,

ರಾಜಕೀಯ, ಶೈಕ್ಷಣಿಕ ಸ್ಥಿತಿಗತಿಯನ್ನು ಕುರಿತು ಪ್ರಶ್ನಿಸಿದಾಗ ಅವರು ಮೂಕರಾಗುತ್ತಾರೆ. ಹಾಗೆಯೇ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳನ್ನು ಇತರೆ ಸಮುದಾಯದೊಂದಿಗಿನ ಸಂಬಂಧವನ್ನು ಹೀಗೆ ಹತ್ತು-ಹಲವು ವಿಷಯಗಳನ್ನು ಕುರಿತು ಚರ್ಚೆ, ಸಂವಾದ ಮಾಡಿ ಪ್ರಶ್ನಾವಳಿಗಳ ಮೂಲಕ ಮಾಹಿತಿ ಪಡೆಯುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ವಾರ್ಷಿಕಾವರ್ತನ ಮತ್ತು ಜೀವನಾವರ್ತನದ ಆಚರಣೆಯ ಸಂದರ್ಭಗಳಲ್ಲಿ ಭಾಗವಹಿಸಿ ಹಬ್ಬ ಹರಿದಿನ, ಜಾತ್ರೆ, ಮದುವೆ ನಾಮಕರಣದಂತಹ ಕಾರ್ಯಕ್ರಮದಲ್ಲಿ ಸಮುದಾಯದ ಹಿರಿಯರೊಂದಿಗೆ ಭಾಗವಹಿಸಿ ಕ್ಷೇತ್ರಕಾರ್ಯ ಮಾಡಿ ಅವಶ್ಯವಿದ್ದಲ್ಲಿ ಛಾಯಾಚಿತ್ರಗಳನ್ನು ತೆಗೆದುಕೊಂಡು, ಟಿಪ್ಪಣಿ ಬರೆದುಕೊಳ್ಳುವ ಮೂಲಕ ಈ ಸಮುದಾಯದಲ್ಲಿ ನಾನು ಒಬ್ಬನಾಗಿ ಸಮುದಾಯದ ಅಧ್ಯಯನ ಮಾಡಲಾಗಿದೆ.

ವಾಲ್ಮೀಕಿ ಸಮುದಾಯದ ಅಧ್ಯಯನ ಕೈಗೊಂಡಿರುವನಿಗೆ ಈ ಸಮುದಾಯದಲ್ಲಿನ ಜನಪದ ಕಥೆ, ಒಗಟು, ಲಾವಣಿ, ಐತಿಹ್ಯ, ಹಾಡು ಇನ್ನು ಮುಂತಾದ ಪ್ರಕಾರಗಳ ಮೂಲಕ ಅವರ ಸೂಕ್ಷ್ಮ ನೆಲೆಗಳನ್ನು ಗ್ರಹಿಸುವ ಕೆಲಸವು ಸುಲಭವಾಯಿತು. ಹೀಗೆ ಒಂದು ಸಮುದಾಯದ ಸಾಂಸ್ಕೃತಿಕ ಅಂಶಗಳೊಂದಿಗೆ ಕ್ಷೇತ್ರಕಾರ್ಯ ಅಧ್ಯಯನ ಮಾಡಲಾಗಿದೆ.

ಅಥಣಿ ಪರಿಸರದ ವಾಲ್ಮೀಕಿ ಸಮುದಾಯದ ಅಧ್ಯಯನಕ್ಕೆ ತೊಡಗಿ ಅಥಣಿಯ ಭೌಗೋಳಿಕ ಪರಿಸರದ ಪರಿಚಯ ಹಾಗೂ ವಾಲ್ಮೀಕಿ ಸಮುದಾಯದ ಮೂಲವನ್ನು ಈ ಸಂದರ್ಭದಲ್ಲಿ ಸೂಕ್ಷ್ಮವಾಗಿ ತಿಳಿಯುವ ಪ್ರಯತ್ನ ಮಾಡಲಾಗಿದೆ. ಅಂತೆಯೇ ವಾಲ್ಮೀಕಿ ಸಮುದಾಯದವರಿಗೆ ಪ್ರಾಚೀನ ವೇದಗಳ ಕಾಲದಲ್ಲಿ ಕರೆಯಲ್ಪಡುತ್ತಿದ್ದ ಪರ್ಯಾಯ ಪದಗಳನ್ನು ಹಾಗೂ ಅವರ ಅಂದಿನ ವೃತ್ತಿಯನ್ನು ತಿಳಿಯುವುದು ಅನಿವಾರ್ಯವಾಗಿದೆ. ಅಲ್ಲದೆ ಶಾಸನಗಳಲ್ಲಿ, ಸಾಹಿತ್ಯದಲ್ಲಿ ಇವರ ಕುರಿತು ಒಳಸುಳಿವು ಹಾಗೂ ಇತಿಹಾಸ ಮತ್ತು ಪರಂಪರೆಯನ್ನು ಕುರಿತು ಸ್ವಲ್ಪದರಲ್ಲಿಯೇ ವಿವರಿಸುವುದು ಅನಿವಾರ್ಯವಾಗಿ ಕಂಡುಬಂದಿದ್ದು, ಅದಕ್ಕಾಗಿ ಹಲವಾರು ಲಿಖಿತ ದಾಖಲೆಗಳನ್ನು ಬಳಸಿಕೊಳ್ಳಲಾಗಿದೆ. ಅಲ್ಲದೆ ವಾಲ್ಮೀಕಿ ಸಮುದಾಯದವನ್ನು ಕುರಿತ ಹಲವಾರು ವಿದ್ವಾಂಸರು ಹಲವೆಡೆ ಮಂಡಿಸಿದ ಸಂಶೋಧನಾತ್ಮಕ ಪ್ರಬಂಧಗಳನ್ನು ಇಲ್ಲಿ ಬಳಸಿಕೊಂಡಿದ್ದೇನೆ. ನಾಲ್ಕನೆಯ ಅಧ್ಯಾಯದಿಂದ ಕೊನೆಯವರೆಗೂ ಅಲ್ಪಸ್ವಲ್ಪ ಪ್ರಮುಖ ಪುಸ್ತಕಗಳ ಬಳಕೆಯನ್ನು ಮಾಡಿಕೊಂಡು ಸಂಪೂರ್ಣ ಕ್ಷೇತ್ರಕಾರ್ಯದ ಮುಖಾಂತರ ಪಡೆದುಕೊಂಡ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಿದ್ದರೆ, ಮೊದಲ ಭಾಗವನ್ನು ಗ್ರಾಂಥಿಕ ಸಾಮಗ್ರಿಯ ಮೂಲಕ ಅಧ್ಯಯನಕ್ಕೆ ಸಹಾಯಕವಾಗುವ ಅಂಶಗಳನ್ನು ತೆಗೆದುಕೊಳ್ಳಲಾಗಿದೆ.

ಅಧ್ಯಾಯ ಎರಡು

ಅಥಣಿ ಸಾಂಸ್ಕೃತಿಕ ಪರಿಚಯ

೨.೧. ಸ್ಥಳನಾಮ, ಪದನಿಷ್ಪತ್ತಿ

೨.೨. ಭೌಗೋಳಿಕ ಹಿನ್ನೆಲೆ

೨.೩. ಚಾರಿತ್ರಿಕ ಹಿನ್ನೆಲೆ

೨.೪. ಮಠಮಾನ್ಯಗಳ ಪರಂಪರೆ

೨.೫. ಸಮುದಾಯಗಳು ಮತ್ತು ವೃತ್ತಿ

ಅಧ್ಯಾಯ ಎರಡು

ಅಥಣಿ ಸಾಂಸ್ಕೃತಿಕ ಪರಿಚಯ

ಬೆಳಗಾವಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸವನ್ನು ವಸ್ತುನಿಷ್ಠವಾಗಿ ಪುನರಚಿಸುವ ನಿಟ್ಟಿನಲ್ಲಿ ಅಥಣಿ ಪರಿಸರದ ಕೊಡುಗೆ ಅಪಾರವಾದದ್ದು. ಪೂರ್ವಯುಗದಿಂದ ಸಾಂಸ್ಕೃತಿಕ ಬೆಳವಣಿಗೆಯ ಎಲ್ಲ ಘಟ್ಟಗಳ ಕುರುಹುಗಳನ್ನು ಅಂದರೆ ಇತಿಹಾಸ ಪೂರ್ವಕಾಲದ ವಿವಿಧ ಕಾಲಘಟ್ಟಗಳ ವಸತಿ ನೆಲೆಗಳು ಮತ್ತು ಇತಿಹಾಸ ಕಾಲದ ಶಾಸನಗಳು, ಶಿಲ್ಪಗಳು, ಸ್ಮಾರಕಗಳು, ವೀರಗಲ್ಲುಗಳು, ನಾಣ್ಯಗಳು, ಕೋಟೆಕೊತ್ತಲಗಳು, ಸಾಹಿತ್ಯಕ ಕುರುಹುಗಳನ್ನು ಒಳಗೊಂಡಿವೆ. ಹೀಗೆ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಅಥಣಿಯು ತಾಲೂಕು ಸ್ಥಳವಾಗಿದ್ದು, ಇದು ಸಕ್ಕರೆ ಜಿಲ್ಲೆಯೆನಿಸಿರುವ ಬೆಳಗಾವಿಗೆ ಸಿಹಿಕೊಡುಗೆಯನ್ನು ನೀಡಿದೆ. ಇದಕ್ಕೆ ಮುಖ್ಯಕಾರಣ ಈ ತಾಲೂಕಿನಲ್ಲಿ ಹರಿದು ತನ್ನ ಕರುಣೆಯ ಹಸ್ತ ಚಾಚಿದ ಕೃಷ್ಣೆ. ಬೆಳಗಾವಿ ಜಿಲ್ಲೆಯ ಉತ್ತರ ತುದಿಯಲ್ಲಿಯ ಅಥಣಿಯು ವೇದಪುರಾಣ ಕಾಲದಿಂದಲೂ ಅನೇಕ ಪುಣ್ಯಪುರುಷರ ತಪೋಬಲದಿಂದಲೂ ತುಂಬಾ ಪ್ರಸಿದ್ಧಿಯನ್ನು ಪಡೆದಿದೆ.

ಅಥಣಿ ತಾಲೂಕಿನಲ್ಲಿ ಸುಮಾರು ೧೮೦ ಹಳ್ಳಿಗಳಿದ್ದು ಈ ಹಳ್ಳಿಗಳೆಲ್ಲವೂ ಒಂದಲ್ಲಾ ಒಂದು ವಿಧದಲ್ಲಿ ಪುಣ್ಯಪುರುಷರ, ಸಾಧು ಸಂತರ, ಸಿದ್ಧರ, ಕಾಡುಸಿದ್ಧರ ನೆಲೆಬೀಡಾಗಿದೆ. ಅಲ್ಲದೆ ಸಾಹಿತ್ಯಿಕ, ಭಾಷಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದಲೂ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ. ಆ ಕಾರಣ ಇಲ್ಲಿನ ಅಥಣಿಯನ್ನು ಸೇರಿಕೊಂಡಂತೆ ಮುಖ್ಯ ಕೆಲ ಹಳ್ಳಿಗಳ ಹೆಸರುಗಳನ್ನು ಭಾಷಿಕ, ಸಾಂಸ್ಕೃತಿಕ, ದೃಷ್ಟಿಯಿಂದ ವ್ಯವಸ್ಥಿತವಾಗಿ ಅಧ್ಯಯನ ಮಾಡುವ ಪ್ರಯತ್ನ ಇದಾಗಿದೆ.

ಪ್ರತಿಯೊಂದು ಗ್ರಾಮದ ಹೆಸರಿಗೂ ಐತಿಹಾಸಕ ಪರಂಪರೆಯೊಂದು ಇದ್ದೇ ಇರುತ್ತದೆ. ಅದಕ್ಕೆ ಪೂರಕ ಸಾಮಾಗ್ರಿಯಾಗಿ ಶಾಸನಗಳು, ಸಾಹಿತ್ಯ ಕೃತಿಗಳು ಸಾಕ್ಷಿನುಡಿಯುತ್ತಿವೆ. ಕನ್ನಡ ಭಾಷೆಯನ್ನಾಡುವ ಕರ್ನಾಟಕದಲ್ಲಿ ಗ್ರಾಮಗಳು ಬೆಳೆದು ಬಂದ ಇತಿಹಾಸವನ್ನು ರೂಪಿಸಲು ಅನೇಕ ರೀತಿಯ ಸಾಮಾಗ್ರಿಗಳು ದೊರೆಯುತ್ತವೆ. ಶಾಸನಗಳು, ದೇವಾಲಯಗಳು, ಸ್ಥಳೀಯ ಐತಿಹ್ಯಗಳು ಅನೇಕ ಪ್ರಕಾರದ ಗ್ರಾಮ ವಿವರಗಳನ್ನು, ಊರುಗಳ ಇತಿಹಾಸವನ್ನು, ಐತಿಹಾಸಿಕ ಮಹತ್ವವನ್ನು ಮತ್ತು ಸಾಂಸ್ಕೃತಿಕ ಜನ ಜೀವನದ ಒಳನೋಟಗಳನ್ನು ತಿಳಿಸಿ ಕೊಡುತ್ತವೆ. ಭಾಷಿಕ ಮತ್ತು ಜಾನಪದೀಯ ಅಂಶಗಳು ಕೂಡ ಇಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಗತಿಸಿಹೋದಂತಹ ಅಥವಾ ನಡೆದು ಹೋದಂತಹ ಘಟನೆಗಳು ಇತಿಹಾಸ ಅಥವಾ ಚರಿತ್ರೆಯಲ್ಲಿ ದಾಖಲಾದಂತೆ ಈ ಗ್ರಾಮ ನಾಮ ಎಂಬ ಪದದ ಅರ್ಥವು ಚಾರಿತ್ರಿಕ ಹಿನ್ನೆಲೆ, ಅದರ ಗಾತ್ರ, ಸ್ವರೂಪ, ಪ್ರಾಕೃತಿಕ, ಭೌಗೋಳಿಕ, ಸಾಂಸ್ಕೃತಿಕ ಅಂಶಗಳು ಆಯಾ ಊರುಗಳ ಸ್ಥಳ ವಿಶೇಷವನ್ನು ತಿಳಿಯಲು ಮತ್ತು ಆ ಊರಿಗೆ ಇಂತಹ ಹೆಸರು ಹೇಗೆ ಬಂತು ಎನ್ನುವುದನ್ನು ತಿಳಿಯಲು ಹೆಸರಿನ ವೈವಿಧ್ಯತೆಯಲ್ಲಿ ಗ್ರಾಮಗಳ ಭೌಗೋಳಿಕ, ಪ್ರಾಕೃತಿಕ ಪರಿಸರ ಅವುಗಳ ಚಾರಿತ್ರಿಕ ಹಿನ್ನೆಲೆ ಅವುಗಳು ಜನ್ಮತಳೆದ ಬಗೆಯನ್ನು ವಿವರಿಸುತ್ತವೆ.

೨.೧. ಸ್ಥಳನಾಮ ಪದನಿಷ್ಪತ್ತಿ

ಈ ಹಿನ್ನೆಲೆಯಲ್ಲಿ ಸ್ಥನಾಮಗಳನ್ನು ಕುರಿತು ವಿವೇಚಿಸುವುದಕ್ಕಿಂತ ಮೊದಲು ಸ್ಥಳನಾಮವೆಂದರೇನು? ಎಂಬುದನ್ನು ಕುರಿತ ಕ್ರಮಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಅಗತ್ಯವೆನಿಸುತ್ತದೆ.

ಸ್ಥಳನಾಮವೆಂದರೆ ಊರಿನ ಹೆಸರು ಎಂದು ಅರ್ಥೈಸುವುದಾದರೆ ಅಂತಹ ಊರುಗಳು, ಪುರ, ಹಟ್ಟಿ, ಊರು, ಹಳ್ಳಿ, ಗ್ರಾಮ, ವಾಡಿ, ಹಾಳ, ಕೆರೆ, ಬಾದ, ಕೊಪ್ಪ ಮೊದಲಾದ ಉತ್ತರಾರ್ಧ ಘಟಕ ಗಳನ್ನು ಒಳಗೊಂಡಿರುತ್ತವೆ. ಈ ಘಟಕಗಳಿಗೆ ಯಾವುದೇ ವಿಷಯ ಪ್ರಸ್ತಾಪವಿರದು. ಭಾಷಿಕ ದೃಷ್ಟಿಯಿಂದ ಅಥಣಿ ತಾಲೂಕಿನಲ್ಲಿ ಬರುವ ಕೆಲವು ಊರುಗಳನ್ನು ಈ ಘಟಕಗಳ ಅಡಿಯಲ್ಲಿ ವಿಂಗಡಿಸಿ ಅವುಗಳ ರೂಪ ಮತ್ತು ಧ್ವನಿ ವ್ಯತ್ಯಾಸ ಪಡೆದಿರುವುದನ್ನು ಕಾಣಬಹುದು. ಯಾವುದೇ ಒಂದು ಸ್ಥಳನಾಮದಿಂದ, ಆ ಜನಾಂಗದ ಅಭಿರುಚಿ, ಅನುಭವ, ಸೃಜನಶೀಲ ಶಕ್ತಿಗಳನ್ನು ಅರಿಯಬಹುದು. ಸ್ಥಳನಾಮಗಳಿಗೆ ಅವುಗಳದೇ ಆದ ಅರ್ಥವಿರುತ್ತದೆ. ಅರ್ಥರಹಿತವಾದ ಸ್ಥಳನಾಮಗಳು ಇರುವುದಿಲ್ಲ. ಊರುಗಳಿಗೆ ಆಯಾ ಹೆಸರುಗಳು ಪ್ರಾಪ್ತವಾಗಲು ಇಂಥದೇ ಕಾರಣಗಳು ಇವೆಯೆಂದು ಖಚಿತವಾಗಿ ಬೊಟ್ಟು ಮಾಡಿ ಹೇಳಲಿಕ್ಕೆಬಾರದು. ಆದರೂ ಕೆಲ ಊರುಗಳಿಗೆ ಹೆಸರು ಬರಲು ಇರುವ ಕಾರಣಗಳನ್ನು ಗುರುತು ಮಾಡಬಹುದು. ಅಥಣಿ ಪರಿಸರದಲ್ಲಿ ಕಂಡುಬರುವಂತಹ ಊರುಗಳಿಗೆ ಆ ಹೆಸರುಗಳು ಹೇಗೆ ಬಂದವು? ಎಂಬುದನ್ನು ಅಧ್ಯಯನ ಮಾಡಿದರೆ ಆಯಾ ಊರಿನ ಹಿನ್ನೆಲೆಯನ್ನು, ಸಂಸ್ಕೃತಿಯನ್ನು ಅಧ್ಯಯನ ಮಾಡಿದಂತಾಗುತ್ತದೆ. ಭಾಷಿಕ ದೃಷ್ಟಿಯಿಂದ ಅಧ್ಯಯನ ಮಾಡಿದಾಗಲಂತೂ ಆ ಊರಿನ ಹೆಸರಿನ ಮೇಲೆ ಹೊಸಬೆಳಕು ಚೆಲ್ಲಿದಂತಾಗುತ್ತದೆ. ಅಥಣಿ ತಾಲೂಕಿನಲ್ಲಿ ೮೯ ಹಳ್ಳಿಗಿಂತ ಹೆಚ್ಚು ಹಳ್ಳಿಗಳು ಜನವಸತಿ ಇರುವ ಗ್ರಾಮಗಳಾಗಿದ್ದು ಅವುಗಳಲ್ಲಿ ಕೆಲವು ಪ್ರಮುಖ ಊರುಗಳ ಸ್ಥಳನಾಮಗಳು, ನಿಷ್ಪತ್ತಿ ಅವುಗಳ ಮಹತ್ವ ಕುರಿತು ವಿವೇಚಿಸಲಾಗಿದೆ. ಈ ಪರಿಸರದಲ್ಲಿ ಕಂಡುಬರುವ, ಊರು, ಪುರ, ಹಳ್ಳಿ, ಗ್ರಾಮ, ಹಾಳ, ವಾಡಿ ಅಥವಾ ವಾಡ, ಕೆರೆ, ಬಾದ, ಹಟ್ಟಿ ಮುಂತಾದ ಉತ್ತರಾರ್ಧ ವಾಚಕಗಳ ಹಿನ್ನೆಲೆಯಲ್ಲಿ ಬರುವ ಊರುಗಳು ಹೇಗೆ ಹುಟ್ಟಿಕೊಂಡವು ಎನ್ನುವುದನ್ನು ವಿವೇಚಿಸುವುದು ಸೂಕ್ತವೆನಿಸುತ್ತದೆ.

ಊರು: ಇದು ಅಚ್ಚ ದ್ರಾವಿಡ ಪದವಾಗಿದೆ. ಊರುಗಳಿಂದ ಕೊನೆಗೊಳ್ಳುವ ಸ್ಥಳಗಳು ಗಾತ್ರದಲ್ಲಿ ಸಾಮಾನ್ಯವಾಗಿ ಚಿಕ್ಕವಾಗಿರುತ್ತವೆ. ಅಂತಹ ವಿಶೇಷತೆಯನ್ನೇನು ಅವುಗಳು ಒಳಗೊಂಡಿರುವುದಿಲ್ಲ.

ಇಲ್ಲಿ ನಿರ್ದಿಷ್ಟ ಮತ್ತು ವಾರ್ಗಿಕ ಘಟಕಗಳು ಸೇರುವಾಗ ಸ್ವರೈಕ್ಯ ಹೊಂದುವುದನ್ನು ಕಾಣಬಹುದು. ಉದಾ. ನಾಗನ+ಊರು = ನಾಗನೂರು, ಕೊಕಟನ+ಊರು = ಕೊಕಟನೂರು, ಲೋಕ+ಊರು = ಲೋಕೂರು, ಶಿರ+ಊರು = ಶಿರೂರು, ಬೇವನ+ಊರು = ಬೇವನೂರು, ಶಿವನ+ಊರು = ಶಿವನೂರು, ಆಜ+ಊರು = ಆಜೂರು, ದರು+ಊರು = ದರೂರ ಇನ್ನು ಮುಂತಾದ ಊರುಗಳಿಂದ ಕೊನೆಗೊಳ್ಳುವ ಸ್ಥಳಗಳನ್ನು ನೋಡಬಹುದು. ಇಲ್ಲಿ ಪೂರ್ವ ಪದದ ಅರ್ಥ ವಿಶೇಷತೆಯ ಹಿನ್ನೆಲೆಯಲ್ಲಿ ಸ್ಥಳಗಳಿಗೆ ಮಹತ್ವ ಬಂದಿದೆ.

ಪುರ: ಪುರ ಪದದಿಂದ ಕೊನೆಗಳ್ಳುವ ಸ್ಥಳಗಳು ಊರಿಗಿಂತ ಗಾತ್ರದಲ್ಲಿ ದೊಡ್ಡವಿರುತ್ತವೆ. ಅನಂತ+ಪುರ= ಅನಂತಪುರ, ಐನ+ಪುರ = ಐನಾಪುರ ಮುಂತಾದವು.

ಹಳ್ಳಿ: ಹಳ್ಳಿಯಿಂದ ಕೊನೆಗೊಳ್ಳುವ ಸ್ಥಳಗಳು ಊರುಗಳಿಗಿಂತ ಗಾತ್ರದಲ್ಲಿ ಚಿಕ್ಕವಾಗುತ್ತವೆ. ಹತ್ತಾರು ಮನೆಗಳು ಒಂದೆಡೆ ಇದ್ದರೆ ಅದು ಒಂದು ಹಳ್ಳಿಯಾಗುತ್ತದೆ. ಅಡ+ಹಳ್ಳಿ = ಅಡಹಳ್ಳಿ, ಪಾರ್ಥನ+ಹಳ್ಳಿ = ಪಾರ್ಥನಹಳ್ಳಿ, ಕೋ+ಹಳ್ಳಿ = ಕೋಹಳ್ಳಿ ಮುಂತಾದವು.

ಗ್ರಾಮ: ಗ್ರಾಮ ಎನ್ನುವ ಪದವು ಸಂಸ್ಕೃತ ಪದವಾಗಿದೆ. ಇದು ಸಾಮಾನ್ಯವಾಗಿ ಊರುಗಳ ಹೆಸರಿನ ಕೊನೆಗೆ ಬರುವಂತದ್ದು. ಈ ಗ್ರಾಮ-ಗಾಂವ್ ಆಗುತ್ತದೆ. ಈ ಗಾಂವ್ ಪದವು ಹಿಂದಿ ಅಥವಾ ಮರಾಠಿಯಲ್ಲಿ ಊರು ಎನ್ನುವ ಅರ್ಥವನ್ನು ಕೊಡುತ್ತದೆ. ಮರಾಠಿಯ ಪ್ರಭಾವ ಗಡಿನಾಡಿನಲ್ಲಿ ಅಥಣಿ ಪರಿಸರವು ಇರುವುದರಿಂದ ಕೆಲ ಹಳ್ಳಿಗಳು ಗಾಂವ್‌ದಿಂದ ಅಂತ್ಯಗೊಳ್ಳುತ್ತವೆ. ಒಂದೊಂದು ಸಲ ಇಲ್ಲಿಯ ಅರ್ಧ ಸ್ವರವಾದ 'ವ್' ಬಿಟ್ಟು ಹೋಗಿ ಕೇವಲ 'ಗಾ'-ಉಳಿಯುತ್ತದೆ. ಇದುವೆ ಮುಂದೆ ಗೆ, ಗಿ ಆಗಿ ರೂಪುಗೊಂಡ ಕೆಲ ಊರುಗಳನ್ನು ಇಲ್ಲಿ ನಾವು ಕಾಣಬಹುದು. ಕಿರಣ-ಗ್ರಾಮ-ಕಿರಣಗಾವ್-ಕಿರಣಗಾ-ಕಿರಣಗಿ, ಸಂಬರ-ಗ್ರಾಮ-ಸಂಬರಗಾವ್-ಸಂಬರಗಾ ಸಂಬರಗಿ, ಸಾವಳಗ್ರಾಮ-ಸಾವಳಗಾವ್-ಸಾವಳಗಾ-ಸಾವಳಗಿ ಹೀಗೆ ಊರ ಹೆಸರಿನ ಕೊನೆಗೆ ಬರುವ ಗ್ರಾಮ-ಗಾವ್ ಆಗಿರುವುದನ್ನು ಕಾಣಬಹುದು. ಹಾಗೆಯೇ ಗಾ-ಗಿ ಆಗಿರುವುದನ್ನು ನೋಡವುದರ ಜೊತೆಗೆ ಮರಾಠಿ ಪ್ರಭಾವದಿಂದ ಗಾವ್-ಗಾಂವ್ ಆಗಿರುವುದನ್ನು ಕಾಣಬಹುದು. ಉದಾ. ಖಿಳೇಗಾಂವ್

ಹಾಳ: ಇದು 'ಪೊಳಲು' ಪಟ್ಟಣದಿಂದ ಬಂದಿರಬೇಕು ಪೊಳಲು ಎಂದರೆ ಪಟ್ಟಣ ಎಂದರ್ಥ ಕಾಲಾಂತರದಲ್ಲಿ ಪ-ಹ ವ್ಯತ್ಯಾಸವಾಗಿ ಹೊಳಲು ಆಗಿ ಬರಬರುತ್ತಾ ಈ ಹೊಳಲು ಜನತೆಯ ಸೌಲಭ್ಯಕಾಂಕ್ಷೆ, ಪರಿಹಾರಾತ್ಮಕ ದೀರ್ಘೀಕರಣಕ್ಕೆ ಒಳಗಾಗಿ ಹಾಳ ಆದಂತೆ ಕಾಣುತ್ತದೆ.

* ಕುಸನ+ಹೊಳಲು (ಪ>ಹ.) ಕುಸನ ಹೊಳಲು>ಕುಸನೊಳಲು>ಕುಸನಾಳ
* ನವಲಿನ+ಹೊಳಲು>ನವಲಿನ ಹೊಳಲು>ನವಲೊಳಲು>ನವಲಿಹಾಳ
* ಅರಟನ+ಹೊಳಲು>ಅರಟನೊಳಲು>ಅರಟೊಳಲು>ಅರಟಾಳ

* ರಾಜನ+ಹೊಳಲು-ರಾಜಹೊಳಲು>ನಾಜನಾಳ ಎಂದು ಪದ ಪ್ರಯೋಗವಾಗಿ ಈ ಹಾಳ ಎನ್ನುವ ಪದ ಬಳಕೆಯಾಗಿ ಈ ತರದ ಹಾಳ ಊರು ಬಳಕೆಯಲ್ಲಿ ಬಂದಿರಬೇಕು.

ವಾಡ ಅಥವಾ ವಾಡಿ: ವಾಡ ಎಂದರೆ ಜನವಸತಿ ಸ್ಥಳ. ಮತ್ತೊಂದು ಅರ್ಥದಲ್ಲಿ ವಾಡ ಎಂದರೆ ಬಿಡಾರ, ವಾಸಸ್ಥಳ ಎಂಬರ್ಥಗಳೂ ಇವೆ. ವಾಡ, ವಾಡಿ ಎನ್ನುವ ಪದದಿಂದ ಅಂತ್ಯವಾಗುವ ಊರುಗಳು ಹೀಗಿವೆ. ಯಲ್ಲಮ್ಮನ+ವಾಡಿ-ಯಲ್ಲಮ್ಮನವಾಡಿ ಗುಂಡೆಯ+ವಾಡಿ-ಗುಂಡೇವಾಡಿ, ಕೆಂಪನ+ವಾಡ-ಕೆಂಪವಾಡ, ಹೊನಲಿನ+ವಾಡ ಹೊನವಾಡ, ಕಾಗನ+ವಾಡ-ಕಾಗವಾಡ ಮುಂತಾದ ಊರುಗಳ ನಿಷ್ಪತ್ತಿಯನ್ನು ನೋಡಬಹುದು.

ಕೆರೆ: ಕೆರೆಗಳ ಸಮೀಪವಿರುವ ಊರುಗಳನ್ನು ಸಾಮಾನ್ಯವಾಗಿ ಕೆರೆ, ಗೆರೆ, ಗೇರಾ ವಾರ್ಗಿಕಗಳನ್ನು ಹೊಂದಿರುವುದು ಕಂಡುಬರುತ್ತದೆ. ಇವುಗಳಿಗೆ ಜಲವಾಚಿ ಸ್ಥಳನಾಮಗಳೆಂದು ಕರೆಯುವರು. ಬಳ್ಳಿಯ+ಕೆರೆ-ಬಳ್ಳಿಕೆರೆ-ಕೆ-ಗೆ-ಬಳ್ಳಿಗೇರಿ, ಕಟ+ಕೆರೆ-ಕಟಗೇರೆ-ಕಟಗೇರಿ, ಚಮ+ಕೆರೆ-ಚಮಕೇರಿ-ಚಮಕೆರೆ ಹೀಗೆ ಜನರ ಬಾಯಲ್ಲಿ ಈ ಊರುಗಳ ಹೆಸರಿನ ಕೊನೆಗಿರುವ ರೆ-ರಿ ಆಗಿದೆ. ಕೆರೆ ನಿರ್ಮಾಣಗೊಂಡ ಪ್ರಯುಕ್ತ ಕೆಲಕಾಲದ ಮೇಲೆ ಕೆರೆ ನಿರ್ಮಿಸಲ್ಪಟ್ಟಿದ್ದರೂ ಕೆರೆಯ ಪ್ರಸಿದ್ಧಿಯಿಂದ ಮೂಲಗ್ರಾಮನಾಮ ಬಂದಿರಬಹುದು.

ಆಬಾದ: ಇದು ಪರ್ಶಿಯನ್ ಪದ ಉರ್ದುವಿನ ಪ್ರಭಾವದಿಂದ ಕನ್ನಡಕ್ಕೆ ಬಂದಿದೆ. ಆಬಾದ ಎಂದರೆ ಜನರು ವಾಸಿಸಲು ಯೋಗ್ಯವಾದ ಸ್ಥಳ ಎಂದರ್ಥ. ಮಲೆ-ಮಲ+ಆಬಾದ ಮಲಬಾದ ಆಗಿದೆ.

ಹಟ್ಟಿ: ಇದು ಪಶುಪಾಲನ ಕಾಲದಲ್ಲಿ ಹುಟ್ಟಿಕೊಂಡಂತಿದೆ. ಗ್ರಾಮ ರಚನೆಯಾಗುವ ಪೂರ್ವದಲ್ಲಿ ಜನರು ಹಟ್ಟಿಯಲ್ಲಿ ವಾಸಿಸುತ್ತಿದ್ದರು. ಅದಕ್ಕಾಗಿ ಈಗಲೂ ಅವುಗಳಿಗೆ ಹಟ್ಟಿಗಳೆಂತಲೂ ಕರೆದಿರುವುದು ವಾಡಿಕೆಯಾಗಿ ಬಂದಿದೆ. ಕಾರಣ ಈ ಪರಿಸರದಲ್ಲಿ ರಡ್ಡೇರಹಟ್ಟಿ, ಬ್ಯಾಡರಹಟ್ಟಿ, ತ್ಯಾವರಟ್ಟಿ, ತುಕಾನಟ್ಟಿ, ಶಂಕರಟ್ಟಿ, ಶಿರಹಟ್ಟಿ, ಸಂಕೋನಟ್ಟಿ, ವಡ್ಡರಟ್ಟಿ ಎಂದು ಕರೆಯಲ್ಪಡುವ ಹಲವಾರು ಪ್ರದೇಶಗಳು ಈ ಭಾಗದಲ್ಲಿ ಕಂಡುಬರುತ್ತವೆ. ಹಾಗೆಯೇ ಭೌಗೋಳಿಕ ಪ್ರದೇಶದ ಹಿನ್ನಲೆಯಲ್ಲಿಯೂ ಇಂತಹ ಹೆಸರುಗಳು ಬಂದಿರಬೇಕು. ಉದಾ. ಕರ್ಲಟ್ಟಿ (ಕಪ್ಪಾದ ಭೂಪ್ರದೇಶ ಹೊಂದಿರುವ ಸ್ಥಳ). ಚಿಕ್ಕಟ್ಟಿ (ಕಡಿಮೆ ಜನವಸತಿ ಇರುವ ಪ್ರದೇಶ).

ಕನ್ನಡದಲ್ಲಿ ಮಹಾ ಪ್ರಾಣಾಕ್ಷರಗಳು ಇಲ್ಲ. ಆದರೆ ಮಹಾಪ್ರಾಣಯುಕ್ತ ಸ್ಥಳನಾಮಗಳಿವೆ. ಉದಾ. ಖವಟಕೊಪ್ಪ, ಖಿಳೇಗಾಂವ್, ಅಢಾಳಹಟ್ಟಿ, ಅಥಣಿ ಇಂತಹ ಹಲವಾರು ಸ್ಥಳನಾಮಗಳಲ್ಲಿ ಮಹಾಪ್ರಾಣಾಕ್ಷರ ಬಳಕೆಯಾಗಿರುವುದು ಒಂದು ಇಲ್ಲಿನ ವಿಶೇಷ. ಯಾವುದೇ ಊರಿನ ಹೆಸರುಗಳು ಪ್ರದೇಶಕ್ಕೆ ಸೀಮಿತವಾಗಿರದೇ ಮಾನವ ಸಮುದಾಯಕ್ಕೂ ಅಂಟಿಕೊಂಡು ಬಂದವುಗಳಾಗಿವೆ.

ಒಂದು ಕಾಲಕ್ಕೆ ತನ್ನ ಮೇಲೆ ಗಾಢವಾದ ಪರಿಣಾವನ್ನುಂಟು ಮಾಡಿದ ವಸ್ತು, ವ್ಯಕ್ತಿ, ಘಟನೆಗಳನ್ನು ಪಶು-ಪಕ್ಷಿ ಸಂಬಂಧ, ಮರಗಿಡ ಬಳ್ಳಿಗಳು, ಸಸ್ಯಕ್ಷೇತ್ರ ಊರು-ಕೇರಿಗಳ ಬೆನ್ನಹಿಂದೆ, ಧರ್ಮ ಸಂಸ್ಕೃತಿ

ಹಿನ್ನೆಲೆಯಲ್ಲಿ ಯಾವುದೇ ಸ್ಥಳಗಳು ತಮ್ಮ ಸ್ವರೂಪ, ವೈವಿಧ್ಯಗಳನ್ನು ಬಿಟ್ಟು ಹೇಳುತ್ತವೆ. ಈ ಕಾರಣವಾಗಿ ಮನುಷ್ಯ ತಾನು ವಾಸಿಸುವ ಸ್ಥಳಗಳಿಗೆ ಹೆಸರು ಕೊಟ್ಟು, ತನ್ನ ಉತ್ಕಟ ಭಾವನೆಗಳನ್ನು ವ್ಯಕ್ತಪಡಿಸಿರಬೇಕು. ಇಂತಹ ಐತಿಹ್ಯಗಳು ಹುಟ್ಟಿಕೊಳ್ಳಲು ಕಾರಣ ಜನರಿಗೆ ಅದರ ಮೇಲಿದ್ದ ಪ್ರೀತಿ, ಈ ಐತಿಹ್ಯವನ್ನು ಇಂದಿನ ನಾಗರಿಕ ಜನಾಂಗ ಒಪ್ಪದಿರಬಹುದು. ಆದರೆ ಸೂಕ್ಷ್ಮವಾಗಿ ವಿಮರ್ಶಿಸಿದಷ್ಟು ಹಿಂದೆ ಆಗಿಹೋದ ಪ್ರಾಚೀನ ಐತಿಹಾಸಿಕ ಘಟನೆಗಳಿಗೆ ಶಾಸನಗಳಲ್ಲಿ ಆಧಾರಗಳು ಒಮ್ಮೊಮ್ಮೆ ಸ್ಥಳಗಳ ಹೆಸರಿನಲ್ಲಿ ಸಿಕ್ಕಬಹುದು.

ಇತಿಹಾಸ, ಪುರಾಣ, ಧರ್ಮ, ಸಂಸ್ಕೃತಿಗಳಷ್ಟೇ ಅಲ್ಲ ಈ ತರದ ಸ್ಥಳನಾಮಗಳ ಹಿನ್ನೆಲೆಯಲ್ಲಿಯೂ, ಜನರ ನೆಚ್ಚುಗೆ ಮೆಚ್ಚುಗೆ, ಆನಂದ ಹಾಡೂ-ಪಾಡು, ಅಲ್ಲಿಯ ಪ್ರಾಣಿ-ಪಕ್ಷಿ, ವನಸ್ಪತಿ, ಹೊಳೆ, ಕೆರೆ ಮುಂತಾದವುಗಳ ಇರುವನ್ನು ಅರಿತುಕೊಳ್ಳಬಹುದು.

ಒಂದು ನಾಡಿನ ಸೊಲ್ಲು, ರೀತಿ ಅಲ್ಲಾದ ಮಾರ್ಪಾಡು ಕುರಿತು ತಿಳಿಯಲು ಈ ಸ್ಥಳನಾಮದ ಅಭ್ಯಾಸ ಅತ್ಯಂತ ಮಹತ್ವದ್ದಾಗಿದೆ. ಈ ಅಥಣಿ ಪರಿಸರದ ಊರುಗಳು ಶಿಲಾ-ಶಾಸನಗಳಿಗಿಂತಲೂ ಹಿಂದಿನವು ಇರಬಹುದು ಎಂಬುದರಲ್ಲಿ ಸಂದೇಹವಿಲ್ಲ. ಕಲ್ಲಿನಬರಹ ತಾಮ್ರ ಪಟಗಳಂತೆ ಸ್ಥಳದ ಹೆಸರುಗಳು ಈ ಪರಿಸರದ ಇರುವನ್ನು ತೋರುವ ಸಾಧನಗಳಾಗಿವೆ.

ಈ ಹಿನ್ನೆಲೆಯಲ್ಲಿ ಅಥಣಿಯನ್ನು ಒಳಗೊಂಡಂತೆ ಈ ಪರಿಸರದ ಕೆಲ ಪ್ರಮುಖ ಊರುಗಳ ಸ್ಥಳನಾಮಗಳು ಹೇಗೆ ನಿಷ್ಪತ್ತಿಯನ್ನು ಹೊಂದಿ ಈಗ ಯಾವ ಯಾವ ಹೆಸರಿನಿಂದ ಕರೆಯಿಸಿಕೊಳ್ಳುತ್ತವೆ ಎಂಬುದುನ್ನು ನಾವು ಕಾಣಬಹುದು.

ಅಥಣಿ: ಒಂದು ಐತಿಹ್ಯದಂತೆ ಅಥಣಿಯ ಬಗ್ಗೆ ಹೇಳುವುದಾದರೆ 'ಅಥ' ಎಂದರೆ ಮಂಗಳಕರ 'ಣಿ' ಎಂದರೆ ನಿರಂಜನ ಎಂಬ ಅರ್ಥವು ಇರುವುದನ್ನು ನೋಡಿದರೆ, ಇದು ನಿರಂಜನ ಸ್ಥಳವೆಂದು ನಿರ್ಧರಿಸಬಹುದು. ಹಾಗೆ ನೋಡಿದರೆ ಅಥಣಿಗೆ ಮೊದಲಿಗೆ 'ಅಧಣಿ' ಎಂಬ ಹೆಸರಿತ್ತಂತೆ ಇಲ್ಲಿಗೆ ಬಿಜಾಪುರದ ಆದಿಲ್‌ಷಾ ಭೇಟಿಕೊಟ್ಟಾಗ ಈ ಊರಿನ ಧಣಿ ಯಾರು? ಎಂದು ಕೇಳಿದನಂತೆ. ಯಾವ ಧಣಿಯು ಮುಂದೆ ಬರದಿದ್ದಾಗ ಇದು ಧನಿ ಇಲ್ಲದ ಊರೇ, ಅಧನಿಯೇ ಎಂದು ಉದ್ಗಾರ ತೆಗೆದನಂತೆ. ಅಂದಿನಿಂದ ಈ ಊರು ಅಧನಿ ಅಥಣಿ, ಎಂದಾಗಿರಬೇಕು ಎಂದು ತಿಳಿಯುತ್ತದೆ. ಇದಕ್ಕೆ ಪುಷ್ಟಿದೊರೆಯುವ ವಿಷಯವೆಂದರೆ ಅಥಣಿಯು ಸಾಂಸ್ಕೃತಿಕ ಹಾಗೂ ಧಾರ್ಮಿಕ ನೆಲೆಗಟ್ಟನ್ನು ಹೊಂದಿದ್ದು, ಇದು ವ್ಯಾಪಾರ ಸ್ಥಳವಾಗಿತ್ತು. ಎಲ್ಲಧರ್ಮದವರು ಐಕ್ಯತೆಯಿಂದ ಬಾಳಿ ಸರ್ವಧರ್ಮಗಳ ಜನರನ್ನು ಸಮಾನ ದೃಷ್ಟಿಯಿಂದ ಕಾಣುವ ಹೃದಯ ಶ್ರೀಮಂತಿಕೆಯಿಂದ ಕೂಡಿದ ಸ್ಥಳ, ಶಿವಯೋಗಿಗಳ ತಪೋಭೂಮಿ ಒಂದೆಡೆಯಾದರೆ, ಇನ್ನೊಂದೆಡೆ ರಾಘುವೇಂದ್ರ ಸ್ವಾಮಿಯ ನೆಲೆ, ಇವೆರಡರ ಮಧ್ಯ ಜನರ ಬದುಕು. ಇಲ್ಲಿ ಸಿದ್ದೇಶ್ವರ ದೇವಸ್ಥಾನವು ವಿಶಿಷ್ಟತೆಯನ್ನು ಹೊಂದಿದೆ. ಇದನ್ನು ಕಟ್ಟಿಸಿದವರು 'ಹುಸೀನಶಾಹಿ' ಎಂಬ ಮುಸಲ್ಮಾನನಂತೆ, ಮುಸಲ್ಮಾನರ ಹಸನ್ ಹುಸೇನ ಅವರ ತಾಯಿ ಫಾತಿಮಾಳ ಗುಡಿಯೂ ಇದ್ದು,

ಇದು ದೇಸಾಯರ ವಾಡೆದಲ್ಲಿ ಇದೆ. ದೇಸಾಯಿಯವರ ಮನೆತನದವರಿಂದಲೇ ಪೂಜಿಸಲ್ಪಡುತ್ತದೆ. ಕಾರಣ ಇಲ್ಲಿ ಎಲ್ಲರೂ ಧಣಿಗಳೇ ಎಲ್ಲರೂ ಸಮಾನರೇ, ಆದ್ದರಿಂದ ಬಿಜಾಪುರದ ಆದಿಲ್‌ಶಾಹನಿಗೆ ಇಲ್ಲಿಯ ಧಣಿಯಾರು ಎಂದಾಗ ಯಾರು ಉತ್ತರ ಕೊಟ್ಟಿರಲಿಕ್ಕಿಲ್ಲ. ಅಥವಾ ಅವನಿಗೆ ಹೆದರಿಕೊಂಡು ಯಾರೂ ಧ್ವನಿ ಎತ್ತಿರಲಿಕ್ಕಿಲ್ಲ ಅದೇನೇ ಇದ್ದರೂ ಅಧಣಿ ಎಂದು ಕರೆದದ್ದು, ಅಧನಿಯಾಗಿ ಅಥಣಿಯಾಗಿ ರೂಪುಗೊಂಡಿರಬಹುದು.

ಆಧ್ಯಾತ್ಮಿಕ ಕ್ಷೇತ್ರವಾದ ಅಥಣಿಯ ಸ್ಥಳನಾಮದಲ್ಲಿ ತೊಡಗಿದಾಗ, ಕ್ರಿ.ಶ. ೧೬೩೩ರಲ್ಲಿ ಜರ್ಮನ್ ಪ್ರವಾಸಿಗ ಮುಂಡೆಲ್ ಸ್ಲೂ ಎಂಬುವನು ಇದರ ಉಚ್ಚಾರಣೆಯನ್ನು ಅಟ್ಟಣಿ ಎಂದು ಹೇಳಿದ, ನಂತರ ೧೬೭೫ರಲ್ಲಿ ಆಂಗ್ಲ ಪ್ರವಾಸಿಗ ಪ್ಲೇಯರು ಹಟ್ಟೇನಿ ಎಂದು ಕರೆದಿದ್ದಾನೆ.

ಅಟನಿ, ಅಟ್ಟನಿ, ಹಟ್ಟೇನಿ, ಹಸ್ತಿನಿ (ಹೆಣ್ಣಾನೆ) ಅಸ್ತಿನಿ ಅಥನಿ, ಅಥಣಿ ಎಂದು ಪದ ನಿಷ್ಪತ್ತಿಯಾಗಿರುವುದು ಕಂಡುಬರುತ್ತದೆ.

'ಅಟ್ಟ' ಎಂದರೆ ಒಂದು ಸ್ಥಳ, ಣಿ ಎಂದರೆ ನಿರಂಜನ ಎಂದು ಕೊಂಡಾಗ ಅಥಣಿಯು ನಿರಂಜನ ಸ್ಥಳವೆಂದು ಗುರುತಿಸಲ್ಪಡುತ್ತಿದೆ. ಇದಕ್ಕೆ ಪೂರಕವಾಗಿ ಪಂಚಮಠಗಳು ಇಲ್ಲಿವೆ.

ಅಥಣಿಯ 'ಅಥ' ಎಂಬ ಪದವು ಪ್ರಾರಂಭ ಎಂಬರ್ಥವನ್ನು, 'ಣಿ' ಎಂದರೆ ನಿರಂಜನ ಎಂದು, ನಿರಂಜನರು ಯಾವಾಗಲೂ ಈ ನೆಲದಲ್ಲಿ ನೆಲೆಸುತ್ತಾರೆಂಬುದು ಈ ಶಬ್ದದ ಇನ್ನೊಂದು ನಿಷ್ಪತ್ತಿಯಾಗಿದೆ.

ಸಪ್ತಸಾಗರ: ಸಪ್ತಸಾಗರವು ತಾಮ್ರ ಶಿಲಾಯುಗದ ನೆಲೆಯಾಗಿದೆ. ಧರ್ಮಗ್ರಂಥವಾದ ಮಹಾಭಾರತದಲ್ಲಿ ಉಕ್ತವಾಗಿರುವ ಕೊನೆಯ ಅರಸ, ಪಾಂಡವಕುಲ ಸಂತಾನವಾದ ಜನಮೇಜಯನು ಸರ್ಪಯಾಗ ಕೈಗೊಳ್ಳುವ ಸಂಕಲ್ಪ ಮಾಡಿದನಂತೆ. ಈ ಯಾಗಕ್ಕೆ ವಿಘ್ನ ಉಂಟಾಗಿ, ಪೂರ್ತಿಯಾಗದೆ ಅರಸ ಮನನೊಂದು ತೀರ್ಥಯಾತ್ರೆಗೆ ಹೊರಟು ಈ ಗ್ರಾಮದ ಮೂಲಕ ಸಂಚರಿಸುತ್ತಿದ್ದಾಗ ಅಲ್ಲಿದ್ದ ಬಕಾಲ ಮಹರ್ಷಿಗಳು ಸರ್ಪಯಾಗ ಕೈಗೊಳ್ಳುವಂತೆ ಆಶೀರ್ವದಿಸಿದರಂತೆ ಜನಮೇಜಯ ಸರ್ಪಯಾಗ ಕೈಗೊಂಡುನಂತೆ ಅದಕ್ಕೆ ಸಾಕ್ಷಿಯಾಗುವಂತೆ ಈ ಗ್ರಾಮದ ಸುತ್ತಲೂ ಕರಿ ಮಣ್ಣಿನ ಭೂಮಿ ಇದ್ದು ಒಂದು ಸ್ಥಳದಲ್ಲಿ ಮಾತ್ರ ಶುಭ್ರವಾದ ಬೂದಿಗುಡ್ಡವಿದೆ. ಸಪ್ತರ್ಷಿಗಳು ಸಪ್ತಸಾಗರಗಳಿಂದ ತರಿಸಿದ ನೀರನ್ನು ಇಲ್ಲಿಯ ಯಜ್ಞಕ್ಕಾಗಿ ಬಳಸಿದರಂತೆ ಅದಕ್ಕೆ ಸ್ಥಳೀಯರು ಈ ಗ್ರಾಮಕ್ಕೆ ಸಪ್ತಸಾಗರ ಎಂದು ಹೆಸರು ಬಂದಿದೆ ಎನ್ನುತ್ತಾರೆ.

ಮತ್ತೆ ಕೆಲವರು, ಸಪ್ತಸಾಗರವು ಜನಮೇಜಯ ರಾಜ ಸರ್ಪಯಾಗ ಮಾಡಿದ ಸ್ಥಳ, ಅಲ್ಲಿ ಇದುವರೆಗೂ ಆ ಸ್ಥಳದಲ್ಲಿ ವಿಭೂತಿ ದೊರೆಯುತ್ತದೆ, ಎಂದು ಮೊದಲು ಯಜ್ಞಮಾಡುವಾಗ ಜನಮೇಜಯ ರಾಜನು ಸ್ಥಳ ಶುದ್ಧೀಕರಣಕ್ಕಾಗಿ ಸಮುದ್ರದ ನೀರನ್ನು ತರಿಸಿದ್ದನೆಂದು, ತಂದೆ ಪರೀಕ್ಷಕನಿಗೆ ಹಾವು ಕಚ್ಚಿ ಮಡಿದಿದ್ದರಿಂದ ಹಾವಿನ ವಂಶನಾಶಕ್ಕಾಗಿ ಸರ್ಪಯಾಗವನ್ನು ಈ ಸ್ಥಳದಲ್ಲಿ ರಾಜನು ಕೈಕೊಂಡನೆಂದು

ಹೇಳುತ್ತಾರೆ. ಇಲ್ಲಿನ ಈಶ್ವರನ ದೇವಸ್ಥಾನ ಅತ್ಯಂತ ಪುರಾತನವಾಗಿದ್ದು, ಜನಮೇಜಯನು ರಾಮ, ಈಶ್ವರನನ್ನು ಪ್ರತಿಷ್ಠಾಪಿಸಿ ಪೂಜಿಸಿದ್ದಾನೆ ಎಂದು, ಆಗ ಸರ್ಪದೋಷ ಪರಿಹಾರವಾಯಿತಂತೆ ಎಂದು ಹೇಳುತ್ತಾ ಸರ್ಪಯಾಗವೇ ಸಪ್ತಸಾಗರವಾಗಿ ಜನತೆಯ ಬಾಯಲ್ಲಿ ಬದಲಾವಣೆ ಹೊಂದಿರಬೇಕು.

ಐನಾಪುರ: ಐನಾಪುರ ಗ್ರಾಮವು ಆದಿನಾಥ ತೀರ್ಥಂಕರರ ಬಸದಿ ಹಾಗೂ ಪಾರ್ಶ್ವನಾಥ ತೀರ್ಥಂಕರರ ಬಸದಿಗಳು, ನಾಲ್ಕು ಶಿಲಾ ಶಾಸನಗಳು, ಎಂಟು ಹಿತ್ತಾಳೆ ಮೂರ್ತಿಗಳ ಮೇಲಿನ ಬರಹಗಳು, ಒಂದು ತಾಮ್ರ ಪತ್ರ ಶಾಸನದ ಮೇಲಿನ ಬರಹವನ್ನು ಒಳಗೊಂಡ ಜೈನ ಅತಿಶಯ ಕೇಂದ್ರವಾಗಿದ್ದಿತು. ಇಲ್ಲಿ ಜೈನ ಮತೀಯ ಜನರೆ ಬಹುಸಂಖ್ಯೆಲ್ಲಿದ್ದುದರಿಂದ ಐನಾಪುರಕ್ಕೆ ಹಿಂದೆ ಜೈನಪುರ ಎಂದು ಕರೆಯುತ್ತಿದ್ದರು. ಇಲ್ಲಿ ಕ್ರಮೇಣ ಜೈನರ ಸಂಖ್ಯೆ ಕಡಿಮೆಯಾಗುತ್ತ ಬಂದು ಅಯ್ಯನವರು ಹೆಚ್ಚು ಸಂಖ್ಯೆಯಲ್ಲಿ ಇರಲು ಪ್ರಾರಂಭಿಸಿದಾಗಿನಿಂದ ಅಯ್ಯನಪುರ>ಐನಾಪುರ ಎಂದು ನಿಷ್ಪತ್ತಿಯಾಗಿರಬೇಕು. ಅಥವಾ ಜೈನಾಪುರ>ಐನಾಪುರ ಹೀಗೆ ಮಾರ್ಪಟ್ಟಿರಬೇಕು. ೧೨ನೇ ಶತಮಾನದ ಶಾಸನದಲ್ಲಿ ಯತಬರಪುರ ಅಥವಾ ಯತಬಾರಪುರ ಎಂದು ಕರೆಯಿಸಿಕೊಂಡ ಈ ಊರು ನಂತರದ ದಿನಗಳಲ್ಲಿ ಅಣಿನಾಪುರ ಆ್ಯನಾಪುರ ಐನಾಪುರ ಎಂದು ಕರೆಯಿಸಿಕೊಂಡಿದೆ.

ಕೋಹಳ್ಳಿ: ಕೋಹಳ್ಳಿ ಎಂದಾಗಿರಬೇಕು. ಕೋಹಳೆ ಎಂದರೆ ಪೊರೆ ಅಥವಾ ಹೊದಿಕೆ ಎಂದು ತಿಳಿದರೆ ಇನ್ನೊಂದು ಕಹೋಳ-ಋಷಿಯ ಹೆಸರಾಗಿ ಕಂಡುಬರುತ್ತದೆ. ಹತ್ತು ಅವತಾರಗಳನ್ನು ಅವತರಿಸಿ ಬಂದ ರಾಮನನ್ನು ಈ ಕೋಹಳ್ಳಿಯು ಕಂಡಂತಿದೆ. ಸೀತೆಯನ್ನು ರಾವಣನು ಕದ್ದೊಯ್ದ ಸಮಯದಲ್ಲಿ ಸೀತೆಯನ್ನು ಅರಸುತ್ತಾ ಅರಸುತ್ತಾ ರಾಮನು ಕಹೋಳ ಋಷಿಯ ಆಶ್ರಮಕ್ಕೆ ಬಂದು ವೇದಪಾರಂಗತರು ಅರಿಷಡ್ವರ್ಗಗಳನ್ನು ಗೆದ್ದವರು, ದೇವರಲ್ಲಿ ಅಚಲ ನಿಷ್ಠೆಯನ್ನಿಟ್ಟು ಕಹೋಳ ಋಷಿಗಳನ್ನು ಕಂಡು ರಾಮನು ತಾನು ಸೀತೆಯನ್ನು ಅರಸುತ್ತಾ ಬಂದಿದ್ದೇನೆ ಎಂದಾಗ, ರಾಮನ ದರ್ಶನಕ್ಕಾಗಿಯೇ ಕಾತರಿಸುತ್ತಿದ್ದ ಋಷಿವರ್ಯರು ಆತನಿಗೆ ಸಂಗಮೇಶ್ವರನನ್ನು ಪೂಜಿಸಲು ಮತ್ತು ಇಷ್ಟಾರ್ಥ ಸಿದ್ದಿಯನ್ನು ಪಡೆಯಲು ತಿಳಿಸಿದರು. ಹಾಗೆಯೇ ರಾಮನು ಸಂಗಮೇಶ್ವರರನ್ನು ಪೂಜಿಸಿ ತನ್ನ ಕಾರ್ಯ ನೆರವೇರಿಸಿಕೊಂಡನಂತೆ, ಅಂದಿನ ಆ ಕಹೋಳ ಋಷಿಗಳ ಆಶ್ರಮವೇ ಇಂದು ಕೋಹಳ್ಳಿ ಎಂದು ಕಹೋಳ ಕೋಹಳ್ಳಿಯಾಗಿ ರೂಪುಗೊಂಡಿದೆ.

ಅಂತೆಯೇ ಕೋಹಳೆ ಎಂದರೆ ಪೊರೆ ಅಥವಾ ಹೊದಿಕೆ ಈ ಹಿನ್ನೆಲೆಯೇ ರಾಮನಿಗೆ ಬಂದ ಆಪತ್ತು ಆತನ ಜೀವನಕ್ಕೆ ಅಂಟಿಕೊಂಡ ಪೊರೆಯು ಹರಿತೆನಿಸುತ್ತದೆ.

ತೆಲಸಂಗ: ತೈಲಸಂಗ-ತೆಲಸಂಗ ಎಂದು ಪದನಿಷ್ಪತ್ತಿಯಾಗಿದೆ. ಇವತ್ತಿನ ಈ ತೆಲಸಂಗವು ೧೨ನೇ ಶತಮಾನದಲ್ಲಿ ಕಲ್ಯಾಣದ ಶಿವಶರಣರಿಗೆ ತೈಲವನ್ನು ಪೂರೈಸುವ ಸ್ಥಳವಾಗಿತ್ತಂತೆ. ತೈಲ ಉತ್ಪಾದಿಸುವ ಸಮೂಹಗಳು ಇಲ್ಲಿ ಇದ್ದುದರಿಂದ ತೈಲ ಎಂದರೆ ಎಣ್ಣೆ, ಸಂಗ ಎಂದರೆ ಸಮೂಹ ಹೀಗೆ ಇದು ತೈಲಸಂಗ>ತೆಲಸಂಗವಾಗಿ ಮಾರ್ಪಟ್ಟಿದೆ ಎನ್ನುವ ಪ್ರತೀತಿ ಇದೆ.

ಕಕಮರಿ: ಕಾಕುಮಾರಿ-ಕಾಕುಮರಿ-ಕಕಮರಿಯಾಗಿದೆ. ಈ ಕಕಮರಿಯು ಒಂದು ಕಾಲಕ್ಕೆ ಗೋಸಂಪತ್ತು ಸಮೃದ್ಧವಾಗಿದ್ದಂತಹ ಊರಾಗಿತ್ತು. ಊರಿನಾಚೆಗೆ ಕಾಣುವ ಗುಡ್ಡದಲ್ಲಿ ದನಕರುಗಳಿಗೆ, ಹೋರಿಗಳಿಗೆ ಸಾಕಷ್ಟು ಹುಲ್ಲು ದೊರಕುತ್ತಿದ್ದ ಸುಖ ಸಮೃದ್ಧಿಯ ಕಾಲ, ಈಗಲೂ ಸುತ್ತಮುತ್ತಲು ಸುಂದರವಾಗಿ ಕಾಣುವ ಪರಿಸರ ಇದೆ.

ಶುಕ್ರ ಋಷಿಗಳ ಆಶ್ರಮ ಹೋಗಿ ದಂಡಕಾರಣ್ಯವೆಂದು ಹೆಸರು ಪಡೆದ ಸ್ಥಳ ಇದಾಗಿದೆ. ಒಮ್ಮೆ ಶುಕ್ರಮ್ಮ ಋಷಿಗಳು ಕ್ರೋಧಗೊಂಡು ದಂಡಕಾರಾಜನ ರಾಜ್ಯ ನಾಶವಾಗಲೆಂದು, ತನ್ನಮಗಳಿಗೆ ಹುಲಿಯಾಗಬೇಕೆಂದು ಶಾಪಕೊಟ್ಟನು. ಅಂತೆಯೇ ಇದು ದಂಡಕಾರಣ್ಯವಾಯಿತು. ಮಗಳು ಹುಲಿಯಾದಳು ಆಗಣ್ಯಾ ಮಗಳು ಶೂದ್ರ ಋಷಿಗಳಿಗೆ ಈ ಶಾಪ ವಿಮುಕ್ತಿ ಯಾವಾಗ ಎಂದು ಕೇಳುತ್ತಾಳೆ. ಅದಕ್ಕೆ ಮುನಿಗಳು ಕೆಲವು ಕಾಲಾನಂತರ ಸಕಲ ವೇದಪಾರಂಗತನಾದ "ಧರ್ಮನಿಷ್ಟಿ ಶ್ವೇತನೆಂಬ ಬ್ರಾಹ್ಮಣ ಸ್ನಾನಕ್ಕೆಂದು ಇಲ್ಲಿಗೆ ಬಂದಾಗ ನೀನು ಆತನನ್ನು ತಿನ್ನಲು ಹೋಗುವೆ. ಆ ಬ್ರಾಹ್ಮಣನು ವಿಜೋಶ್ವೆರನ ಸ್ತೋತ್ರ ಪಠಣೆ ಮಾಡಲು ಸ್ತ್ರೀಯಾಗುವೆ ಎಂದನು. ಅಂತೆಯೇ ಬ್ರಾಹ್ಮಣನು ಮಂತ್ರ ಪಠಣೆ ಮಾಡಲು ಆ ಹೆಣ್ಣು ಹುಲಿಯ ಸ್ಥಳದಲ್ಲಿ ಒಂದು ಸುಂದರ ಸ್ತ್ರೀರೂಪ ಕಂಡುಬಂದು ಹುಲಿಯು ಹೆಣ್ಣಾಗಿ ಪಾರಣ್ಯ ಹೊಂದುತ್ತಾಳೆ. ಅವಳೇ ಕಾಕುಮಾರಿ ದೇವತೆಯಾಗಿ ಬದಲಾವಣೆ ಹೊಂದುತ್ತಾಳೆ.

ಕಾಕು-ಎಂದರೆ ಬದಲಾವಣೆ

ಮಾರಿಎಂದರೆ ಕ್ಷುದ್ರದೇವತೆ

ಈ ಬದಲಾವಣೆಯನ್ನು ಹೊಂದಿದ ದೇವತೆಯೇ ಕಾಕುಮಾರಿ ಶುಕ್ರ ಋಷಿಗಳ ಮಗಳು. ಅಂದಿನಿಂದ ಅವಳ ಹೆಸರೇ ಆ ಗ್ರಾಮಕ್ಕೆ ರೂಢಿಯಾಗಿ ಬಂದು ಕಾಕುಮಾರಿ, ಕಾಕಮಾರಿ, ಕಕಮರಿ ಎಂದು ಜನರ ಬಾಯಲ್ಲಿ ಬಂದ ಪರಿಭಾಷೆಯಾಗಿದೆ. ಆ ಕಾಕುಮಾರಿಯನ್ನೆ ಅಮ್ಮಾಜಿ ದೇವಿ ಎಂದು ಪೂಜಿಸುತ್ತಾರೆ. ಈ ಊರು ಚಿಕ್ಕದಾಗಿದ್ದರೂ ಅಮ್ಮಾಜಿ ದೇವಿಯ ಕೀರ್ತಿ ದೊಡ್ಡದು. ಜನವಸತಿ ಇಂದು ತೀರ ವಿರಳ ವಿದ್ದರೂ, ಜನರು ನೆಮ್ಮದಿಯಿಂದ ಜೀವನ ನಡೆಸಿದ್ದಾರೆ. ಅಂದಿನ ದಂಡಕಾರಣ್ಯದ ಸೊಬಗನ್ನು, ಕಲ್ಪನೆಯನ್ನು ಇಂದು ಊರು ಕಳಕೊಂಡಿದ್ದರೂ, ರಮಣೀಯವಾದ ಸ್ಥಳ ಇದಾಗಿದೆ. ಗಿರಿಕಂದರಗಳಿಂದ ಸೃಷ್ಟಿ ಸೌಂದರ್ಯದಿಂದ ಕಂಗೊಳಿಸುತ್ತದೆ. ಇಲ್ಲಿ ಪ್ರತಿಯೊಬ್ಬರೂ ಹುಟ್ಟಿದ ಮಗುವಿಗೆ ಅಮ್ಮಾಜಿದೇವಿ ಎಂದು ಮೊದಲು ಹೆಸರು ಕರೆದು ನಂತರ ಪ್ರೀತಿ ನಾಮಗಳನ್ನು ಇಡುತ್ತಾರೆ.

ಮಹಿಷವಾಡಗಿ: ಈ ಗ್ರಾಮದಲ್ಲಿ ದುಷ್ಟರು ಗೋವುಗಳನ್ನು ಅಪಹರಿಸುತ್ತಿದರಂತೆ. ಒಮ್ಮೆ ನದಿಯಲ್ಲಿ ಸ್ನಾನಮಾಡುತ್ತಿದ್ದ ಮಹಿಷನೆಂಬ ವ್ಯಕ್ತಿಯು ನೋಡಿ ಆ ಹಸುವಿನ ಬಿಡುಗಡೆಗಾಗಿ 'ಹಸು ಇಲವೆ ಅಸು' ಎಂದು ಹೋರಾಡಿ ಪ್ರಾಣತೆತ್ತನು, ಮಹಿಷನೆಂಬ ಶೂರನಿಂದ ಈ ಊರಿಗೆ ಮಹಿಷವಾಡಗಿ ಎಂದು ಹೆಸರು ಬಂದಿದೆ.

ರಾಮತೀರ್ಥ: ಕೋಹಳ್ಳಿಗೆ ಶ್ರೀರಾಮನು ಸೀತೆಯನ್ನು ಅರಸುತ್ತಾ ಬಂದು ಕೊಹಳ ಋಷಿಯ ನೆಲೆಯಡಿ ಸಂಗಮೇಶ್ವರನನ್ನು ಪೂಜಿಸಿ ಪರಿಹಾರ ಕಂಡುಕೊಂಡನು. ನಂತರ ಮುಂದಕ್ಕೆ ಬಂದು ಓಂಕಾರೇಶ್ವರರನ್ನು ಋಷಿಯ ಸಲಹೆಯಂತೆ ಪೂಜಿಸಿ ತಾನು ಈಶ್ವರನನ್ನು ಪೂಜಿಸಿದುದ್ದಕ್ಕಾಗಿ ಈಶ್ವರನ ಜೊತೆಗೆ ನನ್ನ ಹೆಸರು ಶಾಶ್ವತವಾಗಿ ನೆಲೆಸಲಿ ಎಂದು ರಾಮೇಶ್ವರ ಎಂಬ ಹೆಸರನ್ನು ಇಟ್ಟನಂತೆ. ಅಂದಿನಿಂದ ರಾಮೇಶ್ವರ ಎನ್ನುವ ಹೆಸರು ರಾಮತೀರ್ಥ ಎಂದು ನಾಮಕರಣಗೊಂಡು ಬಂದಿದೆ. ಅರ್ಜುನನು ಪಾಶುಪತಾಸ್ತ್ರವನ್ನು ಪಡೆದದ್ದು ಈ ರಾಮೇಶ್ವರನನ್ನು ಆರಾಧಿಸಿಯೇ ಎಂದು ಇಲ್ಲಿನ ಜನರು ಹೇಳುತ್ತಾರೆ.

ರಾಮತೀರ್ಥದಲ್ಲಿ ಅಷ್ಟತೀರ್ಥಗಳ ಸನ್ನಿದಾನವಿದೆ ಎಂದು ಹೇಳುತ್ತಾರೆ. ಗಂಗೆ, ಇಲ್ಲಿ ಉತ್ತರವಾಹಿನಿ ಯಾಗಿ ಹರಿದಿದ್ದಾಳೆ. ವರಣತೀರ್ಥ, ಅಕ್ಷಯತೀರ್ಥ ಅನಂತತೀರ್ಥ ವಟತೀರ್ಥ ಎಂದು ಹೀಗೆ ತೀರ್ಥಗಳ ಹೆಸರನ್ನು ಹೇಳುವುದುಂಟು. ಹಾಗೆಯೇ ಅಗ್ನಿಯನ್ನು ಉತ್ಪಾದನೆ ಮಾಡುವ 'ಅರುಣಿ' ಇಲ್ಲಿ ಇದೆ ಎಂದು ತಿಳಿಯುತ್ತದೆ. ಇಲ್ಲಿನ ಪಾರ್ವತಿ ಮಂದಿರದ ಹಿಂದೆ ಒಂದು ಗುಪ್ತಾ ವಿದ್ದು ಇಲ್ಲಿಂದ ಮೂರೆ ದಿನದಲ್ಲಿ ಕಾಶಿಗೆ ಹೋದರೆಂದು ಇಲ್ಲಿಯ ಜನರ ಹೇಳಿಕೆ.

ಪಾರ್ಥನಹಳ್ಳಿ: ಅಥಣಿಗೆ ಬಹಳಷ್ಟು ಸಮೀಪ ಇರುವ ಊರು ಪಾರ್ಥನಹಳ್ಳಿ. ಒಂದು ಐತಿಹ್ಯದಂತೆ ಪಾಂಡವರು ೧೨ವರ್ಷ ವನವಾಸಕ್ಕಾಗಿ ದಂಡಕಾರಣ್ಯಕ್ಕೆ ಬಂದಿದ್ದರು. ಆಗ ಅರ್ಜುನನು ಒಂದು ದಿನ ಇಲ್ಲಿ ಇದ್ದು, ಈಶ್ವರನನ್ನು ಪೂಜಿಸಿ, ಭಕ್ತಿಯನ್ನು ಅರ್ಪಿಸಿ ಮೆಚ್ಚುಗೆಯನ್ನು, ಆಶೀರ್ವಾದವನ್ನು ಪಡೆದುಕೊಂಡನೆಂದು, ಪಾರಮಾರ್ಥಿಕ ಸಾಧನೆಗಾಗಿ ಇಂಥವರು ತಪಸ್ಸುಮಾಡಿ ಮೋಕ್ಷ ಪಡೆಯುತ್ತಿದ್ದರೆಂದು ಜನರು ಹೇಳುತ್ತಾರೆ. ಇಲ್ಲಿ, ಶಿವ ದೇವಾಲಯವಿದೆ. ಇದು ಪಾಂಡವರ ಕುರುಹು ಎಂದು ಅಲ್ಲಿಯ ಜನರು ನಂಬಿದ್ದಾರೆ ಆ ಕಾರಣದಿಂದ ಅದಕ್ಕೆ ಪಾರ್ಥನ ಹಳ್ಳಿ ಎಂದು ಹೇಳುತ್ತಾರೆ.

ಹೀಗೆ ಸಂಕ್ರಟ್ಟಿಯು ಶಂಕರನಹಟ್ಟಿ ಎಂದು ಸಂಕೋನಟ್ಟಿಯನ್ನು ಶಿವನ ಸಖಿ ಊರು ಸಖಿನಟ್ಟೆ ಎಂದು, ಅದು ಸಂಕೋನಟ್ಟಿಯಾಗಿದೆ ಎಂದು ಹೇಳುವುದು ಕಂಡುಬರುತ್ತದೆ.

ಈ ರೀತಿಯಲ್ಲಿ ಅಥಣಿಯ ಸುತ್ತಲೂ ಇರುವ ಸುಮಾರು ೧೦೦-೧೨೦ ಹಳ್ಳಿಗಳು ರಾಮಾಯಣ ಮಹಾಭಾರತದ ಪಾತ್ರಗಳು ಓಡಾಡಿದ ನೆಲವಾಗಿವೆ. ಮಹಾ ಕಾವ್ಯಗಳ ಪಾತ್ರಗಳನ್ನು ಸನ್ನಿವೇಶ ಸಂದರ್ಭಗಳನ್ನು ಕಟ್ಟಿಕೊಡುವ ಹಲವಾರು ಸ್ಥಳನಾಮಗಳು ಈ ಪರಿಸರದಲ್ಲಿವೆ. ಅವುಗಳ ಕುರಿತು ಅಧ್ಯಯನ ಇನ್ನೂ ನಡೆಯಬೇಕಿದೆ.

೨.೨. ಭೌಗೋಳಿಕ ಹಿನ್ನೆಲೆ

ಸಮುದಾಯಗಳ ಅಧ್ಯಯನವೆಂಬುದು ಒಂದು ಪ್ರದೇಶದ ಸಾಂಸ್ಕೃತಿಕ ಅಧ್ಯಯನವಾಗಿದೆ. ಒಂದು ಪ್ರದೇಶದಲ್ಲಿನ ಸಮುದಾಯಗಳ ಉದ್ಯೋಗ, ವ್ಯವಹಾರ, ಊಟ, ಉಡುಗೆ ಮನರಂಜನೆ, ಹೀಗೆ ಒಟ್ಟಾರೆ ಪ್ರದೇಶದ ಬದುಕೆಲ್ಲ ಇದರ ತೆಕ್ಕೆಗೆ ಸಿಲುಕುತ್ತದೆ.

ಒಂದು ನಿರ್ದಿಷ್ಟ ಪ್ರದೇಶದ ಜಾನಪದ ಅಧ್ಯಯನಕ್ಕೆ ತೊಡಗುವ ಮೊದಲು ಸ್ಥೂಲವಾಗಿಯಾದರೂ ಅಧ್ಯಯನದ ರೂಪರೇಷಗಳನ್ನು ಕಲ್ಪಿಸುವುದು ಸರಿ ಎನಿಸುತ್ತದೆ.

ಈ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಲಿರುವ ಸ್ಥಳದ ಅಥವಾ ಪರಿಸರದ ಭೌಗೋಳಿಕ ಹಿನ್ನೆಲೆ ಬಹು ಮುಖ್ಯವಾದುದು. ಬಹಳಷ್ಟು ಸಲ ಭೌಗೋಳಿಕ ಪರಿಸರವೇ ಆಯಾ ಪ್ರದೇಶದ ಜನರ ಜೀವನ ಸ್ವರೂಪವನ್ನು ನಿರ್ಧರಿಸುತ್ತದೆ, ನಿಯಂತ್ರಿಸುತ್ತದೆ. ಒಂದು ಪರಿಸರದಲ್ಲಿ ವಾಸಿಸುವ ಜನರ ಊಟ, ಉಡುಗೆ, ಉದ್ಯೋಗ ಕ್ರಮಗಳು ಆ ಭಾಗದ ಭೂಮಿಯಗುಣ. ಮಳೆಯ ಪ್ರಮಾಣ, ಬೆಳೆಯ ರೀತಿಯನ್ನು ಅವಲಂಬಿಸಿರುತ್ತದೆ. ಊರಿನ ಮೇರೆಗಳು, ದಾರಿಗಳು, ಉದ್ಯೋಗ, ವ್ಯವಸಾಯವನ್ನು ಅವಲಂಬಿಸಿವೆ. ಊರುಗಳ ಸುತ್ತಲಿನ ಬಯಲು ಭೂಮಿ, ನದಿ, ಬೆಟ್ಟಗಳನ್ನು ಪಕ್ಕಕ್ಕೆ ಇರಿಸಿ ಜನರ ಜೀವನವನ್ನು ನೋಡಲು ಆಗುವುದಿಲ್ಲ. ಹೀಗೆ ಭೌಗೋಳಿಕ ವಿವರಣೆ, ಇಂತಹ ಅಧ್ಯಯನದಲ್ಲಿ ಮುಖ್ಯವಾದುವೆನಿಸುತ್ತದೆ. ಇದರಿಂದಾಗಿ ಅಥಣಿ ಪರಿಸರದ ಭೌಗೋಳಿಕ ಹಿನ್ನೆಲೆಯು ಕೂಡ ಇದಕ್ಕೆ ಹೊರತಾಗಿಲ್ಲ.

ಕರ್ನಾಟಕದ ೨೯ ಜಿಲ್ಲೆಗಳಲ್ಲಿ ಒಂದಾಗಿರುವ ಬೆಳಗಾವಿ ಜಿಲ್ಲೆಯು ೧೦ ತಾಲೂಕುಗಳನ್ನು ಒಳಗೊಂಡಿದೆ. ಇವುಗಳಲ್ಲಿ ಅಥಣಿಯೂ ಒಂದು ಈ ಅಥಣಿ ತಾಲೂಕು ಕರ್ನಾಟಕ ರಾಜ್ಯದ ವಾಯುವ್ಯದಲ್ಲಿರುವ ಬೆಳಗಾವಿ ಜಿಲ್ಲೆಯ ಉತ್ತರಕ್ಕಿದೆ. ಇಲ್ಲಿ ಕೃಷ್ಣೆ ಹರಿದು ಬಂದಿರುವುದರಿಂದ ಸೃಷ್ಟಿ ಸೌಂದರ್ಯದ ತವರೂರು ಇದಾಗಿದೆ. ವೇದ-ಪುರಾಣ ಕಾಲದಿಂದಲೂ ಇತಿಹಾಸ ಪ್ರಸಿದ್ಧ ನಾಡು ಇದಾಗಿದೆ. ಅನೇಕ ಪುಣ್ಯಪುರುಷರ ತಪೋವನದ ತಪೋಭೂಮಿ. ಶಿಲಾಯುಗ, ತಾಮ್ರಯುಗದ ಅವಶೇಷಗಳು, ಗತಕಾಲದ ಚರಿತ್ರೆಗೆ ಸಾಕ್ಷಿಯಾಗಿವೆ. ಅಥಣಿ ತಾಲೂಕು ಸಾಹಿತಿಗಳ, ಕಲಾವಿದರ ಆಗರವಾಗಿದೆ.

ಬೆಳವಲ ನಾಡಿನಲ್ಲಿರುವ ಅಥಣಿಯ ಉತ್ತರದಲ್ಲಿ ಮಹಾರಾಷ್ಟ್ರ ರಾಜ್ಯವಿದ್ದು, ದಕ್ಷಿಣಕ್ಕೆ ರಾಯಭಾಗ ಮತ್ತು ಜಮಖಂಡಿ ತಾಲೂಕುಗಳು ಇವೆ. ಪೂರ್ವಕ್ಕೆ ಬಿಜಾಪುರ ಜಿಲ್ಲೆ, ಪಶ್ಚಿಮಕ್ಕೆ ಮಹಾರಾಷ್ಟ್ರದ ಶಿರೋಳ ತಾಲೂಕು ಇದೆ. ಅಥಣಿ ತಾಲೂಕಿನಲ್ಲಿ ಒಟ್ಟು ೮೯ ಹಳ್ಳಿಗಳಿದ್ದು, ಅವುಗಳ ಜೊತೆಗೆ ೨೭ ಮಜರೆ ಹಳ್ಳಿಗಳಿವೆ. ಅವುಗಳನ್ನು ಅನಂತಪುರ, ಅಥಣಿ, ಕಾಗವಾಡ ಹಾಗೂ ತೆಲಸಂಗ ಎಂದು ೪ ಹೋಬಳಿಗಳಾಗಿ ವಿಂಗಡಿಸಲಾಗಿದೆ. ಅಥಣಿ ಹಾಗೂ ಕಾಗವಾಡ ಈ ಎರಡು ವಿಧಾನಸಭಾ ಮತಕ್ಷೇತ್ರಗಳಾಗಿವೆ. ಜಿಲ್ಲಾ ಪಂಚಾಯ್ತಿ ಮತ ಕ್ಷೇತ್ರಗಳು ೩೬ ಇವೆ. ಅಥಣಿಯು ಬೆಳಗಾವಿ ಜಿಲ್ಲೆಯ ಅತೀ ದೊಡ್ಡ ತಾಲೂಕಾಗಿದೆ. ಅಥಣಿಯು ಜಿಲ್ಲಾ ಸ್ಥಳವಾದ ಬೆಳಗಾವಿಯಿಂದ ೧೪೦ ಕಿ.ಮಿ. ದೂರದಲ್ಲಿರುತ್ತದೆ.

ಇಂತಹ ಅಥಣಿ ನಗರದಲ್ಲಿ ಜನಸಂಖ್ಯೆ ೪೦,೯೦೦ ಇದ್ದು, ಈ ತಾಲೂಕಿನ ವಿಸ್ತೀರ್ಣ ೧೯೯೫.೭ ಚ.ಕಿ.ಮೀ. ಗಳು. ಇಲ್ಲಿಯ ಹವಾಗುಣವು ಆರೋಗ್ಯಯುತವಾಗಿದ್ದು, ಬೇಸಿಗೆಯಲ್ಲಿ ಬಳ್ಳಾರಿಯ ಬಿಸಿಲಿಗಿಂತಲೂ ಹೆಚ್ಚು ಉಷ್ಣ ಇರುತ್ತದೆ. ಚಳಿಗಾಲದಲ್ಲಿ ಚಳಿಯೂ ಹೆಚ್ಚಾಗಿರುತ್ತದೆ. ಮಳೆಯು

ವಾರ್ಷಿಕ ಸರಾಸರಿಯೂ ೧೮೧.೬ ಮಿಲಿ ಲೀಟರ್‌ಗಳಷ್ಟು ಇಲ್ಲಿ ೧೦ ಮಳೆ ಅಳೆಯುವ ಕೇಂದ್ರಗಳಿವೆ. ಅಥಣಿಯು ಮೈದಾನ ಪ್ರದೇಶವಾಗಿದ್ದು, ಕಲ್ಲು, ಶಿಲೆಗಳಿಂದ ನಿರ್ಮಿತವಾಗಿದೆ. ಬೆಳಗಾವಿ ಜಿಲ್ಲೆಯ ಉತ್ತರಕ್ಕಿರುವ ಈ ತಾಲೂಕು ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವುದರಿಂದ ಗಡಿ ತಾಲೂಕು ಆಗಿದೆ. ಅಥಣಿಯ ವ್ಯಾಪಾರ ವ್ಯವಹಾರಗಳೆಲ್ಲವು ಬೆಳಗಾವಿಗಿಂತಲೂ ಹೆಚ್ಚಾಗಿ ಮಹಾರಾಷ್ಟ್ರದ ಸಾಂಗ್ಲಿ, ಮಿರಜ್ ಪಟ್ಟಣಗಳೊಡನೆ ಹೆಚ್ಚು ಹೀಗೆ ವ್ಯಾಪಾರ-ವ್ಯವಹಾರ ನಡೆಯಲು ಅನೇಕ ಕಾರಣಗಳಿವೆ. ಅವುಗಳಲ್ಲಿ ಭೌಗೋಳಿಕ ಸಾಮಿಪ್ಯವೊಂದಾದರೆ, ಸಾರಿಗೆ ಸಂಪರ್ಕದ ಅನುಕೂಲತೆಯಿಂದಾಗಿ ವ್ಯಾಪಾರದಲ್ಲಿ ಸಾಕಷ್ಟು ಲಾಭಾಂಶವೂ ಇದೆ. ಹಾಗೆ ಉತ್ತರ ಮತ್ತು ಪಶ್ಚಿಮದಲ್ಲಿ ಕೊಲ್ಹಾಪುರ, ಸಾಂಗ್ಲಿ ಜಿಲ್ಲೆಗಳು ಗಡಿಪ್ರದೇಶ ಗಳಾಗಿವೆ. ಈಶಾನ್ಯ ಮತ್ತು ಪೂರ್ವದಲ್ಲಿ ಬಿಜಾಪುರ ಜಿಲ್ಲೆ, ಆಗ್ನೇಯಾದಲ್ಲಿ ಬಾಗಲಕೋಟ ಜಿಲ್ಲೆ, ದಕ್ಷಿಣಕ್ಕೆ ರಾಯಬಾಗ ತಾಲೂಕು, ಈಶಾನ್ಯಕ್ಕೆ ಚಿಕ್ಕೋಡಿ ತಾಲೂಕುಗಳಿವೆ. ಇದು ೧೬.೩೦ ಉತ್ತರ ಅಕ್ಷಾಂಶದಿಂದ ೧೬.೫೮ ಉತ್ತರ ಅಕ್ಷಾಂಶಗಳ ಮಧ್ಯೆ ಹಾಗೂ ೭೪.೪೦ ಪೂರ್ವ ರೇಖಾಂಶದಿಂದ ೭೫.೪ ಪೂರ್ವ ರೇಖಾಂಶಗಳ ಮಧ್ಯೆ ಹರಡಿಕೊಂಡಿದೆ. ಸಮುದ್ರ ಮಟ್ಟದಿಂದ ಸರಾಸರಿ ೪೫೦-೮೦೦ ಮಿ. ಎತ್ತರದಲ್ಲಿ ಇದ್ದು, ಜಿಲ್ಲೆಯಲ್ಲಿಯೇ ಹೆಚ್ಚು ವಿಸ್ತೀರ್ಣ ಹೊಂದಿದ ಪ್ರದೇಶವಾಗಿದೆ. ಸ್ವಾಭಾವಿಕವಾಗಿ ಹೇಳಬೇಕೆಂದರೆ ಅಥಣಿ ತಾಲೂಕು ಶುಷ್ಕವಲಯದಲ್ಲಿ ಸ್ಥಾಪಿತಗೊಂಡಿದೆ. ಕೃಷ್ಣ ನದಿಯ ಉತ್ತರಕ್ಕೆ ಹರಡಿಕೊಂಡಿರುವ ತಾಲೂಕಿನ ಭೂಪ್ರದೇಶ ಅಲ್ಲಲ್ಲಿ ಏರುಪೇರುಗಳಿಂದ ಕೂಡಿದ್ದು ಬಿಟ್ಟರೆ ಸಮತಟ್ಟಾದ ಮೈದಾನ ಪ್ರದೇಶವಾಗಿದೆ. ಪಶ್ಚಿಮದಿಂದ ಪೂರ್ವಕ್ಕೆ ನಿಧಾನ ಇಳಿಜಾರು ಹೊಂದಿದೆ. ತಾಲೂಕನ್ನು ಪ್ರಾಕೃತಿಕವಾಗಿ ಉತ್ತರ ಮತ್ತು ಈಶಾನ್ಯ ಮರುಭೂಮಿ ಪ್ರದೇಶವೆಂದು ವಿಂಗಡಿಸಲಾಗಿದೆ.

ಅಥಣಿ ಪರಿಸರದಲ್ಲಿ ಕೃಷ್ಣಾನದಿಯು ಏಕೈಕ ಮತ್ತು ದೊಡ್ಡ ನದಿಯಾಗಿದ್ದು, ೯೬ ಕಿ.ಮಿ. ಉದ್ದ ಪ್ರವೇಶಿಸಿದೆ. ೩೩ ಹಳ್ಳಿಗಳು ನದಿಯ ದಡದಲ್ಲಿವೆ. ಮೊಸಾಲ್ಟ ಶಿಲೆಯಿಂದ ಉದ್ಭವಿಸಿದ ಕಪ್ಪು ಮಣ್ಣು ಅಲ್ಲದೆ ಕೆಂಪುಮಣ್ಣು ತಾಲೂಕಿನಲ್ಲಿ ಹಂಚಿಕೆಯಾಗಿದ್ದು, ಅನೇಕ ಬೆಟ್ಟ, ಪ್ರಸ್ಥಭೂಮಿ ಪ್ರದೇಶಗಳಲ್ಲಿ ಗರಸು ಹರಡಿದ್ದು ತೋಟಗಾರಿಕೆಗೆ ಉತ್ತಮವಾದ ಪರಿಸರ ಇದಾಗಿದೆ. ಕೃಷ್ಣ ತೀರದ ಉತ್ತರ ಭಾಗದಲ್ಲಿ ಕಪ್ಪು ಹಾಗೂ ನಕಲು ಸಂಚಯನ ಅಧಿಕವಾಗಿದ್ದು, ಕಂದು ಕೆಂಪುಮಣ್ಣಿನ ಹಂಚಿಕೆಯಿಂದ ಈ ಕೃಷ್ಣಾ ನದಿಯು ಮಹಾರಾಷ್ಟ್ರದ ಮಹಾಬಳೇಶ್ವರದಿಂದ ಹುಟ್ಟಿ ಕರ್ನಾಟಕವನ್ನು ಮೊದಲು ಪ್ರವೇಶಿಸುವುದು ಅಥಣಿ ತಾಲೂಕನ್ನು, ಈ ನದಿಯೂ ಈ ಪರಿಸರದ ಜೀವನಾಡಿಯಾಗಿದೆ. ಇದನ್ನು ಜನಪದರು ಹಿರೇಹೊಳೆ ಎಂದೇ ಕರೆಯುತ್ತಾರೆ. ಈ ಭಾಗವು ಪುರಾಣ-ಪುಣ್ಯ ಕ್ಷೇತ್ರಗಳ ಬೀಡಾಗಿದೆ. ನದಿ ಉದ್ದಕ್ಕೂ ನೃತ್ಯಗೈಯ್ಯುವ ನವಿಲುಗಳು, ಇನಿದನಿಯ ಕುಕಿಲ್ವ ಕೋಗಿಲೆಗಳು ಫಲಪುಷ್ಪಗಳು ಪೇರಲ, ಮಾವು, ದ್ರಾಕ್ಷಿ, ಬಾಳೆ, ಸೀತಾಫಲ, ಸಪೋಟ ಮುಂತಾದ ಹಣ್ಣುಗಳನ್ನು ಬೆಳೆಯುತ್ತಾರೆ. ಇಂತಹ ಬನಸಿರಿಯ ಮೇಲಿಂದ ಬೀಸುವ ಮಂದ ಮಾರುತವು ಸೃಷ್ಟಿ ಸೌಂದರ್ಯದ ಸೊಬಗು ಇಲ್ಲಿ ತಾನೇ ತಾನಾಗಿಚೆಲ್ಲಿದೆ.

ದೋಣಿ ಅಗರಣಿ (ಅಘುಹರಣಿ) ಹಿರೇಹಳ್ಳ ಮೊದಲಾದ ಸುಮಾರು ೧೨ ಹಳ್ಳಗಳಿವೆ. ಕೋಹಳ್ಳಿ, ಕೊಕಟನೂರ, ಬೇವನೂರ, ಮಧಬಾವಿ, ಅಡಾಳಹಟ್ಟಿ, ಚಮಕೇರಿ, ಎಲೆಹಡಲಗಿ, ಐಗಳಿ, ಅಥಣಿ,

ಭರಮಖೋಡಿ ಗೆಜ್ಜೆನಖೋಡಿ, ಬಡಚಿ, ಅನಂತಪುರ, ಬಳ್ಳಿಗೇರಿ ಮುಂತಾದ ಪರಿಸರದಲ್ಲಿ ಬಸಿಯುವ ಹಾಗೂ ನಿರಾವರಿ ಕೆರೆಗಳಿವೆ. ಇತ್ತೀಚೆಗೆ ಮಳೆಯ ಅಭಾವದಿಂದಾಗಿ ಕೆರೆಗಳಲ್ಲಿ, ಬಾವಿಗಳಲ್ಲಿ ನೀರು ಕಡಿಮೆಯಾಗುತ್ತಿದೆ. ಆದರೂ ಕೃಷ್ಣಾ ನದಿಯಿಂದ ಯಾತ ನೀರಾವರಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಇದರಿಂದ ಭವಿಷ್ಯತ್ತಿನಲ್ಲಿ ರೈತನ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದುಂಟು.

ಅಥಣಿ ಸಮೀಪದ ಹಿಪ್ಪರಗಿ ಆಣೆಕಟ್ಟು ಪೂರ್ಣ ಮುಗಿದಿದ್ದು, ಇದರಿಂದ ಅಥಣಿ ಪರಿಸರದಲ್ಲಿ ೧,೨೫,೦೦೦ ಎಕರೆ ಭೂಮಿಗೆ ನೀರು ದೊರೆಯಲಿದ್ದು, ಹಾಗೆಯೇ ಮಹಿಷವಾಡಿಗೆ ಬ್ಯಾರೇಜ್, ಉಗಾರ ಬ್ಯಾರೇಜ್‌ಗಳಿಂದ ರೈತರು ಇದರ ಉಪಯೋಗ ಪಡೆದುಕೊಳ್ಳುತ್ತಿದ್ದಾರೆ. ಅಥಣಿ ಪರಿಸರದಲ್ಲಿ ಒಟ್ಟಾರೆ ನೀರಾವರಿ ಕ್ಷೇತ್ರ ೯.೪೮೬೩ ಹೆಕ್ಟೇರ್ ಇದೆ. ೫ ಭಾರಿ ಸೇತುವೆಗಳಿವೆ. ಮತ್ತು ೩ ಸಕ್ಕರೆ ಕಾರ್ಖಾನೆಗಳಿವೆ. ಅವುಗಳು ಉಗಾರ ಶುಗರ ವಕ್ಸ ಲಿ, ಉಗಾರ ಖುರ್ದ. ಕೃಷ್ಣ ಶುಗರ ವರ್ಕ್ಸ ಲಿ, ಅಥಣಿ. ಅಥಣಿ ಫಾರಮರ್ಸ್ ವರ್ಕ ಕೆಂಪವಾಡ ಇವುಗಳಲ್ಲಿ ದಿ. ಉಗಾರ ಶುಗರ್ಸ್ ರಾಜ್ಯದಲ್ಲಿಯೇ ಅತಿ ಪೈಪೋಟಿ ನಡೆಸಿ ಮುಂಚೂಣಿಯಲ್ಲಿರುವ ಶುಗರ್ಸ್ ಕಂಪನಿಯಾಗಿದೆ.

ಅಥಣಿ, ಶೇಡಬಾಳ, ಕಾಗವಾಡಗಳಲ್ಲಿ ಸಿಮೆಂಟ್ ಪೈಪು ತಯಾರಿಸುವ ಕಾರ್ಖಾನೆಗಳಿವೆ. ಮದಭಾವಿಯಲ್ಲಿ ಚರ್ಮದ ಉದ್ದಿಮೆ ಅಭಿವೃದ್ಧಿಯಲ್ಲಿದೆ. ಲಿಡಕರ್ ಚರ್ಮಗಾರಿಕೆ ಉದ್ಯೋಗವು ವಿಶ್ವವಿಖ್ಯಾತವಾಗಿವೆ. ಈಗಲೂ ಕೂಡ ಬೇಡಿಕೆ ಇದೆ. ಅಥಣಿ, ಕಾಗವಾಡ, ಐನಾಪುರ, ಮಧಬಾವಿಗಳಲ್ಲಿ ಕಟ್ಟಿಗೆ ಕೊರೆಯುವ ಮಿಷನ್‌ಗಳಿವೆ. ಬುಟ್ಟಿ, ಚಾಪೆ, ಎಣಿಕೆ, ಬಡಿಗತನ, ಕುಂಬಾರಿಕೆ, ಹೊಲಿಗೆ ಇವು ಅಥಣಿ ಪರಿಸರದ ಸುಮಾರು ಹಳ್ಳಿಗರ ಇತರ ಉದ್ಯೋಗಗಳಾಗಿವೆ. ಸಿದ್ಧ ಉಡುಪುಗಳು ಮೇಣದ ಬತ್ತಿ, ಊದಿನಕಡ್ಡಿ, ಬೇಕರಿ, ಪ್ಲಾಸ್ಟಿಕ್ ಉಪಕರಣಗಳನ್ನು ತಯಾರಿಸುತ್ತಾರೆ ಮತ್ತು ಅಥಣಿ ಮಹಿಳಾ ವಿವಿದ್ಧೋದ್ದೇಶ ಸಹಕಾರಿ ಸಂಘಗಳು ಇವೆ. ಇವರು ಹಪ್ಪಳ, ಸಂಡಿಗೆ, ಶೇಂಗಾ ಹೋಳಿಗೆ, ಹೆಣಿಕೆ ತಿಂಡಿ ಪದಾರ್ಥಗಳನ್ನು ತಯಾರಿಸುತ್ತಾರೆ. ಈ ತಾಲೂಕಿನಲ್ಲಿ ಸ್ವಸಹಾಯ ಸಂಘಗಳಿದ್ದು, ಇದರಿಂದ ಮಹಿಳೆಯರು ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ.

ಅಥಣಿ ಪರಿಸರದ ಪ್ರಮುಖ ಬೆಳೆಗಳೆಂದರೆ ಕಬ್ಬು, ಜೋಳ, ಹತ್ತಿ, ಶೇಂಗಾ, ಮೆಣಸಿನ ಕಾಯಿ, ಗೋಧಿ, ಸೊಯಾಬಿನ್, ಗೋವಿನ ಜೋಳ, ದ್ವಿದಳ ಧಾನ್ಯಗಳು, ಹಾಗೂ ಕಾಯಿಪಲ್ಲೆಗಳನ್ನು ಬೆಳೆಯುವರು. ಒಣ ಬೇಸಾಯಗಳಾದ ಜೋಳ, ಸಜ್ಜೆ, ಶೇಂಗ, ಕಡಲೆ, ಹೆಸರು, ಸೂರ್ಯಪಾನ ಮುಂತಾದ ಬೆಳೆಗಳು ಬೆಳೆಯುತ್ತವೆ.

ಅಥಣಿ ಪರಿಸರದಲ್ಲಿ ಜನಜೀವನ

ಜೈನರು, ಬ್ರಾಹ್ಮಣರು, ಮರಾಠರು, ಅಂಬಿಗರು, ತಳವಾರರು, ವಡ್ಡರು, ಕುರುಬರು, ಸಮಗಾರರು, ಹೊಲೆಯ, ಮಾದಿಗ, ಹಾಗೂ ಮುಸ್ಲಿಮರು ಇಲ್ಲಿ ವಾಸಿಸುತ್ತಿದ್ದಾರೆ. ಇಲ್ಲಿ ಬಹು ಸಂಖ್ಯಾತರೆಂದರೆ ವೀರಶೈವರು. ಇವರಲ್ಲಿ ಕೆಲವರು ವ್ಯಾಪಾರ ಮಾಡಿಕೊಂಡಿದ್ದಾರೆ. ಜೈನರ ಸಂಖ್ಯೆಯೂ ಹೆಚ್ಚಾಗಿದ್ದು,

ಹೆಚ್ಚು ಮಂದಿ ದಿಗಂಬರ ಪಂಗಡದವರಿದ್ದಾರೆ. ಇವರು ಬೇಸಾಯವನ್ನು ಮಾಡಿಕೊಂಡು ಬಂದಿದ್ದಾರೆ. ಶಿರುಗುಪ್ಪಿ, ಶೇಡಬಾಳ, ಐನಾಪುರ, ದರೂರು ಮೊದಲಾದ ಊರುಗಳಲ್ಲಿ ಜೈನರನ್ನು ವಿಶೇಷವಾಗಿ ಕಾಣಬಹುದು. ಅಲ್ಲದೆ ಅಂಬಿಗರು, ಟೋಕ್ರಿಕೋಳಿ, ಮಹಾದೇವ ಕೋಳಿ, ತಳವಾರರು, ವಾಲ್ಮೀಕಿಯರು, ಬಾರ್ಕಿ ನಾಯಕರು ಹೀಗೆ ಒಳಪಂಡಗಳು ಇವೆ. ವಡ್ಡರು ಶ್ರಮಜೀವಿಗಳಾಗಿದ್ದಾರೆ. ಇವರು ಬಾವಿತೋಡುವುದು, ರಸ್ತೆನಿರ್ಮಾಣ, ಕಲ್ಲು ಹೊಡೆಯುವುದು, ಮೊದಲಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಇಲ್ಲಿನ ಕುರುಬರಲ್ಲಿ ಕಂಕಣ ಕುರುಬರು, ಉಣ್ಣೆಕಂಕಣ ಕುರುಬರು ಎಂದು ಎರಡು ಒಳಪಂಗಡಗಳಿವೆ. ಕುರಿಸಾಕುವುದು ಹಾಗೂ ಕಂಬಳಿ ನೇಯ್ಗೆ ಇವರ ಮುಖ್ಯ ಕಸಬಾಗಿದೆ.

ಈ ತಾಲೂಕಿನ ಅರಟಾಳ, ಬ್ಯಾಡಗಿ ಮುರಗುಂಡಿಗಳಲ್ಲಿ ಕುರುಬರು ಹೆಚ್ಚಾಗಿದ್ದಾರೆ. ಹಾಗೆಯೇ ಮುಸ್ಲಿಮರ ಸಂಖ್ಯೆ ಕಡಿಮೆ ಇದೆ. ಶೇಡಬಾಳ, ಬ್ಯಾಡರಹಟ್ಟಿ, ರಡ್ಡೇರಹಟ್ಟಿ, ಕಲೂತಿ, ಅವರಖೋಡ, ಐಗಳಿ ಅಡಾಳಟ್ಟಿ, ಕೊಕಟನೂರು, ಕೊಟ್ಟಲಗಿ ಮುಂತಾದ ಊರುಗಳಲ್ಲಿ ಬ್ಯಾಡರ ಸಂಖ್ಯೆ ಹೆಚ್ಚಾಗಿದೆ. ಇಲ್ಲಿನ ಇನ್ನುಳಿದ ಜಾತಿಗಳೆಂದರೆ ಹರಿಣ ಶಿಖಾರಿಗಳು, ಬಹುರೂಪಿಗಳು ಮುಂತಾದವರಿದ್ದಾರೆ. ಅಥಣಿ ಪರಿಸರದ ಜನರ ಬಹುಮುಖ್ಯ ಆಹಾರ ಜೋಳ, ಶ್ರೀಮಂತರು ಮಾತ್ರ ನಿತ್ಯವೂ ಅಕ್ಕಿಯನ್ನು ಉಪಯೋಗಿಸುತ್ತಾರೆ. ಬಡವರು ಅಕ್ಕಿಯ ಬದಲಾಗಿ ಜೋಳದ ಇಲ್ಲವೆ ಗೋವಿನ ಜೋಳದ ನುಚ್ಚನ್ನು ಬಳಸುವರು. ಹೈನುಗಾರಿಕೆಯ ಅನುಕೂಲತೆ ಇದ್ದರೂ ತಾವು ತಿನ್ನದೆ ಬಡತನದಿಂದಾಗಿ ಮಾರಿ ಉಪಜೀವನ ಸಾಗಿಸುವರು. ಹಿಂದುಗಳೆಲ್ಲರೂ ಸಂಕ್ರಮಣ, ಯುಗಾದಿ, ಪಂಚಮಿ, ಮಹಾನವಮಿ, ಶಿವರಾತ್ರಿ, ದೀಪಾವಳಿ, ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ. ಮುಸ್ಲಿಮರು ರಂಜಾನ್, ಮೊಹರಂ, ಬಕ್ರಿದ್ ಹಬ್ಬಗಳನ್ನು ಆಚರಿಸುವರು. ಮುಸ್ಲಿಂರು ಆಚರಿಸುವ ಹಬ್ಬಗಳಲ್ಲಿ ಹಿಂದೂಗಳು ಸಕ್ರಿಯವಾಗಿ ಭಾಗವಹಿಸುತ್ತಾರೆ. ಎಲ್ಲಾ ಜಾತಿಯವರು, ವರ್ಗದವರು ಸೌಹಾರ್ದತೆಯಿಂದ ಕೂಡಿ ಬಾಳುತ್ತಿರುವುದು ಅಥಣಿ ಪರಿಸರದಲ್ಲಿ ವಿಶೇಷವಾಗಿ ಕಂಡುಬರುತ್ತದೆ.

ವೈದ್ಯಕೀಯ ಸೌಲಭ್ಯ

ಆರೋಗ್ಯವೇ ಭಾಗ್ಯ ಎನ್ನುವಂತೆ ಸಾರ್ವಜನಿಕರು ಆರೋಗ್ಯದಿಂದ ಇದ್ದಾಗ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ. ಸ್ವಾತಂತ್ರ್ಯದ ನಂತರ ಸರಕಾರವು ಹಲವಾರು ಆರೋಗ್ಯ ಕಾರ್ಯಕ್ರಮಗಳ ಮೂಲಕ ಸಾರ್ವಜನಿಕರಿಗೆ ಸೇವೆ ಸಲ್ಲಿಸುತ್ತಿದೆ. ಅಥಣಿ ಪರಿಸರದಲ್ಲಿ ಕೂಡ ಒಂದು ಮೇಲ್ದರ್ಜೆ ತಾಲೂಕು ಆಸ್ಪತ್ರೆ ಇದ್ದು, ಹಲವು ಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕ ಆರೋಗ್ಯ ಸೇವೆಯನ್ನು ನೀಡುತ್ತಿವೆ. ಅಥಣಿಯಲ್ಲಿ ೫೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯ ಸುಸಜ್ಜಿತ ಕಟ್ಟಡವಿದ್ದು ಎಲ್ಲಾ ಯಂತ್ರೋಪಕರಗಳೊಂದಿಗೆ ಕೆಲಸ ಮಾಡುತ್ತಿದೆ. ತಾಲೂಕಿನಲ್ಲಿ ೧೫ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ೨ ಪ್ರಾಥಮಿಕ ಆರೋಗ್ಯ ಘಟಕ, ೧ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕೇಂದ್ರವೂ ಇದೆ. ಅಥಣಿಯಲ್ಲಿ ಒಂದು ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಕೋಹಳ್ಳಿಯಲ್ಲಿ ಎ.ಎಂ.ಸಿ. ಕೇಂದ್ರವಿದೆ.

ಒಟ್ಟಾರೆ ತಾಲೂಕಿನಲ್ಲಿ ೧೩೨ ಖಾಸಗಿ ಆಲೋಪತಿ ಆಸ್ಪತ್ರೆಗಳು, ೧೪೫ ಆಸ್ಪತ್ರೆಗಳು ೯೫ ಔಷಧಿ ಅಂಗಡಿಗಳು ಇವೆ.

ಕೋಷ್ಟಕ ೨.೧

ಅಥಣಿ ತಾಲ್ಲೂಕಿನ ಆರೋಗ್ಯ ಕ್ಷೇತ್ರದ ವಿವರ

ಆಲೋಪತಿ ಆಸ್ಪತ್ರೆಗಳು		ಭಾರತೀಯ ವೈದ್ಯ ಪದ್ಧತಿಯು ಆಸ್ಪತ್ರೆ		ಖಾಸಗಿ ಆಸ್ಪತ್ರೆಗಳು		ಪ್ರಾಥಮಿಕ ಆರೋಗ್ಯ ಕೇಂದ್ರಗಳು	
ಸಂಖ್ಯೆ	ಹಾಸಿಗೆಗಳು	ಸಂಖ್ಯೆ	ಹಾಸಿಗೆಗಳು	ಸಂಖ್ಯೆ	ಹಾಸಿಗೆಗಳು	ಸಂಖ್ಯೆ	ಹಾಸಿಗೆಗಳು
೧೮	೧೫೮	೦೧	೦೬	೩೦	೧೫೦	೧೫	೯೦

ಸಮುದಾಯ ಆರೋಗ್ಯ ಕೇಂದ್ರಗಳು		ಚಿಕಿತ್ಸಾಲಯಗಳು		ಕುಟುಂಬ ಕಲ್ಯಾಣ				
ಸಂಖ್ಯೆ	ಹಾಸಿಗೆಗಳು	ಸಂಖ್ಯೆ	ಹಾಸಿಗೆಗಳು	ಕೇಂದ್ರ	ಉಪ ಕೇಂದ್ರಗಳು	ವೆಸೆಕ್ಟಮಿ	ಅಜಿಕ್ಟಮಿ	ಔಷಧಿ ಅಂಗಡಿಗಳು
೧	೫೦	೦	೦	೦	೭೧	೨೨	೪೭೩೯	೧೨೮

ಮೂಲ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಬೆಳಗಾವಿ. ೨೦೦೬-೦೭.

ಸಾರಿಗೆ ಸಂಪರ್ಕ

ಅಥಣಿ ಪರಿಸರದಲ್ಲಿ ಇತಿಹಾಸ ಕಾಲದಿಂದಲೂ ಇದನ್ನಾಳಿದ ಅರಸು ಮನೆತನಗಳಿಗೆ ಇದು ಆಯಕಟ್ಟಿನ ಸ್ಥಳವಾಗಿದ್ದು, ಗೋವ, ಕೊಂಕಣ ಪ್ರದೇಶಗಳಿಗೆ ಹೋಗುವ ದಾರಿಯಲ್ಲಿ ಅಥಣಿಯು ಮಹಾದ್ವಾರವಾಗಿತ್ತು. ಅದಕ್ಕೆ ಸಾಕ್ಷಿಯಾಗಿ ಹೈದ್ರಾಬಾದ್, ಗೋವಾ ಸಂಪರ್ಕಿಸುವ ರಾಜ್ಯ ಹೆದ್ದಾರಿ (ಸಂಕೇಶ್ವರ-ಜೇವರಗಿ) ಅಥಣಿ ಮಾರ್ಗವಾಗಿ ಹಾಯ್ದು ಹೋಗುತ್ತದೆ. ಮಹಾರಾಷ್ಟ್ರದಿಂದ ಗೋವಾ ರಾಜಧಾನಿ ಪಣಜಿಗೆ ಸಂಪರ್ಕಿಸುವ (ಜತ್ತ-ಜಂಬೋಟೆ) ರಾಜ್ಯ ಹೆದ್ದಾರಿ ಅಥಣಿ ಮೂಲಕ ಹಾಯ್ದು ಹೋಗುತ್ತದೆ.

ನವದೆಹಲಿ ಕನ್ಯಾಕುಮಾರಿ ಸಂಪರ್ಕದ ರೈಲು ಮಾರ್ಗವು ಕರ್ನಾಟಕದಲ್ಲಿ ಪ್ರವೇಶಿಸುವುದು (ಪಶ್ಚಿಮ ವಲಯದಲ್ಲಿ) ಅಥಣಿಯಿಂದ ೩೫ ಕಿ.ಮಿ ದೂರದಲ್ಲಿರುವ ಶೇಡಬಾಳ ಮತ್ತು ಉಗಾರ ಖುರ್ದ ಎರಡು ರೈಲ್ವೆ ನಿಲ್ದಾಣಗಳಿದ್ದು, ಹಾಗೂ ೬೦ ಕಿ.ಮಿ. ದೂರದಲ್ಲಿ ಮೀರಜ್ ಜಂಕ್ಷನ್‌ಕೂಡ ರೈಲ್ವೆ ಸಂಪರ್ಕಕ್ಕೆ ಅನುಕೂಲವಾಗಿದೆ. ಅಲ್ಲದೆ ಶೇಡಬಾಳ ಉಗಾರದಿಂದ ಪುಣೆ, ಬೆಂಗಳೂರಿಗೆ ಹೋಗಲು ರೈಲ್ವೆ ಅನುಕೂಲವಿದೆ. ದರೂರ, ಮಾಂಜರಿ, ಸೇತುವೆ ನಿರ್ಮಾಣದಿಂದಾಗಿ ಅಥಣಿಯಿಂದ ಬೆಳಗಾವಿ, ಧಾರವಾಡ, ಹುಬ್ಬಳ್ಳಿಗೆ ಹೋಗಲು ಅನುಕೂಲವಿದೆ. ಸಾಂಬ್ರಾ ವಿಮಾನ ನಿಲ್ದಾಣ ಈ ತಾಲೂಕಿಗೆ ಸಮೀಪದಲ್ಲಿ

ವಾಯುಮಾರ್ಗವಿದೆ. ಅಲ್ಲದೆ ಅಥಣಿಯಿಂದ ಬೆಂಗಳೂರು, ಮೈಸೂರು, ಶಿವಮೊಗ್ಗ, ದಾವಣಗೆರೆ, ಪುಣೆ, ಮೀರಜ್, ಸಾಂಗ್ಲಿ, ಕೊಲ್ಲಾಪುರ, ಸೊಲ್ಲಾಪುರ, ಬಿಜಾಪುರ, ಹೊಸಪೇಟೆ, ಬಳ್ಳಾರಿ, ಗೋವಾ, ಗುಲ್ಬರ್ಗಾ, ಹುಬ್ಬಳ್ಳಿ, ಬಾಗಲಕೋಟೆ, ಜಮಖಂಡಿ ಇತರೆ ಪ್ರಮುಖ ನಗರಗಳಿಗೆ ರಸ್ತೆ, ಹಳ್ಳಿಗಳಿಗೂ ಸುರಕ್ಷಿತವಾದ ರಸ್ತೆ ಸಾರಿಗೆಯನ್ನು ಸರ್ಕಾರವು ಕಲ್ಪಿಸಿಕೊಟ್ಟಿದೆ. ಅಥಣಿಯಲ್ಲಿ ಬ್ರಿಟೀಷರ ಕಾಲದಿಂದಲೂ ಮುಂದುವರಿದುಕೊಂಡು ಬಂದ ಪ್ರಧಾನ ಅಂಚೆ ಕಛೇರಿಯೂ ಇದೆ. ಹಾಗೂ ಪ್ರಸ್ತುತ ಅಥಣಿಯ ಪರಿಸರದಲ್ಲಿ ತಾಲೂಕಿನಾದ್ಯಂತ ೯೧ ಅಂಚೆ ಕಛೇರಿಗಳು ಕಾರ್ಯ ನಿರ್ವಹಿಸುತ್ತವೆ. ೧೪ ಅಂಚೆ ತಂತಿ ಕಛೇರಿಗಳು, ೨೬ ದೂರವಾಣಿ ವಿನಿಮಯ ಕೇಂದ್ರಗಳಿದ್ದು, ವ್ಯವಸ್ಥಿತವಾಗಿ ಕೆಲಸ ನಿರ್ವಹಿಸುತ್ತಿವೆ.

ಕೋಷ್ಟಕ ೨.೨

ಅಥಣಿ ತಾಲ್ಲೂಕು ಸಾರಿಗೆ ಮತ್ತು ಸಂಪರ್ಕಗಳು

ಮೋಟರ ಸೈಕಲ್	ಕಾರುಗಳು	ಬಾಡಿಗೆ ಕಾರುಗಳು	ಆಟೋ ರಿಕ್ಷಾಗಳು	ಮಿನಿ ಬಸ್ಸುಗಳು	ಟ್ರಾಕ್ಟರ್ ಮತ್ತು ಟ್ರೇಲರ್	ಅಂಬುಲೆನ್ಸ್	ಸರಕು ಸಾಗಿಸುವ ವಾಹನಗಳು	ಇತರೆ	ಒಟ್ಟು
೨೦೭೯೭	೮೩೩	೪೩	೩೧	೫೧೨	೪೫೩೦	೫	೭೪೨	೨೪೦	೨೮೧೨

ಮೂಲ: ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಚಿಕ್ಕೋಡಿ. ೨೦೦೭-೦೮

ಬ್ಯಾಂಕುಗಳು

ಗ್ರಾಮೀಣ ಅಭಿವೃದಿಯಲ್ಲಿ ಬ್ಯಾಂಕುಗಳು ತನ್ನದೇ ಆದ ಪಾತ್ರವನ್ನು ವಹಿಸಿಕೊಂಡು ಬಂದಿವೆ. ಅಂತೆಯೇ ಅಥಣಿ ತಾಲೂಕಿನ ಆರ್ಥಿಕ ಕ್ಷೇತ್ರದಲ್ಲಿ ಹಲವಾರು ಬ್ಯಾಂಕುಗಳು ವಿಶೇಷವಾಗಿ ಗುರುತಿಸಿಕೊಂಡಿವೆ. ೨೪ ವಾಣಿಜ್ಯ ಬ್ಯಾಂಕುಗಳು, ೧೩ ಗ್ರಾಮೀಣ ಬ್ಯಾಂಕುಗಳು, ೪ ಅರ್ಬನ್ ಕೋ ಆಫ್ ಸಹಕಾರಿ ಬ್ಯಾಂಕುಗಳು, ೭೪ ನಗರಪ್ರದೇಶದ ಪತ್ತಿನ ಸಹಕಾರಿ ಸಂಘಗಳು ೧ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್, ೬೯ ವ್ಯವಸಾಯ ಸೇವಾ ಸಹಕಾರ ಸಂಸ್ಥೆಗಳು, ೨೨ ಹಾಲು ಉತ್ಪಾದಕರ ಸಹಕಾರಿ ಸಂಘಗಳು, ೨೧೬ ಇತರೆ ಸಹಕಾರಿ ಸಂಘಗಳು ಈ ಪರಿಸರದಲ್ಲಿ ಕೆಲಸ ಸಿರ್ವಹಿಸುತ್ತಿವೆ.

ಕೋಷ್ಟಕ ೨.೩

ಬ್ಯಾಂಕುಗಳು ಮತ್ತು ಸಹಕಾರಿ ಸಂಘಗಳು

ವಾಣಿಜ್ಯ ಬ್ಯಾಂಕುಗಳು	ಗ್ರಾಮೀಣ ಬ್ಯಾಂಕುಗಳು	ಅರ್ಬನ ಕೋ-ಆಫ್ ಸಹಕಾರಿ	ನಗರ ಪ್ರದೇಶ ದ ಪತ್ತಿನ ಸಹಕಾರಿ ಸಂಘ	ಪ್ರಾಥಮಿಕ ಭೂ-ಅಭಿವೃದ್ಧಿ ಬ್ಯಾಂಕ್	ವ್ಯವಸಾಯ ಸೇವಾ ಸಹ ಕಾರಿ ಸಂಸ್ಥೆ	ಹಾಲು ಉತ್ಪಾದ ಕರ ಸಹಕಾರಿ ಸಂಘಗಳು	ಇತರೆ ಸಹಕಾರಿ ಸಂಘ ಗಳು
೨೪	೧೩	೪	೭೪	೧	೬೯	೨೨	೨೧೬

ಆಕರ: ಲೀಡ್ ಮ್ಯಾನೇಜರ್ ಸಿಂಡಿಕೇಟ್ ಬ್ಯಾಂಕ್ ಬೆಳಗಾವಿ. ೨೦೦೬-೦೭.

ವಿದ್ಯುತ್: ತಾಲೂಕಿನ ಅಭಿವೃದ್ಧಿಯಲ್ಲಿ ವಿದ್ಯುತ್ ಪ್ರಮುಖ ಪಾತ್ರವಹಿಸುತ್ತದೆ. ಅಥಣಿ ಪರಿಸರದ ಬಹುತೇಕ ಹಳ್ಳಿಗಳು ವಿದ್ಯುತ್ ಸೌಲಭ್ಯವನ್ನು ಹೊಂದಿವೆ. ಅಂದರೆ ವಿದ್ಯುತ್ ಸಮಸ್ಯೆ ಅಭಿವೃದ್ಧಿಗೆ ದೊಡ್ಡ ಸಮಸ್ಯೆಯಾಗಿದ್ದು, ಅದರ ನಿವಾರಣೆಗಾಗಿ ಅಥಣಿ ಪಟ್ಟಣದಲ್ಲಿ ೧೧೦ ಏಗಿಂ ಸಾಮರ್ಥ್ಯದ ಒಂದು ವಿದ್ಯುತ್ ವಿತರಣಾ ಕೇಂದ್ರವಿದೆ. ಅಲ್ಲದೆ 'ಸತ್ತಿ' ರೋಡ್‌ನಲ್ಲಿ ೨೨೦ ಏಗಿಂ ಸಾಮರ್ಥ್ಯದ ದೊಡ್ಡ ವಿದ್ಯುತ್ ಕೇಂದ್ರದ ಕೆಲಸ ಪ್ರಗತಿಯಲ್ಲಿದೆ. ಗ್ರಾಮೀಣ ಭಾಗದ ಐಗಳಿ, ಸತ್ತಿ, ಬಳ್ಳಿಗೆರೆಯಲ್ಲಿ ೧೧೦ ಏಗಿಂ ಸಾಮರ್ಥ್ಯದ ಹಾಗು ಜಂಬಗಿ, ಸತ್ತಿ, ಬಳ್ಳಿಗೆರೆಯಲ್ಲಿ ೧೧೦ ಏಗಿಂ ಸಾಮರ್ಥ್ಯದ ಹಾಗೂ ಜಂಬಗಿ, ಸತ್ತಿ, ಐಗಳಿ, ನಂದಗಾಂವ, ಶಿರಹಟ್ಟಿಗಳಲ್ಲಿ ೩೩ ಏಗಿಂ ಸಾಮರ್ಥ್ಯದ ವಿದ್ಯುತ್ ವಿತರಣ ಕೇಂದ್ರಗಳಿವೆ. ಮುರಗುಂಡಿ ಮತ್ತು ತೆಲಸಂಗದಲ್ಲಿ ೩೩ ಏಗಿಂ ಸಾಮರ್ಥ್ಯದ ಸ್ಟೇಷನ್‌ಗಳ ಕಾರ್ಯಕ್ಕೆ ಚಾಲನೆ ಸಿಕ್ಕಿದೆ.

ಕೋಷ್ಟಕ ೨.೪

ಅಥಣಿ ತಾಲೂಕಿನ ವಿದ್ಯುತ್ ವಿತರಣಾ ವ್ಯವಸ್ಥೆ (ಯುನಿಟ್‌ಗಳಲ್ಲಿ ಮತ್ತು ಕೋ.ರೂಗಳು)

	ವಿದ್ಯುತ್ ಬಳಕೆದಾರರು				ವಿದ್ಯುತ್‌ಚ್ಛಕ್ತಿ ಬಳಕೆ ಯುನಿಟ್ ಲಕ್ಷಗಳಲ್ಲಿ					ಬಂದ ಆದಾಯ	
ಗೃಹ ಬಳಕೆ	ಕೈಗಾರಿಕೆ ಬಳಕೆ	ವಾಣಿಜ್ಯ ಬಳಕೆ	ನೀರಾವರಿ	ದೀಪಗಳು	ಗೃಹ ಬಳಕೆ	ಕೈಗಾರಿಕೆ ಬಳಕೆ	ವಾಣಿಜ್ಯ ಬಳಕೆ	ನೀರಾವರಿ	ದೀಪಗಳು	ಇತರೆ	ಒಟ್ಟು
೬೯೮೩೯	೧೮೩೨	೫೦೩೯	೩೭೪೦	೧೯	೧೭೬೬೫೦	೩೩.೫೪೦	೨೨೮೦೦	೩೬೯.೧೫೦	೭೨೦೧	೬೪.೧೫	೧೫೫೪೧

ಆಕರ: ಹೆಸ್ಕಾಂ ಅಥಣಿ

ಅಥಣಿ ಪರಿಸರದ ಜನಸಂಖ್ಯೆ

ಮತ್ತು ಈ ಪರಿಸರದಲ್ಲಿ ೫೧ ಗ್ರಾಮಪಂಚಾಯ್ತಿಗಳು, ೨೬ ನಾಡಕಚೇರಿಗಳು, ೨೦ ಗ್ರಂಥಾಲಯಗಳು, ೧ ಪಶು ಆಸ್ಪತ್ರೆ ೧೪ ಪಶು ಚಿಕಿತ್ಸಾಲಯ, ೧೧ ಪ್ರಾಥಮಿಕ ಪಶು ವೈದ್ಯಕೀಯ ಕೇಂದ್ರಗಳು, ೧ ಸಂಚಾರಿ ಚಿಕಿತ್ಸಾಲಯ ಈ ಪರಿಸರದಲ್ಲಿ ೩ ಸಾವಿರಕ್ಕೂ ಹೆಚ್ಚು ಸೈನಿಕರು ದೇಶ ಸೇವೆಯಲ್ಲಿ ತೊಡಗಿರುವುದು ಹೆಮ್ಮೆಯ ವಿಷಯ.

ಕೋಷ್ಟಕ ೨.೫

ಜನಸಂಖ್ಯಾ ವಿವರ

ಕ್ರ.ಸಂ.	ವಿವರ	ಕರ್ನಾಟಕ	ಬೆಳಗಾವಿ	ಅಥಣಿ
೦೧.	ಒಟ್ಟು	೫೨೮೫೦೫೬೨	೪.೨೧೪.೫೦೫	೪೬೧೮೬೨
	ಪುರುಷರು	೨೬೮೯೮೯೧೮	೨.೧೫೦೦೯೦	೨೩೬೮೨೮
	ಮಹಿಳೆಯರು	೨೫೯೫೧೬೪೪	೨೦೬೪೪೧೫	೨೨೪೯೮೪

೦೨.	ಗ್ರಾಮೀಣ ಒಟ್ಟು	೩೪೮೮೯೬೩೩	೩೨೦೮೧೩	೪೨೦೯೧೨
	ಪುರುಷರು	೧೭೬೪೮೯೫೮	೧೬೩೦೭೫೫	೨೧೬೦೬೧
	ಮಹಿಳೆಯರು	೧೭೨೪೦೭೦೫	೧೫೭೧೦೫೮	೨೦೪೮೫೧
೦೩.	ನಗರ ಒಟ್ಟು	೧೭೯೬೧೫೨೯	೧೦೭೨೬೯೧	೪೦.೫೯೦
	ಪುರುಷರು	೯೨೪೯೯೬೦	೫೧೯೩೩೪	೨೦.೮೧೭
	ಮಹಿಳೆಯರು	೮೭೧೧೫೬೯	೪೯೩೩೫೭	೨೦.೧೩೩

Census of India 2001

ಸಾಕ್ಷರತೆ: ಅಕ್ಷರ ಜ್ಞಾನ ಅಭಿವೃದ್ಧಿಗೆ ಪ್ರಮುಖ ಕಾರಣವಾಗಬಲ್ಲದು. ೨೦೦೧ ಜನಗಣತಿಯ ಪ್ರಕಾರ ಅಥಣಿ ತಾಲ್ಲೂಕಿನ ಒಟ್ಟು ೪೬೧೮೬೨ ಜನಸಂಖ್ಯೆಯಲ್ಲಿ ೭೨.೫೪ ಪುರುಷರ ಸಾಕ್ಷರತಾ ಪ್ರಮಾಣವಿದ್ದರೆ ೪೯.೭೪ರಷ್ಟು ಮಹಿಳೆಯರ ಸಾಕ್ಷರತಾ ಪ್ರಮಾಣವಿದೆ. ೨೦೦೪-೦೫ ಸಾಲಿನ ಪ್ರಸ್ತುತ ತಾಲ್ಲೂಕಿನಲ್ಲಿ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮವನ್ನು ವ್ಯಾಪಕವಾಗಿ ಹಮ್ಮಿಕೊಳ್ಳಲಾಗಿದೆ.

ಅಲ್ಲದೆ ಇಲ್ಲಿನ ಒಟ್ಟು ಜನಸಂಖ್ಯೆ ೪೬೧೮೬೨ದಲ್ಲಿ ೭೨.೫೪ ಪುರುಷರು ಸಾಕ್ಷರತೆಯನ್ನು ಪಡೆದಿದ್ದಾರೆ, ೪೯.೭೪ಮಹಿಳೆಯರು ಸಾಕ್ಷರತೆಯನ್ನು ಪಡೆದಿದ್ದಾರೆ. ಅಲ್ಲದೆ ೨೦೦೪-೦೫ನೇ ಸಾಲಿನಿಂದ ಪ್ರಸ್ತುತ ಪರಿಸರದಲ್ಲಿ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮವನ್ನು ವ್ಯಾಪಕವಾಗಿ ಹಮ್ಮಿಕೊಳ್ಳಲಾಗಿದೆ. ನ್ಯೂಡಲ್ ಮುಂದುವರಿದ ಶಿಕ್ಷಣ ಕೇಂದ್ರಗಳು ಅಥಣಿಯಲ್ಲಿ ೦೯. ಕಾಗವಾಡದಲ್ಲಿ ೦೭ ಒಟ್ಟು ೧೬ ಇವೆ. ಮುಂದುವರಿಕೆ ಶಿಕ್ಷಣ ಕೇಂದ್ರಗಳು ಅಥಣಿಯಲ್ಲಿ ೯೧ ಮತ್ತು ಕಾಗವಾಡದಲ್ಲಿ ೭೦. ಹೀಗೆ ಈ ಎರಡೂ ವಿಧಾನ ಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು ಅಥಣಿಯಲ್ಲಿ ೧೦೦, ಕಾಗವಾಡದಲ್ಲಿ ೭೭, ಹೀಗೆ ೧೭೭ ಮುಂದುವರಿಕೆಯ ಶಿಕ್ಷಣ ಕೇಂದ್ರಗಳು ಇವೆ.

ಕೋಷ್ಟಕ ೨.೬

ಮುಂದುವರಿಕೆ ಶಿಕ್ಷಣ ಕೇಂದ್ರಗಳು

ಕ್ರ.ಸಂ.	ವಿಧಾನಸಭಾ ಕ್ಷೇತ್ರ	ನೋಡೆಲ್ ಮುಂದುವರಿದ	ಮುಂದುವರಿಕೆ ಶಿಕ್ಷಣ ಕೇಂದ್ರ	ಒಟ್ಟು
೦೧.	ಅಥಣಿ	೦೯	೯೧	೧೦೦
೦೨.	ಕಾಗವಾಡ	೦೭	೭೦	೭೭
	ಒಟ್ಟು	೧೬	೧೬೧	೧೭೭

ತಾಲೂಕಿನ ಸಾಕ್ಷರತಾ ವಿವರಣೆ

ಕ್ರ.ಸಂ.	ವಿವರ	ಕರ್ನಾಟಕ	ಬೆಳಗಾವಿ		ಅಥಣಿ
೦೧.	ಪ್ರಮುಖ ಕಾರ್ಮಿಕರು	ಒಟ್ಟು	೩೬.೬	೩೬.೫	೩೮.೪
		ಪುರುಷರು	೩೧.೭	೫೨.೦	೫೩.೭
		ಮಹಿಳೆಯರು	೨೧.೧	೨೦.೪	೨೨.೦೨
೦೨.	ಅಂತಿಮ ವರ್ಗದ	ಒಟ್ಟು	೭.೯	೮.೧	೧೩.೦
	ಕಾರ್ಮಿಕರು	ಪುರುಷರು	೫.೦	೩.೯	೫.೫
		ಮಹಿಳೆಯರು	೧೦.೯	೧೨.೪	೨೦.೯
೦೩.	ಇತರೆ ಕೆಲಸಗಾರರು	ಒಟ್ಟು	೫೫.೫	೪೪.೧	೪೦.೮
		ಪುರುಷರು	೪೩.೪	೪೪.೧	೪೦.೮
		ಮಹಿಳೆಯರು	೧೦.೯	೧೨.೪	೨೦.೦೯
೦೪.	ಕೃಷಿಕರು	ಒಟ್ಟು	೫೫.೫	೪೮.೬	೪೪.೧
	೪.೧. ಕೃಷಿಕಾರ್ಮಿಕರು	ಒಟ್ಟು	೨೬.೫	೩೧.೩	೩೫.೩
	೪.೨. ಗೃಹ ಕೈಗಾರಿಕೆಗಳು		೪.೧	೩.೫	೨.೦
	೪.೩. ಇತರೆ		೪೦.೦೨	೨೭.೬	೧೫.೭

ಆಕರ: ಜಿಲ್ಲಾ ಅಂಕಿ ಅಂಶಗಳ ನೋಟ ೨೦೦೧

ಕಾರ್ಮಿಕರ ಪ್ರಮಾಣ

ಕಾರ್ಮಿಕರ ಪ್ರಮಾಣ ಹೆಚ್ಚಿದಷ್ಟು ಉತ್ಪಾದನೆ ಮತ್ತು ಉದ್ಯೋಗದಲ್ಲಿ ಹೆಚ್ಚಳವಾಗಿ, ಅಧಿಕಾರ ಮತ್ತು ಸಾಮಾಜಿಕ ಸ್ಥಾನಮಾನಗಳು ಲಭ್ಯವಾಗಬಲ್ಲವು. ಅಥಣಿ ತಾಲ್ಲೂಕಿನ ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಕಾರ್ಮಿಕ ವರ್ಗದವರ ಪ್ರಮಾಣವನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

ಕೋಷ್ಟಕ ೨.೭

ಅಥಣಿ ತಾಲ್ಲೂಕಿನ ಕಾರ್ಮಿಕರ ವರ್ಗೀಕರಣ

ಕೆಲಸಗಾರರು		ಕೆಲಸಗಾರ	ಕೃಷಿ ಸಾಗುವಳಿದಾರರು			ಕೃಷಿ ಕಾರ್ಮಿಕರು			ಗೃಹಕೃತ್ಯ ಚಟುವಟಿಕೆಗಳು		
ಮುಖ್ಯ	ಅರೆಕಾಲಿಕ	ಲ್ಲದವರು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧೭೭೨೪	೫೯೯೪೬	೨೨೪೬೯೨	೩೯೫೩೯	೧೧೬೫೫	೩೫೮೪೬	೩೫೮೪೬	೪೭೮೧೫	೮೩೬೬೧	೩೦೩೭	೧೬೩೦	೪೬೬೭

ಇತರ ಸೇವೆಗಳು		ಒಟ್ಟು ಕೆಲಸಗಾರರು			
ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೨೯೨೩೩	೭೯೫೪	೩೭೧೮೭	೧೪.೨೩೨	೯೭೯೩೮	೨೩೭೧೭೦

ಮೂಲ: ಜನಗಣತಿ ೨೦೦೧ರ ವರದಿ

ಅಥಣಿ ಪರಿಸರದ ಭೂಮಿಯ ಉಪಯೋಗ

ಅಥಣಿ ಪರಿಸರದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ೩೧೬೧ ಹೆಕ್ಟೇರ್ ಭೂಮಿಯು ಸಾಗುವಳಿಗೆ ಯೋಗ್ಯವಾದ ಭೂಮಿಯಾಗಿದ್ದು, ೨೧೩೪ ಹೆಕ್ಟೇರ್ ಭೂಮಿಯು ಖಾಯಂ ಗೋಮಾಳವಾಗಿದೆ. ಹಾಗೂ ೧೨೯ ಹೆಕ್ಟೇರ್ ಭೂಮಿಯು ಗಿಡಗಳು, ಬನಗಳಿಂದ ಆವೃತವಾಗಿದೆ. ಅಲ್ಲದೆ ೫೮೧ ಹೆಕ್ಟೇರ್ ಭೂಮಿ ಅರಣ್ಯ, ೬೪೬೮ ಹೆಕ್ಟೇರ್ ಭೂಮಿ ವ್ಯವಸಾಯೇತರ, ೪೩೬೪ಹೆಕ್ಟೇರ್ ಭೂಮಿ ಬಂಜರು ಆಗಿದ್ದು ೩೧೦೧೯ ಹೆಕ್ಟೇರ್ ಭೂಮಿ ಬೀಳು ಮತ್ತು ೧೦೭೪ ಹೆಕ್ಟೇರ್ ಭೂಮಿ ಮಾತ್ರ ಬಿತ್ತನೆಗೆ ಯೋಗ್ಯವಾಗಿದೆ. ಅಲ್ಲದೆ ೧ ಹೆಕ್ಟೇರ್‌ಗಿಂತ ಕಡಿಮೆ ಭೂಮಿ ಹೊಂದಿರುವ ಭೂ ಹಿಡುವಳಿಗಾರರು ೧೬೫೮೬ ಜನರು ಇದ್ದು, ಎರಡು ಹೆಕ್ಟೇರ್‌ಗಿಂತ ಕಡಿಮೆ ಭೂಮಿ ಇರುವ ಜನರು ೨೦೦೭ ಜನರು. ೪ ಎಕರೆಗಿಂತ ಕಡಿಮೆ ಭೂಮಿ ಇರುವ ಜನರು ೧೧೩೫೦ ಜನರು ಇದ್ದು, ಇನ್ನು ೧೦ ಹೆಕ್ಟೇರ್‌ಗಿಂತ ಹೆಚ್ಚು ಭೂಮಿ ಇರುವ ದೊಡ್ಡ ಹಿಡುವಳಿದಾರರು ೧೯೦೦ ಜನರು ಇದ್ದಾರೆ. ಒಟ್ಟು ಜನರು ಪ್ರಮುಖವಾಗಿ ಕೃಷಿಯನ್ನೆ ಅವಲಂಬಿಸಿ, ಕೃಷಿ ಕಾರ್ಮಿಕರಾಗಿ ಜೀವನ ಮಾಡುವ ಜನರು ಬಹಳಷ್ಟಿದ್ದಾರೆ.

ಕೋಷ್ಟಕ ೨.೮

ಭೂಮಿಯ ಉಪಯೋಗ

	ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ				ಸಾಗುವಳಿ ಮಾಡದಿರುವ ಇತರೆ ಭೂಮಿ			
ಭೌಗೋಳಿಕ ವಿಸ್ತೀರ್ಣ	ಅರಣ್ಯ	ವ್ಯವಸಾಯೇತರ	ಬಂಜರು	ಒಟ್ಟು	ಸಾಗುವಳಿಗೆ ಯೋಗ್ಯವಾದ	ಕಾಯಂ ಗೋಮಾಳ	ವೃಕ್ಷ ಮತ್ತು ತೋಟಗಳು	ಒಟ್ಟು
೧೯೯೫೧೩	೫೮೧	೬೪೬೮	೪೩೬೪	೧೧೪೧೩	೩೧೬೧	೨೧೩೪	೧೨೯	೫೪೩೪

ಕೋಷ್ಟಕ ೨.೮ ಅ

ಭೂಮಿಯ ಬಳಕೆ

ಬೀಳು ಭೂಮಿ			ಬಿತ್ತನೆಯಾದ ಭೂಮಿ		
ಚಾಲ್ತಿ	ಇತರೆ	ಒಟ್ಟು	ನಿವ್ವಳ	ಒಂದಕ್ಕಿಂತ ಹೆಚ್ಚು	ಒಟ್ಟು
೩೧೦೧೯	೧೦೭೪	೩೨೦೯೩	೧೫೦೫೭೩	೬೫೨೪೦	೨೧೫೮೧೩

ಅಥಣಿ ನಗರ

ಅಥಣಿ ನಗರ ಸಭೆಯು ಕ್ರಿ.ಶ. ೧೮೫೩ರಲ್ಲಿ ಸ್ಥಾಪನೆಯಾಗಿದೆ. ಎರಡು ಶತಮಾನಗಳಷ್ಟು ಹಳೆಯದು. ಆದಾಗ್ಯೂ ಊರಿನಲ್ಲಿನ ಚರಂಡಿವ್ಯವಸ್ಥೆ ಬೀದಿದೀಪ, ಇತ್ಯಾದಿ ವ್ಯವಸ್ಥೆಗಳು ಇತ್ತೀಚಿಗಷ್ಟೇ ಸುವ್ಯವಸ್ಥೆಯಲ್ಲಿ ನಡೆದುಕೊಂಡು ಬರುತ್ತಿವೆ. ಅಂದರೆ ಇತ್ತಿತ್ತಲಾಗಿ ಇವುಗಳ ಬಗ್ಗೆ ಹೆಚ್ಚು ಕಾಳಜಿವಹಿಸಿ ಕೆಲಸ ಮಾಡುತ್ತಿದ್ದಾರೆ. ಅಥಣಿಯು ಹತ್ತಿ, ಎಣ್ಣೆಕಾಳು, ಬಟ್ಟೆ, ಒಣಮೆಣಸಿನಕಾಯಿ, ಕುಸುಬಿ ಮುಂತಾದವು ಗಳಿಗೆ ಪ್ರಸಿದ್ಧವಾಗಿತ್ತು. ಈಗ ಚರ್ಮೋದ್ಯೋಗದಲ್ಲಿ ಹೆಚ್ಚು ಹೆಸರು ಮಾಡುತ್ತಲಿದೆ.

ಶ್ರೀ ಮುರುಘೇಂದ್ರ ಮಹಾಸ್ವಾಮಿಗಳವರು ತಪಸ್ಸು ಮಾಡಿದ ಪುಣ್ಯಕ್ಷೇತ್ರ ಗಚ್ಚಿನಮಠವು ಇಲ್ಲಿದೆ. ಶ್ರೀಗಳವರ ಪುಣ್ಯಜನ್ಮಭೂಮಿ ನದಿ-ಇಂಗಳಗಾವಿ. ಅಥಣಿ ಊರಿನ ಪಶ್ಚಿಮಕ್ಕೆ ಭೀಮದಾಸ ಹೂಗಾರ ಅವರಿಂದ ಸ್ಥಾಪಿಸಿದ ಅಭಿನವ ಮಂತ್ರಾಲಯವೆಂದು ಖ್ಯಾತಿಯನ್ನು ಪಡೆದ ಶ್ರೀ ರಾಘವೇಂದ್ರ ಮಹಾಸ್ವಾಮಿ ಗಳ ಮಠವಿದೆ. ಶ್ರಾವಣ ಮಾಸದ ಪೌರ್ಣಿಮೆಯ ಸಮಯದಲ್ಲಿ ರಾಯರ ಆರಾಧನಾ ಮಹೋತ್ಸವ ನಡೆಯುತ್ತದೆ. ಅಥಣಿಯಲ್ಲಿ ಮೋಟಗಿ ಮಠ, ಶೆಟ್ಟರ ಮಠ, ಗೋಟಖಿಂಡಿ ಮಠ, ಹಾಗೂ ಶ್ರೀ ಸಿದ್ದೇಶ್ವರ ದೇವಾಲಯವು ಇದೆ. ಶ್ರೀ ಶಿವಯೋಗಿಗಳ ಗಚ್ಚಿನ ಮಠವು ಇದೆ. ಅಂತೆಯೇ ಸಿದ್ದೇಶ್ವರ ದೇವಾಲಯವು ಬಹಳ ಪ್ರಾಚೀನವಾಗಿದ್ದು, ಹಿಂದೂ ಮಹಮದಿಯರ ಐಕ್ಯತೆಯ ಸಂಕೇತದಂತಿದೆ. ಪುರಾತನೇಶ್ವರ ಮಂದಿರ, ಶ್ರೀ ಅಮೃತಲಿಂಗೇಶ್ವರ ಮಂದಿರ, ಶ್ರೀ ವೆಂಕಟೇಶ್ವರ ಮಂದಿರ, ಶ್ರೀರಾಮ ಮಂದಿರ, ಗಣಪತಿ ಮಂದಿರ ಪ್ರಸಿದ್ಧವಾಗಿದೆ. ಇನ್ನುಳಿದ ಗುಡಿ, ಜೈನಮಂದಿರ, ಮಸೀದಿಗಳು ಇವೆ. ಹೀಗೆ ಅಥಣಿ ಪರಿಸರವು ಹಲವು ಹತ್ತು ಬಗೆಯ ವಿಶೇಷತೆಗಳಿಂದ ಕೂಡಿದ್ದು ನೋಡುಗರಿಗೆ ಸಂತೋಷವನ್ನುಂಟುಮಾಡುವಂತಹ ಭೌಗೋಳಿಕ ಹಿನ್ನೆಲೆಯನ್ನು ಒಳಗೊಂಡ ಪ್ರದೇಶ ಇದಾಗಿದೆ.

ಹವಾಮಾನ ಮತ್ತು ಮಳೆಯ ಸಾಂದ್ರತೆ

ಅಥಣಿ ತಾಲ್ಲೂಕು ಸ್ವಾಭಾವಿಕವಾಗಿ ಹೆಚ್ಚು ಬಿಸಿಯುಕ್ತ ಹವಾಮಾನ ಹೊಂದಿದ್ದು, ಅತಿ ಕಡಿಮೆ ಮಳೆ ಬೀಳುವ ಪ್ರದೇಶವಾಗಿದೆ. ಚಳಿಗಾಲವು ಡಿಸೆಂಬರಿನಿಂದ ಪೆಬ್ರುವರಿ ತಿಂಗಳವರೆಗೆ ಇದ್ದು, ಬೇಸಿಗೆಕಾಲವು ಫೆಬ್ರುವರಿ ಕೊನೆಯಿಂದ ಜೂನ್ ಪ್ರಾರಂಭದವರೆಗೆ ಇರುತ್ತದೆ. ಬೇಸಿಗೆಯು ೨೮°ಯಿಂದ ಕೂಡಿದ್ದು ಮಾರ್ಚನಿಂದ ಮೇವರೆಗೆ ಉಷ್ಣಾಂಶವು ಏರಿಕೆಯ ಪ್ರಮಾಣದಲ್ಲಿರುತ್ತದೆ. ಏಪ್ರಿಲ್ ಹಾಗೂ ಮೇ ತಿಂಗಳ ಅವಧಿಯು ಬಿಸಿಲಿನಿಂದ ಕೂಡಿದ್ದು ಇಲ್ಲಿನ ಗರಿಷ್ಠ ತಾಪಮಾನ ೩೦°ಇರುತ್ತದೆ. ಇದು ಕೆಲವು ವೇಳೆ ೪೦°ವರೆಗೂ ಇರುತ್ತದೆ. ಜೂನ್ ತಿಂಗಳಿನಿಂದ ನವ್ಹೆಂಬರ್ ತಿಂಗಳವರೆಗೆ ತೇವಾಂಶದಿಂದ ಕೂಡಿರುತ್ತದೆ.

ಅಥಣಿ ತಾಲ್ಲೂಕಿಗೆ ಪೂರ್ವ ನೈಋತ್ಯ ಮಾರುತಗಳು ಮೇ ತಿಂಗಳ ಕೊನೆಯ ಭಾಗದಲ್ಲಿ ಮತ್ತು ಜೂನ್ ತಿಂಗಳ ಆರಂಭದಲ್ಲಿ ಪ್ರಾರಂಭವಾಗುತ್ತವೆ. ನೈರುತ್ಯ ಮಾರುತಗಳಿಂದ ತಾಲ್ಲೂಕಿನ ಎಲ್ಲಾ ಭಾಗಗಳಲ್ಲಿ ಸಮಾನವಾಗಿ ಮಳೆ ಬೀಳುತ್ತದೆ. ತಾಲ್ಲೂಕಿನಲ್ಲಿ ಪ್ರತಿ ವರ್ಷ ಸರಾಸರಿ ೫೮೭ ಮಿಮಿ ನಷ್ಟು

ಮಳೆಯಾಗುತ್ತದೆ. ವರ್ಷದಲ್ಲಿ ಕೇವಲ ೪೦ ದಿನಗಳು ಮಾತ್ರ ಮಳೆ ಬೀಳುತ್ತದೆ. ಮಳೇ ಪ್ರಮಾಣ ಕೋಷ್ಟಕ ೩.೧.ರಲ್ಲಿ ತಿಳಿಸಲಾಗಿದೆ.

ಕೋಷ್ಟಕ ೨.೯

ತಾಲೂಕುವಾರು ಮಳೆಯ ಪ್ರಮಾಣ

ಕ್ರ.ಸಂ.	ಅಥಣಿ ತಾಲೂಕು	೧೯೦೧-೭೦	೨೦೦೫	೨೦೦೬
೦೧.	ಹಂಚಿಕೆ ಮಳೆ	೫೮೧.೬	೫೪೧.೦	೬೯೮.೫
೦೨.	ವಾಸ್ತವಿಕ ಮಳೆ	೫೧೪೦.೧	೫೦೩೦.೦	೫೪೦.೫

ಆಕರ: ಜಿಲ್ಲಾ ಅಂಕಿ ಸಂಖ್ಯಾ ಸಂಗ್ರಹ ಕಛೇರಿ, ಬೆಳಗಾವಿ, ೨೦೦೫-೦೬

ನೈಸರ್ಗಿಕ ಸಂಪತ್ತು

ಯಾವುದೇ ದೇಶದ ಆರ್ಥಿಕ ಸ್ಥಿತಿಯು ಆಯಾ ಪ್ರದೇಶದಲ್ಲಿ ದೊರೆಯುವ ನೈಸರ್ಗಿಕ ಸಂಪನ್ಮೂಲಗಳನ್ನು ಅವಲಂಬಿಸಿರುತ್ತದೆ. ಉದಾ. ನದಿ, ಕಾಡು, ಖನಿಜ, ವ್ಯವಸಾಯ ಉತ್ಪನ್ನ ಮೊದಲಾದ ಮೂಲಗಳು.

ಖನಿಜ ಸಂಪತ್ತು

ಅಥಣಿ ತಾಲ್ಲೂಕಿನಲ್ಲಿ ಶಿಲೆಗಳು, ಮರಳು, ಕಪ್ಪು ಹೆಂಚು ಇಟ್ಟಿಗೆಗೆ ಬೇಕಾದ ಮಣ್ಣು ಇತ್ಯಾದಿಗಳು ಖನಿಜ ಸಂಪನ್ಮೂಲಗಳಾಗಿವೆ. ಅಗ್ರಾಣಿ ಹಿರೇಹಳ್ಳ, ಕೇಸರಾಳ, ಡೋಣಿ, ಕೃಷ್ಣಾನದಿ ತೀರದಲ್ಲಿ ಮರಳು ಹೇರಳವಾಗಿ ಸಿಗುವುದರಿಂದ ಕಟ್ಟಡಗಳ ನಿರ್ಮಾಣಕ್ಕೆ ಬಳಸಲಾಗುತ್ತದೆ. ಇಲ್ಲಿಯ ಫಲವತ್ತಾದ ಮಣ್ಣನ್ನು ಇಟ್ಟಿಗೆ, ಹೆಂಚು, ಮಡಿಕೆ ತಯಾರಿಕೆಯಲ್ಲಿ ಬಳಸುತ್ತಾರೆ.

ಅರಣ್ಯ

ಅಥಣಿ ತಾಲ್ಲೂಕು ಕಡಿಮೆ ಪ್ರಮಾಣದ ಅರಣ್ಯ ಪ್ರದೇಶವನ್ನು ಹೊದಿದೆ. ತಾಲ್ಲೂಕಿನ ವಿಸ್ತೀರ್ಣದಲ್ಲಿ ಕೇವಲ ಶೇಕಡ ೦.೨೯ರಷ್ಟು ಅರಣ್ಯವಿದೆ. ಅಂದರೆ ಸುಮಾರು ೫೮೧ ಹೆಕ್ಟೇರ್ ಭೂಮಿ ಅರಣ್ಯವಿದೆ. ೧೦೮೩.೨ಹೆಕ್ಟೇರ್ ಸಾಗುವಳಿ ಇಲ್ಲದ ಭೂಮಿಯನ್ನು ಅರಣ್ಯೀಕರಣಗೊಳಿಸಬೇಕಾಗಿದೆ. ತಾಲೂಕಿನಲ್ಲಿ ಯಾವುದೇ ರಕ್ಷಿತ ಕಾಯ್ದಿಟ್ಟ ಅರಣ್ಯಗಳಲ್ಲಿ ಕೃಷ್ಣಾ ತೀರದಲ್ಲಿ ಮುಖ್ಯವಾಗಿ ಮಾಶ್ವಾಲ್, ತಗ್ಗಿ, ಕಾಕೈ, ದಿಲಡಾಲ್ ಬೇವು, ತೆಂಬುರ್ನಿ ಕೈರ್, ಬಲ್ಲಾದ, ಸಾಗವಾಣಿ, ಶ್ರೀಗಂಧ, ಬಂದಾತಿ, ತಾರವಾಡ, ಕೌಲಿ ಮುಂತಾದ ಸಸ್ಯವರ್ಗವಿದೆ. ಹಾಗೆ ಮೈದಾನ ಪ್ರದೇಶದಲ್ಲಿ ಜಾಲಿ, ಹುಲಗರ, ನೇರಳೆ, ಬೇವು, ಶ್ರೀಗಂಧ, ಹುಣಸೆ, ಬೋರಡ, ಆಲ, ಬಿದಿರು ಮುಂತಾದವುಗಳನ್ನು ಕಾಣಬಹುದು.

ನದಿ ಮತ್ತು ತೊರೆಗಳು

ಅಥಣಿ ತಾಲ್ಲೂಕು ಕೃಷ್ಣಾ ಜಲಾಯನದ ಅಡಿಯಲ್ಲಿ ಬರುತ್ತದೆ. ರಾಜ್ಯದ ಪ್ರಮುಖ ನದಿಗಳಲ್ಲೊಂದಾದ ಕೃಷ್ಣಾನದಿಯು ತಾಲ್ಲೂಕಿನ ಜೀವನಾಡಿಯಾಗಿದೆ. ಮಹಾರಾಷ್ಟ್ರದ ಸತಾರ ಜಿಲ್ಲೆಯ ಮಹಾಬಲೇಶ್ವರ ಎಂಬ ಸಹ್ಯಾದ್ರಿ ಶ್ರೇಣಿಯಲ್ಲಿ ಉಗಮ ಹೊಂದಿ ಪ್ರಥಮವಾಗಿ ಕರ್ನಾಟಕದ ಅಥಣಿಯ ತಾಲ್ಲೂಕಿನ ಮಂಗಾವತಿ ಬಳಿ ಪ್ರವೇಶಿಸುತ್ತದೆ. ತಾಲ್ಲೂಕಿನಲ್ಲಿ ಸುಮಾರು ೯೬ಕಿ.ಮೀ. ಉದ್ದ ೩೩ ಹಳ್ಳಿಗಳ ನೀರಾವರಿಗೆ ಅನುಕೂಲವಾಗಿದೆ. ಕೃಷ್ಣಾನದಿಯ ಪ್ರಮುಖವಾದ ಹಿಪ್ಪರಗಿ ಅಣೆಕಟ್ಟು ಯೋಜನೆ ಪೂರ್ಣಗೊಂಡಿದ್ದು ತಾಲ್ಲೂಕಿನ ೧೦೦೨೫ಎಕರೆ ಭೂಮಿಗೆ ನೀರಾವರಿ ಸೌಲಭ್ಯ ದೊರೆಯಲಿದೆ. ಇದರ ಅಡಿಯಲ್ಲಿ ಕೃಷ್ಣಾನದಿಗೆ ಕಟ್ಟಲಾಗಿರುವ ಮಹಿಷವಾಡಗಿ ಬ್ಯಾರೇಜ್ ಹಾಗೂ ಉಗಾರ್ ಬ್ಯಾರೇಜ್‌ಗಳಿಂದ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಅಲ್ಲದೆ ಘಟಪ್ರಭಾ ಎಡದಂಡೆ ಕಾಲುವೆ ಮುಖಾಂತರ ತಾಲೂಕಿನ ೧೭೮೪ ಹೆಕ್ಟೇರ್ ಪ್ರದೇಶ ನೀರಾವರಿ ಕಲ್ಪಿಸಲಾಗಿದೆ. ಅಷ್ಟೇ ಅಲ್ಲದೆ ದೋಣಿ, ಆಗ್ರಾಣಿ, ಹಿರೇಹಳ್ಳ, ಕೆಸರಳ್ಳ, ಊರಹಳ್ಳ, ಮುಂತಾದ ೧೨ ಹಳ್ಳಗಳಿಂದ ಹಾಗೂ ಸುಮಾರು ೧೪ ನೀರಾವರಿ ಕೆರೆಗಳಿಂದ ನೀರಾವರಿ ಸೌಲಭ್ಯ ಕಲ್ಪಿಸಲಾಗಿದ್ದು ತೆರೆದ ಬಾವಿಗಳಿಂದ ೧೮೧೯ ಹೆಕ್ಟೇರ್, ಕೊಳವೆ ಬಾವಿಗಳಿಂದ ೬೨೮೧ಹೆಕ್ಟೇರ್, ಏತ ನೀರಾವರಿಯಿಂದ ೪೩೫೯, ಹಳ್ಳಕೊಳ್ಳ ಹಾಗೂ ಇತರ ಮೂಲಗಳಿಂದ ೧೭೫೮೧ ಹೆಕ್ಟೇರ್ ಸೇರಿದಂತೆ ಒಟ್ಟು ೮೬೭೬೪ ಹೆಕ್ಟೇರ್ ಭೂಮಿಯನ್ನು ನೀರಾವರಿಗೆ ಒಳಪಡಿಸಲಾಗಿದೆ. ಅಲ್ಲದೆ ಕೃಷ್ಣಾನದಿಯ ಯೋಜನೆಗಳಾದ ಕರಿಮಸೂತಿ ಹಾಗೂ ಖಿಳೇಗಾಂವ ಬಸವೇಶ್ವರ ಏತ ನೀರಾವರಿ ಯೋಜನೆಗಳು ಪ್ರಗತಿಯಲ್ಲಿದ್ದು, ಅವು ಪೂರ್ಣಗೊಂಡರೆ ತಾಲ್ಲೂಕಿನ ಉತ್ತರ ಭಾಗ ಪ್ರಗತಿ ಹಾಗೂ ಸಮಗ್ರ ನೀರಾವರಿ ಸಾಧ್ಯವಾಗುತ್ತದೆ. ವಾರ್ಷಿಕ ಸರಾಸರಿ ೫೮೧.೬ ಮೀಟರ್ ಎಳೆ ಪ್ರಮಾಣವಿದ್ದು ಭೂಮಿಗಳ ಅಂತರ್ಜಲ ಸರಾಸರಿ ೯.೩೬ ಹಳ್ಳ ಮತ್ತು ಕಾಲುವೆ ಬಾವಿಗಳ ಅಂತರ್ಜಲ ಲಭ್ಯತೆ ಸರಾಸರಿ ೧೩.೮ ಮೀ. ಆಳವಾಗಿದೆ.

ಮತ್ಸ್ಯ ಸಂಪನ್ಮೂಲ

ತಾಲ್ಲೂಕಿನಲ್ಲಿ ಕೃಷ್ಣಾನದಿ ವಿಶಾಲವಾಗಿ ಹರಿಯುತ್ತಿದ್ದು, ನದಿ ಮೀನುಗಾರಿಕೆಗೆ ಅನುಕೂಲವಾಗಿದೆ. ಅಲ್ಲದೆ ತಾಲ್ಲೂಕಿನಲ್ಲಿ ೧೪ ಕೆರೆಗಳಲ್ಲಿಯೂ ಕೂಡ ಮೀನುಗಾರಿಕೆ ಕೈಗೊಳ್ಳಬಹುದು. ಮುಖ್ಯವಾಗಿ ಕೊಹಳ್ಳಿ ಕೆರೆ, ಐಗಳಿ ಕೆರೆ, ಗೆಜ್ಜನ ಕೋಡಿ ಕೆರೆಯಲ್ಲಿ ಮೀನುಗಾರಿಕಾ ಪ್ರದೇಶವಾಗಿವೆ.

ಕೋಷ್ಟಕ ೨.೧೦

ಅಥಣಿ ತಾಲ್ಲೂಕಿನ ನೀರಾವರಿಯ ನಿವ್ವಳ ಪ್ರದೇಶ

ಕಾಲುವೆಗಳಿಂದ	ಕೆರೆಗಳಿಂದ	ಬಾವಿಗಳಿಂದ	ಕೊಳವೆಗಳಿಂದ	ಏತ ನೀರಾವರಿ	ಇತರೆ	ಒಟ್ಟು
೨೭೯೬	೦	೧೮೪೮೧	೭೦೪೩	೩೩೬೫೨	೧೦೯೨೬	೭೨೮೯೮

ಸಂಗ್ರಹ: ಜಿಲ್ಲಾ ಅಂಕಿ ಸಂಖ್ಯಾ ಸಂಗ್ರಹ ಕಛೇರಿ, ಬೆಳಗಾವಿ, ೨೦೦೫-೦೬

ಪಶುಪಾಲನೆ

ಗ್ರಾಮೀಣ ಮಟ್ಟದಲ್ಲಿ ಆರ್ಥಿಕ ಸ್ವಾವಲಂಬನೆ ಪಶುಪಾಲನೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಗ್ರಾಮೀಣ ಮಟ್ಟದ ರೈತರು ಹೆಚ್ಚು ಪ್ರಮಾಣದಲ್ಲಿ ಹಸು ಮತ್ತು ಎಮ್ಮೆಗಳನ್ನು ಸಾಕುತ್ತಿದ್ದು, ಇವುಗಳಿಂದ ದೊರೆಯುವ ಹಾಲಿನಿಂದ ಮತ್ತು ಸಗಣಿಯಿಂದ ಆದಾಯ ಗಳಿಸುತ್ತಾರೆ. ಇದರಿಂದ ರೈತರಿಗೆ ಸ್ವಲ್ಪ ಮಟ್ಟಿನ ಆರ್ಥಿಕ ಸಹಾಯ ದೊರೆಯುವಂತಾಗಿದೆ. ಇದರಂತೆ ಉಣ್ಣೆ, ಚರ್ಮ ಮತ್ತು ಮಾಂಸಕ್ಕಾಗಿ ಕುರಿ, ಆಡು ಮತ್ತು ಕೋಳಿ ಸಾಗಾಣಿಕೆ ಮಾಡುತ್ತಾರೆ. ಇಲ್ಲಿ ಉತ್ಪಾದಿಸುವ ಬಹುಪಾಲು ಹಾಲು ದಿನಿತ್ಯ ಮಹಾರಾಷ್ಟ್ರದ ಮಾರುಕಟ್ಟೆಗೆ ಹೋಗುತ್ತಿದೆ. ವಿಜಾಪುರದ ಮೂಲದ ಶ್ರೀ ಸಿದ್ದೇಶ್ವರ ಹಾಲು ಉತ್ಪಾದಕರ ಸಹಕಾರಿ ಸಂಘ ತಾಲ್ಲೂಕಿನಲ್ಲಿ ವ್ಯಾಪಕವಾಗಿ ಹೈನುಗಾರಿಕೆಗೆ ಪ್ರೋತ್ಸಾಹ ನೀಡುತ್ತಿದೆ.

ಕೋಷ್ಟಕ ೨.೧೧

ಪಶು ಸಂಗೋಪನೆ

ಸ್ಥಳೀಯ ಮತ್ತು ವಿದೇಶಿ ತಳಿ ಜಾನುವಾರುಗಳು

ಜಾನುವಾರಗಳು				ಎಮ್ಮೆಗಳು				
ಸ್ಥಳೀಯ	ವಿದೇಶಿ	ಮಿಶ್ರತಳಿ	ಒಟ್ಟು	ಎಮ್ಮೆಗಳು	ಸ್ಥಳೀಯ	ವಿದೇಶಿ	ಮಿಶ್ರತಳಿ	ಒಟ್ಟು
೫೯೮೨೨	೦	೨೦೯೩	೬೧೯೧೫	೯೬೨೨೧	೩೨೪೦೧	೦	೦	೩೨೪೦೧

ರೇಷ್ಮೆ ಸಾಗಾಣಿಕೆ

ಅಥಣಿ ತಾಲ್ಲೂಕಿನ ಒಟ್ಟು ಭೌಗೋಳಿಕ ಕ್ಷೇತ್ರ ೧,೯೯,೫೧೩ ಇದ್ದು, ಇದರಲ್ಲಿ ಪೂರ್ವ ಭಾಗದ ಐಗಳಿ, ತೆಲಸಂಗ ಮುಂತಾದ ಕಡೆಗಳಲ್ಲಿ ರೇಷ್ಮೆ ವ್ಯವಸಾಯದಲ್ಲಿ ಒಟ್ಟು ೨೮೨ ರೈತರು ತೊಡಗಿಕೊಂಡಿದ್ದಾರೆ. ತಾಲ್ಲೂಕಿನಲ್ಲಿ ರೂ.೯೪.೧೬೬ಲಕ್ಷ ಮೌಲ್ಯದ ರೇಷ್ಮೆ ಉತ್ಪಾದನೆ ಕೈಗೊಂಡಿದ್ದಾರೆ. ಅದರ ವಿವರಣೆಯನ್ನು ಕೋಷ್ಟಕ ೪.ರಲ್ಲಿ ವಿವರಿಸಲಾಗಿದೆ.

ಕೋಷ್ಟಕ ೨.೧೨

ಅಥಣಿ ತಾಲ್ಲೂಕಿನ ರೇಷ್ಮೆ ಉತ್ಪಾದನೆಯ ಬೆಳವಣಿಗೆ

ಹಿಪ್ಪುನೇರಳೆ ಬೆಳೆ ವಿಸ್ತೀರ್ಣ	ರೇಷ್ಮೆಗೂಡು ಉತ್ಪಾದನೆ ಟನ್ನುಗಳಲ್ಲಿ	ಕಸಬು ಕೈಗೊಂಡ ರೈತರ ಸಂಖ್ಯೆ	ಉತ್ಪಾದಿಸಿದ ರೇಷ್ಮೆಯ ಮೌಲ್ಯ ಲಕ್ಷ ರೂಗಳಲ್ಲಿ
೧೨೯.೮೦	೬೨.೭೭೭	೨೮೨	೯೪.೧೬೬

ಆಕರ: ಉಪ ನಿರ್ದೇಶಕರು ರೇಷ್ಮೆ ಇಲಾಖೆ ಬೆಳಗಾವಿ. ೨೦೦೬-೦೭.

ಅಂಚೆ ಮತ್ತು ತಂತಿ ಕಛೇರಿ

ಅಥಣಿಯಲ್ಲಿ ಬ್ರಿಟಿಷರ ಕಾಲದಿಂದಲೂ ಪ್ರಧಾನ ಅಂಚೆ ಕಛೇರಿ ಇದೆ. ಪ್ರಸ್ತುತ ತಾಲ್ಲೂಕಿನಾದ್ಯಂತ

ಒಟ್ಟು ೮೮ ಅಂಚೆ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ. ೨೬ ದೂರವಾಣಿ ವಿನಿಮಯ ಕೇಂದ್ರಗಳನ್ನು ಒಳಗೊಂಡಿದೆ. ಇವುಗಳ ವಿವರಣೆಯನ್ನು ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

ಕೋಷ್ಟಕ ೨.೧೩

ಅಂಚೆ ಮತ್ತು ತಂತಿ ಕಛೇರಿ

ಅಂಚೆ ಕಛೇರಿಗಳು	ತಂತಿ ಕಛೇರಿಗಳು	ದೂರವಾಣಿ ಕೇಂದ್ರಗಳು	ದೂರವಾಣಿಗಳು
೮೮	೦೧	೨೬	೧೩೯೨೬

ಆಕರ: ಜಿಲ್ಲಾ ಅಂಕಿ ಅಂಶಗಳ ಸಂಗ್ರಹಣಾ ಕಛೇರಿ, ಬೆಳಗಾವಿ ೨೦೦೬-೦೭.

ಕೈಗಾರಿಕೆ

ಕೃಷ್ಣಾ ನದಿ ತೀರದಲ್ಲಿ ನೀರಾವರಿ ಪ್ರದೇಶಗಳನ್ನು ಹೆಚ್ಚಾಗಿ ಹೊಂದಿರುವ ಅಥಣಿ ತಾಲ್ಲೂಕು ಕಬ್ಬಿನ ಬೆಳೆಗೆ ಪ್ರಸಿದ್ಧಿ ಪಡೆದಿದೆ. ಮುಖ್ಯವಾಗಿ ತಾಲ್ಲೂಕಿನಲ್ಲಿ ಒಂದು ಸಹಕಾರಿ ಮತ್ತು ೩ ಖಾಸಗಿ ಸೇರಿದಂತೆ ಒಟ್ಟು ೪ ಬೃಹತ್ ಸಕ್ಕರೆ ಉದ್ಯಮಗಳು ಸ್ಥಾಪಿತಗೊಂಡಿವೆ. ಸಕ್ಕರೆ ಉದ್ಯಮದೊಂದಿಗೆ ವಿದ್ಯುತ್, ಡಿಸ್ಟಲರಿ ಇತ್ಯಾದಿ ಉಪ ಉತ್ಪನ್ನಗಳನ್ನು ಉತ್ಪಾದನೆ ಮಾಡುವುದರ ಮೂಲಕ ಈ ಭಾಗದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸುತ್ತಿವೆ. ಹಾಗೆಯೇ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಕೊಲ್ಹಾಪೂರಿ ಚಪ್ಪಲಿಗಳು ಅಥಣಿ ತಾಲೂಕಿನ ಚರ್ಮೋದ್ಯೋಗಕ್ಕೆ ಉತ್ತಮ ಹೆಸರು ತಂದು ಕೊಟ್ಟಿದೆ. ಮದಭಾವಿ, ಕಾಗವಾಡ, ಸತ್ತಿ, ಅಥಣಿ, ಅನಂತಪುರ ಮುಂತಾದ ಕಡೆಗಳಲ್ಲಿ ಚರ್ಮದ ಉದ್ಯಮಗಳು ಸಾಕಷ್ಟು ಪ್ರಸಿದ್ಧಿ ಪಡೆದಿವೆ. ಅವುಗಳ ಜೊತೆಗೆ ಇನ್ನಿತರ ಸಣ್ಣ ಪ್ರಮಾಣದ ಕೈಗಾರಿಕೆಗಳಾದ ಇಂಜಿನಿಯರಿಂಗ್ ಉದ್ದಿಮೆಗಳು ಮತ್ತು ಹಲವಾರು ಸೇವಾ ಕೇಂದ್ರಗಳು, ಆಟೋಮೊಬಾಯಿಲ್ ಉದ್ದಿಮೆಗಳು, ಕಟ್ಟಿಗೆ ಕೊರೆಯುವ ಕೆಲಸದ ಯಂತ್ರಗಳು, ಮಡಕೆ ತಯಾರಿಕೆ, ಇಟ್ಟಿಗೆ ಬಟ್ಟಿ, ಎಣ್ಣೆ ತಯಾರಿಕೆ, ಚುನಮುರಿ ತಯಾರಿಕೆ ಭಟ್ಟಿ ಇತ್ಯಾದಿಗಳು ಜನರಿಗೆ ಉದ್ಯೋಗ ನೀಡುವುದರೊಂದಿಗೆ ಕೈಗಾರಿಕಾ ಕ್ಷೇತ್ರದಲ್ಲಿ ಮಹತ್ವವೆನಿಸಿವೆ. ಅವುಗಳ ವಿವರಣೆ ಈ ಕೆಳಗಿನಂತಿದೆ.

ಕೋಷ್ಟಕ ೨.೧೪

ಅಥಣಿ ಪರಿಸರದ ಕೈಗಾರಿಕಾ ಪಕ್ಷಿ ನೋಟ

ಬಟ್ಟೆ	ರಾಸಾಯನಿಕ	ಇಂಜಿನೀಯರಿಂಗ್	ಇತರೆ	ಒಟ್ಟು	ಉದ್ಯೋಗಿಗಳು
೧	೦	೦	೭	೮	೪೮೨೫

ಕೋಷ್ಟಕ ೨.೧೪. ಎ

ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ನೊಂದಾಯಿಸಲ್ಪಟ್ಟ ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಖ್ಯೆ

ಆಟೋಮೊಬಾಯಿಲ್ಸ್		ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್		ರಾಸಾಯನಿಕ		ಫೆರಸ್, ನಾನ್ ಫೆರಸ್		ಆಹಾರ ಮತ್ತು ಮಾದಕ	
ಸಂಖ್ಯೆ	ಕಾರ್ಮಿಕರು	ಸಂಖ್ಯೆ	ಕಾರ್ಮಿಕರು	ಸಂಖ್ಯೆ	ಕಾರ್ಮಿಕರು	ಸಂಖ್ಯೆ	ಕಾರ್ಮಿಕರು	ಸಂಖ್ಯೆ	ಕಾರ್ಮಿಕರು
೬	೪೫	೩೨	೯೫	೫	೪೨	೦	೦	೧೭೬	೧೬೩೫
ಗ್ಲಾಸ್ ಮತ್ತು ಸೆರಾಮಿಕ್ಸ್		ಇಂಜಿನಿಯರಿಂಗ ವರ್ಕ್ಸ್ ಮತ್ತು ರಿಪೇರಿ		ಚರ್ಮ		ಮೆಕಾನಿಕಲ್ ಇಂಜಿನಿಯರ್		ಕಾಗದ ಮತ್ತು ಮುದ್ರಣ	
ಸಂಖ್ಯೆ	ಕಾರ್ಮಿಕರು	ಸಂಖ್ಯೆ	ಕಾರ್ಮಿಕರು	ಸಂಖ್ಯೆ	ಕಾರ್ಮಿಕರು	ಸಂಖ್ಯೆ	ಕಾರ್ಮಿಕರು	ಸಂಖ್ಯೆ	ಕಾರ್ಮಿಕರು
೧೩೦	೬೩೫	೮೫	೯೫೦	೫೨೫	೧೪೧೦	೪೦	೨೭೦	೨೮	೨೨೦

ಮೂಲ: ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ ಬೆಳಗಾವಿ. ೨೦೦೭-೦೮

ಕೋಷ್ಟಕ ೨.೧೪ ಬಿ

ಸಕ್ಕರೆ ಕೈಗಾರಿಕೆಗಳ ವಿವರ

ಕ್ರ.ಸಂ.	ಕೈಗಾರಿಕೆಗಳ ಹೆಸರು	ಸಕ್ಕರೆ ಉತ್ಪಾದನೆ	ಸಹ ಉತ್ಪಾದನೆಗಳು ಸಾಮಾರ್ಥ್ಯ			ಒಟ್ಟು ಕಾರ್ಮಿಕರ ಸಂಖ್ಯೆ
		ಟಿ.ಸಿ.ಡಿ.	ವಿದ್ಯುತ್	ಡಿಸ್ಟಲರಿ	ಇತರೆ	
೦೧.	ದಿ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ.ಸಂಕೋನಟ್ಟಿ	೨೫೦೦	ಉತ್ಪಾದಿಸಲ್ಪಡುವುದು	……	…….	೭೦೦
೦೨.	ದಿ ಉಗಾರ ಶುಗರ್ ವರ್ಕ್ಸ್ ಲಿ.ಉಗಾರ ಖುರ್ದ	೧೦,೦೦೦	ಉತ್ಪಾದಿಸಲ್ಪಡುವುದು	ಉತ್ಪಾದಿಸುವುದು	…….	೨೦೦೦
೦೩.	ರೈತರ ಸಕ್ಕರೆ ಕಾರ್ಖಾನೆ ನಿ.ಕೆಂಪವಾಡ	೨೫೦೦	……	…….	……	೪೦೦
೦೪.	ದಿ.ರೇಣುಕಾ ಶುಗರ್ ವರ್ಕ್ಸ್ ನಿ.ಕೊಕಟನೂರ	೧೦೦೦೦	ಉತ್ಪಾದಿಸಲ್ಪಡುವುದು	ಉತ್ಪಾದಿಸುವುದು	ಶುಗರ್ ರಿಫೈನರಿ	೧೫೦೦

ಮೂಲ: ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ ಬೆಳಗಾವಿ. ೨೦೦೭-೦೮

ಪಂಚಾಯತ್ ಕಾರ್ಯ ನಿರ್ವಹಣೆ

ಅಥಣಿ ತಾಲೂಕಿನಲ್ಲಿ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆ ಅಸ್ತಿತ್ವದಲ್ಲಿದೆ. ಕೆಳ

ಹಂತದಲ್ಲಿ ಗ್ರಾಮಪಂಚಾಯತಿ, ಮಧ್ಯಮ ಹಂತದಲ್ಲಿ ತಾಲ್ಲೂಕಾ ಪಂಚಾಯತಿಗಳು ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿಗಳು ಕಾರ್ಯನಿರ್ವಹಿಸುತ್ತಿವೆ. ಪಟ್ಟಣ ಪಂಚಾಯತಿಗಳಲ್ಲಿ ಪುರಸಭೆ, ಪಟ್ಟಣ ಪಂಚಯಾತಿಗಳು ಬರುತ್ತವೆ. ತಾಲೂಕಿನಲ್ಲಿ ಒಟ್ಟು ೫೧ ಗ್ರಾಮ ಪಂಚಾಯತಿ ಕ್ಷೇತ್ರಗಳು, ೪೦ ತಾಲ್ಲೂಕ್ ಪಂಚಾಯತ್ ಕ್ಷೇತ್ರಗಳು, ೧೧ ಜಿಲ್ಲಾ ಪಂಚಾಯತ್ ಕ್ಷೇತ್ರಗಳು ಅಸ್ಥಿತ್ವದಲ್ಲಿವೆ.

ಸ್ವ ಸಹಾಯ ಸಂಘಗಳು

ಸ್ವ-ಸಹಾಯ ಸಂಘಗಳು ಅಭಿವೃದ್ಧಿಯ ಸಂಕೇತಗಳು. ಸ್ವ-ಸಹಾಯ ಸಂಘಗಳ ಮೂಲಕ ಬಡತನ, ನಿರುದ್ಯೋಗ, ಮೊದಲಾದ ಸಮಸ್ಯೆಗಳನ್ನು ಸುಲಭವಾಗಿ ನಿವಾರಿಸಬಹುದು. ಇದರಿಂದ ರಾಷ್ಟ್ರದ ಯೋಜನಾ ವೆಚ್ಚವು ಕಡಿಮೆಯಾಗುವುದು. ಬೆಳಗಾವಿ ಜಿಲ್ಲೆಯಲ್ಲಿ ೧೬,೫೮೫ ಸ್ವ-ಸಹಾಯ ಸಂಘಗಳಿವೆ. ಈ ಸ್ವ-ಸಹಾಯ ಸಂಘಗಳಿಂದ ೧೪ ಕೋಟಿ ೩೦ಲಕ್ಷ ಹಣ ಉಳಿತಾಯವಾಗಿದೆ. ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕಿನಿಂದ ೭೯೨ ಸ್ವ-ಸಹಾಯ ಸಂಘಗಳಿಗೆ ೧೦ ಕೋಟಿ ೯೮ಲಕ್ಷರೂ ಸಾಲ ನೀಡಲಾಗಿದೆ.

ಅಥಣಿ ತಾಲೂಕಿನಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ವತಿಯಿಂದ ಗ್ರಾಮೀಣ ಪ್ರದೇಶದಲ್ಲಿ ೧೪೪೮, ನಗರ ಪ್ರದೇಶದಲ್ಲಿ ೫೧ ಸಂಘಗಳು ರಚಿತವಾಗಿವೆ. ಒಟ್ಟು ೨೩,೪೦೫ ಸದಸ್ಯರನ್ನು ಈ ಸಂಘಗಳು ಒಳಗೊಂಡಿವೆ. ಒಟ್ಟು ಸದಸ್ಯರಲ್ಲಿ ೩೬೫೩ ಸದಸ್ಯರು ಪರಿಶಿಷ್ಟ ಜಾತಿಯವರಾಗಿದ್ದಾರೆ. ೧೭೧೦ ಪರಿಶಿಷ್ಟ ಪಂಗಡದವರಾಗಿದ್ದಾರೆ. ಓ.ಬಿ.ಸಿ. ವರ್ಗದವರು ೩೯೧೩ ಇದ್ದರೆ, ಇತರೆ ೧೪೭೯ರಪ್ಪಿದ್ದಾರೆ. ಒಟ್ಟು ೩ ಲಕ್ಷ ೫೨ಸಾವಿರ ರೂಗಳನ್ನು ಉಳಿತಾಯ ಮಾಡಿವೆ. ೪ ರಿಂದ ೫ ಲಕ್ಷ ಸಾಲವನ್ನು ಪಡೆದುಕೊಂಡಿವೆ. ವಿಮೋಚನ ಸ್ವಯಂ ಸೇವಾ ಸಂಸ್ಥೆಯಿಂದ ೫೦, ಸ್ವಯಂ ಸೇವಾ ಸಂಸ್ಥೆಯಿಂದ ೧೭೦, ವಿಶ್ವೇಶ್ವರಯ್ಯ ಸ್ವಯಂಸೇವಾ ಸಂಸ್ಥೆಯಿಂದ ೬೭, ಕರ್ಡ ಸ್ವಯಂ ಸೇವಾ ಸಂಸ್ಥೆಯಿಂದ ೪೦ ಸ್ವ-ಸಹಾಯ ಸಂಘಗಳು ರಚನೆಯಾಗಿವೆ. ಡಿ.ಸಿ.ಸಿ. ಬ್ಯಾಂಕ್ ೨೧ ಸಂಘಗಳನ್ನು, ಮಲಪ್ರಭಾ ಬ್ಯಾಂಕ್ ೨೦ ಸಂಘಗಳನ್ನು ರಚಿಸಿದೆ. ಈ ಸಂಘಗಳು ಒಟ್ಟು ೨,೫೦,೦೦೦ ಸಾವಿರ ಉಳಿತಾಯವನ್ನು ಮಾಡಿವೆ. ಒಟ್ಟು ೩.೩೨,೦೦೦ಸಾವಿರ ಸಾಲವನ್ನು ಹೈನುಗಾರಿಕೆಗೆ ನೀಡಿದೆ. ಮೇಲಿನ ಸ್ವಯಂ ಸೇವಾ ಸಂಸ್ಥೆಗಳು ಸ್ವರ್ಣ ಜಯಂತಿ ಸ್ವ ರೋಜಗಾರ್ ಯೋಜನೆಯಿಂದ ಸಂಘಗಳನ್ನು ರಚಿಸಿವೆ. ಅಲ್ಲದೆ ಬ್ಯಾಂಕುಗಳು ಮತ್ತು ಗ್ರಾಮ ಪಂಚಾಯತಿಗಳಿಂದಲೂ ಸ್ವ-ಸಹಾಯ ಸಂಘಗಳು ರಚನೆಯಾಗಿವೆ. ಎಂ.ಜಿ.ಬ್ಯಾಂಕ್ ೨೮ ಸಂಘಗಳನ್ನು ರಚಿಸಿದೆ. ಒಟ್ಟು ೧೭೬ ಸಂಘಗಳ ಖಾತೆಗಳನ್ನು ಹೊಂದಿದೆ. ಇದರಲ್ಲಿ ೨೮ ಸಂಘಗಳನ್ನು ರಚಿಸಿದೆ. ಒಟ್ಟು ೧೭೬ ಸಂಘಗಳ ಖಾತೆಗಳನ್ನು ಹೊಂದಿದೆ. ಇದರಲ್ಲಿ ೨೮ ಸಂಘಗಳು ಬ್ಯಾಂಕ್ ವತಿಯಿಂದ ರಚಿತವಾದ ಸಂಘಗಳಿವೆ. ೩,೮೬,೦೦೦ರೂಗಳನ್ನು ಉಳಿತಾಯ ಮಾಡಿದೆ. ಒಟ್ಟು ಸಂಘಗಳಲ್ಲಿ ೮೨ ಸಂಘಗಳಿಗೆ ಎಮ್ಮೆ, ಆಕಳು, ಆಡು ಮತ್ತು ವ್ಯವಹಾರ ಮಾಡಲು, ೪,೧೦,೦೦೦ರೂಗಳನ್ನು ಸಾಲವನ್ನು ನೀಡಲಾಗಿದೆ. ಆದರೂ ಸಹ ಅನೇಕ ಸಂಘಗಳು ಹಲವಾರು ಕಾರಣಗಳಿಂದ ಅನೇಕ ಸಮಸ್ಯೆಗಳನ್ನು ಅನುಭವಿಸುತ್ತಿವೆ.

ಇನ್ನಿತರೆ ಗುಡಿ, ಕಟ್ಟಡ, ಕಛೇರಿಗಳು, ಸಂಘುಸಂಸ್ಥೆಗಳು

ಕ್ರಿ.ಶ. ೧೯೧೭ರಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರಿಂದ ಉದ್ಘಾಟಿಸಲ್ಪಟ್ಟ ಶ್ರೀ ಸಿದ್ದೇಶ್ವರ ಮೊಫತ್ ವಾಚನಾಲಯ ಇದೆ. ಕ್ರಿ.ಶ. ೧೯೫೨ರಲ್ಲಿ ಆರಂಭವಾದ ಅಥಣಿ ಸಾಹಿತ್ಯ ಸಾಂಸ್ಕೃತಿಕ ಸಂಘುವು ಸಾಹಿತ್ಯಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಂದಿದೆ. ಕ್ರಿ.ಶ. ೧೯೨೯ ಸಾಹಿತ್ಯ ಮಂಟಪ ಪ್ರಾರಂಭವಾಗಿದ್ದು, ಅಮರ ಸ್ನೇಹ ಸಂಘು, ಕಲಾಮಂಡಳ, ರಂಗವೇದಿಕೆ, ವಿನೂತನ ವಿಚಾರವೇದಿಕೆಯಿದೆ. ಅಥಣಿ ಪರಿಸರದಲ್ಲಿ ೧೧೧ ಯುವತಿ ಮಂಡಳಿಗಳು, ೧೭೫ ಯುವಕ ಮಂಡಳಿಗಳು ಇರುತ್ತವೆ.

ಅಥಣಿಯು ತಾಲೂಕು ಮುಖ್ಯ ಕೇಂದ್ರವಾಗಿರುವುದರಿಂದ ತಹಶೀಲ್ದಾರರ ಕಛೇರಿ, ಪುರಸಭೆ ಕಾರ್ಯಾಲಯ, ಸಿವಿಲ್‌ಜಡ್ಜ್ ಮತ್ತು ಸಹಾಯಕ ಸತ್ರ ನ್ಯಾಯಾದೀಶರು ಒಬ್ಬರು, ಪ್ರಧಾನ ಸಿವಿಲ್ ಜಡ್ಜ್ ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾದೀಶರು ಒಬ್ಬರು, ಸಹಾಯಕ ಸರಕಾರಿ ಅಭಿಯೋಜಕರು ಇಬ್ಬರು, ಸಹಾಯಕ ಸರಕಾರಿ ವಕೀಲರು ಇಬ್ಬರು, ಒಟ್ಟು ವಕೀಲರು ೧೮೯ ಇದ್ದಾರೆ. ಸಿ.ಪಿ.ಐ. ಅವರ ಕಛೇರಿ ಇದ್ದು, ಈ ತಾಲೂಕಿನಲ್ಲಿ ೩ ಪೋಲೀಸ್ ಠಾಣೆಗಳು, ೨ ಹೊರ ಠಾಣೆಗಳು, ಕಾರಾಗೃಹ, ಅಗ್ನಿಶಾಮಕದಳ ೧, ತಾಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕು ಪಂಚಾಯತಿ ಕಛೇರಿ, ವಾಣಿಜ್ಯ ತೆರಿಗೆ ಅಧಿಕಾರಿಗಳ ಕಛೇರಿ, ಸಬ್ ಟ್ರಜರಿ, ಸಬ್ ರಿಜಿಸ್ಟರ್ ಕಛೇರಿ, ಲೋಕೋಪಯೋಗಿ ಸಹಾಯಕ ಇಂಜಿನಿಯರ್ ಹಾಗೂ ಜಿಲ್ಲಾ ಪಂಚಾಯ್ತಿ ಸಹಾಯಕ ಇಂಜಿನಿಯರ್ ಕಛೇರಿ, ಸಹಕಾರಿ ಸಂಘುಗಳ ಹಿರಿಯ ಲೆಕ್ಕಪರಿಶೋಧಕರ ಕಛೇರಿ ಬಾಲವಿಕಾಸ ಸಂಯೋಜನಾಧಿಕಾರಿಗಳ ಕಛೇರಿ, ಸಹಾಯಕ ಕೃಷಿ ಅಧಿಕಾರಿಗಳ ಕಛೇರಿ, ಭಾರತೀಯ ಜೀವವಿಮಾ ನಿಗಮವಿದೆ. ಶಿಕ್ಷಣ ಇಲಾಖೆ ಕಛೇರಿಗಳು ೨. ತೋಟಗಾರಿಕೆ ಇಲಾಖೆ ಕಛೇರಿ ೧, ರೇಷ್ಮೆ ಹಾಗೂ ವಾರ್ತಾ ಪ್ರಚಾರ ಇಲಾಖೆ, ಭೂ ಮಾಪನ ನೊಂದಣಿ, ಪುನರ್‌ವಸತಿ ಕಛೇರಿ (ಸ್ಟೇಟ್ ಹೋಮ್) ಕೈಗಾರಿಕೆ ವಿಸ್ತೀರ್ಣಾಧಿಕಾರಿಗಳ ಕಛೇರಿಗಳಿವೆ. ಗ್ರಾಮ ಪಂಚಾಯ್ತಿಗಳು ೫೧, ನಾಡ ಕಛೇರಿಗಳು ೨೭, ಗ್ರಂಥಾಲಯಗಳು ೩೦, ಪಶು ಆಸ್ಪತ್ರೆ ೧, ಪಶು ಚಿಕಿತ್ಸಾಲಯ ೧೪, ಪ್ರಾಥಮಿಕ ಪಶು ವೈದ್ಯಕೀಯ ಕೇಂದ್ರಗಳು ೧೧, ಸಂಚಾರಿ ಚಿಕಿತ್ಸಾಲಯ ೧ ಇದೆ.

೨.೩. ಚಾರಿತ್ರಿಕ ಹಿನ್ನೆಲೆ

ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಅತಿದೊಡ್ಡ ತಾಲೂಕು ಪ್ರದೇಶವೇ ಅಥಣಿ ಪರಿಸರ. ಪ್ರತಿಯೊಂದು ಪರಿಸರದ ಜನಜೀವನ ಮತ್ತು ಚರಿತ್ರೆ ಅಲ್ಲಿನ ಭೌಗೋಳಿಕ ಸನ್ನಿವೇಶ ಮತ್ತು ನೈಸರ್ಗಿಕ ಸಂಪತ್ತಿನ ಹಿನ್ನೆಲೆಯಿಂದ ಹೆಚ್ಚು ಮಹತ್ವವನ್ನು ಪಡೆಯುತ್ತದೆ. ಅಥಣಿ ಪರಿಸರವು ಇದಕ್ಕೆ ಹೊರತಾಗಿಲ್ಲ. ಜಿಲ್ಲಾ ಕೇಂದ್ರ ಬೆಳಗಾವಿಯಿಂದ ೧೫೦ ಕಿ.ಮೀ. ಅಂತರದಲ್ಲಿರುವ ಅಥಣಿಯು ೧೮೩೮-೩೯ರಲ್ಲಿಯೇ ತಾಲೂಕು ಕೇಂದ್ರವಾಗಿತ್ತು. ನಂತರ ೧೯೫೯ರಿಂದ ಈಚೆಗೆ ಸ್ವತಂತ್ರ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ.

ಬೆಳಗಾವಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸವನ್ನು ವಸ್ತು ನಿಷ್ಠವಾಗಿ ಕಟ್ಟಿಕೊಡುವ ನಿಟ್ಟಿನಲ್ಲಿ ಅಥಣಿ ಪರಿಸರದ ಕೊಡುಗೆ ಅಪಾರವಾಗಿದೆ. ಈ ಪರಿಸರವು ತನ್ನ ಮಡಿಲಿನಲ್ಲಿ ಇತಿಹಾಸ ಪೂರ್ವ ಯುಗದಿಂದ

ಸಾಂಸ್ಕೃತಿಕ ಬೆಳವಣಿಗೆಯ ಎಲ್ಲಾ ಘಟ್ಟಗಳ ಕುರುಹುಗಳನ್ನು ಅಂದರೆ ಇತಿಹಾಸಪೂರ್ವದ ವಿವಿಧ ಕಾಲಘಟ್ಟದ ವಸತಿನೆಲೆಗಳು, ಇತಿಹಾಸ ಕಾಲದ ಶಾಸನಗಳು, ದೇವಾಲಯಗಳು, ಶಿಲ್ಪಗಳು, ಕಲ್ಲು ಬಂಡೆಗಳು, ನಾಣ್ಯಗಳು, ಕೋಟೆ-ಕೊತ್ತಲುಗಳು, ಸಾಂಸ್ಕೃತಿಕ ಕುರುಹುಗಳು ಈ ಪರಿಸರದ ಮಡಿಲಲ್ಲಿ ದೊರೆಯುತ್ತವೆ. ಇಂತಹ ಕುರುಹುಗಳು ಸಮಕಾಲೀನ ಸಾಂಸ್ಕೃತಿಕ ಇತಿಹಾಸದ ವಿವಿಧ ಮುಖಗಳನ್ನು ಮತ್ತು ಈ ಪರಿಸರದಲ್ಲಿ ಹಲವು ಶತಮಾನಗಳಲ್ಲಿ ಮಾನವ ಸಂಸ್ಕೃತಿ ಬೆಳೆದುಬಂದ ದಾರಿಯ ಕಿರುನೋಟವನ್ನು ಪರಿಚಯಿಸುತ್ತವೆ.

ಅಥಣಿ ಪರಿಸರವು ಕನ್ನಡನಾಡನ್ನು ಆಳುತ್ತಾ ಬಂದ ವಿವಿಧ ಅರಸು ಮಹಾಮಂಡಲೇಶ್ವರರು, ಮಹಾ ಸಾಮಂತರು, ಪ್ರಭುಗಾವುಂಡ, ಗಾವುಂಡ ಮನೆತನಗಳ ನೇರ ಪ್ರಭಾವಕ್ಕೊಳಪಡುತ್ತಾ ಬಂದಿರುವುದನ್ನು ಸಮಕಾಲೀನ ಶಾಸನಗಳು, ಪುರಾತತ್ವ ಮತ್ತು ಸಾಹಿತ್ಯಿಕ ಕುರುಹುಗಳಿಂದ ತಿಳಿದು ಬರುತ್ತದೆ.

ವಿಶಾಲವಾದ ಕನ್ನಡ ನಾಡಿನಲ್ಲಿ ಆಳ್ವಿಕೆಯನ್ನು ಕೈಗೊಳ್ಳುತ್ತಾ ಬಂದ ಪ್ರತಿಯೊಂದು ಅರಸು ಮನೆತನಗಳು ವಿಶಾಲವಾಗಿದ್ದ ತಮ್ಮ ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ಹಲವು ಪ್ರಧಾನ ಮತ್ತು ಉಪಪ್ರಾಂತ್ಯಗಳನ್ನಾಗಿ ವಿಂಗಡಿಸಿ ಆಳ್ವಿಕೆ ನಡೆಸಿವೆ. ಇಂದಿನ ಅಥಣಿ ಪರಿಸರವು ಅಂದು ಘಸಲಿಗೆ ಪನ್ನಾರ್ಚ್ಛಾಸಿರ, ಕರಹಾಡ ನಾಲ್ಕು ಸಾವಿರ, ಮುಂಜೆ ಮೂಸಾಸಿರ ಕನ್ನಂಬಾಕೆ (ಕಳಂಬಡೆ) ಮುನ್ನೂರು, ಕುಂತದೇಶ, ಸೆವುಣದೇಶ, ಮೂವತ್ತಾರುಂಬಾಡ ಮೊದಲಾದ ಪ್ರಾಂತ್ಯಗಳಲ್ಲಿ ಅಂತರ್ಗತವಾಗಿತ್ತು.

ಅಥಣಿ ಪರಿಸರ ನದಿ ಮತ್ತು ಬೆಟ್ಟಗಳ ಪಾತ್ರಗಳಲ್ಲಿರುವ ಅನೇಕ ಗ್ರಾಮಗಳ ನಡುವೆ ಇತಿಹಾಸಪೂರ್ವ ಕಾಲಾವಧಿಯ ವಿವಿಧ ಸಂಸ್ಕೃತಿಗಳ ಆಯುಧಗಳು, ಮಡಕೆಗಳು ಇತ್ಯಾದಿ ಅವಶೇಷಗಳನ್ನು ಡಾ.ಅ.ಸುಂದರ, ಡಾ.ಆರ್.ಎಸ್.ಪಂಚಮುಖಿಯವರು ಡಾ.ಎಚ್.ಎಸ್.ಕಾಂಬಳೆ ಮೊದಲಾದ ಸಂಶೋಧಕರು ಬೆಳಕಿಗೆ ತಂದಿದ್ದಾರೆ. ಇವುಗಳು ಈ ಪರಿಸರದ ಅಸ್ತಿತ್ವ, ಪ್ರಾಚೀನತೆ ಮತ್ತು ಈ ಪರಿಸರವು ಮಾನವ ಸಂಸ್ಕೃತಿ ಬೆಳೆದು ಬಂದ ಬಗೆಯನ್ನು ನಿರೂಪಿಸುತ್ತವೆ. ಐನಾಪುರ, ರೋಲಿ, ಸಿಂಧಗಿ ಗ್ರಾಮಗಳಲ್ಲಿ ಹಳೆಯ ಶಿಲಾಯುಗ ಸಂಸ್ಕೃತಿಯ ಆಯುಧೋಪಕರಣಗಳು ದೊರೆತಿವೆ.

ಅಲ್ಲದೆ ಶೇಗುಣಸಿ, ಸತ್ತಿ, ಐನಾಪುರ, ರೋಲಿಯಲ್ಲಿ ಮಧ್ಯಹಳೆಯ ಶಿಲಾಯುಗ ಸಂಸ್ಕೃತಿಯ ವಿವಿಧ ಉಪಕರಣಗಳು ಕಂಡುಬಂದಿವೆ. ಶೇಗುಣಸಿ, ಸತ್ತಿ, ಸಪ್ತಸಾಗರ ಗ್ರಾಮಗಳಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯು ೨,೫೦೦ ರಿಂದ ೧೦,೦೦೦ವರ್ಷಗಳಷ್ಟು ಪೂರ್ವಕಾಲದ ವಿವಿಧ ಉಪಕರಣಗಳು ದೊರೆತಿವೆ. ನೇಸೂರು, ಗುಂಡೆವಾಡಿಯಲ್ಲಿ ಶಿಲಾತಾಮ್ರಯುಗ ಉಪಕರಣಗಳು, ಹುಲುಗಬಾಳಿ, ಐಗಳಿ, ಕಾಗವಾಡ, ಬನ್ನೂರ, ತೆಲಸಂಗ, ಕೊಟ್ಟಲಗಿ ಗ್ರಾಮಗಳಲ್ಲಿ ಕಬ್ಬಿಣ ಯುಗದ ಬೃಹತ್ ಶಿಲಾಯುಗ ಸಂಸ್ಕೃತಿಯ ಕುರುಹುಗಳು ಗೋಚರಿಸಿವೆ. ಇವುಗಳಲ್ಲಿ ಹುಲುಗಬಾಳಿಯಲ್ಲಿನ ಬೂದಿ ದಿಬ್ಬವು ಮಹತ್ವದ್ದಾಗಿದೆ. ಸಂಬರಗಿಯಲ್ಲಿ ಇತಿಹಾಸ ಆರಂಭಯುಗದ ಸಂಸ್ಕೃತಿಯ ಪ್ರಾಚ್ಯಾವಶೇಷಗಳು ಬೆಳಕಿಗೆ ಬಂದಿವೆ. ಹೀಗೆ ಅಥಣಿ ಪರಿಸರದ ಬಹುತೇಕ ಊರುಗಳು ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಪ್ರದೇಶಗಳಾಗಿವೆ.

ಹೀಗೆ ಒಂದು ಪ್ರದೇಶದ ಪ್ರಾಚೀನತೆ ಹಾಗು ಇತಿಹಾಸವನ್ನು ತಿಳಿಯಲು ಮೂಲಾಧಾರಗಳು ಪ್ರಮುಖ ಪಾತ್ರವಹಿಸುತ್ತಿವೆ. ಮೂಲಾಧಾರಗಳನ್ನು ನಾವು ಎರೆಡು ರೀತಿಯಲ್ಲಿ ವಿಂಗಡಿಸಬಹುದು. ಅವುಗಳೆಂದರೆ ಸಾಹಿತ್ಯಾಧಾರಗಳು ಮತ್ತು ಪ್ರಾಕ್ತನಶಾಸ್ತ್ರ ಆಧಾರಗಳು. ಬೆಳಗಾವಿ ಜಿಲ್ಲೆಯ ಗಡಿಭಾಗದಲ್ಲಿರುವ ಹಾಗೂ ದೊಡ್ಡ ತಾಲೂಕಾದ ಅಥಣಿಯಲ್ಲಿ ವಾಸ್ತುಶಿಲ್ಪ ಮತ್ತು ಸ್ಮಾರಕಗಳು ನಮಗೆ ಅನೇಕ ಸ್ಥಳಗಳಲ್ಲಿ ಕಂಡುಬರುತ್ತವೆ.

ಅಥಣಿಯ ಅಮೃತಲಿಂಗೇಶ್ವರ ಹಾಗೂ ಸಿದ್ದೇಶ್ವರ ದೇವಾಲಯಗಳು ತುಂಬಾ ಪ್ರಾಚೀನ ವಾಸ್ತುಶಿಲ್ಪ ಕುರುಹಾಗಿವೆ. ಅಮೃತಲಿಂಗೇಶ್ವರ ದೇಗುಲ ಉತ್ತರ ಚಾಲುಕ್ಯ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ಸುಂದರವಾದ ಕೆತ್ತನೆಯ ಕಂಬಗಳಿಂದ ಕೂಡಿದ ನವರಂಗ, ಗರ್ಭಗೃಹ, ಹಾಗೂ ಮುಖ ಮಂಟಪ, ಗಮನ ಸೆಳೆಯುತ್ತವೆ. ಸಿದ್ದೇಶ್ವರ ದೇವಾಲಯ ಗೊಮ್ಮಟ ಆಕಾರದ ಗರ್ಭಗೃಹ ಹೊಂದಿದೆ.

ಉತ್ತರ ಕರ್ನಾಟಕ ಸಂದರ್ಭದಲ್ಲಿ ಶಾತವಾಹನ ತರುವಾಯ ಬನವಾಸಿಯ ಕದಂಬರು ಕ್ರಿ.ಶ. ಸುಮಾರು ೪ನೆಯ ಶತಮಾನದಿಂದ ೬ನೆಯ ಶತಮಾನದವರೆಗೂ ರಾಜ್ಯವಾಳಿದರು. ಖಾನಾಪುರ ತಾಲೂಕಿನ 'ಹಲಸಿಯು' ಈ ಮನೆತನದ ದ್ವಿತೀಯ ರಾಜಧಾನಿಯಾಗಿತ್ತು. ಈ ಗ್ರಾಮದಲ್ಲಿ ಆ ಮನೆತನದ ಕಾಕುತ್ಸವರ್ಮ (ಕ್ರಿ.ಶ.೪೦೫-೪೩೦) ಮೃಗೇಶಶರ್ಮ (ಕ್ರಿ.ಶ.೪೫೫-೪೮೦) ರವಿವರ್ಮ (ಕ್ರಿ.ಶ. ೪೮೫-೫೧೯) ಹರಿವಲ್ಯ (ಕ್ರಿ.ಶ ೫೪೫) ಅರಸರ ಆಳ್ವಿಕೆಯ ಕಾಲಾವಧಿಯ ಐದು ತಾಮ್ರಪಟ ಶಾಸನಗಳು ಬೆಳಕಿಗೆ ಬಂದಿವೆ. ಅಥಣಿ ಪರಿಸರದ ಮಂಗಳೂಳಿಯಲ್ಲಿ ಆ ಮನೆತನದ ಕ್ರಿ.ಶ. ೩೧೦ರ ತಾಮ್ರಪಟ ಶಾಸನ ಬೆಳಕಿಗೆ ಬಂದಿದೆ. ಇದರಲ್ಲಿ ಈ ಮನೆತನದ ವಂಶಾವಳಿ ಮತ್ತು ಬ್ರಾಹ್ಮಣರಿಗೆ ದಾನಮಾಡಿದ ವಿವರಗಳಿವೆ. ಆದರೆ ಈ ಶಾಸನದ ಕಾಲಮಾನ, ಲಿಪಿ ಮತ್ತು ಭಾಷೆಯ ಲಕ್ಷಣಗಳನ್ನು ಗಮನಿಸಿದರೆ ಇದು ಕೂಟ ಶಾಸನದಂತೆ ತೋರುತ್ತದೆ. ಕಾರಣ ವಿಶ್ವಾಸಕ್ಕೆ ಪುಷ್ಟಿದೊರೆಯದಿದ್ದರೂ, ಪರೋಕ್ಷವಾಗಿ ಅಥಣಿ ಪರಿಸರವು ಈ ಮನೆತನದ ಆಳ್ವಿಕೆಗೆ ಒಳಪಟ್ಟಿತ್ತು ಎಂದು ತಿಳಿಯುತ್ತದೆ.

ರಾಷ್ಟ್ರಕೂಟರ ತರುವಾಯ ಕಲ್ಯಾಣದ ಚಾಲುಕ್ಯರು ಕ್ರಿ.ಶ. ೯೭೩ ರಿಂದ ೧೧೮೯ರ ವರೆಗೆ ಆಳ್ವಿಕೆ ನಡೆಸಿದ್ದಾರೆ. ಇವರ ಸಾಮ್ರಾಜ್ಯವು ಇಂದಿನ ಕನ್ನಡ ನಾಡನ್ನೊಳಗೊಂಡು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ಕೆಲವು ಭಾಗಗಳನ್ನು ಒಳಗೊಂಡಿತ್ತು. ಈ ಮನೆತನದ ಆಳ್ವಿಕೆಯ ಪ್ರಾರಂಭದಿಂದ ಅಥಣಿ ಪರಿಸರದ ರಾಜಕೀಯ ಇತಿಹಾಸವು ಸ್ಪಷ್ಟವಾಗಿದೆ. ಅಥಣಿ ಪರಿಸರದಲ್ಲಿ ಈ ಮನೆತನಕ್ಕೆ ಸಂಬಂಧಿಸಿದಂತೆ ಅನೇಕ ಶಾಸನಗಳು, ದೇವಾಲಯಗಳು, ಶಿಲ್ಪಗಳು, ಸ್ಮಾರಕ ಕಲ್ಲುಗಳು, ನಾಣ್ಯಗಳು ಮೊದಲಾದ ಪುರಾತತ್ವ ಅವಶೇಷಗಳು ಬೆಳಕಿಗೆ ಬಂದಿವೆ. ಕೊಟ್ಟಲಗಿಯ (ಕ್ರಿ.ಶ. ೧೦೨೨)ರ ಶಾಸನವು ಜಗದೇಕ ಮಲ್ಲನ (೧೦೧೫-೧೦೪೪) ಕೊಕಟನೂರಿನ (ಕ್ರಿ.ಶ.೧೦೫-೦೫೧ರ) ಶಾಸನವು ೧ನೇ ಸೋಮೇಶ್ವರನ (ಕ್ರಿ.ಶ.೧೦೪೪-೧೦೬೮) ರಾಮತೀರ್ಥದ (ಕ್ರಿ.ಶ. ೧೧೧೫ರ), ತೆಲಸಂಗದ (ಕ್ರಿ.ಶ. ೧೧೨೨ರ), ಬಳ್ಳಿಗೆರೆಯ ಕ್ರಿ.ಶ.ಸುಮಾರು ೧೨ನೇ ಶತಮಾನದ ಶಾಸನಗಳು ೬ನೇ ವಿಕ್ರಮಾದಿತ್ಯನ

(ಕ್ರಿ.ಶ.೧೦೭೬-೧೧೨೬) ತೆಲಸಂಗದ (ಕ್ರಿ.ಶ.೧೧೪೭) ಶಾಸನವು ೨ನೆಯ ಜಗದೇಕಮಲ್ಲನ (ಕ್ರಿ.ಶ. ೧೧೩೮-೧೧೫೧) ಆಳ್ವಿಕೆಯನ್ನು ಪರಿಚಯಿಸುತ್ತವೆ. ಅಥಣಿ ಪರಿಸರದ ಮತ್ತು ಅವರ ಸಾಮಂತರ ಅಧೀನದಲ್ಲಿ ಅನೇಕ ಜನ ಪ್ರಭುಗಾವುಂಡರು, ಗಾವುಂಡರು, ದಂಡ ನಾಯಕರು, ಪೆರ್ಗ್ಗಡೆಗಳು, ಸೇನಬೋವರು ಮೊದಲಾದವರು ಗ್ರಾಮಪಟ್ಟಣದಲ್ಲಿ ಆಳ್ವಿಕೆ ನಡೆಸಿರುವುದು ಸಮಕಾಲೀನ ಶಾಸನಗಳಿಂದ ಕಂಡುಬರುತ್ತದೆ.

ಹಾಗೆಯೇ ಅಥಣಿ ತಾಲೂಕಿನ ಐನಾಪುರ ಕೃಷ್ಣೆಯ ತೀರದ ಹತ್ತಿರವಿರುವ ಒಂದು ದೊಡ್ಡ ಹಳ್ಳಿ. ಹಿಂದೊಮ್ಮೆ ಜೈನ-ಶೈವ ಧರ್ಮಗಳ ನೆಲೆಯಾಗಿತ್ತು ಎನ್ನುವುದಕ್ಕೆ ಆದಿನಾಥ ತೀರ್ಥಂಕರ ಬಸದಿ, ಪಾರ್ಶ್ವನಾಥ ತೀರ್ಥಂಕರ ಬಸದಿ, ಮಹಾದೇವ ಮತ್ತು ವಿಶ್ವನಾಥ ದೇಗುಲಗಳು ಊರಹೊರಗಿನ ಪ್ರಾಚೀನ ಕಲಾತ್ಮಕ ಶಿಲಾದೇಗುಲಗಳು ಸಾಕ್ಷಿಯನ್ನು ನುಡಿಯುತ್ತವೆ. ಮಹಾದೇವ ದೇಗುಲದ ಎದುರಿಗಿರುವ ಭಗ್ನಮೂರ್ತಿಗಳು, ವೀರಗಲ್ಲುಗಳೂ ಈ ಮಾತಿಗೆ ಪುರಾವೆಗಳಾಗಿವೆ.

ಐನಾಪುರ ಗ್ರಾಮದಲ್ಲಿ ನಾಲ್ಕು ಶಿಲಾಶಾಸನಗಳು ದೊರೆತಿದ್ದು ಬಸದಿಗಳಲ್ಲಿರುವ ಕಂಚಿನ ಮೂರ್ತಿಗಳ ಪಾದಪೀಠದಲ್ಲಿಯೂ ಮೂರ್ತಿಗಳನ್ನು ಮಾಡಿಸಿದವರ ಸೇವೆಯನ್ನು ಉಲ್ಲೇಖಿಸುವ ಹತ್ತಾರು ಶಾಸನಗಳು ದೊರೆಯುತ್ತವೆ.

* ಆದಿನಾಥ ಬಸದಿಯ ಜಿನಮೂರ್ತಿಯ ಪಾದಪೀಠದಲ್ಲಿರುವ ಶಾಸನ ತುಂಬ ಅಸ್ಪಷ್ಟವಾಗಿದ್ದು, ಈ ಶಾಸನವು ನಾಲ್ಕು ಸಾಲುಗಳನ್ನು ಹೊಂದಿದ್ದರೂ ವಿವರಗಳು ಸರಿಯಾಗಿ ತಿಳಿಯುತ್ತಿಲ್ಲ. ೧೨ನೇ ಶತಮಾನದ ಅಕ್ಷರಗಳಲ್ಲಿ ಇದನ್ನು ಕೆತ್ತಿರಬಹುದು.
* ಪಾರ್ಶ್ವನಾಥ ಬಸದಿಯ ಗರ್ಭಗೃಹದಲ್ಲಿಯ ಮೂರ್ತಿಯ ಪಾದಪೀಠದ ಶಾಸನ.
* ಹಿರೇಮಠ ಬಾಗಿಲ ಪಕ್ಕದಲ್ಲಿ ನಿಲ್ಲಿಸಿದ ಮಾಸ್ತಿಕಲ್ಲು.
* ಚಂದ್ರಪ್ರಭ ತೀರ್ಥಂಕರ ಪಾದಪೀಠದ ಎರಡು ಮುಖಗಳಲ್ಲಿರುವ ಶಾಸನ.
* ಶ್ವೇತಸ್ಕಂದ ಪೀಠದ ಮೇಲಿನ ಶಾಸನ.
* ಗಣಧರ ಪಾದುಕೆ ಮೇಲಿರುವ ಶಾಸನ
* ಸರ್ವಾಹ್ನಯಕ್ಷನ ಪಾದದ ಕೆಳಗೆ
* ಅನಂತನಾಥ ಮೂರ್ತಿಯ ಕೆಳಗೆ
* ಚೈತ್ಯಾಲಯದ ಚೆವ್ವೀಸ್ ತೀರ್ಥಂಕರ ಪ್ರತಿಮೆಯ ಕೆಳಗೆ
* ರತ್ನತ್ರಯಮೂರ್ತಿಯ ಕೆಳಗೆ
* ಗೌಡರ ವಾಡೆಯ ಬಸ್ತಿಯ ತಾಮ್ರ ಮುಂತಾದ ಪಟದಲ್ಲಿ. ಈ ಎಲ್ಲಾ ಶಾಸನಗಳ ಆಧಾರದಿಂದ

ಐನಾಪುರ ಗ್ರಾಮವು ಆದಿನಾಥ ತೀರ್ತಂಕರ ಬಸದಿ ಮತ್ತು ಪಾರ್ಶ್ವನಾಥ ತೀರ್ಥಂಕರ ಬಸದಿಗಳು ೪ ಶಿಲಾಲೇಖಗಳು ೮ ಹಿತ್ತಾಳೆ ಮೂರ್ತಿಗಳ ಮೇಲಿನ ಬರಹಗಳು ತಾಮ್ರಪದದ ಮೇಲಿನ ಬರಹವನ್ನೊಳಗೊಂಡ ಜೈನ ಅತಿಶಯದ ಕ್ಷೇತ್ರಗಳಲ್ಲಿ ಒಂದಾಗಿತ್ತು ಎಂದು ಹೇಳಬಹುದು. ೧೨ನೇಯ ಶತಮಾನದಲ್ಲಿ ಯತಬರೆಪುರ, ಯತಬಾರಪುರವೆಂದು, ಕರೆಯಿಸಿಕೊಂಡ ಈ ಊರು ನಂತರದ ಅವಧಿಯಲ್ಲಿ ಅಣಿನಾಪು-ಆ್ಯನಾಪುರ-ಐನಾಪುರ ಎಂದು ಕರೆಯಿಸಿಕೊಂಡಿತೆಂಬ ತೀರ್ಮಾನಕ್ಕೆ ಬರಬಹುದು.

ಕಲ್ಯಾಣದ ಚಾಲುಕ್ಯ ಮನೆತನದ ಅಧೀನದಲ್ಲಿ ಆಳ್ವಿಕೆಯನ್ನು ಪ್ರಾರಂಭಿಸಿದ ಕಲಚೂರಿ ಮನೆತನವು ಕ್ರಿ.ಶ. ೧೧೬೨ ರಿಂದ ೧೧೮೪ರ ವರೆಗೂ ಆಳ್ವಿಕೆ ನಡೆಸಿದೆ. ಅಥಣಿ ಪರಿಸರವು ಆ ಮನೆತನದ ಆಳ್ವಿಕೆಯ ಪ್ರಭಾವದಲ್ಲಿತ್ತೆಂಬುದಕ್ಕೆ ಕೊಕಟನೂರಿನ ಕ್ರಿ.ಶ. ೧೦೫೦-೫೧ರ ಕ್ರಿ.ಶ. ೧೧೬೯ರ, ಕ್ರಿ.ಶ. ಸುಮಾರು ೧೨ನೆಯ ಶತಮಾನದ ರಾಮತೀರ್ಥದ, ಕ್ರಿ.ಶ. ೧೧೬೭ರ ಬಳ್ಳಿಗೇರಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ, ತೆಲಸಂಗ ಕ್ರಿ.ಶ. ಸುಮಾರು ೧೨ನೇ ಶತಮಾನದ ಶಾಸನಗಳು ಪ್ರಮುಖ ಆಕರಗಳಾಗಿವೆ. ಈ ಮನೆತನದ ಆಳ್ವಿಕೆಯ ಕಾಲಾವಧಿಯಲ್ಲಿ ಈ ಪರಿಸರದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾಗಿವೆ. ಅವುಗಳಲ್ಲಿ ಮದಭಾವಿಯ ರಾಮಲಿಂಗೇಶ್ವರ (ದ್ವಿಕೂಟ) ಮತ್ತು ಮಹಾದೇವ ದೇವಾಲಯಗಳು ಮಹತ್ವದ್ದಾಗಿವೆ.

ಮಳಖೇಡದ ರಾಷ್ಟ್ರಕೂಟ ಮತ್ತು ಕಲ್ಯಾಣದ ಚಾಲುಕ್ಯ ಮನೆತನಗಳ ಅಧೀನದಲ್ಲಿ ಆಳ್ವಿಕೆಯನ್ನು ಪ್ರಾರಂಭಿಸಿದ ದೇವಗಿರಿಯ ಸೇವುಣ ಮನೆತನವು ಕ್ರಮೇಣ ಸ್ವತಂತ್ರವಾಗಿ ಕ್ರಿ.ಶ. ಸುಮಾರು ೧೨ ರಿಂದ ೧೪ನೆಯ ಶತಮಾನದವರೆಗೂ ಆಳ್ವಿಕೆ ನಡೆಸಿದೆ. ಅಥಣಿ ಪರಿಸರವು ಈ ಮನೆತನದ ಆಳ್ವಿಕೆಯ ಪ್ರಭಾವ ದಲ್ಲಿತ್ತು. ಈ ಪರಿಸರದ ಯಕ್ಕಂಚಿಯ ಕ್ರಿ.ಶ. ೧೧೪೭ರ ಕೊಕಟನೂರಿನ ಕ್ರಿ.ಶ. ೧೨೨೫ರ, ಮದಭಾವಿಯ ಕ್ರಿ.ಶ. ೧೨೩೫ರ ಶಾಸನಗಳು ಆ ಮನೆತನದ ಸಿಂಘದೇವನ (ಕ್ರಿ.ಶ. ೧೧೯೯-೧೨೪೭) ಮತ್ತು ಕೊಕಟ ನೂರದ ಕ್ರಿ.ಶ. ೧೩೦೬ರ ಶಾಸನವು ರಾಮಚಂದ್ರ ದೇವನ (ಕ್ರಿ.ಶ. ೧೨೭೨-೧೩೧೨) ಆಳ್ವಿಕೆಯನ್ನು ಪರಿಚಯಿಸಿವೆ. ಈ ಮನೆತನದ ಆಳ್ವಿಕೆಯ ಕಾಲಾವಧಿಯಲ್ಲಿಯೂ ಈ ಪರಿಸರದಲ್ಲಿ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಜರುಗಿರುವುದಕ್ಕೆ ಪ್ರಸ್ತುತ ಶಾಸನಗಳು ನಿದರ್ಶನಗಳಾಗಿವೆ. ಮಳಖೇಡ ರಾಷ್ಟ್ರಕೂಟ ಮನೆತನದ ಅಧೀನದಲ್ಲಿ ಆಳ್ವಿಕೆಯನ್ನು ಪ್ರಾರಂಭಿಸಿದ ಕೊಲ್ಹಾಪುರದ ಶಿಲಾಹಾರ ಮನೆತನದ ಆಳ್ವಿಕೆಯ ಪ್ರಭಾವಕ್ಕೂ ಅಥಣಿ ಪರಿಸರ ಒಳಪಟ್ಟಿತ್ತು. ಈ ಪರಿಸರದ ಶೇಡಬಾಳದಲ್ಲಿನ ಕ್ರಿ.ಶ. ೧೧೫೩ರ, ಜೂಗುಳದ ಕ್ರಿ.ಶ. ಸುಮಾರು ೧೨ನೇಯ ಶತಮಾನದ ಶಾಸನಗಳು ಈ ಮನೆತನದ ವಿಜಯಾದಿತ್ಯನ (ಕ್ರಿ.ಶ. ೧೧೩೮ ರಿಂದ ೧೧೭೫) ಆಳ್ವಿಕೆಯನ್ನು ಪರಿಚಯಿಸಿವೆ. ಈ ಮನೆತನದ ಆಳ್ವಿಕೆಯ ಕಾಲಾವಧಿ ಯಲ್ಲಿಯೂ ಈ ಪರಿಸರದಲ್ಲಿ ದೇವಾಲಯಗಳ ಜೀರ್ಣೋದ್ಧಾರ, ಅವುಗಳಿಗೆ ದಾನದತ್ತಿಗಳನ್ನು ಕೊಟ್ಟ ವಿವರಗಳು ಸಿಗುತ್ತವೆ.

ಹೊಯ್ಸಳ ಮನೆತನದ ತರುವಾಯ ರಾಜಕೀಯ ರಂಗವನ್ನು ಪ್ರವೇಶಿಸಿದ ಕರ್ನಾಟಕ (ವಿಜಯನಗರ) ಮನೆತನದ ಕ್ರಿ.ಶ. ೧೩೩೬ ರಿಂದ ೧೫೬೫) ಆಳ್ವಿಕೆಯ ಸಂದರ್ಭದಲ್ಲಿ ಈ ಮನೆತನದ ಅಧೀನದಲ್ಲಿ ಕೆಲವು ಅಧಿಕಾರಿಗಳು ಅಥಣಿ ಪರಿಸರದಲ್ಲಿ ಆಳ್ವಿಕೆ ನಡೆಸಿದ್ದಾರೆ. ಭೀಮಾನದಿ ತೀರದ ಅವರಾದಿ ಗ್ರಾಮದಿಂದ ಈ ಪರಿಸರಕ್ಕೆ ಆಗಮಿಸಿ ಅಧಿಕಾರ ಗೈದ ಗದಿಗೆಪ್ಪನ ಆಡಳಿತವನ್ನು ಮೆಚ್ಚಿದ ಆನೆಗುಂದಿಯ ರಾಮರಾಯನು ಕೊಕಟನೂರು ಗ್ರಾಮವನ್ನು ಆತನಿಗೆ ಇನಾಮಾಗಿ ಕೊಟ್ಟನು. ಈ ಪರಿಸರವು ಕ್ರಿ.ಶ. ೧೫೮೩ ರಿಂದ ೧೬೮೬ರ ವರೆಗೆ ವಿಜಾಪುರದ ಆದಿಲ್‌ಶಾಹಿ ಮನೆತನದ ಆಳ್ವಿಕೆಯ ಪ್ರಭಾವದಲ್ಲಿತ್ತು. ನಂತರ ಮರಾಠರು ಪ್ರಬಲರಾಗಿ ವಿಜಾಪೂರ ಸುಲ್ತಾನನಿಂದ ಈ ಪರಿಸರವನ್ನು ವಶಪಡಿಸಿಕೊಂಡು ಕ್ರಿ.ಶ.ಸುಮಾರು ೧೭ನೆಯ ಶತಮಾನದ ಉತ್ತರಾರ್ಧದವರೆಗೂ ಇದರ ಮೇಲೆ ತಮ್ಮ ಪ್ರಭಾವ ಹೊಂದಿದ್ದರು. ತರುವಾಯ ಈ ಪರಿಸರವನ್ನು ಮೊಗಲ ಮನೆತನದ ಅಧಿಕಾರಿ ದಿಲೋರಖಾನನು ಮರಾಠರಿಂದ ವಶಪಡಿಸಿಕೊಂಡು ಆಳಿದನು. ಇದೇ ಸಂದರ್ಭದಲ್ಲಿ ಕಾಗವಾಡದಲ್ಲಿ ತ್ರ್ಯಂಬಕರಾವ ಪಟವರ್ಧನ ವಂಶದ ಸಂಸ್ಥಾನವಿತ್ತು. ಇದರ ಆಡಳಿತದ ವ್ಯಾಪ್ತಿಯಲ್ಲಿ ೧೨೦ ಗ್ರಾಮಗಳಿದ್ದವು. ಪುಣೆ ಸರಕಾರದ ಅಧಿಕಾರಿ (ಪೇಶ್ವೆ) ಪೋಳನು ಈ ಪರಿಸರಕ್ಕೆ ಆಗಮಿಸಿ ಇಲ್ಲಿಯ ಆಡಳಿತವನ್ನು ನೋಡಿಕೊಳ್ಳುತ್ತ ಅನೇಕ ಕೋಟೆ, ಕೊತ್ತಲಗಳನ್ನು ಕಟ್ಟಿಸಿದನು. ಕ್ರಿ.ಶ. ೧೭೨೩ರಲ್ಲಿ ನಿಜಾಮ ಉಲ್‌ಮುಲ್ಕನು ದಕ್ಷಿಣಕ್ಕೆ ಬಂದು ಈ ಪರಿಸರದಲ್ಲಿ ಕೆಲಕಾಲ ಸ್ವತಂತ್ರವಾಗಿ ಆಳ್ವಿಕೆ ನಡೆಸಿದನು. ಆನಂತರ ಈ ಪರಿಸರವು ಕೆಲಕಾಲ ಕೋಲ್ಹಾಪುರ ಮತ್ತು ಸಾತಾರ ಪ್ರಾಂತಗಳ ಆಡಳಿತದ ಪ್ರಭಾವದಲ್ಲಿತ್ತು. ತರುವಾಯ ಇದು ಬ್ರಿಟೀಷರ ಆಡಳಿತಕ್ಕೊಳಪಟ್ಟು ಮುಂಬಯಿ ಪ್ರಾಂತಕ್ಕೆ ಸೇರಿತು.

ಹೀಗೆ ಅಥಣಿ ಪರಿಸರದ ಚಾರಿತ್ರಿಕತೆಯು ಕನ್ನಡ ನಾಡಿನ ಇತಿಹಾಸದೊಂದಿಗೆ ಹಾಸುಹೊಕ್ಕಾಗಿ ಬೆಳೆದು ಬಂದಿದೆ. ಈ ಪರಿಸರದ ನದಿ, ಬೆಟ್ಟ, ಕಾಡು, ಹಳ್ಳ, ಮೊದಲಾದ ಭೌಗೋಳಿಕ ಅಂಶಗಳು ಇಲ್ಲಿ ಪ್ರಾಚೀನ ಕಾಲದಿಂದಲೂ ಮಾನವ ಸಂಸ್ಕೃತಿಯ ವಿವಿಧ ಘಟ್ಟಗಳು ಬೆಳೆದು ಬರಲು ಮುಖ್ಯ ಪಾತ್ರವಹಿಸುತ್ತವೆ. ಈ ಪರಿಸರದಲ್ಲಿ ಅರಸುಗೈಯುತ್ತಾ ಬಂದ ಪ್ರತಿಯೊಂದು ಮನೆತನಗಳು, ಶೈವ, ವೈಷ್ಣವ, ಜೈನ ಧರ್ಮಗಳಿಗೆ ಸಂಬಂಧಿಸಿದಂತೆ ವಿವಿಧ ಬಗೆಯ ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಕೊಂಡು ಸ್ಥಳೀಯ ಇತಿಹಾಸ, ಸಂಸ್ಕೃತಿ, ವಾಸ್ತು, ಶಿಲ್ಪ ಮೊದಲಾದ ಕ್ಷೇತ್ರಗಳನ್ನು ಶ್ರೀಮಂತಗೊಳಿಸಿವೆ.

ಈ ಪರಿಸರದ ಪ್ರತಿಯೊಂದು ಗ್ರಾಮದಲ್ಲಿ ಕ್ಷೇತ್ರಕಾರ್ಯ ಕೈಕೊಂಡು ಪುರಾತತ್ವ ಅವಶೇಷಗಳನ್ನು ಕೂಡಿಹಾಕಿ ವಸ್ತುನಿಷ್ಟವಾಗಿ ಅಧ್ಯಯನ ಮಾಡಬೇಕಾಗಿದೆ. ಇದರಿಂದ ಇಲ್ಲಿನ ಇತಿಹಾಸದ ವಿವಿಧ ಮುಖಗಳನ್ನು ಸ್ಪಷ್ಟವಾಗಿ ಪುನರಚಿಸಬಹುದು ಎಂದು ಹೇಳಬಹುದು.

೨.೪. ಮಠ ಮಾನ್ಯಗಳ ಪರಂಪರೆ

ದಕ್ಷಿಣೋತ್ತರವಾಗಿ ಹಾಗೂ ಪೂರ್ವದಿಂದ ಪಶ್ಚಿಮಕ್ಕೆ ಹರಿವ ಹೊಳೆ, ಹಳ್ಳ ಎಲ್ಲಿ ಇರುವವೋ ಆ ಸ್ಥಾನ ಪುಣ್ಯಕ್ಷೇತ್ರ, ತಪಸ್ವಿಗಳ ಬೀಡು, ಎಂದು ಹಿಂದು ಧರ್ಮಶಾಸ್ತ್ರದ ಹೇಳಿಕೆ. ಆರ್ಯಾವರ್ತಾ

ಭಾರತದ ಉತ್ತರಭಾಗದಲ್ಲಿನ ಕಾಶಿಯಲ್ಲಿ ಪವಿತ್ರ ಗಂಗಾನದಿಯು ದಕ್ಷಿಣೋತ್ತರವಾಗಿ ಹರಿಯುತ್ತಿದ್ದುದರಿಂದಲೇ ಅದು ಸುಪವಿತ್ರ ಕ್ಷೇತ್ರವೆನಿಸಿದೆ. ಅಲ್ಲಿ ಶಿವನು ವಿಶ್ವೇಶ್ವರ ಹೆಸರಿನ ಜ್ಯೋತಿರ್ಲಿಂಗ ರೂಪದಿಂದ ನೆಲೆಸಿದ್ದಾನೆ. ಜಗನ್ಮಾತೆಯಾದ ಅನ್ನಪೂರ್ಣೆಯ ಹೆಸರಿನಿಂದ ಶಕ್ತಿಯು ಪೀಠವನಲಂಕರಿಸಿದ್ದಾಳೆ. ಅಲ್ಲದೆ ಈ ವಿಶ್ವೇಶ್ವರ ಜ್ಯೋತಿರ್ಲಿಂಗದಿಂದ ಪಂಚಚಾರ್ಯರಲ್ಲೊಬ್ಬರಾದ ವಿಶ್ವರಾಧ್ಯರು ಆವಿರ್ಭವಿಸಿದರು. ಮತ್ತು ಹದಿನೆಂಟು ಪುರಾಣಗಳನ್ನು ವ್ಯಾಸಮುನಿಗಳು ಈ ಸ್ಥಳದಲ್ಲಿಯೇ ರಚಿಸಿದರು. ಅಲ್ಲದೆ ಅನೇಕ ಮುನಿಗಳು, ತಪಸ್ವಿಗಳು ಇಲ್ಲಿ ತಪಗೈದು ತಪಃಸಿದ್ಧರಾದರು. ಹಾಗಾಗಿಯೇ ಇಂದಿನ ತನಕವು ಕಾಶಿಯು ಹಿಂದುಗಳ ಪವಿತ್ರಕ್ಷೇತ್ರ ಎನಿಸಿದೆ. ಅದರಂತೆ ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿ ಗಂಗಾನದಿಯ ಪರ್ಯಾಯ ಹೆಸರೆನಿಸಿದ ಭಾಗೀರಥಿ ಹೆಸರಿನ ಹಳ್ಳವು ಮೊದಲು ದಕ್ಷಿಣೋತ್ತರವಾಗಿ ಹರಿದು ಬಳಿಕ ಪೂರ್ವದಿಂದ ಪಶ್ಚಿಮಕ್ಕೆ ಹರಿದುದರಿಂದ ಈ ಕ್ಷೇತ್ರ ಪಾವನ ಕ್ಷೇತ್ರವೆನಿಸಿದೆ. ಇದರಿಂದಾಗಿ ಅಥಣಿಯು ದಕ್ಷಿಣದ ಕಾಶಿ ಎನಿಸಿದೆ. ಅಥಣಿಯು ಪ್ರಪ್ರಥಮ ತಪಸ್ವಿ, ದೇವರ್ಷಿ ಹಾಗೂ ರಾಜಶ್ರಿ ಸಿದ್ದೇಶ್ವರ ಇವರ ಸಮಕಾಲೀನವರು ಇಲ್ಲಿನ ಗವಿಸಿದ್ದೇಶ್ವರ, ನಂತರ ಇನ್ನು ಅನೇಕ ತಪಸ್ವಿಗಳು ಆಗಿಹೋಗಿದ್ದಾರೆ. ಅಥಣಿ ಪರಿಸರದಲ್ಲಿ ಸುಮಾರು ೧೨೦ಕ್ಕೂ ಹೆಚ್ಚು ಮಠಗಳು ಕಂಡು ಬರುತ್ತಿದ್ದರೂ ನಾನು ಕೆಲವು ಮುಖ್ಯವಾದವುಗಳನ್ನು ಸಂಕ್ಷಿಪ್ತವಾಗಿ ನೋಡುವ ಪ್ರಯತ್ನ ಮಾಡಿದ್ದೇನೆ.

ಸಿದ್ದೇಶ್ವರ ದೇವಾಲಯ

ಪೂರ್ವ ಕಾಲದಲ್ಲಿ ತಪಸ್ವಿಗಳೊಬ್ಬರು ಅಥಣಿಯ ಸ್ಥಳದ ಮಹತ್ವವನ್ನು ಅರಿತು ಎರಡು ದಿಕ್ಕಿಗೆ ತೊರೆಯು ಹರಿವ ಮಧ್ಯದ ಸ್ಥಳದಲ್ಲಿ ತಪಸನ್ನು ಆಚರಿಸಿ ತಪಃಸಿದ್ಧರಾದರು. ಅಲ್ಲದೇ ಇಲ್ಲಿ ಆಶ್ರಮವನ್ನು ಕಟ್ಟಿಕೊಂಡು ಅನೇಕ ವಟುಗಳಿಗೆ ವಿದ್ಯೆ ನೀಡಿದ್ದರಂತೆ. ಅವರೇ ಸಿದ್ದೇಶ್ವರ ಸ್ವಾಮಿಗಳು. ಈ ಸ್ಥಳದಲ್ಲಿ ಶ್ರೀ ಸಿದ್ದೇಶ್ವರರ ಕಟ್ಟೆಗದ್ದುಗೆ ಇದೆ. ಈ ಮಹಿಮರ ತಪಃಶಕ್ತಿಗೆ ತಲೆಬಾಗಿದ ಅಂದಿನ ವಿಜಾಪುರದ ಆದಿಲಶಾಹಿ ಮನೆತನದ ಅರಸು ಈ ಮಹಾತ್ಮರ ಗದ್ದಿಗೆಯ ಸುತ್ತ ಗುಮ್ಮಟಾಕಾರದ ಮಂದಿರವನ್ನು ನಿರ್ಮಿಸಿ, ಮೇಲೆ ಅರ್ಧಚಂದ್ರಾಕೃತಿಯ ಆಕಾರದ ಕಲಶವನ್ನು ಇರಿಸಿದೆ. ಇದೇ ಇಂದಿನ ಸಿದ್ದೇಶ್ವರ ದೇವಾಲಯ ಇದು ಹಿಂದೂ ಮುಸ್ಲಿಂರ-ಐಕ್ಯತೆಯ ಸಂಕೇತವಾಗಿದೆ.

ಇಂದಿಗೂ ಹಿಂದೂ-ಮುಸ್ಲಿಂ ಸಮುದಾಯದವರಲ್ಲದೆ ಉಳಿದ ಧರ್ಮದವರೂ ಜಾತಿ-ಬೇಧ-ಭಾವವಿಲ್ಲದೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಇಲ್ಲಿಯಾರು ಭಕ್ತಯಿಂದ ನಡೆದುಕೊಳ್ಳುವರೋ ಅವರ ಇಷ್ಟಾರ್ಥಗಳನ್ನು ಪೂರೈಸುತ್ತಾನಂತೆ. ಹೀಗೆ ಪೂರೈಸುವ ಅಭಯಹಸ್ತ ನೀಡುವುದರಿಂದ ಸಿದ್ದೇಶ್ವರ ಎಂಬ ಅಭಿದಾನ ಈ ಮಹಾತ್ಮರಿಗಿದೆ. ಸಿದ್ದೇಶ್ವರನೇ ಇಲ್ಲಿ ಪ್ರಭು, ಹಾಗೂ ಗ್ರಾಮದೇವತೆ. ಸಿದ್ದೇಶ್ವರ ಜಾತ್ರೆಯು ಕಾರ್ತಿಕ ಮಾಸದಲ್ಲಿ ಜರುಗುವುದು. ಈತ ಇವತ್ತಿಗೂ ತನ್ನ ಮಹಿಮೆಯನ್ನು ತೋರುವ ಎಂಬುದು ಜನರ ನಂಬಿಕೆ.

ಸುಕ್ಷೇತ್ರ ಗಚ್ಚಿನ ಮಠ

ಕಳೆದ ಶತಮಾನದ ಪೂರ್ವಾರ್ಧದಲ್ಲಿ ಅಥಣಿಯ ಗಚ್ಚಿನ ಮಠದಲ್ಲಿ ವಾಸವಾಗಿದ್ದ ತಪಸ್ವಿ ಶ್ರೀ

ಮುರುಘೇಂದ್ರ ಶಿವಯೋಗಿಗಳು. ಅಥಣಿಯಲ್ಲಿ ಪ್ರಸಿದ್ಧವಾದ ಗಚ್ಚಿನ ಮಠವು ಸ್ಥಾಪನೆಯಾದುದು ೧೬ನೇ ಶತಮಾನದಲ್ಲಿ ಶ್ರೀ ರೇವಣಸಿದ್ಧ ಸ್ವಾಮಿಗಳಿಂದ. ಇವರು ಲೋಕಸಂಚಾರಕೈಗೊಂಡು ಇಲ್ಲಿಗೆ ಬಂದು ನೆಲಿಸಿ ಧರ್ಮೋಪದೇಶವನ್ನು, ಜನರಲ್ಲಿ ಧರ್ಮ ಜಾಗೃತಿಯನ್ನು ಮಾಡುವುದರ ಮೂಲಕ ಅಥಣಿಯಲ್ಲಿ ಮಠವನ್ನು ಸ್ಥಾಪನೆ ಮಾಡಿ ಧಾರ್ಮಿಕ, ಸಾಮಾಜಿಕ, ಕಾರ್ಯಗಳನ್ನು ಹಾಗು ಅನ್ನದಾಸೋಹ ನಡೆಯುವಂತೆ ಮಾಡಿದರು. ಶ್ರೀಮಠವು ಮುರುಘಾ ಸಂಪ್ರದಾಯದ ವಿರಕ್ತ ಮಠವಾಗಿದೆ. ಅಂದು ಸ್ಥಾಪನೆಯಾದ ಶ್ರೀಮಠದಲ್ಲಿ ಅನೇಕ ಜನ ತಪಸ್ವಿಗಳು ತಪಃಗೈದಿದ್ದಾರೆ. ಅವರಲ್ಲಿ ಶ್ರೀ ಮುರುಘೇಂದ್ರ ಶಿವಯೋಗಿಗಳು ಪ್ರಮುಖರು.

ಅಥಣಿ ಪಟ್ಟಣದ ದಕ್ಷಿಣಕ್ಕಿರುವ ಕೃಷ್ಣತಟಾಕದ ನದಿ ಇಂಗಳಗಾವಿ ತಪಸ್ವಿಗಳ ಜನ್ಮಸ್ಥಳ. ಇಲ್ಲಿನ ಭಾಗೋಜಿ ಮಠದ ರಾಚಯ್ಯ ನೀಲಮ್ಮನವರ ಉದರದಲ್ಲಿ ೧೮೩೬ರಲ್ಲಿ (ಶಕೆ ೧೭೫೮) ಇವರ ಜನನವಾಯಿತು. ಗುರುಲಿಂಗ ಎಂದು ನಾಮಕರಣವೂ ಆಯ್ತು ಐದುವರ್ಷದಲ್ಲಿಯೇ ಇವರಲ್ಲಿಯ ಸಾಧು ಸುಶೀಲ ಗುಣವರ್ತನವನ್ನು ಕಂಡು ತಾಯ್ತಂದೆಗಳು ಇವನು ಯೋಗಿಯಾಗುವನೆಂದು ಅರಿತು ೧೮೪೧ರಲ್ಲಿ ಅಥಣಿ ಗಚ್ಚಿನ ಮಠದಲ್ಲಿ ಅಂದಿನ ಮಠಾಧೀಪತಿಗಳಾದ ಮರುಳ ಶಂಕರ ಶಿವಯೋಗಿಗಳಿಗೆ ಇವರನ್ನು ಅರ್ಪಿಸಿದರು. ಅಷ್ಟು ಚಿಕ್ಕ ವಯಸ್ಸಲ್ಲೇ, ತಂದೆ-ತಾಯಿ ಬಂದು-ಬಳಗ ಎಲ್ಲವನ್ನು ಮರೆತು, ಎಲ್ಲರನ್ನು ಗುರುಗಳಲ್ಲಿ ಕಂಡು ಗುರು ಸೇವಾ ತತ್ಪರರಾದರು.

ಅಥಣಿ ಪಟ್ಟಣದ ಪೂರ್ವಕ್ಕಿರುವ ತೆಲಸಂಗ ಹಿರೇಮಠದ ಶಿವಬಸವರು ಇವರಿಗೆ ದೀಕ್ಷೋಪನಯನವನ್ನು ಮಾಡಿದರು. ನಂತರ ಮಮದಾಪುರದ ಮುರುಘೇಂದ್ರ ಶಿವಯೋಗಿಗಳು ಲಿಂಗಾಂಗ ಸಾಮರಸ್ಯದ ವಿದ್ಯೆಯ ಜೊತೆಗೆ ಯೋಗಸಾಂಖ್ಯ, ನ್ಯಾಯ ಮುಂತಾದ ದರ್ಶನಗಳನ್ನು ಕೊಟ್ಟರಂತೆ, ನಂತರ ೧೮೪೨ರಲ್ಲಿ ಗಚ್ಚಿನ ಮಠದ ಎರಡನೇ ಗುರುಗಳಾದ ಗುರುಶಾಂತ ಸ್ವಾಮಿಗಳಿಂದ ಉಪದೇಶಾನುಗ್ರಹ ವಾಯ್ತು. ಹೀಗೆ ಉಭಯ ಗುರುಗಳ ಸೇವೆ ಮಾಡಿ ನಂತರ ೧೮೫೬ರಲ್ಲಿ ಅದೇ ಗುರುಶಾಂತ ಸ್ವಾಮಿಗಳಿಂದ ಸನ್ಯಾಶ್ರಮ ಸ್ವೀಕರಿಸಿದರು. ಗುರುಗಳು ಇವರಿಗೆ ಪದ್ದತಿಯಂತೆ ಕರಣಹಸಿಗೆ, ಮಿಶ್ರಾರ್ಪಣ, ಬಸವ ವಚನ, ಮೊದಲಾದ ವಚನ ಹೊತ್ತಿಗೆಗಳನ್ನು ಕೊಟ್ಟು ಹರಸಿ, ಮುರುಘದೇವನೆಂದು ನಾಮಕರಣ ಮಾಡಿದರು. ಗುರುಗಳ ಅಪ್ಪಣೆಯಂತೆ ಕಷಾಯ ವಸ್ತ್ರಧಾರಿಯಾಗಿ, ಪಾದಚಾರಿಯಾಗಿ ಇಡೀ ದೇಶವನ್ನು ಸುತ್ತಿ, ಏಕಾಂಗಿಯಾಗಿ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಿದರು. ತಮ್ಮ ತಾರುಣ್ಯಾವಸ್ಥೆಯನ್ನು ಈ ರೀತಿ ಪುಣ್ಯಕ್ಷೇತ್ರಗಳ ದರ್ಶನದಲ್ಲಿ, ಮಹಾತ್ಮರ ಸಂದರ್ಶನದಲ್ಲಿ ಹಾಗು ಶಿವಯೋಗ ಸಾಧನದಲ್ಲಿ ಕಳೆದರು.

೧೮೭೨ರಲ್ಲಿ ಕೃಷ್ಣಾ ನದಿಯು ಎರಡು ಕಡೆಗಳಿಂದ ಸುತ್ತುವರಿಯಲ್ಪಟ್ಟಾಗ ಮಧ್ಯದಲ್ಲಿರುವ ಗುಹೇಶ್ವರಗುಡ್ಡ ಎಂಬ ಪುಣ್ಯ ತಪೋವನದ ಗುಹೇಶ್ವರ ದೇವಾಲಯದ ಗುಹೆಯಲ್ಲಿ ಶಿವತಪಾನುಷ್ಠಾನ ಗೈದರು. ಅಲ್ಲಿ ಕಾಳಸರ್ಪವು ಅವರೆದುರು ಹೆಡೆ ಎತ್ತಿ ನಿಂತರೂ ತಪಸ್ವಿಗಳ ಲಕ್ಷ್ಯ ಮಾತ್ರ ಶಿವನತ್ತಾ ಇದ್ದಿತು. ಹೀಗೆ ಶಿವಾನುಷ್ಠಾನಗೈದು ಶಿವಯೋಗ ಸಿದ್ಧಪುರುಷರಾಗಿ ೧೮೭೬ರಲ್ಲಿ ಅಥಣಿಯ ಗಚ್ಚಿನಮಠಕ್ಕೆ

ಮರಳಿದರು. ಈ ನಡುವೆ ಕಾಡಿನಲ್ಲಿ ಹುಲಿಯು ಎದುರಾದರೂ ತಪಸ್ವಿಗಳ ಶಿವತೇಜಕ್ಕೆ ಅದು ಇವರಿಗೆ ಬಾಗಿ ನಮಿಸಿತಂತೆ, ಆಶೀರ್ವಾದ ಪಡೆಯಿತಂತೆ. ಮಾರ್ಗ ಮಧ್ಯದಲ್ಲಿ ಅಂಕಲಗಿ ಅಡವಿಸ್ವಾಮಿಗೆ ಶಿವಯೋಗ ಮಾರ್ಗದರ್ಶಕರಾದರು. ಆಗ ಅಥಣಿ ಗಚ್ಚಿನಮಠದಲ್ಲಿ ಗುರುಪೀಠದಲ್ಲಿದ್ದ ಚನ್ನಬಸವ ಸ್ವಾಮಿಗಳು ಇವರನ್ನು ಅತ್ಯಾನಂದದಿಂದ ಬರಮಾಡಿಕೊಂಡು ಮಠದ ಸ್ವಾಮಿತ್ವವಹಿಸಲು ತಿಳಿಸಿದರು. ಆಗ ತಪಸ್ವಿಗಳು ವಿನಯದಿಂದಲೇ ಮಠಾಧಿಕಾರ ತಿರಸ್ಕರಿಸಿ ವೈರಾಗ್ಯಮೆರೆದರು. ಗಚ್ಚಿನ ಮಠದ ಹಿತ್ತಲದಲ್ಲಿ ಕುಟೀರವನ್ನು ನಿರ್ಮಿಸಿಕೊಂಡು ತಪಸ್ಸು ಮಾಡಿದರು.

ಹೀಗಾಗಿ ಕರ್ನಾಟಕದ ಸಾಂಸ್ಕೃತಿಕ, ಧಾರ್ಮಿಕ ಕ್ಷೇತ್ರಕ್ಕೆ ಹಿನ್ನೆಲೆಯಾಗಿ ನಿಂತ ಪುಣ್ಯ ವ್ಯಕ್ತಿಯೆಂದು ಅವರ ಚರಿತ್ರೆಯಿಂದ ತಿಳಿಯುತ್ತದೆ. ಕ್ಷೇತ್ರ ಗಚ್ಚಿನ ಮಠದ ಹೆಸರು ಇತಿಹಾಸ ಪುಟದಲ್ಲಿ ಮೂಡಿರುವುದು ಈ ತಪಸ್ವಿಗಳಿಂದಲೇ ಆಗಿದೆ. ವೀರಶೈವ ಶಿವಯೋಗದ ಸಾಧಕರಲ್ಲಿ ಪ್ರಮುಖರಿವರು. ವೈರಾಗ್ಯಮೂರ್ತಿ ಗಳಾದ ಶ್ರೀ ಶಿವಯೋಗಿಗಳು ಮಠದ ಅಧಿಕಾರವಹಿಸಿಕೊಳ್ಳದೇ ಬಸವತತ್ವ ಪ್ರಚಾರದಲ್ಲಿ ತಮ್ಮನ್ನು ತೊಡಗಿಸಿಕೊಂಡು ನುಡಿದಂತೆ ನಡೆದವರು. ಇವರಿಂದ ಇಲ್ಲಿ ಅನೇಕ ಪವಾಡಗಳಾಗಿವೆ. ಸುಮಾರು ೧೯೧೫ರಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರು ಇಲ್ಲಿಗೆ ಬಂದಾಗ ಇವರ ದರ್ಶನ ಪಡೆದುಕೊಂಡು, ಭಾರತಕ್ಕೆ ಸ್ವಾತಂತ್ರ್ಯ ಸಿಗುವುದೆ? ಎಂದು ಕೇಳಿದಾಗ ಮಹಾತ್ಮರು ಸ್ವಾತಂತ್ರ್ಯ ಸಿಗುತ್ತದೆ. ಆದರೆ ಅದನ್ನು ಕಾಣುವ ಭಾಗ್ಯ ನನಗೂ, ನಿಮಗೂ ಇಲ್ಲ ಎಂದರಂತೆ. ಅಂತೆಯೇ ಸ್ವಾತಂತ್ರ್ಯ ಪೂರ್ವದಲ್ಲಿ ಇವರಿಬ್ಬರೂ ಕಾಲವಾದರು. ಮೈಸೂರು ಒಡೆಯರು, ಶಿರಸಂಗಿ ಲಿಂಗರಾಜರು ಅಲ್ಲದೆ ಹಲವಾರು ಜನ ಗಣ್ಯರು ಇಲ್ಲಿ ಭೇಟಿ ನೀಡಿ ಶಿವಯೋಗಿಗಳ ದರ್ಶನ ಪಡೆದಿದ್ದಾರೆ. ಪ್ರತಿವರ್ಷ ಶಿವರಾತ್ರಿಯಲ್ಲಿ ಶರಣ ಸಂಸ್ಕೃತಿ, ಉತ್ಸವ, ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ದವನದ ಹುಣ್ಣಿಮೆಯಂದು ಶ್ರೀ ಶಿವಯೋಗಿಗಳ ಜಾತ್ರೆ, ರಥೋತ್ಸವ ೫ ದಿನಗಳವರೆಗೆ ಅತೀ ಸಂಭ್ರಮ-ಸಡಗರದಿಂದ ನಡೆಯುತ್ತದೆ. ಎಲ್ಲಾ ಧರ್ಮೀಯರು ಬೇಧ-ಭಾವ ಮರೆತು ಶ್ರದ್ಧೆ ಹಾಗೂ ಭಕ್ತಿಯಿಂದ ಕಾರ್ಯಕ್ರಮದಲ್ಲಿ ಭಾಗವಹಿಸುವುದನ್ನು ಕಾಣಬಹುದು. ಮಠದಲ್ಲಿ ಶ್ರೀ ಶಿವಯೋಗಿಗಳ ಗುರುಗಳಾದ ಶ್ರೀ ಮರುಳಶಂಕರ ಸ್ವಾಮಿಗಳ ಗದ್ದುಗೆ ಹಾಗೂ ಶಿವಯೋಗಿಗಳ ಸಮಕಾಲೀನರು ಅಂದಿನ ೯ನೇ ಮಠಾದೀಶರಾದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳ ಗದ್ದುಗೆಗಳು ಇಲ್ಲಿವೆ. ಶ್ರೀ ಮುರುಘೇಂದ್ರ ಶಿವಯೋಗಿಗಳ ಪ್ರಭಾವ ಅಥಣಿಯನ್ನು ವಿಶ್ವಕ್ಕೆ ಪರಿಚಯವಾಗುವಂತೆ ಮಾಡಿದೆ. ಅಂದಿನ ಮಠಾಧಿಕಾರಿಗಳಾದ ಶ್ರೀ ಮ.ನಿ.ಪ್ರ.ಚನ್ನಬಸವ ಮಹಾಸ್ವಾಮಿಗಳು ಮಠದಲ್ಲಿ ಸಾಕಷ್ಟು ಅಭಿವೃದ್ಧಿಪರ ಕಾರ್ಯಗಳನ್ನು ಕೈಕೊಂಡಿರುವುದನ್ನು ಕಾಣಬಹುದು.

ಶ್ರೀ ಮೋಟಗಿ ಮಠ

ಮಠ-ಪೀಠಗಳ ಗತಕಾಲದ ವೈಭವ, ವೀರಶೈವ ಉಜ್ವಲ ಇತಿಹಾಸ ಪರಂಪರೆ ಚರಿತ್ರೆಯನ್ನು ಮೆಲುಕು ಹಾಕುತ್ತಾ, ಹುಡುಕುತ್ತಾ ಹೋದಂತೆ ಪ್ರತಿಯೊಂದು ಮಠಮಾನ್ಯಗಳಿಗೆ ತನ್ನದೇ ಆದ ಒಂದು

ಭವ್ಯ ಇತಿಹಾಸ ಕಂಡುಬರುವುದು ಸ್ವಾಭಾವಿಕ. ವೀರಶೈವ ಮಠಗಳು ಈ ನಾಡಿನ ಸಂಸ್ಕೃತಿಯ ಪ್ರತೀಕಗಳು ಪರಂಪರಾಗತ ಮೌಲ್ಯಗಳನ್ನು ಎತ್ತಿಹಿಡಿದು ಧರ್ಮಪ್ರಚಾರ ಮಾಡುವ ಕೇಂದ್ರಗಳಾಗಿವೆ. ಈ ಹಿನ್ನೆಲೆಯಲ್ಲಿ ದೀನ-ದಲಿತರಿಗೆ ಅನ್ನ-ನೀರು-ಶಿಕ್ಷಣ-ಔಷಧೋಪಚಾರಗಳನ್ನು, ಸಾಹಿತ್ಯಸೃಷ್ಟಿ ಒದಗಿಸುವ ಕಾರ್ಯವನ್ನು ಎಂದಿನಿಂದಲೂ ನಿರ್ವಹಿಸಿಕೊಂಡು ಬಂದಿವೆ. ಅಂತಹ ಇತಿಹಾಸ ಹೊಂದಿರುವ ಮಠಗಳಲ್ಲಿ ಅಥಣಿ ಪರಿಸರದ ಮೋಟಗಿ ಮಠವೂ ಒಂದು.

ಸುಮಾರು ಕ್ರಿ.ಶ. ೧೬೫೦ರಲ್ಲಿ ಶ್ರೀಮಹಾಂತ ಸ್ವಾಮಿಗಳು ಒಂದು ಚಿಕ್ಕ ಕುಟೀರದಲ್ಲಿ ವಾಸವಾಗಿದ್ದರು. ಸಿಂಧಗಿ ತಾಲೂಕಿನ ಮೋಟಗಿ ಗ್ರಾಮದ ಸದ್ಭಕ್ತರು ವ್ಯಾಪಾರ ಮಾಡುವುದಕ್ಕಾಗಿ ಅಥಣಿಗೆ ಆಗಮಿಸಿ ಶ್ರೀಗಳ ಹರಕೆಯಿಂದ ಅಭಿವೃದ್ಧಿಯನ್ನು ಹೊಂದಿ ಶ್ರೀಮಠವನ್ನು ವಿನೂತನವಾಗಿ ನಿರ್ಮಿಸಿದರಂತೆ. ಶ್ರೀ ಮಠದ ಪರಂಪರೆಯನ್ನು ಬೆಳಗಿದ ಶ್ರೀಗಳು ಹಲವರು. ಶ್ರೀ.ಮ.ನಿ.ಪ್ರ., ಮಹಾಂತ ಸ್ವಾಮಿಗಳು, ಶ್ರೀ ಮ.ನಿ.ಪ್ರ, ಶಿವಪಂಚಾಕ್ಷರಿ ಮಹಾಸ್ವಾಮಿಗಳು, ಶ್ರೀ ಮ.ನಿ.ಪ್ರ. ಜಡೆಯಯ್ಯ, ಮಹಾಸ್ವಾಮಿಗಳು, ಶ್ರೀ ಮ.ನಿ.ಪ್ರ. ಸಂಗನ ಬಸವ ಮಹಾಸ್ವಾಮಿಗಳು, ಶ್ರೀ ಮ.ನಿ.ಪ್ರ., ಮುರುಘೇಂದ್ರ ಮಹಾಸ್ವಾಮಿಗಳು, ಇಂದಿನ ಸ್ವಾಮಿಗಳಾದ ಶ್ರೀ ಮ.ನಿ.ಪ್ರ. ಪ್ರಭುಚನ್ನಬಸವ ಮಹಾಸ್ವಾಮಿಗಳು, ಶ್ರೀ ಮಠದ ಸರ್ವಪೂಜ್ಯರು ಲಿಂಗಾನುಷ್ಠಾನಗಳಲ್ಲಿ ಶ್ರದ್ಧೆಯುಳ್ಳವರಾಗಿ ಸಾಹಿತ್ಯದ ಪೋಷಕರು, ಆಗಿದ್ದಾರೆ. ಹೀಗೆ ಸುಮಾರು ಏಳು ಜನ ಮಹಾಸ್ವಾಮಿಗಳು ಪೀಠಾರೋಹಣ ಮಾಡಿದ್ದು, ಈಗಿನ ಪ್ರಭುಚನ್ನಬಸವ ಸ್ವಾಮಿಗಳು ಎಂಟನೆಯವರು. ಸುಮಾರು ೩೫೦ ವರ್ಷಗಳ ಸುದೀರ್ಘ ಇತಿಹಾಸ ಹೊಂದಿದ ಶ್ರೀಮಠದ ಪರಂಪರೆಯು ಇಂದು ಗಡಿನಾಡ ಭಾಗದಲ್ಲಿ ಕನ್ನಡವನ್ನು ಗಟ್ಟಿಯಾಗಿ ಇರಿಸುವ ಕುರಿತು ಪ್ರಶಂಶನೀಯ ಕೆಲಸ ಮಾಡುತ್ತಿದೆ.

ಶ್ರೀ ರಾಘವೇಂದ್ರ ಸ್ವಾಮಿಗಳ ಮಠ

ಕಲಿಯುಗದ ಹರಿ-ಗುರುಗಳೆಂದರೆ ತಿರುಪತಿ ತಿಮ್ಮಪ್ಪ ಮತ್ತು ಮಂತ್ರಾಲಯದ ರಾಗಪ್ಪ ಎನ್ನುವ ಮಟ್ಟಿಗೆ ಇಂದು ಭಕ್ತರನ್ನು ತಮ್ಮತ್ತ ಸೆಳೆಯುವ, ಆಶೀರ್ವದಿಸುವ, ಬೇಡಿದ್ದು ಕೊಡುವ ದೇವತೆಗಳಾಗಿ ಕಂಡುಬರುತ್ತಿರುವ ದೇವತೆಗಳು ಇವರು. ಜಾತಿ-ಮತ, ಪಂಥ, ಪಂಗಡ, ಲಿಂಗ ವ್ಯತ್ಯಾಸವಿಲ್ಲದೆ ಇಂದು ಎಲ್ಲೆಡೆ ಪೂಜೆಗೊಳ್ಳುವ ಎಲ್ಲರ ಮೆಚ್ಚಿನ ದೇವರು-ಗುರುಗಳೆಂದರೆ ತಿರುಪತಿಯ ಶ್ರೀನಿವಾಸ, ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳು. ಆಂಧ್ರಪ್ರದೇಶದ ಮಂತ್ರಾಲಯದಷ್ಟು ಖ್ಯಾತಿಯನ್ನು ಪಡೆಯುತ್ತಿರುವ ಅಥಣಿ ಪರಿಸರವು ಇಂದು ಅಭಿನವ ಮಂತ್ರಾಲಯವೆಂದು ಕರೆಯಿಸಿಕೊಳ್ಳುತ್ತಿದೆ. ಇದಕ್ಕೆ ಕಾರಣ ಇಲ್ಲಿಯ ರಾಯರ ಮಠವು. ದಿ.ಭೀಮದಾಸರಿಂದ ಸ್ಥಾಪಿಸಲ್ಪಟ್ಟ ರಾಘವೇಂದ್ರ ಸ್ವಾಮಿಗಳ ಮಠವು, ಕರ್ನಾಟಕ ಮತ್ತು ಮಹಾರಾಷ್ಟ್ರದ ಭಕ್ತರನ್ನು ಆಕರ್ಷಿಸುತ್ತಿದೆ. ಅಲ್ಲದೆ ಶ್ರಾವಣ ಮಾಸದ ಪೌರ್ಣಿಮೆ ಅವಧಿಯಲ್ಲಿ ರಾಘವೇಂದ್ರ ಆರಾಧನಾ ಮಹೋತ್ಸವ ಜರುಗುವುದು. ಸುತ್ತಮುತ್ತಲಿನ ಭಕ್ತಾದಿಗಳು ಪಾಲುಗೊಳ್ಳುವರು. ಇವುಗಳಲ್ಲದೆ ಇಲ್ಲಿ ಅತೀಪ್ರಾಚೀನವಾದ ರಾಮಲಿಂಗ ದೇವಾಲಯ ಎಲ್ಲಮ್ಮ, ವಿರೂಪಾಕ್ಷಲಿಂಗ,

ಗಣಪತಿ ದೇವಾಲಯಗಳಿದ್ದು, ಹಲವಾರು ಜೈನ ಬಸದಿಗಳು ಇವೆ ಮತ್ತು ಮಸೀದಿಗಳು, ಮಹಬೂಬಸುಬಾನಿ ದರ್ಗಾ, ಕರಿ ಮಸೂತಿ ಪ್ರಸಿದ್ಧವಾಗಿದೆ.

ಶೆಟ್ಟರ ಮಠ

ಸುಮಾರು ೧೬೮೦ರಲ್ಲಿ ರುದ್ರಮುನಿ ಹೆಸರಿನ ವಿರಕ್ತ ಸ್ವಾಮಿಗಳು ಅಥಣಿಗೆ ಬರುತ್ತಾರೆ. ಅವರಿಗೆ ಇಲ್ಲಿನ ಪ್ರಸಿದ್ಧ ಶೆಟ್ಟಿ ಮನೆತನದ ಹಿರಿಯರು ಊರ ಮಧ್ಯದ ತಮ್ಮ ಮನೆ ಹಾಗೂ ಹೊಲವನ್ನು ದಾನವಾಗಿ ಕೊಟ್ಟು ಅವರಿಗೆ ಆಸ್ಥಳದಲ್ಲಿ ವಾಸಿಸಲು ಅನುಕೂಲ ಮಾಡಿಕೊಡುತ್ತಾರೆ. ಭಕ್ತರೆಲ್ಲ ಕೂಡಿ, ಕುಮಾರಸಮಯದ ಮಠವನ್ನು ಕಟ್ಟಿರುತ್ತಾರೆ. ಆ ಸ್ಥಳವನ್ನು ದಾನವಾಗಿ ಶೆಟ್ಟರು ಕೊಟ್ಟಿದ್ದರಿಂದ ಶೆಟ್ಟರಮಠವೆಂಬ ಹೆಸರು ಬಂದಿದೆ. ಇಲ್ಲಿ ಆಗಿ ಹೋದಂತಹ ಮರುಳಸಿದ್ದ ಶಿವಯೋಗಿಗಳು ತಪಸ್ವಿಗಳು, ಇಷ್ಟಲಿಂಗದೊಡನೆ ಮಾತಾಡುವ ಅಪೂರ್ವ ಸಿದ್ದಪುರುಷರು ಆಗಿದ್ದರಂತೆ. ಅಥಣಿಯ ಆಧ್ಯಾತ್ಮದ ಔನತ್ಯದ ಕೀರ್ತಿಗೆ ಕಲಶವಿತ್ತವರು ಮರುಳಸಿದ್ದರು. ಇವರ ಬದುಕೆ ಒಂದು ಪವಾಡವಾಗಿತ್ತು. ಮಠದಲ್ಲಿ ಶ್ರೀಮರುಳಸಿದ್ದ ಶಿವಯೋಗಿಗಳ ಕತೃಗದ್ದುಗೆ ಇದೆ. ಇಂದಿನ ಮಠಾಧಿಪತಿಗಳಾದ ಶ್ರೀಮ.ನಿ.ಪ್ರ.ಶಂಕರ ಮಹಾಸ್ವಾಮಿಗಳು ಹಲವಾರು ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿರುವುದನ್ನು ಕಾಣಬಹುದು.

ಗೋಟಖಿಂಡಿ ಮಠ

ಕ್ರಿ.ಶ. ೧೬೯೦ರಲ್ಲಿ ಶ್ರೀ ಶಿವಲಿಂಗಯ್ಯ ಹೆಸರಿನ ವಿರಕ್ತ ಸ್ವಾಮಿಗಳು ಇಲ್ಲಿಗೆ ಬಂದಾಗ ಊರಿನ ಗೋಟಖಿಂಡಿ ಮನೆತನದ ಹಿರಿಯರು ತಮ್ಮ ಜಾಗೆಯಲ್ಲಿ ಮಠಕಟ್ಟಿಸಿಕೊಟ್ಟು ಸ್ವಲ್ಪ ಜಮೀನನ್ನು ದಾನವಾಗಿ ಕೊಟ್ಟಿದ್ದರಂತೆ. ಅದೇ ಇಂದಿನ ಗೋಟಖಿಂಡಿ ಮಠ. ಇಲ್ಲಿ ಲಿಂಗೈಕ್ಯ ಮಹಾಂತಸ್ವಾಮಿಗಳ ಗದ್ದುಗೆ ಇದೆ. ಈಗ ಈ ಮಠವು ಜಂಗಮಲಿಂಗ ಕ್ಷೇತ್ರವಾದ ಶ್ರೀಮೋಟಗಿಮಠದ ಪೀಠಾಧಿಪತಿಗಳಾದ ಪ್ರಭುಚನ್ನಬಸವಮಹಾಸ್ವಾಮಿಗಳ ಅಧೀನದಲ್ಲಿದ್ದು ಮಠ ನವೀಕರಣಗೊಂಡಿದೆ. ಇಲ್ಲಿ ಹಲವಾರು ಜನಜಾಗೃತಿಯಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದುಕೊಂಡು ಬರುತ್ತಿವೆ. ಅಥಣಿಯ ಗಚ್ಚಿನಮಠ, ಮೋಟಗಿ ಮಠ, ಗೋಟಖಿಂಡಿ ಮಠವು ತ್ರಿವೇಣಿ ಸಂಗಮದಂತಿದೆ.

ಪುರಾತನೇಶ್ವರ ದೇವಾಲಯ

೬೩ ಪುರಾತನರ ಪೂಜಾ ಮಹೋತ್ಸವದ ಸ್ಮಾರಕವಾಗಿ ೧೯೧೮ರಲ್ಲಿ ಶ್ರೀ ಶಿವಯೋಗಿಗಳ ಪರುಷ ಹಸ್ತದಿಂದ ಲಿಂಗ ಪ್ರತಿಷ್ಠೆಯಾಗಿರುವ ಪುರಾತನೇಶ್ವರ ದೇವಾಲಯ ಊರ ಹೊರಗೆ ಇದೆ. ಇದರ ಸಮೀಪದಲ್ಲಿಯೇ ಶ್ರೀ ಶಿವಯೋಗಿಗಳ ಅನುಷ್ಠಾನ ಮಾಡಿದ ಗವಿಮಠವು ಪ್ರಶಾಂತವಾದ ಸ್ಥಳದಲ್ಲಿದೆ. ಈ ಮಠದ ಒಳಗೆ ಒಂದು ಸುಂದರವಾದ ಗವಿಯು ಇದೆ. ಇಲ್ಲಿ ಗಚ್ಚಿನ ಮಠಾಧಿಕಾರಿಗಳಾದ ನಾಲ್ಕನೆಯ ಮತ್ತು ೭ನೆಯ ಶ್ರೀ ಮುರುಘೇಂದ್ರ ಸ್ವಾಮಿಗಳ ಹಾಗೂ ೨ನೆಯ ಗುರುಶಾಂತ ಸ್ವಾಮಿಗಳ ಗದ್ದುಗೆಗಳು ಇವೆ. ಸ್ವಲ್ಪದೂರದಲ್ಲಿ ಶ್ರೀ ಶಿವಯೋಗಿಗಳ ಆಶೀರ್ವಾದದ ಫಲವಾಗಿ ರೂಪುಗೊಂಡ ಹೊಸಗುಂಡ

(ಅಪ್ಪಗಳೆವರ ಗುಂಡ) ಇದೆ. ಶ್ರೀ ಶಿವಯೋಗಿಗಳು ಪ್ರತಿದಿನ ಪ್ರಾತಃಕಾಲ ಸಂಚಾರಕ್ಕೆ ಬಂದಾಗ ಇಲ್ಲಿಯ ಬಾವಿಯಲ್ಲಿರುವ ನೀರಿನಿಂದ ಕೈತೊಳೆದುಕೊಳ್ಳುತ್ತಿದ್ದರಂತೆ. ಕಾರಣ ಪಾವನತೀರ್ಥವಾಗಿ ಇಂದಿಗೂ ಬತ್ತದ ಗಂಗೆಯಾಗಿ ಶೋಭಿಸುತ್ತಿದೆ. ಸಾಕಷ್ಟು ಭಕ್ತಸಮೂಹ ಇಲ್ಲಿ ದರುಶನಗೈದು ನೀರನ್ನು ಕುಡಿಯುವ ಪದ್ಧತಿಯನ್ನು ಕಾಣಬಹುದು. ಶರಣ ಸಂಸ್ಕೃತಿಯನ್ನೇ ಚಾಚೂತಪ್ಪದೇ ಅನುಸರಿಸಿಕೊಂಡು ಬಂದ ಈ ಪರಿಸರದ ಮಠಗಳು ಅಥಣಿಗೆ ಆಧ್ಯಾತ್ಮಿಕ ದೀಕ್ಷೆ ಕೊಟ್ಟಿವೆ.

ಅಮೃತ ಲಿಂಗೇಶ್ವರ ದೇವಾಲಯ

ಊರಮಧ್ಯದಲ್ಲಿ ಜಕ್ಕಣನ ಶಿಲ್ಪಕಲೆಗಳನ್ನು ನೆನಪಿಸುತ್ತಿರುವ ಅಮೃತ ಲಿಂಗೇಶ್ವರ ಗುಡಿಯು ಇದೆ. ಇದು ಪುರಾತನ ದೇವಾಲಯವಾಗಿದ್ದು, ಇಲ್ಲಿ ಚಾಲುಕ್ಯ ಶೈಲಿಯ ಕಲಾತ್ಮಕ ಸ್ಥಂಭದೊಂದಿಗೆ, ನವರಂಗ, ಗರ್ಭಗೃಹ, ಮುಖಮಂದಿರ ಇದೆ. ನವರಂಗದ ಜಲಾಂಧ್ರಗಳು ಆಕರ್ಷಿಸುವವು. ಗರ್ಭಗೃಹದಲ್ಲಿ ಕಲಾತ್ಮಕ ಚಿತ್ರಗಳಿವೆ. ಗರ್ಭಗೃಹದಲ್ಲಿ ಈಶ್ವರ ಮತ್ತು ನಂದಿ ವಿಗ್ರಹಗಳಿವೆ. ಪ್ರತಿದಿನವು ಪೂಜೆಯು ನಡೆಯುತ್ತಿದೆ. ಶಿಖರವು ಹಾನಿಗೊಳಗಾಗಿದೆ. ಸ್ವಲ್ಪ ಅಂತರದಲ್ಲಿಯೇ ಕಲ್ಮೇಶ್ವರ ದೇವಾಲಯ, ನರಸಿಂಹದೇವಾಲಯ, ವಿರೂಪಾಕ್ಷ ದೇವಾಲಯ, ಮಲ್ಲಿಕಾರ್ಜುನ ದೇವಾಲಯ, ವೀರಣ್ಣನ ದೇವಾಲಯ, ಅಂಭಭವಾನಿ ಗುಡಿ, ದಕ್ಷಿಣಕ್ಕೆ ವಿಶಾಲವಾದ ಮಾರುತಿ (ಹನುಮನ) ಮಂದಿರ, ಲಕ್ಷ್ಮಿವೆಂಕಟೇಶ್ವರ ದೇವಾಲಯ, ಬೀರಪ್ಪನ ಗುಡಿ, ಗಣಪತಿ ದೇವಾಲಯಗಳು ಇವೆ.

ಅವರಖೋಡ

ಅವರಖೋಡ ಹನುಮಂತನೆಂದು ಪ್ರಸಿದ್ಧವಾದ ಈ ಗ್ರಾಮ ಅಥಣಿಯಿಂದ ೧೧ ಕಿ.ಮೀ. ದೂರದಲ್ಲಿದೆ. ಅಮರಕೂಟ ಎಂಬುದು ಇದರ ಪ್ರಾಚೀನ ಹೆಸರಗಾರಿಬಹುದೆಂದು ತಿಳಿದುಬರುತ್ತದೆ. ಇಲ್ಲಿಯ ಹನುಮಂತ ದೇವಾಲಯ ಪ್ರಾಚೀನವಾಗಿದೆ. ಹನುಮಂತನ ಮೂರ್ತಿ ಸ್ವಯಂಭೂವಾಗಿದ್ದು ಜಾಗೃತ ಸ್ಥಾನವೆಂಬ ಪ್ರಸಿದ್ಧಿಯನ್ನು ಪಡೆದಿದೆ. ಸಾಕಷ್ಟು ಭಕ್ತರು ಇಲ್ಲಿ ಆಗಮಿಸುತ್ತಾರೆ. ಹನುಮ ಜಯಂತಿಯಂದು ಇಲ್ಲಿ ಉತ್ಸವ, ಅನ್ನಸಂಪರ್ತಣೆ ಕಾರ್ಯಕ್ರಮ ನಡೆದುಕೊಂಡು ಬರುತ್ತದೆ.

ಸ್ವಯಂಭು ಆಂಜನೇಯನಲ್ಲಿ ವಿಶೇಷ ಶಕ್ತಿಯಿದೆಯೆಂದು ನಂಬಿರುವ ಅಥಣಿಯ ಮತ್ತು ನೆರೆಹೊರೆಯ ಭಕ್ತಾದಿಗಳು ಅವರಕೊಡಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಹರಕೆಗಳನ್ನು ಹೊರುತ್ತಾರೆ. ಹರಕೆಯು ಈಡೇರಿದಾಗ ತಮ್ಮ ಸೇವೆಯನ್ನು ಅರ್ಪಿಸುತ್ತಾರೆ. ಪ್ರತಿಶನಿವಾರದ ದಿವಸ ಇಲ್ಲಿ ಎಲ್ಲಾ ವರ್ಗದ, ವರ್ಣದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ದರುಶನ ಪಡೆಯುತ್ತಾರೆ. ಪ್ರತಿವರ್ಷ ಶ್ರಾವಣ ಮಾಸದಲ್ಲಿ ಕೊನೆಯ ಸೋಮವಾರ ವಿಶೇಷವಾದ ಪೂಜೆ-ಪುನಸ್ಕಾರಗಳು ನಡೆಯುತ್ತವೆ. ಕಾರ್ತೀಕಮಾಸದಲ್ಲಿಯು ವಿಶೇಷ ಪೂಜೆ ನಡೆಯುತ್ತಿದ್ದು ಲಕ್ಷ ದೀಪೋತ್ಸವ ಕಾರ್ಯಕ್ರಮ ನೆರವೇರುತ್ತದೆ. ಅವರ ಕೋಡು ಅಂಜನೇಯನ ದೇವಸ್ಥಾನದ ಬೀದಿಯಲ್ಲಿ ದೀಪೋತ್ಸವವನ್ನು ಮಾಡಲಾಗುತ್ತಿದೆ.

ಹರಕೆ ಹೊತ್ತ ಭಕ್ತಾದಿಗಳು ದೇವರಿಗೆ ನಾನಾ ರೀತಿಯ ಕಾಣಿಕೆಗಳನ್ನು ಕೊಡುತ್ತಾರೆ. ವಿರೂಪಾಕ್ಷಲಿಂಗ, ಗಣಪತಿ ದೇವಾಲಯಗಳಿದ್ದು ಹಲವಾರು ಜೈನ ಬಸದಿಗಳಿವೆ. ಮತ್ತು ಮಸೀದಿಗಳೂ ಇವೆ. ಇಲ್ಲಿ ಮಹಬೂಬಸುಬಾನಿ ದರ್ಗಾ, ಕರಿಮಸೂತಿ ಪ್ರಸಿದ್ಧವಾಗಿವೆ.

ಹಳ್ಯಾಳ

ಇದಕ್ಕೆ ಮೊದಲು ಹರಿಹರಕ್ಷೇತ್ರವೆಂದು ಹೆಸರಿದ್ದುದ್ದಾಗಿ ಪ್ರತೀತಿ. ಇಲ್ಲಿ ಭರಮಪ್ಪ (ಬ್ರಹ್ಮ)ನ ದೇವಾಲಯ ಪ್ರಸಿದ್ಧವಾಗಿದೆ. ಹಳ್ಯಾಳದಲ್ಲಿ ಶ್ರೀ ಮುರುಘೇಂದ್ರ ಶಿವಯೋಗಿಗಳ ಶಿಷ್ಯರಾದ ಶ್ರೀ ಗುರುಸಿದ್ದೇಶ್ವರರ ಮಠವಿದೆ.

ದರೂರ

ಅಥಣಿಯಿಂದ ೧೦ ಕಿ.ಮೀ. ದೂರದಲ್ಲಿರುವ ಕೃಷ್ಣಾ ನದಿಯ ತೀರದ ಊರು. ದೌಮ್ಯನೆಂಬ ಋಷಿಯು ಇಲ್ಲಿ ತಪಸ್ಸು ಮಾಡಿದ ಕಾರಣದಿಂದ ಇದರ ಪ್ರಾಚೀನ ಹೆಸರು ದೌಮ್ಯಪುರ ಎಂದಿದ್ದು ಇದೇ ನಂತರ ದರೂರ ಆಗಿದೆಯೆಂದು ಹೇಳುತ್ತಾರೆ. ಇಲ್ಲಿ ಅತ್ತಿಮರ ಇದೆ. ಇದು ಶಾಂತ ತಾಣವಾಗಿದೆ. ಜನರು ಅದನ್ನು ಬ್ರಹ್ಮನ ವಾಸಸ್ಥಾನದ ಗಿಡವೆಂದು ಪೂಜಿಸುತ್ತಾರೆ. ಈ ಊರಿನ ಮಾರುತಿ ಮೂರ್ತಿ ಪ್ರಸಿದ್ಧವಾಗಿದೆ. ಊರು ಅಗಸೆಯಲ್ಲಿ ಅವ್ವ ನಿಂಗವ್ವನ ಸಮಾದಿ (ಗುಡಿ) ಇದೆ. ಜನರು ಇಲ್ಲಿ ಭಕ್ತಿಯಿಂದ ನಡೆದುಕೊಳ್ಳುವರು. ನಿಂಗವ್ವ ಗಾಣಿಗರ ಮನೆತನದ ಸಾಧ್ವಿಯಾಗಿದ್ದು ಅವಳ ತಲೆಯಲ್ಲಿ ಎರಡು ಕೋಡುಗಳಿದ್ದುವಂತೆ. ನೀರು ತರುವಾಗ ಕೋಡುಗಳ ಮೇಲೆ ಕೊಡ ತಿರುಗುತ್ತಿತ್ತೆಂದು ಹೇಳುತ್ತಾರೆ. ಧಾರ್ಮಿಕ ಪರಂಪರೆಯ ಅವಳು ಶ್ರೀಶೈಲ ಮಲ್ಲಿಕಾರ್ಜುನನ ಪರಮ ಭಕ್ತಳಾಗಿದ್ದಳು. ಕಾಲ್ನಡಿಗೆಯಿಂದ ಒಂದೆ ದಿನಕ್ಕೆ ಶ್ರೀಶೈಲಕ್ಕೆ ಹೋಗಿ ಮರಳಿ ಬಂದ ಪವಾಡ ಅವಳದು.

ಹುಲಗಬಾಳಿ

ಇದು ಕೃಷ್ಣಾನದಿಯ ದಡದಲ್ಲಿದೆ. ಇಲ್ಲಿ ಬೀರಪ್ಪ ದೇವರ ಗುಡಿ ಪ್ರಸಿದ್ಧವಾಗಿದ್ದು ಯುಗಾದಿಯಲ್ಲಿ ಜಾತ್ರೆ ನಡೆಯುತ್ತದೆ.

ನದಿ ಇಂಗಳಗಾಂವ

ಇದು ಮುರುಘೇಂದ್ರ ಶಿವಯೋಗಿಗಳು ಜನಿಸಿದ ಪವಿತ್ರ ಸ್ಥಳ. ಇವರು ಜನಿಸಿದ ಮನೆಯನ್ನೆ ದೊಡ್ಡ ಮಠವನ್ನಾಗಿ ಮಾಡಲಾಗಿದೆ. ಅಲ್ಲಿ ಅನ್ನದಾನ, ಪುರಾಣ ಪ್ರವಚನಗಳು ನಡೆಯುತ್ತವೆ. ಇಲ್ಲಿ ಬಸವಣ್ಣನ ಗುಡಿ ಇದ್ದು, ಕರಿಯ ಉಸುಕಿನಿಂದ ತಯಾರಾದ ಬಸವಣ್ಣನ ಮೂರ್ತಿಯು ಬಹಳ ಸುಂದರವಾಗಿದೆ. ಬಸವ ಜಯಂತಿಯನ್ನು ಅತ್ಯಂತ ವಿಜೃಂಬಣೆಯಿಂದ ಆಚರಿಸಲಾಗುವುದು.

ತೀರ್ಥ

ಪ್ರಾಚೀನ ಕಾಲದಿಂದಲೂ ತೀರ್ಥಸ್ಥಾನವೆನಿಸಿದ ಈ ಗ್ರಾಮದಲ್ಲಿನ ಒಂದು ಜೈನ ಬಸದಿ ಸುಂದರವಾಗಿದೆ.

ಸಪ್ತಸಾಗರ

ಸಪ್ತಸಾಗರ ಇದು ಪುರಾಣ ಪ್ರಸಿದ್ಧಿಯ ಪುಣ್ಯಕ್ಷೇತ್ರವಾಗಿದೆ. ಪೌರಾಣಿಕ ಹಿನ್ನೆಲೆ ಹೊಂದಿದೆ. ಈ ಗ್ರಾಮ ಮಹಾಭಾರತದ ಕಥೆಯೊಂದಿಗೆ ಸಂಬಂಧ ಹೊಂದಿದೆ. ಮಹಾಭಾರತದ ಕೊನೆಯ ಅರಸ ಜನುಮೇಜಯನು ಸರ್ಪಯಾಗ ಮಾಡಿದ ಸ್ಥಳವು ಇದೇ ಎಂದು ಹೇಳುತ್ತಾರೆ. ಸರ್ಪಯಾಗ ಪೂರ್ತಿಯಾಗಲಿಲ್ಲವೆಂದು ರಾಜನು ನೊಂದು ತೀರ್ಥಯಾತ್ರೆಗೆ ಹೊರಟಾಗ ಉತ್ತರವಾಹಿನಿ ಕೃಷ್ಣಾನದಿಯ ತಟಾಕದ ಈ ಊರಿನಲ್ಲಿ ಬಕಾಲ ಋಷಿಗಳನ್ನು ಭೆಟ್ಟಿಯಾಗಲು ಅವರು ಸರ್ಪಯಾಗ ಪೂರ್ಣಮಾಡುವಂತೆ ಅಶೀರ್ವದಿಸಿದರಂತೆ. ಇದಕ್ಕೆ ಆಧಾರವೆಂಬಂತೆ ಊರ ಸುತ್ತಲೂ ಕರಿ ಮಣ್ಣಿನ ಭೂಮಿಯಿದ್ದರೂ ಪೂರ್ವಭಾಗದ ಒಂದು ಸ್ಥಳದಲ್ಲಿ ಮಾತ್ರ ಶುಭ್ರ ಬೂದಿ ಮಾತ್ರ ದೊರೆಯುತ್ತದೆ. ಇದರಿಂದ ವಿಭೂತಿ ತಯಾರಿಸುತ್ತಾರೆ. ಅಲ್ಲದೆ ಪುರಾಣ ಪ್ರಸಿದ್ಧ ಸಪ್ತರ್ಷಿಗಳು ತಮ್ಮೊಡನೆ ತಂದ ಸಪ್ತಸಮುದ್ರಗಳ ನೀರನ್ನು ಉತ್ತರಾಭಿಮುಖಿಯಾದ ಕೃಷ್ಣೆಯಲ್ಲಿ ಬೆರೆಸಿ ಪವಿತ್ರಗೊಳಿಸಿದರೆಂದು, ಅಲ್ಲಿ ಪುಣ್ಯಸ್ನಾನ ಮಾಡಿದರೆ ಜನ್ಮಾಂತರದ ಪಾಪ ತೊಳೆಯುದೆಂದು ನಂಬಿಕೆ ಇದೆ. ಇಲ್ಲಿಯ ತಂಪಾದ ಪ್ರಶಾಂತ ಬನದಲ್ಲಿ ಅಗ್ನಿಕುಂಡ ಮತ್ತು ವಿಠ್ಠಲ ಮಂದಿರವಿದ್ದು ಭಕ್ತಿಪರವಶತೆಯ ತಾಣವಾಗಿದೆ.

ಸಂಕ್ರಟ್ಟಿ

ಇಲ್ಲಿ ಚಾಮುಂಡೇಶ್ವರಿಯ ದೇವಾಲಯವಿದೆ. ಅಲ್ಲಮಪ್ರಭುಗಳು ಸಪ್ತಸಾಗರದಲ್ಲಿ ಸ್ನಾನಮಾಡಿ ಇಲ್ಲಿ ಲಿಂಗಪೂಜೆ ಮಾಡಿಕೊಳ್ಳುತ್ತಿದ್ದರಂತೆ.

ಋವಟಕೊಪ್ಪ

ಇದು ಕೌಂಡಿನ್ಯ ಋಷಿಯ ತಪೋಭೂಮಿಯೆಂದು ತಿಳಿದು ಬರುತ್ತದೆ. ಇಲ್ಲಿ ಮಾರುತಿ ಮಂದಿರವಿದ್ದು ಮಾರುತಿ ಮೂರ್ತಿ ಮನೋಹರವಾಗಿದೆ.

ಶೇಗುಣಸಿ

ಇಲ್ಲಿ ವೀರಶೈವ ವಿರಕ್ತ ಮಠವೊಂದು ಪ್ರಸಿದ್ಧವಾಗಿದೆ. ಇಲ್ಲಿಯ ಅನೆಯ ಪೀಠಾಧಿಕಾರಿಗಳಾದ ಪೂಜ್ಯ ಶ್ರೀ ಮುರುಘೇಂದ್ರ ಸ್ವಾಮಿಗಳು ತ್ರಿಕಾಲ ಜ್ಞಾನಿಗಳಾಗಿದ್ದರು. ಈಗಲೂ ಮಠದಲ್ಲಿ ಪುರಾಣ ಪ್ರವಚನ ವಿದ್ವಜ್ಜನರ ಉಪನ್ಯಾಸಗಳು ನಡೆಯುತ್ತಿರುತ್ತವೆ.

ಸತ್ತಿ

ಇಲ್ಲಿ ವೈಷ್ಣವ ಸಂಪ್ರದಾಯದ ಬ್ರಾಹ್ಮಣರು ಹೆಚ್ಚಾಗಿರುವುದು ಕಂಡುಬರುವುದು. ನದಿಯ ದಂಡೆಯಲ್ಲಿ ಶ್ರೀರಾಮನ ಮಂದಿರವಿದೆ. ರಾಮನವಮಿಯಂದು ಇಲ್ಲಿ ಜಾತ್ರೆಯಾಗುತ್ತದೆ. ಊರಲ್ಲಿ ಪುರಾತನ ಈಶ್ವರ ದೇವಾಲಯವಿದೆ. ಇಲ್ಲಿ ಮಸೀದಿಗಳೂ ಉಂಟು.

ಸವದಿ

ಇಲ್ಲಿ ಕೃಷ್ಣೆ ಉತ್ತರಾಭಿಮುಖವಾಗಿ ಹರಿಯುವದರಿಂದ ಇದು ಪವಿತ್ರ ಕ್ಷೇತ್ರವೆನಿಸಿದೆ. ಇಲ್ಲಿ

ಉತ್ತರೇಶ್ವರ ದೇವಾಲಯವಿದೆ. ಇಲ್ಲಿಯ ದರ್ಗಾ ಕೂಡ ಪ್ರಸಿದ್ಧವಾಗಿದೆ. ಇಲ್ಲಿಯು ಒಂದು ಸಂಗನಬಸವೇಶ್ವರ ಎಂಬ ವೀರಶೈವ ವಿರಕ್ತಮಠವಿದೆ. ಇಂದಿಗೂ ಧಾರ್ಮಿಕ ಕಾರ್ಯಕ್ರಮಗಳು ನಡೆದುಕೊಂಡು ಬರುವುದನ್ನು ಕಾಣಬಹುದಾಗಿದೆ.

ಮಹಿಷವಾಡಗಿ

ದುಷ್ಟರು ಗೋವನ್ನು ಅಪಹರಿಸುತ್ತಿರುವುದನ್ನು ನದಿಯಲ್ಲಿ ಸ್ನಾನ ಮಾಡುತ್ತಿದ್ದ ಮಹಿಷನೆಂಬ ಜಟ್ಟಿ ನೋಡಿ ಆ ಹಸುವಿನ ಬಿಡುಗಡೆಗಾಗಿ ಹೋರಾಡಿ 'ಅಸು ಇಲ್ಲವೆ ಹಸು' ಎಂದು ಪ್ರಾಣ ತೆತ್ತನು. ಮಹಿಷನಿಂದ ಊರಿಗೆ ಈ ಹೆಸರು ಬಂತು. ಇಲ್ಲಿಯ ಬಸವಣ್ಣನ ಗುಡಿಯೆದುರು ಇಂದಿಗೂ ಒಂದು ವೀರಗಲ್ಲು ಇದ್ದು ಈ ಘಟನೆಗೆ ಸಾಕ್ಷಿಯಾಗಿದೆ.

ನಂದಗಾಂವ

ಈ ಊರಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯ ಭಗ್ನವಾಗುತ್ತಿರುವ ಒಂದು ದೊಡ್ಡದೇವಾಲಯ ಸುಂದರವಾಗಿದೆ.

ಮುರಗುಂಡಿ

ಮುರುಸಿದ್ಧೇಶ್ವರನ ಪುರಾತನ ಗುಡಿ ಇದ್ದು ಇದು ಕುರುಬರ ಪುಣ್ಯಸ್ಥಳವಾಗಿದೆ. ಇಲ್ಲಿ ಒಂದು ಜೈನರ ಬಸದಿಯೂ ಇದೆ.

ಮದಬಾಂವಿ

ಈ ಊರಿನಲ್ಲಿ ಸಿದ್ಧೇಶ್ವರ ಹಾಗೂ ಮಧೂಕೇಶ್ವರ ದೇವಾಲಯಗಳಿವೆ.

ಖಳೇಗಾಂವ

ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡ ಗ್ರಾಮವಾಗಿದೆ. ಬಸವಣ್ಣನ (ನಂದಿ) ಸುಪ್ರಸಿದ್ಧ ದೇವಾಲಯದಿಂದಾಗಿ ಇದು ಒಂದು ಪವಿತ್ರ ಕ್ಷೇತ್ರವೆನಿಸಿದೆ. ಇದು ಸ್ವಯಂಭು ಮೂರ್ತಿಯಗಿದ್ದು ಉಳಿಯಿಂದ ಕೆತ್ತಿದ್ದಲ್ಲ. ಆದ್ದರಿಂದ ಮಂಗಳಕರ ಎಂಬ ಪ್ರತೀತಿ ಇದೆ. ಪ್ರತಿದಿನ ತ್ರಿಕಾಲಗಳಲ್ಲಿ ಪೂಜೆ ನಡೆಯುತ್ತದೆ. ಕರ್ನಾಟಕ ಮಹಾರಾಷ್ಟ್ರ ಎರಡು ರಾಜ್ಯಗಳಲ್ಲಿ ಅಪಾರ ಸಂಖ್ಯೆಯ ಭಕ್ತರನ್ನು ಹೊಂದಿದ್ದು ಶ್ರಾವಣ ತಿಂಗಳಲ್ಲಿ ಹೆಚ್ಚಿನ ಭಕ್ತರು ತಮ್ಮ ಇಷ್ಟ ದೇವರ ಪೂಜೆಗೆ ಬರುತ್ತಾರೆ. ಬಸವ ಜಯಂತಿ ಅಕ್ಷಯ ತೃತೀಯಾ ದಿನ ವಿಶೇಷ ಜಾತ್ರೆ ಮತ್ತು ಉತ್ಸವ ನಡೆಯುತ್ತದೆ.

ಕಾಗವಾಡ

ಇದು ಕರ್ನಾಟಕದ ಗಡಿಗ್ರಾಮ, ಗ್ರಾಮದಲ್ಲಿ ಶಾಂತಿನಾಥ ಜಿನಾಲಯವಿದೆ. ಇದನ್ನು 'ಕಗ್ಗೂಡರಾಯನ ಗುಡಿ' ಎಂದು ಕರೆಯುತ್ತಾರೆ. ದೇವಾಲಯದಲ್ಲಿ ಬ್ರಹ್ಮನಾಥ ಮತ್ತು ಪದ್ಮಾವತಿಯವರ (ಯಕ್ಷ-ಯಕ್ಷಿಣಿ) ಸುಂದರ ಶಿಲ್ಪಗಳಿವೆ. ಒಂದು ನೆಲ ಮನೆಯಲ್ಲಿ ನಿಂತ ಭಂಗಿಯ ಪಾರ್ಶ್ವನಾಥ

ಜಿನಬಿಂಬವಿದ್ದು ಇನ್ನೊಂದರಲ್ಲಿ ಕುಳಿತ ಭಂಗಿಯ ಶಾಂತಿನಾಥ ಜಿನ ಬಿಂಬವಿದೆ. ಗ್ರಾಮದ ಸರ್ವಧರ್ಮಿಯರೂ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಇದು ಜಿನಾಲಯವಾಗಿದ್ದರೂ ಕೂಡಾ ಪೂಜಾ ವಿಧಿಗಳು ಲಿಂಗಾಯತ ಪೂಜಾರಿಗಳಿಂದ ನಡೆಯುವುದು ಇಲ್ಲಿಯ ಒಂದು ವಿಶೇಷ. ಇದು ಜೈನ-ವೀರಶೈವರ ಸಾಮರಸ್ಯಕ್ಕೆ ಸಾಕ್ಷಿಯಾಗಿದೆ. ಸಂತೂಬಾಯಿ ಈ ಊರಿನ ಅಧಿದೇವತೆ. ಊರಲ್ಲಿ ಮಹಾದೇವ, ಹಾಲಬಸವಣ್ಣ, ಗಣಪತಿ ರಾಮದೇವ, ಅಂಬಾಬಾಯಿ, ಮರಗುಬಾಯಿ ಮೊದಲಾದ ದೇವಾಲಯಗಳಿವೆ. ಇಲ್ಲಿ ರಾಜಾಬಾಗಸವಾರನ ಸ್ಮಾರಕವಿದ್ದು ಇದಕ್ಕೆ ಹಿಂದೂ ಮುಸ್ಲಿಮರೆಲ್ಲರೂ ನಡೆದುಕೊಳ್ಳುತ್ತಾರೆ.

ಶೇಡಬಾಳ

ಶಿಲಾಹಾರದ ದೊರೆಯಾದ ವಿಜಯಾದಿತ್ಯರು ಕಾಲ (ಕ್ರಿ.ಶ.೧೧೫೩)ರಲ್ಲಿಯ ಒಂದು ಶಿಲಾಶಾಸನವು ಇಲ್ಲಿಯ ಶ್ರೀ ಬಸವೇಶ್ವರ ದೇವಾಲಯದಲ್ಲಿದೆ. ಇದರ ಆಧಾರದಿಂದ ಈ ರಾಜನು ಊರಿನ ಪ್ರಾಚೀನ ಶ್ರೀ ಶಾಂತಿನಾಥ ಜಿನಾಲಯದ ಭಕ್ತನೆಂದು ತಿಳಿಯುತ್ತದೆ. ಶ್ರೀ ಮಹಾವೀರ ಮತ್ತು ಶ್ರೀ ಆದಿನಾಥ ಜಿನ ಮಂದಿಗಳು ಇವೆ. ಇಲ್ಲಿ ೨೪ ತೀರ್ಥಂಕರ ಸುಂದರ ಮೂರ್ತಿಗಳಿವೆ. ಮುಂದೆ ಮೌನ ಸ್ಥಂಭವಿದೆ. ಇಲ್ಲಿ ಜೈನ ಧರ್ಮದವರು ಹೆಚ್ಚಾಗಿ ಇರುವುದರಿಂದ ಜೈನ ಧರ್ಮೀಯರ ಧಾರ್ಮಿಕ ಪರಿಸರವನ್ನು ಕಾಣಬಹುದಾಗಿದೆ. ಇಲ್ಲಿಯ ಬಸವೇಶ್ವರ ದೇವಾಲಯ ಪ್ರಾಚೀನವಾಗಿದ್ದು ಬಸವಣ್ಣನು ಗ್ರಾಮದ ಮುಖ್ಯ ದೇವತೆ.

ಮಂಗಸೂಳಿ

ಅಥಣಿ ತಾಲೂಕಿನ ಪ್ರಮುಖ ಧಾರ್ಮಿಕ ಸ್ಥಳಗಳಲ್ಲಿ ಒಂದಾದ ಮಲ್ಲಯ್ಯನ ಕ್ಷೇತ್ರವಿದೆ. ಮಹಾರಾಷ್ಟ್ರ ಭಕ್ತ ಸಮೂಹಕ್ಕೆ ಖಂಡೋಬಾ ಎಂದು ಕಾಣಿಸುತ್ತಾನೆ. ಇದು ಒಂದು ಪ್ರಮುಖ ಪುಣ್ಯ ಕ್ಷೇತ್ರ ಹಾಗೂ ಪೌರಾಣಿಕ ಹಿನ್ನೆಲೆ ಹೊಂದಿದೆ. ಪೌರಾಣಿಕವಾಗಿ ಮಣಿ-ಮಲ್ಲ ದೈತ್ಯರ ಉಪಟಳ ಭೂಲೋಕದಲ್ಲಿ ವಿಪರೀತವಾದಾಗ ಕೈಲಾಸಪತಿ (ಮಲ್ಲಯ್ಯ) ಮಲ್ಲಸೂರನನ್ನು ವಧೆಮಾಡಿ ನಂತರ ಮಣಿ ದೈತ್ಯನನ್ನುತ್ರಿಶೂಲದಿಂದ ಇರಿದು ಕೊಂದನು. ಈ ವಧಾ ಸ್ಥಾನ ಮಣಿ-ಶೂಲಿ ಮನ್ನೂಳಿಯಾಗಿ ಇಂದಿನ ಮಂಗಸೂಳಿ ಎಂಬ ರೂಪ ಪಡಿಯಿತೆಂಬ ಪ್ರತೀತವಿದೆ. ಮಲ್ಲಯ್ಯನ ಸುಂದರವಾದ ಪ್ರಾಚೀನ ದೇವಾಲಯವಿದೆ.

ಕರ್ನಾಟಕ-ಮಹಾರಾಷ್ಟ್ರಗಳೆರಡರಲ್ಲಿಯೂ ಸಾವಿರಾರು ಭಕ್ತ ಸಮೂಹ ಹೊಂದಿದ್ದು ಯುಗಾದಿ ಮತ್ತು ನವರಾತ್ರಿ (ಮಹಾನವಮಿ)ಗಳಂದು ವರ್ಷದಲ್ಲಿ ಎರಡು ಬಾರಿ ಜಾತ್ರೆ ನಡೆಯುತ್ತದೆ. ಆನೆಯಿಂದ ಜಗ್ಗಿಸಿದರೂ ಹರಿಯಲಾಗದ ಬೃಹತ್ ಸರಪಳಿಯನ್ನು ಪೂಜಾರಿಗಳು ದೇವರ ಹೆಸರಿನಿಂದ ಹರಿಯುತ್ತಾರೆ. ಕಬ್ಬಿಣದ ಸರಪಳಿ ಹರಿದು ತುಂಡಾಗುತ್ತದೆ. ಅದು 'ದೇವ ಲೀಲೆ' ವರ್ಷದ ಮಳೆ ಬೆಳೆ ಸುಖ ಶಾಂತಿಯನ್ನು ನಿರ್ಧರಿಸುವ ಭವಿಷ್ಯ ವಾಣಿಯೆಂದು ಜನರು ನಂಬುತ್ತಾರೆ. ಕರ್ನಾಟಕ ಮಹಾರಾಷ್ಟ್ರದ ಭಕ್ತರು ಇಲ್ಲಿ ಅನ್ಯೋನ್ಯವಾಗಿದ್ದಾರೆ. ಭಾಷೆ-ಗಡಿ-ವೇಷ, ಭೂಷಣ, ಆಹಾರ ಅಭಿರುಚಿಗಳನ್ನು ದಾಟ

ಸರ್ವರನ್ನು ಬೆಸೆಯುವ ಶಕ್ತಿಯಾಗಿ ಮಂಗಸೂಳಿ ಇದೆ. ಚೈತ್ರಮಾಸದಲ್ಲಿ ವಿಶೇಷ ಪೂಜೆ ಪುರಸ್ಕಾರಗಳು ಜರುಗುತ್ತವೆ.

ಮೋಳೆ

ಪ್ರಾಚೀನ ಶ್ರೀ ಸಿದ್ದೇಶ್ವರ ದೇವಾಲಯವಿದೆ.

ಐನಾಪುರ

ಅಥಣಿ ತಾಲೂಕಿನ ಪ್ರಮುಖ ಗ್ರಾಮಗಳಲ್ಲೊಂದಾದ ಐನಾಪುರವು ಹಲವಾರು ಪ್ರಾಚೀನ ಸ್ಮಾರಕಗಳನ್ನು ಹೊಂದಿದೆ. ಇಲ್ಲಿ ಪ್ರಸಿದ್ಧವಾದ ಸಿದ್ದೇಶ್ವರ ದೇವಾಲಯವಿದೆ. ಮಕರ ಸಂಕ್ರಮಣಕ್ಕೆ ಜಾತ್ರೆಯಾಗುತ್ತದೆ. ಪಾಂಡವರು ಇಲ್ಲಿ ಯಜ್ಞ ಯಾಗಾದಿಗಳನ್ನು ಮಾಡಿದರೆಂದು ಹೇಳುತ್ತಾರೆ. ಈ ಕುರಿತು 'ಕೃಷ್ಣ ಮಹಾತ್ಮೆ' ಗ್ರಂಥದಲ್ಲಿ ಉಲ್ಲೇಖವಿದೆ ಎನ್ನಲಾಗಿದೆ. ಪೀರಕಾಜಿ ಎಂಬ ಸತ್ಪುರುಷನ ಸಮಾಧಿ ಇಲ್ಲಿದೆ. ಸರ್ವಧರ್ಮಗಳ ಸಾಮರಸ್ಯದ ಪರಿಸರವನ್ನು ಇಲ್ಲಿ ಕಾಣಬಹುದಾಗಿದೆ.

ಉಗಾರ ಬದ್ರುಕ

ಶ್ರೀರಾಮ ದೇವರ ಗುಡಿ ಇದೆ. ಊರಿನಲ್ಲಿ ನರಸಿಂಹ ಮಾರುತಿ, ಪದ್ಮಾವತಿ ದೇವಿ ಗುಡಿಗಳಿವೆ. ಪದ್ಮಾವತಿದೇವಿ ಗುಡಿ ಇರುವುದು ವಿರಳ ಆದ್ದರಿಂದ ಜೈನ-ಜೈನೇತರರೆಲ್ಲರೂ ಭಕ್ತಿಯಿಂದ ನಡೆದುಕೊಳ್ಳುವುದು ವಿಶಿಷ್ಟವಾಗಿದೆ.

ಉಗಾರ ಖುರ್ದು

ಇಲ್ಲಿ ಮಹಾದೇವಿ ಗುಡಿ, ವಿಠ್ಠಳ ಮಂದಿರ, ಹನುಮಾನ ಮಂದಿರ, ಜೈನ ಬಸದಿಗಳಿವೆ.

ಕುಸನಾಳ

ಇಲ್ಲಿಯ ಜೈನ ಬಸದಿ ಸುಂದರವಾಗಿದೆ. ಬದಿಯಲ್ಲಿ ವಿಠ್ಠಲ ಮಂದಿರವು ಪ್ರಸಿದ್ಧವಾಗಿದೆ. ಭಜನೆ ಪುರಾಣಗಳು ಸದಾ ಕಾಲ ನಡೆಯುತ್ತವೆ.

ಕಟಗೇರಿ

ಇಲ್ಲಿಯ ಲಕ್ಕವ್ವ (ಲಕ್ಷ್ಮೀ) ದೇವಾಲಯವು ಪ್ರಸಿದ್ಧವಾಗಿದೆ. ಮೂರ್ತಿ ಅಂದವಾಗಿದೆ. ಭಕ್ತರು ಬಹುಸಂಖ್ಯೆಯಲ್ಲಿ ನಡೆದುಕೊಳ್ಳುವರು. ವಿಜಯದಶಮಿಯ ಜಾತ್ರೆಯಂದು ವಿಶೇಷ ಉತ್ಸವ ನಡೆಯುವುದು.

ಕೊಕಟನೂರು

ಇದು ಶಕ್ತಿದೇವಿ ಎಲ್ಲಮ್ಮನ ಜಾಗೃತ ಸ್ಥಾನ, ಪರಶುರಾಮನು ತನ್ನ ತಂದೆಯ ಆಜ್ಞೆ ಪಾಲಿಸಲು ತಾಯಿ ರೇಣುಕೆಯ ಶಿರಚ್ಛೇದನ ಮಾಡಿದಾಗ ರುಂಡವು ಇಲ್ಲಿ ಬಂದು ಬಿತ್ತಂತೆ. ಅದೆ ಯಾತ್ರಾ ಸ್ಥಾನವಾಗಿ ಪರಿಣಮಿಸಿದೆಯೆಂದು ನಂಬಿಕೆ ಇದೆ. ಊರಿನ ಹಳ್ಳದ ದಂಡೆಯ ಮೇಲಿರುವ ದೇವಿಯ ದೇವಾಲಯ ಅಪಾರ ಸಂಖ್ಯೆಯ ಭಕ್ತ ಸಮೂಹವನ್ನು ಹೊಂದಿದೆ. ಎಳ್ಳು ಅಮಾವಾಸ್ಯೆಯಂದು ದೊಡ್ಡ

ಪ್ರಮಾಣದಲ್ಲಿ ಜಾತ್ರೆಯಾಗುತ್ತದೆ. ಮಹಾರಾಷ್ಟ್ರ, ಅಥಣಿ ಹಾಗೂ ಬೇರೆ ಬೇರೆ ತಾಲೂಕುಗಳಿಂದ ಜನ ಬಂದು ತಮ್ಮ ಭಕ್ತಿ ಸೇವೆ ಸಲ್ಲಿಸುವುದನ್ನು ಕಾಣಬಹುದಾಗಿದೆ. ಇಲ್ಲೊಂದು ಕಲ್ಲೇಶ್ವರ ದೇವಾಲಯವಿದೆ. ೧೧ ಶತಮಾನದಷ್ಟು ಪ್ರಾಚೀನವಾಗಿದೆ. ಇಲ್ಲಿಯದು ಜಕ್ಕಣ್ಣನ ಶಿಲ್ಪವೆಂದು ಹೇಳುತ್ತಾರೆ. ೨-೩ ಶಿಲಾಶಾಸನಗಳಿವೆ. ಕರ್ನಾಟಕ ಮಹಾರಾಷ್ಟ್ರದ ಅಸಂಖ್ಯಾತ ಭಕ್ತರು ಪಾಲ್ಗೊಳ್ಳುತ್ತಾರೆ.

ಇಲ್ಲಿ ಪೋಳ ಸಂಸ್ಥಾನಿಕನ ಅಳಿದುಳಿದ ಕೋಟೆಯಿದೆ. ಊರ ಕೋಟೆ ಸ್ಥಿರವಾಗಿ ನಿಲ್ಲಲು ಬ್ರಾಹ್ಮಣ ಮನೆತನದ ಗರ್ಭಿಣಿ ಸಾಧ್ವಿ ಕೊಣ್ಣಮ್ಮ ಎಂಬುವಳು ಬಲಿಯಾದಳು. ಇಂದಿಗೂ ಹಳ್ಳದ ದಂಡೆಯಲ್ಲಿ ಕೊಣ್ಣಮ್ಮನ ಗುಡಿಯಿದೆ. ಅಲ್ಲಿಯು ಪೂಜೆ ನಡೆಯುತ್ತದೆ. ಊರಿನ ದಕ್ಷಿಣ ಭಾಗದಲ್ಲಿ ಕಾಡಸಿದ್ದೇಶ್ವರ ದೇವಾಲಯವಿದೆ.

ತೆಲಸಂಗ

ಇದು ಅಥಣಿಯ ಪೂರ್ವ ಭಾಗದ ದೊಡ್ಡ ಊರು. ಇದು ತೀರ ಪ್ರಾಚೀನ ಗ್ರಾಮವೆಂದು ತಿಳಿದುಬರುತ್ತದೆ. ಶಿಲೆಯ ಸುಂದರ ವಿಷ್ಣುವಿಗ್ರಹ ಮಣ್ಣಿನಲ್ಲಿ ಹೂತಿದ್ದು ಇತ್ತೀಚಿಗೆ ದೊರೆತಿದೆ. ಇಲ್ಲಿ ಒಂದು ವೀರಶೈವ ಮಠವಿದೆ. ೧೨ನೇ ಶತಮಾನದಲ್ಲಿದ್ದ ಕಲ್ಯಾಣದ ಶಿವಶರಣರಿಗೆ ತೈಲವನ್ನು ಪೂರೈಸುವ ಜನಗಳಿಂದ ಈ ಊರು ನಿರ್ಮಾಣವಾಗಿ ಈ ಹೆಸರು ಬಂದಿದೆ ಎಂದು ಹೇಳುತ್ತಾರೆ.

ಐಗಳಿ

ಇಲ್ಲಿ ಪೂಜ್ಯ ಅಪ್ಪಯ್ಯ ಸ್ವಾಮಿಗಳ ಮಠವಿದೆ. ಅವರ ಗದ್ದುಗೆಗೆ ನಿತ್ಯ ಪೂಜೆ ನಡೆಯುತ್ತದೆ. ಪ್ರತಿವರ್ಷ ಶ್ರಾವಣ ಮತ್ತು ಅಕ್ಷಯ ತೃತೀಯಾಗಳಲ್ಲಿ ಎರಡು ಸಾರಿ ಜಾತ್ರೆ ಆಗುತ್ತದೆ. ಅವರು ಒಬ್ಬ ವಿರಕ್ತ ಯೋಗಿಯಾಗಿದ್ದರು. ಸಿದ್ಧಿಪುರುಷರಾಗಿದ್ದರು. ಅವರು ಬರೆದ ಲಿಪಿ ಇಂದಿಗೂ ನೋಡಲು ದೊರಕುತ್ತದೆ. ಅದು ಅಸ್ಪಷ್ಟವಾಗಿದೆ. ಈ ಗ್ರಾಮವು ಅಥಣಿ-ವಿಜಾಪುರ ಕೂಡುವ ರಸ್ತೆಯ ಪಕ್ಕದಲ್ಲಿದ್ದು ದಿಣ್ಣೆಯ ಮೇಲೆ ಶ್ರೀಮಾಣಿಕ ಪ್ರಭುಗಳೆಂಬುವರ ಆಶ್ರಮವಿದೆ. ಅಲ್ಲಿ ಒಂದು ದೇವಾಲಯವನ್ನು ನಿರ್ಮಿಸಲಾಗಿದೆ.

ರಾಮತೀರ್ಥ

ಪುರಾಣ ಪ್ರಸಿದ್ಧಿಯನ್ನು ಪಡೆದ ರಾಮತೀರ್ಥ ಗ್ರಾಮವು ಅಥಣಿಯಿಂದ ೪೯ ಕಿ.ಮೀ. ದೂರದಲ್ಲಿದೆ. ಇಲ್ಲಿ ಚಾಲುಕ್ಯ ಮಾದರಿಯ ಉಮಾಮಹೇಶ್ವರಿ ದೇವಾಲಯವಿದೆ. ಗುಡಿಯ ಒಳ ಹೊರಗಿನ ಶಿಲ್ಪ ಕಲೆ ಉತ್ಕೃಷ್ಟವಾಗಿದೆ. ಈ ಭಾಗದಲ್ಲಿಯೇ ಇಷ್ಟು ಸುಂದರವಾದ ಗುಡಿ ಇನ್ನೊಂದಿಲ್ಲ. ಇದು "ದಕ್ಷಿಣ ಕಾಶಿ" ಎಂದು ಪ್ರಸಿದ್ಧಿ ಹೊಂದಿದೆ. ವನವಾಸದಲ್ಲಿದ್ದ ಶ್ರೀರಾಮ ಇಲ್ಲಿಗೆ ಬಂದು ಪೂಜೆ ಸಲ್ಲಿಸಿದನೆಂದು ಪ್ರತೀತಿ ಇದೆ. ಈಶ್ವರನೊಂದಿಗೆ ತನ್ನ ಹೆಸರು ಚಿರಸ್ಥಾಯಿಯಾಗಲೆಂದು ರಾಮೇಶ್ವರ ಎಂದು ನಾಮಕರಣ ಮಾಡಿದನೆಂದು ರಾಮೇಶ್ವರ ಮಹಾತ್ಮೆಯಲ್ಲಿ ಉಲ್ಲೇಖವಿದೆ. ಈ ದೇವಾಲಯವು ವಿಶಾಲವಾಗಿದ್ದು ಆಕರ್ಷಕ ಕೆತ್ತನೆಯಿಂದ ಕೂಡಿದೆ. ದೇವಾಲಯದಲ್ಲಿ ಎರಡು ಪ್ರಾಚೀನ ಶಾಸನಗಳಿವೆ. ಇದು ಬ್ರಹ್ಮ,

ವಿಷ್ಣು, ಮಹೇಶ್ವರರು ನೆಲಸಿದ ತಾಣವಾದ್ದರಿಂದ ಓಂಕಾರೇಶ್ವರ ಮಂದಿರವೆಂದು ಖ್ಯಾತಿ ಹೊಂದಿದೆ. ದೇವಾಲಯದ ಪ್ರಾಂಗಣದಲ್ಲಿ ನರಸಿಂಹ, ಮಾರುತಿ, ಅಮೃತೇಶ್ವರ, ಕಾಳ ಭೈರವ ಮತ್ತು ಬ್ರಹ್ಮದೇವರ ಗುಡಿಗಳಿವೆ. ರಾಮೇಶ್ವರ ದೇವಾಲಯವು ಸೂಕ್ಷ್ಮ ಕೆತ್ತನೆಯಿಂದ ಕೂಡಿದೆ. ಕಂಬಗಳ ಮೇಲಿನ ದ್ವಾರ ಪಾಲಕರು ಮಧ್ಯದ ಮಹಾದ್ವಾರದ ಮೇಲೆ ಕೆತ್ತಿದ ನಟರಾಜ ಎಲ್ಲವೂ ನಯನ ಮನೋಹರವಾಗಿದೆ. ದೇವಾಲಯದ ಮುಂಭಾಗದ ಬಲಕ್ಕೆ ೬೦-೪೦ ಅಡಿ ವಿಸ್ತೀರ್ಣದಲ್ಲಿ ಕಟ್ಟಿದ ಆಕರ್ಷಕ ಬಾವಿ ಇದೆ. ೭೫ ಅಡಿ ಎತ್ತರದ ಆಕರ್ಷಕ ದೀಪ ಸ್ತಂಭವಿದ್ದು ದೇವಾಲಯದ ಭವ್ಯತೆಗೆ ಮತ್ತಷ್ಟು ಮೆರಗು ನೀಡಿದೆ. ನಿತ್ಯ ತ್ರಿಕಾಲ ಪೂಜೆ ನಡೆಯುತ್ತಿದ್ದು, ಒಂದು ಜಾಗೃತ ಕ್ಷೇತ್ರ ಎಂದು ಹೆಸರು ಪಡೆದಿದೆ.

ಮುಖ್ಯ ದೇವಾಲಯದ ಹಿಂಭಾಗದಲ್ಲಿ ನೈಸರ್ಗಿಕ ಗುಹೆ ಇದೆ. ಅಲ್ಲಿ ಆನಂದದಾಯಕಿ (ಪಾರ್ವತಿ)ಯ ಚಿಕ್ಕ ದೇವಾಲಯವಿದೆ. ಅಲ್ಲಿರುವ ಒಂದು ಪರ್ವತಕ್ಕೆ 'ಅಕ್ಷಯ ಪರ್ವತ' ಎಂದು ಹೆಸರಿದೆ. ಗಂಗಾ ನದಿಯು ಹಳ್ಳವಾಗಿ ಹರಿದು ಎಂಟು ತೀರ್ಥಗಳನ್ನು ಉಂಟು ಮಾಡಿದೆ. ಈ ಹಳ್ಳ "ಪಾಪವಿನಾಶಿನಿ" ಎಂದು ಹೆಸರು ಪಡೆದಿದೆ. ಇದು ಬೇಸಿಗೆಯಲ್ಲಿ ಬತ್ತಿ, ಒಂದು ಮಡು ಮಾತ್ರ ಕಾಣುತ್ತದೆ. ಶಿವರಾತ್ರಿ ಸಮಯದಲ್ಲಿ ವಿಶೇಷ ಪೂಜಾ ಕಾರ್ಯಕ್ರಮ ನಡೆಯುತ್ತಿದ್ದು ಐದು ದಿನಗಳ ಜಾತ್ರೆ ನಡೆಯುತ್ತದೆ. ಈ ಐದು ದಿನಗಳವರೆಗೆ ನಿರಂತರ ವೇದ ಪಾರಾಯಣ ನಡೆಯುತ್ತದೆ.

ಕೊಟ್ಟಲಗಿ

ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಹೆಸರಾಗಿದ್ದ ಗ್ರಾಮವಿದು. ಇಲ್ಲಿ ಪ್ರಾಚೀನ ಸಿದ್ದೇಶ್ವರ (ಸಿದರಾಯ) ದೇವಾಲಯವಿದೆ. ಇಲ್ಲಿಯ ಇಟ್ಟಿಗೆಯ ತೂಗುಯ್ಯಾಲೆಯ ದೀಪ ಸ್ತಂಭ ಅದ್ಭುತವಾಗಿದೆ.

ಕಕಮರಿ

ರಾಮತೀರ್ಥದ ನೆರೆಯ ಕಕಮರಿ ಗ್ರಾಮದ ಸುತ್ತಮುತ್ತಲಿನ ಪರಿಸರವು ಶುಕ್ರ ಋಷಿಗಳ ಆಶ್ರಮವಾಗಿತ್ತು. ಆ ಋಷಿಯ ಮಗಳೆ ಕಾಕುಮಾರಿ. ದಂಡಕರಾಜನು ಬೇಟೆಗೆ ಬಂದು ಇವಳನ್ನು ನೋಡಿ ಮೋಹಿಸಿದನೆಂದು ಈ ಕಾರಣಕ್ಕಾಗಿ ಋಷಿಯ ಕೋಪಕ್ಕೊಳಗಾಗಿ ಮಗಳು ಹೆಣ್ಣು ಹುಲಿಯಾದಳೆಂದು, ನಂತರ ಶಾಪ ವಿಮೋಚನೆಯಾಯಿತು ಎನ್ನುತ್ತಾರೆ. ಇವಳ ಹೆಸರೆ ಊರಿಗೆ ರೂಢವಾಗಿದೆ. ಇವಳು ಅಮ್ಮಾಜಿ ದೇವಿಯಾಗಿ ಕಕಮರಿಯಲ್ಲಿ ವಾಸವಾಗಿದ್ದಾಳೆ. ಅಮ್ಮಾಜೇಶ್ವರಿ ಎಂಬ ಹೆಸರಿನ ದೇವಾಲಯವಿದ್ದು ಗ್ರಾಮ ದೇವತೆಯಾಗಿ ನೆಲೆನಿಂತು ನಂಬಿ ಬಂದ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ದೇವಿಯಾಗಿದ್ದಾಳೆ. ಜಾತ್ರೆ ಉತ್ಸವಗಳು ನಡೆಯುತ್ತವೆ. ಇವುಗಳಲ್ಲದೆ ಗುಂಡೇವಾಡಿ ಹಾಗೂ ಯಕ್ಕಂಚಿಯ ಕಾಡಸಿದ್ದೇಶ್ವರ ದೇವಾಲಯ ದೇವರಡ್ಡೇರಹಟ್ಟಿಯ ಮಡಿ ಬಸವಣ್ಣನ ಗುಡಿ, ಕೋಹಳ್ಳಿಯ ಸಂಗಮೇಶ್ವರ ಗುಡಿ, ಚಿಕ್ಕಟ್ಟಿಯ ಬಸವಣ್ಣನ ಗುಡಿ ಇವು ತಾಲೂಕಿನ ನೋಡಬೇಕಾದ ಇತರ ಧಾರ್ಮಿಕ ಪ್ರೇಕ್ಷಣೀಯ ಸ್ಥಳಗಳಾಗಿವೆ. ಒಟ್ಟಿನಲ್ಲಿ ಅಥಣಿ ಹಲವು ಧರ್ಮಗಳ ಸಂಗಮ ಈ ಎಲ್ಲ ಧರ್ಮಿಯರಲ್ಲಿ ಸಾಮರಸ್ಯವಿರುವುದು ಇಲ್ಲಿಯ ಪರಿಸರದ ವಿಶೇಷವೆಂದು ಹೇಳುವರು.

ಅಥಣಿ ತಾಲೂಕಿನಲ್ಲಿ ವೀರಶೈವ, ಜೈನ, ವೈಷ್ಣವ ಹಾಗೂ ಮುಸ್ಲಿಂ ಧರ್ಮಗಳ ಜನರು ಹೆಚ್ಚಾಗಿದ್ದಾರೆ. ಈ ಎಲ್ಲ ದರ್ಮಿಯರ ಮಠ, ಮಂದಿರ, ಬಸದಿ ಹಾಗೂ ಮಸೀದಿಗಳು ಈ ತಾಲೂಕಿನಲ್ಲಿ ಹೇರಳವಾಗಿವೆ. ಒಂದು ಚರ್ಚು ಅಥಣಿಯಲ್ಲಿದೆ. ಹಾಗೆಯೇ ವೀರಶೈವ ಗುರುಗಳು ಜೈನ ಮುನಿಗಳು ಹೆಚ್ಚಾಗಿದ್ದಾರೆ. ತಾಲೂಕಿನ ಪ್ರಮುಖ ಗ್ರಾಮಗಳು ತಮ್ಮದೇ ಆದ ಕಾರಣಕ್ಕಾಗಿ ವಿಶೇಷತೆಯನ್ನು ಹೊಂದಿವೆ. ಕಟಗೇರಿ ಲಕ್ಕವ್ವ, ಜೂಗುಳದ ಪಾರ್ವತಿದೇವಿ, ಕಾಗವಾಡದ ಸಂತೋಬಾಯಿ ಮುಂತಾದ ಕ್ಷೇತ್ರಗಳು ಸ್ತ್ರೀ ದೇವತೆಗಳ ಆರಾಧನಾ ಸ್ಥಳಗಳಾಗಿ ಗಮನ ಸೆಳೆಯುತ್ತವೆ.

ಒಟ್ಟಿನಲ್ಲಿ ಅಥಣಿ ಪರಿಸರದಲ್ಲಿನ ಧಾರ್ಮಿಕ ತಾಣಗಳ ಶಿಲ್ಪಕಲಾ ವೈಭವಗಳನ್ನು ಗಮನಿಸಿದಾಗ ಅವು ಈ ಪ್ರದೇಶದ ಗತಕಾಲದ ಸಾಂಸ್ಕೃತಿಕ ಶ್ರೀಮಂತಿಕೆಯಿಂದ ತುಂಬಿ ತುಳುಕುತ್ತಿದ್ದವು ಎಂಬುದಕ್ಕೆ ಅಥಣಿಯ ಅಮೃತಲಿಂಗೇಶ್ವರ ದೇವಸ್ಥಾನ, ನಂದಗಾಂವಿಯ ಹಾಳು ಸುರಿಯುತ್ತಿರುವ ಶಿವಾಲಯ, ಜಿನಾಲಯಗಳು, ಮಂಗಸೂಳಿಯ ಮಲ್ಲಯ್ಯ, ಬಳ್ಳಿಗೇರಿಯ ಬಸವಣ್ಣ, ಖಿಳೇಗಾಂವಿಯ ಬಸವಣ್ಣ, ಕೊಕಟನೂರಿನ ಎಲ್ಲಮ್ಮದೇವಿ, ರಾಮತೀರ್ಥ ದೇವಾಲಯ ಮೊದಲಾದವು ಇತಿಹಾಸಕ್ಕೆ ಮೂಕ ಸಾಕ್ಷಿಯಾಗಿ ನಿಂತಿವೆ. ಈ ದೇವಾಲಯಗಳು ಮಠ, ಮಂದಿರ, ಮಸೀದಿ, ಚರ್ಚುಗಳು ಜನತೆಯ ಸಂಸ್ಕೃತಿಯನ್ನು, ಧಾರ್ಮಿಕ ಮನೋಭಾವವನ್ನು ಬೆಳೆಸಿಕೊಂಡು ಎಲ್ಲ ಧರ್ಮೀಯರೂ ಪರಸ್ಪರ ಪ್ರೀತಿ ವಿಶ್ವಾಸದೊಂದಿಗೆ ಅನ್ಯೋನ್ಯವಾಗಿ ಯಾವ ಮತೀಯ ಗಲಭೆಗಳಿಲ್ಲದೆ ಬದುಕುವುದಕ್ಕೆ ಪ್ರೇರಕ ಶಕ್ತಿಗಳಾಗಿ ನಿಂತಿವೆ. ಅಲ್ಲದೆ ನಾಡಿನ ವಿಶಿಷ್ಟ ಪರಂಪರೆಯನ್ನು ಮುನ್ನಡೆಸಿಕೊಂಡು ಬರುತ್ತಿರುವ ಕನ್ನಡ ನಾಡಿನ ದೊಡ್ಡ ಆಸ್ತಿಯಾಗಿ ಉಳಿದಿವೆ. ಹೀಗೆ ದೇವಾಲಯಗಳ ತಾಣವೇ ಅಥಣಿಯಾಗಿದೆ.

೨.೫. ಸಮುದಾಯಗಳು ಮತ್ತು ವೃತ್ತಿ

ಯಾವುದೇ ಸಮುದಾಯವು ಕೇವಲ ವೃತ್ತಿ ಅಥವಾ ಭೌಗೋಳಿಕ ಪರಿಸ್ಥಿತಿಯನ್ನು ಅನುಸರಿಸಿಯಷ್ಟೇ ಬೆಳೆಯುವುದಿಲ್ಲ. ಮತ್ತು ವೈವಿಧ್ಯಗೊಳ್ಳುವುದಿಲ್ಲ. ಅದರ ನಡುವೆ ವಿವಿಧ ಸಮುದಾಯಗಳ ಸಂಬಂಧವು ಮುಖ್ಯವಾಗಿರುತ್ತದೆ. ಕಾರಣ ಇವೆಲ್ಲ ಪರಸ್ಪರ ಅಂತರ್ ಸಂಬಂಧಿಗಳು.

ಕರ್ನಾಟಕದ ಇತರೆ ಕಡೆಗಳಲ್ಲಿ ಇರುವಂತೆ ಅಥಣಿ ಪರಿಸರದಲ್ಲಿಯೂ, ತಾಲೂಕಿನಲ್ಲಿಯೂ ಹಲವು ಮತಪಂಥಗಳ ವಿವಿಧ ವರ್ಗಗಳ ಜನರು ವಾಸವಾಗಿದ್ದಾರೆ. ಭಾರತೀಯ ಸಂದರ್ಭದಲ್ಲಿಯಂತೂ ಸಮುದಾಯವು ಬಲಿಷ್ಟವಾದ ಒಂದು ಸಾಮಾಜಿಕ ಗುಣವಾಗಿದ್ದು, ಸಾಂಸ್ಕೃತಿಕವಾಗಿ ಹಲವು ಅಂಶಗಳನ್ನು ನಿಯಂತ್ರಿಸುವ, ನಿರ್ಮಿಸುವ ವಿಶೇಷತೆಯನ್ನು ಸಮುದಾಯವು ಹೊಂದಿರುತ್ತವೆ. ಅಲ್ಲದೆ ಯಾವುದೇ ಸಮುದಾಯದ ಬಗೆಗೆ ಆಯಾ ಸಮುದಾಯಗಳಲ್ಲಿರುವ ನಂಬಿಕೆ, ಐತಿಹ್ಯ, ಪುರಾಣಗಳು ಈ ಕುರಿತ ಅಧ್ಯಯನಕ್ಕೆ ಪೂರಕವಾದ ಅಂಶಗಳೇ ಆಗಿರುತ್ತವೆ.

ಅಥಣಿ ಪರಿಸರದಲ್ಲಿ ವೀರಶೈವರು, ಜೈನರು, ಬ್ರಾಹ್ಮಣರು, ಮರಾಠರು, ಕುರುಬರು, ಒಡ್ಡರು, ಬೇಡರು, ಮುಸ್ಲಿಂರು, ಸಮಗಾರರು, ಅಕ್ಕಸಾಲಿಗರು (ಪತ್ತಾರರು) ಅಥವಾ ಪೋತದಾರು, ಬೆಸ್ತರು,

ಪಾಟೀಲರು, ಗೌಡರು, ಶ್ಯಾನುಬೋಗರು, ಹಡಪದರು, ಚಲವಾದಿಗಳು ಮುಂತಾದ ಜನರು ಇಲ್ಲಿ ವಾಸವಾಗಿದ್ದಾರೆ. ಜೈನರಲ್ಲಿ ದಿಗಂಬರ ಪಂಥದವರು ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದ್ದು, ತಾಲೂಕಿನ ಐನಾಪುರ, ನಂದೀಶ್ವರ, ಶೇಡಬಾಳ ಮುಂತಾದ ಊರುಗಳಲ್ಲಿ ಕಾಣಬರುತ್ತಿದ್ದಾರೆ. ಇವರುಗಳಲ್ಲಿ ಚತುರ್ಥ ಪಂಥದವರು, ಪಂಚಮ ಪಂತದವರು ಎಂದು ಎರೆಡು ಪಂಗಡಗಳನ್ನು ಕಾಣುತ್ತೇವೆ. ಅಥಣಿ ಪರಿಸರದಲ್ಲಿಯೇ ನೋಡಲಾಗಿ ಜೈನರ ಸಂಖ್ಯೆ ಹೆಚ್ಚಾಗಿದೆ. ಈ ತಾಲೂಕಿನ ನೆರೆಯ ಮೀರಜ್, ಸಾಂಗಲಿ ಪ್ರದೇಶಗಳಲ್ಲಿ ಇಂದಿಗೂ ಜೈನರ ಪ್ರಾಬಲ್ಯವಿರುವುದನ್ನು ನಾವು ಕಾಣಬಹುದು. ಹೀಗೆ ಒಂದು ನಡುಗಡ್ಡೆಯಂತೆ ಹೆಚ್ಚಾಗಿ ಜೈನ ಸಂಸ್ಕೃತಿಯು ಬಾಳಿದುದನ್ನು ಕರ್ನಾಟಕ ರಾಜ್ಯದ ಯಾವ ಭಾಗದಲ್ಲಿಯೂ ನಾವು ಕಾಣಲು ಸಾಧ್ಯವಿಲ್ಲ. ಇಂತಹ ಸಂಕ್ರಮಣ ಕಾಲದಲ್ಲಿಯೂ ಜೈನ ಸಮುದಾಯವು ತನ್ನ ತನವನ್ನು ಕಳೆದುಕೊಳ್ಳದೇ ಇಲ್ಲಿ ಬಾಳುತ್ತಿರುವುದಕ್ಕೆ ಜೈನ ಭದ್ರ ಬುನಾದಿಯೇ ಕಾರಣವಾಗಿದೆ. ಈ ತಳಹದಿಯ ಗುರುತಾಗಿ ಕೊಲ್ಲಾಪುರ, ನಾಂದಣಿ, ರಾಯಭಾಗ, ತೇರದಾಳ, ಬೆಳಗಾವಿ, ಹೊಸೂರುಗಳಲ್ಲಿ ಬಸದಿಗಳನ್ನು ಕಟ್ಟಿಕೊಂಡು ಇಂದಿಗೂ ಬಾಳಿ ಬೆಳಗುತ್ತಿರುವ ಸ್ವಸ್ತಿಕ ಶ್ರೀ ಲಕ್ಷ್ಮೀಸೇನ ಭಟ್ಟಾರಕ ಗದ್ದುಗೆಗಳನ್ನು ಕಾಣುತ್ತೇವೆ. ಹಾಗೆಯೇ ಕಾಗವಾಡ (ಕಗ್ಗೂಡು) ಕುಂಡಲ, ಕುಂಬೋಜಗಳಂತಹ ಜೈನ ಕ್ಷೇತ್ರಗಳನ್ನು ಮತ್ತು ಸಾಂಸ್ಕೃತಿಕ ಸ್ಥಳಗಳ ಚರಿತ್ರೆಯನ್ನು ಗಮನಿಸಬಹುದು.

ಕರ್ನಾಟಕದ ಗಡಿಭಾಗದಲ್ಲಿರುವ ಜೈನರು ಕನ್ನಡದ ಜೊತೆಗೆ ಮರಾಠಿ ಭಾಷೆಯನ್ನು ರೂಢಿಸಿಕೊಂಡಿರುವರು. ಸ್ತ್ರೀಯರು ಕಚ್ಚೆಹಾಕಿ ಸೀರೆಯನ್ನು ಉಡುತ್ತಾರೆ. ಇವರು ಹೆಚ್ಚಾಗಿ ಮಹಾರಾಷ್ಟ್ರದ ಜೊತೆ ವೈವಾಹಿಕ ಸಂಬಂಧ, ರಕ್ತಸಂಬಂಧ ಹೊಂದಿದ್ದಾರೆ. ಇವರೆಲ್ಲರು ದಿಗಂಬರ ಪಂಥದ ಜೈನರು, ಈ ಪರಿಸರದಲ್ಲಿ ಶಿರಗುಪ್ಪಿ, ಶೇಡಬಾಳ, ಉಗಾರ, ಕುಸನಾಳ, ಐನಾಪುರ, ದರೂರ, ತೀರ್ಥ, ಕಾಗವಾಡ, ನಂದೀಶ್ವರದಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಇವರು ಸಾತ್ವಿಕರು, ಶ್ರಾವಕರು ಧರ್ಮದಲ್ಲಿ ಶ್ರದ್ಧೆವುಳ್ಳವರು.

ಇನ್ನು ಒಟ್ಟಾರೆ ಅಥಣಿ ಪರಿಸರದಲ್ಲಿ ಬ್ರಾಹ್ಮಣರ ಸಂಖ್ಯೆ ಕಡಿಮೆ ಇದೆ. ಆದರೆ ಅಥಣಿಯಲ್ಲಿ ಇವರ ಸಂಖ್ಯೆ ಹೆಚ್ಚಿರುವುದು ಕಂಡುಬರುತ್ತದೆ. ಇಲ್ಲಿಯ ಬ್ರಾಹ್ಮಣರಲ್ಲಿ ಸ್ಮಾರ್ತ ಮತ್ತು ವೈಷ್ಣವ ಎರಡು ಪಂಗಡದವರು ಇದ್ದಾರೆ. ಅಥಣಿಯ ಪಶ್ಚಿಮಕ್ಕೆ ಭೀಮದಾಸ ಉಗಾರ ಅವರಿಂದ ಸ್ಥಾಪಿತವಾದ ಅಭಿನವ ಮಂತ್ರಾಲಯ ಎಂದು ಖ್ಯಾತವಾದ ಶ್ರೀರಾಘವೇಂದ್ರ ಮಹಾಸ್ವಾಮಿಗಳ ಮಠವಿದೆ. ಅಲ್ಲದೆ ಶ್ರಾವಣಮಾಸದ ಪೌರ್ಣಿಮೆ ಅವಧಿಯಲ್ಲಿ ರಾಘವೇಂದ್ರ ಆರಾಧನಾ ಮಹೋತ್ಸವ ಜರುಗುತ್ತದೆ. ನೂರಾರು ಬ್ರಾಹ್ಮಣರು ಇತರೆ ಭಕ್ತಾದಿಗಳು ಆರಾಧನೆಯಲ್ಲಿ ಪಾಲ್ಗೊಳ್ಳುವರು. ಬಹುತೇಕವಾಗಿ ಬ್ರಾಹ್ಮಣರು ರಾಘವೇಂದ್ರ ಸ್ವಾಮಿಯನ್ನು ಆರಾಧ್ಯದೈವವಾಗಿ ಆರಾಧಿಸುತ್ತಾರೆ. ಹಾಗೆಂದ ಮಾತ್ರಕ್ಕೆ ಇತರೆ ದೇವತೆಗಳ ಹಬ್ಬಹರಿದಿನಗಳಲ್ಲಿ ಭಾಗವಹಿಸುತ್ತಿಲ್ಲ ಎಂದಲ್ಲ, ಎಲ್ಲಾ ಹಬ್ಬಗಳನ್ನು ಆಚರಿಸುತ್ತಾರೆ.

ಅಥಣಿ ಪರಿಸರದಲ್ಲಿ ಸುಮಾರು ಊರುಗಳಲ್ಲಿ ಕುರುಬರು ಕಂಡುಬರುತ್ತಿದ್ದು, ಬಹಳಷ್ಟು ಸಂಖ್ಯೆಯಲ್ಲಿ ಅಥಣಿ, ಅರಟಾಳ, ಬ್ಯಾಡಗಿ, ಮುರುಗುಂಡಿಗಳಲ್ಲಿ ವಾಸವಾಗಿದ್ದಾರೆ. ಇವರಲ್ಲಿ ಹತ್ತಿ ಕಂಕಣ, ಉಣ್ಣೆಕಂಕಣ

ಎಂದು ಎರೆಡು ಪಂಗಡಗಳಿವೆ. ಕುರುಬರಲ್ಲಿ ನಿರಕ್ಷರಿಗಳೇ ಹೆಚ್ಚು. ತಮ್ಮ ತಮ್ಮ ಊರುಗಳಲ್ಲಿ ಡೊಳ್ಳಿನಮೇಳ ಕಟ್ಟಿಕೊಂಡು ಹಾಡು ಹೇಳುವ ಕಲೆ ಇವರಿಗೆ ಸಾಧಿಸಿದೆ. ಇವರು ಮಾಳಿಂಗರಾಯ ಮತ್ತು ಭೀರದೇವರ ಭಕ್ತರು. ಇವರ ಹಣೆಯಲ್ಲಿ ಭಂಡಾರವಿರುವುದು ರೂಢಿ, ಡೊಳ್ಳಿನ ಹಾಡಿನ ಜೊತೆಗೆ ಡೊಳ್ಳುಕುಣಿತವು ಇರುತ್ತದೆ. ಲಾಗಹಾಕುವುದು ಗೋಪುರ ನಿರ್ಮಿಸುವುದು ಮೊದಲಾದ ಕಸರತ್ತು ಪ್ರದರ್ಶಿಸುತ್ತಾರೆ. ಕುರುಬರು ಗಟ್ಟಿಮುಟ್ಟಾದ ಆರೋಗ್ಯಕಾಯರಾಗಿದ್ದಾರೆ. ಅಥಣಿಯಲ್ಲಿ ಕುರುಬರ ಗಲ್ಲಿ ಎಂದೇ ಕರೆಯುವ ಒಂದು ಸ್ಥಳವಿದೆ. ಅಲ್ಲಿ ಬಹುತೇಕ ಕುರುಬ ಜನಾಂಗದವರೇ ನೆಲಸಿದ್ದಾರೆ. ಬೀರದೇವರ ಗುಡಿಯು ಬಹುದೊಡ್ಡದಾಗಿದೆ. ಹಾಗೆಯೇ ಮುರಗುಂಡಿಯಲ್ಲಿ (ಮುರುಗುಂಡೇಶ್ವರ) ಸಿದ್ದೇಶ್ವರ, ಐನಾಪುರದ ಸಿದ್ದೇಶ್ವರ ಮೋಳೆಯ ಸಿದ್ದೇಶ್ವರ ಇವರುಗಳು ಭಂಡಾರದಾರಿಗಳು.

ನನ್ನ ಪ್ರಬಂಧದ ಪ್ರಮುಖ ಸಮುದಾಯದವು ಅಂದರೆ ವಾಲ್ಮೀಕಿ ಸಮುದಾಯವು ಅಥಣಿ ಪರಿಸರದ ಕಲ್ಲೊತ್ತಿ, ಶೇಡಬಾಳ, ಬ್ಯಾಡರಹಟ್ಟಿ, ರಡ್ಡೇರಹಟ್ಟಿ, ಐನಾಪುರ, ಅಡಾಳಹಟ್ಟಿ, ಅವರಕೋಡು ಮುಂತಾದ ೧೮-೨೦ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಬ್ಯಾಡರಹಟ್ಟಿಯಲ್ಲಿ ಬಹುತೇಕ ಬ್ಯಾಡಸಮುದಾಯದವರೇ ವಾಸವಾಗಿದ್ದಾರೆ. ಇವರ ಆರಾದ್ಯ ದೈವ ಹನುಮಂತದೇವನಾಗಿದ್ದಾನೆ. ಅವರಕೋಡು ಹನುಮಪ್ಪ ಈ ಪರಿಸರದಲ್ಲಿ ಹೆಚ್ಚು ಭಕ್ತಾದಿಗಳನ್ನು ಪಡೆದಿದ್ದು ವಿಶೇಷವಾದ ನಡವಳಿಕೆಯನ್ನು ಹೊಂದಿದ ದೈವವಾಗಿದ್ದಾನೆ. ಇಲ್ಲಿ ಈ ದೈವಕ್ಕೆ ಶಬ್ದವು ಆಗಿಬರುವುದಿಲ್ಲವಂತೆ. ಹಾಗಾಗಿ ಒಂದು ಹಿಟ್ಟಿನ ಗಿರಣಿಯು ಸಹ ಅಲ್ಲಿ ಇರುವುದಿಲ್ಲ. ಈ ದೇವರು ಸ್ವಯಂಭೂದೇವರು.

ಉದ್ಯೋಗ

ಅಥಣಿ ಪರಿಸರದಲ್ಲಿ ವ್ಯವಸಾಯವೇ ಪ್ರಮುಖ ಉದ್ಯೋಗವಾಗಿ ಕಂಡುಬರುತ್ತದೆ. ವ್ಯವಸಾಯದಿಂದ ಮುಖ್ಯವಾಗಿ ಕಬ್ಬು, ದ್ರಾಕ್ಷಿ, ಜೋಳ, ಮೆಕ್ಕೆಜೋಳ, ಗೋದಿ, ಶೇಂಗಾ, ಸೂರ್ಯಕಾಂತಿ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಮುಖ್ಯ ಉದ್ಯೋಗ ವ್ಯವಸಾಯವೇ ಆಗಿದ್ದರೂ, ಗುಡಿಕೈಗಾರಿಕೆಗಳು ಜೀವಂತವಾಗಿವೆ. ಅಥಣಿಯಲ್ಲಿ ವೀರಶೈವರು ಬಹುಸಂಖ್ಯಾತರಿದ್ದು, ಇವರಲ್ಲಿ ಹೆಚ್ಚು ಜನರು ಬೇಸಾಯ ಮಾಡುತ್ತಾರೆ. ಉಳಿದವರು ವ್ಯಾಪಾರ, ಕೂಲಿಕೆಲಸ ಮಾಡಿ ಉಪಜೀವನವನ್ನು ಸಾಗಿಸುತ್ತಾರೆ. ಇವರು ಸಾತ್ವಿಕ ಸ್ವಭಾವದವರು. ದೇವರು-ಧರ್ಮದಲ್ಲಿ ಅತೀವ ನಂಬಿಕೆಯನ್ನಿಟ್ಟವರು. ಇವರುಗಳಲ್ಲಿ ಇತ್ತೀಚಿಗೆ ಸರ್ಕಾರಿ, ಅರೆಸರಕಾರಿ ಉದ್ಯೋಗಗಳನ್ನು ಹಿಡಿದು ಜೀವನ ಸಾಗಿಸುತ್ತಾರೆ. ಬ್ರಾಹ್ಮಣರಲ್ಲಿಯೂ ಕೂಡ ಬಹಳಷ್ಟು ಜನ ವ್ಯಾಪಾರಮಾಡಿಕೊಂಡು ಬಂದಿದ್ದಾರೆ. ಇನ್ನು ಕೆಲವರು ಅರ್ಚಕ, ಜ್ಯೋತಿಷಿಯಾಗಿ ಕೆಲಸ ನಿರ್ವಹಿಸುತ್ತಿದ್ದರೂ ಉಳಿದವರು ಸರ್ಕಾರಿ ಅಥವಾ ಅರೆಸರ್ಕಾರಿ ಕೆಲಸಗಳನ್ನು ನಿರ್ವಹಿಸಿಕೊಂಡು ಬಂದಿದ್ದಾರೆ.

ಕುರುಬರು ಕುರಿಸಾಕುವುದು, ಕಂಬಳಿ ನೇಯುವುದು ಮೊದಲಾದ ಕೆಲಸವನ್ನು ಮಾಡುತ್ತಿದ್ದಾರೆ. ಜೊತೆಗೆ ಬೇಸಾಯ ವೃತ್ತಿಯನ್ನು ಕೈಕೊಂಡಿದ್ದಾರೆ. ಇತ್ತೀಚಿಗೆ ಕೆಲವರು ಶಿಕ್ಷಣವನ್ನು ಪಡೆದು ಸರ್ಕಾರಿ ಉದ್ಯೋಗ ಹಿಡಿದು, ಜೀವನ ಮಾಡುತ್ತಾರೆ.

ಬೇಡ ಸಮುದಾಯದವರು ಶಿಕ್ಷಣದಿಂದ ವಂಚಿತರಾಗಿದ್ದು ಬೇಟೆಯಾಡುವ ಕೆಲಸವನ್ನು ಕಳ್ಳತನದಿಂದ, ದುಷ್ಟತನದಿಂದ ಹಿಂದಕ್ಕೆ ನಿರ್ವಹಿಸಿಕೊಂಡು ಬಂದಂತೆ ಕಾಣುತ್ತಿದ್ದರೂ, ಇತ್ತೀಚಿನ ದಿನಮಾನಗಳಲ್ಲಿ ಪ್ರಜ್ಞಾವಂತರಾಗಿ, ಮಕ್ಕಳನ್ನು ಶಾಲೆಗೆ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡಿದ್ದಾರೆ. ಕೂಲಿ ಕೆಲಸ ಮಾಡಿಕೊಂಡು, ಅಲ್ಪ-ಸ್ವಲ್ಪ ಭೂಮಿಯಲ್ಲಿಯೇ ಬೇಸಾಯ ವೃತ್ತಿಯನ್ನು ಮಾಡಿಕೊಂಡು ಬಂದಿದ್ದಾರೆ.

ಕಮ್ಮಾರರು, ಬಡಿಗೇರು, ಕುಂಬಾರರು, ತಮ್ಮ ತಮ್ಮ ಉದ್ಯೋಗದಲ್ಲಿಯೇ ಮುಂದುವರಿದುಕೊಂಡು ಬಂದಿದ್ದು ತಮ್ಮ ಕುಟುಂಬಗಳಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದಾರೆ. ತಮ್ಮ ಕುಲ ಕಸುಬುಗಳಿಂದಲೇ ಜೀವನವನ್ನು ನಡೆಸುತ್ತಿದ್ದಾರೆ. ವೈಜ್ಞಾನಿಕವಾಗಿ ಮುಂದುವರಿದಿರುವ ಈ ಸಂದರ್ಭದಲ್ಲಿ ನಗರೀಕರಣದ ಪ್ರಭಾವದಿಂದಾಗಿ ಇವರು ಇಂದು ತತ್ತರಗೊಂಡಿದ್ದಾರೆ. (ಹಾಗೆಯೇ ಪೈಪೋಟಿ ಜೀವನವನ್ನು ನಡೆಸುತ್ತಿದ್ದಾರೆ) ಇಂದು ಜನತೆ ಅಡುಗೆ ಮಾಡುವುದಕ್ಕಾಗಿ ಸ್ಟೀಲ್, ತಾಮ್ರ, ಅಲ್ಯುಮಿನಿಯಂ ಸಾಮಾನುಗಳಿಗೆ ಮಾರು ಹೋಗಿರುವುದರಿಂದ ಕುಂಬಾರರು ತಮ್ಮ ವೃತ್ತಿಯ ಮಹತ್ವವನ್ನು ಕಳೆದುಕೊಳ್ಳುತ್ತಿದ್ದಾರೆ.

ಅಕ್ಕಸಾಲಿಗರು ಅಥವಾ ಪತ್ತಾರರು ತಮ್ಮ ಕುಲಕಸುಬು ಆಗಿರುವ ಟಂಕಸಾಲೆಯ ವೃತ್ತಿಯಿಂದ ಸಣ್ಣಗೆ ಮುಂದುವರಿದುಕೊಂಡು ನೆಮ್ಮದಿಯ ಜೀವನವನ್ನು ಮಾಡುತ್ತಿದ್ದಾರೆ. ಮಕ್ಕಳಿಗೆ ಶಿಕ್ಷಣ ಕೊಡಿಸಿ ಸರ್ಕಾರಿ ಕೆಲಸ ಕೊಡಿಸುವ ಸಿದ್ಧತೆಯಲ್ಲಿದ್ದಾರೆ. ಕೆಲವರು ಈಗಾಗಲೇ ಅಂತಹ ಕೆಲಸದಲ್ಲಿ ಮುಂದುವರಿದಿದ್ದಾರೆ.

ಏನೇ ಆದರೂ ನಗರೀಕರಣದ ಪ್ರಭಾವ ಹೆಚ್ಚಾಗುತ್ತಿರುವ ಈ ಸಮಯದಲ್ಲಿ ಹಾಗೆಯೇ ಜನರು ನಗರ ಜೀವನದ ರೀತಿ-ನೀತಿಗಳಿಗೆ ಮಾರುಹೋಗುತ್ತಿರುವ ಸಮಯದಲ್ಲಿ ಇಂತಹ ಕುಲಕಸುಬನ್ನು ನಂಬಿಕೊಂಡಿರುವ ಜನರು ಅತಂತ್ರ ಸ್ಥಿತಿಯಲ್ಲಿದ್ದಾರೆನಿಸುತ್ತದೆ.

ಚಮ್ಮಾರರು ಚರ್ಮದಿಂದ ತಯಾರಿಸುವ ವಸ್ತುಗಳನ್ನು ತಯಾರಿಸುತ್ತಾರೆ. ಅಥಣಿಪರಿಸರದ ಅಥಣಿ, ಮದಭಾವಿ, ಐನಾಪುರ ಮುಂತಾದ ಸ್ಥಳಗಳಲ್ಲಿ ಚಮ್ಮಾರಿಕೆಯಲ್ಲಿ ತೊಡಗಿದ್ದಾರೆ. ಅಥಣಿ ಮತ್ತು ಮದಭಾವಿ ಚಪ್ಪಲಿಗಳು ದೇಶಾದ್ಯಂತ ಬೇಡಿಕೆಯಿದ್ದು, ಹೊರದೇಶಕ್ಕೆ ಕಳುಹಿಸಲ್ಪಡುತ್ತಿವೆ. ಹಲವಾರು ಚರ್ಮಾಲಯಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ.

ಅಧ್ಯಾಯ ಮೂರು

ವಾಲ್ಮೀಕಿ ಸಮುದಾಯದ ಪರಂಪರೆ

೩.೧. ಸಾಹಿತ್ಯ

೩.೨. ಶಾಸನ

೩.೩. ಸಮುದಾಯದ ಭೌಗೋಳಿಕ ಪರಿಸರ

೩.೪. ಸಿಂಧೂರ ಲಕ್ಷ್ಮಣ

ಅಧ್ಯಾಯ ಮೂರು

ವಾಲ್ಮೀಕಿ ಸಮುದಾಯದ ಪರಂಪರೆ

ವೇದ ಪೂರ್ವ ಭಾರತದ ಮೂಲನಿವಾಸಿಗಳನ್ನು ಕುರಿತು ಆರ್ಯಕೃತ ಗ್ರಂಥಗಳಲ್ಲಿಯೇ ಉಕ್ತವಾಗಿರುವಂತೆ ಕಿರಾತರು, ನಿಶಾಧರು, ಪುಳಿಂದರು, ವ್ಯಾಧರು, ಫಣಿಗಳು, ನಾಗರು, ವಾನರು, ಅಸುರರು ಎಂದು ಉಲ್ಲೇಖಿಸಿರುವುದನ್ನು ನೋಡಿದರೆ ಇವರು ಆರ್ಯರ ಶತ್ರುಗಳಾಗಿದ್ದರು ಎಂದು, ಆರ್ಯ, ದ್ರಾವಿಡರಿಗಿಂತ ಮೊದಲೇ ಇದ್ದ ಮೂಲನಿವಾಸಿಗಳೆಂತಲೂ ತಿಳಿಯುತ್ತದೆ.

ಈ ಮೂಲ ನಿವಾಸಿಗಳು ಶಿಲಾ ಆಯುಧಗಳನ್ನು ಗದೆ, ಗಂಡುಗೊಡಲಿಗಳನ್ನು, ಭರ್ಚಿಗಳನ್ನು ಬಳಸುತ್ತಿದ್ದರು. ಅಂತೆಯೇ ಇವರ ವೃತ್ತಿ ಬೇಟೆಯಾಡುವುದು ಮತ್ತು ಪಶುಪಾಲನೆಯಾಗಿತ್ತು ಎಂದು ತಿಳಿಯುತ್ತದೆ. ಮೂಲತಃ ಕಾಡಿನಲ್ಲಿ ವಾಸವಾಗಿದ್ದುಕೊಂಡು ಬೇಟೆಯ ವೃತ್ತಿಯನ್ನು ಮುಂದುವರೆಸಿಕೊಂಡು ಬದುಕುವ ಜನಾಂಗವನ್ನು ಬೇಡರು ಎಂದು ಕರೆಯಲಾಗಿದೆ. ನಾಗರೀಕತೆಯ ಬೆಳವಣಿಗೆಯ ಹಂತದಲ್ಲಿ ಇವರು ಗ್ರಾಮವಾಸಿಗಳಾಗಿ ಕೃಷಿ ಮತ್ತಿತರ ವೃತ್ತಿಗಳನ್ನು ಕೈಗೊಂಡರು. ಇವರಿಗೆ ಬೇಡರ್, ಕಿರಾತ, ಶಬರ, ವ್ಯಾಧ ಎಂಬ ಹೆಸರುಗಳು ಇವೆ. ಈ ಬುಡಕಟ್ಟು ಸಮುದಾಯದವರು ಕಣ್ವಋಷಿಯ ವಂಶಜರೆಂಬ ನಂಬಿಕೆಯು ಇದೆ. ಅದಕ್ಕಾಗಿಯೇ ಇವರು ತಮ್ಮನ್ನು ಕ್ಯಾಣ್ಯಮ್ ಕುಲದವರೆಂದು ಕರೆದುಕೊಳ್ಳುತ್ತಾರೆ. ತಮ್ಮ ವಂಶದ ಮೂಲಪುರುಷ ವಾಲ್ಮೀಕಿ ಮಹರ್ಷಿಯೆಂಬ ಮತ್ತೊಂದು ಸತ್ಯದ ಹಿನ್ನೆಲೆಯಲ್ಲಿ ವಾಲ್ಮೀಕಿ ಸಮುದಾಯದವರು ನಮ್ಮ ವಂಶದ ಮೂಲಪುರುಷ ವಾಲ್ಮೀಕಿ ಮಹರ್ಷಿ ಎಂದು ನಂಬಿದ್ದಾರೆ.

ಹೀಗೆ ಎಲ್ಲಾ ಬುಡಕಟ್ಟುಗಳಲ್ಲಿಯೂ ಪ್ರಪಂಚದ ಹುಟ್ಟನ್ನು ಕುರಿತು ಸ್ವಾರಸ್ಯಕರವಾದಂತಹ ಜನಪದ ಕಥೆಗಳು, ಐತಿಹ್ಯಗಳಿದ್ದು ಆ ಪ್ರಪಂಚದ ಹುಟ್ಟಿನ ಆರಂಭಕ್ಕೆ ತಮ್ಮ ಬುಡಕಟ್ಟಿನ ಮೂಲ ಪುರುಷನೇ ಕಾರಣ ಎಂದು ಹೇಳಿಕೊಳ್ಳುವುದು ಸಾಮಾನ್ಯ. ಅದೇ ರೀತಿ ಇಲ್ಲಿಯು ನಾವು ನಂಬಿಕೆಯನ್ನು ಕಾಣಬಹುದು. ಬೇಡ ಜನಾಂಗವು ಬುಡಕಟ್ಟುಗಳಲ್ಲಿ ಒಂದು ಎನ್ನುವುದು ನಿರ್ವಿವಾದ. ಈ ಸಮುದಾಯದ ಮೂಲವನ್ನು ಅರಿಯಲು ಕಥೆ ಐತಿಹ್ಯಗಳು, ಪಠ್ಯಗಳು ಸಹಾಯ ಮಾಡುತ್ತವೆ.

ಈ ಬೇಡ ಸಮುದಾಯಕ್ಕೆ 'ನಾಯಕರು' ಎಂಬ ಪರ್ಯಾಯ ಪದವು ಕ್ರಿ.ಶ. ೯ನೆಯ ಶತಮಾನದಿಂದಲೂ ಬಳಕೆಯಲ್ಲಿದೆ. ಕಾರಣ ಬೇಡ ಸಮುದಾಯವು ಮೂಲ ದ್ರಾವಿಡ ಸಮುದಾಯವಾಗಿದೆ.

ಅದಕ್ಕೆ ಪುಳಿಂದ, ಭಿಲ್ಲ, ಕಿರಾತ, ವ್ಯಾಧ, ಶಬರ, ನಿಷಾಧ ಮುಂತಾದ ಪುರಾತನ ಹೆಸರುಗಳು ಇವೆ. ಅಂತೆಯೇ ದ್ರಾವಿಡ ಭಾಷೆಗಳಲ್ಲಿ ವೇಡನ್, ವೇಂದೆನ್, ವೆಟ್ಟುವನ್ ಎಂದೆಲ್ಲಾ ಹೆಸರುಗಳು ಕೇಳಿಬರುತ್ತವೆ. ಅವರು ಆಡುತ್ತಿದ್ದ ಬೇಟೆಗನುಸಾರವಾಗಿ ಅವರಿಗೆ ಎಯಿನರ್, ಪುಲಿಂದರ್, ಪುಳಿಇಕಾರ್, ಕುಳಿಂದರ್ ಎಂಬ ಪದಗಳು ಇದ್ದವು. ಹಳಗನ್ನಡದಲ್ಲಿ ವೇಡರ್, ವೇಶರ್, ಏದಿರ್, ಬಿಲ್ಲ ಬೇಂಟೆಯವರ್, ಬೇಂಟೆಕಾರ, ವಿಯದರ, ಬಿಯದರ, ಕುಣಿಂದರ್, ಕೋಮ್ ಎಂಬ ಹೆಸರುಗಳು ಕಂಡುಬರುತ್ತಿವೆ.

೩.೧. ಸಾಹಿತ್ಯ

ಭಾರತ ದೇಶದ ಆದಿಕಾವ್ಯವೆಂದು ಕರೆಯುವ ರಾಮಾಯಣವನ್ನು ರಚಿಸಿದವರು ಬೇಡನಾದ ವಾಲ್ಮೀಕಿ ಮುನಿ. ಇದರಿಂದ ನಮ್ಮ ಭಾರತದಲ್ಲಿ ಆದಿಮ ಸಮುದಾಯಗಳಲ್ಲಿ ಬೇಡ ಜನಾಂಗವೂ ಒಂದು ಎಂದೂ ಬಹುಪುರಾತನ ಕಾಲದಿಂದಲೂ ಈ ಜನಾಂಗ ಅಸ್ತಿತ್ವದಲ್ಲಿತ್ತು ಎಂಬುದು ತಿಳಿದು ಬರುತ್ತಿದೆ.

ಅಷ್ಟೇ ಅಲ್ಲದೆ ವಾಲ್ಮೀಕಿ ಮುನಿಯು ಬೇಟೆಯೇ ಜೀವನಾಧಾರವಾಗಿರುವ ಪಂಗಡವಾದ ಬೇಡ ಸಮುದಾಯಕ್ಕೆ ಸೇರಿದವನು ಎಂಬುದು ಸತ್ಯವಾದುದು. ಹಾಗೆಯೇ ವಾಲ್ಮೀಕಿ ರಾಮಾಯಣದ ಒಂದು ಮಹತ್ವದ ಪಾತ್ರ ಶಬರಿ. ಈಕೆಯು ಕೂಡ ಬೇಡತಿಯೇ ಎಂದು ರಾಮಾಯಣ ತಿಳಿಸುತ್ತದೆ. ರಾಮನ ಭಕ್ತಳಾಗಿ ಪಂಪಾಕ್ಷೇತ್ರದ ಸಮೀಪವಾಸವಾಗಿದ್ದಳೆಂಬುದು ರಾಮಲಕ್ಷ್ಮಣರು ಅಲ್ಲಿಗೆ ಬಂದಾಗ ಅವರಿಗೆ ಬೋರೆಯ ಹಣ್ಣನ್ನು ನೀಡಿ ಸತ್ಕರಿಸಿದಳೆಂದು ಉಲ್ಲೇಖನೀಯ. ಕಾರಣ ರಾಮಾಯಣ ಮಹಾಭಾರತಗಳಿಂದಲೇ ಬೇಡ ಸಮುದಾಯದ ಹಲವಾರು ಉಲ್ಲೇಖಗಳು ನಮಗೆ ದೊರೆಯುತ್ತಿವೆ. ಪುಲಿಂದ, ನಿಷಾದ, ವ್ಯಾಧ ಮುಂತಾದ ಹೆಸರಿನಿಂದ ಈ ಸಮುದಾಯದ ಉಲ್ಲೇಖಗಳು ದೊರೆಯುತ್ತವೆ. ಏಕಲವ್ಯನು ಹಿರಣ್ಯಾಧನು ಎನ್ನುವ ನಿಷಾದರಾಜನ ಮಗನಾಗಿದ್ದನೆಂಬ ಸಂಗತಿ ಪ್ರಸಿದ್ಧವಾದುದು.

ಮಹಾಭಾರತದ ಕಿರಾತ ರುದ್ರಲೀಲೆಯ ಪ್ರಸಂಗದ, ಕಿರಾತರ್ಜುನ ವಿಜಯ ಪ್ರಸಂಗವು ಒಂದು. ಶಿವನು ಬೇಡವೇಷದಿಂದ ಬಂದು ಮೂಕದಾನವನನ್ನು ಸಂಹರಿಸಿ ಅರ್ಜುನನಿಗೆ ಪಾಶುಪತಾಸ್ತ್ರ ದಾನ ಮಾಡಿದ ಪ್ರಸಂಗ. ಅರಣ್ಯಪರ್ವದಲ್ಲಿ ಬರುವ ಧರ್ಮವ್ಯಾಧನ ಕತೆಯು ಮನನೀಯ. ಹೀಗೆ ರಾಮಾಯಣ ಮಹಾಭಾರತಗಳಲ್ಲದೆ ಇನ್ನಿತರ ಪ್ರಾಚೀನ ಗ್ರಂಥಗಳಲ್ಲಿಯೂ ಬೇಡ ಸಮುದಾಯಕ್ಕೆ ಸಂಬಂಧಪಟ್ಟ ವಿವರಗಳು ದೊರೆಯುತ್ತವೆ.

ಕನ್ನಡದ ಆದಿ ಕೃತಿಯಾದ ವಡ್ಡಾರಾಧನೆಯಲ್ಲಿ ಈ ಜನಾಂಗ ಸಂಬಂಧಿಯಾದ ಉಲ್ಲೇಖಗಳು ಬಂದಿವೆ. ಈ ಕೃತಿಯ ೧೫ನೇ ಕತೆಯಾದ ಚಿಲಾತ ಪುತ್ರನ ಕತೆಯ ಚಿಲಾತಪುತ್ರ ಎಂಬುದು ಸಂಸ್ಕೃತ ಕಿರಾತಪುತ್ರ ಎಂಬುದರ ಪ್ರಾಕೃತರೂಪವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಅದರಂತೆ ವಿದ್ಯುಚ್ಚೋರನೆಂಬ ರಿಷಿಯ ಕತೆಯಲ್ಲಿ ತಳವಾರ ಪದಬಳಕೆ, ಸುಕುಮಾರ ಸ್ವಾಮಿಯ ಕಥೆಯಲ್ಲಿನ ಸುಧಾಮೆಯ ಉಪಕಥೆಯಲ್ಲಿ ತಳವಾರ, ತಳರಾ ಎನ್ನುವ ಉಲ್ಲೇಖ ಬೇಡ ಸಮುದಾಯವನ್ನು ಗುರುತಿಸುವಂತವುಗಳಾಗಿವೆ.

ಅಲ್ಲದೇ ಹನ್ನೊಂದನೆ ಶತಮಾನದ ನಾಗವರ್ಮನ ಕರ್ನಾಟಕ ಕಾದಂಬರಿಯಲ್ಲಿನ ಒಂದು ಸಂದರ್ಭ ನೋಡಿದನಾಮರನ ಚರಚ್ಚಬರ ನಾಯಕನು ಎನ್ನುವಲ್ಲಿ ಚಬರ ನಾಯಕ, ಪುಳಿಂದ, ವ್ಯಾದ, ಕಿರಾತ, ನಿಷಾದ ಪದಗಳು ಬೇಟೆಗೆಂದು ಬಂದ ಬೇಟೆನಾಯಕನನ್ನು ಕುರಿತಾದ ಮಾತುಗಳು. ಇಂದು ಆಧುನಿಕ ಸಂದರ್ಭದಲ್ಲಿ ರಾಷ್ಟ್ರಕವಿ ಕುವೆಂಪು ಅವರು ಪಕ್ಷಿಕಾಶಿ ಕವನ ಸಂಕಲನದಲ್ಲಿ ಓಬಿಯದ ನಿನಗೆ ಹುಗಲಿಲ್ಲ ಇದು ಪಕ್ಷಿಕಾಶಿ ಎನ್ನುವಲ್ಲಿ ಬಿಯದ-ಬ್ಯಾಡನನ್ನು ಕುರಿತ ಪದವಾಗಿದೆ. ಬೇಡ ನಾಯಕರ ಗಣರಾಜ್ಯಗಳಾಗಿದ್ದ, ಬೇಡವಟ್ಟುಗಳಲ್ಲಿ ಕೆಲವರಂತೂ ದೊಡ್ಡ, ದೊಡ್ಡ ಚಕ್ರವರ್ತಿಗಳಿಗೂ ತಗ್ಗಿ ಬಗ್ಗಿ ನಡೆಯುತ್ತಿರಲಿಲ್ಲವೆಂದು ಇಮ್ಮಡಿ ತೈಲಪ ಚಕ್ರವರ್ತಿ (೯೭೩-೯೯೭)ಯು ಆಕಾಲದ ಒಂದು ಘಟನೆಯಿಂದ ಗೊತ್ತಾಗುತ್ತದೆ. ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ತೋರಗಲ್ಲು, ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲೂಕು ರಟ್ಟೆಹಳ್ಳಿ, ಉತ್ತರ ಕರ್ನಾಟಕದ ಅಜೀರಗೊಳ ಎಂಬ ಸ್ಥಳಗಳಲ್ಲಿ ಬೂತುಗ ಬೀರುಗ ಮತ್ತು ಗೋವೆಯ ಎಂಬ ಬೇಡನಾಯಕರು ತಮ್ಮ ಬೇಡವಟ್ಟಿಗಳನ್ನು ನಿರ್ವಹಿಸುತ್ತಾ ಯಾರಿಗೂ ಅಧೀನರಾಗದೇ ಸ್ವತಂತ್ರವಾಗಿದ್ದುಕೊಂಡು ಭಯಂಕರರಾಗಿದ್ದರು. ಅನೇಕ ಪೂರ್ವಕಾಲದ ಚಕ್ರವರ್ತಿಗಳಿಗೂ, ರಾಷ್ಟ್ರಕೂಟರು ಇವರನ್ನು ಸೋಲಿಸಲಾರದೆ ಹೋದರಂತೆ. ಕೊನೆಗೆ ತೈಲಪ ಚಕ್ರವರ್ತಿಯೇ ಅವರನ್ನು ಸೋಲಿಸಲು ದಂಡೆತ್ತಿ ಬರಬೇಕಾಯಿತಂತೆ. ಈ ಕುರಿತು ಸುಳಿವನ್ನು ನಾಗವರ್ಮನ ಇನ್ನೊಂದು ಮಹತ್ವದ ಕೃತಿ ಕಾವ್ಯಾವಲೋಕನ ಎಂಬ ಲಕ್ಷಣ ಗ್ರಂಥದಲ್ಲಿ ದೊರೆಯುತ್ತದೆ.

ತೊಱಗಲೆ ಱಟ್ಟೆಹಳ್ಳಿ ನೆಗಳ್ದಾಜಿರಗೋಳ

ಮೆನಿಪ್ಪುರ್ವುವೆ

ತ್ತಱಿಕೆಯ ಬೇಡವೆಟ್ಟುಗಳ ಭೂತುಗ, ಬೀರುಗ, ಗೋಯೆಯರ್ಕಳಂ

ನೆಱೆಯರೆ ನಿಪ್ಪೊಡಂ ಕಿಡಿಸಲಂಕದ ಮುನ್ನಿನ ಚಕ್ರವರ್ತಿಗಳ್

ಪೆಱರಳ ವೆಲ್ತವಂ ಕೆಡಿಸಿಕೊಟ್ಟಱೆ ತೈಲಪ ಚಕ್ರವರ್ತಿಯಾ!

ಎನ್ನುವ ಲಕ್ಷಣ ಪದ್ಯದಲ್ಲಿ ಬೇಡರ ಶಕ್ತಿ, ಸಾಮರ್ಥ್ಯ ಹಾಗೆಯೇ ಅವರ ಧೈರ್ಯವನ್ನು ಕಾಣಬಹುದು. ತ್ರಿಷಷ್ಠಿ ಶಲಾಕ ಪುರುಷರೆನಿಸಿದ ೬೩ ಜನ ಪುರಾತನರಲ್ಲಿಯೂ ಬೇಡ ಸಮುದಾಯದ ವ್ಯಕ್ತಿ ಬೇಡರ ಕಣ್ಣಪ್ಪನೆಂಬುವನು ಒಬ್ಬ. ಈತನು ಕಾಳಹಸ್ತಿಯಲ್ಲಿ ಶ್ರೀಕಾಳಹಸ್ತೇಶ್ವರನನ್ನು ಪೂಜಿಸಿ ಪ್ರಸಿದ್ಧನಾದವನು. ಅದೇ ರೀತಿ ೧೨ ಜನ ಆಳ್ವಾರರುಗಳಲ್ಲಿ ಒಬ್ಬರಾದ ಪರಶಲರು ಪ್ರಸಿದ್ಧರು. ಪರಶಲರು ಶೂದ್ರಜಾತಿಯ ಗುರಿಕಾರರೆಂದು ಹೇಳಲಾಗುತ್ತಿದೆ. ಪೂರ್ವಾಶ್ರಮದಲ್ಲಿ ರಾಜನ ಅಧಿಕಾರಿಯಾಗಿದ್ದು, ಕಾರಣಾಂತರಗಳಿಂದ ಕಳ್ಳತನ, ಸುಲಿಗೆಗಳನ್ನು ಮಾಡಿಕೊಂಡು ಬಂದಿದ್ದಾರೆಂದು ತಿಳಿಯುತ್ತದೆ. ತರುವಾಯ ವಿಷ್ಣು ಸಾಕ್ಷಾತ್ಕಾರಹೊಂದಿ ಪ್ರಸಿದ್ಧ ಭಕ್ತರೆನಿಸಿದರು ಬಹುಶಃ ಇವರೆಲ್ಲರೂ ಬೇಡರೆ.

ಹೀಗೆ ಅತಿ ಪ್ರಾಚೀನ ಕಾಲದಿಂದಲೂ ಇವರ ಜೀವನವು ಹಲವಾರು ರಂಗಗಳಲ್ಲಿ ಪ್ರಸಿದ್ಧಿಪಡೆಯುತ್ತಾ ಬಂದಿದ್ದರೂ ವ್ಯವಸ್ಥಿತವಾದ ಗ್ರಂಥಸ್ಥ ಸಾಮಾಗ್ರಿಗಳು ದೊರೆಯುದಿಲ್ಲವೆನ್ನುವುದು ದುಃಖಕರವಾಗಿದೆ. ಪ್ರಾಚೀನ ಕಾಲದಿಂದಲೂ ಇವರು ಯುದ್ಧಕಲೆಯಲ್ಲಿ ನುರಿತವರು, ಧೀರರು ಆಗಿದ್ದಾರೆನ್ನುವುದಕ್ಕೆ ಏಕಲವ್ಯ ಸಾಕ್ಷಿಯಾಗುತ್ತಾನೆ. ಅಲ್ಲದೆ ಬಿಲ್ಲುವಿದ್ಯೆಯು ಬೇಡರ ಹುಟ್ಟುಗುಣ, ಅದು ಬೇಡರಿಗೆ ಮೈಗಂಟಿದ ಚರ್ಮ, ಇತರರಿಗೆ ಮೈಮೇಲಿನ ಅಂಗಿ ಇದ್ದಹಾಗೆ ಎನ್ನುವ ಏಕಲವ್ಯ ನಾಟಕದ ಸಿದ್ಧಲಿಂಗಯ್ಯನವರ ಸಮರ್ಥನೆ ಸರಿಯಾದುದಾಗಿದೆ. ಇಷ್ಟರ ಮಟ್ಟಿಗೆ ಪುರಾತನಕಾಲದಿಂದಲೂ ತಮ್ಮ ಅಸ್ತಿತ್ವವನ್ನು ಇಂದಿನವರೆಗೂ ಉಳಿಸಿಕೊಂಡುಬರುವಲ್ಲಿ ಹೋರಾಟ ಮಾಡಬೇಕಾಗಿದೆ.

ಅದೇನೆ ಇದ್ದರೂ ಈ ನಾಯಕ/ವಾಲ್ಮೀಕಿ ಬುಡಕಟ್ಟು ಸಮುದಾಯವು ಆರ್ಯರ ಆಕ್ರಮಣಕ್ಕೆ ಒಳಗಾಗಿ ಭಾರತದ ತುಂಬೆಲ್ಲ ಹರಿದು ಹಂಚಿ ಹೋಗಿದ್ದಾರೆ. ಈ ಹಿನ್ನೆಲೆಯಲ್ಲಿ ವಲಸೆ ಬಂದ ಸಮುದಾಯವು ಕರ್ನಾಟಕದ ರಾಯಚೂರು, ಬಳ್ಳಾರಿ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಹೆಚ್ಚು ಜನರು ವಾಸವಾಗಿದ್ದಾರೆ. ಹಾಗೆಯೇ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯಲ್ಲಿಯೂ ಬಹುಸಂಖ್ಯೆಯಲ್ಲಿದ್ದಾರೆ. ಮಹಾರಾಷ್ಟ್ರದ ಕೆಲ ಪರಿಸರದಲ್ಲಿಯೂ ಬೇರಡ ಎನ್ನುವ ಹೆಸರಿನ ವಾಲ್ಮೀಕಿ ಸಮುದಾಯದವರಿದ್ದಾರೆ. ಕಾರಣ ಮಹಾರಾಷ್ಟ್ರದ ಗಡಿಭಾಗಕ್ಕೆ ಹೊಂದಿಕೊಂಡಿರುವ ಅಥಣಿ ಪರಿಸರದಲ್ಲಿ ಹಲವಾರು ಹಳ್ಳಿಗಳಲ್ಲಿ ಗುಡ್ಡಗಾಡುಗಳಲ್ಲಿ, ತೋಟಗಳಲ್ಲಿ ವಾಸಿಸುವ ಇವರು ಬೇರಡ, ನಾಯಕ, ವಾಲ್ಮೀಕಿ ಎಂದು ಕರೆಸಿಕೊಂಡು ಕಡಿಮೆ ಸಂಖ್ಯೆಯಲ್ಲಿ ಕಂಡುಬರುತ್ತಾರೆ.

ವಾಲ್ಮೀಕಿ ಸಮುದಾಯದವರು ಹಲವಾರು ಹಂತಗಳಲ್ಲಿ ಬೆಳೆದು ಬಂದು, ತಮ್ಮ ದಿನನಿತ್ಯದ ಆಹಾರಕ್ಕೋಸ್ಕರ ಗುಡ್ಡಗಾಡು ಪ್ರದೇಶಗಳಲ್ಲಿದ್ದು, ಪ್ರಾಣಿಪಕ್ಷಿ, ಬೇಟೆಯಾಡಿ ಅಲೆಮಾರಿಯಾಗಿ ಜೀವನವನ್ನು ಮಾಡಿ ನಂತರ ಹುಲ್ಲುಗಾವಲುಗಳನ್ನು ಹರಿಸಿಕೊಂಡು ದನಕರುಗಳನ್ನು ಸಾಕಲಾರಂಭಿಸಿದರು. ಆದಾದನಂತರ ಹೀಗೆ ತಿರುಗಾಡುವುದನ್ನು ನಿಲ್ಲಿಸಿ ದನಕರುಗಳ ಸಹಾಯದಿಂದ ವ್ಯವಸಾಯ ವೃತ್ತಿಯನ್ನು ಮಾಡಲಾರಂಭಿಸಿ, ಒಂದು ಕಡೆ ನೆಲೆನಿಲ್ಲುವುದನ್ನು ಕಲಿತುಕೊಂಡರು. ಅಂದಿನಿಂದ ಸಾಮಾಜಿಕ ಹೋರಾಟಗಳು ಧಾರ್ಮಿಕ ಹೋರಾಟಗಳು, ಆರ್ಥಿಕ ಹೋರಾಟಗಳು, ಧಾರ್ಮಿಕ ಆಚರಣೆಗಳು ಮುಂದುವರೆದುಕೊಂಡು ಬಂದವು ಎನ್ನಬಹುದು. ಪುರಾತನ ಕಾಲದಿಂದಲೂ ಕರ್ನಾಟಕದ ತುಂಬೆಲ್ಲಾ ವಾಲ್ಮೀಕಿ ಸಮುದಾಯದವರು ವಾಸಮಾಡುವುದು ಕಂಡು ಬಂದರೂ, ಬಳ್ಳಾರಿ, ಬೆಳಗಾವಿ, ಧಾರವಾಡ ಮತ್ತು ಕಲಬುರ್ಗಿಯಲ್ಲಿ ಹೆಚ್ಚಾಗಿಯೂ, ಚಿತ್ರದುರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಅತಿಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿರುವುದನ್ನು ಕಾಣಬಹುದು.

ಹೀಗೆ ಕರ್ನಾಟಕದಲ್ಲಿ ಮಾತ್ರವಲ್ಲದೆ ಇಡೀ ಭಾರತದಲ್ಲಿ ವಾಸವಾಗಿರುವ ಆದಿಮ ಸಮುದಾಯಗಳಲ್ಲಿ ಬೇಡ ಸಮುದಾಯವೂ ಒಂದು. ಕ್ರಿ.ಶ.೩ನೆಯ ಶತಮಾನದ ವೇಳೆಗೆ ಆಂಧ್ರಪ್ರದೇಶದ ನಾಗಾರ್ಜುನಕೊಂಡದ ಇಕ್ಷ್ವಾಕು ವಂಶದ ದೊರೆಗಳಿಂದ ಸ್ಥಳವರ/ತಲವರ/ತಳವರ/ತಳಾರ/ತಳವಾರ,

ಮಹಾತಲವರು/ನಾಡತಳವಾರ ಎಂಬ ಪೋಲೀಸ್ ವಿಭಾಗದ ಹುದ್ದೆಗಳು ಸೃಷ್ಟಿಸಲ್ಪಟ್ಟಿದ್ದವು. ಸ್ಥಲವರ ಎಂದರೆ ಸ್ಥಳೀಯ ಅಧಿಕಾರ ಎಂದು ತಿಳಿಯಬಹುದು. ಈ ಕಾರಣದಿಂದ ಇಕ್ಷ್ವಾಕುಗಳು ಈ ಸ್ಥಲವರ ಎಂಬ ಅಧಿಕಾರವನ್ನು ಸ್ಥಳೀಯರ ಮೂಲ ನಿವಾಸಿಗಳಾಗಿದ್ದ ಬೇಡರಿಗೆ ವಂಶಪಾರಂಪರ್ಯವಾಗಿ ಅನುಭವಿಸುವಂತೆ ಕಟ್ಟಳೆಮಾಡಿದರು. ಬೇಡರ ಜಾತಿಗೆ ಈ ತಳವಾರ ಚಾಕರಿಯು ಹೀಗೆ ಕ್ರಿ.ಪೂ. ೩ನೆಯ ಶತಮಾನದಿಂದಲೂ ಇತ್ತೀಚಿನವರೆಗೂ ನಡೆದುಕೊಂಡು ಬಂದು ಇಂದಿಗೂ ಕೆಲವು ಹಳ್ಳಿಗಳಲ್ಲಿ ಊರಿನ ಚಾಕರಿಯು ಈ ಸಮುದಾಯದವರಿಗೆ ಇದೆ.

ಅಲ್ಲದೆ ರಾಷ್ಟ್ರಕೂಟರ ಕಾಲದ ದ್ವಿತೀಯ ಭಾಷೆಯಾಗಿದ್ದಂತಹ ಅಪಭ್ರಂಶ ಭಾಷೆಯಲ್ಲಿ ನಾಹುಲ, ನಾಹೇಲ, ನಾಹಿಲ, ನಾಇಲ್ಲ, ವಾಹ. ಸಮರ, ಸಿಮಿರ, ಬಿಲಾಡ, ಭಿಲ್ಲ, ಪಾರದ್ಧಾಯ ಮುಂತಾದ ಅನೇಕ ಹೆಸರುಗಳು ಇವರ ಮೂಲದ ಬಗ್ಗೆ ಮಾಹಿತಿ ಒದಗಿಸುತ್ತವೆ. ಇನ್ನು ಈ ಎಲ್ಲಾ ಆಧಾರಗಳಿಂದ ತಿಳಿದುಬರುವುದೇನೆಂದರೆ ಕ್ರಿ.ಶ.೭ನೇ ಶತಮಾನದಿಂದ ೧೩ನೇ ಶತಮಾನದವರೆಗೆ ಬಾದಾಮಿ ಚಾಲುಕ್ಯರ ಕಾಲದಿಂದ ಹಿಡಿದು ಹೊಯ್ಸಳರ ಕಾಲದವರೆಗೆ ಈಗಿನ ಕರ್ನಾಟಕದ ಉದ್ದಗಲಕ್ಕೂ ಬೇಡರು, ಬೇಡರ ವೃತ್ತಿ ಬೇಟೆಯನ್ನು ಕುರಿತು, ಅವರು ಜೊತೆಗೆ ಬಳಸುತ್ತಿದ್ದ ಆಯುಧಗಳನ್ನು ಕುರಿತು ತಿಳಿಯಬಹುದು.

ಇವರು ಬಹಳಷ್ಟು ಧೈರ್ಯ-ಸಾಹಸಗಳಿಂದ ಕೂಡಿದ ಮನೋಭಾವನೆಯವರು ಹಾಗೂ ದೈಹಿಕ ಸಾಮರ್ಥ್ಯವನ್ನು ಹೊಂದಿದ್ದರಿಂದ ಆಳರಸರು ತಮ್ಮ ರಾಜ್ಯವನ್ನು ಶತ್ರುಗಳಿಂದ ಕಾಪಾಡಲು ಹಾಗೂ ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಶತ್ರುವಿನ ನೆಲ, ಜಲ, ಹೆಣ್ಣು, ಮತ್ತು ದನಕರುಗಳನ್ನು ವಶಪಡಿಸಿಕೊಳ್ಳಲು ನಿಯೋಜಿಸಿಕೊಂಡಿದ್ದರು. ನಂತರ ಅವರ ಧೈರ್ಯ ಮತ್ತು ಸಾಹಸ ಪ್ರವೃತ್ತಿಯನ್ನು ಗಮನಿಸಿ ಇವರನ್ನು ಸಿಪಾಯಿಗಳಾಗಿ ನಿಯೋಜಿಸಿಕೊಂಡು ಅವರಿಗೆ, ರಾಯ (ವೀರ)ಬೀರ ಗಾವುಂಡ (ಗೌಡ) ಮತ್ತು ನಾಯಕ ಎಂಬ ಬಿರುದುಗಳನ್ನು ನೀಡಿ ಉತ್ತೇಜನವನ್ನು ನೀಡಿರಬೇಕು. ಒಂದು ವ್ಯವಸ್ಥೆಯನ್ನು ಬಲಪಡಿಸಲು ಮತ್ತೊಂದು ವ್ಯವಸ್ಥೆಯ ಹೆಣ್ಣು, ದನಕರುಗಳನ್ನು ಕಳವು ಮಾಡಲು ತೊಡಗಿದ ಇವರು ಸಹಜವಾಗಿಯೇ ಸಮಾಜದಲ್ಲಿ ಕಳ್ಳರೆನಿಸಿಕೊಳ್ಳಬೇಕಾದ ಅನಿವಾರ್ಯತೆ ಬಂದಿರಬೇಕು ಎನಿಸುತ್ತದೆ.

೩.೨. ಶಾಸನ

ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಐನಾಪುರ ಗ್ರಾಮದ ಒಂದು ಶಾಸನವು ಗೌಡರ ವಾಡೆ ಬಸ್ತಿಯ ತಾಮ್ರಯಂತ್ರದ ಮದ್ಯದಲ್ಲಿ ಐನಾಪುರದ ಯಲಗೌಂಡನ ಮಡದಿ ಯಲವ್ವನ ಮಗಳು ಜಸವ ಈ ತಾಮ್ರಯಂತ್ರ ಮಾಡಿಸಿದಳೆಂದು ತಿಳಿಸುವಂತಿದೆ. ಸುಮಾರು ೧೭-೧೮ನೇ ಶತಮಾನದ ಅಕ್ಷರಗಳೆಂದು ಲಿಪಿಸಾದೃಶ್ಯದಿಂದ ಹೇಳಬಹುದು. ಆೈನಾಪುರದ ಯಲಗೌಂಡನ, ಭಾರ್ಯ್ಯಾಯಲವನ ಮಗಳು ಜಸವ.

ಇಲ್ಲಿ ಬರುವ ಪದಗಳನ್ನು ಮತ್ತು ಹೆಸರುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ೭ನೇ ಶತಮಾನದಲ್ಲಿ ಹೊಯ್ಸಳರ ನಂತರದ ಅವಧಿಯಲ್ಲಿ ಆಳರಸರು ನಾಯಕ ಜನಾಂಗದವರಿಗೆ ಕೊಡುತ್ತಿದ್ದ ಬಿರುದು

(ಗೌಂಡ) ಗೌಡ ಎಂದು ಇರುತ್ತಿತ್ತು. ಹಾಗೆಯೇ ಹೆಸರು ಯಲ್ಲವ್ವ, ಯಲಗೌಡ ಎನ್ನುವುದನ್ನು ನೋಡಿದರೆ ಈ ಗ್ರಾಮದ ಸುತ್ತಮುತ್ತಲು ಯಲ್ಲವ್ವನ ಗುಡಿಯಿರುವುದನ್ನು ನೋಡಬಹುದು. ಹಾಗೆಯೇ ವಾಲ್ಮೀಕಿ ಸಮುದಾಯದವರ ಆರಾಧ್ಯದೈವ ಇಲ್ಲಿನ ಯಲ್ಲವ್ವ ದೇವತೆ. ಹಾಗೂ ಯಲ್ಲವ್ವ ಎನ್ನುವ ಹೆಸರು ಹೆಚ್ಚಾಗಿ ಈ ಪರಿಸರದಲ್ಲಿ ವಾಲ್ಮೀಕಿ ಸಮುದಾಯದವರು ಇಡುವುದು ರೂಢಿ. ಈ ಕುರಿತು ಜನಾಂಗೀಯ ಅಧ್ಯಯನದ ಅಡಿಯಲ್ಲಿ ಇನ್ನು ಹೆಚ್ಚಾಗಿ ಮುಂದುವರಿದ ಶೋಧನೆಯನ್ನು ನಡೆಸಿದರೆ ಸತ್ಯ ಹೊರಬರಬಹುದು.

ನಾಯಕ ಎಂಬ ಉಪನಾಮವು ಮೊಟ್ಟಮೊದಲು ಹಾಸನಜಿಲ್ಲೆಯ ಅರಸಿಕೆರೆ ತಾಲೂಕಿನ ಕಣಕಟ್ಟೆ ಹೋಬಳಿ ಕಲ್ಲುಂಡಿ ಗ್ರಾಮದಲ್ಲಿ ದೊರೆತಿರುವ ಕ್ರಿ.ಶ.೯ನೆಯ ಶತಮಾನದ ಇಮ್ಮಡಿ ಸತ್ಯವಾಕ್ಯ ರಾಚಮಲ್ಲ ಗಂಗನ ಆಳ್ವಿಕೆಯ ಒಂದು ವೀರಗಲ್ಲಿನಲ್ಲಿ ದೊರಕುತ್ತದೆ. ಅದರಲ್ಲಿ 'ಪೈಗಡೆ ನಾಯಕ' ಎಂಬ ವೀರನು ಗೋಗ್ರಹಣದ ಯುದ್ಧದಲ್ಲಿ ಸತ್ತುದಾಗಿ ತಿಳಿಸಲಾಗಿದೆ. ಅಂದರೆ ೯ನೆಯ ಶತಮಾನಕ್ಕಿಂತ ಹಿಂದೆ ಬಹುಶಃ ನಾಯಕ ಎಂಬ ಪದಪ್ರಯೋಗವು ಬೇಡರ ಜನಾಂಗಕ್ಕೆ ಇರಲಿಲ್ಲವೆಂದು ತಿಳಿಯುತ್ತದೆ. ನಂತರ ಈ ವಾಲ್ಮೀಕಿ ಸಮುದಾಯಕ್ಕೆ ನಾಯಕ ಎಂಬ ಉಪನಾಮವು ಕಲ್ಯಾಣಿ ಚಾಲುಕ್ಯರ ಕಾಲದ ಕ್ರಿ.ಶ.೧೦-೧೧ನೆಯ ಶತಮಾನದ ಶಿಲಾಶಾನಗಳಲ್ಲಿ ಹೆಚ್ಚು ಹೆಚ್ಚಾಗಿ ಕಂಡುಬರುತ್ತದೆ.

ಚಾಲುಕ್ಯರ ಆಳ್ವಿಕೆಯಲ್ಲಿ ಆಡಳಿತದ ಉನ್ನತ ಅಧಿಕಾರದ ಸ್ಥಾನಗಳಲ್ಲಿ ಬ್ರಾಹ್ಮಣ ಅಧಿಕಾರಿಗಳಿರುತ್ತಿದ್ದರು. ಬ್ರಾಹ್ಮಣ ಅಧಿಕಾರಿಗಳು 'ಶ್ರೀಕರಣ ರಾಜ್ಯಾಧ್ಯಕ್ಷ' ಅಂತಃಪುರಾಧ್ಯಕ್ಷ ಮುಂತಾದ ಮುಖ್ಯ ಪದವಿಗಳನ್ನು ಅಲಂಕರಿಸಿದ್ದರೆನಿಸುತ್ತದೆ. ಇವರ ಹೆಸರಿನಲ್ಲಿಯು 'ನಾಯಕ' ಎಂಬ ಉಪನಾಮ ಕಂಡುಬರುತ್ತದೆ. ಅವರು ತಮ್ಮ ಶಾಸನಗಳಲ್ಲಿ ತಮ್ಮ ಜಾತಿಯನ್ನು ವಿಪ್ರವಂಶ/ಕಮಲಭವಂಶ ಎಂದೆಲ್ಲ ಕರೆದುಕೊಂಡಿದ್ದಾರೆ. ಇದರಿಂದ ನಾಯಕ ಎನ್ನುವ ಪದವು ಜಾತಿಸೂಚಕವಾಗಿರಲಿಲ್ಲವೆನಿಸುತ್ತದೆ. ಹಾಗೇ ನೋಡಿದರೆ ಇವತ್ತಿನ ಸಂದರ್ಭದಲ್ಲಿ ಅಥಣಿ ಪರಿಸರದಲ್ಲಿ ವಾಸಿಸುವ ಅದರಲ್ಲೂ ವಿಶೇಷವಾಗಿ ಬ್ರಾಹ್ಮಣ ಸಮುದಾಯದಲ್ಲಿ ನಾಯಕ ಎನ್ನುವ ಅಡ್ಡ ಹೆಸರಿನ ಬ್ರಾಹ್ಮಣರು ಕಂಡುಬರುತ್ತಾರೆ. ಹಾಗೂ ವೀರಶೈವದವರಲ್ಲಿಯೂ ನಾಯಕ ಅಡ್ಡಹೆಸರಿನವರು ಕಂಡು ಬರುತ್ತಾರಾದರೂ ಕಡಿಮೆ ಸಂಖ್ಯೆಯಲ್ಲಿದ್ದಾರೆ.

೧೨ನೆಯ ಶತಮಾನದಲ್ಲಿ ನಾಯಕ ಪದವು ಜಾತಿ ಸೂಚಕವಲ್ಲವೆಂದು, ಗೌರವ ಸೂಚಕಪದವೆಂದು ತಿಳಿಯಬಹುದಾದ ಸಂದರ್ಭದಲ್ಲಿಯೇ, ಗದಗ ಜಿಲ್ಲೆಯ ಹೊಂಬಳದ ಶಾಸನದಲ್ಲಿ ಇದೇ ಕಾಲದ ಒಂದು ಶಾಸನದಲ್ಲಿ ತಳಾಜಿರುಗಳ ಹೆಸರುಗಳ ಕೊನೆಯಲ್ಲಿ ನಾಯಕ ಎಂಬ ಉಪನಾಮವು ಕಂಡು ಬರುವುದಲ್ಲದೆ ತಳಾಜಿ, ತಳವಾರ, ನಾಯಕಂ ಎಂಬ ಪದಪ್ರಯೋಗ ಸಾಕಷ್ಟು ಸಂಖ್ಯೆಯಲ್ಲಿ ಬಂದಿದೆ. ಕಲ್ಯಾಣಿ ಚಾಲುಕ್ಯರ ನಾಲ್ಕನೇ ಚಕ್ರವರ್ತಿಯಾದ ಸೋಮೇಶ್ವರನ ಆಳ್ವಿಕೆಯಲ್ಲಿ, ಊರ ತಳವಾರ ನಾಯಕ ಮುಖ್ಯವಾಗಿ ಯಳಲೊಂದು ಹೊಜೆಯಂ ಬಿಟ್ಟರು....ಮತ್ತಮಾ ಪುಣ್ಯದಿವಸಲೂರ ತಳವಾರ ನಾಯಕಂ ತನ್ನಲ್ಲಿ ಖಣ್ಣುಗಭತ್ತಮುವ ನಾಶಲಯ್ಯುಳ ಭತ್ತಮಂ ಬಿಟ್ಟರು..... ಎಂದು ಹೇಳಲಾಗಿದೆ.

ಅಂತೆಯೇ ತಳಾರ ಬೊಪ್ಪನಾಯಕ (೧೧೩೮ ಕ್ರಿ.ಶ.) ತಳಾರ ಮಲ್ಲೆಯ ನಾಯಕ (೧೧೭೯ ಕ್ರಿ.ಶ) ತಳಾಜಿ ಚಿಣ್ಣಯ ನಾಯಕ (೧೨೧೬ ಕ್ರಿ.ಶ) ಮುಂತಾದ ಅನೇಕ ನಾಯಕರನ್ನು ಶಾಸನಗಳಲ್ಲಿ ಕಾಣಬಹುದು. ಇವರೆಲ್ಲರೂ ಅಂದಿನ ಸರ್ಕಾರಗಳಲ್ಲಿ ಅಧೀನ ನಾಯಕರಾಗಿ ಕೆಲಸ ನಿರ್ವಹಿಸುತ್ತದ್ದರೆನಿಸುತ್ತದೆ.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಹಿರೇಮಾಗಡಿಯಲ್ಲಿ ದೊರೆತಿರುವ ಕ್ರಿ.ಶ.೧೧ನೆಯ ಶತಮಾನದ ಒಂದು ಶಾಸನ ಶ್ರೀಮಚ್ಚಾಳುಕ್ಯ ವಿಕ್ರಮ ವರಿಷ......ಸಂವತ್ಸರ ಮಾರ್ಗಶಿರ.....ವಾರದಲು ಮೇಲಾಳ....ಯ ಬೇಡ ನಾಯಕರು ಗುಡ್ಡಮನ್ ಏಜಿ ಹೋಹಾಗ ಅನ್ದಿಗೆ ಮಾದಯನ್ ಇಜಿಯೆ ಸತ್ತು ಸುರಲೋಕ.... ಎನ್ನುವಲ್ಲಿಯು ಬೇಡ ನಾಯಕರು ಗುಡ್ಡವನ್ನು ಏರಿ ಬೇಟೆಯಾಡಲು ಹೊರಟಿರುವ ಮಾಹಿತಿ ನೋಡಿದಾಗ ಬೇಡ ನಾಯಕರ ಅಸ್ತಿತ್ವ ತಿಳಿಯುತ್ತದೆ. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ಅಜ್ಜಂಪುರದ ಹೋಬಳಿಯ ಮುದಿಗೆರೆ ಎಂಬಲ್ಲಿ ದೊರೆತಿರುವ ಕ್ರಿ.ಶ.೧೨೦೮ರ ಒಂದು ಶಾಸನವು ಚೀಲಗೌಡನೆಂಬ ವೀರನು ಗೋಗ್ರಹಣದ ಕಾಳಗದಲ್ಲಿ ಬೇಡನಾಯಕರೊಡನೆ ಹೋರಾಡಿದ ವಿವರಗಳನ್ನು ತಿಳಿಸುತ್ತದೆ. ಇರ್ಕ್ಕಿಡಿ ಧನಮನೆ ನಲ್ವಿಡಿದು ಬೇಡನಾಯಕರ್ಮ (ಗುಳ್ಳೆತ ಕೊಂಡಿಕ್ಕಿ ತುಜಿ ಮ ಮುಗುಮ್ಮಿ ರಕ್ಕಸನೇಕಾಂಗ ವೀರ ಚೀಲಗುತಂ.....) ಇಲ್ಲಿಯು ಬೇಡನಾಯಕ ಎಂಬ ಪದ ಪ್ರಯೋಗವನ್ನು ನೋಡಬಹುದು. ಆತಕೂರು ಹಾಗೂ ಮುಳಬಾಗಿಲಿನ ಶಾಸನದ ಪ್ರಕಾರ ಎರಡು ನಾಯಿಗಳಾದ ಲೋಗ ಮತ್ತು ದಳೆಗ ತಮ್ಮ ನಾಯಕನೊಡನೆ ಹಂದಿ ಬೇಟೆಗೆ ಹೋದಾಗ ಬೇಟೆಯ ನಂತರ ಆ ಎರಡು ನಾಯಿಗಳು ಸತ್ತು ಹೋದವು. ಇದರ ಪ್ರಕಾರ ಲೋಗ ನಾಯಿಯು ೭೫ ಹಂದಿಗಳನ್ನು, ದಳಗ ೨೬ ಹಂದಿಗಳನ್ನು ಬೇಟೆಯಾಡಿದ್ದವು.

(ಇಲ್ಲಿಯ ಮತ್ತೊಂದು ಶಾಸನದ ಪ್ರಕಾರ ಕಂಬಲದಗ ಎಂಬುವನು ಹುಲಿಬೇಟೆಗೆ ನಾಯಿಯೊಡನೆ ಹೋದಾಗ ಇಬ್ಬರೂ ಸತ್ತು ಹೋದುದನ್ನು ತಿಳಿಸುತ್ತದೆ. ಬೇಟೆಯ ಮುಖ್ಯ ಆಯುಧಗಳು ಖಡ್ಗ, ಕತ್ತಿ, ಈಟಿ, ಭರ್ಚಿ, ಗುರಾಣಿ ಇತ್ಯಾದಿ) ಕ್ರಿ.ಶ. ೧೦೧೨-೪೪ರ ವೀರಗಲ್ಲಿನ ಶಾಸನವು ಕನ್ನಾಲಗ್ರಾಮದ ಪಲ್ಲವಗಾವುಂಡ ಎಂಬ ಬೇಟೆಗಾರನ ಮಾದಕೇಶರಿ ಎಂಬ ಹೆಸರಿನ ನಾಯಿಯು ಹಂದಿಯೊಡನೆ ಹೋರಾಡಿ ಸತ್ತ ವಿಷಯವನ್ನು ತಿಳಿಸುತ್ತವೆ.

ದನಕರುಗಳ ಮತ್ತು ಹೆಂಗಸರ ಲೂಠಿಗಾರರಾಗಿ ಬೇಡರ, ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕ್ರಿ.ಶ.೭ನೇ ಶತಮಾನದ ಶಾಸನಗಳಲ್ಲಿ ಕಾಣಬಹುದು. ಕ್ರಿ.ಶ. ೭೦೦ರ ಗದ್ದೆಮನೆ ಶಾಸನವು ಬೇಡರ ವೀರವೃತ್ತಿಯನ್ನು ಮತ್ತು ಅವರು ಕಾಡಿನಿಂದ ನಾಡಿಗೆ ಬಂದುದನ್ನು ತಿಳಿಸುತ್ತದೆ. ಅದು ಈ ರೀತಿಯಾಗಿದೆ..., ಸ್ವಸ್ತಿಶ್ರೀ ಶೀಲ ಆದಿತ್ಯನ್ ದಿಶಾಮನ್ ಭಾಗವಾನ್ ಅಗ್ಗಳ ಕಣ್ಣನ್, ಪೇರಾಳ್ವೆವರೆ ಪೆಟ್ಟಣಿ ಸತ್ಯಂಕರ್ ಅಟ್ಟಳ್ವಭಟರ್ ಬೆದರೆಮಹೇಂದ್ರನ್ ಬೇಡರಾಯರ ಮಲಪರ್ ಕಾಳೆಗದುಲೆ ಏರಿದು ಸ್ವರ್ಗಾಲಕ್ಕೇರಿದನ್ ಎಂದು ಇರುವ ಶಾಸನದಿಂದ ತಿಳಿದು ಬರುವುದೇನೆಂದರೆ ಏಳನೇ ಶತಮಾನದಲ್ಲಿ ಬೇಡರನ್ನು ಮಲಪರು ಎಂದು ಕರೆಯಲಾಗಿತ್ತು.

ಮಂಡ್ಯ ಜಿಲ್ಲೆಯ ನಾಗಮಂಡಲ ತಾಲೂಕಿನ ಕಂಬದಹಳ್ಳಿಯ ಕ್ರಿ.ಶ.೯೭೭ರ ಶಾಸನವು, ಬೇಡರ ಪಡೆಯು ಬಿಂಗಿನವಿಲೆಯನ್ನು ದಾಳಿಮಾಡಿ ಅಲ್ಲಿಯ ಹೆಂಗಸರನ್ನು ಎತ್ತಿಕೊಂಡು ಹೋಗುವಾಗ ಗವರಸೆಟ್ಟಿ ಯೆಂಬುವವನು ಇವರೊಡನೆ ಹೋರಾಡಿ ಸತ್ತಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೯೮೫ರ ಹಾಸನಜಿಲ್ಲೆಯ ಆಲೂರು ತಾಲೂಕಿನ ನೆಲ್ಲೂರು ಗ್ರಾಮದ ಶಾಸನವು ಬೇಡರ ಬೀರಮ್ಮನು ತನ್ನ ಕುದುರೆಪಡೆಯೊಂದಿಗೆ ನಲ್ಲೂರನ್ನು ದಾಳಿಮಾಡಿದಾಗ ಗುಂಡಯ್ಯನು ಸತ್ತಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೧೪೦ರ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಹಳೇಬೀಡು ಶಾಸನವು ಬೇಟೆಯ ತಿಪ್ಪೆಯ ನಾಯಕನನ್ನು ಉಲ್ಲೇಖಿಸುತ್ತದೆ. ಇದೇ ತಾಲೂಕಿನ ಹೊಯ್ಸಳದೊರೆ ಬಿಟ್ಟಿದೇವನ ಕಾಲದ ಕೊನೇರಿಯ ಶಾಸನವು ಕೊನೇರಿಯ ಮಸಣಗೌಡನ ಅಳಿಯ ಬೇಡಗೌಡನು ತುರುಗಾಳಗದಲ್ಲಿ ಹೋರಾಡಿ ತುರುಗಳನ್ನು ಮರುಪಡೆದು ಸತ್ತಿದ್ದನ್ನು ತಿಳಿಸುತ್ತದೆ. ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲೂಕಿನ ಮುದೆಗೆರೆ ಗ್ರಾಮದ ೧೨೯೦ರ ಶಾಸನವು ಬೇಡರು ಕಲ್ಲಿಗೆರೆಯ ತುರುಗಳನ್ನು ಮತ್ತು ಹೆಂಗಸರನ್ನು ಲೂಟಿಮಾಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. ೧೧೨೬ರ ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲೂಕಿನ ಬ್ಯಾಡರಹಳ್ಳಿ ಶಾಸನವು ಅಲ್ಲಿಯ ಬಮ್ಮಾರನು ಬೋರೆಮಯ್ಯ ಎಂಬ ಶತ್ರುವನ್ನು ಇರಿದು ತುರುಗಳನ್ನು ಗೆದ್ದುಕೊಂಡು ಹೋದದ್ದನ್ನು ತಿಳಿಸುತ್ತದೆ. ಕ್ರಿ.ಶ.೧೨೮೭ರ ಚಿಕ್ಕಮಗಳೂರು ಜಿಲ್ಲೆ ಮತ್ತು ಅದೇ ತಾಲೂಕಿನ ಅರಿಶಿನಗುಪ್ಪೆ ಶಾಸನವು ಬೇಡರು ಬೋರೆಮಣ್ಣನ ತುರುಗಳನ್ನು ಒಯ್ಯುವಾಗ ಅವನು ಬೇಡರೊಡನೆ ಹೋರಾಡಿ ಸತ್ತಿದ್ದನ್ನು ತಿಳಿಸುತ್ತದೆ.

ಬೇಡರಘಟ್ಟ ಎಂಬ ಬೇಡರ ಸ್ವಂತ ಸೈನ್ಯದ ಬಗೆಗೆ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಉಡುಗಣಿ ಹೋಬಳಿಯ ಅಡಗಂಟಿ ಗ್ರಾಮದಲ್ಲಿ ದೊರೆತಿರುವ ಕ್ರಿ.ಶ.೧೦೫೮ರ ಒಂದು ಶಾಸನದಲ್ಲಿ.....ಬೇಡರಘಟ್ಟ ಮಡಿಯಂಗೆರಿಯ ನಿಱಿದು ತುರುಮಕೊಂಡು.....ಎಂಬ ಉಲ್ಲೇಖವಿದೆ. ಚಿತ್ರದುರ್ಗದ ಪಾಳೆಯಪಟ್ಟಿನ ಮೊಟ್ಟಮೊದಲನೆಯ ಪಾಳೆಯಗಾರ ಮತ್ತು ತಿಮ್ಮಣ್ಣನಾಯಕನ ಎರಡು ಶಾಸನಗಳು ತೆಲುಗಿನಲ್ಲಿ ದೊರಕುತ್ತವೆ. ಅವುಗಳಲ್ಲಿ ಸ್ಪಷ್ಟವಾಗಿ ನಾಯಿನಿ ಎಂಬ ಪದವೇ ಬಳಸಲ್ಪಟ್ಟಿದೆ.

ಶ್ರೀಮನ್ಮಹಾನಾಯಕಾಚಾರ್ಯ ಕಾಮಗೇತ್ತಿಹನುಮಿ ನಾಯನಿಗಾರಿ ಕೊಮಾರುಡು ಕಾಮುಗೇತ್ತಿತಿಂಮಂಣ ನಾಯಿನಿಗಾರುತಮ ತಂಡ್ರಿ ಹನಿಮಿ ನಾಯನಿಂಗಾರಿಕಿ ಪುಣ್ಯ ಅಯಿಅಟ್ಲೇಂಗಾನು ಅದೇ ರೀತಿ ನಾಯಕನು ಕನ್ನಡದಲ್ಲಿ ಶಾಸನವನ್ನು ಬರೆಯಿಸುವಾಗ “ಕಾಮಗೇತಿ ತಿಮಂಣನಾಯಕರು.....ಎಂದು ಬರೆಯಿಸುತ್ತಾನೆ.

ಇಲ್ಲಿ ಬಂದಿರುವ ನಾಯಿನಿ ಎಂಬ ಪದಕ್ಕೆ ತೆಲುಗಿನ ಪ್ರಥಮಾ ವಿಭಕ್ತಿ ಏಕವಚನದ ‘ಡು’ ಪ್ರತ್ಯಯವು ಸೇರಿ ನಾಯನಿ-ನಾಯಿನಿ ಪದ ಪ್ರಯೋಗವು ತೆಲುಗಿನಲ್ಲಿ ಬಂದಿರುವುದನ್ನು ನೋಡಿದರೆ ಇಂದಿಗೂ ಆಂಧ್ರದಲ್ಲಿ ನಾಯಕ ಸಮುದಾಯದ ಪುರುಷರಿಗೆ ಸುಬ್ಬರಾಯ್ಡು, ಅಶೋಕರಾಯ್ಡು, ಪ್ರತಾಪರಾಯ್ಡು ಎಂಬ ಹೆಸರುಗಳನ್ನು ಕರೆದುಕೊಂಡು ಬಂದಿರುವುದನ್ನು ನಾವು ಕಾಣಬಹುದು. ಹೀಗೆ ನಾಯಕುಂಡು/ನಾಂದುಕುಡು ಎಂಬ ರೂಪಗಳಿಂದಲೂ ನಾಯಿಡು-ನಾಯ್ಡು ಎಂಬ ಪದ ಸಾಧಿತವಾಗಿರಬಹುದು.

ಇನ್ನು ಹಲವಾರು ಶಾಸನಗಳಲ್ಲಿಯೂ ನಾವು ನಾಯಕ/ನಾಯಕ ಮಕ್ಕಳ್ ಎಂಬ ಪದವು ಪ್ರಯೋಗ ವಾಗಿರುವುದನ್ನು ಕಾಣಬಹುದು. ಅದೇನೇ ಇದ್ದರೂ ವಾಲ್ಮೀಕಿ ಸಮುದಾಯದ ಮೂಲವನ್ನು ಗುರುತಿಸಲು ಹೊರಟಾಗ ಅವರಿಗೆ ಎಲ್ಲಾ ಸಮುದಾಯಗಳಿಗೆ ಇದ್ದ ಹಾಗೆ ಯಾವುದೇ ಮಠಮಾನ್ಯಗಳು ಇಲ್ಲದಿರುವುದು ಕಂಡುಬರುತ್ತದೆ. ಇವರಿಗೆ ಹಿಂದಿನಿಂದ ಮಠಗಳಾಗಲಿ, ಮಠಾಧಿಕಾರಿಗಳಾಗಲಿ, ಗುರುಗಳಾಗಲಿ ಇಲ್ಲದ್ದರಿಂದ ಬೇಡರ ದೊರೆಗಳೇ ಬೇಡರ ಮತಧರ್ಮ ಸಂಪ್ರದಾಯಗಳಿಗೆ ಮಾರ್ಗದರ್ಶಕರಾಗಿರುವುದು ಕಂಡುಬರುತ್ತದೆ. ಹೀಗೆ ಇಲ್ಲದ ಗುರುವನ್ನು ಹುಡುಕಿಕೊಂಡು ಹೋಗಿ ಸಿಗುವ ಯಾವುದೋ ಒಬ್ಬ ಗುರುವನ್ನು ಕಂಡು ಭೆಟ್ಟಿಯಾಗಿ ತಮಗೆ ಬೇಕಾದ ವಿದ್ಯೆಯನ್ನು ಕಲಿಯಬೇಕೆಂದರೂ ವಿದ್ಯೆಯನ್ನು ಕರುಣಿಸಲಾರದೆ ಮುಂದುವರಿದ ವ್ಯವಸ್ಥೆಯ ಗುರುವಿದ್ದರು. ಉದಾಹರಣೆಗೆ ದ್ರೋಣಾಚಾರ್ಯರನ್ನು ಹುಡುಕಿಕೊಂಡು ಮೂರು ಹಗಲು ಮೂರು ರಾತ್ರಿ ಕಾಡಿನಿಂದ ನಾಡಿನ ಕಡೆಗೆ ನಡೆದುಕೊಂಡು ಬಂದ ಹಿರಣ್ಯಧನುವೆಂಬ ಬೇಡನ ಮಗ ಏಕಲವ್ಯ. ಈತ ಗುರು ದ್ರೋಣಾಚಾರ್ಯರಲ್ಲಿ ವಿದ್ಯೆಯನ್ನು ಕಲಿಸುವಂತೆ ಬೇಡಿದ, ಗೋಗರೆದ ಕೊನೆಗೆ ತಿರಸ್ಕರಿಸಲ್ಪಟ್ಟ ಆಚಾರ್ಯರ ಪ್ರತಿಮೆಯನ್ನು ಮಾಡಿಕೊಂಡು ಅದನ್ನೇ ಗುರುವೆಂದು ಭಾವಿಸಿ,

ಬೆರೆವಂಗೆ ಭೋಗವು ಮೊರೆವಂಗೆ ರಾಗವು
ಬರೆವಂಗೆ ಓದು ಬರ್ಪತೆ ಸಾಧಿಪಗೆ
ಬಾರದಿಹುದುಂಟೆ ಸರ್ವಜ್ಞ

ಎಂಬಂತೆ ವಿದ್ಯೆ ಕಲಿತು ಬಿಲ್ವಿದ್ಯೆ ವಿಶಾರದನೆನಿಸಿದನು.

ಹೀಗೆ ತಮ್ಮ ನಾಯಕರುಗಳನ್ನು ಮಾರ್ಗದರ್ಶಕರನ್ನಾಗಿ ಮಾಡಿಕೊಂಡು, ಇಲ್ಲವೇ ತಮಗೆ ತಾವೇ ಮಾರ್ಗದರ್ಶಕರಾಗಿ ಬೆಳೆದು ಬಂದಿದ್ದಾರೆ. ಆದುದರಿಂದ ದೇವಗಿರಿಯ ಯಾದವಕಾಲದಲ್ಲಿಯೂ ಕ್ರಿ.ಶ.ಸು.೧೩ನೇಯ ಶತಮಾನದ ವೇಳೆಗೆ ಬೇಡರದೊರೆಗಳಿಗೆ ಶ್ರೀಮನ್ಮಹಾನಾಯಕಾಚಾರ್ಯ ಎಂಬ ಉಪಾಧಿಯು ಬಳಕೆಗೆ ಬಂದಿತು.

ಸುಮಾರು ಕ್ರಿ.ಶ. ೧೨೮೭ರಲ್ಲಿ ಆಂಧ್ರದ ಕರ್ನೂಲು ಜಿಲ್ಲೆಯ ಆಲೂರು ತಾಲೂಕಿನ ನೇರಣಿಕೆ ಎಂಬ ಗ್ರಾಮದ ಸುಂಕಾಲಮ್ಮನ ದೇವಾಲಯದಲ್ಲಿ ಒಂದು ಕನ್ನಡ ಶಾಸನದಲ್ಲಿ ನಮಗೆ ಮೊಟ್ಟಮೊದಲ ಉಪಾಧಿಯು ದೊರೆಯುತ್ತದೆ. ಇದರಲ್ಲಿ ನಾಗೆಯನಾಯ್ಕ ಎಂಬುವವನ ಬಿರಿದು...ಶ್ರೀಮನುಮಹಾನಾಯ್ಕಾ ಚಾರ್ಯ ಎಂದು ಇಲ್ಲಿ ನಾಯ್ಕ ಎಂಬುದನ್ನು ಗಮನಿಸಿದಾಗ ನಾಯನಿ+ಆಚಾರ್ಯ ನಾಯ್ನಾಚಾರ್ಯ ಎಂದಾಗಿದೆ.

ಇದೇ ಸುಮಾರಿಗೆ ಇವನ ನೆರೆಹೊರೆಯ ಬೇಡರ ದೊರೆಯಾದ ವೀರ ಕಂಪಿಲದೇವನ ಒಂದು ಶಾಸನ (ಫು.೧೨೧ ಮಾರ್ಚ್ ೧೯೨೩)ದಲ್ಲಿ ಅವನಿಗೆ ಸ್ವಯಂಭು ನಾಯಕಚಾರ್ಯ ಎಂಬ ಬಿರುದು ಇರುವುದು ಕಂಡುಬರುತ್ತದೆ. ಇದೇ ಕಾಲದಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಕೊಟ್ಟ

ಗ್ರಾಮದಲ್ಲಿ ದೊರೆತಿರುವ ಕ್ರಿ.ಶ. ೧೩೦೪ರ ಒಂದು ಶಾಸನದಲ್ಲಿ ಕಾರೆಮನೆತನದ ಚಿಕ್ಕಣ್ಣ ನಾಯಕ ಎಂಬುವವನಿಗೆ ಶ್ರೀಮನ್ಮಹಾನಾಯಕಾಚಾರ್ಯ ಎಂಬ ಉಪಾಧಿಯು ಇದ್ದುದು ಗೊತ್ತಾಗುತ್ತದೆ. ಇಂತಹ ಬಿರುದುಗಳಲ್ಲದೆ ಬೇಡ ಸಮುದಾಯದ ಅನೇಕ ಪಾಳೆಯಗಾರರು ನಾಯಕ ಶಿರೋಮಣಿ, ನಾಯಕ ನಾರಾಯಣ, ನಾಯಕ ಶಿಖಾಮಣಿ, ನಾಯಕಮಣಿ ಮುಂತಾದವುಗಳಲ್ಲಿ ತಮ್ಮನ್ನು ನಾಯಕ ಜಾತಿ ಎಂದು ಅರ್ಥ ಬರುವಂತೆ ಹೇಳಿಕೊಂಡಿದ್ದಾರೆ. ಪುಳಿಂದ ವಂಶೋದ್ಭವ ಎಂದು ಕೆಲವು ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ೧೮-೧೯ನೇ ಶತಮಾನದ ಹೊತ್ತಿಗೆ ಬೇಡರ ಜಾತಿಗೆ ನಾಯಕರ ಜಾತಿ ಎಂಬ ರೂಪವು ಬಂದಿರಬೇಕು.

ಆದ್ದರಿಂದ ೭ನೇ ಶತಮಾನದಿಂದ ಇಂದಿನ ತನಕವೂ ನಾಯಕ ಎಂಬ ಗೌರವ ಸೂಚಕವೂ, ಅಧಿಕಾರ ಸೂಚಕ ಪದವು ಕನ್ನಡ ನಾಡಿನ ಚರಿತ್ರೆಯಲ್ಲಿ ಬೇಡರ ನಿರಂತರ ಪ್ರಸಿದ್ಧಿಯಾಗಿ, ಅವರ ಪಾಲಿಗೆ ಜಾತಿ ಸೂಚಕವಾಗಿ ಬಂದಿದೆ. ಅದೇನೆ ಇದ್ದರೂ ವೇದ ಪೂರ್ವ ಕಾಲದಿಂದಲೂ ಬೇಟೆಯನ್ನೇ ಬದುಕಿನ ಭಾಗವಾಗಿಸಿಕೊಂಡ ಬುಡಕಟ್ಟು ಜನಾಂಗವು ಬೇಡರೆಂದು ಕರೆಯಿಸಿಕೊಂಡ ಬಗ್ಗೆ ನಮ್ಮಲ್ಲಿ ವರ್ಣರಂಜಿತ ಇತಿಹಾಸವೇ ಇದೆ. ಕಾಡು, ಕಣಿವೆ, ಗುಡ್ಡ, ಗವಿಗಳನ್ನೇ ತಮ್ಮ ವಾಸಸ್ಥಳವನ್ನಾಗಿ ಮಾಡಿಕೊಂಡ ಇವರು ಚರ್ಮ, ತೊಗಟೆಗಳನ್ನು ಉಡುಪನ್ನಾಗಿ ಧರಿಸಿದರು. ಆದಿಮಾನವನ ಎಲ್ಲಾ ಅವಸ್ಥೆಗಳನ್ನು ಹೊತ್ತುಕೊಂಡ ಇವರು ಕ್ರೂರ ಪ್ರಾಣಿಗಳ ಮಧ್ಯೆ ಬಾಳಿದರು. ಅವುಗಳನ್ನು ಇಂದಿನ ಅವರವರ ಮನೆಯ ಸಾಕುಪ್ರಾಣಿಗಳಂತೆಯೇ ಮಾಡಿಕೊಂಡರು. ಇಂತಹ ಬೇಡ ಸಮುದಾಯದ ರೋಮಾಂಚನ ಹೆಜ್ಜೆಗಳು ಎಲ್ಲಿಂದ ಆರಂಭವಾಗುತ್ತವೆ ಎಂಬುದನ್ನು ಹಲವಾರು ಜನವಿದ್ವಾಂಸರು ಕವಿಗಳು, ಸಂಶೋಧಕರು ವಿವಿಧ ರೀತಿಯ ವಾದ-ವಿವಾದಗಳನ್ನು ತಮ್ಮ ಸಂಶೋಧನಾತ್ಮಕ ಪ್ರಬಂಧಗಳಲ್ಲಿ ಮಂಡಿಸಿದ್ದಾರೆ. ಅದರಂತೆ ಬೇಡ ಜನಾಂಗದ ಮೂಲ ವಾಲ್ಮೀಕಿ ಎಂದು ಹಲವರ ಹೇಳಿಕೆ. ಕಿರಾತರ ಯಜಮಾನನಾದ ಈತ ಕಾಮಕೇತು, ಲಕ್ಷ, ಮೀನು, ಮಲರೆಂಬ ಇನ್ನಿತರ ಏಳು ಜನರ ನೇತೃತ್ವದಲ್ಲಿ ಏಳು ಪಡೆಗಳನ್ನು ರಚಿಸಿ ದರೋಡೆ ನಡೆಸುತ್ತಿದ್ದನು. ಮುಂದೆ ಕಾಡಿನಲ್ಲಿ ಕಾಲಾನಂತರ ಚದುರಿಹೋದ ಈ ಪಡೆಗಳಬೇಡರ ಸಮುದಾಯದ ವಂಶ ವಿಕಾಸಕ್ಕೆ ನಾಂದಿ ಹಾಡಿದವು ಎಂಬುದೊಂದು ಐತಿಹ್ಯ. ಅದೇನೇ ಇದ್ದರೂ ತೂರಿಹೋದ ಇಂತಹ ಬೇಡ ಪಡೆಯ ತುಕಡಿಗಳು ಆಯಾ ಪ್ರದೇಶಗಳಲ್ಲಿ ಗಟ್ಟಿಯಾಗಿ ನೆಲೆಯೂರಿದವು ಎಂಬುದರಲ್ಲಿ ಎರಡುಮಾತಿಲ್ಲ. ಅವರೀಗ ಅಲ್ಲಲ್ಲಿಯ ಹೆಸರುಗಳಿಂದಲೇ ದೇಶದಾದ್ಯಂತ ಗುರುತಿಸಲ್ಪಡುತ್ತಿದ್ದಾರೆ.

ಪ್ರಾದೇಶಿಕವಾಗಿ ಬೇಡರಿಗೆ ಇರುವ ಪರ್ಯಾಯ ಪದಗಳು ತಮಿಳು ನಾಡಿನಲ್ಲಿ ನಾಯಾಕ್ಷಾ, ನಾಯಕರ್, ವಾಲ್ಮೀಕಿವೇಡನ್ ವೆತ್ತತಿ, ಸಿಲೋನ್, ವೇಟನ್, ವೇಡುವಾಸ್, ವೆದ್ದಾನ್, ವೇಟೆಕಾರನ್ ಎಂದಿದ್ದಾರೆ. ಉತ್ತರ ಪ್ರದೇಶದಲ್ಲಿ, ಭೀಲ್, ಬಾಲಮೀರೆ, ವಾಲ್ಮೀಕಿ, ನಾಯಕಮಾಂಗ್ ಬಂಗಾಲ ಬಿಹಾರದಲ್ಲಿ ಸೇನ್ ಎಂದು ಗುರುತಿಸಿಕೊಳ್ಳುತ್ತಿದ್ದಾರೆ. ಹೀಗೆ ಬೇಡರಲ್ಲಿ ಹಲವಾರು ಉಪವಿಭಾಗಗಳಿರುವುದರಿಂದ ಅವರಲ್ಲಿ ಮೇಲ್ನೋಟಕ್ಕೆ ಭಿನ್ನತೆ ಕಾಣಬಹುದು. ಆದರೆ ಮೂಲಮಾತ್ರ ಒಂದೇ.

ಪಾಳೆಯಗಾರ, ಮ್ಯಾಸನಾಯಕ, ಬಾರಿಕ್, ಕನ್ನಯ್ಯ ಜಾತಿ, ಕಿರಾತಕ ಜಾತಿ ಎಂದು ಕರ್ನಾಟಕದ ಗಡಿಭಾಗಗಳಲ್ಲಿ ಬೇರಡ, ವೇರನ್, ಬಾರಕ್, ದೊರೆಪಿಡ್ಡನಾಯಕ, ನಾಯಕವಾಡಿ ಇನ್ನಿತರ ಉಪನಾಮಗಳು ಪ್ರಚಲಿತದಲ್ಲಿವೆ.

ಹೀಗೆ ಬೇಡರು ಪಂಜಾಬಿನ ಗಿರಿಶಿಖರಗಳಿಂದ ಕರ್ನಾಟಕದ ಕಡೆಗೆ ಬಂದರೆಂದು, ಇವರಿಗೆ ಭಿಲ್ಲರು, ನಾಯಕರು, ಬೇರಾಕ್ ಎಂದು ಕರೆಯುತ್ತಿದ್ದಾರೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಅದರಂತೆ ಮಧ್ಯ ಪ್ರದೇಶದಲ್ಲಿರುವ ರಾಮೋಶಿಗಳು ಹಾಗು ದಖನ್‌ಭೂಮಿ ಉತ್ತರ ಇಂಡಿಯಾದಲ್ಲಿರುವ ಬಾಲಮೀರೆ ನಾಯಕರು ಒಂದೇಯಾಗಿದ್ದಾರೆಂಬುದು ಹಲವರ ಅಭಿಮತ.

ಬೇಡರಲ್ಲಿ ಕವಲೊಡೆದ ಅನೇಕ ಪಂಗಡಗಳು ಮುಂದೆ ಪ್ರಭಾವಪೂರ್ಣವಾಗಿ ಬೆಳೆದವು. ಅಂಥವುಗಳಲ್ಲಿ ವಾಲ್ಮೀಕಿ, ತಳವಾರ, ಪರಿವಾರ, ನಾಯಕ ಮುಂತಾದವು.

ಹೀಗೆ ತ್ರೇತಾಯುಗದಲ್ಲಿ ವಾಲ್ಮೀಕಿಯು ಇವರ ಮೂಲ ಸಂವೇದನೆಯನ್ನು ಬದುಕಿನ ಮೌಲ್ಯವನ್ನು ಸೋಲು ಗೆಲುವುಗಳನ್ನು ಒಟ್ಟಾಗಿ ಹಿಡಿದಿಟ್ಟಿರುವ ಒಬ್ಬ ದಾರ್ಶನಿಕಶಕ್ತಿ, ವ್ಯಕ್ತಿಯಾಗಿದ್ದಾನೆ. ಈ ಕಾರಣದಿಂದಾಗಿ ವಾಲ್ಮೀಕಿಗೆ ಶಕ್ತಿಯು ದೊರೆತು ಅದನ್ನು ರಾಮಾಯಣದ ರೂಪದಲ್ಲಿ ಹೊರಹಾಕಿದ್ದಾನೆ. ಇಂತಹ ಶಕ್ತಿ ಸಿಗುವಮುನ್ನ ಆದಿಮಾನವನಂತೆ ಅಡವಿಯಲ್ಲಿ ಈ ಸಮುದಾಯದವು ಅಲೆಯುತ್ತಿತ್ತು ಎಂದು ಹೇಳಬಹುದು.

೩.೩. ಸಮುದಾಯದ ಭೌಗೋಳಿಕ ಪರಿಸರ ಪರಿಚಯ

ಭಾರತೀಯ ಸಾಮಾಜಿಕ ಸಂಸ್ಥೆಯಲ್ಲಿ ವಾಲ್ಮೀಕಿ ಸಮುದಾಯವು ತನ್ನದೇ ಆದ ಐತಿಹಾಸಿಕ ಪ್ರಖ್ಯಾತಿಯನ್ನು ಪಡೆದುಕೊಂಡು ಸಾಗಿದೆ. ಇಡೀ ಭಾರತದ ತುಂಬಾ ಹರಿದು ಹಂಚಿಹೋಗಿರುವ ಈ ಆದಿವಾಸಿ ಬುಡಕಟ್ಟು ಜನಾಂಗವು ಆರ್ಯರ ಆಕ್ರಮಣದಿಂದಾಗಿ ಗುಡ್ಡಗಾಡುಗಳಲ್ಲಿ, ಕಾಡುಮೇಡುಗಳಲ್ಲಿ, ಗಿರಿಗಹ್ವರಗಳಲ್ಲಿ ಅಲೆಮಾರಿಗಳಾಗಿ ಅಲೆದು, ಗೆಡ್ಡೆಗೆಣಸು ತಿಂದುಕೊಂಡು ಬೇಟೆಯಾಡುತ್ತಾ ಕಾಲ ಕಳೆಯುವುದುರ ಜೊತೆಗೆ ಪಶುಪಾಲನೆ ವೃತ್ತಿಯೂ ಕೈಗೊಂಡು ಕ್ರಮೇಣ ವ್ಯವಸಾಯ ವೃತ್ತಿಯನ್ನು ಅನುಸರಿಸುತ್ತಾ ಬಂದಿದ್ದಾರೆ. ಹೀಗೆ ಕರ್ನಾಟಕದಲ್ಲಿ ಅಷ್ಟೇ ಅಲ್ಲದೆ ಇಡೀ ಭಾರತ ತುಂಬಾ ನೆಲೆನಿಂತಿದ್ದಾರೆ. ಇಡೀ ಭಾರತದಲ್ಲಿ ವಾಸವಾಗಿರುವ ಆದಿಮ ಸಮುದಾಯಗಳಲ್ಲಿ ಬೇಡ ಸಮುದಾಯವು ಒಂದು. ಕರ್ನಾಟಕದಲ್ಲಿ ೧೯೭೧ರ ಜನಗಣತಿಯ ಪ್ರಕಾರ ಬೇಡ ಸಮುದಾಯದ ಸಂಖ್ಯೆ ೧೫ ಕಾಲು ಲಕ್ಷವೆಂದು ತಿಳಿದು ಬರುತ್ತದೆ. ಹಾಗೆಯೇ ಕರ್ನಾಟಕದಲ್ಲಿ ಸುಮಾರು ೬೫ಲಕ್ಷದಷ್ಟಿರುವರೆಂದು ಅಂದಾಜು ಮಾಡಲಾದರೂ ೧೯೯೧ರ ಜನಗಣತಿಯ ಪ್ರಕಾರ ಕೇವಲ ೨೦ಲಕ್ಷದಷ್ಟು ಜನರು ಮಾತ್ರ. ಅದೇನೇ ಇದ್ದರೂ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೨೦ರಷ್ಟು ಜನ ಬೇಡ ಸಮುದಾಯದವರು ಕರ್ನಾಟಕದಲ್ಲಿ ವಾಸವಾಗಿದ್ದಾರೆ ಎಂದುಕೊಂಡರೆ ಸಧ್ಯ ಇವರು ಕರ್ನಾಟಕದ ಬಳ್ಳಾರಿ, ಬೆಳಗಾವಿ,

ಧಾರವಾಡ, ಕಲಬುರ್ಗಿಯಲ್ಲಿ ಹೆಚ್ಚಾಗಿ, ಚಿತ್ರದುರ್ಗ, ರಾಯಚೂರು ಜಿಲ್ಲೆಯಲ್ಲಿ ಅತ್ಯಂತ ಹೆಚ್ಚಿನ ಜನಸಂಖ್ಯೆಯು ಇದ್ದು, ಗುಡ್ಡಗಳ ಸಾಲುಗಳ ಒತ್ತಿನಲ್ಲಿರುವ ಹಲವಾರು ಊರುಗಳು, ಈಗಲು ಸಂಪೂರ್ಣ ಬೇಡಸಮುದಾಯದವರಿಂದ ಕೂಡಿದೆ. ಅಥಣಿ ಪರಿಸರಕ್ಕನುಗುಣವಾಗಿ ಹೇಳಬಹುದಾದರೆ ಕಲ್ಲೊತ್ತಿ ಶೇಕಡ ೭೫ರಷ್ಟು ಜನರು, ಬೇಡರಹಟ್ಟಿಯಲ್ಲಿ ಶೇಡಕ ೮೦% ಜನರು ಬೇಡ ಸಮುದಾಯದವರಿದ್ದಾರೆ. ವಿಶೇಷವಾಗಿ ಕರ್ನಾಟಕದ ಪಶ್ಚಿಮ ಘಟ್ಟದ ಸಾಲುಗಳಿಗಿಂತ ನಾಡಿನ ನಡುಭಾಗದಲ್ಲಿ ಹಬ್ಬಿರುವ ಗುಡ್ಡದ ಹರಿಗಳಲ್ಲಿ ಕಂಡುಬರುತ್ತಿದ್ದಾರೆ.

ಹೀಗೆ ಕರ್ನಾಟಕದ ತುಂಬಾ ತುಂಬಿಕೊಂಡಿರುವ ಇವರು ರಾಜ್ಯದ ೨೭ ಜಿಲ್ಲೆಗಳಲ್ಲಿಯೂ ಕಾಣಸಿಗುತ್ತಾರೆ. ದಕ್ಷಿಣ ಕನ್ನಡ, ಕೊಡಗು, ರಾಯಚೂರು, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಮೈಸೂರು, ಚಿಕ್ಕಮಗಳೂರು, ಉಡುಪಿ, ಚಾಮರಾಜನಗರ ಸ್ಥಳಗಳಲ್ಲಿ ಕಂಡುಬರುತ್ತಾರೆ. ತಾಲೂಕುಗಳಾದ ಹೊಸಪೇಟೆ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಗೋಕಾಕ್, ಅಥಣಿ, ಚಳ್ಳಕೆರೆ, ಮೊಳಕಾಲ್ಮೂರು, ಗಂಗಾವತಿ, ಹಡಗಲಿ ಮುಂತಾದ ತಾಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಈ ಹಿನ್ನೆಲೆಯಲ್ಲಿ ಅಧ್ಯಯನದ ದೃಷ್ಟಿಯಿಂದ ಅಥಣಿ ತಾಲೂಕಿನಲ್ಲಿ ವಾಲ್ಮೀಕಿ ಸಮುದಾಯದವರು ವಾಸಿಸುವ ಪರಿಸರವನ್ನು ನೋಡುವುದು, ಅಥಣಿ ಪರಿಸರದಲ್ಲಿ ಅಥಣಿಯಿಂದ ೨೦ ಕಿ.ಮೀ.ದೂರವಿರುವ ಬ್ಯಾಡರಹಟ್ಟಿ ಕೇವಲ ೧೦ಕಿ.ಮೀ. ದೂರವಿರುವ ರಡ್ಡೇರಹಟ್ಟಿ, ೩೦ಕಿ.ಮೀ ದೂರವಿರುವ ಕಲ್ಲೊತ್ತಿ, ೩೦ ಕಿ.ಮೀ.ದೂರದಲ್ಲಿರುವ ಶೇಡಬಾಳ, ೨೨ಕಿ.ಮೀ.ದೂರದಲ್ಲಿರುವ ಐಮಾಪುರ, ೧೮ ಕಿ.ಮೀ.ದೂರವಿರುವ ಅಡಾಳಟ್ಟೆ ಮುಂತಾದ ಊರುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿಯೂ, ಕುಡುಚಿ, ಸಂಕೋನಟ್ಟಿ, ಅವರಖೋಡು, ಕೋಹಳ್ಳಿ, ಕೊಕ್ಕಟನೂರು, ತ್ಯಾವರಟ್ಟಿ ಮುಂತಾದ ಹಳ್ಳಿಗಳಲ್ಲಿ ಕಡಿಮೆ ಜನಸಂಖ್ಯೆಯಲ್ಲಿ ವಾಸಿಸುವುದನ್ನು ನೋಡಬಹುದು. ಸಾಮಾನ್ಯವಾಗಿ ಈ ಪರಿಸರದ ಯಾವುದೇ ಹಳ್ಳಿಗಳಲ್ಲಿ ಹೋದರು ಇವರ ವಾಸಸ್ಥಾನಗಳನ್ನು ಅಥವ ಅವರ ಇರುವಿಕೆಯನ್ನು ನೋಡಿದಾಗ ಅವರಿಗೆ ಸಮೀಪದ ಊರುಗಳ ಮಧ್ಯದಲ್ಲಿ ವ್ಯಾಪಾರಸ್ಥರು, ಪ್ರಭಾವಿ ಸಮುದಾಯದಗಳು ವಾಸಮಾಡುವುದನ್ನು ಕಾಣಬಹುದು. ಇವರು ಊರಿಗೆ ಹೊಂದಿಕೊಂಡಂತೆ ಇರುವ ದಿಬ್ಬದ ಮೇಲೆ ಅಥವ ಹಳ್ಳದ ದಂಡೆಯ ಮೇಲೆ ಮನೆಗಳನ್ನು ಕಟ್ಟಿಕೊಂಡಿರುವುದನ್ನು ನೋಡಿದರೆ ಆಯಾ ಊರಿಗೆ ಹೊಂದಿಕೊಂಡಂತಿರದೆ ಪ್ರತ್ಯೇಕವಾಗಿ ವಾಸಿಸುವರೋ ಎನ್ನುವ ಹಾಗೆ ಕಂಡುಬರುತ್ತದೆ. ನಡುಊರುಗಳಲ್ಲಿ ಒಂದೋ ಎರಡೊ ಮನೆಗಳು ಮಾತ್ರ ಈ ಸಮುದಾಯದವರವು ಕಂಡುಬರುತ್ತವೆ. ಸರ್ಕಾರವು ಕೂಡ ಇವರಿಗೆ ಆಶ್ರಯ ಯೋಜನೆಯ ಅಡಿಯಲ್ಲಿ ಮನೆಗಳನ್ನು ಕಟ್ಟಿಕೊಡಲು ಮುಂದಾಗಿ ಇವರನ್ನು ಊರಿನ ಆಚೆಗೆ ಇಡುವ ಪ್ರಯತ್ನವನ್ನು ಮಾಡುತ್ತಿದೆ ಎಂದು ಸೂಕ್ಷ್ಮವಾಗಿ ಅರಿಯಬಹುದು. ಇನ್ನು ಕೆಲವರು ತಮ್ಮ ತಮ್ಮ ಹೊಲಗಳಲ್ಲಿಯೇ ಮನೆಗಳನ್ನು ಮಾಡಿಕೊಂಡು ವಾಸವಾಗಿದ್ದಾರೆ. ಹಬ್ಬ ಹರಿದಿನಗಳಲ್ಲಿ ಊರೊಳಗೆ ಬರುತ್ತಾರೆ ಮತ್ತೆ ಕೆಲವು ಕಡೆಗೆ ಮುಸ್ಲಿಂ, ದಲಿತರ ಕೇರಿಯ ಕಡೆಗೆ ವಾಸಸ್ಥಳವನ್ನು ಗುರುತಿಸಬಹುದು. ಏಕೆಂದರೆ ಇವರು

ಬೇಟೆಯಾಡುವ ವೃತ್ತಿಯನ್ನು ಇನ್ನುತನಕವು ಮುಂದುವರಿಸಿಕೊಂಡು ಬಂದಿರುವುದು ಹಾಗೆಯೇ ಮೂಕ ಸಾಕುಪ್ರಾಣಿಗಳಾದ ಕೋಳಿಕುರಿಗಳ ಮಾಂಸವನ್ನು ತಿನ್ನುತ್ತಿರುವುದರಿಂದ ಮುಂದುವರಿದ ಸಮಾಜಗಳು ಇವರನ್ನು ದೂರವಿಡುವ ಪ್ರಯತ್ನವೂ ಇರಬಹುದು.

ಆದೇನೇ ಇದ್ದರೂ ಇಂದು ಅವರಿಗೆ ಸರ್ಕಾರಿ ಸೌಲಭ್ಯದ ಅಡಿಯಲ್ಲಿ ನೀರಿನ ಟ್ಯಾಂಕಿಗಳನ್ನು ಓಣಿಗೊಂದರಂತೆ ನಿರ್ಮಿಸಲಾಗಿದೆ. ಬೀದಿದೀಪಗಳ ಸೌಕರ್ಯವನ್ನು ಒದಗಿಸಲಾಗಿದೆ. ಆದರೆ ಅವರ ಹಟ್ಟಿಗಳಿಗೆ ಸಮೀಪದಲ್ಲಿ ಶಾಲೆಗಳು ಇರದಿರುವುದು ಗಮನಿಸುವ ವಿಷಯವಾಗಿದೆ.

ಆರ್ಥಿಕ ಸ್ವಾವಲಂಬನೆಯನ್ನು ಹೊಂದಲು ಹೈನುಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಮುಂದೆ ಬರುವ ಪ್ರಯತ್ನ ಇವರದಾಗಿದೆ. ಅಲ್ಲದೆ ಈ ಪರಿಸರದಲ್ಲಿ ವಾಸಿಸುವ ವಾಲ್ಮೀಕಿ ಸಮುದಾಯದವರ ಯಾರ ಮನೆಗೆ ಹೋದರೂ ಸಾಕುಪ್ರಾಣಿಗಳಾದ ಆಕಳು, ಕುರಿ, ಮೇಕೆಗಳನ್ನು ಸಾಕಿಕೊಂಡಿದ್ದು ಹೈನುಗಾರಿಕೆಗೆ ಎಮ್ಮೆಗಳನ್ನು ಸಾಕುತ್ತಿದ್ದಾರೆ.

ಹೀಗೆ ದನ, ಕರು, ಕೋಳಿ, ಕುರಿ, ಜನದಟ್ಟಣಿ, ಮಕ್ಕಳ ಹಾರಾಟ, ಚೀರಾಟ ಯಾವ ಸಂದರ್ಭದಲ್ಲಿಯೂ ಗಿಜಿಗುಡುತ್ತಿರುವ ಪರಿಸರವು ಇವರಾದಾಗಿದ್ದು, ಯಾರು ಬಂದರೂ ಬರದಿದ್ದರೂ, ರಾಗಿಬೀಸುವುದಂತೂ ತಪ್ಪುವುದಿಲ್ಲ ಎನ್ನುವ ಹಾಗೆ ಇದ್ದುದರಲ್ಲಿಯೇ ನೆಮ್ಮದಿಯ ಜೀವನವನ್ನು ಅನುಭವಿಸುತ್ತಿರುತ್ತಾರೆ. ತಮ್ಮ ಹಟ್ಟಿಗಳಿಗೆ ಹೊಂದಿಕೊಂಡಂತಿರುವ ಆರಾಧ್ಯದೈವದ ಯಲ್ಲಮ್ಮ, ಮುರುಗವ್ವಾ, ಹನುಮಪ್ಪ ಮುಂತಾದ ದೇವತೆಗಳ ದೇವತಾಕಾರ್ಯಗಳನ್ನು ಎಲ್ಲರೂ ಒಟ್ಟಾಗಿ ಸೇರಿ ಆಚರಿಸುವುದು, ಕೊಟ್ಟು ತೆಗೆದುಕೊಂಡು ತಮ್ಮ ಮೂಲ ಸಂಸ್ಕೃತಿಯನ್ನು ಮೆರೆಯುವರು.

೩.೪. ಸಿಂಧೂರ ಲಕ್ಷ್ಮಣ

ಅಥಣಿ ಪರಿಸರವೆಂದರೆ ಕೇವಲ ಅಥಣಿ ತಾಲೂಕು ಎಂದಷ್ಟೇ ಹೇಳಲು ಬರುವುದಿಲ್ಲ. ಅಥಣಿ ತಾಲೂಕಿಗೆ ಹೊಂದಿಕೊಂಡತೆ ಇರುವ ಬಿಜಾಪುರ ಜಿಲ್ಲೆಯ ಬಿಜಾಪುರ. ಜಮಖಂಡಿ ತಾಲೂಕುಗಳ ಗಡಿಭಾಗಗಳು ಬೆಳಗಾವಿ ಜಿಲ್ಲೆಯ ರಾಯಭಾಗ, ಚಿಕ್ಕೋಡಿ ತಾಲೂಕುಗಳ ಗಡಿಭಾಗಗಳು ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಶಿರೋಳ ತಾಲೂಕು ಗಡಿಗಳು ಸಾಂಗ್ಲಿ ಜಿಲ್ಲೆಯ ಮೀರಜ್ ಮತ್ತು ಜತ್ತ ತಾಲೂಕುಗಳ ಗಡಿಗಳು. ಸಿಂಧೂರ ಪ್ರದೇಶಗಳು ಸೇರಿಕೊಳ್ಳುತ್ತಿವೆ. ಕಾರಣ ಅಥಣಿ ಪರಿಸರದ ವಾಲ್ಮೀಕಿ ಸಮುದಾಯವನ್ನು ಕುರಿತು ಅಧ್ಯಯನ ಮಾಡಲು ತೊಡಗಿದರೆ, ಈ ಪರಿಸರದಲ್ಲಿ ಓಡಾಡಿದ ಸಿಂಧೂರ ಲಕ್ಷ್ಮಣ ಪ್ರಮುಖ ವ್ಯಕ್ತಿಯಾಗಿ ಅಷ್ಟೇ ಅಲ್ಲ ನಮ್ಮ ರಾಜ್ಯವು ಕಂಡ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರನೆಂದು ಗುರುತಿಸಿಕೊಂಡಿದ್ದಾನೆ. ಈ ಹಿನ್ನೆಲೆಯಲ್ಲಿ ಸಿಂಧೂರಲಕ್ಷ್ಮಣನನ್ನು ಅಧ್ಯಯನಕ್ಕೆ ಒಳಪಡಿಸುವುದು ಇಲ್ಲಿನ ಅಗತ್ಯವಾಗಿದೆ.

ಅನ್ಯಾಯ, ಅಸತ್ಯ, ಅಧರ್ಮಗಳ ವಿರುದ್ಧ ಸಿಡಿದೇಳುವ ಗುಣವನ್ನು ಹುಟ್ಟಿನಿಂದಲೇ ಮೈಗೂಡಿಸಿಕೊಂಡು, ಅಂತಹ ಸಂದರ್ಭಗಳು ಎದುರಾದಾಗ ಜೀವನದ ಹಂಗುತೊರೆದು ಸೆಟೆದು ನಿಂತು

ಬ್ರಿಟಿಷ್ ಸರಕಾರಕ್ಕೆ ಕಬ್ಬಿಣದ ಕಡಲೆಯಾಗಿ ಹೊರಹೊಮ್ಮುವ ಒಬ್ಬ ಸಾಮಾನ್ಯ ಊರ ತಳವಾರನೆಂದು ಚಾಕರಿ ಮಾಡಿದ ಸಿಂಧೂರ ಲಕ್ಷ್ಮಣನ ಕುರಿತು ಮಾತಾಡುವುದಾಗಲಿ, ಬರೆಯುವುದಾಗಲಿ ಕಷ್ಟಸಾಧ್ಯ. ಸಿಂಧೂರ ಲಕ್ಷ್ಮಣನು ಸುಮಾರು ೧೫.೦೭.೧೯೨೨ರಲ್ಲಿ ಹುತಾತ್ಮನಾದನು. ಕೇವಲ ೨೪ ವರ್ಷಗಳಲ್ಲಿಯೇ. ಈತನು ೧೮೯೮ರಲ್ಲಿ ಜನಿಸಿರಬಹುದು ಎಂದು ಊಹಿಸಬಹುದು.

ಕೇವಲ ೨೪ನೇ ವರ್ಷದಲ್ಲಿ ಇದ್ದಂತಹ ದೇಶಾಭಿಮಾನ, ಕೆಚ್ಚೆದೆ, ಧೈರ್ಯ, ಸಾಹಸ, ಉಳಿದವರಿಗೆಲ್ಲಿಂದ ಬಂದೀತು. ಕಾರಣ ಅಥಣಿ ಪರಿಸರದ ಬಹುತೇಕ ಮನೆಗಳಲ್ಲಿ ಈ ಮಹನೀಯನ ಪೋಟೋ ಇಟ್ಟು ಪೂಜಿಸುತ್ತಿದ್ದಾರೆ. ಮತ್ತೇ ಹುಟ್ಟಿ ಬಾ ವೀರಕೇಸರಿ ಸಿಂಧೂರ ಲಕ್ಷ್ಮಣ ಎಂದು ಪ್ರಾರ್ಥಿಸುತ್ತಿದ್ದಾರೆ.

ದೇಶದ ಸ್ವಾತಂತ್ರ್ಯಕ್ಕಾಗಿ ತನ್ನನ್ನು ಮತ್ತು ತನ್ನ ಬಂಧು ಬಳಗವನ್ನೇ ಸಮರ್ಪಿಸಿಕೊಂಡ ಸಿಂಧೂರ ಲಕ್ಷ್ಮಣನ ಹೋರಾಟ ಅತ್ಯಂತ ರೋಮಾಂಚನಕಾರಿಯಾದುದು. ಬ್ರಿಟೀಷರಿಗೆ ಹಾಗೂ ಬ್ರಿಟೀಷರಂತೆಯೇ ಇದ್ದ ಸ್ಥಳೀಯರಿಗೆ ಸಿಂಹಸ್ವಪ್ನವಾಗಿ ನಡೆಸಿದ ನೂರಾರು ಘರ್ಷಣೆಗಳು ಶ್ಲಾಘನೀಯವಾಗಿವೆ.

ಬಡತನದಲ್ಲಿ ಬಳಲುತ್ತಿದ್ದ ಅಸಂಖ್ಯಾತರಿಗೆ ಸಾಮಾಜಿಕ ನ್ಯಾಯ ದೊರಕಿಸಿ ಕೊಡಲೆಂದೇ ಬಂಡಾಯವೆದ್ದು ಲಕ್ಷ್ಮಣ ಅನೇಕಪಟ್ಟಭದ್ರರ ವಿರೋಧ ಕಟ್ಟಿಕೊಳ್ಳಬೇಕಾಯಿತು. ಈ ಸಂದರ್ಭದಲ್ಲಿ ಎದುರಾದ ನೂರಾರು ಸವಾಲುಗಳು ಮತ್ತಷ್ಟು ವೀರನನ್ನಾಗಿಸಿದವು.

ತ್ಯಾಗ ಬಲಿದಾನಕ್ಕೆ ಕೈಮಾಡಿ ಕರೆದವು. ಇಂತಹ ಶೂರನ ಚರಿತ್ರೆಯನ್ನು ಬಹುಪ್ರಾಮಾಣಿಕತನದಿಂದ ಪದಕಟ್ಟಿ ಹಾಡಿದವರು ನಮ್ಮ ಜನಪದರು. ಅವರು ಕುಟ್ಟುವ, ಬೀಸುವ, ಹಂತಿಯ, ಡೊಳ್ಳಿನ ಭಜನೆಯ ಹಾಡುಗಳಲ್ಲಿ ಲಕ್ಷ್ಮಣನನ್ನು ಜೀವಂತವಾಗಿಸಿದ್ದಾರೆ. ಲಾವಣಿಗಳಲ್ಲಿ ಕಥೆಯ ನಾಯಕನಾಗಿ ಮೆರೆದಿದ್ದಾನೆ.

ಪರಗಾಣೆ ಜತ್ತಿ ಉಮರಾಣಿ ದೇಶಕ ಮಾಹೀ
ಆಳುವಂತ ಧನಿ ಢಪಳೆ ಸರದಾರ
ಜತ್ತಿ ಸಂಸ್ಥಾನ ಪೈಕಿ ಸಣ್ಣ ಹಳ್ಳಿ ಸಿಂಧೂರ.
ಸಿಂಧೂರ ಲಕ್ಷ್ಮಣ ಹುಟ್ಯಾನೊ ಭಂಟ ಎನಿಸ್ಯಾನ
ಕೊಟ್ಟ ವಚನ ಹುಟ್ಟ ತಪ್ಪಲಿಲ್ಲ
ಘಟ ಹೋಗುವ ತನಕ ಹಿಡಿದ ಹಟ ಬಿಡಲಿಲ್ಲ
ಲಕ್ಷ್ಮಣನು ತಿರುಗಿ ಹೇಳತಾನ ನಾಳೆ ಬರತೀನಿ
ಹುಷಾರಿ ಇರು ನೀ ಚಾವಡಿ ಒಳಗ
ಈ ಮಾತು ಸುಳ್ಳ ಅಲ್ಲ ಗಂಟು ಹಾಕು ಪದರಾಗ

ಹೀಗೆ ಕಂಪನಿ ಸರಕಾರಗಳಿಗೆ ಸಿಂಹ ಸ್ವಪ್ನವಾಗಿದ್ದ ಲಕ್ಷ್ಮಣನು ವಾಯಿದೆ ಕೊಟ್ಟು ಅದರಂತೆ ಮಾಡಿ ತೋರಿಸಿದ. ಅನೇಕ ಊರುಗಳಲ್ಲಿ ಗುಡ್ಡ ಗವ್ವರಗಳಲ್ಲಿ ಹುಲಿಯಂತೆ ಮೆರೆದು ಆಳರಸರ ಮತ್ತು ಶ್ರೀಮಂತರ ನಿದ್ದೆಗೆಡಿಸಿದ. ಇಂಗ್ಲೀಷರ ದರ್ಬಾರಕ್ಕೆ ಸವಾಲು ಹಾಕಿದ್ದ ಸಿಂಧೂರ ಲಕ್ಷ್ಮಣನು.

ರಾಮರಾವ ಮತ್ತು ದಾದಸಾಹೇಬ ಥಪಲೆಯವರ ಆಳ್ವಿಕೆಗೆ ಒಳಪಟ್ಟ ಜತ್ ಹಾಗೂ ಉಮರಾಣಿ ಸಂಸ್ಥಾನಗಳು ಬಹು ಪ್ರಸಿದ್ಧವೆಂಬುದು ಲಾವಣಿಕಾರನ ಅಭಿಪ್ರಾಯ. ಅಂಥವುಗಳ ವ್ಯಾಪ್ತಿಗೆ ಸೇರಿದ ಸಿಂಧೂರ ಗ್ರಾಮವೇ ಲಕ್ಷ್ಮಣನ ಹುಟ್ಟೂರು. ಅಲ್ಲಿಯ ಬೇಡರ ಸಾಬು ಮತ್ತು ನರಸವ್ವ ದಂಪತಿಗಳು ಈತನ ತಾಯಿ ತಂದೆಯರು. ವಸಂತಋತು, ಚೈತ್ರಮಾಸ, ಶುದ್ಧ ಸಪ್ತಮಿ. ಮೃಗಶಿರ ನಕ್ಷತ್ರ ಗುರುವಾರ ೨೨ ಘುಟಿಕಾ ೨೦ ಘುಳಾ ಮುಗಿಯುವ ಸಂದರ್ಭದಲ್ಲಿ ಹುಟ್ಟಿದ ಕೂಸೆ ಲಕ್ಷ್ಮಣ. ಸಿಂಧೂರ ಲಕ್ಷ್ಮಣನ ತಾಯಿ ನರಸವ್ವಳ ತವರೂರು ಅಥಣಿ ತಾಲೂಕಿನ ಒಂದು ಪುಟ್ಟ ಹಳ್ಳಿ ರಡ್ಡೇರಹಟ್ಟಿ. ಕಾರಣ ಇಂಥ ಒಬ್ಬ ಧೀರ, ಗಂಡುಗಲಿ ಮಗನಿಗೆ ಜನ್ಮ ಕೊಟ್ಟ ಪರಿಸರ ಅಥಣಿ ಪರಿಸರ ಎನ್ನುವುದು ಈ ಅಧ್ಯಯನಕ್ಕೆ ಮೆರುಗನ್ನುಂಟುಮಾಡಿದೆ.

ಸಿಂಧೂರಿನ ಈ ಯುವಕ ಬಡತನದ ಬೆಂಕಿಯಲ್ಲಿ ಅರಳಿದವನು. ತಂದೆ ಸಾಬಣ್ಣನ ನಂತರ ಸಿಂಧೂರಿನ ತಳವಾರಿಕೆಯನ್ನು ಸಮರ್ಥವಾಗಿ ನಿರ್ವಹಿಸಿದವನು. ಬಲಶಾಲಿಯುವಕ ಬೆನ್ನಿಗೆ ಬಿದ್ದವರನ್ನು ಬದುಕಿಸಿದವನು. ಬಡವರ ಬಂಧುವಾಗಿ ಅವರ ಕಷ್ಟನಷ್ಟಗಳಿಗೆ ಬದುಕಿನ ಉಸಿರನ್ನು ನೀಡಿದ ಮಹಾಮಾನವತೆಯ ಹರಿಕಾರನೆಂದು ಈತನ ಧೈರ್ಯ ಸಾಹಸವನ್ನು ಕುರಿತು ಜನರು ಹಾಡಿಹೊಗಳಿದ್ದಾರೆ.

ಗಂಡಸಿದ್ದರೆ ಇರಬೇಕಾ ಎಂಥವಾ
ನಮ್ಮ ಸಿಂಧೂರ ಲಕ್ಷ್ಮಣನಂಥಾವ
ಮಲ್ಲಿನ ಅಂಗಿ ಮೈಮ್ಯಾಲೆ
ಚಾಕರಿ ಕೋಲು ಕೈಯಾಗ
ಶಮನಾ, ಚದಾರ, ಘುಟಿಕ, ಸುತ್ತಿ
ಚಾವಡಿಗೆ ಒಂಟಾನ

ಎನ್ನುವ ಮಾತಿನಲ್ಲಿ ಲಕ್ಷ್ಮಣನ ಧೈರ್ಯ, ಮನೋಸ್ಥೈರ್ಯ, ಆತನ ಮೈಕಟ್ಟು, ದೇಹದಾರ್ಢ್ಯತೆ ಆತನ ಗಂಭೀರವನ್ನು ಹೆಚ್ಚಿಸುತ್ತಿದ್ದವು. ಇವುಗಳ ಬಲದಿಂದಲೇ ಲಕ್ಷ್ಮಣ ನಾಡಿನ ತುಂಬೆಲ್ಲಾ ಕೀರ್ತಿಯ ಹೂ ಸುರಿಸಿದ ಎನ್ನುವುದು ಜನಪದರ ನಂಬಿಗೆ.

ಸಿಂಧೂರ ಸಣ್ಣ ಹಳ್ಳಿಯಾದರೂ ಗೌಡರ ಆಳ್ವಿಕೆಯಿಂದ ದೊಡ್ಡ ಹೆಸರೇ ಪಡೆದಿತ್ತು. ಅಲ್ಲಿಯ ಗೌಡನು ಎಳೆದ ಗೆರೆಯನ್ನು ಊರಿನ ನರಪಿಳ್ಳೆಯು ದಾಟುವಂತಿರಲಿಲ್ಲ. ಗೌಡ ನಡೆದು ಬಂದರೆ

ಬೀದಿಮೇಲೆ ಹರಿದು ಹೋಗುವ ಸರ್ಪವೂ ಕೂಡ ಸ್ವಲ್ಪ ಹೊತ್ತು ನಿಂತೆ ಹೋಗಬೇಕಾಗುತ್ತಿತ್ತು. ಇದರರ್ಥ ಗೌಡರ ವಿರುದ್ಧ ಉಸಿರೆತ್ತುವ ತಾಕತ್ತು ಯಾರಿಗೂ ಇರಲಿಲ್ಲೆನ್ನುವುದು. ಆದರೆ ಅದೇ ಊರಿನಲ್ಲಿ ಹುಟ್ಟಿ ಯೌವನಕ್ಕೆ ಬಂದಿದ್ದ ಲಕ್ಷ್ಮಣನು ಗೌಡರು ಹಾಕಿದ ಗೆರೆಯನ್ನು ಮುರಿಯಬೇಕಾಯಿತು. ಬ್ರಿಟೀಷ್ ಸರಕಾರದಿಂದ ಇನಾಮುದಾರ, ಸುಭೇದಾರ, ಗೌಡ, ಕುಲಕರ್ಣಿಗಳ ಕಪಟ ನಾಟಕ ಲಕ್ಷ್ಮಣನಿಗೆ ಸರಿಕಾಣಲಿಲ್ಲ. ಇದರಿಂದಾಗಿ ಇವರ ಕಠೋರ ಆಡಳಿತದಿಂದ ಜನಸಾಮಾನ್ಯರನ್ನು ಪಾರುಮಾಡಲು ಲಕ್ಷ್ಮಣನ ರಕ್ತ ಕುದಿಯತೊಡಗಿತು. ಈ ಕುದಿಯಲ್ಲಿ ಬೆಂದ ಮೊದಲ ವ್ಯಕ್ತಿಯೇ ಸಿಂಧೂರಿನ ಗೌಡ. ಈ ಗೌಡನ ಇಬ್ಬಗೆ ನೀತಿಯನ್ನು ಮೊದಲ ಬಾರಿಗೆ ಪ್ರಶ್ನಿಸಿದ. ಲಕ್ಷ್ಮಣನು ಸಹಜವಾಗಿಯೇ ಗೌಡರ ಕೆಂಗಣ್ಣಿಗೆ ಗುರಿಯಾದನು. ಅಂದು ಗೌಡರ ಕೈಕೆಳಗಿನ ವಾಲಿಕಾರನೊಬ್ಬ ಗೌಡನ ಮನೆತನದ ಗೌರವವನ್ನೇ ಪ್ರಶ್ನಿಸುವುದೆಂದರೆ ಸಣ್ಣ ಮಾತಾಗಿರಲಿಲ್ಲ. ಈ ಕಾರಣದಿಂದಾಗಿ ಸಿಂಧೂರಿನ ಗೌಡನು ಲಕ್ಷ್ಮಣನನ್ನು ಸದೆಬಡಿಯಲು ಜತ್ ಸಂಸ್ಥಾನದ ಪೋಲಿಸರಿಗೆ ಕರೆಕೊಟ್ಟನು.

ಈ ಹಿನ್ನೆಲೆಯಲ್ಲಿ ಕಂದಾಯ-ಕರ ವಸೂಲಿಯ ವಿಷಯದಲ್ಲಿ ಲಕ್ಷ್ಮಣನು ಸರಕಾರಕ್ಕೆ ಮೋಸ ಮಾಡುತ್ತಿದ್ದಾನೆಂದು ಈತನ ವಿರುದ್ಧ ದೂರು ದಾಖಲು ಮಾಡಿದರು. ಇದೇ ಸಂದರ್ಭದಲ್ಲಿ ಲಕ್ಷ್ಮಣನ ಅಕ್ಕನ ಮಕ್ಕಳಾದ ಸಾಬ, ನರಸು, ಗೋಪಾಳಿಯರು, ಬಸರಗಿ, ಬೀಳೂರು, ಸಿಂಧೂರಗಳಲ್ಲಿ ಕಳ್ಳತನ ಮಾಡಿದ್ದರು. ಇದರಿಂದ ಲೂಟಿಗೊಳಗಾದ ಬೀಳೂರಿನ ಮನೋಹರ ಕುಲಕರ್ಣಿಯ ಮನೆ, ಬಣಜಿಗರ ಅಂಗಡಿಗಳು ಮತ್ತು ಸಿಂಧೂರಿನ ಹಿರೇಮಠ ಈರಯ್ಯನ ಮನೆಗಳು ಪ್ರತ್ಯಕ್ಷ ಸಾಕ್ಷಿಯಾಗಿದ್ದವು. ಇವರೇ ಕಳ್ಳತನ ಮಾಡಿದ್ದಾರೆಂದು ಹೇಳಲು ಪತ್ತಾರಫಂಡರಿ, ಡೊಳ್ಳಿ ಭೀಮಪ್ಪ, ಹಿರೇಮಠ ಈರಯ್ಯ ಮುಂತಾದವರು ಸಾಕ್ಷಿಯನ್ನು ನುಡಿಯಲು ಸಿದ್ಧರಾಗಿಯೇ ಇದ್ದರು. ಇಷ್ಟು ಸಾಕಾಗಿತ್ತು ಗೌಡನಿಗೆ ಲಕ್ಷ್ಮಣನನ್ನು ಹತ್ತಿಕ್ಕಲು. ಈ ಸಂದರ್ಭವನ್ನು ಬಹಳಷ್ಟು ಚಾಣಾಕ್ಷತನದಿಂದ ಬಳಸಿಕೊಂಡ ಸಿಂಧೂರಿನ ಗೌಡ, ಬೀಳೂರಿನ ಮಹಾದೇವಪ್ಪ ಗೌಡ ಹಾಗೂ ಹಿರೇಮಠದ ಈರಯ್ಯರು ಈ ಎಲ್ಲಾ ಕಳ್ಳತನದ ಆರೋಪವನ್ನು ಲಕ್ಷ್ಮಮಣನ ಮೇಲೆ ಹೊರಿಸಿದರು. ಇದು ಪೋಲೀಸರಿಗೆ ಹಬ್ಬದೂಟವಾಯಿತು. ಜತ್ತದಿಂದ ಬಂದವರೇ ಲಕ್ಷ್ಮಣನನ್ನು ಚಾವಡಿಗೆ ಕರೆಯಿಸಿ, ಅವಮಾನಿಸಿ, ಬಂಧಿಸಲು ಯತ್ನಿಸಿದರು.

ಹೀಗೆ ಅನ್ಯಾಯ, ಅಕ್ರಮ ಮೊದಲಾದ ಸಂದರ್ಭಗಳು ಪರಿಸರದಲ್ಲಿ ನಡೆಯುವುದು ಕಂಡು ಬಂದಾಗ ಲಕ್ಷ್ಮಣನು ಸಿಡಿದೇಳದೇ ಇರುತ್ತಿರಲಿಲ್ಲ. ಹೊಲಮನೆಗಳ ವ್ಯಾಜ್ಯ, ಕೌಟುಂಬಿಕ ಕಲಹಗಳು, ಮತ್ತಿತರ ತಕರಾರುಗಳಿಗೆ ಸಂಬಂಧಿಸಿದಂತೆ ತಪ್ಪಿತಸ್ಥರಿಗೆ ಊರ ಚಾವಡಿಗೆ ಕರೆತುರುವುದು, ಸಂಸ್ಥಾನಿಕರು, ಅಧಿಕಾರಿಗಳು, ಪೋಲಿಸರು ಸಿಂಧೂರಿಗೆ ಬಂದಾಗ ಅವರನ್ನು ಉಪಚರಿಸುವುದು, ಕಂದಾಯ ವಸೂಲಿ ಮಾಡುವುದು, ಸರಕಾರಿ ಆದೇಶಗಳನ್ನು ಜನರಿಗೆ ಸಾರುವುದು ಮುಂತಾದ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದ ಈತನು ತನ್ನ ಚಾಕರಿಯ ಜೊತೆಗೆ ಹಬ್ಬ ಹರಿದಿನ, ಜಾತ್ರೆಗಳಲ್ಲಿ ಹಮ್ಮಿಕೊಳ್ಳುವ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಜಯದ ಸರಮಾಲೆಯನ್ನು ಧರಿಸುತ್ತಿದ್ದನು.

ಗುಂಡು ಎತ್ತುವುದು, ಕಣೆವೆಕಲ್ಲು ಬೀಸುವುದು, ವೇಗವಾಗಿ ಹಿಂದಕ್ಕೆ ಓಡುವುದು, ಕುಸ್ತಿ ಆಡುವುದು, ತುಂಬಿದ ಚೀಲಗಳನ್ನು ಹೇರಿದ ಬಂಡಿ ಎಳೆಯುವುದು, ಹಿಂಬರಕಿಯಿಂದ ಗೋಡೆ ಹತ್ತುವುದು, ಹೀಗೆ ಹಲವಾರು ಶಕ್ತಿ, ಸಾಹಸ ಪ್ರದರ್ಶನಗಳಲ್ಲಿ ಭಾಗವಹಿಸಿ ಎಲ್ಲರ ಹುಬ್ಬೇರಿಸುವಂತೆ ಮಾಡುತ್ತಿದ್ದನು. ಕವಣೆ ಕಲ್ಲು ಬೀಸುವುದರಲ್ಲಿ ಲಕ್ಷ್ಮಣನಿಗೆ, ಲಕ್ಷ್ಮಣನೇ ಸಾಕ್ಷಿ ಎನ್ನುವಷ್ಟರ ಮಟ್ಟಿಗೆ, ಪ್ರಸಿದ್ಧಿಯನ್ನು ಹೊಂದಿದ್ದನು. ಎತ್ತಿನನೊಗವನ್ನು ಗೋಟು ನಿಲ್ಲಿಸಿ ದೂರದಿಂದ ಅದರ ಕಣ್ಣೊಳಗಿನಿಂದ (ತೂತುಗಳಿಂದ) ಕಲ್ಲು ತೂರಿಸುವುದಾಗಲಿ, ಗೋಡೆ ಹತ್ತುವುದಾಗಲಿ, ಆರು ಅಕಡಿ ನಟ್ಟು ಕಡಿಯುವುದಾಗಲಿ, ಮೊಲವನ್ನು ತುಳಿದು ಓಡಿದ ಘಟನೆಯಾಗಲಿ ಕೇಳಿತಿಳಿದಾಗ ಮೈರೋಮಾಂಚನವಾಗುತ್ತದೆ.

ಹೀಗೆ ಲಕ್ಷ್ಮಣನು ಸಾಹಸ ಪ್ರವೃತ್ತಿಗೆ ಹೆಸರುವಾಸಿಯಾದಂತೆ ಕರುಣೆ, ಅನುಕಂಪ, ದಯಾಶೀಲತೆ ಹಾಗೂ ಸ್ತ್ರೀಯರ ಬಗ್ಗೆ ಗೌರವಭಾವನೆ ಆ ಗುಣಗಳಿಂದಲೂ ಸಿಂಧೂರಿನ ಹಾಗೂ ಸುತ್ತಮುತ್ತಲು ಹೆಸರುವಾಸಿಯಾಗಿದ್ದನು. ಅಂತೆಯೇ ಇಲ್ಲಿನ ಜನ ಜೀವನದೊಂದಿಗೆ ಬೆರೆತು ಹೋಗಿದ್ದನು. ಕೇವಲ ಧರ್ಮ ಸಹಿಷ್ಣುತಾ ಗುಣವನ್ನು ರೂಢಿಸಿಕೊಂಡಿರುವುದರ ಜೊತೆಗೆ ತಮಗೆ ವಿರೋಧವಾಗಿ ಕಂಡು ಬಂದವರನ್ನು ಅಲ್ಲಿಯೇ ಬಗ್ಗುಬಡಿಯುವ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದನು. ಈ ಹಿನ್ನೆಲೆಯಲ್ಲಿಯೇ ಸಿಂಧೂರ ಲಕ್ಷ್ಮಣನು ಭಾರತೀಯರೇ ಆಗಿರುವಂತಹ ಬಲಿಷ್ಠರಿಂದ ಕಿರುಕುಳಕ್ಕೆ ಒಳಗಾಗಿ ಬೇರೆ ಉಪಾಯ ಕಾಣದೆ ಸಿಡಿದೇಳಬೇಕಾತು. ಈ ಬಲಿಷ್ಠ ಶಕ್ತಿಯು ಬ್ರಿಟಿಷರ ಹಿಂಬಾಲಕರಾಗಿದ್ದುದರಿಂದ ಸ್ವಾಭಾವಿಕವಾಗಿಯೇ ಬ್ರಿಟೀಷರ ವಿರೋಧಿಯಾಗಿ ಸ್ವಾತಂತ್ರ್ಯಕಹಳೆಯನ್ನು ಸಹಜವಾಗಿಯೇ ಊದಿದನು.

ಈತನಿಗೆ ಸ್ವಾತಂತ್ರ್ಯ ಪ್ರೇಮದ ಸಂಸ್ಥಾನಿಕನಾಗಲಿ, ಯಾವುದೇ ಸಂಸ್ಥೆಗಳಾಗಲಿ ಆಶ್ರಯವನ್ನು ಕೊಡದೇ ಹೋದಾಗ ಬ್ರಿಟೀಷರನ್ನು ವಿರೋಧಿಸುತ್ತಲೇ ಬಂದನು. ಶ್ರೀಮಂತರ ಲೂಟಿಯನ್ನು ಆರಂಭಿಸಿದನು. ಇವನು ನಿಸ್ವಾರ್ಥಿಯಾದ್ದರಿಂದ ಲೂಟಿ ಮಾಡಿದ ಹಣವನ್ನು ಬಡವರಿಗೆ ಹಂಚುತ್ತಿದ್ದನು. ಬ್ರಿಟೀಷರ ವಿರುದ್ಧ ಸಿಡಿದೆದ್ದ ಲಕ್ಷ್ಮಣನು ಆತನ ಜೀವನದ ಕಡೆಯವರೆಗೂ ಬಂಡೆದ್ದು ನಿಂತನು.

ಬಂಡೆದ್ದು ನಾವೆಲ್ಲ ಆಂಗ್ಲರ ಹಿಡಿದು
ಕಂಡಲ್ಲಿ ತುಳಿದು ಬರೋಣ ಬೆನ್ನಟ್ಟಿ
ಒಂಡಿನಲಿ (ಕೆಸರು) ಹಾಕಿ ತುಳಿಯೋಣ

ಎಂದು ಕರೆಕೊಟ್ಟಿರಬೇಕು. ಇದು ಆತನ ಹೋರಾಟದ ಸ್ಪಷ್ಟ ಧೋರಣೆಯನ್ನು ತೋರಿಸುತ್ತದೆ. ಈತನ ದೃಷ್ಟಿಯಲ್ಲಿ ವೈರಿಗಳಾಗಿ ಕಂಡು ಬಂದವರೆಂದರೆ ದೇಶವನ್ನು ಕಿತ್ತುತಿನ್ನುತ್ತಿರುವ ಆಂಗ್ಲರು, ಹಾಗೆಯೇ ಜನರನ್ನೇ ಸುಲಿದು ತಿನ್ನುತ್ತಿರುವ ಸ್ಥಾನಿಕ ಆಡಳಿತಗಾರರು. ಇವರೀರ್ವರನ್ನು ಮುಗಿಸದೇ ಹೊರತು ಜನಸಾಮಾನ್ಯರಿಗೆ ಮುಕ್ತಿಯೆಂಬುದಿಲ್ಲವೆಂಬುದನ್ನು ಅರಿತ ಲಕ್ಷ್ಮಣ ಬಂಡಾಯದ ಮೂಲ ಪುರುಷನಾದನು.

ಕೋಹಳ್ಳಿ ಗ್ರಾಮದ ಸಿದ್ದುಬಾ ಇವನ ಆತ್ಮೀಯಗೆಳೆಯ. ಈತನ ತೋಟದಲ್ಲಿ ಲೂಟಿಯಿಂದ ಬಂದ ಹಣವನ್ನು ಈತನಿಗೆ ಕೊಡುತ್ತಿದ್ದ. ಆದರೆ ಇವರಿಬ್ಬರ ಸ್ನೇಹವನ್ನು ಮುರಿಯಲು ಪ್ರಯತ್ನಿಸಿದ ಒಂದು ವ್ಯವಸ್ಥೆ ಫಲಕಾರಿಯಾಗಿತ್ತು. ಇವರಿಬ್ಬರಲ್ಲಿ ವೈಶಮ್ಯವೇರ್ಪಟ್ಟು ಹಣವನ್ನು ಬಡವರಿಗೆ ಹಂಚಿಬಾ ಎಂದು ಗೆಳೆಯನಿಗೆ ಸೂಚಿಸಿದಾಗ ಅದನ್ನು ಸಿದ್ದುಬಾ ತಿರಸ್ಕರಿಸಿದ್ದ. ಬಡವರ ಹಣ ಬಡವರಿಗೆ ಸೇರಬೇಕಾದುದು ಎನ್ನುವ ಮಾತುಗಳನ್ನು ಆತ ಮುರಿದು ಹಾಕಿದ ಎಂದು ಹಲವಾರು ಲಾವಣಿಗಳು ತಿಳಿಸುತ್ತವೆ.

ಹೀಗೆ ಕೋಲ್ಮಿಂಚಿನಂತೆ ಓಡಾಡಿಕೊಂಡಿದ್ದ ಲಕ್ಷ್ಮಣನನ್ನು ಆತನ ಸಂಗಡಿಗರನ್ನು ಹಿಡಿಯಲು ಜತ್ ಸಂಸ್ಥಾನದ ಪೋಲಿಸರು ಬೆನ್ನಟ್ಟಿಯೇ ಬರುತ್ತಿದ್ದರು. ಪೌಜುದಾರರಾದ ಕಲಾಲ, ಪಾವಡೆಪ್ಪ, ದಿಲ್ ದಾರ್‌ಖಾನ ಪ್ರಮುಖ ವ್ಯಕ್ತಿಗಳು. ಪೋಲಿಸ್ ಇಲಾಖೆಯವರು. ಒಮ್ಮೆ ತಿಗಡಿ ಗ್ರಾಮದಲ್ಲಿ ಲಕ್ಷ್ಮಣನ ಗುಂಪನ್ನು ನೋಡಿದರು. ಇದೇ ಸರಿಯಾದ ಸಮಯವೆಂದು ಗುಂಡು ಹಾರಿಸಿದರು. ಇದಾದ ನಂತರ ಲಕ್ಷ್ಮಣನು ಆ ಪ್ರದೇಶವನ್ನು ಬಿಟ್ಟು, ಬಾಗಲಕೋಟೆ ಮತ್ತು ಜಮಖಂಡಿ ಭಾಗಕ್ಕೆ ಬಂದು ನೆಲೆಸಿದ. ಇದನ್ನರಿತ ಬ್ರಿಟೀಷರು ಕೂಡ ಫೌಜುದಾರ ಕಲಾಲನನ್ನು ಜತ್‌ದಿಂದ ಜಮಖಂಡಿ ಠಾಣೆಗೆ ವರ್ಗಾಯಿಸಿದರು.

ಹೀಗೆ ಪೌಜುದಾರ ಕಲಾಲ್ ಮತ್ತು ಸಿಂಧೂರ ಲಕ್ಷ್ಮಣ್ಣನಿಗೂ ನೇರವಾಗಿ ಅಲ್ಲಲ್ಲಿ ತೆಕ್ಕಮುಕ್ಕಿ ಬಿದ್ದಿತು. ಕಲಾಲ ಬಿಗಿದ ಪಟ್ಟು ಇನ್ನೇನು ಲಕ್ಷ್ಮಣನ ಉಸಿರು ನಿಲ್ಲಿಸಿಬಿಡುತ್ತದೆ ಎನ್ನುವಷ್ಟರಲ್ಲಿ ನರಸುವಿನ ಕೊಡಲಿಯು ಕಲಾಲಿನ ಕುತ್ತಿಗೆಯನ್ನು ಬೇರ್ಪಡಿಸಿತ್ತು. ಈ ಘಟನೆಯನ್ನು ಕೇಳಿದ ಜತ್ತ, ಜಮಖಂಡಿ, ಮುಧೋಳ ಸಂಸ್ಥಾನಗಳು ಕಟ್ಟೆಚ್ಚರವಹಿಸಿದವು. ದರೋಡೆ ಕೋರರಿಂದ ಪೋಲೀಸ್ ಅಧಿಕಾರಿಯ ಕೊಲೆ ಎಂದು ವ್ಯವಸ್ಥಿತವಾಗಿ ಪ್ರಚಾರ ಮಾಡಿದರು. ಈ ಸುದ್ದಿ ಮುಟ್ಟಿದ ಕೂಡಲೇ ಪೋಲೀಸ್ ಅಧಿಕಾರಿ ಹಾಗೂ ಬ್ರಿಟೀಷ್ ಪ್ರತಿನಿಧಿ ಗಾರ್ಮನ್ ತೆಗ್ಗಿ ಗ್ರಾಮಕ್ಕೆ ಬಂದನು. ಈ ಸಂದರ್ಭದಲ್ಲಿ ವೆಂಕನಗೌಡ ಎಂಬುವನು ಪೋಲೀಸ್ ಪಾಟೀಲನಾಗಿದ್ದನು. ಇವನಿಗೆ ಸ್ವಕುಲದವನೆಂಬ ಅಭಿಮಾನವು ಲಕ್ಷ್ಮಣನನ್ನು ಕುರಿತು ಇದ್ದುದಕ್ಕಾಗಿ ವೆಂಕನಗೌಡನಿಗೆ ಗಾರ್ಮನ್ ಬೆದರಿಕೆ ಹಾಕಿದನು. ಲಕ್ಷ್ಮಣನಿಗೆ ಬೆಂಬಲಿಸುವುದು, ಶಸ್ತ್ರಾಸ್ತ್ರ ಒದಗಿಸುವುದು, ಕಾನೂನು ವಿರೋಧವೆಂದು ತಿಳಿಸಿದನು. ಕೊಲೆ, ಸುಲಿಗೆ ಮಾಡಿದ ದರೋಡೆಕೋರನಿಗೆ ಸಹಾಯ ಮಾಡಿದರೆ ನಿನ್ನ ಕೆಲಸವು ಹೋಗುತ್ತದೆ ಎಂದು ಬೆದರಿಸಿದನು. ಕೊನೆಗೂ ವೆಂಕನಗೌಡ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಯೋಚಿದನು. ಈತನು ತನ್ನ ಸಹಚರರೊಂದಿಗೆ ೧೯೨೨ರ ಶ್ರಾವಣ ಮಾಸ ತೆಗ್ಗಿಯ ಕಪ್ಪರ ಪಡೆಯವ್ವನ ಗುಡ್ಡದಲ್ಲಿ ಬೀಡುಬಿಟ್ಟು ಅಲ್ಲಿ ಆತ್ಮೀಯತೆಯಿಂದ ಔತಣಕೂಟ ಏರ್ಪಡಿಸಿದನು. ಲಕ್ಷ್ಮಣನಿಗೆ ಆಹ್ವಾನವಿತ್ತನು. ಇದನ್ನು ನಂಬಿ ಲಕ್ಷ್ಮಣನು ಭಾಗವಹಿಸಿದ ಊಟಮಾಡುವಾಗಲೇ ಕೊಲ್ಲಲಾಯಿತು.

ಹೀಗೆ ಒಂದು ಸಣ್ಣ ಹಳ್ಳಿಯಿಂದ ಹಿಡಿದು ಬಂದ ಈ ಲಕ್ಷ್ಮಣ ತಿರುಗಿದ ಪ್ರದೇಶಗಳು, ಮಾಡಿದ ಹೋರಾಟಗಳು ನೀಡಿದ ಘರ್ಷಣೆಗಳು ಅನಂತವಾಗಿವೆ. ಸ್ವಾತಂತ್ರ್ಯಹೋರಾಟದಲ್ಲಿ ಮೊದಲು ಬ್ರಿಟೀಷರಂತೆ ಇರುವ ನಮ್ಮವರನ್ನು ಬಗ್ಗುಬಡಿಯಬೇಕು ಎನ್ನುವ ಸಿದ್ಧತೆಯಲ್ಲಿರುವಾಗಲೇ ನಮ್ಮ ಮಂದಿಯಿಂದಲೇ ಆಹುತಿಯಾಗಬೇಕಾಯಿತು.

ಅಧ್ಯಾಯ ನಾಲ್ಕು

ವಾಲ್ಮೀಕಿ ಸಮುದಾಯದ ಆಚರಣೆಗಳು

೪.೧. ವಾರ್ಷಿಕಾವರ್ತನದ ಆಚರಣೆಗಳು

೪.೨. ಜೀವನಾವರ್ತನದ ಆಚರಣೆಗಳು

೪.೩. ನಂಬಿಕೆ, ವಿಧಿ-ನಿಷೇಧಗಳು

೪.೪. ಹರಕೆಗಳು

ಅಧ್ಯಾಯ ನಾಲ್ಕು

ವಾಲ್ಮೀಕಿ ಸಮುದಾಯದ ಆಚರಣೆಗಳು

ಆಚರಣೆ ಎಂದರೆ ಆಚರಿಸುವುದು ಅನುಸರಿಸುವುದು, ಸಂಪ್ರದಾಯದಂತೆ ನಡೆಯುವುದು ಎಂದು ಅರ್ಥೈಸಬಹುದು. ಮನುಷ್ಯನ ಅಗೋಚರವಾದ ದೈವಶಕ್ತಿಗಳ ಪ್ರೀತ್ಯರ್ಥವಾಗಿ ನಡೆಸುವ ಮತಾಚಾರಗಳು ಮತ್ತು ಕರ್ಮ ವಿಧಿಗಳನ್ನು ಆಚರಣೆಗಳೆಂದು ಕರೆಯುವರು. ಇವು ತಲ ತಲಾಂತರದಿಂದ ಸಮಾಜದ ಅಂಗೀಕಾರವನ್ನು ಪಡೆದು ಬಳಕೆಯಲ್ಲಿರುವಂತಹ ಮಾಟ-ಮಂತ್ರ ಮತ್ತು ಧಾರ್ಮಿಕ ವಿಧಿ-ವಿಧಾನಗಳನ್ನು ಜನಪದ ಆಚರಣೆಗಳೆನ್ನಬಹುದು. ನಂಬಿಕೆ ಮತ್ತು ಆಚರಣೆಗಳು ಧರ್ಮದ ಎರಡು ಅಂಗಗಳಾಗಿವೆ. ನಂಬಿಕೆಯು ಒಂದು ಮಾನಸಿಕ ಕಲ್ಪನೆ. ಅದರ ಕ್ರಿಯಾತ್ಮಕ ರೂಪವೇ ಆಚರಣೆ.

ನಿರ್ದಿಷ್ಟ ಸಮಾಜದಲ್ಲಿ ನಿರ್ದಿಷ್ಟ ಸಮಯದಲ್ಲಿ ಒಂದು ಜಾತಿ ಮತ್ತು ಉಪಜಾತಿಗಳಲ್ಲಿ ಬಳಕೆಯಲ್ಲಿರುವ ಆಚರಣೆಗಳ ಹುಟ್ಟಿಗೆ ಪ್ರಬಲ ಕಾರಣಗಳು ಇರಲೇಬೇಕು. ಅದು ಆರ್ಥಿಕ, ಸಾಮಾಜಿಕ, ಭಾವನಾತ್ಮಕ ಹೀಗೆ ಏನಾದರೂ ಆಗಿರಬಹುದು. ಒಬ್ಬ ವ್ಯಕ್ತಿ ಇಷ್ಟ ಪಟ್ಟು ಒಂದು ಆಚರಣೆಯನ್ನು ಮಾಡಲು ಸಾಧ್ಯವಿಲ್ಲ. ಒಂದು ಜನಾಂಗದ ಜೀವನ ವಿಧಾನದ ಬೇಕು, ಬೇಡಿಕೆಗಳ ಅಂಗವಾಗಿ ಆಚರಣೆ ರೂಪು ಪಡೆಯುತ್ತದೆ. ಪ್ರಕೃತಿಯಲ್ಲಿ ಮಾನವನ ದೇಹದಲ್ಲಿ ಉಂಟಾಗುವ ಬದಲಾವಣೆಗಳನ್ನು ಆಚರಣೆಗಳ ಮೂಲಕ ಗುರುತಿಸಬಹುದು. ಮಾನವನ ಬದುಕಿಗೆ ಮತ್ತು ಅವನ ಭಾವ ಪ್ರಪಂಚಕ್ಕೆ ಸಂಬಂಧಿಸಿದ ಆಚರಣೆಗಳು ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಆಚರಣೆಗಳು, ನೈಸರ್ಗಿಕ ಕ್ರಿಯೆಗಳಿಗೆ ಸಂಬಂಧಿಸಿ ಆಚರಣೆಗಳು, ಸಾಮಾಜಿಕ ರಚನೆಗಳಿಗೆ ಸಂಬಂಧಿಸಿದ ಆಚರಣೆಗಳೆಂದು ಇವನ್ನು ಸ್ಥೂಲವಾಗಿ ವಿಂಗಡಿಸಬಹುದು.

ದೈವಕ್ಕೆ ಸಂಬಂಧಿಸಿದ ಆಚರಣೆಗಳನ್ನು ಜನಪದರು ದಿನಕ್ಕೊಂದು ಸಾರಿ, ವಾರಕ್ಕೊಂದು ಸಾರಿ, ತಿಂಗಳಿಗೊಂದು ಸಾರಿ ವರ್ಷಕ್ಕೊಂದು ಸಾರಿ, ಒಂದು ದೇವತೆಯ ಆರಾಧನೆಯ ಹಿನ್ನೆಲೆಯಲ್ಲಿ ಆಚರಿಸುತ್ತಾರೆ. ಹೀಗೆ ಸಕಲ ಪೂರ್ವ ಸಿದ್ಧತೆಗಳೊಂದಿಗೆ ಆಗುವ ಹಬ್ಬ ಹರಿದಿನ, ತಿಥಿ-ಮತಿಗಳು ಅನೇಕ ಆಚರಣೆಗಳ ಮೊತ್ತವಾಗಿವೆ.

ಆಚರಣೆಗಳನ್ನು ದೈನಿಕಾವರ್ತನದ ಆಚರಣೆಗಳು, ವಾರ್ಷಿಕಾವರ್ತನದ ಆಚರಣೆಗಳು, ಜೀವನಾವರ್ತನದ ಆಚರಣೆಗಳು ಎಂದು ಮೂರು ರೀತಿಯಲ್ಲಿ ವಿಂಗಡಿಸಬಹುದು.

೪.೧. ವಾರ್ಷಿಕಾವರ್ತನ ಆಚರಣೆಗಳು

ವರ್ಷವಿಡಿ ಒಂದಲ್ಲಾ ಒಂದು ಸಂದರ್ಭದಲ್ಲಿ ಆಚರಿಸುವ ಆಚರಣೆಗಳನ್ನು ವಾರ್ಷಿಕಾವರ್ತನದ ಆಚರಣೆಗಳೆಂದು ಕರೆಯಬಹುದು. ಯಾವುದೇ ಒಂದು ಸಮುದಾಯದವು ತಮ್ಮದೇ ಆದ ದೈವಗಳ ಆಚರಣೆಗಳನ್ನು ತಮ್ಮದೇ ಆದ ಕ್ರಮದಲ್ಲಿ ಆಚರಿಸುತ್ತಾ ಪೂಜಿಸುತ್ತಾ ಬಂದಿದ್ದಾರೆ. ಅವರಲ್ಲಿ ಅವುಗಳ ಕುರಿತ ನಂಬುಗೆ, ವಿಧಿ-ನಿಷೇಧ ಇದ್ದೇ ಇರುತ್ತದೆ. ಜಗತ್ತಿನ ಎಲ್ಲಾ ಸಮುದಾಯಗಳು ದೇವರ ಪ್ರೀತ್ಯಾರ್ಥವಾಗಿಯೇ ಹಬ್ಬಗಳನ್ನು ಆಚರಿಸುತ್ತಾ ಬಂದಿವೆ. ಈ ಹಿನ್ನೆಲೆಯಲ್ಲಿ ಅಥಣಿ ಪರಿಸರದ ವಾಲ್ಮೀಕಿ ಸಮುದಾಯದವು ಸ್ತ್ರೀ ಪ್ರಧಾನ ಸಂಸ್ಕೃತಿಯಲ್ಲಿ ಬೆಳೆದ ದ್ರಾವಿಡ ಮೂಲದ ಸಮುದಾಯದವಾಗಿದೆ. ಕಾರಣ ಸ್ತ್ರೀ ಪರ ದೈವಗಳು ಇಲ್ಲಿ ಪ್ರಧಾನವಾಗಿ ಕಂಡುಬರುತ್ತವೆ. ಆದಾಗ್ಯೂ ಪುರುಷ ದೈವಗಳೂ ಕೂಡ ಪ್ರಾಮುಖ್ಯತೆಯನ್ನು ಪಡೆದಿದೆ. ಯಲ್ಲವ್ವ, ಮುರುಗವ್ವಾ ರೇಣುಕವ್ವ, ಲಂಗಮವ್ವ, ಆಂಜನೇಯ, ಸಿದ್ಧೇಶ್ವರ, ಬಸವಣ್ಣ, ಮಲ್ಲಯ್ಯ, ನರಸಿಂಹಸ್ವಾಮಿ, ಈಶ್ವರ, ಗಣಪತಿ ಮುಂತಾದ ದೇವರುಗಳನ್ನು ಪೂಜಿಸುತ್ತಾರೆ. ಹಾಗೆಯೇ ಬನ್ನಿಮರ, ಬೇವಿನಮರ, ಆಲದಮರ, ತುಳಸಿ, ಬಿಲ್ವಪತ್ರಿಮರ, ಎಕ್ಕಿಯಗಿಡವನ್ನು ಪೂಜಿಸುತ್ತಾರೆ. ಪಂಚಮಿ ಹಬ್ಬದಲ್ಲಿ ನಾಗರ ಕಲ್ಲುಗಳಿಗೆ ಹುತ್ತಗಳಿಗೆ ಹಾಲು ಎರೆಯುವರು. ಒಟ್ಟಿನಲ್ಲಿ ಪ್ರಕೃತಿಯಲ್ಲಿನ ಮರಗಿಡ, ಕಲ್ಲು ಬಂಡೆ, ಸೂರ್ಯ, ಚಂದ್ರರನ್ನು ಪೂಜಿಸುವ ಇವರು ಪ್ರಕೃತಿ ಆರಾಧಕರಾಗಿದ್ದಾರೆ.

ಮಾನವನು ಲೌಕಿಕ ಜೀವನದಿಂದ ಪಾರಮಾರ್ಥಿಕ ಜೀವನದತ್ತ ಮುನ್ನಡೆಯಲು ಸನಾತನವಾಗಿ ಆಚರಿಸುತ್ತಾ ಬಂದ ಈ ಆಚರಣೆಗಳು ಅನೇಕ ಸಮುದಾಯಗಳ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ಪರಿಸರದಲ್ಲಿ ವಾಲ್ಮೀಕಿ ಸಮುದಾಯದವರು ಆಚರಣೆಗಳಿಗೆ ಪ್ರಾಮುಖ್ಯತೆ ಯನ್ನು ಕೊಡುತ್ತಾರೆ. ಪ್ರತಿಹುಣ್ಣಿಮೆ, ಅಮವಾಸ್ಯೆಗೂ ಹೋಳಿಗೆ ಮಾಡುವದು. ಸಂಪ್ರದಾಯವಾಗಿ ಮುಂದುವರಿದುಕೊಂಡುಬಂದಿದೆ. ಅಲ್ಲದೆ ಸಂಕ್ರಮಣ, ಶಿವರಾತ್ರಿ, ಯುಗಾದಿ, ನಾಗರಪಂಚಮಿ, ಗಣಪತಿ ಹಬ್ಬ, ಹಿರಿಯರ ಹಬ್ಬ ಮಹಾನವಮಿ, ದೀಪಾವಳಿ, ಹಬ್ಬಗಳನ್ನು ಆಚರಿಸುತ್ತಾ ಬಂದಿದ್ದಾರೆ.

ಸಂಪ್ರದಾಯಗಳ ನೆಲೆಯಲ್ಲಿ ಪೂಜೆಯು ಜನರ ಚಲನ ಶೀಲತೆಯ ಒಂದು ಹಬ್ಬವಾಗಿದೆ. ಮತ್ತು ಜೀವಂತ ನೆನಪುತರುವ ಭಾವನೆಗಳಾಗಿವೆ. ಸಂಸ್ಕೃತಿ ಬೆಳೆದದ್ದೇ ಹಬ್ಬಗಳಿಂದ ಹಾಗೂ ಹಬ್ಬಗಳನ್ನು ಆಚರಿಸುವುದರಿಂದ. ಬುಡಕಟ್ಟು ಸಮುದಾಯಗಳ ಒಂದು ಸಂಸ್ಕೃತಿಯನ್ನು ಅನಾವಣಗೊಳಿಸುವುದೇ ಹಬ್ಬವಾಗಿದೆ. ಇಂತಹ ಹಬ್ಬಗಳ ಹುಟ್ಟಿಗೆ ಬುಡಕಟ್ಟು ಧರ್ಮದ ನಂಬಿಕೆಯೇ ಕಾರಣ. ಆಧುನಿಕ ಕಾಲದಲ್ಲಿ ಹಬ್ಬಗಳು ಕಡಿಮೆಯಾಗಿಲ್ಲ. ಎಂತಹ ಕಷ್ಟದ ಪರಿಸ್ಥಿತಿಯಿದ್ದರೂ ಹಬ್ಬಗಳನ್ನು ಮಾತ್ರ ಸಡಗರದಿಂದಲೇ ಆಚರಿಸುತ್ತಾರೆ. ಬೇರೆ ಯಾವ ಸಂದರ್ಭದಲ್ಲಿ ಹಣದೊರೆಯದಿದ್ದರೂ ಹಬ್ಬಗಳಲ್ಲಿ ಅದೇಗೋ ಹಣವು ಕೂಡಿಬಿಡುತ್ತದೆ. ಸಾಲವು ದೊರೆಯುತ್ತದೆ, ಹಬ್ಬ ನಡೆಯುತ್ತದೆ. ತಮ್ಮ ಬದುಕಿನ ಎಲ್ಲ ಕಷ್ಟ ಸುಖಗಳಿಗೂ ದೇವರೆ ಕಾರಣ ಎಂದು ಭಾವಿಸಿ ಈ ಸಮುದಾಯದವರು ತಾವು ನಂಬಿರುವ ದೇವತೆಗಳನ್ನು ಪೂಜಿಸುವುದರೊಂದಿಗೆ ಹಬ್ಬಹರಿದಿನಗಳನ್ನು ಮಾಡುತ್ತಲೇ ಬಂದಿದ್ದಾರೆ.

ಇಂತಹ ಆಚರಣೆಗಳನ್ನು ಬೆಳಗಾವಿ ಜಿಲ್ಲೆಯ ಅಥಣಿ ಪರಿಸರದಲ್ಲಿ ವೀರಶೈವರು, ಬ್ರಾಹ್ಮಣರು, ಕಮ್ಮಾರರು, ಕುಂಬಾರರು, ಬಡಿಗೇರು, ಅಕ್ಕಸಾಲಿಗರು, ಕುರುಬರು, ಮುಸ್ಲಿಂರು, ನಾಯಕರು, ಹರಿಜನ-ಗಿರಿಜನರು ಎಲ್ಲರೂ ತಮ್ಮ ತಮ್ಮ ಮತಕ್ಕೆ ಅನುಗುಣವಾಗಿ ಆಚರಿಸುತ್ತಾ ಬಂದಿದ್ದಾರೆ. ಕೆಲವೊಮ್ಮೆ ಎಲ್ಲಾ ಮತದವರು ಯಾವುದೇ ಒಂದು ಆಚರಣೆಯನ್ನು ಒಟ್ಟಾಗಿಯೂ ಆಚರಿಸಬಹುದು. ಉದಾ. ಅಥಣಿಯ ಸಿದ್ದೇಶ್ವರ ಸ್ವಾಮಿಗೆ ಸಂಬಂಧಿಸಿದ ಜಾತ್ರೆ, ಉತ್ಸವದಂತಹ ಕಾರ್ಯಕ್ರಮದಲ್ಲಿ ಅಥಣಿಯವರಷ್ಟೇ ಅಲ್ಲದೆ ಸುತ್ತ ಮುತ್ತಲಿನ ಊರುಗಳ ಎಲ್ಲಾ ಮತ ವರ್ಗದ ಜನರು ಪಾಲ್ಗೊಂಡು ಆಚರಣೆಗಳನ್ನು ಮಾಡುತ್ತಾರೆ. ಎಲ್ಲಾ ಮತದ ಮನೆಗಳಲ್ಲಿಯೂ ಹೋಳಿಗೆ ಊಟವನ್ನು ಈ ರಥದ ದಿನ ಮಾಡುತ್ತಾರೆ.

ವಾರ್ಷಿಕ ಹಾಗೂ ಜೀವನಾವರ್ತನಗಳು ಸಂಸ್ಕೃತಿಯ ಮೂಲವಾಗಿವೆ. ಶಿಷ್ಟವು ಇದರಿಂದ ರೂಪುಗೊಳ್ಳುತ್ತದೆ. ಅಂದರೆ ಸಂಸ್ಕೃತಿಯು ಇವುಗಳಿಂದ ರೂಪುಗೊಳ್ಳುತ್ತದೆ. ಈ ಎರಡು ಆವರ್ತನಗಳು ಸಂಸ್ಕೃತಿಯನ್ನು ಪ್ರಕಾಶಮಾನವಾಗಿಸಲು ದುಡಿಯುತ್ತವೆ. ಈ ಆವರ್ತನಗಳು ಎಲ್ಲಿ ಸಂಧಿಸುತ್ತವೆಯೋ ಅಲ್ಲಿ ಸಂಸ್ಕೃತಿಯ ಮೂಲದ್ರವ್ಯ ಉಂಟಾಗುತ್ತದೆ. ವಾರ್ಷಿಕಾವರ್ತನದ ಕಾಲದಲ್ಲಿ ಪರಿವರ್ತನೆಯು ಬಹಳ ಮಟ್ಟಿಗೆ ಮಳೆ-ಬೆಳೆಗಳನ್ನು ಆಧರಿಸಿಕೊಂಡಿದೆ. ಇದು ಕಾಲದಿಂದ ಕಾಲಕ್ಕೆ ಬದಲಾಗುವ ಋತುಮಾನ ಗಳನ್ನು ಅವಲಂಬಿಸಿದ್ದು, ಉತ್ಪಾದನಾ ವಿಧಾನಗಳೊಂದಿಗೆ ನೇರ ಸಂಬಂಧ ಹೊಂದಿದೆ. ಆಹಾರ ಧಾನ್ಯಗಳನ್ನು ಬೆಳೆಸುವ, ಆರ್ಥಿಕ ಮಟ್ಟವನ್ನು ಎತ್ತರಿಸುವ ವ್ಯವಹಾರಿಕವಾದ ರೀತಿನೀತಿಗಳನ್ನು ಅದು ಒಳಗೊಳ್ಳುತ್ತದೆ. ಹೀಗೆ ಋತುಮಾನಗಳಿಗೆ ಹೊಂದಿಕೊಂಡು ವರ್ಷವೊಂದರಲ್ಲಿ ಆವರ್ತನಗೊಳ್ಳುವ ಕೃಷಿ ಆಧಾರಿತ ಹಾಗೂ ದೈವಗಳ ಆಧಾರಿತ ಆಚರಣೆಗಳನ್ನು ವಾರ್ಷಿಕಾವರ್ತನದ ಆಚರಣೆಗಳು ಎಂದು ಕರೆಯಬಹದು.

ವಾರ್ಷಿಕಾವರ್ತನಗಳು ಆಯಾ ಭೂ ಪ್ರದೇಶದ ವಾತಾವರಣಕ್ಕೆ ತಕ್ಕಂತೆ ಬೆಳೆಯುವ ದವಸ-ಧಾನ್ಯ ಗಳಿಗನುಸಾರವಾಗಿ ವಿವಿಧ ರೂಪವನ್ನು ಪಡೆಯುತ್ತವೆ. ಬಯಲು ಸೀಮೆಯಲ್ಲಿ ಜೋಳ, ರಾಗಿ, ಮುಂತಾದ ಬೆಳೆಯನ್ನು ಬೆಳೆಯುತ್ತಾರೆ. ಕಾರಣ ಅವುಗಳನ್ನು ಕೊಯ್ಲು ಮಾಡಿ ರಾಸಿಮಾಡುವ ಸಂದರ್ಭದಲ್ಲಿ ಅಲ್ಲಿ ಆಚರಿಸುವ ವಿಧಾನವೇ ಬೇರೆ. ಇನ್ನೊಂದೆಡೆ ಭತ್ತ, ಕಬ್ಬು, ದ್ರಾಕ್ಷಿ ಇನ್ನಿತರ ಬೆಳೆಗಳನ್ನು ಬೆಳೆಯುತ್ತಾರೆ. ಆ ಫಸಲು ಬಂದಾಗ ಆಚರಿಸುವ ವಿಧಾನವೇ ಬೇರೆ. ಒಟ್ಟಿನಲ್ಲಿ ರೈತಾಪಿ ಜನರು ಹೊಲಗದ್ದೆಗಳ ಪೈರು ತೆನೆಯಾಗಿ ನಿಂತಾಗ ಅಥಣಿ ಪರಿಸರದಲ್ಲಿನ ಜನರು ಅದರಲ್ಲಿಯೂ ವಾಲ್ಮೀಕಿ ಸಮುದಾಯದವರು ಬೆಳೆದು ನಿಂತ ಪೈರನ್ನು ಚರಗ ಚೆಲ್ಲುವದರ ಮುಖಾಂತರ ಪೂಜಿಸಿ ಕಟಾವು ಮಾಡುತ್ತಾರೆ. ಈ ಪರಿಸರದಲ್ಲಿ ದೀಪಾವಳಿಯ ಹಬ್ಬವನ್ನು ವಿಶೇಷವಾಗಿ ಕೃಷಿಕಾರ್ಮಿಕರು ಜಾನುವಾರುಗಳನ್ನು ಪೂಜಿಸಿ ಹಟ್ಟಿಹಾಕುವುದರ ಮುಖಾಂತರ ಆಚರಿಸುತ್ತಾರೆ. ಇದಕ್ಕೆ ಈ ಭಾಗದಲ್ಲಿ ಹಟ್ಟಿ ಹಾಕುವ ಹಬ್ಬ ಎಂತಲೇ ಕರೆಯುತ್ತಾರೆ.

ಈ ಭಾಗದ ವಾಲ್ಮೀಕಿ ಸಮುದಾಯದ ಜನರು ಬೆಳೆಗಳೆಲ್ಲ ಕೈಗೆ ಬಂದ ಸಮಯದಲ್ಲಿ ಇದನ್ನು ಒಂದು ಸಮೃದ್ಧಿಯಕಾಲವೆಂದು ಕರೆದಿದ್ದಾರೆ. ಈ ಸಮೃದ್ಧಿಯು ಜೀವನಾವರ್ತನವನ್ನು ಪ್ರಭಾವಿಸಿ

ಬಗೆಬಗೆಯ ಕುಣಿತ, ಹಾಡು, ಆಟ-ಪಾಠಗಳನ್ನು ಉಂಟುಮಾಡುತ್ತದೆ. ಚೆಂಡು, ಕಬ್ಬೋಲು, ಸಂಪ್ರದಾಯನ ವಾಲ್ಗ, ಸಿದ್ಧವೇಷಗಳು ಇಲ್ಲಿ ವಿಶೇಷವಾಗಿ ನಡೆಯುತ್ತವೆ. ಮದುವೆ, ಗೃಹಪ್ರವೇಶ ಮೊದಲಾದ ಆಚರಣೆಗಳಿಗ ಇಂತಹ ಸಮಯಗಳು ಪ್ರಶಕ್ತ ಎಂತಲೂ ತಿಳಿದು ಈ ಶುಭ ಕಾರ್ಯಗಳನ್ನು ನಿರ್ವಹಿಸುತ್ತಾರೆ.

ಶಿಶು ಜನನ, ಮೈನೆರೆಯುವಿಕೆ, ಮದುವೆ ಮುಂತಾದವುಗಳಿಗೆ ಸಮೃದ್ಧಿಯ ಕಾಲವು ಪ್ರಶಕ್ತ ಕಾಲವೆಂಬ ನಂಬಿಕೆಗಳೂ ಇವೆ. ಇದಕ್ಕೆ ವೈರುದ್ಧ್ಯವಾಗಿ ಮಳೆಗಾಲದ ಆಷಾಢದ ತಿಂಗಳನ್ನು ಗಮನಿಸ ಬಹುದು. ಬೇಸರ ತರಿಸುವ ಧಾರಾಕಾರ ಮಳೆ, ತಿನ್ನಲು ಉಣ್ಣಲು ಏನೂ ಇಲ್ಲದ ಬರಡು ಕಾಲ, ಒಳಗೆ ಶೀತ, ನೆಗಡಿ ಜ್ವರದಂತಹ ಅನಿಷ್ಟ ಕಾಯಿಲೆಗಳು, ಸಮೃದ್ಧವಾಗಿರುವ ಈ ಸಮಯದಲ್ಲಿ ಉಲ್ಲಾಸ, ಉತ್ಸಾಹ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಸಂತೋಷದ, ಸಂಭ್ರಮದ ಕಾರ್ಯಕ್ರಮಗಳು ಇರುವುದಾದರೂ ಹೇಗೆ? ಆದ್ದರಿಂದ ಯಾವ ಶುಭ ಶೋಭನಾದಿಗಳು ನಡೆಯುವುದಿಲ್ಲ.

ಹೀಗೆ ನಮ್ಮ ಸಂಸ್ಕೃತಿಯು ರೂಪುಗೊಳ್ಳುವುದರಲ್ಲಿ ಹವಾಮಾನ, ಬೆಳೆವ ಬೆಳೆ, ಕುಟುಂಬ ರಚನೆ, ಜಾತಿ, ಎಲ್ಲವೂ ಪಾಲ್ಗೊಳ್ಳುತ್ತವೆ. ಆ ಮೂಲಕ ವಾರ್ಷಿಕಾವರ್ತನಗಳನ್ನು ರೂಪಿಸುತ್ತವೆ. ಜಗತ್ತಿನ ಬೇರೆ ಬೇರೆ ಕಡೆ ಇಂಥ ಆಚರಣೆಗಳು ರೂಪುಗೊಂಡಿವೆ. ಇದಕ್ಕೆ ಅಥಣಿ ಪರಿಸರವು ಹೊರತಲ್ಲ.

ಅಥಣಿ ಪರಿಸರದೊಳಗೆ ವಾಲ್ಮೀಕಿ ಸಮುದಾಯವು ಬಹಳ ಕಡಿಮೆ ಜನಸಂಖ್ಯೆಯನ್ನು ಹೊಂದಿದ್ದರೂ, ಬೇಡರಹಟ್ಟಿ ಎನ್ನುವ ಗ್ರಾಮವು ನೂರಕ್ಕೆ ತೊಂಬತ್ತರಷ್ಟು ಜನಸಂಖ್ಯೆಯನ್ನು ಹೊಂದಿದ್ದು ಈ ಗ್ರಾಮಕ್ಕೆ ಬೇಡರ ಹಟ್ಟಿ ಎಂದೇ ಹೆಸರು. ಇನ್ನು ರಡ್ಡೇರಹಟ್ಟಿ ಎನ್ನುವ ಗ್ರಾಮದಲ್ಲಿ ನೂರಕ್ಕೆ ಐವತ್ತರಷ್ಟು ಜನಸಂಖ್ಯೆಯನ್ನು ವಾಲ್ಮೀಕಿ ಸಮುದಾಯವು ಹೊಂದಿದೆ. ಅಲ್ಲದೆ, ಅವರಖೋಡ ಆಂಜನೇಯ ಇಲ್ಲಿನ ಆರಾಧ್ಯದೈವ. ಹಾಗೆಯೇ ಕೋಹಳ್ಳಿ, ಶೇಡಬಾಳ, ನಂದೀಶ್ವರ, ಸಪ್ತಸಾಗರ, ರಾಮತೀರ್ಥ, ಕೊಟ್ಟಲಗಿ, ಕೊಕಟನೂರು, ಕಟಗೇರಿ, ಸಂಕ್ರಟ್ಟಿ, ಸಂಕೋನಹಟ್ಟಿ ಈ ರೀತಿ ಹಟ್ಟಿ ಎಂದು ಕರೆಯಿಸಿಕೊಳ್ಳುವ ಹಳ್ಳಿಗಳಲ್ಲಿ ಬಹುತೇಕ ವಾಲ್ಮೀಕಿ ಸಮದಾಯದವರು ಕಾಣಬರುತ್ತಿದ್ದು, ಇವರುಗಳ ಆರಾಧ್ಯ ದೈವ ಆಂಜನೇಯ, ರೇಣುಕಾದೇವಿ, ಯಲ್ಲಮ್ಮ ಮತ್ತು ದುರುಗಮ್ಮ ಇತ್ಯಾದಿ.

ಅಲ್ಲದೆ ಈ ಪರಿಸರದ ವಾಲ್ಮೀಕಿ ಸಮುದಾಯದವರು ಅಧಿದೇವತೆಯಾದ ಸಿದ್ದೇಶ್ವರ ಸ್ವಾಮಿಯ ರಥೋತ್ಸವದಂತಹ ಕಾರ್ಯಕ್ರಮಗಳಲ್ಲಿ ಒಟ್ಟಾಗಿ ಭಾಗವಹಿಸುತ್ತಾರೆ. ಹಾಗೂ ಶ್ರೀ ಮುರುಘೇಂದ್ರ ಶಿವಯೋಗಿಗಳ ದೇವಸ್ಥಾನಕ್ಕೆ ನಡೆದುಕೊಳ್ಳುತ್ತಾರೆ. ಕಾರಣ ವಾರದ ಎಲ್ಲಾ ದಿನಗಳು ಇವರಿಗೆ ಪ್ರಮುಖ ವಾರಗಳಾಗಿ ಕಂಡುಬರುತ್ತವೆ. ಸೋಮವಾರ ಶಿವಯೋಗಿಗಳಿಗೆ, ಶನಿವಾರ ಆಂಜನೇಯನಿಗೆ, ಗುರುವಾರ ರಾಘವೇಂದ್ರ ಸ್ವಾಮಿಗೆ ಮಂಗಳವಾರ ಶುಕ್ರವಾರ ಮಹಾಲಕ್ಷ್ಮಿ, ದುರುಗಮ್ಮ, ಯಲ್ಲವ್ವರಂತಹ ದೇವತೆಗಳಿಗೆ ನಡೆದುಕೊಳ್ಳುತ್ತಾರೆ. ಅಥಣಿ ಪರಿಸರವು ಧಾರ್ಮಿಕ ಪರಂಪರೆಯುಳ್ಳ ಪ್ರದೇಶವಾಗಿರುವುದರಿಂದ ಎಲ್ಲಾ ಮತೀಯರು ಮೇಲು ಕೀಳು ಎನ್ನದೇ ದೇವರಲ್ಲಿ ಪೂಜೆ ಸಲ್ಲಿಸಿ ಆರಾಧಿಸುತ್ತಾರೆ.

ಆದಾಗ್ಯೂ ವಾಲ್ಮೀಕಿ ಸಮುದಾಯಕ್ಕೆ ಸಂಬಂಧಿಸಿದಂತೆ ಈ ಪರಿಸರದ ಪ್ರತಿಮನೆಯಲ್ಲಿಯೂ ವಾಲ್ಮೀಕಿ ಸಮುದಾಯದ ಕೆಲ ಹಿರಿಯರು ಬೆಳಿಗ್ಗೆ ಸ್ನಾನಾದಿಗಳನ್ನು ಮಾಡಿಕೊಂಡು ಆಯಾ ಗ್ರಾಮಗಳ ಆರಾಧ್ಯ ದೈವಕ್ಕೆ ಅಥವಾ ಆಂಜನೇಯನಿಗೆ ಇಲ್ಲವೇ ತಮ್ಮ ಮನೆಗಳಿಗೆ ಸಮೀಪವಾಗುವ ದೇವತೆಗಳಿಗೆ ಅರಿಷಿಣ ಕುಂಕುಮ, ಅಕ್ಕಿಕಾಳು, ಕರ್ಪೂರ ಉದುಕಡ್ಡಿ ತೆಗೆದುಕೊಂಡು ಹೋಗಿ ಪೂಜೆ ಮಾಡಿಕೊಂಡು ಬರುವುದು ಕಂಡುಬರುತ್ತದೆ. ಎದುರಿಗೆ ಅಥವಾ ದೇವಸ್ಥಾನದಲ್ಲಿ ಯಾರಾದರೂ ಮುತ್ತೈದೆಯರು ಬಂದರೆ ಅವರಿಗೂ ಕುಂಕುಮ ಕೊಡುವ ಪದ್ಧತಿಯು ರೂಢಿಯಾಗಿದೆ. ನಂತರವೇ ಮನೆಯ ಎಲ್ಲಾ ಕೆಲಸಕಾರ್ಯಗಳನ್ನು ಮಾಡುತ್ತಾರೆ.

ಈ ಜನರು ಶನಿವಾರ ಮತ್ತು ಮಂಗಳವಾರಗಳನ್ನು ವಾರದ ಶ್ರೇಷ್ಠ ದಿನವೆಂದು ಪರಿಗಣಿಸಿಕೊಂಡು ಬಂದಿದ್ದು, ಆಯಾ ದಿನವಂತೂ ಬಹಳಷ್ಟು ಮಡಿ-ಮೈಲಿಗೆಯಿಂದ ದೇವಾಲಯಕ್ಕೆ ಹೋಗಿ ಪೂಜಿಸಿಕೊಂಡು ಬರುತ್ತಾರೆ. ದೇವಸ್ಥಾನವನ್ನು ಸುತ್ತುವುದು, ದೀಪ-ಧೂಪಗಳನ್ನು ಅರ್ಪಿಸುವುದು ಇಲ್ಲಿನ ಜನರಲ್ಲಿ ಎದ್ದುಕಾಣುತ್ತದೆ. ಆಂಜನೇಯ ಸ್ವಾಮಿಗೆ ಮತ್ತು ಆಯಾ ಊರುಗಳಲ್ಲಿರುವ ದೇವತೆಗಳಿಗೆ ವಾರಕ್ಕೊಮ್ಮೆ ತೆಂಗಿನಕಾಯಿ ಅರ್ಪಿಸುವುದು, ಇನ್ನಿತರ ಸೇವೆಗಳನ್ನು ಮಾಡುತ್ತಾ ಬಂದಿದ್ದಾರೆ.

ಪ್ರತಿ ಅಮಾವಾಸ್ಯೆ, ಹುಣ್ಣಿಮೆಗೊಮ್ಮೆ ಈ ಪರಿಸರದ ವಾಲ್ಮೀಕಿ ಸಮುದಾಯದವರು ನಿತ್ಯ-ನಿಯಮದಿಂದ ಮನೆಯನ್ನು ಸಾರಿಸಿ, ಹೋಳಿಗೆ ಅಡುಗೆಯನ್ನು ತಮ್ಮ ತಮ್ಮ ಆರಾಧ್ಯದೈವಕ್ಕೆ ನೈವೇದ್ಯವನ್ನು ಅರ್ಪಿಸಿ ಪೂಜೆ ಮಾಡುವುದು, ಮನೆಮಂದಿಯೆಲ್ಲ ಶುಭ್ರವಾದ ಉಡುಗೆಗಳನ್ನು ಧರಿಸಿ ಹಬ್ಬದ ವಾತಾವರಣವೆಂಬಂತೆ ಕಾಣುವ ತೆರದಿ ಮನೆಯಲ್ಲಿ ಕಂಡುಬರುತ್ತಾರೆ.

ಇನ್ನೂ ಹಬ್ಬಹರಿದಿನಗಳಲ್ಲಿ, ಮಾನವನ ಜೀವನವನ್ನು ರೂಪಿಸುವಲ್ಲಿ ಸಂಸ್ಕೃತಿಯನ್ನು ಪೋಷಿಸುವಲ್ಲಿ ನಾಗರಿಕತೆಯನ್ನು ಬೆಳೆಸುವಲ್ಲಿ ಸಂಪ್ರದಾಯಾಚರಣೆಗಳಿಗೆ ವಿಶೇಷ ಮಹತ್ವವಿರುತ್ತದೆ. ಸಮಾಜವನ್ನು ಒಂದುಗೂಡಿಸುವ ಮತ್ತು ಮುಂದಕ್ಕೊಯ್ಯುವ ಶಕ್ತಿಪುಂಜಗಳಾಗಿವೆ. ಅವನ ನಡವಳಿಕೆಗಳು ಹಾಗೂ ವ್ಯವಹಾರಗಳು ಸಂಪ್ರದಾಯ ಬದ್ಧವಾಗಿಯೇ ಜರುಗುತ್ತಿವೆ. ಈ ಸಂಪ್ರದಾಯ ಮತ್ತು ನಂಬಿಕೆಗಳ ಕ್ರಿಯಾರೂಪುಗಳೇ ಹಬ್ಬಗಳು. ಅವುಗಳ ಬೇರು ಮಾಟದಲ್ಲಿ ಅಡಗಿದೆ. ನಿಸರ್ಗಾರಾಧನೆಯಲ್ಲಿ ಪಸರಿಸಿದೆ.

ಪ್ರತಿಯೊಂದು ಯುಗದ ಜನರು ಆಯಾ ಕಾಲದ ಅಭಿರುಚಿ ಮನೋಧರ್ಮಗಳಿಗನುಸಾರವಾಗಿ ತಮ್ಮ ತಮ್ಮ ಕಲ್ಪನೆಗಳಿಗನುಸಾರವಾಗಿ ಹಬ್ಬಗಳ ರೂಪ ಸ್ವರೂಪಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಂಡು ಬಂದಿದ್ದಾರೆ. ಹೊಸ ಹೊಸ ವಿಧಿ-ನಿಷೇಧಗಳನ್ನು, ಉಪಾಸನಾ ವಿಧಾನಗಳನ್ನು ಸೇರಿಸುತ್ತಾ ಬಂದಿದ್ದಾರೆ.

ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನ್ನು ಒಲಿಸಿಕೊಳ್ಳುವ ಸತತ ಪ್ರಯತ್ನಗಳ ಫಲವಾಗಿ ಹಬ್ಬಗಳು ಹುಟ್ಟು ಪಡೆದವು. ಹೀಗಾಗಿ ಹಲವು ಸಂಪ್ರದಾಯಗಳ ಒಟ್ಟು ಮೊತ್ತವೇ ಈ ಹಬ್ಬಗಳು. ಇಂತಹ ಹಬ್ಬಗಳು ಮತೀಯ, ಸಾಮಾಜಿಕ, ರಾಷ್ಟ್ರೀಯ ಮತ್ತು ವೈಯಕ್ತಿಕವಾಗಿಯೂ ಜರುಗುತ್ತವೆ.

ಆಯಾ ಮತದವರು ತಂತಮ್ಮ ಇಷ್ಟದೇವತೆಗಳ ಉತ್ಸವವನ್ನು ವಿಧ್ಯುಕ್ತ ರೀತಿಯಲ್ಲಿ ವರ್ಷಕ್ಕೊಮ್ಮೆ ಆಚರಿಸುವುದು ವಾಡಿಕೆ. ಸಾಮಾನ್ಯವಾಗಿ ಪ್ರತಿವರ್ಷ ಸಾಮಾಜಿಕ ಕ್ಷೇಮಕ್ಕಾಗಿ ವಿಶೇಷ ಸಂದರ್ಭದಲ್ಲಿ ಆಚರಿಸುವ ಜಾನಪದ ಸಂಗತಿಗಳ ಮತ್ತು ಸಂಪ್ರದಾಯಗಳ ಸಮ್ಮಿಶ್ರ ಜಟಿಲ ಘಟಕವೇ ಹಬ್ಬವಾಗುತ್ತದೆ. ಈ ನಿಟ್ಟಿನಲ್ಲಿ ಸಮುದಾಯದವರು ಮತ್ತು ನೆಂಟರೆಲ್ಲರೂ ಸೇರಿ ಒಂದು ಕಡೆ ಕೂಡುವಾಗ ಮೈತ್ರಿಯಾಗುತ್ತದೆ, ಭಾವೈಕ್ಯತೆ ಕುಸುಮಿಸುತ್ತದೆ. ವಿಚಾರ ವಿನಿಮಯ ಸುಲಭವಾಗುತ್ತದೆ. "ಬಂಧುಗಳ ದರ್ಶನ ಫಲಾಫಲ ಸಂಸಾರ ತರುವಿಂಗೆ" ಎನ್ನುವ ಸುಭಾಷಿತದಂತೆ ಬಂಧುಗಳ ನೆರವಿಯೇ ಹಬ್ಬವಾಗುತ್ತದೆ.

ಈ ಹಿನ್ನೆಲೆಯಲ್ಲಿ ಅಥಣಿ ಪರಿಸರದ ವಾಲ್ಮೀಕಿ ಸಮುದಾಯದವರು ಆಚರಿಸುವಂತಹ ಹಬ್ಬಗಳು, ಈ ಹಬ್ಬದಲ್ಲಿನ ಆಚರಣೆಗಳು ಆಯಾ ಗ್ರಾಮಗಳ ಗ್ರಾಮ ದೇವತೆಗೆ ಅನುಗುಣವಾಗಿ ನಡೆಸಿಕೊಂಡು ಬಂದಿದ್ದಾರೆ. ತಾಲೂಕಿನ ರಡ್ಡೇರಹಟ್ಟಿ, ಬೇಡರ ಹಟ್ಟಿ, ಕೋಹಳ್ಳಿ, ಸಂಕೋನಹಟ್ಟಿ, ಮುಂತಾದ ಸ್ಥಳಗಳಲ್ಲಿ ಈ ಜನರು ದವನದ ಹುಣ್ಣಿಮೆಯ ದಿನ ಹನುಮನ ಜಯಂತಿಯನ್ನು ಬಹಳಷ್ಟು ಸಡಗರ ಸಂಭ್ರಮದಿಂದ ಆಚರಿಸುತ್ತಾರೆ. ಅನ್ನದಾಸೋಹ, ಪೂಜೆಗಳು ದಿನಾಲು ಬೆಳಿಗ್ಗೆ ಆ ದಿನಗಳಲ್ಲಿ ನಡೆಯುತ್ತವೆ. ಆಂಜನೇಯ ಸ್ವಾಮಿಗೆ ಆಭರಣಗಳನ್ನು ತೊಡಿಸಿ ತೊಟ್ಟಿಲೊಳಗೆ ಹಾಕಿ ನಾಮಕರಣ ಮಾಡುತ್ತಾರೆ. ಬೆಳಿಗ್ಗೆಯಿಂದ ಸಾಯಂಕಾಲ ನಾಲ್ಕು ಘಂಟೆಯ ತನಕವು ಈ ಕಾರ್ಯಕ್ರಮ ಜರುಗುತ್ತದೆ. ನಂತರ ದೀವಟಿಗೆ, ನಿಶಾನೆ, ನಗಾರಿಗಳನ್ನು ತೆಗೆದುಕೊಂಡು ವಿಠೋಬನ ಪಾಲಿಕೆ, ದುರ್ಗಾದೇವಿ ಪಾಲಕಿಯನ್ನು ಊರಿನೆಲ್ಲೆಡೆ ಮೆರವಣಿಗೆ ಮಾಡುತ್ತಾರೆ. ಕಂಬಿ ಉತ್ಸವ ಎನ್ನುವ ಒಂದು ಉತ್ಸವವನ್ನು ಆಚರಿಸುತ್ತಾರೆ.

ಯುಗಾದಿ ಹಬ್ಬ

ಯುಗಾದಿ ಹಬ್ಬವು ಭಾರತೀಯರೆಲ್ಲರಿಗೂ ಮೊದಲ ಹಬ್ಬವಾಗಿದೆ. ವಾಲ್ಮೀಕಿ ಸಮುದಾಯವು ಯುಗಾದಿ ಹಬ್ಬದ ಸಂದರ್ಭದಲ್ಲಿ ತಮ್ಮ ತಮ್ಮ ಮನೆಗಳನ್ನೆಲ್ಲ ಸ್ವಚ್ಛಗೊಳಿಸುತ್ತಾರೆ. ಯುಗಾದಿ ಪಾಡ್ಯದ ದಿನ ಮುಂಜಾನೆ ಎದ್ದು ಮನೆಗಳಿಗೆ ಸುಣ್ಣ, ಬಣ್ಣದಿಂದ ಅಲಂಕರಿಸಿ, ಸೆಗಣಿಯಿಂದ ಅಂಗಳವನ್ನು ಸಾರಿಸಿ, ರಂಗೋಲಿ ಹಾಕುತ್ತಾರೆ. ಎಲ್ಲರೂ ಸ್ನಾನ ಮುಗಿಸಿಕೊಂಡು ಶುಭ್ರವಾದ ಬಟ್ಟೆಗಳನ್ನು ಧರಿಸುತ್ತಾರೆ. ಸ್ಥಿತಿವಂತರು ಹೊಸ-ಹೊಸ ಬಟ್ಟೆಗಳನ್ನು ಧರಿಸುತ್ತಾರೆ. ಯುಗಾದಿಯನ್ನು ಅತ್ಯಂತ ಉತ್ಸಾಹ ಸಂಭ್ರಮಗಳಿಂದ ಸ್ವಾಗತಿಸುತ್ತಾ ತಮ್ಮ ತಮ್ಮ ಮನೆಗಳಲ್ಲಿ ಸಂತೋಷ ಸಡಗರದಿಂದ ಆಚರಣೆಯನ್ನು ಮಾಡುತ್ತಾರೆ. ಇವರ ಪ್ರಕಾರ ಇದು ವರ್ಷದ ಮೊದಲದಿನವೂ ಶುಭದಿನವೂ ಹೌದು. ಕಾರಣ ಬೇವು-ಬೆಲ್ಲದ ಸಿಹಿಯನ್ನು ವಿತರಿಸಿಕೊಂಡು ಮನೆಯಲ್ಲಿ ಮನೆದೇವರಿಗೆ ಪೂಜೆ ಸಲ್ಲಿಸುತ್ತಾರೆ. ವಿಶೇಷವಾಗಿ ಆಂಜನೇಯ ಸ್ವಾಮಿಗೆ ಪೂಜೆ ಸಲ್ಲಿಸುತ್ತಾರೆ. ಮಾವು-ಬೇವು ಸೇರಿಸಿ ಮನೆಯ ಬಾಗಿಲಿಗೆ ತೋರಣ ಕಟ್ಟುತ್ತಾರೆ. ಮೈಗೆ ಎಣ್ಣೆಹಚ್ಚಿಕೊಂಡು ಎಣ್ಣೆಸ್ನಾನ ಹಾಗೂ ಬೇವಿನ ತೊಪ್ಪಲನ್ನು ಬಿಸಿ ನೀರಿನಲ್ಲಿ ಬೆರೆಸಿ ಸ್ನಾನ ಮಾಡುತ್ತಾರೆ.

ಚೈತ್ರ ಮಾಸದಲ್ಲಿ ಬರುವ ಯುಗಾದಿ ಹಬ್ಬದ ಎರಡನೆಯ ದಿನ, ಅಂದರೆ ಚೈತ್ರಶುದ್ಧ ಬಿದಿಗಿಯ ದಿನದಂದು ಬ್ಯಾಡರಹಟ್ಟಿ, ರಡ್ಡೇರಹಟ್ಟಿಯನ್ನು ಒಳಗೊಂಡಂತೆ, ಆಂಜನೇಯನ ಗುಡಿಯ ಮುಂದಿನ ಹೊಂಡದಲ್ಲಿ ನೀರು ತುಂಬಿಸಿ ಓಕುಳಿಯನ್ನು ಆಡುತ್ತಾರೆ. ವಿಶೇಷವೆಂದರೆ ಹೊಂಡದಲ್ಲಿನ ನೀರನ್ನು

ಕೊಡದಲ್ಲಿ ಅಥವಾ ದಪ್ಪವಾದ ಬಟ್ಟೆಯ ಚೀಲದಲ್ಲಿ ತುಂಬಿಕೊಂಡು ಹೆಂಗಸರು ಮತ್ತು ಗಂಡಸರು ಪರಸ್ಪರ ಎರಚಾಡುತ್ತಾರೆ. ಈ ರೀತಿ ಓಕುಳಿಯಾಡುವುದರಿಂದ ಊರಿಗೆ ಅಥವಾ ನಾಡಿಗೆ ಸರಿಯಾದ ರೀತಿಯಲ್ಲಿ ಮಳೆಯು ಬರುತ್ತದೆ ಎನ್ನುವ ನಂಬಿಕೆ. ಹಾಗೆಯೇ ಬೆಳೆಯು ಸಮೃದ್ಧಿಯಾಗಿ ಬರುತ್ತದೆ ಎನ್ನುವ ನಂಬಿಕೆಯು ಈ ಸಮುದಾಯದವರಲ್ಲಿದೆ. ಚೈತ್ರ ಶುದ್ಧ ಪಂಚಮಿಯ ದಿನದಿಂದ ಬೇಟೆಯು ಸಿಗುವ ತನಕ ಬೇಟೆಗೆಂದು ಆಯಾ ಹಳ್ಳಿಗಳಲ್ಲಿ ಅಥಣಿ ಪರಿಸರ ವಾಲ್ಮೀಕಿ ಸಮುದಾಯದ ಪುರುಷರು ಅಡವಿಗೆ ಹೋಗಿ ಬೇಟೆಯಾಡಿಕೊಂಡು ಬರುತ್ತಾರೆ. ಯುಗಾದಿಯ ಸಂದರ್ಭದಲ್ಲಿ ನಾಟಕ ಪ್ರದರ್ಶನವು ಕಡ್ಡಾಯವಾಗಿರುತ್ತದೆ. ಪಾರಿಜಾತ, ಸಾವರಿಗೆ, ಸಂಗ್ಯಾಬಾಳ್ಯ ಸಾಮಾಜಿಕ ನಾಟಕಗಳು ಪ್ರದರ್ಶನಗೊಳ್ಳುತ್ತವೆ.

ಶಿವರಾತ್ರಿ ಹಬ್ಬ

ಮಹಾಶಿವರಾತ್ರಿ ಹಬ್ಬದ ದಿವಸ ವಾಲ್ಮೀಕಿ ಸಮುದಾಯವು ತಮಗೆ ಶುಭ ದಿನವೆಂದು ನಂಬಿಕೊಂಡು ಬಂದಿದ್ದಾರೆ. ಬೇಡರ ಕಣ್ಣಪ್ಪನ ಭಕ್ತಿಯನ್ನು ಮೆಚ್ಚಿ, ಈತನ ಕುಟುಂಬಕ್ಕೆ ಒಳಿತಾಗಲೆಂದು ಆಶೀರ್ವದಿಸಿದ ಹಾಗೂ ಕಣ್ಣಪ್ಪನ ಭಕ್ತಿಯನ್ನು ಮೆಚ್ಚಿ ವರವನ್ನು ಕೊಟ್ಟ ಶಿವನನ್ನು ಕುರಿತ ಆರಾಧನೆ ಇಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಈ ಹಿನ್ನೆಲೆಯಲ್ಲಿ ವಾಲ್ಮೀಕಿ ಸಮುದಾಯಕ್ಕೆ ಮಹಾಶಿವರಾತ್ರಿ ಶುಭದಿನವಾಗಿದೆ. ಅಲ್ಲದೇ ಅಥಣಿಯ ಅಮೃತಲಿಂಗೇಶ್ವರ ದೇವಾಲಯದಲ್ಲಿ ಊರಿನ ಭಕ್ತರೆಲ್ಲರೂ, ಅಥವಾ ಈ ಪರಿಸರದ ಯಾವುದೇ ಊರಲ್ಲಿಯಾಗಲಿ ನೆಲೆಸಿರುವ ವಾಲ್ಮೀಕಿ ಸಮುದಾಯದವರು ಈಶ್ವರನ, ಅಥವಾ ವಿಶ್ವನಾಥನ ಗುಡಿಗೆ ಹೋಗಿ ಶಿವನಿಗೆ ಪಂಚಾಮೃತ ಅಭಿಷೇಕ ಮಾಡಿ ಬನ್ನಿಪತ್ರೆ, ಬಿಲ್ವಪತ್ರೆಯನ್ನು ಏರಿಸುವುದರ ಮುಖಾಂತರ ಪೂಜಿಸುತ್ತಾರೆ. ತಾವು ಮನೆಯಲ್ಲಿ ಮಾಡಿದಂತಹ ಹೋಳಿಗೆಯನ್ನು ನೈವೇದ್ಯ ಮಾಡುತ್ತಾರೆ. ಶಿವಲಿಂಗದ ಮುಂದೆ ಶಿವನನ್ನು ಕುರಿತು ನೀನು ಇದನೆಲ್ಲವನ್ನು ಸ್ವೀಕರಿಸಬೇಕು ಎಂದು ಬೇಡಿಕೊಳ್ಳುತ್ತಾರೆ. ಅದಕ್ಕೆ ಕರುಣಾಮಯಿ, ಭಕ್ತರ ಬಂಧುವಾದ ಶಿವನು ಆಶೀರ್ವದಿಸುತ್ತಾನೆ ಎನ್ನುವ ನಂಬಿಕೆ. ಶಿವರಾತ್ರಿ ಸಮಯದಲ್ಲಿ ಶಿವನಾಮ ಸ್ಮರಣೆ ಮಾಡುತ್ತಾ ಭಜನೆ ಮಾಡುತ್ತಾ ಅಂದು ಟಿ.ವಿ.ಮಾಧ್ಯಮಗಳಲ್ಲಿ ಬಿತ್ತರಿಸುತ್ತಿರುವ ಬೇಡರ ಕಣ್ಣಪ್ಪ ಅಥವಾ ಶಿವಲಿಂಗದ ಮಹಾತ್ಮೆ ಅಥವಾ ಶಿವನ ಮಹಿಮೆಯ ಕುರಿತ ಸಿನಿಮಾಗಳನ್ನು ನೋಡುತ್ತಾ ರಾತ್ರಿಯನ್ನು ಕಳೆಯುವುದು ಈ ಪರಿಸರದ ಎಲ್ಲೆಲ್ಲೂ ಕಂಡುಬರುತ್ತದೆ. ಶಿವರಾತ್ರಿಯ ದಿನದಂದು ಈ ಪರಿಸರದ ಯಾವುದೇ ಪುಣ್ಯ ಕ್ಷೇತ್ರದರ್ಶನವನ್ನು ಮಾಡುತ್ತಾರೆ. ಅಂದು ಎಲ್ಲಾ ದೇವಸ್ಥಾನಗಳಲ್ಲಿಯೂ ವಿಶೇಷ ಪೂಜೆ ನಡೆದಿರುತ್ತದೆ. ವಾಲ್ಮೀಕಿ ಸಮುದಾಯದವರಿಗೆ ಮಾತ್ರ ಪುಣ್ಯದ ದಿನವಾಗಿ ಇಲ್ಲಿ ಪರಿಣಮಿಸಿದೆ. ಕಾಶಿಗೆ ಹೋಗಿ ಬಂದಷ್ಟು ನೆಮ್ಮದಿ ಅವರಿಗೆ, ಪುಣ್ಯ ನದಿಯಲ್ಲಿ ಮಿಂದು ಬಂದಷ್ಟು ಭಾಗ್ಯ ಅವರಿಗೆ ದೊರೆತಂತಾಗುತ್ತದೆಯಂತೆ, ಜಾಗರಣೆ ಮಾಡಿದರೆ ವಿಶ್ವನಾಥನ ದರ್ಶನದಿಂದ ಲಭಿಸುವ ಪುಣ್ಯ ಫಲವು ಇವರಿಗೆ ದೊರೆತು ಮನಸ್ಸಿಗೆ ನೆಮ್ಮದಿ ಸಿಗುತ್ತದೆ ಎಂದು ಹೇಳುತ್ತಾರೆ. ಅಂದು ಶಿವನ ದೇವಸ್ಥಾನದಲ್ಲಿ ಪ್ರಸಾದ ವಿತರಣೆ ಅಥವಾ ದಾಸೋಹದಂತ ಕಾರ್ಯಕ್ರಮಕ್ಕೆ ವಾಲ್ಮೀಕಿ ಸಮುದಾಯದವರು ತಮ್ಮ ಭಕ್ತಿಯು ಮುಟ್ಟಲೆಂದು ಕೈಲಾದ ಕಾಣಿಕೆಯನ್ನು ನೀಡುತ್ತಾರೆ. ತಮ್ಮ ತಮ್ಮ ಮನೆಗಳಲ್ಲಿ ಉಪವಾಸಮಾಡಿ, ಜಾಗರಣೆ ಮಾಡುವುದರಿಂದ ಲೋಕರಕ್ಷಕ

ಶಿವನನ್ನು ಸ್ಮರಿಸುವುದರಿಂದ, ಬಿಲ್ವಪತ್ರೆಯನ್ನು ಏರಿಸಿ ಪೂಜಿಸುವುದರಿಂದ, ಜನ್ಮ ಜನ್ಮಾಂತರದ ಪಾಪಗಳೆಲ್ಲಾ ನಾಶವಾಗಿ, ಸಹಸ್ರಕೋಟಿ ಪುಣ್ಯ ಲಭಿಸುವುದು ಎಂದು ಸೂತ ಪುರಾಣಿಕರು ಶಿವರಾತ್ರಿಯ ಮಹಿಮೆಯನ್ನು ಕೊಂಡಾಡಿರುವುದು ಈ ಸಮುದಾಯದಕ್ಕೆ ತಿಳಿದಂತಿದೆ. ಕಾರಣ ಶಿವನನ್ನು ಇಡೀ ದಿನವೆಲ್ಲ ಆರಾಧಿಸುತ್ತಾರೆ.

ವಿಶ್ವ ಚರಾಚರವನ್ನು ನಿರ್ಮಿಸಿ ಜೀವಸಂಕುಲವನ್ನು ಪೋಷಿಸಿ, ಪಾಲಿಸಿ ಮುನ್ನೆಡಿಸುತ್ತಿರುವ ಶ್ರೀ ವಿಶ್ವನಾಥನ ಲೀಲೆ ಅಗಾಧವಾದುದು, ಅಂತಹ ವಿಶ್ವೇಶ್ವರನ ಕ್ಷೇತ್ರಗಳು ಈ ನಾಡಿನ ಮೂಲೆ ಮೂಲೆ ಗಳಲ್ಲಿಯೂ ಸ್ಥಾಪಿತವಾಗಿ ಭಕ್ತರನ್ನು ಪೋಷಿಸಿ, ಉದ್ಧರಿಸುತ್ತಿವೆ. ಇಂತಹ ಅನುಪಮ ಪುರಾತನ ಕ್ಷೇತ್ರಗಳಲ್ಲಿ ಒಂದಾಗಿ ಬೆಳೆದಿರುವುದು ಅಥಣಿ ತಾಲೂಕಿನ ಐನಾಪುರದ ಶ್ರೀ ವಿಶ್ವನಾಥ ಮಂದಿರ. ತನ್ನದೇ ಆದ ವಿಶಿಷ್ಟ ಪುರಾಣೇತಿಹಾಸ ಹೊಂದಿದ ಶ್ರೀ ವಿಶ್ವನಾಥನು ಹಿಂದೂ ಸಂಸ್ಕೃತಿಯ ಎಲ್ಲಾ ಸಮಾಜದ ಹೃದಯಕೇಂದ್ರವಾಗಿ ಕಂಗೊಳಿಸುತ್ತಿದ್ದಾನೆ. ಎಲ್ಲಾ ಸಮಾಜದ ಜನರೊಂದಿಗೆ ವಾಲ್ಮೀಕಿ ಸಮುದಾಯದವರು ಸೇರಿದಂತೆ ಸಾವಿರಾರು ಜನರು ಒಂದೆಡೆ ಸೇರಿ ಶಿವನನ್ನು ಆರಾಧಿಸಿ ಶಿವನ ಕರುಣೆಗೆ ಪಾತ್ರರಾಗುವುದನ್ನು, ಆಶೀರ್ವಾದ ಪಡೆಯುವುದನ್ನು ನಾವು ಶಿವರಾತ್ರಿಯ ದಿನ ಕಾಣಬಹುದು.

"ವಿಶ್ವತೋ ಚಕ್ಷು ನೀನೇ ದೇವಾ; ವಿಶ್ವಬಾಹು ನೀನೇ ದೇವಾ
ವಿಶ್ವತೋ ಮುಖ ನೀನೆ ದೇವಾ, ವಿಶ್ವತಾ ಪಾದ ನೀನೇದೇವಾ
ಕೂಡಲ ಸಂಗಮ ದೇವಾ"

ಎನ್ನುವ ಹಾಗೆ ಶಿವನ ಕಾರ್ಯಕ್ಕೆ ಪಾತ್ರರಾಗುತ್ತಾರೆ. ಹಾಗೆಯೇ ಶ್ರಾವಣ ಮಾಸದಲ್ಲಿ ತಿಂಗಳ ತನಕ ಪುರಾಣ ಪ್ರವಚನ ಇಲ್ಲಿ ನಡೆಯುತ್ತದೆ. ಎಲ್ಲರೂ ಇಲ್ಲಿ ಸೇರಿ ಶಿವಕಾರುಣ್ಯ ಪಡೆಯುತ್ತಾರೆ.

ನಾಗರ ಪಂಚಮಿ

ಶ್ರಾವಣ ಮಾಸ ಶುರುವಾದರೆ ಸಾಕು ಈ ಪರಿಸರದಲ್ಲಿ ವಾಲ್ಮೀಕಿ ಸಮುದಾಯದವರು ಪ್ರತಿ ಸೋಮವಾರ ಬೆಳಗಿನ ಜಾವ ಎದ್ದು ಶುದ್ಧೋದಕದಿಂದ ಸ್ನಾನಮಾಡಿ ಶುಭ್ರ ಬಟ್ಟೆಗಳನ್ನು ಧರಿಸಿ ಊರಿನ ಎಲ್ಲಾ ದೇವರ ದರುಶನ ಪಡೆದು ಬರುತ್ತಾರೆ. ನಂತರವೇ ಚಹಾ, ನಾಸ್ಟಾ ತೆಗೆದುಕೊಳ್ಳುವುದು. ನಾಗರ ಪಂಚಮಿಯ ದಿನ ಬೆಳಿಗ್ಗೆ ಎದ್ದು, ಮಡಿಯಿಂದ, ನಿಷ್ಠೆಯಿಂದ ಮನೆಯನ್ನೆಲ್ಲ ಶುಚಿಗೊಳಿಸಿ, ಅಂಗಳ ಸಾರಿಸಿ, ರಂಗೋಲಿ ಹಾಕಿ ನಂತರ ಹುತ್ತಗಳಿಗೆ ಅಥವಾ ನಾಗರಕಲ್ಲುಗಳಿಗೆ ಹಾಲನೆರೆಯಲು ಹೋಗುತ್ತಾರೆ. ಅರಳಿಮರದ ಬಳಿ ಇರುವ ನಾಗರ ಕಲ್ಲುಗಳಿಗೆ ಹಾಲನೆರೆಯುವುದು ಹೆಚ್ಚಾಗಿ ಕಂಡುಬರುತ್ತದೆ. ಹಾಗೆಯೇ ಕೆಲವರು ಹುತ್ತಕ್ಕೆ ಹಾಲನ್ನೆರೆಯುತ್ತಾರೆ. ನೈವೇದ್ಯಕ್ಕೆಂದು ಹೋಳಿಗೆ, ತಂಬಿಟ್ಟು, ನೆನೆಹಾಕಿದ ಅಕ್ಕಿ, ಕಡ್ಲಿಬೇಳೆ, ಎಳ್ಳುಚಿಗುಳಿ, ತೆಂಗಿನ ಕಾಯಿ, ಬಾಳೆಹಣ್ಣು, ಅಂಗನೂಲು, ಹತ್ತಿಯಿಂದ ಮಾಡಿದ ಕೊಕ್ಕಬತ್ತಿಯ ಸರ ಮುಂತಾದವುಗಳನ್ನು ತೆಗೆದುಕೊಂಡು ದೇವಸ್ಥಾನದ ಬಳಿಯಿರುವ ಅಥವಾ

ಸುತ್ತ-ಮುತ್ತಲು ಎಲ್ಲಿಯಾದರೂ ಹುತ್ತ ಇದ್ದರೆ, ಹುತ್ತಕ್ಕೆ ಎಡೆಹಾಕಿ, ಕಾಯಿ ಒಡೆದು, ಎಲ್ಲರೂ ಭಕ್ತಿಯಿಂದ ಹಾಲನ್ನು ಎರೆಯುತ್ತಾರೆ.

ನಾಗಪ್ಪನಿಗೆ ಹಾಲನ್ನೆರೆಯುವ ತನಕ ಏನನ್ನು ತಿನ್ನುವುದಿಲ್ಲವಂತೆ, ಬಹಳಷ್ಟು ನಿಷ್ಠೆ, ನಿಯಮದಿಂದ ಹಬ್ಬವನ್ನು ಆಚರಿಸುತ್ತಾರೆ. ಇವರಿಗೆ ನಾಗರ ಹಾವು ಪವಿತ್ರ ಪ್ರಾಣಿ. ಇದರ ಮೇಲಿನ ಭಯವೇ ಈ ಹಬ್ಬಕ್ಕೆ ಪ್ರೇರಣೆ. ಆದ್ದರಿಂದ ವಾಲ್ಮೀಕಿ ಸಮುದಾಯದವರು ಯಾರು ಕೂಡ ಹಾವನ್ನು ಸಾಯಿಸುವುದಿಲ್ಲ. ಒಂದು ವೇಳೆ ಮರಣಕ್ಕೀಡಾದ ನಾಗರ ಹಾವು ಕಂಡರೆ ವಿಧಿವತ್ತಾಗಿ ಅಂತ್ಯಕ್ರಿಯೆ ನಡೆಸುತ್ತಾರೆ.

ಗರ್ಭಿಣಿ ಸ್ತ್ರೀ ಮನೆಯಲ್ಲಿ ಇದ್ದ ಸಮಯದಲ್ಲಿ ಮನೆಯ ಹತ್ತಿರ ಅಥವಾ ಮನೆಯೊಳಗೆ ಹಾವು ಕಂಡರೆ ಅದಕ್ಕೆ ದೂರದಿಂದಲೇ ಧೂಪವನ್ನು ಹಾಕಿ, ಮಕ್ಕಳಿಗೆ ನಿನ್ನ ಹೆಸರನ್ನು ಇಡುತ್ತೇವೆ ನಾಗಪ್ಪ ಇನ್ನುಮುಂದೆ ನಮಗೆ ಕಾಣದಿರು, ಅಥವಾ ನಮ್ಮಮನೆಗೆ ಬರದಿರು, ಹೊರಟು ಹೋಗು ಎಂದು ನಿವೇದಿಸಿಕೊಳ್ಳುತ್ತಾರೆ. ಹಾಗೆಯೇ ಹುಟ್ಟುವ ಮಕ್ಕಳಿಗೆ ನಾಗರಾಜ, ನಾಗವೇಣಿ ಮುಂತಾದ ಹೆಸರುಗಳನ್ನು ಇಡುವುದು ವಾಡಿಕೆಯಾಗಿ ಬಂದಿದೆ.

ದೀಪಾವಳಿ ಹಬ್ಬ

ಆಶ್ವೀಜ ಹಾಗೂ ಕಾರ್ತಿಕ ಮಾಸಗಳಲ್ಲಿ ಶ್ರೀ ಕೃಷ್ಣನು ಲೋಕ ಕಂಠಕನಾದ ನರಕಾಸುರನನ್ನು ಸಂಹರಿಸಿದ ನೆನಪಿಗಾಗಿ ಈ ಹಬ್ಬವನ್ನು ಆಚರಿಸುತ್ತಾರೆ ಎನಿಸುತ್ತದೆ. ದೀಪಾವಳಿಯು ಹೆಸರೆ ಸೂಚಿಸುವಂತೆ, ದೀಪಗಳ ಹಬ್ಬ, ಬೆಳಕಿನ ಹಬ್ಬ, ಅಥಣಿ ಪರಿಸರದ ವಾಲ್ಮೀಕಿ ಸಮುದಾಯದವರೆಲ್ಲರೂ ಈ ಹಬ್ಬವನ್ನು ವಿಶೇಷವಾದ ವಿಜೃಂಭಣೆಯಿಂದ ಆಚರಿಸಿದರೆ, ಕೂಲಿ ಕಾರ್ಮಿಕರು, ಆರ್ಥಿಕವಾಗಿ ಹಿಂದುಳಿದವರು ತಮ್ಮ ಮನೆಯಲ್ಲಿ ದೇವರ ಜಗುಲಿಯ ಮೇಲೆ ತುಂಬಿದ ತಂಬಿಗೆ ಇಟ್ಟು ವೀಳ್ಯದೆಲೆ, ತೆಂಗಿನಕಾಯಿ, ಕುಬಸದ ಕಣ ಹಾಕಿ ಪೂಜಿಸಿ ತಾವು ಮಾಡಿದ ಸಿಹಿ ಅಡುಗೆಯನ್ನು ನೈವೇದ್ಯ ಮಾಡಿ ದೀಪವನ್ನು ಹಚ್ಚುತ್ತಾರೆ. ಆದರೆ ಸ್ಥಿತಿವಂತರು, ಅಂಗಡಿ, ಹೋಟೆಲ್‌ದಂತಹ ಮಾಲೀಕರು, ಈ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ತಮ್ಮ ತಮ್ಮ ಮನೆ, ಅಂಗಡಿ, ಹೋಟೆಲ್ಲುಗಳನ್ನು ಸುಣ್ಣಬಣ್ಣದಿಂದ ಶುಚಿಗೊಳಿಸಿ, ಶೃಂಗರಿಸಿ ಮನೆಯ ಬಾಗಿಲಲ್ಲಿ ಕುಂಬಾರರು ತಯಾರಿಸಿದ ಮಣ್ಣಿನ ಪ್ರಣತಿಯಲ್ಲಿ ದೀಪಗಳನ್ನು ಹಚ್ಚಿಡುತ್ತಾರೆ. ಮನೆಯ ಮತ್ತು ಅಂಗಡಿಗಳ ಮುಂದೆ ಬಣ್ಣ ಬಣ್ಣದ ಆಕಾಶಬುಟ್ಟಿಯನ್ನು ಹಾಕಿರುತ್ತಾರೆ. ಕಾರ್ತಿಕ ಮಾಸವು ಮುಗಿಯುವ ತನಕವು ದಿನಾಲು ಸಾಯಂಕಾಲ ದೀಪ ಹಚ್ಚುತ್ತಾರೆ. ಹಬ್ಬದ ದಿವಸ ಮನೆಯಲ್ಲಿ ಲಕ್ಷ್ಮಿಯನ್ನು ಕೂಡಿಸುತ್ತಾರೆ. ಲಕ್ಷ್ಮಿಯ ಕೃಪೆಯು ನಮ್ಮ ಮೇಲೆ ಸದಾ ಇರಲಿ ಎನ್ನುವ ಕಲ್ಪನೆಯವರದು. ಹಿತ್ತಾಳೆ ಅಥವಾ ತಾಮ್ರದ ಕೊಡ, ಸ್ಥಿತಿವಂತರು ಬೆಳ್ಳಿಯ ತಂಬಿಗೆ, ಇಲ್ಲವೆ ಕಂಚಿನ ತಂಬಿಗೆಯಲ್ಲಿ ಶುದ್ಧ ಜಲತುಂಬಿ ವೀಳ್ಯದ ಎಲೆ, ತೆಂಗಿನ ಕಾಯಿ ಇಟ್ಟು, ತೆಂಗಿನ ಕಾಯಿಗೆ ಬೆಳ್ಳಿಯ ಲಕ್ಷ್ಮಿಯ ಮುಖ ಇಟ್ಟು ಕಳಸ ತಯಾರಿಸಿ ಮೂರ್ತಿಗೆ ಮುತ್ತಿನ ಮೂಗುತಿ, ಓಲೆ, ಜುಮುಕಿ, ಬೋರಮಳ ಸರಗಳನ್ನು ಅಲಂಕಾರಕ್ಕೆ ಬಳಸುತ್ತಾರೆ. ಹೂವಿನ ಮಾಲೆ ಹಾಗೂ ಕಂಕಣ ಕಟ್ಟಿ,

ಬಳೆಗಳನ್ನು ಇರಿಸಿ ಹೊಸ ಸೀರೆಯನ್ನು ಉಡುಸಿ ಅಲಂಕಾರ ಮಾಡಿ ಪೂಜಿಸುತ್ತಾರೆ. ದೀಪಗಳನ್ನು ಹಚ್ಚಿರುತ್ತಾರೆ. ಜೊತೆಗೆ ಲಕ್ಷ್ಮಿಯ ಪೋಟೋ ಇಟ್ಟು, ಬಾಳೆ ಹಣ್ಣು, ವಿವಿಧ ಬಗೆಯ ಹಣ್ಣುಗಳನ್ನು, ಹಬ್ಬಕ್ಕೆ ಮಾಡಿದ ಹೋಳಿಗೆ, ಕರ್ಚಿಕಾಯಿ ಇಟ್ಟು ಪೂಜಿಸುತ್ತಾರೆ. ತಾಂಬೂಲವನ್ನು ಗುಂಡುಕಲ್ಲಿನಿಂದ ಕುಟ್ಟಿ ಲಕ್ಷ್ಮಿಯ ಮುಂದೆ ಇಡುತ್ತಾರೆ. ಬಹಳಷ್ಟು ಅದ್ದೂರಿಯಾಗಿ ಲಕ್ಷ್ಮಿಯ ಪೂಜೆಯನ್ನು ಮಾಡುತ್ತಾರೆ. ಸುತ್ತಮುತ್ತಲಿನ ಜನರನ್ನು ಅರಿಷಿಣಕ್ಕೆ ಕರೆಯುತ್ತಾರೆ. ಊಟಮಾಡಿಸಿ ಕುಂಕುಮ ಅರಿಷಿಣ ಕೊಟ್ಟು ಕಳಿಸುತ್ತಾರೆ. ಹಾಗೂ ಭಾರಿ ಮೊತ್ತದ ಪಟಾಕಿಗಳನ್ನು ಸುಡುತ್ತಾರೆ. ಮನೆಯ ಅಂಗಳದಲ್ಲಿ ಪೇಟೆಯಿಂದ ತಂದಂತಹ ಸುರುಬತ್ತಿ, ಪಟಾಕಿ, ಹೂವಿನ ಬಾಣಗಳನ್ನು ಹಚ್ಚುತ್ತಾರೆ. ಅಥಣಿ ಪರಿಸರದವರು ಯಾವುದೇ ಹಬ್ಬಗಳನ್ನು ಮಾಡಿದರೂ, ಮದುವೆಯಂತಹ ಕಾರ್ಯಗಳು ನಡೆದರು ಹಿರಿಯರಿಗೆ ಹೊಸ ಬಟ್ಟೆಗಳನ್ನು ಏರಿಸಿಕೊಳ್ಳುತ್ತಾರೆ. ಅಥಣಿ ಪರಿಸರದಲ್ಲಿ ಯಾವುದೇ ಹಬ್ಬವನ್ನಾಗಲಿ ಬಹಳಷ್ಟು ವಿಶೇಷತೆಯಿಂದ ಆಚರಿಸುತ್ತಾರೆ.

ಮಹಾಲಯ ಹಬ್ಬ (ಮಹಾನವಮಿ ಅಥವಾ ದಸರಾಹಬ್ಬ)

ಮಹಾನವಮಿ ಹಬ್ಬದಲ್ಲಿ ಅಥಣಿ ಪರಿಸರದ ವಾಲ್ಮೀಕಿ ಸಮುದಾಯದವರ ಬಹುತೇಕ ಮನೆಗಳಲ್ಲಿ ಒಂಬತ್ತು ದಿನ ಅಥವಾ ಹನ್ನೊಂದು ದಿನ ಅಂದರೆ ಅಮಾವಾಸ್ಯೆಯಿಂದ ಹಿಡಿದು, ದೇವರು ಬನ್ನಿಮುಡಿಯುವ ತನಕ ದೀಪಾರಾಧನೆಯಿರುತ್ತದೆ. ಅಂದರೆ ಮನೆಯನ್ನು ದಿನಾಲು ಸ್ವಚ್ಛಗೊಳಿಸಿ, ಸುಣ್ಣ-ಬಣ್ಣದಿಂದ ಶೃಂಗರಿಸಿ, ಶುಭ್ರವಾದ ಬಟ್ಟೆಗಳನ್ನು ಧರಿಸಿ ಮನೆಯ ಪೂಜಾಗೃಹದಲ್ಲಿ ಆದಿಶಕ್ತಿಯನ್ನು ಅಂದರೆ ಅವರವರ ಕುಲದೇವತೆಯಾದ ಯಲ್ಲವ್ವ, ದುರುಗವ್ವ, ಲಗುಮವ್ವ, ರೇಣುಕಮ್ಮ, ಮುರುಗಮ್ಮ ದೇವತೆಗಳಿಗೆ ಅಲಂಕಾರ ಮಾಡಿ ಎಳ್ಳೆಣ್ಣೆ, ಒಳ್ಳೆಣ್ಣೆ ಅಥವಾ ತುಪ್ಪದ ದೀಪವನ್ನು ಹಚ್ಚುತ್ತಾರೆ. ಅದು ಒಂಬತ್ತು ಅಥವಾ ಹನ್ನೊಂದು ದಿವಸ ಶಾಂತವಾಗದಂತೆ ನೋಡಿಕೊಂಡು ಬರುತ್ತಾರೆ. ಆ ಸಂದರ್ಭದಲ್ಲಿ ಮನೆಗೆ ಬೀಗ ಹಾಕಿಕೊಂಡು ಹೊರಗೆ ಹೋಗುವುದಿಲ್ಲ. ಯಾರಾದರೂ ಒಬ್ಬರು ದೀಪಕಾಯುವುದು ರೂಢಿಯಾಗಿ ಬಂದಿದೆ.

ದಸರಾ ಹಬ್ಬ ಬಂತೆಂದರೆ ಸಾಕು ಮನೆಯನ್ನು, ಮನೆಯಲ್ಲಿನ ಹಾಸಿಗೆಗಳು, ಬಟ್ಟೆಬರೆಗಳು, ಪಾತ್ರೆ ಪರಡಿಗಳನ್ನೆಲ್ಲ ಶುಚಿಗೊಳಿಸಿ ಮಡಿಮಾಡಿ ಇಟ್ಟುಕೊಳ್ಳುತ್ತಾರೆ. ಮಹಾನವಮಿ ಹಬ್ಬದಲ್ಲಿ ಒಂದುದಿನ ಆಯುಧ ಪೂಜೆ ಎಂದು ಆಚರಿಸುತ್ತಾರೆ. ಅಂದು ತಮ್ಮ ಮನೆಯಲ್ಲಿ ದಿನನಿತ್ಯ ಬಳಕೆಯಾಗುವ ಒಳ್ಳುಕಲ್ಲು, ಒನಕೆ, ಬೀಸುವಕಲ್ಲು, ಕೊಡಲಿ, ಚಾಕು, ಕಂದೀಲು, ಕುಡುಗೋಲು, ಪುಸ್ತಕ, ಪೆನ್ನುಗಳನ್ನು, ರೈತಾಪಿ ಸಾಮಾನುಗಳನ್ನು ಪೂಜಿಸುತ್ತಾರೆ. ಸಿಹಿ ಅಡುಗೆ ನೈವೇದ್ಯ ರೂಢಿಯಲ್ಲಿದೆ. ಅಂತೆಯೇ ಮರು ದಿವಸ ಊರಿನ ಎಲ್ಲಾ ದೇವರುಗಳು ಬನ್ನಿ ಮುಡಿಯುವುದು. ಅಂದು ಜೋಳದದಂಟು, ಆರಿಯ ಸೊಪ್ಪುಗಳನ್ನು ದೇವರಿಗೆ ಏರಿಸಿ, ಬಾಗಿಲುಗಳಲ್ಲಿ ಇಟ್ಟು ಪೂಜಿಸುತ್ತಾರೆ. ಆರಿಯ ಸೊಪ್ಪನ್ನು ಕೊಟ್ಟುಕೊಂಡು ಮಾಡಿ ನಮ್ಮ-ನಿಮೆಲ್ಲರ ಬಾಳು ಬಂಗಾರವಾಗಲೆಂದು ಹರಸಿಕೊಳ್ಳುವುದುಂಟು. ಬಹಳಷ್ಟು ವಿಜೃಂಭಣೆಯಿಂದ ಈ ಹಬ್ಬವನ್ನು ಆಚರಿಸುತ್ತಾರೆ.

ಈ ಸಂದರ್ಭದಲ್ಲಿ ದಿನಾಲು ಸಾಯಂಕಾಲದ ಸಮಯದಲ್ಲಿ ಮುತ್ತೈದೆಯರನ್ನು ಮನೆಗೆ ಕರೆದು ಅರಿಷಿಣ-ಕುಂಕುಮ ಕೊಟ್ಟು, ಸ್ಥಿತಿವಂತರಾದರೆ ಕುಪ್ಪಸದ ಕಣ ಕೊಟ್ಟು ಊಟಮಾಡಿಸಿ ಕಳುಹಿಸುತ್ತಾರೆ. ಇದರಿಂದ ತಮ್ಮ ತಮ್ಮ ಮನೆಯು ಸುಖ ಸಮೃದ್ಧಿಯಿಂದ ಮುನ್ನಡೆಯುತ್ತಿದೆಯೆನ್ನುವ ಭಾವನೆ ಅವರದು, ಮುತ್ತೈದೆತನವು ವೃದ್ಧಿಸುತ್ತದೆ ಎನ್ನುತ್ತಾರೆ. ಕೆಲವರು ಮಹಾನವಮಿಗೆ ಗಟ್ಟಿಹಾಕುವುದು ಅಂದರೆ ಐದು ದಿನ ಈ ರೀತಿಯ ಧಾನ್ಯವನ್ನು ಒಟ್ಟಿಗೆ ಸೇರಿಸಿ ಒಂದು ಮಡಿಕೆಯಲ್ಲಿ ಅಥವಾ ಪಾಟುಗಳಲ್ಲಿ ಮಣ್ಣು ಹಾಕಿ ಅದರಲ್ಲಿ ಧಾನ್ಯಗಳನ್ನು ಚೆಲ್ಲಿ ನೀರು ಹಾಕಿ ಸಸಿ ಬಂದ ಮೇಲೆ ಅವುಗಳಿಂದ ಕರಗ ಕಟ್ಟುತ್ತಾರೆ. ಕಾರಹುಣ್ಣಿಮೆಯ ದಿನ ಎತ್ತುಗಳಿಂದ ಕರಿಹರಿಯುವುದು, ಕಾರಹುಣ್ಣಿಮೆಯ ಪ್ರಯುಕ್ತ ಬೇಟೆಗೆ ಹೋಗುವುದು, ಎಳ್ಳ ಅಮಾವಾಸ್ಯೆಗೆ ಹೊಲಕ್ಕೆ ಹೋಗಿ ತುಂಬಿದ ಹೊಲದಲ್ಲಿ ಪಾಂಡವರನ್ನು ಕೂಡಿಸಿ ಅಂದರೆ ೫ ಕಲ್ಲುಗಳನ್ನು ಪೂಜೆ ಮಾಡಿ ಕಾಯಿ ಹೊಡೆದುಕೊಂಡು, ಹೊಲಕ್ಕೆ ಚರಗ ಚೆಲ್ಲಿ ಬರುತ್ತಾರೆ.

ಮಕರ ಸಂಕ್ರಮಣ

ಅಥಣಿ ಪರಿಸರದ ಕೆಲ ಹಳ್ಳಿಗಳಲ್ಲಿ ಮಕರ ಸಂಕ್ರಾಂತಿಯ ದಿನವನ್ನು ವಾಲ್ಮೀಕಿ ಸಮುದಾಯದವರು ಸುಗ್ಗಿಯ ಕಾಲವೆಂದು ಪರಿಗಣಿಸಿ, ಎತ್ತುಗಳಿಗೆ ಶೃಂಗರಿಸಿ ಮೆರವಣಿಗೆಯನ್ನು ಮಾಡುವುದನ್ನು ನೋಡಬಹುದು. ಎಳ್ಳು ಹಚ್ಚಿದ ಸಜ್ಜೆರೊಟ್ಟಿ, ಮೊಳಕೆ ಕಟ್ಟಿದ ಮಡಿಕೆಕಾಳು ಪಲ್ಲೆ, ಬುತ್ತಿ, ರೊಟ್ಟಿಯನ್ನು, ಎಳ್ಳು-ಬೆಲ್ಲವನ್ನು ಮನೆಯಲ್ಲಿ ಮಾಡಿದ ಸಿಹಿ ಅಡುಗೆಯನ್ನು ಕಟ್ಟಿಕೊಂಡು ಹೊಲ-ಗದ್ದೆಗಳಲ್ಲಿ, ಕೆರೆ-ಹಳ್ಳದ ದಂಡೇಲಿ ದೇವಸ್ಥಾನಗಳಲ್ಲಿ ಹೋಗಿ ಊಟಮಾಡಿಬರುವುದು, ಹಾಗೆಯೇ ಮನೆ-ಮನೆಗೂ ಎಲ್ಲವನ್ನು ಬೀರುವುದು ರೂಢಿಯಾಗಿ ಬಂದಿದ್ದು, ಬಹಳಷ್ಟು ಸಂಭ್ರಮದಿಂದ ಸಂಕ್ರಾಂತಿ ಹಬ್ಬವನ್ನು ಆಚರಿಸುತ್ತಾರೆ. ಸಂಕ್ರಮಣದ ಸಂದರ್ಭದಲ್ಲಿ ಐನಾಪುರದಲ್ಲಿ ಶ್ರೀ ಸಿದ್ದೇಶ್ವರನ ಜಾತ್ರೆಯು ಒಂದು ತಿಂಗಳ ತನಕ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಹಾಗೆಯೇ ಎತ್ತುಗಳ ಜಾತ್ರೆಯು ಇರುತ್ತದೆ. ಈ ಜಾತ್ರೆಯಲ್ಲಿ ಮತೀಯ ಭೇದ-ಭಾವವಿಲ್ಲದೆ ಎಲ್ಲಾ ಸಮುದಾಯದವರು ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ.

ಹಾಗೆಯೇ ಎಪ್ರಿಲ್ ತಿಂಗಳಲ್ಲಿ ಅಥಣಿಯ ಸಿದ್ದೇಶ್ವರ ಜಾತ್ರೆಯು ನಡೆಯುತ್ತದೆ. ದನಗಳ ಪರಿಷೆ ಇರುತ್ತದೆ. ಇಲ್ಲಿಗೆ ನಾಡಿನ ಮೂಲೆಮೂಲೆಯಿಂದ ಜನರು ಎತ್ತುಗಳನ್ನು ಕೊಳ್ಳಲು ಮತ್ತು ಮಾರಲು ಬಂದಿರುತ್ತಾರೆ. ಎಲ್ಲ ಮತೀಯರು ಈ ಜಾತ್ರೆಯಲ್ಲಿ ಪಾಲ್ಗೊಳ್ಳುವುದು ವಿಶೇಷವಾಗಿದೆ.

ಲಗುಮವ್ವ

ಬೇಸಿಗೆ ಕಾಲದಲ್ಲಿ ನಡೆಯುವ ಈ ಹಬ್ಬ ಕೆಲವು ವಿಶಿಷ್ಟ ಆಚರಣೆಗಳನ್ನು ಒಳಗೊಂಡಿದೆ. ಲಗುಮವ್ವನನ್ನು ಲಕ್ಷ್ಮಿ ಎಂದು ಭಾವಿಸಲಾಗಿದೆ. ಹಬ್ಬದ ದಿನ ದೇವತೆಗೆಂದು ಬಿಟ್ಟಕೋಣವನ್ನು ಗುಡಿಯ ಬಳಿ ತರುತ್ತಾರೆ. ಅದರ ಕೂದಲನ್ನು ಬೋಳಿಸುತ್ತಾರೆ. ಅದರ ಮೈಗೆ ಎಣ್ಣೆ ಹಚ್ಚುತ್ತಾರೆ. ಒಂದುವೇಳೆ ಕೋಣ ಓಡಿ ಹೋಗಿ ಅದನ್ನು ಹಿಡಿಯಲು ಆಗದಿದ್ದರೆ ಅಲ್ಲಿನ ಹೊಲೆಯರನ್ನೇ ದೇವತೆಗೆ ಕಡಿಯುವ ಸಂಪ್ರದಾಯವು ರೂಢಿಯಲ್ಲಿತ್ತಂತೆ.

ಊರ ಜನರೆಲ್ಲರೂ ಗುಡಿಯ ಬಳಿ ಸೇರುತ್ತಾರೆ. ಲಗುಮವ್ವನಿಗೆ ಹೊಸ ಸೀರೆ, ಕುಪ್ಪಸ, ಆಭರಣಗಳನ್ನು ತೊಡಿಸಿ, ಇದನ್ನು ಒಂದು ಸಣ್ಣ ಗಾಡಿಯಲ್ಲಿ ಕೂಡಿಸಿ, ಆಕೆಯನ್ನು ಊರ ಹೊರಗೆ ಕಳುಹಿಸುತ್ತಾರೆ. ಗಾಡಿಯಲ್ಲಿ ಆಕೆಗೆ ನಾಲ್ಕು ದಿವಸಕ್ಕಾಗುವ ದವಸವನ್ನು ಇಟ್ಟಿರುತ್ತಾರೆ. ಆಕೆ ಗುಡಿಯಿಂದ ಹೊರಡುವಾಗ ಆಸಾದಿ ಆಕೆಯ ಕಡೆಗೆ ಕೈಮಾಡಿ 'ಹೊಂಡೆಲಗುಮಿ, ಬೋಸೂಡಿ ಲಗಮವ್ವ, ಮಹಿಷಾಸುರನಿಗೆ ಹುಟ್ಟಿದ ಮಕ್ಕಳೇ, ಇಂಗಳೆವ್ವ, ಪಂಗಳವ್ವ ಎಂದು ಬಯ್ಯಲು ಶುರು ಮಾಡುತ್ತಾನೆ.

ಪುರಾಣ ಮತ್ತು ಆಚರಣೆಗಳಲ್ಲಿ ನಮ್ಮ ಜನಪದರು ತಮ್ಮ ಮನಸ್ಸಿನ ದುಃಖ, ದುಮ್ಮಾನಗಳನ್ನು, ಉಲ್ಲಾಸ, ಸಂಭ್ರಮಗಳನ್ನು ತೋಡಿಕೊಂಡಿರುತ್ತಾರೆ. ಗ್ರಾಮೀಣ ಬದುಕಿನಲ್ಲಿ ಧರ್ಮ, ಕ್ರೀಡೆ, ಮನರಂಜನೆ ಕಲೆಗಳಲ್ಲಿ ತಮ್ಮನ್ನು ಪೂರ್ಣ ಪ್ರಮಾಣದಲ್ಲಿ ಅಭಿವ್ಯಕ್ತಿಸಿಕೊಳ್ಳುವುದು ಗ್ರಾಮದೇವತೆಯ ನೆಪದಿಂದಲೇ, ಗ್ರಾಮದೇವತೆ ಎಂದರೆ ಕೇವಲ ಧಾರ್ಮಿಕ ಆಚರಣೆ ಎಂದು ಭಾವಿಸುವುದಕ್ಕಿಂತ ಗ್ರಾಮ ಜೀವನದ ಹತ್ತು ಹಲವು ಮುಖಗಳನ್ನು ತೆರೆದು ತೋರಿಸುವ ಸಾಧನ ಎಂದು ಹೇಳುವುದೇ ಸೂಕ್ತ (ಡಾ. ಸಿದ್ದಲಿಂಗಯ್ಯ ಗ್ರಾಮದೇವತೆಗಳು ಪು.೨).

ಪುರಾಣ ಹೇಳಿದ ಕಥೆಯಲ್ಲಿ ಅದೊಂದು ಕ್ರಿಯಾಶೀಲವಾದ ಸಾಂಸ್ಕೃತಿಕ ಶಕ್ತಿ. ಎನ್ನುವ ಪ್ರಸಿದ್ಧ ಮಾನವಶಾಸ್ತ್ರಜ್ಞ ಮಲಿನೋವಸ್ಕಿಯವರ ಹೇಳಿಕೆಯು ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಅತ್ಯಂತ ಪ್ರಸ್ತುತವಾಗುತ್ತದೆ. ಭಾರತದ ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವ ಲಕ್ಷಾಂತರ ದೇವತೆಗಳು ವೈವಿಧ್ಯಮಯವಾದ ಕಥೆಗಳ ಆಗರವಾಗಿದೆ. ಇವುಗಳಿಗೆ ಸಂಬಂಧಿಸಿದ ಆಚರಣೆಗಳಂತೂ, ಆಳವಾದ, ಗಂಭೀರವಾದ ಅಧ್ಯಯನಕ್ಕೆ ಯೋಗ್ಯವಾಗಿದೆ. ಈ ಆಚರಣೆಗಳ ಭಾಷೆ, ಸಂಕೇತ, ಅವುಗಳ ಉಗಮಕ್ಕೆ ಕಾರಣವಾದ ಆರ್ಥಿಕ ಸ್ಥಿತಿಯನ್ನು ಸಂಗ್ರಹಿಸಲು ಪಡಬೇಕಾದ ಶ್ರಮ ಕಡಿಮೆಯದೇನಲ್ಲ (ಡಾ. ಸಿದ್ದಲಿಂಗಯ್ಯ ಗ್ರಾಮದೇವತೆಗಳು).

೪.೨. ಜೀವನಾವರ್ತನದ ಆಚರಣೆಗಳು

ಜೀವನಾವರ್ತನವು ಮನುಷ್ಯನ ಹುಟ್ಟಿನಿಂದ ತೊಡಗಿ ಸಾವಿನಲ್ಲಿ ಕೊನೆಗೊಳ್ಳುತ್ತವೆ. ಇವುಗಳ ನಡುವೆ ಅನೇಕ ಸ್ಥಿತ್ಯಂತರದ ಹಂತಗಳಿರುತ್ತವೆ. ಇಂತಹ ಸಂದರ್ಭದಲ್ಲಿ ನಡೆಯುವ ಆಚರಣೆಗಳನ್ನು ಸ್ಥಿತ್ಯಂತರದ ಆಚರಣೆಗಳು ಅಥವಾ ಪರಿವರ್ತನೆಯ ವಿಧಿಗಳೆಂದು ಕರೆಯಬಹುದು. ಇಂತಹ ವಿಧಿ ಆಚರಣೆಗಳು ಕಾಲದಿಂದ ಕಾಲಕ್ಕೆ, ದೇಶದಿಂದ ದೇಶಕ್ಕೆ ವ್ಯತ್ಯಾಸವಾಗುತ್ತಾ ಹೋಗುತ್ತವೆ. ಭಾರತೀಯ ಸಂದರ್ಭವನ್ನು ಗಮನಿಸಿ ಹೇಳುವುದಾದರೆ ಹೆಂಗಸರಲ್ಲಿ ಇಂತಹ ಸ್ಥಿತ್ಯಂತರ ಹಾಗೂ ಸ್ಥಿತ್ಯಂತರದ ವಿಧಿಗಳು ಹೆಚ್ಚು. ಹದಿಹರೆಯ, ಮೈನೆರೆಯುವಿಕೆ, ಮದುವೆ, ಸೀಮಂತ, ಹುಟ್ಟಿನ ಆಚರಣೆ, ಸಾವಿನ ಆಚರಣೆ ಹೀಗೆ ವೈವಿಧ್ಯಮಯ ಆಚರಣೆಗಳೆಲ್ಲವು ಜೀವನಾವರ್ತನದ ಆಚರಣೆಗಳಾಗುತ್ತವೆ. ಸಮಾಜವು ಒಬ್ಬ ವ್ಯಕ್ತಿಯನ್ನು ಅಂಗೀಕರಿಸುವಂತೆ ಮಾಡುವಲ್ಲಿ ಈ ಜೀವನಾವರ್ತನದ ಆಚರಣೆಗಳು ನೆರವಾಗುತ್ತವೆ.

ಇಂತಹ ಜೀವನಾವರ್ತನದ ಆಚರಣೆಗಳು ಕರ್ನಾಟಕದ ಮಟ್ಟಿಗೆ ಪ್ರಾದೇಶಿಕವಾಗಿ ಬದಲಾವಣೆಯನ್ನು ಹೊಂದುತ್ತಾ ಬರುತ್ತವೆ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಈ ರೀತಿಯ ಆಚರಣೆಗಳು ವಿಭಿನ್ನ

ರೀತಿಯಲ್ಲಿ ನಡೆಯುತ್ತವೆ. ಅಂತೆಯೇ ಅಥಣಿ ಪರಿಸರದ ವಾಲ್ಮೀಕಿ ಸಮುದಾಯದವರು ಆಚರಿಸುವ ಜೀವನಾವರ್ತನದ ಆಚರಣೆಗಳನ್ನು ಕುರಿತು ವಿವೇಚಿಸುವುದು ಇಲ್ಲಿನ ಮುಖ್ಯ ಉದ್ದೇಶವಾಗಿದೆ.

ಕರ್ನಾಟಕದ ಬಹುಭಾಗದಲ್ಲಿ ವಾಲ್ಮೀಕಿ ಸಮುದಾಯದವರು ವಾಸಿಸುತ್ತಾ ಬಂದಿದ್ದು, ಈ ಪರಿಸರದಲ್ಲಿ ವಾಲ್ಮೀಕಿ ಸಮುದಾಯವು ಬಹಳ ಕಡಿಮೆ ಪ್ರದೇಶದಲ್ಲಿ ದೊರೆಯುತ್ತಿದ್ದು, ಕಡಿಮೆ ಸಂಖ್ಯೆಯ ಜನರು ವಾಸಿಸುತ್ತಾರೆ. ಅಥಣಿ ತಾಲೂಕಿನ ಬೇಡರ ಹಟ್ಟಿ, ರಡ್ಡೇರಹಟ್ಟಿ, ಶೇಡಬಾಳ, ಅಡಾಳಹಟ್ಟಿ, ಕೋಹಳ್ಳಿ ಮುಂತಾದ ಕೆಲಹಳ್ಳಿಗಳಲ್ಲಿ ಮಾತ್ರ ವಾಲ್ಮೀಕಿ ಸಮುದಾಯದವರು ವಾಸಿಸುತ್ತಿದ್ದಾರೆ. ಇವರುಗಳ ಕುಲಕಸಬು ಪರಂಪರಾಗತವಾಗಿ ನಡೆದುಕೊಂಡು ಬಂದಿರುವ ಬೇಟೆಯಾಡುವ ಪದ್ಧತಿಯಾಗಿದೆ. ಆದರೆ ಇಂದು ಈ ಜನರು ಕೂಡ ನಗರೀಕರಣದ ವಾಸನೆಗೆ ಒಳಗಾಗಿರುವುದರಿಂದ; ವೈಜ್ಞಾನಿಕವಾಗಿ ಮುಂದುವರಿಯುತ್ತಿರುವ ಈ ಸಂದರ್ಭದಲ್ಲಿ ಕಾಲಕ್ಕನುಗುಣವಾಗಿ ಈ ಸಮುದಾಯದ ಜನರು ವೃತ್ತಿಯಲ್ಲಿ ಬದಲಾವಣೆಯನ್ನು ಕಂಡುಕೊಂಡಿದ್ದು ಒಕ್ಕಲಿಗರಂತೆ ಹೊಲಮನೆಗಳಲ್ಲಿ ಕೆಲಸ ಮಾಡಿಕೊಂಡು ಜೀವನವನ್ನು ಸಾಗಿಸುವುದರ ಜೊತೆಗೆ ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡಿಸುತ್ತಾ, ಸರಕಾರಿ ಮತ್ತು ಸರಕಾರೇತರ ಕಛೇರಿಗಳಲ್ಲಿ ಕೆಲಸವನ್ನು ನಿರ್ವಹಿಸಿಕೊಂಡು ತಮ್ಮ ಜೀವನವನ್ನು ಮುನ್ನೆಡೆಸಿಕೊಂಡು ಬರುವುದಕ್ಕೆ ದಾರಿ ಮಾಡಿಕೊಡುತ್ತಿದ್ದಾರೆ. ಆದಾಗಲು ತಮ್ಮ ಕುಲದ ಕುಲಕಸಬು ಆಗಿರುವಂತಹ ಬೇಟೆಯಾಡುವ ಕೆಲಸವನ್ನು ವಿನೋದಕ್ಕಾಗಿಯಾದರೂ ಹಬ್ಬ-ಹರಿದಿನಗಳಲ್ಲಿ ಮುಂದುವರಿಸಿಕೊಂಡು ಬಂದಿರುವುದನ್ನು ಕಾಣಬಹುದು.

ಅಥಣಿ ಪರಿಸರದಲ್ಲಿ ಹಲ ಕೆಲವು ಹಳ್ಳಿಗಳಲ್ಲಿ ವಾಸಿಸುತ್ತಿರುವ ವಾಲ್ಮೀಕಿ ಸಮುದಾಯದವರ ಜೀವನಾವರ್ತನದ ಆಚರಣೆಗಳು ಒಂದೇ ನಮೂನೆಯವಾಗಿದ್ದುದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ಅವುಗಳಲ್ಲಿ ಮೊದಲಿಗೆ,

ಹುಟ್ಟು

ಅಥಣಿ ಪರಿಸರದ ವಾಲ್ಮೀಕಿ ಸಮುದಾಯದ ಯಾವುದೇ ಕುಟುಂಬದಲ್ಲಿ ಒಬ್ಬ ಸ್ತ್ರೀಯು ಮಗುವನ್ನು ಹೆರುವ ಸಂದರ್ಭದ ಮೊದಲಿಗೆ ಬಂಧು-ಬಳಗದವರೆಲ್ಲರು ಮತ್ತು ಸೂಲಗಿತ್ತಿಯರು ಸೇರಿಕೊಂಡು ಹಾಗೂ ಮಕ್ಕಳನ್ನು ಹೆತ್ತು ಅನುಭವ ಇರುವವರು ಮೊದಲಿಗೆ ಆಕೆಗೆ ತಿಳುವಳಿಕೆ ಹೇಳುವುದರ ಜೊತೆಗೆ ಧೈರ್ಯವನ್ನು ಕೊಡುತ್ತಿರುತ್ತಾರೆ. ಹೆರಿಗೆಯಾದ ನಂತರ ಗಂಡು ಮಗುವಾದರೆ ಪೇಡಾ ಹಂಚುತ್ತಾರೆ. ಹೆಣ್ಣು ಮಗು ಹುಟ್ಟಿದರೆ ಜಿಲೇಬಿಯನ್ನು ಹಂಚುತ್ತಾರೆ. ತದನಂತರ ಕೂಡಿದಂತಹ ಹೆಂಗಳೆಯರು ಮಗುವನ್ನು ಮತ್ತು ಬಾಣಂತಿಯನ್ನು ಸ್ನಾನಮಾಡಿಸಿ, ತಾವೂ ಕೂಡ ಸ್ನಾನಮಾಡಿ ಹೆರಿಗೆಯಾದ ಮನೆಯಲ್ಲಿನ ಸೀರೆಗಳನ್ನು ಉಟ್ಟುಕೊಂಡು ಉಡಿ ಅಕ್ಕಿ ಹಾಕಿಸಿಕೊಂಡು ಹೋಗುತ್ತಾರೆ.

ಈ ಸಂದರ್ಭದಲ್ಲಿ ಹೆರಿಗೆಯಾದ ಆ ಮನೆಗೆ ಸೂತಕ ಸಂಭವಿಸುತ್ತದೆ. ಇಂತಹ ಸೂತಕವನ್ನು ಮೂರನೇ ದಿನ ಒಲೆಯನ್ನು ತೆಗೆಯುವ ಕಾರ್ಯಕ್ರಮವೆಂದು ಆಚರಿಸುವುದರ ಮುಖಾಂತರ ಮೈಲಿಗೆಯನ್ನು

ಹೋಗಲಾಡಿಸುತ್ತಾರೆ. ನಂತರ ಐದನೆ ದಿನದಂದು ವಿಧಿ ಮುಂಡಿಯು ಮಗುವಿಗೆ ಹಣೆ ಬರಹವನ್ನು ಬರೆಯಲು ಬರುತ್ತಾಳೆಂದು ಈ ಜನರ ನಂಬುಗೆ. ಕಾರಣ ಈ ಸಮುದಾಯದವರು ಮನೆಯನ್ನೆಲ್ಲಾ ಸಾರಿಸಿ, ಸ್ವಚ್ಛಗೊಳಿಸಿ ಮನೆಯಲ್ಲಿ ಪೂಜೆಗಳನ್ನು ನೆರವೇರಿಸಿ, ಸಿಹಿ ಅಡುಗೆಯನ್ನು ಮಾಡಿ ದೇವರಿಗೆ ನೈವೇದ್ಯ ಮಾಡಿ, ಎಲ್ಲರೂ ಊಟ ತಿರಿಸಿಕೊಂಡು ರಾತ್ರಿಯೆಲ್ಲಾ ಎಳವೆ ಸೆಟವಿಯು (ವಿಧಿಮುಂಡಿಟ) ಬಂದು ಹಣೆಬರಹ ಬರೆದು ಹೋಗುವವರೆಗೂ ಕಾಯುವುದು, ಅದಕ್ಕಾಗಿ ದೇವರ ಮನೆಯಲ್ಲಿ ಅಥವಾ ಬಾಣಂತಿಯ ಹೊರಸಿನ ಕೆಳಗೆ ಒಂದು ಮೊರದಲ್ಲಿ ಒಂದು ಕಲ್ಲನ್ನು ಇಟ್ಟು ಅದಕ್ಕೆ ಕುಂಚಿಗಿ ಹಾಕಿ, ಐದು ದೀಪಗಳನ್ನು ಹಚ್ಚಿ, ಕೇರು ಹರಳು ಮತ್ತು ಒಂದು ಸೂಜಿಯನ್ನು ಇಟ್ಟು ಪೂಜಿಸುತ್ತಾರೆ. ಹೀಗೆ ಪೂಜಿಸಿದ ಕೇರು ಹಳ್ಳಿಗೆ ಸೂಜಿಯನ್ನು ಚುಚ್ಚಿ ಚುಚ್ಚಿ ಮಗುವಿನ ಹಣೆಬರಹವನ್ನು ಬರೆಯುತ್ತಾಳೆ ಎನ್ನುವ ನಂಬಿಕೆ. ಆ ದಿನ ಮನೆಯವರೆಲ್ಲ ತೆರೆದ ಬಾಗಿಲನ್ನು ಹಾಗೆಯೇ ತೆರೆದಿರುತ್ತಾರೆ. ಬಾಣಂತಿಯ ತಲೆದಿಂಬಿನ ಕೆಳಗೆ ನಿಂಬೆ ಹಣ್ಣು, ಕುಡುಗೋಲು ಇಟ್ಟಿರುತ್ತಾರೆ. ಕಾರಣ ಈಕೆಗೆ ಭಯವಾಗದಿರಲಿ ಎನ್ನುವುದು ಇವರ ತಿಳುವಳಿಕೆ. ವಿಶೇಷವೆಂದರೆ ಮಗುವು ಎಷ್ಟೇ ಅತ್ತರೂ ಯಾರು ಕರೆದುಕೊಳ್ಳುವುದಿಲ್ಲ ವಂತೆ, ತಾಯಿಯು ಕೂಡ ಮಗುವನ್ನು ಕರೆದುಕೊಳ್ಳುವುದಿಲ್ಲವಂತೆ. ಕಾರಣ ಯಾರಾದರೂ ಎತ್ತಿಕೊಳ್ಳಲು ಹೋದರೆ ಸೆಟವಿ ತಾಯಿ (ವಿಧಿಮುಂಡೆಯು) ಓಡಿ ಹೋಗುತ್ತಾಳೆ ಎನ್ನುವ ಭಯ. ಹಾಗಾಗಿ ರಾತ್ರಿಯೆಲ್ಲ ತೆರೆದ ಮನೆಯನ್ನು ತೆರೆದುಕೊಂಡೆ ಇರುವುದು ನಿಯಮ.

ಮಗು ಹುಟ್ಟಿ ಒಂಬತ್ತನೆಯ ದಿನಕ್ಕೆ ಬಾಣಂತಿಯನ್ನು ಗಂಗಾ ಪೂಜೆಗೆಂದು ಬಾವಿಗೋ, ಹಳ್ಳಕ್ಕೋ ಕರೆದುಕೊಂಡು ಹೋಗಿ ಪೂಜೆ ಮಾಡಿಕೊಂಡು ಬರುತ್ತಾರೆ. ನಂತರದ ದಿನದಿಂದ ಬಾಣಂತಿಯು ಹೆರಿಗೆಯ ಕೋಣೆಯಿಂದ ಮನೆಯಲ್ಲೆಲ್ಲಾ ಓಡಾಡಿಕೊಂಡು, ಮನೆಯ ಕೆಲಸ ಮಾಡಿಕೊಂಡು ಇರಬಹುದು. ಇನ್ನು ಹದಿನಾರನೆಯ ದಿನ ಅಥವಾ ತಿಂಗಳು ತುಂಬುವುದರೊಳಗೆ ಬಾಣಂತಿಯ ತವರು ಮನೆಯಲ್ಲಿಯೇ ಮಗುವಿಗೆ ನಾಮಕರಣ ಮಾಡುವುದು ರೂಢಿ. ಕಾರಣ ಈ ಕುಟುಂಬಕ್ಕೆ ಸಂಬಂಧಿಸಿದ ಎಲ್ಲಾ ಬಂಧುಬಳಗದವರು, ಅಕ್ಕಪಕ್ಕದವರು ಅಲ್ಲದೆ ಕೂಸಿನ ಅಪ್ಪನ ತಂಗಿ ಇಲ್ಲವೆ ಅಕ್ಕ ಯಾರಾದರೂ ಸರಿ ಮಗುವಿಗೆ ನಾಮಕರಣ ಮಾಡುತ್ತಾರೆ.

ಗರ್ಭಿಣಿ ಮಹಿಳೆಗೆ ಹೆರಿಗೆ ನೋವು ಬಂದಾಗ ಮನೆಯಲ್ಲಿ ಬಂಧು ಬಾಂಧವರು ಸೇರಿಕೊಂಡು ತಮ್ಮ ದೇವರುಗಳಾದ ಆಂಜನೇಯ, ಎಲ್ಲಮ್ಮ, ರೇಣುಕಮ್ಮ, ಮುರುಗಮ್ಮ, ಬಸವಣ್ಣ, ಸಿದ್ದೇಶ್ವರ, ಅಥಣಿ ಶಿವಯೋಗಿ, ಕಾಳಮ್ಮ, ಸಂಗಮೇಶ್ವರ, ಈಶ್ವರನಲ್ಲಿ ಅಥವಾ ಇತ್ಯಾದಿ ಕುಲದೇವತೆಗಳಲ್ಲಿ ಮೊರೆ ಇಡುತ್ತಾರೆ. ಅವ್ವಾತಾಯಿ, ಅಪ್ಪಾತಂದೆ ಮಗಳಿಗೆ ಸುರಕ್ಷಿತವಾಗಿ ಹೆರಿಗೆಯಾಗುವಂತೆ ಮಾಡು ಎಂದು ಪ್ರಾರ್ಥಿಸಿ ತಮ್ಮ ಇಷ್ಟ ದೈವದ ಅಧಾರ, ಕುಂಕುಮ (ಆಂದಾರ-ಭಸ್ಮ) ಹಣೆಗೆ ಹಚ್ಚಿ ತೀರ್ಥದ ನೀರು ಕುಡಿಯಲು ಕೊಡುತ್ತಾರೆ.

ಸೂಲಗಿತ್ತಿಯನ್ನು ಮನೆಗೆ ಕರೆದು ತಂದಿರುತ್ತಾರೆ. ಅನುಭವಸ್ಥ ಈ ಸೂಲಗಿತ್ತಿಯು ಗರ್ಭಿಣಿ ಮಹಿಳೆಗೆ ಹೆರಿಗೆಯನ್ನು ಮಾಡಿಸುತ್ತಾಳೆ. ತಾಯಿಯ ಗರ್ಭದಿಂದ ಮಗುವು ಹೊರಬಂದಾಗ

ಕುಡುಗೋಲಿನಿಂದ ಇಲ್ಲವೇ ಹೊಸ ಬ್ಲೇಡಿನಿಂದ ಹೊಕ್ಕಳು ಬಳ್ಳಿಯನ್ನು ಕತ್ತರಿಸಿ ಮಗುವನ್ನು ತಾಯಿಂದಿರಿಂದ ಬೇರ್ಪಡಿಸಿ ಹಳೆಯ ಚಾಪೆ ಅಥವಾ ಕೌದಿಯ ಮೇಲೆ ಹಾಕುವಳು. ಈ ಮೊದಲೇ ತರಿಸಿ ಇಟ್ಟಿದ್ದ ಮಡಿಕೆಯಲ್ಲಿ ಹೊಕ್ಕಳ ಬಳ್ಳಿ ಮಾಸವನ್ನು ಗಡಿಗೆಯಲ್ಲಿ ತುಂಬಿ ಮುಚ್ಚುಳ, ಮುಚ್ಚಿ ಗಡಿಗೆಯನ್ನು ಪೂಜೆಮಾಡಿ ಮನೆಯ ಅಂಗಳದಲ್ಲಿ ಗುಂಡಿ ತೋಡಿ ಅದರಲ್ಲಿ ಮುಚ್ಚುತ್ತಾರೆ. ಇಂದು ಬಹುತೇಕ ಆಸ್ಪತ್ರೆಗಳಲ್ಲಿ ಹೆರಿಗೆಯಾಗುತ್ತಿರುವ ಸಮಯದಲ್ಲಿಯೂ ಕೂಡ ಕರುಳ ಬಳ್ಳಿಯ ಮಾಸನ್ನು ಆಸ್ಪತ್ರೆಯಿಂದ ಮನೆಗೆ ತಂದು ಹೂಳಿಡುವುದು ರೂಢಿಯಲ್ಲಿದೆ. ಈ ಕಾರ್ಯ ಮುಗಿದ ನಂತರ ತಾಯಿಗೆ ಬಿಸಿನೀರಿನಿಂದ ಸ್ನಾನ ಮಾಡಿಸಿ ಶೀತವಾಗದಂತೆ ತಲೆಗೆ, ಕಿವಿಗೆ ಮುಚ್ಚಿಕೊಳ್ಳುವಂತೆ ಹಳೆ ಬಟ್ಟೆಗಳನ್ನು ಸುತ್ತಿಕಟ್ಟುತ್ತಾರೆ. ಮಗುವಿಗೂ ಸ್ನಾನ ಮಾಡಿಸಿ ಸ್ವಚ್ಛಗೊಳಿಸುತ್ತಾರೆ. ಗಂಡು ಮಗು ಹುಟ್ಟಿದರೆ ಹೊರಗೆ ಕಾದಿದ್ದವರಿಗೆ ಗೊತ್ತಾಗಲೆಂದು ಕಂಚಿನ ತಾಟು ಬಡಿಯುತ್ತಾರೆ. ಹೆಣ್ಣಾದರೆ, ಮೊರವನ್ನು ಬಾರಿಸುತ್ತಾರೆ. ಸ್ನಾನಮಾಡಿದ ಮಗುವನ್ನು ಮೊರದಲ್ಲಿ ತಂದು ಹಾಸಿಗೆಯಲ್ಲಿ ಅಥವಾ ತೊಟ್ಟಿಲ ಅಥವಾ ತಾಯಿಯ ಬಳಿ ಮಲಗಿಸುತ್ತಾರೆ.

ಹಿಂದಿನ ಕಾಲದಲ್ಲಿ ಮನೆಯಲ್ಲಿಯೇ ಕಾಡಿಗೆಯನ್ನು ತಯಾರಿಸಿ ಮಕ್ಕಳಿಗೆ ಹಚ್ಚುತ್ತಿದ್ದರಂತೆ, ಆದರೆ ಇಂದು ಈ ಸಮುದಾಯದವರು ಇತರರಂತೆ ಅಂಗಡಿಯಿಂದಲೇ ಕಾಡಿಗೆ ಡಬ್ಬಿಯನ್ನು ತಂದು, ಮಗುವಿಗೆ ದೃಷ್ಟಿ ತಾಕದಿರಲೆಂದು ಕಣ್ಣಿಗೆ, ಕೆನ್ನೆಗೆ, ಅಂಗೈ, ಅಂಗಾಲುಗಳಿಗೆ ಹಚ್ಚುವರು.

ಮಗುವು ಹುಟ್ಟಿದ ಎರಡು-ಮೂರು ದಿನಗಳ ಕಾಲ ತಾಯಿಯ ಹಾಲನ್ನು ಕುಡಿಸುತ್ತಿರಲಿಲ್ಲವಂತೆ, ಆದರೆ ಈಗ ಜನರು ಸುಧಾರಿಸಿರುವುದರಿಂದ ಮಗು ಹುಟ್ಟಿದ ಒಂದು ಘಂಟೆಯೊಳಗೆ ಹಾಲುಕುಡಿಸಲು ಪ್ರಾರಂಭಿಸುತ್ತಾರೆ. ಮೊದಲಿಗೆ ಜೇನು ತುಪ್ಪವನ್ನು ಬೆರಳಿನಿಂದ ಚೀಪಿಸುತ್ತಿದ್ದರಂತೆ. ಅಲ್ಲದೆ ಮಗುವನ್ನು ಐದು ತಿಂಗಳು ಇಲ್ಲವೇ ಒಂಬತ್ತು ತಿಂಗಳ ತನಕವು ಕೊಬ್ಬರಿ ಎಣ್ಣೆಯನ್ನು ಬಿಸಿಮಾಡಿ, ಮೈಗೆಲ್ಲ ಹಚ್ಚಿ, ತಿಕ್ಕಿ, ನೀವುತ್ತಾರೆ. ಎಣ್ಣೆಯಿಂದ ಚೆನ್ನಾಗಿ ನೀವಿದಾಗ ಮಗು ಅರಚಿದರು ಬಿಡುವುದಿಲ್ಲ. ಕೈ ಕಾಲುಗಳನ್ನು ಎಳೆದು ನೀವಿ, ಬೆನ್ನ ಮೇಲೆ ಉಜ್ಜಿ ನೀರು ಹಾಕುವರು. ಎಳೆಯ ಮಗುವಾಗಿದ್ದರೂ ಬಹಳಷ್ಟು ಬಿಸಿಯ ನೀರಿನಿಂದ ಸ್ನಾನ ಮಾಡಿಸುತ್ತಾರೆ. ಇದರಿಂದ ಮಕ್ಕಳ ಅವಯುವಗಳು ಚೆನ್ನಾಗಿ ಬೆಳೆದು ಬಲಿಯುತ್ತವೆ, ಬಲಿಷ್ಠಗೊಳ್ಳುತ್ತವೆ ಎನ್ನುವ ನಂಬಿಕೆಯಿದೆ. ಸ್ನಾನ ಮಾಡಿಸಿದ ನಂತರ ಮಗುವನ್ನು ಸೀರೆಯಿಂದ ತಯಾರಿಸಿದ ಜೋಳಿಗೆಯಲ್ಲಿ ಅಥವಾ ಹಗ್ಗದಿಂದ ಎರಡು ಕಂಬಗಳಿಗೆ ತೊಟ್ಟಿಲು ಕಟ್ಟಿ ಸೀರೆಯಿಂದ ತೊಟ್ಟಲು ತಯಾರಿಸಿ ಮಲಗಿಸುತ್ತಾರೆ. ಬಾಣಂತಿಗೂ ಕೂಡ ಬಹಳಷ್ಟು ಬಿಸಿನೀರಿನಿಂದ ದಿನಾಲು ನೀರೆರೆಯುತ್ತಾರೆ. ನೀರೆಯುವುದಕ್ಕೂ ಮುನ್ನ ಬಾಣಂತಿಗೆ ಬೇವು, ಅರಿಷಿಣವನ್ನು ನುಣ್ಣಗೆ ಅರೆದು ಮೈಗೆಲ್ಲ ಹಚ್ಚುತ್ತಾರೆ. ನೀರೆರೆದ ನಂತರ ಹೊರಸಿನ ಮೇಲೆ ಮಲಗಿಸಿ ಬೆಂಕಿ ಕಾಸುವುದು ರೂಢಿ. ಸೆಗಣಿಯ ಕುರುಳಿನಿಂದ ಬೆಂಕಿಯನ್ನು ಮಾಡಿ, ಅದರಲ್ಲಿ ಬೆಳ್ಳುಳ್ಳಿಯ ರವದಿಯನ್ನು ಹಾಕಿ, ಮೈಗೆಲ್ಲ ಕಾಯಿಸುವುದು ಕಂಡುಬರುತ್ತದೆ. ಇದರಿಂದ ಬಾಣಂತಿಗೆ ಸುಖದಾಯಕ ಹಾಗೂ ಆರೋಗ್ಯಕ್ಕೆ ಒಳ್ಳೆಯದು ಎನ್ನುವುದು ಇವರ ನಂಬಿಕೆ. ಹಾಗೆಯೇ ಆಹಾರ ಪದ್ಧತಿಯಲ್ಲಿಯೂ ಕಟ್ಟು ನಿಟ್ಟಿನ ಕ್ರಮವನ್ನು ಅನುಸರಿಸುತ್ತಾರೆ. ಪೌಷ್ಟಿಕ ಆಹಾರವನ್ನು ಕೊಡುತ್ತಾರೆ.

ನಾಮಕರಣ

ಅಥಣಿ ಪರಿಸರದ ವಾಲ್ಮೀಕಿ ಸಮುದಾಯದವರು ಮಗುವನ್ನು ತೊಟ್ಟಿಲೊಳಕ್ಕೆ ಹಾಕುವುದಕ್ಕೆ, ಹೆಸರಿಡುವುದು ಅಥವಾ ನಾಮಕರಣ ಎಂದು ಕರೆಯುತ್ತಾರೆ. ಮಗುವಿಗೆ ಮೂರು ತಿಂಗಳು ಇಲ್ಲವೇ ಐದನೇ ತಿಂಗಳಲ್ಲಿ ತವರು ಮನೆಯಿಂದ ಗಂಡನ ಮನೆಗೆ, ಮಗಳು, ಮೊಮ್ಮಗು ಜೊತೆಗೆ ತೊಟ್ಟಿಲು ಕೊಟ್ಟು ಕಳಿಸಿ ಕೊಡುತ್ತಾರೆ. ಹೀಗೆ ಕಳುಹಿಸುವಾಗ ತಾಯಿ ಮತ್ತು ಮಗುವಿಗೆ ಬಿಸಿನೀರಿನಲ್ಲಿ ಸ್ನಾನ ಮಾಡಿಸಿ, ಹೊಸ ಬಟ್ಟೆಯನ್ನು ತೊಡಿಸುತ್ತಾರೆ. ಇನ್ನೇನು ತೊಟ್ಟಿಲು ಕಳಿಸಬೇಕು ಎನ್ನುವುದಕ್ಕೆ ಪೂರ್ವ ದಿನಗಳಲ್ಲಿ ಮಗುವಿಗೆ ಮುರ ಚುಚ್ಚುವ ಪದ್ಧತಿ ಇದೆ. ಮಗುವಿಗೆ ಹಾಲುಗಡಗ, ಗೆಜ್ಜೆ, ಲಿಂಗದಕಾಯಿ, ಕೊರಳ ಚೈನು ಮುಂತಾದುವುಗಳನ್ನು ಉಡುಗೊರೆಯಾಗಿ ಕೊಟ್ಟು ಕಳಿಸುತ್ತಾರೆ. ಜೊತೆಗೆ ಸ್ಥಿತಿವಂತರು ಬೆಳ್ಳಿ ಬಟ್ಟಲು, ಚಮಚ ಕೊಡುತ್ತಾರೆ. ಸಾಮಾನ್ಯರು ಸ್ಟೀಲಿನ ಬಟ್ಟಲು, ಚಮಚ ಕೊಡುವುದು ರೂಢಿ. ಈ ಕಾರಣಕ್ಕಾಗಿಯೆ ತೊಟ್ಲು-ಬಟ್ಲು ಬಂದಾಳ ಎನ್ನುವ ಮಾತು ರೂಢಿಯಲ್ಲಿ ಬಂದಿದೆ. ಹೀಗೆ ಉಡಿಯಕ್ಕಿ ಹಾಕಿಕೊಂಡು ತೊಟ್ಟಿಲು ಹೊತ್ಕೊಂಡು ಗಂಡನ ಮನೆಗೆ ಮಗಳನ್ನು ಕರೆತಂದಾಗ, ಮೊದಲಿಗೆ ಯಾವುದಾದರೂ ತಮ್ಮ ಕುಲದೈವದ ದೇವಸ್ಥಾನದಲ್ಲಿ, ಬಹುತೇಕ ಜನ ಆಂಜನೇಯನ ಗುಡಿಯಲ್ಲಿ ಉಳಿಯುತ್ತಾರೆ. ಆಗ ಮಗುವಿನ ತಂದೆಯ ಮನೆಯವರು ಕಳಸ, ಕನ್ನಡಿಯನ್ನು ತಂದು ದೇವರಿಗೆ ಪೂಜೆ ಸಲ್ಲಿಸಿ ತೆಂಗಿನ ಕಾಯಿ ಒಡೆಸಿಕೊಂಡು ಮೆರವಣಿಗೆಯ ಮುಖಾಂತರ ಮನೆಗೆ ಕರೆತಂದು ಪೂಜೆಮಾಡಿ ಮನೆಯೊಳಗೆ ಕರೆದುಕೊಂಡು ಮನೆಯಲ್ಲಿ ದೇವರ ಎದುರಿಗೆ ಇಲ್ಲವೆ ಪಡಸಾಲೆಯಲ್ಲಿ ಹೆಸರಿಡುವ ಕಾರ್ಯಕ್ರಮವಿರುತ್ತದೆ.

ಇವರು ಹೆಚ್ಚಾಗಿ ತಮ್ಮ ಕುಲದೈವದ ಹೆಸರು ಇಡುವುದು, ಪದ್ಧತಿಯಾಗಿ ನಡೆದುಕೊಂಡು ಬಂದಿದೆ.

ಕುಲದೇವತೆಗಳ ಹೆಸರು	ಮಗುವಿನ ಹೆಸರು
ಆಂಜನೇಯ	ಹನುಮಂತ, ಹನುಮಕ್ಕ
ಯಲ್ಲಮ್ಮ	ಯಲ್ಲಮ್ಮ, ಯಲ್ಲಪ್ಪ
ರೇಣುಕಾ ದೇವಿ	ರೇಣುಕಾ
ಮುರುಗಮ್ಮ	ಮುರುಗಮ್ಮ, ಮುರುಗಪ್ಪ
ಲಕ್ಷ್ಮವ್ವ	ಲಕ್ಷ್ಮಿ, ಲಕ್ಷ್ಮಣ್ಣ
ದುರುಗವ್ವ	ದುರುಗಪ್ಪ, ದುರುಗುವ್ವ
ಶಿವಯೋಗಿ	ಯೋಗೀಶ ಶಿವು
ಮುರುಘೇಂದ್ರಸ್ವಾಮಿ	ಮುರುಗೇಶ

ಸಿದ್ದೇಶ್ವರ	ಸಿದ್ದು, ಸಿದ್ದಾರ್ಥ ಇತ್ಯಾದಿ

ಹೆಸರುಗಳನ್ನು ಇಡುತ್ತಾರೆ. ಅವರವರ ಮನೆ ದೇವರುಗಳ ಹೆಸರಿಡುವುದು ರೂಢಿ. ಹಾಗೆಯೇ ಮನೆಯಲ್ಲಿ ಹಿರಿಯರು ಸತ್ತಿದ್ದರೆ ಅವರ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ. ಅಲ್ಲದೆ ಇಂದು ಆಧುನಿಕತೆಯ ಪ್ರಭಾವದಿಂದಾಗಿ, ಸಿನಿಮಾ ನಟ-ನಟಿಯರ ಹೆಸರುಗಳನ್ನು ಇಡುವುದು ರೂಢಿಯಾಗಿ ಬಂದಿದೆ.

ಹೀಗೆ ಹೆಸರಿಡುವ ಸಂದರ್ಭದಲ್ಲಿ ಮನೆಯ ಪಡಸಾಲೆಯಲ್ಲಿ ತೊಟ್ಟಿಲನ್ನು ಕಟ್ಟಿ ಉತ್ತರ ದಿಕ್ಕಿಗೆ, ಇಲ್ಲವೆ ಪೂರ್ವದಿಕ್ಕಿಗೆ ಮಗುವನ್ನು ಮುಖ ಮಾಡಿಸಲು ಅನುಕೂಲ ಮಾಡಿರುತ್ತಾರೆ. ತೊಟ್ಟಲಿಗೆ ಹೂವು, ರೇಷ್ಮೆ ಸೀರೆಗಳಿಂದ ಅಲಂಕರಿಸಿ, ಬಗೆಬಗೆಯ ಹೂವುಗಳಿಂದ ಅಲಂಕರಿಸಿ, ಬಲೂನುಗಳನ್ನು ಕಟ್ಟಿ ಅಲಂಕಾರಿಸುತ್ತಾರೆ. ಆಗ ತಾಯಿಯನ್ನು ಕರೆದುಕೊಂಡು ಗಂಗಾಪೂಜೆ ಮಾಡಲು ಬಾವಿಗಳಿಗೆ, ಇಲ್ಲವೆ, ನಳಗಳ ಬಳಿ ಕರೆತಂದು, ಸಂಪ್ರದಾಯದಂತೆ ಕೊಡುವನ್ನು ತುಂಬಿ ಅಂಗನೂಲು, ಕಂಕಣ ಕಟ್ಟಿ ಶೃಂಗರಿಸಿ ತುಂಬಿದ ಕೊಡವನ್ನು ಅಥವಾ ಬಾವಿಯನ್ನು ಇಲ್ಲವೆ, ನಳವನ್ನು ಪೂಜಿಸಿ ನೈವೇದ್ಯ ಮಾಡಿ ಮುತ್ತೈದೆಯರೆಲ್ಲರೂ ಕಳಸ ಬೆಳಗಿ ಮಡಿಲೊಳಗೆ ಉಡಿ ಅಕ್ಕಿ ತುಂಬಿಕೊಂಡು, ಬಾಣಂತಿಗೂ ಉಡಿಅಕ್ಕಿ ತುಂಬಿ, ಕೊಡವನ್ನು ಹೊರಿಸಿಕೊಂಡು ಗಂಗಮ್ಮನನ್ನು ಒಳಗೆ ಕರೆದೊಯ್ದು ತುಂಬಿದ ಕೊಡವನ್ನು ತೊಟ್ಟಿಲು ಕೆಳಗೆ ಇರಿಸುತ್ತಾರೆ. ಒಂದು ಗುಂಡುಕಲ್ಲು ಸಹಿತ ತೊಟ್ಟಿಲಿನ ಕೆಳಗೆ ಇಲ್ಲವೆ ತೆಂಗಿನ ಕಾಯಿಯನ್ನು ಇಟ್ಟಿರುತ್ತಾರೆ. ಮಗುವಿಗೆ ಹೊಸಬಟ್ಟೆಯನ್ನು ತೊಡಿಸಿ, ತೊಟ್ಟಿಲಲ್ಲಿ ಮಲಗಿಸುತ್ತಾರೆ. ತೊಟ್ಟಿಲಿನ ನಾಲ್ಕು ಬದಿಯಲ್ಲಿಯು ಬಿಳಿಯ ದೋತಿ ಬಟ್ಟೆಯಲ್ಲಿ ಗುಗ್ಗರಿಯನ್ನು ಗಂಟುಕಟ್ಟಿ ಇಟ್ಟಿರುತ್ತಾರೆ. ಬಾಣಂತಿಯನ್ನು ತೊಟ್ಟಲಿನ ಪಕ್ಕಕ್ಕೆ ಕೂಡಿಸುತ್ತಾರೆ. ಮುತ್ತೈದೆಯರೆಲ್ಲರೂ ಕುಲದೇವರನ್ನು ತುಂಬಿದ ಕೊಡವನ್ನು ತೊಟ್ಟಲನ್ನು ಪೂಜೆಮಾಡುತ್ತಾರೆ.

ಮಗುವಿನ ಸೋದರತ್ತೆ ಅಂದರೆ ಅಪ್ಪನ ತಂಗಿಯರು ಇಲ್ಲವೆ ಅಕ್ಕಂದಿರು ಹೆಸರಿಡುವ ಪದ್ಧತಿ ಅಂದಿನಿಂದಲೂ ನಡೆದುಕೊಂಡು ಬಂದಿದೆ. ತೊಟ್ಟಿಲಲ್ಲಿ ಮಲಗಿಸಿದ ಮಗುವನ್ನು ಮುತ್ತೈದೆಯರು ಎತ್ತಿ ಈ ಬದಿಯಿಂದ ಆ ಬದಿಗೆ ಆ ಬದಿಯಿಂದ ಈ ಬದಿಗೆ ಐದು ಬಾರಿ ಎತ್ತಿ ಇಳಿಸಿ, ಪುನಃ ತೊಟ್ಟಿಲಿನಲ್ಲಿ ಹಾಕುತ್ತಾರೆ. ನಂತರ ಸೊದರತ್ತೆಯಿಂದ ಹೆಸರಿಡುವ ಕಾರ್ಯ ನಡೆಯುತ್ತದೆ. ಊರಿನ ಬಂಧು-ಬಳಗದವರು, ಹಿರಿಯರು ಎಲ್ಲರೂ ಅಲ್ಲಿ ಸೇರಿರುತ್ತಾರೆ. ಊರಿನ ಮುತ್ತೈದೆಯರು ಜೋಗುಳ ಹಾಡನ್ನು ಹಾಡುತ್ತಾರೆ.

ಸೋದರತ್ತೆಯು ಹೆಸರಿಡುವಾಗ, ಮುಂಚಿತವಾಗಿಯೇ ಅಣ್ಣನಲ್ಲಿ ಅಥವಾ ತಮ್ಮನಲ್ಲಿ ಅಂದರೆ ಕೂಸಿನ ತಂದೆಯನ್ನು ಕರೆದು ಬೇಡಿಕೆಯನ್ನಿಡುತ್ತಾಳೆ. ತಮಾಷೆಗಾಗಿ ತಂದೆಯನ್ನು ಕರೆದು ಬೇಡಿಕೆಯನ್ನು ನಮ್ಮ ಮಗನಿಗೆ, ಮಗಳನ್ನು ಅಥವಾ ನಿನ್ನ ಮಗನಿಗೆ ನನ್ನ ಮಗಳನ್ನು ತಂದುಕೊಳ್ಳಬೇಕು ಎಂದು ಕೇಳಿ ಕೊಳ್ಳುವುದರ ಜೊತೆಗೆ ಬಂಗಾರದ ಆಭರಣವನ್ನು ಕೇಳುವುದು ಕಂಡುಬರುತ್ತದೆ. ಹೀಗೆ ಹೆಸರನ್ನು ಮಗುವಿನ ಕಿವಿಯಲ್ಲಿ ಹೇಳುತ್ತಾಳೆ. ಆಗ ಆಕೆಯು ನಾಲ್ಕು ಬದಿಯಲ್ಲಿ ಇದ್ದಂತಹ ಗುಗ್ಗರಿ ಗಂಟನ್ನು ಬಾಯಲ್ಲಿ ಒಂದೊಂದಾಗಿ ಕಚ್ಚಿಕೊಂಡು ಒಂದೊಂದು ದೇವರ ಹೆಸರನ್ನು ಮಗುವಿಗೆ ಇಟ್ಟು ಹೊರ

ಹೊಸ್ತಿಲು ತನಕ ಹೋಗಿ ಬರಬೇಕು. ಮಗುವಿಗೆ ಹೆಸರಿಡುವಾಗ ಅಲ್ಲಿ ಸೇರಿದ ಮುತ್ತೈದೆಯರೆಲ್ಲ ತೊಟ್ಟಿಲು ತೂಗುತ್ತ, ಹೆಸರಿಡಲು ತೊಟ್ಟಿಲೊಳಗೆ ಬಾಗಿದ ಮಗುವಿನ ಅತ್ತೆಯ ಬೆನ್ನಿಗೆ ಗುದ್ದುವುದು ಸಂಪ್ರದಾಯವಾಗಿ ನಡೆದುಕೊಂಡು ಬಂದಿರುವುದು ತಿಳಿಯುತ್ತದೆ.

ನಾಮಕರಣದ ನಂತರ ಸೇರಿದವರೆಲ್ಲರೂ ಮಗುವಿಗೆ ಆಯರು ಮಾಡುತ್ತಾರೆ. ಬಾಣಂತಿಗೆ ಕಳಸಬೆಳಗಿ ಕುಪ್ಪಸದ ಕಣ ಕೊಡುತ್ತಾರೆ. ಅವರವರ ಅನುಕೂಲಕ್ಕೆ ತಕ್ಕ ಊಟದ ವ್ಯವಸ್ಥೆಯನ್ನು ಅಲ್ಲಿ ಮಾಡಿರುತ್ತಾರೆ.

ಐದು ತಿಂಗಳುಗಳ ಕಾಲ ತವರು ಮನೆಯಲ್ಲಿ ಬಾಣಂತಿತನವನ್ನು ಮಾಡಿದ ತಾಯಿಗೆ ಬಾಣಂತಿಯ ಗಂಡನ ಮನೆಯವರು ಸೀರೆಯನ್ನು ಉಡಿಸಿ ಉಡಿಯಕ್ಕಿ ಹಾಕಿ ಕಳಿಸುತ್ತಾರೆ. ಹಾಗೆಯೇ ತೊಟ್ಟಿಲು ಹೊತ್ತು ತಂದಂತಹ ಮಗುವಿನ ಸೋದರಮಾವನಿಗೆ ಬಟ್ಟೆ ಬರೆಯನ್ನು ಕೊಡುವುದು ಪದ್ಧತಿಯಾಗಿ ಬಂದಿದೆ. ನಾಮಕರಣ ಮಾಡಿದ ಸೋದರತ್ತೆಗೂ ಹೊಸ ಸೀರೆ ಉಡುಸಿ ಉಡಿಯಕ್ಕಿ ಹಾಕುತ್ತಾರೆ.

ಋತುಮತಿಯಾದ ಸಂದರ್ಭ

ಅಥಣಿ ಪರಿಸರದಲ್ಲಿ ವಾಲ್ಮೀಕಿ ಸಮುದಾಯದಲ್ಲಿ ಬಾಲಕಿಯು ಋತುಮತಿಯಾದರೆ ಅಥವಾ ಮೈನೆರೆದಂತಹ ಸಂದರ್ಭದಲ್ಲಿ ಆಕೆಯನ್ನು ವಾಸಸ್ಥಾನದಿಂದ ಪ್ರತ್ಯೇಕಿಸಲಾಗುತ್ತದೆ. ಮನೆಯ ಆಯದ ಹೊರಗೆ ಹಳೆಯ ಮರದ ಹಲಗೆಯ ಮೇಲೆ ಆಕೆಯನ್ನು ಕುಳ್ಳಿರಿಸುವುದು ಇನ್ನೂ ರೂಢಿಯಲ್ಲಿದೆ. ಮೈನೆರೆದಂದಿನಿಂದ ಸ್ನಾನದವರೆಗೂ ಅಂದರೆ ಐದು ದಿನಗಳವರೆಗೆ ಆಕೆಗೆ ಸಂಕ್ರಮಣದ ಕಾಲಾವಧಿ. ಈ ಕಾಲಾವಧಿಯಲ್ಲಿ ಆಕೆಯ ಅಪ್ಪನ ತಂಗಿಯೋ ಅಥವಾ ಅಕ್ಕ ಯಾರಾದರೂ ಸರಿ ದಿನಾಲು ಅರಿಷಿಣ ಹಚ್ಚಿ, ತಲೆಗೆ ತುಪ್ಪ-ಹಾಲು ಹಾಕಿ ಬಿಸಿನೀರಿನ ಸ್ನಾನ ಮಾಡಿಸುತ್ತಾರೆ. ಈ ಸಂದರ್ಭದಲ್ಲಿ ಆಕೆಗೆ ವಿಶಿಷ್ಟ ಆಹಾರ ಕೊಡುತ್ತಾರೆ. ಕೆಲವು ವಿಧಿ-ನಿಷಿದ್ಧಗಳು ಆಕೆಗೆ ಇರುತ್ತವೆ. ಐದನೆಯ ದಿನ ಅಥವಾ ಒಂಬತ್ತನೆಯ ದಿನ ಸಮುದಾಯದ ಮುತ್ತೈದೆಯರೆಲ್ಲರೂ ನೀರು ಹಾಕಿ ಸ್ನಾನ ಮಾಡಿಸಿ, ಗಂಗಾಪೂಜೆ ಮಾಡಿಸಿ ಹೊಸ್ತಿಲು ಬರುವಿಕೆ ಅಂದರೆ ಮನೆಯಲ್ಲಿ ಪ್ರವೇಶ ಕಲ್ಪಿಸುತ್ತಾರೆ. ನಂತರ ದೇವಸ್ಥಾನದ ಬೇಟಿಯ ಮೂಲಕ ಆಕೆಯನ್ನು ಸಮಾಜದೊಳಗೆ ಕರೆತರುವುದು ಒಂದು ಪದ್ಧತಿಯಾಗಿ ನಡೆದು ಬಂದಿದೆ. ನಂತರದ ಹದಿನಾರನೆಯ ದಿನದವರೆಗೂ ಆಕೆಯನ್ನು ಶೃಂಗರಿಸಿ ಕೂಡಿಸಿ, ಮುತ್ತೈದೆಯರೆಲ್ಲ ಆರತಿ ಮಾಡುತ್ತಾರೆ. ವಿಶೇಷವೆಂದರೆ, ಅಥಣಿ ಪರಿಸರದ ವಾಲ್ಮೀಕಿ ಸಮುದಾಯದಲ್ಲಿ ಹೆಣ್ಣು ಮಗುವಿಗೆ ಬಹಳಷ್ಟು ಮಟ್ಟಿಗೆ ಮೈ ನೆರೆಯುವುದಕ್ಕೆ ಮುನ್ನವೆ ಮದುವೆಯನ್ನು ಮಾಡುವುದು. ಹೀಗೆ ಮದುವೆಯಾದ ನಂತರ ಮೈನೆರೆದರೆ ಒಂಬತ್ತು ಅಥವಾ ಹದಿನಾರನೆಯ ದಿನದವರೆಗೂ ಆಕೆಯ ಜೊತೆಗೆ ಆಕೆಯ ಗಂಡನನ್ನು ಕೂಡ್ರಿಸಿ ಆರತಿ ಮಾಡುವುದುಂಟು. ೨೧ನೆಯ ಶತಮಾನದ ಈ ಸಂದರ್ಭದಲ್ಲಿ ಸಮುದಾಯದ ಜನರಿಗೆ ಕಾನೂನಿನ ಅರಿವು ಉಂಟಾಗಿ ಸ್ವಲ್ಪ ಮಟ್ಟಿಗೆ ಹೆಣ್ಣುಮಕ್ಕಳಿಗೆ ಮದುವೆಯನ್ನು ಸ್ವಲ್ಪ ತಡಮಾಡಿ ಮಾಡುತ್ತಾರಾದರೂ ಬಹಳಷ್ಟು ಕುಟುಂಬಗಳಲ್ಲಿ ಇನ್ನೂ ಬಾಲವಿವಾಹದಂತಹ ವಿವಾಹಪದ್ಧತಿಯು ಉಳಿದುಕೊಂಡು ಬಂದಿದೆ. ಹೀಗೆ ಆರತಿಯನ್ನು ಮಾಡಿದುದರ ಜೊತೆಗೆ ಆಕೆಗೆ ಆಯರು (ಮುಯ್ಯಿ) ಮಾಡುವುದುಂಟು.

ಅತ್ತೆಯಾದವರು ಹಸಿರು ಬಳೆ ತೊಡಿಸಿ ಸೀರೆ ಕುಪ್ಪಸವನ್ನು ಆಯರುಮಾಡುತ್ತಾರೆ. ಹಾಗೆಯೇ ಮೊದಲ ನೀರನ್ನು ಹಾಕಿದ ಅತ್ತೆಗೂ ಅರಿವೆಯನ್ನು ಉಡುಗೊರೆಯಾಗಿ ಕೊಡುತ್ತಾರೆ. ಬಾಲೆಯು ಕನ್ನೆಯಾಗುವ ಪ್ರಕ್ರಿಯೆಯನ್ನು ಬುಡಕಟ್ಟು ಸಮುದಾಯಗಳು ಬಹಳ ಸಂಭ್ರಮದಿಂದ ಎದುರುಗೊಳ್ಳುತ್ತವೆ. ಪ್ರತಿಯೊಂದು ಸಮುದಾಯಗಳಲ್ಲಿಯೂ ವಿಭಿನ್ನ ರೀತಿಯಲ್ಲಿ ಆಚರಣೆಯು ರೂಢಿಯಾಗಿ ಕಂಡುಬರುತ್ತದೆ.

ಅಥಣಿ ಪರಿಸರದ ವಾಲ್ಮೀಕಿ ಸಮುದಾಯದಲ್ಲಿ ಬಾಲೆಯು ಮೈನೆರೆದ ದಿನವನ್ನು ನೋಡಿ, ಸಮಯವನ್ನು ಗೊತ್ತು ಮಾಡಿಕೊಂಡು, ಜೋತಿಷಿಗಳ ಬಳಿಹೋಗಿ ಹೊತ್ತಿಗೆಯನ್ನು ತೆಗೆಸುತ್ತಾರೆ. ಯಾರ ಹೆಸರಿನಿಂದ ಮೊದಲು ಹುಡುಗಿಗೆ ನೀರು ಹಾಕಬೇಕು, ಎಷ್ಟನೇ ದಿನ ಎಬ್ಬಿಸುವ ಕ್ರಿಯೆ ಮಾಡಬೇಕು. ಅಥವಾ ದೋಷವೇನಾದರೂ ಬಂದಿದೆಯಾ ಎಂದು ಕೇಳಿಕೊಂಡು ಬಂದಿರುತ್ತಾರೆ. ಹುಡುಗಿಯ ಸೋದರತ್ತೆ, ಇಲ್ಲವೆ ತಾಯಿಯ ಅಕ್ಕ, ತಂಗಿಯರು ಪ್ರತಿದಿನ ನೀರು ಹಾಕಿ ಅರಿಷಿಣ ಹಚ್ಚಿ ಸ್ನಾನ ಮಾಡಿಸುತ್ತಾರೆ. ಪ್ರತಿದಿನ ಸಂಜೆ ಹೂ ಮುಡಿಸಿ ಆರತಿ ಮಾಡುತ್ತಾರೆ.

ಒಂಬತ್ತನೆಯ ದಿನ ಹುಡುಗಿಗೆ ಗಂಗೆಯ ಪೂಜೆಯಾದ ಮೇಲೆ ಎಬ್ಬಿಸುವ ದಿನದ ತನಕ ಅಂದರೆ ೧೬ ದಿನ ಇಲ್ಲವೆ ೨೧ ದಿನಗಳವರೆಗೆ ವಿವಿಧ ರೀತಿಯಲ್ಲಿ ಶೃಂಗರಿಸಿ, ವೇಷ-ಭೂಷಣಗಳಿಂದ ಅಲಂಕರಿಸಿ ಕೂಡಿಸಿ ಆರತಿ ಮಾಡುತ್ತಾರೆ. ತಲೆಯ ಮೇಲೆ ದಂಡಿಹಾಕಿ, ಹೂವಿನ ಮಾಲೆಯನ್ನು ಹಾಕಿರುತ್ತಾರೆ. ಜೊತೆಯಲ್ಲಿ ಇನ್ನು ಎರಡು ಕಿರಿಯ ವಯಸ್ಸಿನ ಮಕ್ಕಳನ್ನು ಅಲಂಕರಿಸಿ ಕೂಡಿಸುವ ಆಚರಣೆಯು ಕೆಲವು ಕುಟುಂಬಗಳಲ್ಲಿ ಅದ್ದೂರಿಯಾಗಿ ನಡೆಯುತ್ತದೆ. ಮನೆಯ ಮುಂದೆ ಮಂಟಪ ಹಾಕಿ, ಶಾಮಿಯಾನ ಹಾಕಿ, ಕಿಂಗ್ ಚೇರ್ ತರಿಸಿ ಅಲಂಕಾರಗೊಂಡ, ಮೈನೆರದ ಹುಡುಗಿಯನ್ನು ವೇದಿಕೆಯಲ್ಲಿ ಚೇರಿನ ಮೇಲೆ ಕೂಡಿಸುತ್ತಾರೆ. ಸೊದರತ್ತೆಯವರು, ಸೋದರ ಮಾವನವರು, ಬಂಧು-ಬಳಗದವರು ಮುಯ್ಯಿಯನ್ನು ಮಾಡುತ್ತಾರೆ. ಅವುಗಳಲ್ಲಿ ದುಡ್ಡು, ಒಡವೆಗಳು, ಹೊಸಬಟ್ಟೆ, ಬೆಳ್ಳಿ-ಬಂಗಾರದ ಸಾಮಾನುಗಳು ಸೇರಿರುತ್ತವೆ. ನಂತರ ಎಲ್ಲರೂ ಸೇರಿ ಕಾರ್ಯಕ್ರಮ ಮುಗಿದ ಮೇಲೆ ಊಟಮಾಡುತ್ತಾರೆ. ಇಲ್ಲಿ ಸಿಹಿ ಅಡುಗೆಯೇ ಪ್ರಮುಖ ಪಾತ್ರವಹಿಸುತ್ತದೆ.

ಈ ಎಲ್ಲಾ ಕಾರ್ಯಕ್ರಮ ಮುಗಿದ ಮೇಲೆ ಹುಡುಗಿಯನ್ನು ಊರಿನ ಆಂಜನೇಯನ ಗುಡಿಗೆ ಕರೆದುಕೊಂಡು ಹೋಗಿ ಬರುತ್ತಾರೆ. ನಂತರ ಹುಡುಗಿಗೆ ಋತುಮತಿಯಾದಾಗ ದೋಷವೇನಾದರೂ ಬಂದಿದ್ದರೆ ಬ್ರಾಹ್ಮಣರಿಗೆ ನವಧಾನ್ಯಗಳನ್ನು, ಬಣ್ಣ-ಬಣ್ಣದ ಕುಪ್ಪಸದ ಬಟ್ಟೆಯಲ್ಲಿ ಕಟ್ಟಿ, ದಾನವಾಗಿ ಕೊಡುತ್ತಾರೆ. ಇಲ್ಲವೇ ಬೆಳ್ಳಿ-ಬಂಗಾರದ ಆಕಳು ಮೂರ್ತಿಯನ್ನು, ತೆಂಗಿನಕಾಯಿ, ಕುಪ್ಪಸದ ಕಣವನ್ನು ದಾನವಾಗಿ ಕೊಡುತ್ತಾರೆ. ಇದರಿಂದ ದೋಷ ವಿಮುಕ್ತಿಯಾಯಿತು ಎಂದು ಭಾವಿಸುತ್ತಾರೆ. ಋತುಮತಿಯಾದ ಹುಡುಗಿಗೂ ಮತ್ತು ಆ ಮನೆಗೂ ಕೆಲವು ನಿಷಿದ್ಧಗಳು ಇರುತ್ತವೆ. ಬಾಲೆಯು ಋತುಮತಿಯಾದ ಮನೆಗೆ ಸೂತಕ ಬಂದಿರುತ್ತದೆ. ಆಗ ಯಾವ ಅಕ್ಕ-ಪಕ್ಕದ ಮನೆಯವರು ಪ್ರವೇಶ ಮಾಡುವುದಿಲ್ಲ. ಹಾಗೆಯೇ ಈ ಮನೆಯವರು ಕೂಡ ಯಾರು ಮನೆಗೂ ಹೋಗುವಂತಿಲ್ಲ. ಮೈನೆರೆದ ಹುಡುಗಿಗೆ

ಒಂಬತ್ತು ದಿನಗಳ ಕಾಲ ಸಿಹಿ ಅಡುಗೆಯನ್ನು ಊಟಕ್ಕೆ ಕೊಡುತ್ತಾರೆ. ಕೊಬ್ಬರಿ ಕಾರಿಕ ಬೆಲ್ಲದಿಂದ ಮಾಡಿದ ಅಂಟಿನ ಉಂಡೆ ಇದ್ದೆ ಇರುತ್ತದೆ. ಖಾರದ ಪದಾರ್ಥವನ್ನು ತಿನ್ನುವಂತಿಲ್ಲ. ಮನೆಯ ಹೊರಗಡೆ ಒಂದು ಚಪ್ಪರದಲ್ಲಿ ಇರುವ ಬಾಲೆಯನ್ನು ೫ ದಿನಗಳ ನಂತರ ನೀರು ಹಾಕಿ ಶುಚಿಗೊಳಿಸಿ ಮನೆಯ ಒಳಗಡೆ ಕರೆದು ತರುತ್ತಾರೆ. ಆದರೂ ದೇವರ ಮನೆಗೆ ಪ್ರವೇಶವಿರುವುದಿಲ್ಲ. ಒಂದು ಕೋಣೆಯಲ್ಲಿಯೇ ಕೂಡಿಸಿರುತ್ತಾರೆ. ಮೈನೆರೆದ ಬಾಲಕಿಗೆ ಪ್ರತ್ಯೇಕ ತಂಬಿಗೆ ತಾಟುಗಳನ್ನು ಇಟ್ಟಿರುತ್ತಾರೆ. ಅವುಗಳನ್ನು ಆಕೆ ಊಟದ ಸಮಯದಲ್ಲಿ ಬಳಸಬೇಕು. ಅಲ್ಲದೆ ಒಂಬತ್ತು ದಿನಗಳ ಕಾಲ ಅಗಸರು ಆಕೆಗೆ ಹಳೆಯ ಬಟ್ಟೆಗಳನ್ನು ಕೊಡುತ್ತಾರೆ. ಮನೆಯಲ್ಲಿನ ಬಟ್ಟೆಗಳನ್ನು ಧರಿಸುವಂತಿಲ್ಲ.

ಇತ್ತೀಚೆಗೆ ಸುಧಾರಿಸುತ್ತಿರುವುದರಿಂದ ಮೈನೆರೆದ ಹುಡುಗಿಯನ್ನು ಮನೆಯ ಹೊರಗಡೆ ಚಪ್ಪರ ಹಾಕಿ ಮರದ ಹಲಗೆಯ ಮೇಲೆ ಕೂಡಿಸುವುದು ಕಡಿಮೆಯಾಗಿದ್ದು, ಮನೆಯ ಒಂದು ಪ್ರತ್ಯೇಕ ಸ್ಥಳದಲ್ಲಿಯೇ ಕೂಡಿಸುತ್ತಾರೆ. ಆಗಸರು ಕೊಡುವಂತಹ ಬಟ್ಟೆಯನ್ನೇ ಧರಿಸುವುದು ಸ್ವಲ್ಪ ಕಡಿಮೆಯಾಗಿದೆ. ಹೀಗೆ ಮನೆಯನ್ನು ಸಾರಿಸಿ, ಸುಣ್ಣ-ಬಣ್ಣ ಹಚ್ಚುವುದರ ಮುಖಾಂತರ ಎಲ್ಲಾ ಕಾರ್ಯಕ್ರಮಗಳು ಮುಗಿಯುವ ವೇಳೆಗೆ ಆ ಮನೆಯ ಸೂತಕ ಬಿಡುತ್ತದೆ ಎಂದು ಭಾವಿಸುತ್ತಾರೆ.

ಮದುವೆ ಸಂದರ್ಭ

ಸಂಸ್ಕೃತಿಯೊಂದರ ಕನಿಷ್ಟತಮ ಘಟಕಗಳೆಂದರೆ ಗಂಡು ಮತ್ತು ಹೆಣ್ಣು. ಈ ಮೂಲಭೂತ ಸಾಂಸ್ಕೃತಿಕ ಘಟಕಗಳು ಪರಸ್ಪರ ವಿರುದ್ಧವಾದ ಮತ್ತು ಪೂರಕವಾದ ದೇಹ ರಚನೆ ಮತ್ತು ಸ್ವಭಾವಗಳನ್ನು ಹೊಂದಿದ್ದು, ಒಂದು ಬಗೆಯ ಸಮನ್ವಯತೆಯನ್ನು ಜೀವನದುದ್ದಕ್ಕೂ ಕಾಲಾಂತರದಿಂದಲೂ ಕಾಪಾಡಿಕೊಂಡು ಬರುತ್ತವೆ. ಮದುವೆ ಮತ್ತು ಸಂಸಾರದ ಮೂಲಕ ಈ ಘಟಕಗಳು ವಿಸ್ತರಣೆ ಹೊಂದುತ್ತವೆ. ಮದುವೆ ಎನ್ನುವುದು ಕೇವಲ ಲೈಂಗಿಕ ಕ್ರಿಯೆಗೆ ಮಾತ್ರ ಸೀಮಿತವಾಗಿರದೆ ಅದು ತನ್ನ ಇಡೀ ಸಮುದಾಯದ ವಂಶವನ್ನು ಭವಿಷ್ಯದ ಗಮನಕ್ಕೆ ಒಯ್ಯುವ ಮಹತ್ವದ ಬಾಂಧವ್ಯ ಆಗಿರುತ್ತದೆ. ಈ ಪ್ರಕೃತಿಯಲ್ಲಿರುವ ಜೀವಸಂಕುಲ, ಮರಗಿಡಗಳೇ ಆಗಲಿ ತಾವು ಅಳಿಯುವ ಮುನ್ನ ಈ ಪ್ರಕೃತಿಗೆ ತಮ್ಮ ಕೊಡುಗೆಯನ್ನು ಕೊಟ್ಟು ಋಣ ಮುಕ್ತವಾಗುವವು. ಹೀಗೆ ಮನುಷ್ಯನು ಸಹ ತನ್ನ ನಂತರ ಈ ಪ್ರಕೃತಿಯಲ್ಲಿ ತನ್ನ ಚಹರೆಯನ್ನು ತನ್ನ ಸಂತಾನೋತ್ಪತ್ತಿಯ ಮೂಲಕ ಬಿಟ್ಟು ಹೋಗಿರುತ್ತಾನೆ. ಹೀಗೆ ಪ್ರತಿಯೊಂದು ಜೀವರಾಶಿಯು ಸಮತೋಲನವನ್ನು ಕಾಯ್ದುಕೊಳ್ಳುವ ಕ್ರಿಯೆಯು ಈ ಪ್ರಕೃತಿಯಲ್ಲಿ ಸಹಜವಾದುದು. ಈ ರೀತಿಯಾಗಿ ಸೃಷ್ಟಿ ಕ್ರಿಯೆಯಲ್ಲಿ ವ್ಯಕ್ತಿಯ ಆಸೆ, ಆಕಾಂಕ್ಷೆ ಅಥವಾ ಲೈಂಗಿಕ ತೃಪ್ತಿ ಮಾತ್ರ ಅಡಕವಾಗಿರದೇ ಈ ಮದುವೆ ಎನ್ನುವ ಬಂಧನದ ಮೂಲಕ ತನ್ನದೇ ಆದ ಮಹತ್ವವನ್ನು ಪಡೆಯುತ್ತದೆ.

ಮೊದಲಿಗೆ ಮದುವೆಯ ಸಂದರ್ಭದಲ್ಲಿ ಮದುವೆಯು ನಡೆಯುವ ಮನೆಯನ್ನು ಬಹಳಷ್ಟು ಸುಂದರವಾಗಿ ಅಲಂಕರಿಸಲಾಗುತ್ತದೆ. ಮನೆಯ ಮುಂದೆ ತೆಂಗಿನಗರಿಯಿಂದ ಹಂದ್ರಹಾಕಿ ಹಸಿರು ಕಂಬ, ಹಾಲುಗಂಬ ಕಟ್ಟಿ, ಹಂದ್ರದ ಗೂಟಗಳನ್ನು ಪೂಜಿಸುತ್ತಾರೆ. ಮಾವಿನ ಎಲೆ ತೋರಣ ಕಟ್ಟಿರುತ್ತಾರೆ.

ಮನೆಯ ಹೆಬ್ಬಾಗಿಲಿನ ಎರಡು ಬದಿಯ ಗೋಡೆಗಳನ್ನು ಸುಣ್ಣ ಮತ್ತು ಕೆಮ್ಮಣ್ಣಿನಿಂದ ರಂಗೋಲಿ ಹಾಕುವುದರ ಮುಖಾಂತರ ಸೂರ್ಯ ಮತ್ತು ಚಂದ್ರನ ಚಿತ್ರಗಳನ್ನು ಬಿಡಿಸಿ ಅಲಂಕರಿಸುತ್ತಾರೆ. ಹಾಗೆಯೇ ಮದುಮಕ್ಕಳು ಕುಳಿತು ಕೊಳ್ಳುವ ಚೌಕಟ್ಟಿಯ ಸುತ್ತಲು ಸುಣ್ಣ ಕೆಮ್ಮಣ್ಣಿನಿಂದ ಚಿತ್ರ ತೆಗೆಯಲಾಗಿರುತ್ತದೆ.

ಹಂದ್ರದ ಕೆಳಗೆ ನೆಲಕ್ಕೆ ಸೆಗಣಿಯಿಂದ ಸಾರಿಸಿ ರಂಗೋಲಿಯನ್ನು ಹಾಕಿ ಬಣ್ಣಗಳನ್ನು ತುಂಬಿರುವುದು ಕಂಡುಬರುತ್ತದೆ. ಮದುವೆ ನಡೆಯುವ ಮನೆಯ ಬಾಗಿಲುಗಳಿಗೆ ಹಸಿರು ತೋರಣ ಕಟ್ಟಿ, ಕಸೂತಿ ಹಾಕಿದ ಬಾಗಿಲು ಪರದೆಗಳನ್ನು ನೇತು ಹಾಕಿರುತ್ತಾರೆ.

ಒಂದಕ್ಕೆ ಭಾರತೀಯ ಪರಂಪರೆಯ ಹಿನ್ನೆಲೆಯಲ್ಲಿ, ನಮ್ಮ ಯಾವುದೇ ಸಮುದಾಯಗಳು ಮದುವೆ ಎನ್ನುವ ಶುಭಕಾರ್ಯದಲ್ಲಿ ಐದು ದಿನಗಳ ಕಾಲ ಬಹಳಷ್ಟು ವಿಜೃಂಭಣೆಯಿಂದ ಆಚರಿಸುತ್ತಿದ್ದವು. ಈಗಲೂ ಕೆಲ ಸಮುದಾಯಗಳು, ಕೆಲವರ್ಗದವರು ಈ ರೀತಿಯ ಐದು ದಿನಗಳ ಕಾಲ ಸಂಪ್ರದಾಯದಂತೆ ಶಾಸ್ತ್ರೋಕ್ತವಾಗಿ ಮದುವೆಯನ್ನು ಮಾಡುತ್ತಾರೆ. ಹಾಗೆಯೇ ಸಮಯದ ಅಭಾವವನ್ನು ಅನುಭವಿಸುತ್ತಿರುವ ಈ ಸಂದರ್ಭದಲ್ಲಿ ಹಲ-ಕೆಲವು ವಿವಾಹಗಳು ಒಂದೇ ದಿನದಲ್ಲಿ ಮುಗಿದು ಬಿಡುತ್ತವೆ. ಅಲ್ಲದೆ ಅಥಣಿ ಪರಿಸರದಲ್ಲಿ ಯಾವುದೇ ಸಮುದಾಯವಾದರೂ ಸರಿ, ಮದುವೆಯ ವಿಷಯದಲ್ಲಿ ಬಹಳಷ್ಟು ಸರಳತೆಯನ್ನು, ಸರಳತೆಯ ವಿಧಾನವನ್ನು ಕಂಡುಕೊಂಡಿದೆ. ಅಂದರೆ "ಯಾದಿಮೆ ಶ್ಯಾದಿ" ಎನ್ನುವ ಪದ್ಧತಿ. ಇದು ಮರಾಠಿ ಮೂಲದ್ದೆಂದು ತಿಳಿಯುತ್ತಿದ್ದರೂ ಇವತ್ತಿನ ಈ ವೇಗದ ಸಂದರ್ಭದಲ್ಲಿ ಯಾವ ಸಮುದಾಯವಾದರೂ ಅನುಸರಿಸುವುದು ಸೂಕ್ತ ಎನಿಸುತ್ತದೆ. ಅಂತೆಯೇ ಖರ್ಚು ಕಡಿಮೆ. ಬಂಧು-ಬಳಗದವರ ನಿರೀಕ್ಷೆ ಇಲ್ಲಿ ಇರುವುದಿಲ್ಲ. ಯಾರು ಬಂದರೂ ಸರಿಯೇ ಬರದಿದ್ದರೂ ಸರಿಯೇ. ಒಂದುವೇಳೆ ಹತ್ತಿರದ ಸಂಬಂಧಿಕರು ನಮ್ಮನ್ನು ಮದುವೆಗೆ ಕರೆಯಲೇ ಇಲ್ಲವೆಂದು ಕೇಳಿದರೆ ಸುಲಭವಾಗಿ ಜಾರಿಕೊಳ್ಳಬಹುದು, ಕ್ಷಮಿಸಿ ಇದ್ದಕ್ಕಿದಂತೆ 'ಯಾದಿಮೆ ಶ್ಯಾದಿ'ಯಾಗಿ ಹೋಯ್ತು ಎಂದು ಹೇಳಿದರೆ ಅದೆಷ್ಟೋ ಸಮಾಧಾನ ಕೇಳುಗರಿಗೆ. ಒಂದಿಷ್ಟು ಕೋಪವಿಲ್ಲ, ಮನಸ್ಸಿನಲ್ಲಿ ಎರಡಿಲ್ಲ. ಅಂದಹಾಗೆ ಈ ಎರಡು ರೀತಿಯ ವಿವಾಹದ ಸಂದರ್ಭಗಳು ವಾಲ್ಮೀಕಿ ಸಮುದಾಯದಲ್ಲಿ ಜಾರಿಯಲ್ಲಿರುವುದು ಕಂಡುಬರುತ್ತದೆ.

ಮದುವೆಯ ಸಂದರ್ಭದಲ್ಲಿ ಈ ಸಮುದಾಯದಲ್ಲಿ ಕೆಲವು ವಿಧಿ-ನಿಷೇಧಗಳು ಇವೆ. ಅವುಗಳೆಂದರೆ ಇವರಲ್ಲಿ ೧೪ರಿಂದ ೨೦-೨೫ರ ತನಕ ಬೆಡಗುಗಳು ಕಂಡುಬರುತ್ತಿದ್ದು, ಒಂದೇ ಬೆಡಗು ಇರುವಲ್ಲಿ ವಿವಾಹ ನೆಡೆಯುವುದಿಲ್ಲ. ವಿಭಿನ್ನ ಬೆಡಗುಗಳಿಗೆ ವೈವಾಹಿಕ ಸಂಬಂಧವೇರ್ಪಡುತ್ತದೆ. ಒಂದೇ ಬೆಡಗಿನವರು ಅಣ್ಣ-ತಮ್ಮಂದಿರಾಗುತ್ತಾರಂತೆ. ಅಲ್ಲದೆ ಸೋದರ-ಸೋದರಿಯರೊಂದಿಗೆ, ಚಿಕ್ಕಪ್ಪ ಚಿಕ್ಕಮ್ಮ ಹಾಗೂ ದೊಡ್ಡಪ್ಪ-ದೊಡ್ಡಮ್ಮರ ಮಕ್ಕಳೊಂದಿಗೂ ವಿವಾಹ ಸಂಭವಿಸುವುದಿಲ್ಲ. ಹಾಗೆಯೇ ಅಣ್ಣನ ಹೆಂಡತಿ ವಿಧವೆಯಾಗಿದ್ದರೂ ಮೈದುನ ಆಕೆಯ ಮದುವೆಯಾಗುವಂತಿಲ್ಲ. ಅತ್ತಿಗೆ ತಾಯಿಯ ಸಮಾನ ಎಂದು ನಂಬಿಕೊಂಡು ಬಂದಿದ್ದಾರೆ. ಸೋದರತ್ತೆ-ಸೋದರ ಮಾವನವರ ಮಕ್ಕಳೊಂದಿಗೂ ಅಕ್ಕನ ಮಗಳೊಂದಿಗೂ ಮದುವೆ ನಡೆಯುತ್ತದೆ.

ಒಂದು ಸಂದರ್ಭದಲ್ಲಿ ಈ ಸಮುದಾಯದಲ್ಲಿ ಹುಡುಗ ಅಥವಾ ಹುಡುಗಿ ಪರಸ್ಪರ ನೋಡುತ್ತಿರಲಿಲ್ಲ. ಹಿರಿಯರೆ ನೋಡಿಕೊಂಡು ಬಂದು ಒಪ್ಪಿಗೆಯಿದ್ದರೆ ಮದುವೆ ನಡೆಯುತ್ತಿತ್ತು. ಇಂತಹ ಸಂದರ್ಭದಲ್ಲಿ ಎಷ್ಟೋ ಮದುವೆಗಳು ಗಂಡ-ಹೆಂಡರ ಹೊಂದಾಣಿಕೆ ಕೊರತೆ, ಅಭಿರುಚಿಯ ಕೊರತೆಯುಂಟಾಗಿ ಮುರಿದು ಬಿದ್ದಿರುವ ಉದಾಹರಣೆಗಳು ಈ ಸಮುದಾಯದಲ್ಲಿ ಕಂಡುಬರುವುದರಿಂದ, ಇಂದು ಹುಡುಗ-ಹುಡುಗಿ ಪರಸ್ಪರ ನೋಡಿಯಾದ ಮೇಲೆ ಒಪ್ಪಿಗೆ ಪಡೆದು ಮದುವೆ ಮಾಡುವ ಪದ್ಧತಿ ನಡೆದುಕೊಂಡು ಬಂದಿದೆ.

ಮೊದಲಿಗೆ ಐದು ದಿನಗಳ ಮದುವೆಯ ಸಂದರ್ಭವನ್ನು ನೋಡುತ್ತಿದ್ದೆವು. ಇಂತಹ ಮದುವೆಗಳಲ್ಲಿ, ಮದುವೆಯ ಮುನ್ನ ವಧು ಮತ್ತು ವರನ ಎರಡೂ ಕಡೆಯ ಮನೆಯಲ್ಲಿ ವಿವಿಧ ಶಾಸ್ತ್ರಗಳು ನಡೆಯುತ್ತಿದ್ದವು. ವಧುವಿನ ಮನೆಯಲ್ಲಿ ಮದುವೆಯಾದರೆ ವರನು ಹೆಣ್ಣಿನ ಮನೆಯ ಚಪ್ಪರ ಪ್ರವೇಶ, ಹಾಗೆಯೇ ಗಂಡಿನ ಮನೆಯಲ್ಲಿ ಮದುವೆಯಾದರೆ ವಧುವು ಗಂಡನ ಮನೆಯ ಚಪ್ಪರ ಪ್ರವೇಶ ಮಾಡಬೇಕಾಗುತ್ತದೆ. ಇಂತಹ ಐದು ದಿನಗಳ ವಿವಾಹ ಮಹೋತ್ಸವದಲ್ಲಿ ಮೊದಲ ದಿನದಂದು ಸಮುದಾಯ ದವರೆಲ್ಲ ಸೇರಿಕೊಂಡು ವರನ ಅಥವಾ ವಧುವಿನ ಮನೆಯ ಮುಂದೆ ಚಪ್ಪರ ಹಾಕುತ್ತಾರೆ. ಹಿರಿಯರೆಲ್ಲರೂ ಸೇರಿಕೊಂಡು ಚಪ್ಪರ (ಹಂದರ) ಪೂಜೆಗೆ ವ್ಯವಸ್ಥೆ ಮಾಡುತ್ತಾರೆ. ಈ ಹಂದರದ ಪೂಜೆಯನ್ನು ಮನೆಯ ದೊಡ್ಡ ಅಳಿಯ ಹಾಗೂ ಹಿರಿಯ ಮಗಳು ಪೂರೈಸುತ್ತಾರೆ. ಇವರಿಗೆ ಹೊಸ ಉಡುಗೆಗಳನ್ನು ಉಡುಗೊರೆಯಾಗಿ ಕೊಡುವುದು ರೂಢಿ. ನಂತರ ಇವರೇ ಮನೆಯ ಹೊರಗೋಡೆಗೆ ಸುಣ್ಣದ ಮತ್ತು ಕೆಂಪು ಮಣ್ಣಿನ ಹಸ್ತಗಳನ್ನು ಒತ್ತುತ್ತಾರೆ. ಸುಣ್ಣದ ಮತ್ತು ಕೆಮ್ಮಣ್ಣಿನ ನೀರನ್ನು ಗೋಡೆಯಗುಂಟ ಸುರಿಯುತ್ತಾರೆ. ನಂತರ ಹೆಂಗಳೆಯರೆಲ್ಲ ಸೇರಿ ಒಳಕಲ್ಲು ಪೂಜೆ, ಬೀಸುವ ಕಲ್ಲಿನ ಪೂಜೆಯನ್ನು ನೆರವೇರಿಸುತ್ತಾರೆ. ಮಾರನೆಯ ದಿನ ಮನೆದೇವರ ಪೂಜೆಯು ನಡೆಯುತ್ತದೆ. ಸಿಹಿ ಅಡುಗೆಯನ್ನು ಮಾಡಿ, ಮದುವೆಗೆ ತಂದಂತಹ ಉಡುಗೆಗಳನ್ನು ದೇವರ ಮನೆಯಲ್ಲಿಟ್ಟು ಪೂಜೆ ಮಾಡುತ್ತಾರೆ. ಆ ದಿನ ಬಂಧು-ಬಳಗದವರು ಸೇರಿಕೊಂಡು ಈ ಪೂಜಾಕ್ರಮವನ್ನು ನೆರವೇರಿಸುತ್ತಾರೆ. ಮೂರನೆಯ ದಿವಸ ವಧು-ವರರನ್ನು ಆಯಾ ಮನೆಯಲ್ಲಿ ಮಧುಮಕ್ಕಳನ್ನು ಮಾಡುವ ಪದ್ಧತಿ. ಈ ಮೊದಲೇ ಜೋತಿಷಿಗಳಿಂದ ಮದುವೆಯ ಎಲ್ಲಾ ಶುಭಕಾರ್ಯಗಳು ಯಾವಾಗ ಹೇಗೆ ನಡೆಯಬೇಕು ಎಂಬುದನ್ನು ತಿಳಿದಿರುತ್ತಾರೆ. ಅಂತೆಯೇ ಯಾರಿಗೆ ಎಣ್ಣೆಬಲ, ಅರಿಷಣ ಬಲ, ನೀರಿನಬಲ ಬಂದಿದೆ ಎಂದು ತಿಳಿದು ಆ ಹೆಸರಿನವರು ಮದುಮಗ ಅಥವಾ ಮಧುಮಗಳಿಗೆ ಎಣ್ಣೆನೀರು, ಅರಿಷಣ ನೀರು ಹಾಕುವುದುಂಟು. ಕ್ಷೌರಿಕರಿಗೆ ಉಲುಪಿ ಮತ್ತು ದಕ್ಷಿಣೆಯನ್ನು ಮೊರದಲ್ಲಿಟ್ಟು ಕೊಟ್ಟು ವರನಿಗೆ ಮುಖ ಕ್ಷೌರಮಾಡಿಸಿಕೊಂಡ ನಂತರ ಅರಿಷಣ ಹಚ್ಚಿ ನೀರನ್ನು ಹಾಕಿ ಸ್ನಾನ ಮಾಡಿಸುತ್ತಾರೆ. ಹೊಸ ಪಂಚೆ ಉಡುಸಿ ಮುಂಡಾಸು ಅಥವಾ ಟೊಪ್ಪಿಗೆ ಹಾಕುತ್ತಾರೆ. ನಂತರ ಬಾಸಿಂಗ ಬಿಗಿಯುತ್ತಾರೆ. ಅತ್ತ ವಧುವಿಗೂ ಅರಿಷಣ ಹಚ್ಚಿ, ಸ್ನಾನಮಾಡಿಸಿ ಅಲಂಕಾರ ಮಾಡುತ್ತಾರೆ. ಈ ಸಂದರ್ಭದಲ್ಲಿ ಹೆಂಗಳೆಯರು ಶೋಭಾನೆ ಹಾಡುಗಳನ್ನು ಹಾಡುತ್ತಿರುತ್ತಾರೆ. ಆ ದಿನವೇ ಸಾಯಂಕಾಲದ ಸಮಯಕ್ಕೆ ಬೀಗರನ್ನು (ನಿಬ್ಬಣದವರನ್ನು) ಎದುರುಗೊಳ್ಳುವ ಶಾಸ್ತ್ರವಿರುತ್ತದೆ. ಬಂಧು-ಬಳಗದವರ ಜೊತೆಗೂಡಿ ಮದುವೆಯ ಮನೆಯವರು ಪೌಣ್ಯರನ್ನು ಎದುರುಗೊಳ್ಳಲು ಕಳಸ

ಕನ್ನಡಿ, ಆರತಿಗಳನ್ನು ತೆಗೆದುಕೊಂಡು ವಾದ್ಯಗಳ ಸಮೇತ ಬರುತ್ತಾರೆ. ಅದೇ ಸಂದರ್ಭಕ್ಕೆ ಹೆಣ್ಣಿನ ಕಡೆಯವರು/ಗಂಡಿನ ಕಡೆಯವರು ಎತ್ತಿನ ಗಾಡಿಗಳಲ್ಲಿಯೋ, ಮೋಟಾರು ಗಾಡಿಯಲ್ಲಿಯೋ ಊರಿಗೆ ಆಗಮಿಸಿ ಅಗಸಿಯ ಬಳಿ ನಿಂತಿರುತ್ತಾರೆ. ಅವರನ್ನು ಬೀಗರು ಬೆಲ್ಲ-ಬೇಳೆ, ನೀರು ಕೊಡುವುದರ ಜೊತೆಗೆ ಪೂಜಿಸಿ, ತಾಂಬೂಲ ಸ್ವೀಕರಿಸಿ ಸಕ್ಕರೆಯನ್ನು ಒಬ್ಬರಿಗೊಬ್ಬರು ವಿತರಿಸಿಕೊಂಡು ನಂತರ ಅವರನ್ನು ಇವರು, ಇವರನ್ನು ಅವರು ಒಬ್ಬರಿಗೊಬ್ಬರು ಜಗ್ಗಾಡಿ ಮೋಜಿನ ಪ್ರಸಂಗವನ್ನು ಉಂಟು ಮಾಡುತ್ತಾರೆ. ವಿಶೇಷವೆಂದರೆ ಗಂಡಿನವರು ಹೆಣ್ಣಿನವರನ್ನು ಎಳೆದುಕೊಂಡರೆ ಹೆಣ್ಣು ಗಂಡಿನ ಮನೆಯಲ್ಲಿ ತಗ್ಗಿ-ಬಗ್ಗಿ ನಡೆದುಕೊಳ್ಳುತ್ತಾಳೆಂದು, ಒಂದು ವೇಳೆಯಲ್ಲಿ ಹೆಣ್ಣಿನವರು ಗಂಡಿನವರನ್ನು ಎಳೆದುಕೊಂಡರೆ ಹೆಣ್ಣು ಗಂಡಿನ ಮನೆಯಲ್ಲಿ ಅಧಿಕಾರವನ್ನು ಚಲಾಯಿಸುತ್ತಾಳೆಂದು ನಂಬಿಕೊಂಡು ಬಂದಿದ್ದಾರೆ. ಇದಾದನಂತರ ಬೀಗರನ್ನು ದೇವಸ್ಥಾನಕ್ಕೆ ಕರೆತಂದು ಅಲ್ಲಿ ಎರಡು ಕಡೆಯವರನ್ನು ಐದೈದು ಜನರಂತೆ ಕೂಡ್ರಿಸಿ ಆರತಿ ಮಾಡಿ, ತಾಂಬೂಲ ಸ್ವೀಕರಿಸಿ ಹಾಡುಗಳನ್ನು ಹೇಳುತ್ತಾ ಅಲ್ಲಿನ ಕಾರ್ಯಕ್ರಮ ಮುಗಿದ ನಂತರ ಬೀಗರನ್ನು (ಬೀಗರು ಒಂಟಿಯ ಮೇಲೆ ಬರತಾರಂದರ ಒಂಟಿಯಾಗಿ ಬಂದಾರ) ಎಂದು ಹಾಡು ಹೇಳುತ್ತಾ ಮನೆಗೆ ಕರೆತರುತ್ತಾರೆ. ನಂತರ ಅವರನ್ನು ಮನೆತುಂಬಿಸಿಕೊಂಡು ಅವರಿಗೆ ಊಟ ಮಾಡಿಸಿ ರಾತ್ರಿಯ ಕಾರ್ಯಗಳನ್ನು ಮುಗಿಸಿ ಬಿಡದಿ ಮನೆಗೆ ಕರೆತಂದು ಬಿಡುತ್ತಾರೆ. ಅವರನ್ನು ಪ್ರತಿಸಲಕ್ಕೂ ಊಟಕ್ಕೆ, ಉಪಹಾರಕ್ಕೆ ಯಾವುದೇ ಕೆಲಸಕ್ಕೆ ಕರೆಯುವುದಾದರೆ ವಾದ್ಯಗಳ, ಕಳ ಕನ್ನಡಿಗಳ ಮುಖಾಂತರವೇ ಆಗಬೇಕು. ಇಲ್ಲದಿದ್ದರೆ ಅವರಿಗೆ ಕೋಪ ಬರುತ್ತದೆ.

ಇನ್ನು ಮೂಹೂರ್ತದ ದಿನ ಬೆಳಗಿನ ಜಾವ ಮನೆಯ ಹಿರಿಯರು ಎದ್ದು, ಊರಿನ ಗ್ರಾಮದೇವತೆಗಳಿಗೆ ಎಣ್ಣೆ ಹಾಕುವುದು, ಕುಂಬಾರರ ಮನೆಗೆ ಹೋಗಿ ಐರಾಣಿಯನ್ನು ಅಂದರೆ ನಾಲ್ಕು ಚಿಕ್ಕ ಮಡಿಕೆಗಳನ್ನು ಹಾಗೂ ಒಂದು ದೊಡ್ಡ ಮಡಿಕೆಯನ್ನು ಶಾಸ್ತ್ರೋಕ್ತವಾಗಿ ತಂದು ಚಪ್ಪರದ ಅಡಿಯಲ್ಲಿ ನಾಲ್ಕು ಮಡಿಕೆಗಳನ್ನು ನಾಲ್ಕು ಮೂಲೆಯಲ್ಲಿ ಇಟ್ಟು ಅದಕ್ಕೆ ದಾರಸುತ್ತಿ ಕಂಕಣಕಟ್ಟಿ ಸುರಗಿ ಸುತ್ತುವ ಪದ್ಧತಿ. ಹೀಗೆ ಸುರಗಿ ಸುತ್ತಿ ವಧು-ವರರಿಗೆ ಮುತ್ತೈದೆಯರು ನೀರು ಹಾಕಿ ಹೊಸಬಟ್ಟೆಗಳನ್ನು ಉಡುಸಿ ಹಸಿಮಣೆಗೆ ಕರೆತರುತ್ತಾರೆ. ಸುರಗಿ ಸುತ್ತಿದ ದಾರವನ್ನು ವಧುವರರಿಗೆ ಬಲಗೈಗೆ ಕಟ್ಟುತ್ತಾರೆ. ಇದು ಮದುವೆಯ ಎಲ್ಲಾ ಕಾರ್ಯಕ್ರಮಗಳು ಮುಗಿಯುವವರೆಗೂ ಕೈಯಲ್ಲಿಯೇ ಇರಬೇಕು. ಉಳಿದಂತೆ ಹಲ-ಕೆಲ ಜನರು ಮೂಹೂರ್ತಕ್ಕೆ ಜಗಲಿ ಕಟ್ಟೆಯನ್ನು ಕಟ್ಟಿ ಅದನ್ನು ಸಾರಿಸಿ, ಶೃಂಗಾರ ಮಾಡಿ ರಂಗೋಲಿ ಹಾಕಿ ಅಲಂಕರಿಸಿ ಆ ಕಟ್ಟೆಯ ಮೇಲೆ ವಧು-ವರರನ್ನು ಕೂಡ್ರಿಸಿ ಮಾಂಗಲ್ಯಧಾರಣೆ ಮಾಡಿಸುತ್ತಾರೆ. ಹಿಂದಿನ ಕಾಲದಿಂದ ಹಿಡಿದು ಇಂದಿನವರೆಗೂ ಅಥಣಿ ಪರಿಸರದ ವಾಲ್ಮೀಕಿ ಸಮುದಾಯದ ಬಾಂಧವರಲ್ಲಿ ಈ ರೀತಿಯ ಪದ್ಧತಿಯೊಂದು ರೂಢಿಯಲ್ಲಿದೆ. ಅಲ್ಲದೆ ಈ ಸಮುದಾಯದಲ್ಲಿ ಇಂದಿಗೂ ಕೂಡ ವಧುವಿಗೆ ತೆರವು ಕೊಡುವ ಪದ್ಧತಿಯು ಸಂಪ್ರದಾಯದಂತೆ ನಡೆದುಕೊಂಡು ಬಂದಿದೆ.

ಹೀಗೆ ವಧು-ವರರು ವಿವಾಹ ಬಂಧನಕ್ಕೆ ಒಳಗಾದ ನಂತರ ಇವರಲ್ಲಿರುವ ಸಂಕೋಚದ ಭಾವನೆಯು ದೂರಾಗಲಿ ಎಂದು ಕೊಬರಿ ಕಡಿಯುವ ಆಟ, ಹೂವಿನ ಚೆಂಡಿನ ಆಟ, ಧೂಮ ತೂಗುವುದು ಇತರೆ

ಆಚರಣೆಗಳು ಈ ಭಾಗದಲ್ಲಿ ನಡೆದುಕೊಂಡುಬಂದಿದೆ. ಮದುವೆಯಾದ ಐದು ದಿನಗಳವರೆಗೂ, ಗಂಡಿನ ಮನೆಯಲ್ಲಿ ಮೂರು ಹೆಣ್ಣಿನ ಮನೆಯಲ್ಲಿ ಎರೆಡು ನೀರು ಎನ್ನುವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಆರತಿಯನ್ನು ಮಾಡುತ್ತಾರೆ. ಇಲ್ಲಿಗೆ ಮದುವೆ ಕಾರ್ಯಗಳು ಮುಗಿಯುತ್ತಿದ್ದಂತೆ ಒಂಭತ್ತು ಅಥವಾ ಹದಿನಾರನೆಯ ದಿನಕ್ಕೆ ಮನೆ ತುಂಬಿಸಿಕೊಳ್ಳುವ ಕಾರ್ಯಕ್ರಮ ನಡೆಯುತ್ತದೆ.

ಇನ್ನೂ 'ಯಾದಿಮೆ ಶಾದಿ' ಎನ್ನುವುದು ಬಹು ಸರಳವಾದ ಕಡಿಮೆ ಸಮಯದಲ್ಲಿಯೇ ಅಂದರೆ ಒಂದೆರಡು ಘಂಟೆಗಳಲ್ಲಿ ಮಾತ್ರ ಮುಗಿದು ಬಿಡುವ ಹಾಗೆಯೇ ಕಡಿಮೆ ಖರ್ಚಿನಲ್ಲಿ ಮುಗಿಯುವ ವಿವಾಹ ಪದ್ಧತಿಯಾಗಿದೆ. ಇದು ಮರಾಠಿ ಮೂಲದ್ದಾಗಿದ್ದರೂ ನಮಗೂ ಕೂಡ ವರದಾನವೆನಿಸುವಂತಿದೆ. ಈ ಮೊದಲೇ ಗಂಡುಹೆಣ್ಣಿಗೆ ನಿಶ್ಚಯವಾಗಿದ್ದರೆ, ಅಥವಾ ಮದುವೆಗೆ ಸಂಭವನಿಯಗಳಿದ್ದರೆ, ಮದುವೆಯ ವಿಷಯ ಕುರಿತು ಮಾತಾಡುತ್ತಲೆ ಬಾಂಡ ಪತ್ರಿಕೆಯ ಮೇಲೆ ಕುಳಿತಿರುವ ಸಮಯದಲ್ಲಿಯೇ ಕೊಡು-ಕೊಳ್ಳುವ ವಿಚಾರ ಮಾತಾಡಿ ಬರಹಕ್ಕಿಳಿಸುತ್ತಲೇ ಕೂಡಲೇ ಮಾಂಗಲ್ಯ ಅರಿವೆಗಳನ್ನು ತರಿಸಿಬಿಟ್ಟು ದೈವದವರ ಮುಖಾಮುಖಿಯಲ್ಲಿಯೂ ವಧು-ವರರನ್ನು ವಿವಾಹ ಬಂಧನಕ್ಕೆ ಕಾಲಿಡಿಸಿ ಬಿಡುತ್ತಾರೆ. ಆ ಕ್ಷಣದೊಳಗೆ ಅವರವರ ಯೋಗ್ಯತೆಗೆ ತಕ್ಕಂತೆ ಸಿಹಿ ಅಡುಗೆಯನ್ನು ಮಾಡಿರುತ್ತಾರೆ. ಅಲ್ಲಿ ನೆರೆದವರೆಲ್ಲರು ಅಕ್ಷತೆಕಾಳನ್ನು ವಧು-ವರರಿಗೆ ಹಾಕಿ ಊಟಮುಗಿಸಿಕೊಂಡು ಹೋಗುತ್ತಾರೆ. ಉಳಿದಂತೆ ಯಾರು ಬಂದರಾಯ್ತು, ಬರದಿದ್ದರಾಯ್ತು, ಮದುವೆ ನಡೆದು ಬಿಡುತ್ತದೆ. ಉತ್ತಮ ಸ್ಥಿತಿವಂತರು ನಂತರದಲ್ಲಿ ಎಲ್ಲರಿಗೂ ಆಹ್ವಾನಿಸಿ ಆರತಕ್ಷತೆಯನ್ನು ಮಾಡುವುದು ರೂಢಿಯಲ್ಲಿದೆ. ಆದರೆ ಅದು ಖಡ್ಡಾಯವೇನೂ ಅಲ್ಲ. ಈ 'ಯಾದಿಮೆ ಶಾದಿ' ಎನ್ನುವ ಮದುವೆಯು ಈ ಭಾಗದಲ್ಲಿ ನಡೆಯುತ್ತಿದ್ದು, ಬಡಬಗ್ಗರಿಗೆ, ಸಮಯದ ಅಭಾವ ಇದ್ದವರಿಗೆ ಅನುಕೂಲವಾಗಿದೆ. ಈ ಪದ್ಧತಿಯ ವಿವಾಹವನ್ನು ವಾಲ್ಮೀಕಿ ಸಮುದಾಯದವರಲ್ಲದೆ ಎಲ್ಲಾ ಸಮುದಾಯದ ಎಲ್ಲಾ ವರ್ಗದ ಜನರಲ್ಲಿ ನಡೆಯುವಂತಹ ಸರಳ ವಿವಾಹ ಪದ್ಧತಿಯಾಗಿದೆ.

ಸೀಮಂತ

ಮನೆಯ ಮಗಳು ಅಥವಾ ಸೊಸೆಯು ಮೊದಲ ಸಲ ಅಂದರೆ ಚೊಚ್ಚಲ ಗರ್ಭಿಣಿಯಾದರೆ ಆಕೆಗೆ ನಾಲ್ಕನೆಯ ತಿಂಗಳಲ್ಲಿ ಅಥವಾ ಐದನೆಯ ತಿಂಗಳಲ್ಲಿ ಬಯಕೆಯ ಬುತ್ತಿಯನ್ನು ಕೊಟ್ಟು, ಕಳ್ಳ ಕುಪ್ಪಸವೆಂದು ಅರಿಷಣ, ಕುಂಕುಮ, ಹಸಿರುಬಳೆ, ಕುಪ್ಪಸದ ಬಟ್ಟೆಯನ್ನು ಉಡಿಯಲ್ಲಿ ಕೊಡುವುದರ ಜೊತೆಗೆ ಕುಪ್ಪಸದ ಕಾರ್ಯ ನೆರವೇರಿಸುವುದನ್ನು ಈ ಪರಿಸರದ ವಾಲ್ಮೀಕಿ ಸಮುದಾಯದಲ್ಲಿ ನಾವು ಕಾಣಬಹುದು.

ನಂತರ ಎಂಟನೆ ತಿಂಗಳಲ್ಲಿ ಗರ್ಭಿಣಿ ಹೆಣ್ಣಿನ ತವರಿನವರು ಬಂಧು-ಬಳಗದವರೊಡಗೂಡಿ ವಿವಿಧ ರೀತಿಯ ಅಡುಗೆಯ ತಯಾರಿಯನ್ನು ಮಾಡಿಕೊಂಡು ಬಂದು ಗಂಡನ ಮನೆಯಲ್ಲಿರುವ ಮಗಳಿಗೆ ಸೀಮಂತ ಮಾಡುವ ಪದ್ಧತಿಯು ರೂಢಿಯಲ್ಲಿದೆ. ಗರ್ಭಿಣಿ ಸ್ತ್ರೀಗೆ ಸ್ನಾನಾದಿಗಳನ್ನು ಮಾಡಿಸಿ ಹೊಸ

ಸೀರೆ ಉಡುಸಿ ಹಸಿರು-ಕೆಂಪು ಬಳೆಗಳನ್ನು ತೊಡಿಸಿ ಅಲಂಕಾರ ಮಾಡಿ ಒಂದು ವೇದಿಕೆಯನ್ನು ನಿರ್ಮಿಸಿ ಅಲ್ಲಿ ಆಕೆಗೆ ಕೂಡ್ರಿಸಿ ಹೆಂಗಳೆಯರೆಲ್ಲರೂ ಉಡಿ ತುಂಬಿ ಆರತಿ ಮಾಡಿ ಹರಸುವುದುಂಟು. ಬಂದಿರುವಂತಹ ಪೌಣ್ಕಾರೆಲ್ಲರು (ಬೀಗರೆಲ್ಲರು) ಬಂಧು-ಬಳಗದವರು ಸೀರೆ-ಕುಪ್ಪಸ, ಹಣ, ವಸ್ತುಗಳನ್ನು ಆಯರು ಮಾಡುವುದು ಪದ್ಧತಿ. ಬಂದಂತಹ ಎಲ್ಲರಿಗೂ ವಿಶೇಷ ಬೋಜನದ ವ್ಯವಸ್ಥೆ ಇರುತ್ತದೆ. ಹೀಗೆ ಗರ್ಭಿಣಿ ಸ್ತ್ರೀಯ ಜೊತೆಗೆ ಆಕೆಯ ಗಂಡನಿಗೂ ಹೊಸ ಬಟ್ಟೆಯನ್ನು ಆಯರು ಮಾಡುತ್ತಾರೆ. ಮಾರನೆಯ ದಿನ ಆಕೆಯನ್ನು ತವರು ಮನೆಗೆ ಮೊದಲ ಬಾಣಂತಿತನಕ್ಕೆ ಕರೆದುಕೊಂಡು ಬರುತ್ತಾರೆ. ಆಕೆಯು ಬಯಸಿದ ಊಟೋಪಚಾರವನ್ನು ತವರು ಮನೆಯವರು ತಪ್ಪದೇ ನೆರವೇರಿಸುತ್ತಾರೆ.

ಸಾವು

ಅಥಣಿ ಪರಿಸರದಲ್ಲಿ ಬರುವ ಯಾವುದೇ ವಾಲ್ಮೀಕಿ ಸಮುದಾಯದ ಕುಟುಂಬಗಳಲ್ಲಿ ಒಂದು ವೇಳೆ ಸಾವು ಸಂಭವಿಸಿದರೆ, ಆ ಕೂಡಲೇ ಆಯಗಾರರನ್ನು ಕರೆಸಿ ಬಂಧು-ಬಳಗದವರಿಗೆ ಸುದ್ಧಿ ಮುಟ್ಟಿಸುವಂತೆ ಅವರಿಗೆ ದಾರಿಯ ಖರ್ಚು ಕೊಟ್ಟು ಕಳಿಸಿಕೊಡುತ್ತಾರೆ. ಈಗೀಗ ವೈಜ್ಞಾನಿಕವಾಗಿ ಮುಂದುವರಿದಿರುವ ಸಂದರ್ಭದಲ್ಲಿ ದೂರವಾಣಿಯ ಮುಖಾಂತರವೂ ಸುದ್ಧಿಯನ್ನು ಮುಟ್ಟಿಸುತ್ತಾರೆ. ಬಂಧು-ಬಳಗದವರು ಸೇರುವವರೆಗೂ ಶವಸಂಸ್ಕಾರ ನಡೆಸುವಂತಿಲ್ಲ. ಇತ್ತ ಸಾವು ಸಂಭವಿಸಿದ ಕೂಡಲೆ ಮೃತ ದೇಹವನ್ನು ಬಿಸಿನೀರಿನಿಂದ ಸ್ನಾನ ಮಾಡಿಸಿ ಒಂದು ಗೊತ್ತಾದ ಸ್ಥಳದಲ್ಲಿ ಕೂಡಿಸುತ್ತಾರೆ. ನಂತರ ಪೂಜೆಯನ್ನು ಮಾಡುತ್ತಾರೆ. ಅಲ್ಲದೆ ವೀರಶೈವ ಮತದ ಲಿಂಗಸ್ವರೂಪಿ ಜಂಗಮನನ್ನು ಮನೆಗೆ ಕರೆಯಿಸಿ ಮೃತದೇಹಕ್ಕೆ ಪೂಜೆ ಮಾಡಿಸುತ್ತಾರೆ. ಈ ಲಿಂಗ ಸ್ವರೂಪಿಯು ಹೆಣದ ಮೇಲೆ ಕಾಲಿಟ್ಟು, ಪಾದಪೂಜೆಯನ್ನು ನೆರವೇರಿಸಿಕೊಳ್ಳುತ್ತಾನೆ. ಇದನ್ನು ಮನೆಯ ಹಿರಿಯರು ಮಾಡುತ್ತಾರೆ. ಈ ಕ್ರಿಯೆಯಿಂದ ತಿಳಯುವುದೆಂದರೆ ಈ ಸಮುದಾಯದವರು ಸತ್ತ ವ್ಯಕ್ತಿಯು ಮುಂದಿನ ಜನ್ಮದಲ್ಲಿ ನಮ್ಮ ಮನೆಯಲ್ಲಿಯೇ ಹುಟ್ಟುವನೆಂದು ಭಾವಿಸಿದ್ದಾರೆ. ಅಲ್ಲದೆ ಸತ್ತ ವ್ಯಕ್ತಿಗೆ ಆ ರೀತಿ ಪೂಜೆ ಮಾಡಿಸುವುದರಿಂದ ಆತನು ಪರಿಶುದ್ಧನಾಗುತ್ತಾನೆ. ಕರ್ಮಗಳನ್ನು ಕಳೆದುಕೊಳ್ಳುತ್ತಾನೆ ಎನ್ನುವ ನಂಬಿಕೆಯು ಈ ಜನರದು.

ಹಾಗೆಯೇ ಒಂದು ವೇಳೆ ಸತ್ತಿರುವ ಮನುಷ್ಯನ ದೇಹವನ್ನು ರಾತ್ರಿಯೆಲ್ಲಾ ಇರಿಸುವ ಸಂದರ್ಭ ಬಂದರೆ ರಾತ್ರಿಯೆಲ್ಲಾ ಪುರಾಣ ಹೇಳುವುದು, ಭಜನೆ ಮಾಡುವುದು ರೂಢಿ. ಅಂದರೆ ರಾತ್ರಿಯೆಲ್ಲಾ ಆ ದೇಹವನ್ನು ಕಾಯುವುದು. ಅಂತಿಮ ಸಂಸ್ಕಾರವಾಗುವವರೆಗೂ ಆ ಮನೆಯಲ್ಲಿ ಊಟ ಮಾಡುವಂತಿಲ್ಲ. ಹೆಣದ ಪೂಜೆಗೆ ಬೇರೆಯವರು ಹೂ-ಹಣ್ಣು-ಕಾಯಿ ಊದುಕಡ್ಡಿಯನ್ನು ತರುವುದಿಲ್ಲ. ಇನ್ನು ವ್ಯಕ್ತಿಯು ಸತ್ತ ಕೂಡಲೆ ಪಂಚಾಂಗವನ್ನು ನೋಡಲಾಗುವುದು. ಪಂಚಾಂಗದ ಫಲದಲ್ಲಿ ಏನಾದರೂ ಕೆಟ್ಟದ್ದು ಇದ್ದರೆ ಮನೆಯನ್ನು ಸ್ವಲ್ಪದಿನಗಳ ಕಾಲ ಬಿಡುವುದು. ಅಥವಾ ಸತ್ತ ಸ್ಥಳವನ್ನು ಮುಚ್ಚುವುದು ರೂಢಿಯಲ್ಲಿದೆ. ಅಂತ್ಯಕ್ರಿಯೆಯ ಸಂದರ್ಭದಲ್ಲಿ ಮನೆಯಲ್ಲಿ ದೀಪವನ್ನು ಹಚ್ಚಿರುತ್ತಾರೆ. ಶವ ಸಂಸ್ಕಾರಕ್ಕೆ ಬಂದವರು ದೀಪವನ್ನು ನೋಡುವಂತಿಲ್ಲ. ನೋಡಿದರೆ ಅವರಿಗೆ ದೋಷ ಬರುತ್ತದೆ ಎನ್ನುವುದು ಅವರ

ತಿಳುವಳಿಕೆ. ಕಾರಣ ಅವರೆಲ್ಲರು ಶವ ಸಂಸ್ಕಾರ ಮುಗಿದ ಕೂಡಲೇ ಅಲ್ಲಿಯೇ ತೋಟಗದ್ದೆಗಳಲ್ಲಿ ಬಾವಿ, ಹಳ್ಳಗಳಲ್ಲಿ ಸ್ನಾನಮಾಡಿ ಶುದ್ಧವಾಗಿ, ಶವದ ಮನೆಯವರಿಗೆ ಹೇಳದೆ, ಕೇಳದೆ ತಮ್ಮ ತಮ್ಮ ಊರಿಗೆ ತೆರಳುತ್ತಾರೆ. ಅಲ್ಲದೆ ಶವವನ್ನು ಅಂತ್ಯಕ್ರಿಯೆಗೆ ತೆಗೆದುಕೊಂಡು ಹೋಗುವಾಗ ನವಣೆಯನ್ನು ಚೆಲ್ಲಲಾಗುತ್ತದೆ. ಇದರ ಹಿನ್ನೆಲೆ ಏನೆಂದರೆ ಆ ವ್ಯಕ್ತಿಯು ಆ ಮನೆಯ ಆಸ್ತಿಪಾಸ್ತಿಯ ಮೇಲೆ ಮಕ್ಕಳ ಮೇಲೆ, ಮಡದಿಯ ಮೇಲೆ ವ್ಯಾಮೋಹ ಉಳ್ಳವರು ಅವರಾಗಿದ್ದರೆ, ಅವರು ಪುನಃ ದೆವ್ವ ಭೂತಗಳಾಗಿ ಮನೆಗೆ ಬಂದು ಬಿಡಬಹುದು. ಹಾಗೇನಾದರೂ ಬಂದರೆ ಬರುವಾಗ ನವಣೆಯನ್ನು ಹೆಕ್ಕಿಕೊಳ್ಳುತ್ತಾ ಬರುವುದರೊಳಗೆ ಬೆಳಗಾಗುವುದು ಬೆಳಗಾದ ಕೂಡಲೇ ಪುನಃ ಸ್ಮಶಾನಕ್ಕೆ ತೆರಳುತ್ತವೆ ಎನ್ನುವ ನಂಬಿಕೆಯು ಇಲ್ಲಿಯ ಜನರದು. ಇನ್ನು ಯಾವ ವ್ಯಕ್ತಿ ಯಾರ ಮನೆಯಲ್ಲಿ ಸತ್ತಿರುತ್ತಾನೋ ಆ ಮನೆಯವರು ಮೂರನೆ ದಿನದಂದು ಮೂರು ಕೂಳು ಎಂದು ಮಾಡಿ ಅದರಲ್ಲಿ ಆ ವ್ಯಕ್ತಿಯು ಏನನ್ನು ತಿನ್ನುತ್ತಿದ್ದನೋ ಅಥವಾ ಆತನಿಗೆ ಏನು ಪ್ರಿಯವೋ ಆ ಅಡುಗೆಯನ್ನು ಮಾಡಿಕೊಂಡು ಸ್ಮಶಾನಕ್ಕೆ ತಂದು ಶವಸಂಸ್ಕಾರವಾದ ಸ್ಥಳದಲ್ಲಿ ಇಡುತ್ತಾರೆ. ಮತ್ತು ಅಂದು ಮನೆಯಲ್ಲಿ ಸಿಹಿ ಅಡುಗೆಯನ್ನು ಮಾಡಿರುತ್ತಾರೆ. ಹೊರಗಿನವರು ಆ ಮನೆಯಲ್ಲಿ ಆ ದಿನ ಊಟಮಾಡುವುದಿಲ್ಲ. ಹಾಗೆಯೇ ಸ್ಮಶಾನದಲ್ಲಿದ್ದ ಅನ್ನವನ್ನು ಕಾಗೆಗಳು ಮುಟ್ಟಿದರೆ ಶುಭ ಶಕುನ. ನಂತರ ೯ ಅಥವಾ ೧೬ನೇ ದಿನ ಶ್ರಾದ್ಧವನ್ನು ಮಾಡಿ ಊರಿನವರಿಗೆ ಮತ್ತು ಬಂಧು-ಬಳಗದವರಿಗೆ ಊಟಮಾಡಿಸಿ ಆ ಒಂದು ಕ್ರಿಯೆಯನ್ನು ಕೊನೆಗಳಿಸುತ್ತಾರೆ. ನಂತರ ಆ ಮನೆಗೆ ಸೂತಕ ತಪ್ಪುತ್ತದೆಯಂತೆ.

೪.೩. ನಂಬಿಕೆ, ವಿಧಿ-ನಿಷೇಧಗಳು

ನಂಬಿಕೆ

ಮನುಷ್ಯನಿಗೆ ಸಹಜವು ಸ್ವಾಭಾವಿಕವೂ ಹಿಂದಿನವರಿಂದ ಬಳುವಳಿಯಾಗಿ ಬಂದವುಗಳು ಈ ನಂಬಿಕೆ, ಆಚರಣೆ, ವಿಧಿ-ವಿಧಾನಗಳು ಇವುಗಳಿಗೆ ಪ್ರಾಕ್ತನ ಅಥವಾ ಜಾನಪದ ಮನಸ್ಸು ಬದ್ಧವಾಗಿರುತ್ತದೆ. ಈ ರೀತಿಯಲ್ಲಿ ಬದ್ಧವಾದ ಮನಸ್ಸುಗಳು ತಮ್ಮದೇ ಆದ ನಂಬಿಕೆ ವಿಧಿ-ವಿಧಾನಗಳನ್ನು ಒಳಗೊಂಡಿರುತ್ತವೆ. ಇಂತಹ ಜನಪದ ಸಂಬಿಕೆಯು ಪರಂಪರಾನುಗತವಾಗಿ ಅಂಗೀಕೃತವಾಗುವಲ್ಲಿ ಪುನರಾವರ್ತನೆ ಹಾಗೂ ಸಾಮೂಹಿಕತೆ ನಿರೀಕ್ಷೆಗಳು ಮುಖ್ಯವಾಗುತ್ತವೆ. ನಂಬಿಕೆಯು ಜನಪದರ ಜೀವನಾನುಭವದ ಉತ್ಪನ್ನ. ಹೀಗಾಗಿ ಮಾನವನ ಬದುಕಿಗೂ ನಂಬಿಕೆಗೂ ಬೇರ್ಪಡಿಸಲಾಗದ ಸಂಬಂಧವಿದೆ. ನಂಬಿಕೆಯು ಸೂಚನೆ, ನಿಯಮ, ವಿಧಿ-ನಿಷೇಧ, ನಿರ್ದೇಶನ, ಆಗ್ರಹ, ಆದೇಶ ಮತ್ತು ಆಜ್ಞೆಗಳ ರೂಪದಲ್ಲಿ ನಿತ್ಯ ಬದುಕಿನೊಂದಿಗೆ ಸಂಬಂಧವನ್ನು ಕಂಡುಕೊಂಡಿದೆ.

ಜನಪದರ ಕೆಲಸ, ಆಲೋಚನೆ, ರೂಢಿ, ಜೀವನಕ್ರಮ ಸಂಪ್ರದಾಯ, ಆಚರಣೆಗಳೆಲ್ಲವೂ ಮೂಲಭೂತವಾಗಿ ನಂಬಿಕೆಗಳಿಂದ ಪ್ರೇರಿತವಾದವುಗಳು. ಕಾಲ್ಪನಿಕ ಆಲೋಚನೆಯೊಂದು ವೈಯುಕ್ತಿಕ ನೆಲೆಯಲ್ಲಿ ಹುಟ್ಟಿಕೊಂಡು ಸಮೂಹಗಳಲ್ಲಿ ಸಾಮೂಹಿಕ ಮಾನ್ಯತೆಯನ್ನು ಪಡೆದುಕೊಂಡಾಗ ಅದು

ನಂಬಿಕೆಯಾಗುತ್ತದೆ. ಪ್ರಕೃತಿಯ ರಹಸ್ಯವನ್ನು ಬೇಧಿಸುವಲ್ಲಿ ಆದಿಮಾನವನ ವಿಫಲತೆ ಹುಟ್ಟು, ಬದುಕು, ಸಾವುಗಳ ನಿಗೂಢತೆಯನ್ನು ಅರ್ಥೈಸಲಾಗದ ಆತಂಕ, ಜಾತಿ ಮತ, ಧರ್ಮಗಳು ತಮ್ಮ ಅಸ್ತಿತ್ವಕ್ಕಾಗಿ ನಡೆಸಿದ ಹೋರಾಟ, ಈ ಹಿನ್ನೆಲೆಯಲಿ ನಂಬಿಕೆಗಳು ಹುಟ್ಟಿಕೊಳ್ಳುತ್ತವೆ.

ಲೌಕಿಕ ಕ್ರಿಯೆಯನ್ನು ಗಟ್ಟಿಗೊಳಿಸಲು ಅಥವಾ ನಿಷೇಧಿಸಲು ಅದಕ್ಕೆ ಧಾರ್ಮಿಕ ಚೌಕಟ್ಟನ್ನು ಒದಗಿಸುವುದುಂಟು.

೧. ಕಾಲನ್ನು ತೊಳೆಯುವಾಗ ಹಿಂಬಡವನ್ನು ಚೆನ್ನಾಗಿ ತೋಯಿಸಿಕೊಳ್ಳಬೇಕು. ಇಲ್ಲದಿದ್ದರೆ ಶನಿ ಹಿಡಿಯುತ್ತದೆ.

೨. ಸಂಜೆ ಹೊತ್ತಲ್ಲಿ ಕಸಗುಡಿಸಿ ಹೊರಹಾಕುವುದರಿಂದ ಲಕ್ಷ್ಮಿ ಹೊರ ಹೋಗುತ್ತಾಳೆ.

೩. ಬೆಳಿಗ್ಗೆ ಸೂರ್ಯೋದಯದ ನಂತರ ಮಹಿಳೆಯರು ಮಲಗಬಾರದು. ಎದ್ದು ಕಸಗುಡಿಸಿ ಹೊಸ್ತಿಲು ತೊಳೆದು, ಅಂಗಳಕ್ಕೆ ನೀರುಹಾಕಿ, ರಂಗೋಲಿ ಹಾಕಬೇಕು, ಹಣೆಗೆ ಕುಂಕುಮವನಿಟ್ಟಿರಬೇಕು. ಇಂಥವರ ಮನೆಗೆ ಲಕ್ಷ್ಮಿ ಬರುವಳು. ಬೆಳಿಗ್ಗೆ ಬಾಗಿಲನ್ನು ಮುಚ್ಚಬಾರದು.

೪. ಸಂಜೆಯ ಹೊತ್ತಿನಲ್ಲಿ ಮಹಿಳೆಯರು ಶುಭ್ರವಾಗಿ ಕೈಕಾಲು ಮುಖ ತೊಳೆದು, ತಲೆಬಾಚಿಕೊಂಡು ಹಣೆಗೆ ಕುಂಕುಮವನ್ನಿಟ್ಟು, ಮನೆಯಲ್ಲಿ ದೀಪಹಚ್ಚಿರಬೇಕು, ಆಗಲೂ ಲಕ್ಷ್ಮಿ ಬರುವುದುಂಟು ಎನ್ನುವುದು.

೫. ಸಂಜೆಯ ಹೊತ್ತು ಮನೆಯನ್ನು, ಮೈಮುಖವನ್ನು ಶುಭ್ರವಾಗಿಸಿಕೊಂಡು ದಣಿದು ಬರುವ ಗಂಡನನ್ನು ನಗುಮುಖದಿಂದ ಸ್ವಾಗತಿಸಬೇಕು. ಅದು ಬಿಟ್ಟು ಹೊತ್ತು ಮುಳುಗುವ ಹೊತ್ತಿನಲ್ಲಿ ಮಲಗಿದ್ದು, ಗಂಡ ಬಂದಾಗ ಕೆದರಿದ ತಲೆಯಿಂದಲೇ ಬಾಗಿಲು ತೆರೆದರೆ ಗಂಡನಾದವನು ಓಡಿಹೋದಾನು ಎನ್ನುವ ತಿಳುವಳಿಕೆ.

೬. ಅಕ್ಕಿಯ ಕಾಳನ್ನು ತಿಂದರೆ ಮದುವೆಯಲ್ಲಿ ಮಳೆಬರುತ್ತದೆ.

೭. ಆಷಾಡದಲ್ಲಿ ಮತ್ತು ಜೋಕಪ್ಪನ ಅಳಲಿನಲ್ಲಿ ಅತ್ತೆ-ಸೊಸೆ ಒಂದೇ ಮನೆಯಲ್ಲಿ ಓಡಾಡಬಾರದು. ಇತ್ಯಾದಿ ನಂಬಿಕೆಗಳೆಲ್ಲವೂ ದೇಶ, ಕಾಲ, ವ್ಯಕ್ತಿಯೊಂದಿಗೆ ಸಾಪೇಕ್ಷ ಸಂಬಂಧ ಹೊಂದಿರುವಂತಹುಗಳು. ಒಂದು ನಂಬಿಕೆಯು ಒಬ್ಬನಿಗೆ ನಂಬಿಕೆಯಾಗಿದ್ದರೆ ಇನ್ನೊಬ್ಬನಿಗೆ ಅದು ಮೂಢನಂಬಿಕೆಯು ಆಗಬಹುದು. ಮಾನವ ಬದುಕಿನ ಎಲ್ಲಾ ಮಗ್ಗಲುಗಳನ್ನು ಆವರಿಸಿಕೊಂಡಿರುವ ನಂಬಿಕೆಗಳು ಮನುಷ್ಯನ ಜೀವನದೊಂದಿಗೆ ನಿಕಟ ಸಂಬಂಧವನ್ನು ಪಡೆದುಕೊಂಡಿವೆ. ನಂಬಿಕೆಯೊಂದನ್ನು ಬಿತ್ತಿ ಅದನ್ನು ಊರ್ಜಿತಗೊಳಿಸಲು ಮನುಷ್ಯ ದುಡಿಯುತ್ತಾನೆ.

ಒಂದು ಪ್ರದೇಶದಲ್ಲಿ ಬದುಕುವ ಇಡೀ ಜನತೆ ಸಾರ್ವತ್ರಿಕವಾಗಿ ನಂಬುವ ಕೆಲವು ನಂಬಿಕೆಗಳು ಹೇಗಿವೆಯೋ ಹಾಗೆಯೇ ವಿಧಿ-ನಿಷೇಧಗಳುಂಟು. ಈ ವಿಧಿ-ನಿಷೇಧಗಳು ಎನ್ನುವ ಕಲ್ಪನೆಯನ್ನು ಇಂದು

ಬಹಳ ವಿಶಾಲವಾದ ಅರ್ಥದಲ್ಲಿ ಬಳಸಲಾಗುತ್ತದೆ. ಅಥಣಿಪರಿಸರದ ವಾಲ್ಮೀಕಿ ಸಮುದಾಯದಲ್ಲಿ ನಂಬಿಕೆ; ವಿಧಿ-ನಿಷೇಧಗಳು ಸಂವಿಧಾನದ ನಿಯಮಗಳಂತೆ ಇರುತ್ತವೆ. ಇವರು ಈ ನಿಯಮಗಳಿಗೆ ಬದ್ಧರಾಗಿಯೇ ಸಾಮಾಜಿಕ ವ್ಯವಸ್ಥೆಯಲ್ಲಿ ಜೀವಿಸುತ್ತಾರೆ. ಈ ಪರಿಸರಕ್ಕೆ ಅನುಗುಣವಾಗಿ ಕಾಲಕಾಲಕ್ಕೆ ತಕ್ಕಂತೆ ನಂಬಿಕೆ-ನಿಷೇಧಗಳು ಅನ್ವಯಿಸುವುದಿಲ್ಲವಾದರೂ ಕೆಲವೊಂದನ್ನು ಕಡ್ಡಾಯವಾಗಿ ಪಾಲಿಸಿಕೊಂಡು ಬಂದಿದ್ದಾರೆ. ಇನ್ನು ಕೆಲವು ನಂಬಿಕೆಗಳು ಈ ಸಮುದಾಯದಲ್ಲಿ ಸಾಂಪ್ರದಾಯಿಕವಾಗಿ ಉಳಿದುಕೊಂಡು ಬಂದಿರುವುದನ್ನು ಕಾಣಬಹುದು.

ಯಾವುದೇ ಬುಡಕಟ್ಟು ಸಮುದಾಯಗಳು ಹೆಚ್ಚಾಗಿ ದೈವಗಳು ನುಡಿಯುವ ಭವಿಷ್ಯ ವಾಚಕಗಳ ನಿರ್ಣಯ ಮತ್ತು ನಿರ್ದೇಶನದಂತೆ ನಡೆಯುವುದನ್ನು ಕಾಣುತ್ತೇವೆ. ಇದಕ್ಕೆ ಅಥಣಿ ಪರಿಸರದ ವಾಲ್ಮೀಕಿ ಸಮುದಾಯ ಹೊರತಲ್ಲ. ಇವರುಗಳು ಹಲವು ಭವಿಷ್ಯ ವಾಚಕಗಳನ್ನು ನಂಬಿ ತಮ್ಮ ಕೆಲಸ ಕಾರ್ಯಗಳನ್ನು ರೂಪಿಸಿಕೊಳ್ಳುವುದುಂಟು.

ಇವರು ಬ್ರಾಹ್ಮಣರು ಹೇಳುವ ಪಂಚಾಂಗದ ಭವಿಷ್ಯವನ್ನು ನಂಬುತ್ತಾರೆ. ತಮ್ಮ ಮನೆಗಳಲ್ಲಿ ಏನೇ ಕಾರ್ಯಗಳನ್ನು ಮಾಡಿದರೂ ಮೊದಲು ಬ್ರಾಹ್ಮಣರ ಬಳಿಹೋಗಿ ಕೇಳಿಸಿಕೊಂಡು ಬರುತ್ತಾರೆ. ಅವರು ಹೇಳುವ ಪ್ರಕಾರ ದೇವತಾಕಾರ್ಯ, ಪೂಜೆ, ಮದುವೆ, ನಾಮಕರಣದಂತ ಕಾರ್ಯಗಳನ್ನು ಚಾಚುತಪ್ಪದೆ ಪಾಲಿಸುತ್ತಾರೆ. ಇವರಿಗೆ ಭವಿಷ್ಯದಲ್ಲಿ ಎಲ್ಲಿಲ್ಲದ ನಂಬಿಕೆ ಹಾಗಾಗಿ ಹೇಳಿಕೆಗಳನ್ನು ಕೇಳುವುದು ಇವರಿಗೆ ರೂಢಿಯಾಗಿ ಬಂದಂತಿದೆ. ಹೆಣ್ಣು ದೇವರ ಮೊರೆಹೋಗಿ ಅಲ್ಲಿನ ಅರ್ಚಕನು, ಅಥವ ದೇವರನ್ನು ಹೊತ್ತವರನ್ನು ಹೇಳಿಕೆ ಕೇಳಿಕೆಗಳನ್ನು ಕೇಳುತ್ತಾರೆ. ಕೈಯನ್ನು ನೋಡಿ ಭವಿಷ್ಯ ಹೇಳುವವರನ್ನು ನಂಬುತ್ತಾರೆ. ಶಕುನಗಳನ್ನು ನಂಬುತ್ತಾರೆ. ಒಂಟಿಸೀನು ಅವಲಕ್ಷಣ, ಜೋಡಿಸೀನು ಶುಭಶಕುನ, ಹೆಣ್ಣನ್ನು ನೋಡಲು ಮನೆಗೆ ಯಾರಾದರೂ ಬಂದಾಗ ಆ ಮನೆಯಲ್ಲಿ ಹಣಿಗಿಯಿಂದ ತಲೆಬಾಚುತ್ತಿದ್ದರೆ ಅದು ಅವರಿಗೆ ಅಪಶಕುನ, ಕಸಗುಡಿಸುತ್ತಿದ್ದರೆ ಅಪಶಕುನ, ಊಟಮಾಡುತ್ತಿದ್ದರೆ ಅಪಶಕುನ, ಅದರಲ್ಲಿಯೂ ಊಟಮಾಡುವ ವ್ಯಕ್ತಿಗಳು ಕೈತೊಳೆದು ಬಂದರಂತೂ ಇನ್ನು ಅಪಶಕುನ. ತುಂಬಿದ ಕೊಡ ಎದುರಿಗೆ ಬಂದರೆ ಶುಭ ಶಕುನ. ಕಟ್ಟಿಗೆಯ ಹೊರೆ ಎದುರಿಗೆ ಬಂದರೆ ಅಪಶಕುನ. ಎದುರಿಗೆ ಬಂದರೆ ಬಂದ ಕಟ್ಟಿಗೆಯ ಹೊರೆಯನ್ನು ಹೊತ್ತವರನ್ನು ನಿಲ್ಲಿಸಿ ಕಟ್ಟಿಗೆಯನ್ನು ಮುರಿದು ಕಟ್ಟಿಗೆಯ ತುಂಡನ್ನು ಜೊತೆಗೆ ತೆಗೆದುಕೊಂಡು ಹೋಗುತ್ತಾರಂತೆ. ಇದರಿಂದ ಸ್ವಲ್ಪಮಟ್ಟಿಗೆ ಸಮಾಧಾನ. ಕಾಗೆ ಕೂಗಿದರೆ ಪೌಣೇರು (ಸಂಬಂಧಿಕರು) ಬರುತ್ತಾರೆ ಎನ್ನುವ ನಂಬಿಕೆ. ಹಲ್ಲಿ ಲೊಚಗುಟ್ಟಿದರೂ ಶಕುನ ಹೇಳುತ್ತಾರೆ. ಸ್ತ್ರೀ ದೈವಗಳಾದ ದುರುಗವ್ವ, ಮುರುಗವ್ವ, ಯಲ್ಲವ್ವನ ಜೋಗುತಿಯರು ಹೇಳುವ ಭವಿಷ್ಯವನ್ನು ನಂಬುತ್ತಾರೆ. ಅವರು ಹೇಳಿದಂತೆ ನಡೆದುಕೊಳ್ಳುತ್ತಾರೆ. ಇವರು ತಮ್ಮ ವೈಯಕ್ತಿಕ ಸಮಸ್ಯೆಗಳಿಗೆಲ್ಲ ದೇವತೆಗಳ ಮೊರೆಹೋಗುತ್ತಾರೆ. ಮಕ್ಕಳ ಫಲಬೇಕೆಂದರೂ, ಗಂಡು ಮಗು ಬೇಕಾದರೂ, ಮದುವೆಯಾಗಬೇಕಾದರೂ, ಖಾಯಿಲೆ ವಾಸಿಯಾಗಬೇಕಾದರೂ, ಮುತ್ತೈದೆತನ ವೃದ್ಧಿಸಲು ದೇವತೆಗಳಲ್ಲಿ ಮೊರೆಹೋಗುತ್ತಾರೆ. ಹಾಗೆಯೇ

ಒಳ್ಳೆಯದಾಗಲೆಂದು ಹೂವಿನ ಪ್ರಸಾದ ಕೇಳುವುದು ರೂಢಿಯಾಗಿ ಬಂದಿದೆ. ದೇವತೆಯು ಬಲಭಾಗದಿಂದ ಹೂವನ್ನು ಕೊಟ್ಟರೆ ಅಂದುಕೊಂಡ ಕೆಲಸ ಯಶಸ್ವಿಯಾಗುತ್ತದೆ ಎಂದು ನಂಬಿದ್ದಾರೆ. ಒಂದು ವೇಳೆ ಎಡಭಾಗದಿಂದ ಹೂವಿನ ಪ್ರಸಾದ ದೊರೆತಲ್ಲಿ ಕೆಲಸ ಮುಂದುವರಿಸುವುದಿಲ್ಲ.

ಆಂಜನೇಯನಲ್ಲಿಯೂ ವಾಲ್ಮೀಕಿ ಸಮುದಾಯದವರು ಹೂವನ್ನು ಕೇಳುತ್ತಾರೆ. ಇವರಿಗೆ ತಮ್ಮ ಕೆಲಸವನ್ನು ಅಂದುಕೊಂಡಂತೆ ಆಂಜನೇಯನು ನಡೆಸಿಕೊಂಡು ಬಂದಿದ್ದಾನೆ ಎಂದು ಆಂಜನೇಯನನ್ನು ಕುರಿತು ಬಹುವಾಗಿ ಮೆಚ್ಚುಗೆ, ನಂಬುಗೆಗೆ ಪಾತ್ರರಾಗಿದ್ದಾರೆ.

ಅಥಣಿ ಪರಿಸರದ ವಾಲ್ಮೀಕಿ ಸಮುದಾಯದವರು ನಂಬಿಕೊಂಡು ಬಂದಿರುವ ನಂಬಿಕೆ, ಶಕುನ, ಜೋತಿಷ್ಯದ ಆಧಾರದ ಮೇಲೆ ಯಾವ ಕೆಲಸ ಮಾಡುವುದು, ಯಾವ ಕೆಲಸ ಬಿಡುವುದು ಎಂಬ ಅಂಶಗಳನ್ನು ಗಮನಿಸಬಹುದು.

ನಂಬಿಕೆಯು ಮಾನವನಲ್ಲಿ ಪರಂಪರಾನುಗತವಾಗಿ ಅಂಗೀಕೃತವಾದ ಒಂದು ಪರಿಕಲ್ಪನೆ. ಇಂತಹ ಪರಿಕಲ್ಪನೆಯಿಂದ ನಂಬಿಕೆ ವಿಧಿನಿಷೇಧಗಳು ಹುಟ್ಟಿಕೊಂಡಿವೆ. ಇವು ಮಾನವನ ಬದುಕಿನೊಂದಿಗೆ ಬೇರ್ಪಡಿಸಲಾರದ ಸಂಬಂಧವನ್ನು ಹೊಂದಿವೆ. ಅವು ಸೂಚನೆ, ನಿಯಮ, ವಿಧಿ-ನಿಷೇಧ, ಆಗ್ರಹ ಮತ್ತು ಆಜ್ಞೆಗಳ ರೂಪದಲ್ಲಿ ಮಾನವನ ನಿತ್ಯ ಬದುಕಿನೊಂದಿಗೆ ಸಂಬಂಧವನ್ನು ಕಂಡುಕೊಂಡಿವೆ. ಆಲೋಚನೆ, ರೂಢಿ, ಜೀವನಕ್ರಮ, ಸಂಪ್ರದಾಯ, ಆಚರಣೆಗಳು ಮೂಲಭೂತವಾಗಿ ನಂಬಿಕೆಗಳಿಂದ ಪ್ರೇರಿತವಾದವುಗಳೆಂದೇ ಹೇಳಬಹುದು. ವ್ಯಕ್ತಿಯ ಜೀವನದ ಘಟ್ಟಗಳಲ್ಲಿ ಆಕಸ್ಮಿಕವಾಗಿ ಯಾವುದೇ ಒಂದು ಘಟನೆ ಪದೇ ಪದೇ ಪುನರಾವರ್ತನೆಗೊಂಡಾಗ ಅದು ನಂಬಿಕೆಯಾಗಿ ಉಳಿದುಕೊಂಡು ಬರುತ್ತದೆ. ಉದಾ. ಗರ್ಭಿಣಿಯರು ನದಿ ದಾಟಬಾರದು ಎಂಬ ನಂಬಿಕೆ, ಬೆಕ್ಕು, ಹೆಣ, ಒಂಟಿ ಬ್ರಾಹ್ಮಣ, ವಿಧವೆ ಎದುರು ಬಂದರೆ ಅಪಶಕುನ ಎನ್ನುವ ನಂಬಿಕೆ. ಇದರಿಂದ ಪರಿಹಾರ ಪಡೆದುಕೊಳ್ಳಲು, ತನ್ನ ಮೇಲೆ ತಾನೇ ಕೆಲವು ವಿಧಿ ನಿಷೇಧಗಳನ್ನು ಹಾಕಿಕೊಂಡು ಅದರ ಚೌಕಟ್ಟಿನಲ್ಲಿಯೇ ಬದುಕನ್ನು ನಡೆಸುವ ರೂಢಿ ಜಾರಿಗೊಂಡಿದೆ. ಇಂತಹ ನಂಬಿಕೆಗಳನ್ನು ಆರ್.ಎಸ್.ಬಾಗ್ಸ್ ವೈಜ್ಞಾನಿಕ ಬಗೆಯಾಗಿ ಅರ್ಥೈಸಿದ್ದಾರೆ.

ಮೂಲತಃ ಕಾಲ್ಪನಿಕ ಆಲೋಚನೆಯೊಂದು ವೈಯಕ್ತಿಕ ಅನುಭವದ ನೆಲೆಯಲ್ಲಿ ಹುಟ್ಟಿಕೊಂಡು ಸಾಮೂಹಿಕವಾಗಿ ಮಾನ್ಯತೆ ಪಡೆದುಕೊಂಡರೆ ಅದು ನಂಬಿಕೆಯಾಗುತ್ತದೆ. ಪ್ರಕೃತಿಯ ರಹಸ್ಯವನ್ನು ಭೇದಿಸುವಲ್ಲಿ ವಿಫಲನಾದ ಮಾನವ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ನಡೆಸಿದ ಹೋರಾಟ, ಆಚರಣೆಗಳ ಫಲವಾಗಿ ನಂಬಿಕೆಗಳು ಹುಟ್ಟಿಕೊಂಡಿವೆ. ಭಾರತದ ಬಹುತೇಕ ಎಲ್ಲಾ ಗ್ರಾಮಗಳಲ್ಲಿ ಇನ್ನೂ ಕೆಲವು ನಂಬಿಕೆಗಳು ಧಾರ್ಮಿಕ ನೆಲೆಗಟ್ಟನ್ನು ಪಡೆದುಕೊಂಡಿರುವುದರಿಂದ, ಸಾಮಾಜಿಕ ಜೀವನದೊಂದಿಗೆ ಹಾಸು ಹೊಕ್ಕಾಗಿರುವುದರಿಂದ ಇನ್ನೂ ಮುಂದುವರೆದುಕೊಂಡು ಬಂದಿವೆ.

ಮಾನವನ ಇಂತಹ ಎಲ್ಲ ನಂಬಿಕೆಗಳನ್ನು ಮೂಢನಂಬಿಕೆಗಳೆಂದು ತಿರಸ್ಕರಿಸಲು ಸಾಧ್ಯವಿಲ್ಲ. ಏಕೆಂದರೆ ಅವು ಮೂಢನಂಬಿಕೆಗಳಾಗಿ ಕಂಡುಬಂದರೂ, ಕೆಲವೊಂದು ನಂಬಿಕೆಗಳು ನಿಷೇಧಗಳು ವೈಜ್ಞಾನಿಕ

ಸ್ವರೂಪವನ್ನು ಪಡೆದುಕೊಂಡಿವೆ. ಮತ್ತೆ ಕೆಲವು ನಂಬಿಕೆಗಳು, ವಿಧಿ-ನಿಷೇಧಗಳು ಸಮಾಜದಲ್ಲಿನ ಅಹಿತಕರ ಘಟನೆಗಳನ್ನು ನಿವಾರಿಸುವುದರೊಂದಿಗೆ ಸಮಾಜದ ಅನ್ಯೋನ್ಯ ಬಾಂಧವ್ಯಕ್ಕೂ ಕಾರಣವಾಗಿವೆ. ಜಾತಿ, ಧರ್ಮ, ಲಿಂಗ, ಕೋಮುಗಳ ನಡುವೆ ಸಾಮಾಜಿಕ-ರಾಜಕೀಯ ಸಂದರ್ಭದಲ್ಲಿ ಮಾನವ ಸಂಬಂಧಗಳನ್ನು ಗಟ್ಟಿಗೊಳಿಸುವ ಕೆಲಸವನ್ನು ಮಾಡುತ್ತವೆ.

ಇನ್ನು ಭಯ ಮತ್ತು ಭಾವನಾಮೂಲವಾದ ಒಂದು ನಂಬಿಕೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಅಥವಾ ಬಲಗೊಳಿಸುವಂತಹದು ನಿಷೇಧವಾಗಿದೆ. ಇದನ್ನು ಮಾಡಬಾರದು, ಇದು ಕೆಡಕು ಎನ್ನುವ, ಸಾಮಾಜಿಕ, ಧಾರ್ಮಿಕ, ಪ್ರತಿಬಂಧಕವೇ ನಿಷಿದ್ಧ. ಹೀಗಾಗಿ ಲಿಖಿತ ಕಾನೂನನ್ನು ಮೀರಿಸುವಂತಹ ಶಕ್ತಿ ನಿಬಂಧನೆಯಾಗಿ ನಿಷೇಧ ಕಾರ್ಯನಿರ್ವಹಿಸುತ್ತದೆ. ನಿಷೇಧಕ್ಕೆ ಮತ್ತು ಸಾಮಾಜಿಕ ನಿಯಮಗಳಿಗೂ ಅವಿನಾಭಾವ ಸಂಬಂಧವಿದೆ. ಏಕೆಂದರೆ ನಿಷೇಧದ ಹಿಂದೆ ಸಾಮಾಜಿಕ ನಿಯಮಗಳು ಇರುತ್ತವೆ. ಅದರಿಂದ ನಿಷೇಧವನ್ನು ಮೀರುವುದೆಂದರೆ ಸಾಮಾಜಿಕ ನಿಯಮಗಳನ್ನು ಮೀರಿದಂತಾಗುತ್ತದೆ. ಹೀಗೆ ಸಾಮಾಜಿಕ ನಿಯಮಗಳನ್ನು ಉಲ್ಲಂಘಿಸಿದ ನಿಷೇಧವೇ ಸೇಡನ್ನು ತೀರಿಸಿಕೊಳ್ಳುತ್ತದೆ ಎಂದು ತಿಳಿಯಲಾಗುತ್ತದೆ. ಕೆಲವು ಸಮುದಾಯಗಳಲ್ಲಿ ನಿಷೇಧ ಮುರಿಯುವ ವ್ಯಕ್ತಿಗೆ 'ಅಪವಿತ್ರ' ಎಂದು ಭಾವಿಸಲಾಗುತ್ತದೆ ಮತ್ತು ಆತನಿಗೆ ಶಿಕ್ಷೆ ವಿಧಿಸಲಾಗುತ್ತದೆ.

ಕುಟುಂಬಗಳ ಸೌಖ್ಯಕ್ಕೆ, ಗ್ರಾಮಗಳ ಶಾಂತಿಗೆ, ಸೌಹಾರ್ದತೆಯನ್ನು ಕಾಪಾಡಿಕೊಂಡು ಹೋಗಲು ತಮ್ಮದೇ ಆದ ನ್ಯಾಯ ಪರತೆಯನ್ನು ರೂಢಿಸಿಕೊಂಡು ಬರಲಾಗಿದೆ. ಅವು ಸಾಮಾಜಿಕ ಚೌಕಟ್ಟಿನಲ್ಲೇ ರೂಪಿತವಾಗಿರುತ್ತಿದ್ದರಿಂದ ಕಾನೂನಿನ ಅನ್ವಯ ಜಾರಿಗೆ ಬರುವ ಕಟ್ಟಳೆಗಳಿಗಿಂತ ಹೆಚ್ಚು ಆತ್ಮೀಯವಾಗಿರುತ್ತವೆ, ಹೆಚ್ಚು ಮುಖ್ಯವೆನಿಸುತ್ತವೆ. ಆದ್ದರಿಂದಲೇ ಇಂತಹ ಕಟ್ಟಳೆಗಳಿಗೆ ಹಿಂದಿನ ಸಮಾಜದಲ್ಲಿ ಹೆಚ್ಚು ತಲೆಬಾಗುತ್ತಿದ್ದರು. ಅವುಗಳನ್ನು ಯಾರೂ ಉಲ್ಲಂಘಿಸುತ್ತಿರಲಿಲ್ಲ. ಅಂದಿನ ಸಮಾಜದಲ್ಲಿ ನ್ಯಾಯ ಪದ್ಧತಿಯು ಅಪರಾಧಕ್ಕೆ ತಕ್ಕಂತೆ ಬೇರೆ ಬೇರೆಯಾಗಿರುತ್ತಿತ್ತು. ಕಳ್ಳತನ, ಕುಡಿತ, ಹಲ್ಲೆ, ಹೆಣ್ಣು ಮಕ್ಕಳ ಮಾನ ಅಪಹರಣಕ್ಕೆ ಸಂಬಂಧಿಸಿದ ಅಪರಾಧಗಳನ್ನು ಹಳ್ಳಿಗಳಲ್ಲಿ ತೀವ್ರವಾಗಿ ಪರಿಗಣಿಸಲ್ಪಡುತ್ತಿದ್ದವು. ಅದು ದಂಡದ ರೂಪದಲ್ಲಿರುತ್ತಿತ್ತು. ದೈವದವರಿಗೆ ಊಟ ಹಾಕಿಸುವ ಪರಿಪಾಠವಿತ್ತು. ಇದಕ್ಕಿಂತ ಘೋರವಾದುದೆಂದರೆ, ಕುಲದವರು ಹಾಕಿದ ಬಹಿಷ್ಕಾರ ಮತ್ತು ಊರವರು ಹಾಕುವ ಬಹಿಷ್ಕಾರ. ಜಾತಿ-ಬಾಂಧವರು ಅಪರಾಧಿಯನ್ನು ಯಾವುದೇ ಮದುವೆ ಮುಂಜಿವೆ ಮೊದಲಾದ ಶುಭಕಾರ್ಯಗಳಲ್ಲಿ ಪ್ರವೇಶ ನೀಡುವುದಿಲ್ಲ. ಊರವರು ಬಹಿಷ್ಕಾರ ಹಾಕಿದರೆ ಇಡೀ ಊರಿನ ಹೊರಗೆ ಇರುವುದು. ಅಂತಹ ವ್ಯಕ್ತಿಗೆ ಬೆಂಕಿ ನೀರು ಕೊಡುವುದಿಲ್ಲ. ಇಂತಹ ಶಿಕ್ಷೆಯನ್ನು ಯಾರೂ ಉಲ್ಲಂಘಿಸುತ್ತಿರಲಿಲ್ಲ. ಎಲ್ಲ ತಮ್ಮ ಒಳ್ಳೆಯದಕ್ಕಾಗಿಯೇ ಎಂಬ ಮನೋಭಾವನೆ ಗ್ರಾಮಸ್ಥರಲ್ಲಿದ್ದುದು ಅದಕ್ಕೆ ಕಾರಣ.

ಇಂತಹ ನಿಷೇಧಗಳು ಹಲವಾರು ಉದ್ದೇಶಗಳಿಂದ ಬಳಕೆಗೆ ಬಂದಿರಬಹುದು. ಮೊದಲನೆಯದಾಗಿ ಗ್ರಾಮ, ಹಳ್ಳಿಗಳ ಹಿರಿಯ ಮುಖಂಡರು, ಪೂಜಾರಿಗಳು ಮೊದಲಾದ ಪ್ರಮುಖರು ತಮ್ಮ ರಕ್ಷಣೆಗಾಗಿ

ಮಾಡಿಕೊಂಡಿರುವ ನಿಷೇಧಗಳು, ನಿಗೂಢ ಶಕ್ತಿಗಳ ಪ್ರಭಾವದಿಂದ ಸಾಮಾನ್ಯ ಮಾನವರ ರಕ್ಷಣೆ, ಆಹಾರ ಸೇವನೆ ಮೊದಲಾದ ಅನಿಷ್ಟ ಶಕ್ತಿಗಳಿಂದ, ರೋಗಗಳಿಂದ ರಕ್ಷಣೆ ಪಡೆಯುತ್ತಿದ್ದರು. ಉದಾ: ರಾತ್ರಿ ವೇಳೆಯಲ್ಲಿ ಊಟ ಮಾಡಬಾರದು. ರಾತ್ರಿ ವೇಳೆ ಎಲ್ಲೆಂದರಲ್ಲಿ ಓಡಾಡಬಾರದು ಎನ್ನುವುದು. ಮೂರನೆಯದಾಗಿ ಕಳ್ಳಕಾರರಿಂದ ಆಸ್ತಿಪಾಸ್ತಿಗಳನ್ನು ರಕ್ಷಿಸಿಕೊಳ್ಳುವುದು ಇದೇ ಅರ್ಥದಲ್ಲಿ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್ ಯಾವುದೇ ಒಂದು ವಸ್ತು ಅಥವಾ ವ್ಯಕ್ತಿಯಿಂದ ಅಪಾಯವಾದೀತು ಎನ್ನುವ ಮನುಷ್ಯನ ಸೂಕ್ತ ಮನಸ್ಸಿನ ಪ್ರೇರಣೆಯೇ ನಿಷೇಧದ ಹಿನ್ನೆಲೆಯಲ್ಲಿದೆ ಎಂದಿದ್ದಾರೆ. ವೂಂಟ್ ಅವುಗಳನ್ನು 'ಮಾನಸಿಕ ರಕ್ಷಕ' ಎಂದು ಕರೆದಿದ್ದಾನೆ. ಆದರೆ ಇಂತಹ ನಿಷೇಧಗಳ ಅಗತ್ಯತೆ ಅರ್ಥವನ್ನು ಸಂಶೋಧನೆಗೆ ಒಳಪಡಿಸಿ ಆಯ್ಕೆಮಾಡಿ ಅಳವಡಿಸಿಕೊಂಡರೆ ಉತ್ತಮ ಪ್ರಯೋಜನವಾಗುವುದು.

ಇಂತಹ ನಂಬಿಕೆ ಮತ್ತು ನಿಷೇಧಗಳನ್ನು ಮೀರಿ ವರ್ತಿಸಿದ ವ್ಯಕ್ತಿಯಿಂದ ಸಮಾಜದ ಸೌಹಾರ್ದತೆಗೆ ಧಕ್ಕೆಯುಂಟಾಗುತ್ತದೆ ಎನ್ನುವುದನ್ನು ಭಾವಿಸಿಯೋ, ಸಮಾಜದ ಕಟ್ಟುಪಾಡುಗಳನ್ನು ಮೀರಿದ ವ್ಯಕ್ತಿಗೆ ಶಿಕ್ಷಿಸಲು, ಸಮಾಜದ ಜಗಳಗಳನ್ನು ನಿವಾರಿಸಲು ನ್ಯಾಯಪದ್ಧತಿಯು ಅಸ್ಥಿತ್ವಕ್ಕೆ ಬಂದಿರಬಹುದು. ಹಿಂದೆಲ್ಲ ರಾಜರ ಅಥವಾ ಸಂಸ್ಥಾನಿಕರ ಪರವಾಗಿ ಗೌಡನೋ ಪಟೇಲನೋ ಊರಿನ ಆಡಳಿತವನ್ನು ನಿಯಂತ್ರಿಸುತ್ತಿದ್ದ. ಸಾಮಾನ್ಯವಾಗಿ ನಮ್ಮ ಬಹುಪಾಲು ಗ್ರಾಮಗಳು, ಉಚ್ಚಕುಲದವರು, ಶ್ರೀಮಂತರು, ಮದುವೆ-ಮುಂಜಿವೆಗಳಲ್ಲಿ, ಅಣ್ಣ-ತಮ್ಮಂದಿರ ಜಗಳಗಳಲ್ಲಿ ಬೇರೆಯಾಗುವುದರಲ್ಲಿ ಅನಿವಾರ್ಯವಾಗಿದ್ದರು. ಒಂದರ್ಥದಲ್ಲಿ ಇವರು ಅಧಿಕೃತ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸುತ್ತಿದ್ದರು. ಆದರೆ ಆಧುನಿಕತೆ ಕಾಲಿಟ್ಟಂತೆ ಇಂತಹ ನ್ಯಾಯ ಪದ್ಧತಿಯು ತನ್ನ ಸ್ಥಾನವನ್ನು ಕಳೆದುಕೊಳ್ಳುತ್ತಿದೆ.

ಇಂತಹ ನಂಬಿಕೆಗಳು, ವಿಧಿ-ನಿಷೇಧಗಳು ಮತ್ತು ನ್ಯಾಯಪದ್ಧತಿಗಳು ಪ್ರತಿಯೊಂದು ಸಮುದಾಯಗಳಲ್ಲೂ ಏಕಪ್ರಕಾರವಾಗಿ ಕಂಡುಬರುತ್ತಿದ್ದರೂ ಕೆಲವೊಂದು ನಂಬಿಕೆಗಳು, ವಿಧಿ-ನಿಷೇಧಗಳು ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುತ್ತವೆ. ಈ ಲೇಖನದಲ್ಲಿ ಅಥಣಿ ಪರಿಸರದಲ್ಲಿನ ವಾಲ್ಮೀಕಿ ಸಮುದಾಯದ ನಂಬಿಕೆ, ವಿಧಿ-ನಿಷೇಧ ಮತ್ತು ನ್ಯಾಯಪದ್ಧತಿಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ನಂಬಿಕೆ ಮತ್ತು ನಿಷೇಧಗಳು

ಕಣ್ಣು ಹಾರುವುದು

ಮಹಿಳೆಯರಿಗೆ ಎಡಗಡೆಯ ಕಣ್ಣುಹಾರಿದರೆ ಶುಭ ಶಕುನವೆಂದೂ ಮನೆಗೆ ಸಂಬಂಧಿಕರು ಬರುವರೆಂದು ನಂಬುತ್ತಾರೆ. ಪುರುಷರಿಗೆ ಬಲಗಣ್ಣು ಹಾರಿದರೆ ಕಾರ್ಯಸಿದ್ಧಿ ಎನ್ನುವ ನಂಬಿಕೆ ಇದೆ.

ಹಲ್ಲಿ ಶಕುನ

ಮನೆಗಳಲ್ಲಿ ಯಾವುದಾದರು ಶುಭಕಾರ್ಯಗಳ ಬಗ್ಗೆ ಕುರಿತು ಮಾತನಾಡುವಾಗ ಬಾಗಿಲ ಮೇಲೆ, ಬೇರೆ ಬೇರೆ ಸ್ಥಳಗಳಲ್ಲಿ ಹಲ್ಲಿ ಲೊಚಗುಟ್ಟಿದಾಗ ಅದು ಲೊಚಗುಟ್ಟುವ ಶಬ್ದಗಳ ಸಂಖ್ಯೆಯ ಆಧಾರದ ಮೇಲೆ ಎರಡು ಬಾರಿ ಲೊಚಗುಟ್ಟಿದರೆ ಶುಭವೆಂದು, ಕಾರ್ಯಸಿದ್ಧಿಯೆಂದು ಮೂರು ಬಾರಿ ಲೊಚಗುಟ್ಟಿದರೆ ಅಶುಭವೆಂದು, ಭಾವಿಸುವ ಪ್ರತೀತಿ ವಾಲ್ಮೀಕಿ ಸಮುದಾಯಗಳಲ್ಲೂ ಇದೆ.

ಕಾಗೆ ಶಕುನ

ಹಿಂದೂ ಸಂಪ್ರದಾಯಗಳಲ್ಲಿ ಕಾಗೆಗೆ ಹೆಚ್ಚಿನ ಒತ್ತು ನೀಡುತ್ತಾರೆ. ಕಾಗೆಯು ಮನೆಯ ಒಳಗೆ ಬಂದರೆ ಅಪಶಕುನವಾಗುತ್ತದೆ ಎಂದು ಭಾವಿಸಿ ಇಡೀ ಮನೆಯನ್ನು ಸಾರಿಸಿ ಸಿಹಿ ಅಡುಗೆಗಳನ್ನು ಮಾಡಿ ದೇವರಿಗೆ ನೈವೇದ್ಯ ಮಾಡಬೇಕು ಆಗ ಯಾವುದೇ ತೊಂದರೆಯಾಗುವುದಿಲ್ಲವೆಂಬ ನಂಬಿಕೆಯಿದೆ. ಕಾಗೆಯು ಮನೆಯ ಮೇಲಿಂದ ಅರಚುತ್ತಾ ಹಾದು ಹೋದರೆ ನೆಂಟರಿಷ್ಟರು ಬರುತ್ತಾರೆ. ಮನೆಯನ್ನು ಸುತ್ತು ಹಾಕುತ್ತಾ ಅರಚುತ್ತಿದ್ದರೆ ಸಾವಿನ ಸುದ್ದಿ ಬಂದೇ ಬರುತ್ತದೆ. ಇದು ಅನುಭವದ ಮಾತು ಎನ್ನುವುದು ಈ ಸಮುದಾಯದ ಅಭಿಪ್ರಾಯ ಮಾತ್ರವಾಗಿಲ್ಲ ಎಲ್ಲ ಸಮುದಾಯದ ಅಭಿಪ್ರಾಯವಾಗಿದೆ. ಕಾಗೆಯು ತಲೆಗೆ ಬಡಿದು ಹೋದರೆ ಸ್ನಾನ ಮಾಡಿ ದೇವರಿಗೆ ಎಣ್ಣೆ ನೀಡಿ ಬರುವವರೆಗೆ ಮನೆಯೊಳಗೆ ಬರಬಾರದೆಂಬ ನಿಷೇಧವಿದೆ.

ಸತ್ತ ವ್ಯಕ್ತಿಗೆ ೩ ದಿನಗಳ ನಂತರ ಮಾಡುವ ತಿಥಿಗಳಲ್ಲಿ ಸತ್ತ ವ್ಯಕ್ತಿಯ ಇಚ್ಛೆಯನ್ನು ಪೂರೈಸಲು ಕಾಗೆಯ ಅವಶ್ಯಕತೆ, ಎಲ್ಲ ಸಮುದಾಯಗಳಿಗೂ ಇರುತ್ತದೆ. ಅಂದಿನ ದಿನ ಸಗಣೆಯ ಕುಳ್ಳಿನಿಂದ ಬೇಯಿಸಿದ ಅನ್ನವನ್ನು ಕಂಚಿನ ತಟ್ಟೆಯಲ್ಲಿ ಹಾಕಿ ಪೂಜಿಸಿ ಕಾಗೆಗೆ ಕೂಳು ಹಾಕಲು ಹೋದಾಗ ತಕ್ಷಣವೇ ಕಾಗೆ ಮುಟ್ಟಿದರೆ ಸತ್ತ ವ್ಯಕ್ತಿಯ ಋಣ ಇಲ್ಲಿಗೆ ಮುಗಿಯಿತು ಎಂದು ತಿಳಿಯಲಾಗುತ್ತದೆ. ಒಂದು ವೇಳೆ ಆತನಲ್ಲಿ ಆಸೆಗಳಿದ್ದರೆ ಅಂದರೆ ಮಕ್ಕಳಿದ್ದರೆ ಅವರನ್ನು ಸಾಕುವ ಜವಾಬ್ದಾರಿಯಲ್ಲಿಯೇ ಕೊರಗಿದ್ದರೆ ಅಂತಹ ಸಮಯದಲ್ಲಿ ಯಾರು ತಮ್ಮ ಮಕ್ಕಳನ್ನು ಸಾಕಬಲ್ಲರು ಎಂದು ನಂಬಿರುತ್ತಾನೋ ಅಂತಹವರ ಕೈಯಿಂದ ಇಟ್ಟ ಕೂಳನ್ನು ಕಾಗೆ ಮುಟ್ಟುತ್ತದೆ ಎಂದು ಭಾವಿಸಲಾಗುತ್ತದೆ. ಇದು ಸತ್ಯವು ಹೌದು.

ಟಿಪುಕದ ಶಕುನ

ಈ ಪಕ್ಷಿಯು ರಾತ್ರಿ ವೇಳೆ ಮನೆಯ ಮೇಲೆ ಅರಚುತ್ತಾ ಮೂರುದಿನ ಹಾರಿದರೆ ಆ ಮನೆಯಲ್ಲಿ ಯಾರಾದರೂ ರೋಗದಿಂದ ಬಳಲುತ್ತಿದ್ದರೆ ಅವರು ಸಾಯುತ್ತಾರೆ. ಇಲ್ಲವೇ ಸಾವಿನ ಸುದ್ದಿ ಬರುತ್ತಿದೆ ಎನ್ನುವುದು ಒಂದು ನಂಬಿಕೆಯಾಗಿದೆ.

ಬೆಕ್ಕು

ಬೆಕ್ಕು ಪ್ರತಿಯೊಬ್ಬರು ಮನೆಯಲ್ಲಿ ಸಾಕುವ ಮುದ್ದು ಪ್ರಾಣಿ. ಇಂತಹ ಬೆಕ್ಕು ಮನೆಯಲ್ಲಿ ಬೆಳಿಗ್ಗೆ ಎದ್ದು ಯಾವ ದಿಕ್ಕಿನಲ್ಲಿ ಕುಳಿತು ನಾಲಿಗೆಯಿಂದ ತನ್ನ ಕಾಲಿಗೆ ತಿಕ್ಕಿ ಮುಖ ತೊಳೆದುಕೊಳ್ಳುತ್ತದೆಯೋ ಆ ದಿಕ್ಕಿನಲ್ಲಿರುವ ನೆಂಟರಿಷ್ಟರು ಮನೆಗೆ ಬರುತ್ತಾರೆ ಎಂಬುದನ್ನು ಪರೀಕ್ಷಿಸಿದ್ದೇವೆ. ಅದು ಹಾಗೆ ಕೂಡ ಆಗಿದೆ ಎನ್ನುತ್ತಾರೆ ಇವರು. ಅದೇ ಬೆಕ್ಕು ಶುಭ ಕೆಲಸಗಳಿಗೆ ಹೋಗುವಾಗ ಕಾಲಿಗೆ ಅಡ್ಡ ಬಂದರೆ ಇಲ್ಲವೇ ಬಲದಿಂದ ಎಡಕ್ಕೆ ಹಾದು ಹೋದರೆ ಶುಭವಾಗುವುದಿಲ್ಲ. ಹೋದ ಕೆಲಸವೂ ಆಗುವುದಿಲ್ಲ. ಅದಕ್ಕೆ ಆ ಕೆಲಸ ಮಾಡುವುದನ್ನು ಅಲ್ಲಿಗೇ ನಿಲ್ಲಿಸುತ್ತೇವೆ ಎನ್ನುವುದು ಬ್ಯಾಡರಹಟ್ಟಿ ವಾಲ್ಮೀಕಿ ಸಮುದಾಯದ ಅಭಿಪ್ರಾಯವಾಗಿದೆ.

ನಾಲಿಗೆ ತುದಿಯಲ್ಲಿ ಮಚ್ಚೆ ಇರುವವರ ನುಡಿಗಳು

ಇಂತಹ ಯಾವುದೇ ಪುರುಷ ಅಥವಾ ಮಹಿಳೆಯರು ಯಾವುದೇ ಕಾರಣಕ್ಕೂ ಅಪ್ಪಿತಪ್ಪಿಯೂ ಈ ಕೆಲಸ ಆಗುವುದಿಲ್ಲ. ಅದು ಉತ್ತಮವಾಗಿಲ್ಲವೆಂದು ಮಾತನಾಡಿದರೆ ಅಂತಹ ಯಾವ ಕೆಲಸವೂ ಆಗುವುದಿಲ್ಲ ಆದ್ದರಿಂದ ಅವರಿಗೆ ಬೈದು ಸುಮ್ಮನಿರಿಸುತ್ತೇವೆ ಎನ್ನುತ್ತಾರೆ.

ಕಾಲ್ಗುಣ

ಮನೆಯ ಸೊಸೆಯಾಗಿ ಬಂದವಳ ಕಾಲ್ಗುಣ ಚೆನ್ನಾಗಿದ್ದರೆ ಮನೆಯಲ್ಲಿ ಸುಖ ಸಮೃದ್ಧಿ ಇರುತ್ತದೆ. ಇಲ್ಲವಾದರೆ ಅದು ಸರ್ವನಾಶವಾಗುತ್ತದೆ ಎನ್ನುತ್ತಾರೆ. ಅದನ್ನು ಹೇಗೆ ಪರೀಕ್ಷಿಸುತ್ತೀರಾ ಎಂದು ಕೇಳಿದಾಗ ನೀಡಿದ ಉತ್ತರವೆಂದರೆ; ಮದುವೆಯಾದ ಮಹಿಳೆ ಗಂಡನ ಮನೆಗೆ ಬರುವಾಗ ಗೊತ್ತಿಲ್ಲದೆ ಎಡವುದು, ಕಾಲನ್ನು ಸವರಿ ನಡೆಯುವುದು, ಬಾಗಿಲನ್ನು ದಾಟುವಾಗ ಬಾಗಿಲಿಗೆ ಬೆರಳು ಬಡಿಸುವುದು, ಇನ್ನೊಬ್ಬರ ಮೇಲೆ ಜೋಲಿ ಹೊಡೆಯುವುದು, ಮನೆ ತುಂಬಿಸಿಕೊಳ್ಳುವ ಸಮಯದಲ್ಲಿ ಬಾಗಿಲಲ್ಲಿ ಬೆಕ್ಕು ಅಡ್ಡ ಬರುವುದು, ಇಲ್ಲವೇ ಬಾಗಿಲ ಮೇಲೆ ದವಸ ಧಾನ್ಯಗಳನ್ನು ಅಳೆಯುವ ಸೇರಿನಲ್ಲಿ ಇಡುವ ಸಂದರ್ಭದಲ್ಲಿ ಅಂತಹ ಧಾನ್ಯಗಳು ಆ ಮನೆಯಲ್ಲಿ ಇಲ್ಲದೇ ಹೋದರೆ ಅವುಗಳ ಮೇಲೆ ಆಕೆಯ ಕಾಲ್ಗುಣವನ್ನು ತಿಳಿಯುತ್ತೇವೆ ಎನ್ನುತ್ತಾರೆ. ಇದು ಅನುಭವದ ಮಾತು ಎನ್ನುತ್ತಾರೆ. ಪಕ್ಕದ ಮನೆಯ ಸೊಸೆಯನ್ನು ಅಮವಾಸ್ಯೆಯದಿನ ಮನೆಯಿಂದ ಹೊರದಬ್ಬಿದರು. ಇದರಿಂದ ಮದುವೆಯಾದ ಹುಡುಗನ ಮನೆಯಲ್ಲಿದ್ದ ೩೦ ಎಕರೆ ಭೂಮಿ, ಭಾವಿ, ಆಸ್ತಿ, ಮನೆ ಎಲ್ಲಾ ಬರಿದಾಗಿ ಇಂದು ಕೂಲಿಮಾಡುತ್ತಿದ್ದಾರೆ. ಅದೇ ಹುಡುಗಿಯ ಮನೆಯಲ್ಲಿ ಏನೂ ಇರಲಿಲ್ಲ. ಹುಡುಗಿ ತನ್ನ ಅಪ್ಪನ ಮನೆ ಸೇರಿದ್ದರಿಂದ ಅವರು ಅತ್ಯಂತ ಶ್ರೀಮಂತರಾಗಿದ್ದಾರೆ ಎನ್ನುವ ಅಭಿಪ್ರಾಯವನ್ನು ರಡ್ಡೇರಹಟ್ಟಿ ಗ್ರಾಮದಲ್ಲಿ ಸಂದರ್ಶಿಸಿದ ಮಹಿಳೆಯ ಅಭಿಪ್ರಾಯವಾಗಿದೆ. ಮನೆ ಅನುಕೂಲವಾಗಿದ್ದರೆ ಹೆಣ್ಣು ಮನೆಗೆ ಬಂದ ನಂತರ ಮನೆಯಲ್ಲಿ ಏರಿಕೆಯು ಇಳಿಯುತ್ತಾ ಬಂದರೆ ಆಕೆಯ ಕಾಲ್ಗುಣ ಸರಿಯಲ್ಲ ಎಂದು ತಿಳಿಯಲಾಗುತ್ತದೆ.

ಮದುವೆ ಸಮಯದಲ್ಲಿನ ನಂಬಿಕೆ, ವಿಧಿ-ನಿಷೇಧ

ಹಿಂದೂ ಸಮುದಾಯಗಳು ಮದುವೆ ಒಂದು ಪವಿತ್ರ ಬಂಧನವೆಂದು ನಂಬಿವೆ. ಮದುವೆಯ ಸಂದರ್ಭದಲ್ಲಿ ವಧುವಿನ ಮನೆಯಲ್ಲಿ ಮದುವೆಯಾದರೆ ಗಂಡಿನ ಚಪ್ಪರ ಪ್ರವೇಶವಾಗಬೇಕು. ಹಿಂದಿನ ಮದುವೆಗಳು ೧೦ ದಿನಗಳವರೆಗೆ ಜರುಗುತ್ತಿದ್ದು ಒಂದೊಂದು ದಿನ ಒಂದೊಂದು ನಿಯಮಗಳನ್ನು ಅನುಸರಿಸಲಾಗುತ್ತಿತ್ತು. ಗಂಡು ಹೆಣ್ಣಿಗೆ ತಾಳಿಕಟ್ಟುವಾಗ ಅರ್ಥೇಚ್ಛ, ಕಾಮೇಚ್ಛ, ಧರ್ಮೇಚ್ಛ ಎಂದು ಹೇಳಿ ಮೂರು ಗಂಟನ್ನು ಹಾಕಬೇಕು. ಅದರಿಂದ ಬಹುಕಾಲ ಜೀವನ ನಡೆಸಬಹುದು ಎನ್ನುವ ನಂಬಿಕೆ. ಅದಕ್ಕಿಂತ ಮೊದಲು ಧಾರೆ ಮಾಡಿಕೊಡುವಾಗ ಸುರಿಗೆ ಸುತ್ತುವುದನ್ನು ಮಾಡಲಾಗುವುದು. ನಾಲ್ಕು ಮೂಲೆಗೆ ನಾಲ್ಕು ಕುಂಬಾರರು ಮಾಡಿದ ಮಡಿಕೆಗಳಿಗೆ ದಾರವನ್ನು ಸುತ್ತಲಾಗುವುದು. ಅನಿಷ್ಟ ಶಕ್ತಿಗಳು ಅದರಿಂದ ಒಳಗೆ ಹೋಗಬಾರದು ಎಂಬ ನಂಬಿಕೆಯಿಂದ ಹೀಗೆ ಮಾಡಲಾಗುತ್ತದೆ. ಈ ಸುರಿಗೆಯನ್ನು

ಯಾರು ದಾಟಬಾರದು. ನಾಯಿದಾಟಿ ಹೋದರೆ ಅದು ಅಪಶಕುನವೆಂದು, ಒಂದು ವರ್ಷದಲ್ಲಿ ಗಂಡಿಗೆ ಏನಾದರೂ ಗಂಡಾಂತರವಾಗುತ್ತದೆ ಎಂಬ ನಂಬಿಕೆ. ಆದ್ದರಿಂದ ಯಾರು ಅದನ್ನು ದಾಟಬಾರದೆಂದು ನಿಷೇಧವಿರುತ್ತದ. ಮದುವೆಯಾದ ನಂತರ ಮನೆ ತುಂಬಿಸಿಕೊಳ್ಳುವಾಗ ಬಾಗಿಲಲ್ಲಿ ಅಳೆಯುವ ಸೇರಿನಲ್ಲಿ ದವಸ ಧಾನ್ಯಗಳನ್ನು ಇಟ್ಟು ಕಾಲಿನಿಂದ ಜೋರಾಗಿ ಒದೆಯಲು ಹೇಳುತ್ತಾರೆ. ಒದ್ದಾಗ ಮನೆ ತುಂಬ ಚೆಲ್ಲಿದರೆ ಮನೆ ಸಮೃದ್ಧಿಯಾಗಿ ಬೆಳೆಯುತ್ತದೆ ಎಂಬ ನಂಬಿಕೆ ಇದೆ. ಪ್ರಸ್ತುತದಲ್ಲಿ ಯಾದಿ ಮೇಲೆ ಶಾದಿ ನಡೆಯುತ್ತಿರುವುದರಿಂದ ಇಂತಹ ಪದ್ಧತಿಗಳು ಕಡಿಮೆಯಾಗಿವೆ ಎನ್ನುವುದು ಈ ಸಮುದಾಯದ ಅಭಿಪ್ರಾಯ.

ಗರ್ಭವತಿ ಮಹಿಳೆ

ಮಹಿಳೆಯು ಗರ್ಭವತಿಯಾದ ನಂತರ ೭ ರಿಂದ ೮ ತಿಂಗಳ ಒಳಗೆ ಸೀಮಂತ ಕಾರ್ಯಮಾಡಲಾಗುವುದು. ಇದನ್ನು ಮಾಡುವ ಉದ್ದೇಶ ಗರ್ಭದಲ್ಲಿರುವ ಮಗುವಿಗೆ ಉತ್ತಮ ಸಂಸ್ಕಾರ ಸಿಗಲಿ ಎಂಬುದು. ಗರ್ಭವತಿಯಾದ ಮಹಿಳೆ ನದಿಯನ್ನು, ಹಳ್ಳವನ್ನು ದಾಟುವಂತಿಲ್ಲ ಎಂಬ ನಿಷೇಧವಿದೆ. ಗಂಗೆ ಪವಿತ್ರಳಾಗಿರುವುದರಿಂದ ಆಕೆಯ ಮೇಲೆ ಹಾದುಹೋಗಬಾರದು, ಹೋಗುವುದಾದರೆ ಮೊದಲು ಗಂಗೆ ಪೂಜೆ ಮಾಡಿ ದಾಟಬೇಕು. ಈಗ ಇದು ಇಲ್ಲವಾಗಿದೆ.

ಅದೇ ರೀತಿ ಗರ್ಭವತಿಯಾದ ಹೆಣ್ಣು ಸತ್ತ ಹೆಣವನ್ನು ನೋಡಬಾರದು. ಸತ್ತ ಹೆಣವನ್ನು ಸ್ನಾನ ಮಾಡಿಸಿದ ನೀರನ್ನು ಹಾದು ಹೋಗಬಾರದು ಎಂಬ ನಿಷೇಧವಿದೆ. ಹಾದು ಹೋದರೆ ಗರ್ಭದಲ್ಲಿರುವ ಮಗುವಿಗೆ ಬಿಳಿತೊನ್ನಿನ ರೂಪದಲ್ಲಿ ರೋಗಬರುತ್ತದೆ. ಮಗು ಅಶಕ್ತವಾಗುತ್ತದೆ. ಕಣ್ಣು ಮುಚ್ಚಿದಂತೆ ಇರುತ್ತದೆ. ಅದು ಪರಿಹಾರವಾಗಬೇಕಾದರೆ ೩ ಶನಿವಾರ ಬೆಳಿಗ್ಗೆ ಒದ್ದೆ ಬಟ್ಟೆಯಲ್ಲಿ ಯಾರೊಂದಿಗೂ ಮಾತನಾಡದೆ ಹನುಮಂತ ದೇವರಿಗೆ ಹೋಗಿಬರಬೇಕು. ೩ನೇವಾರ ಮಗುವಿಗೆ ಬಟ್ಟೆಯನ್ನು ಅಲ್ಲಿಯೇ ತೆಗೆದು ಹಾಕಿಬರಬೇಕು. ಮನೆ ಒಳಗೆ ಬರುವಾಗ ಮಗುವಿಗೆ ಗೋ ಮೂತ್ರದಿಂದ ಸ್ನಾನ ಮಾಡಿಸಿ ಒಳಗೆ ಕರೆದುಕೊಂಡು ಹೋದರೆ ರೋಗವಾಸಿಯಾಗುತ್ತದೆ ಎಂಬ ನಂಬಿಕೆಯೂ ಹೌದು, ಸತ್ಯವೂ ಹೌದು ಎನ್ನುವುದು ಕೆಲವರ ಅಭಿಪ್ರಾಯ ಇದೆ. ಇದೇ ಸಮುದಾಯದ ಕೆಲವರಲ್ಲಿ ಔಷಧಿ ಕೊಡಿಸಿದರೆ ಹೋಗುತ್ತದೆ ಎಂದು ತಿಳಿಸಿದ್ದಾರೆ. ಮದುವೆಯಾದ ನಂತರ ಆಷಾಢದಲ್ಲಿ ಗಂಡಹೆಂಡತಿ ಮುಖ ನೋಡುವಂತಿಲ್ಲ. ನೋಡಿದರೆ ಗಂಡನಿಗೆ ದೋಷ. ಅತ್ತೆ ಸೊಸೆ ಒಂದೇ ಬಾಗಿಲಲ್ಲಿ ಓಡಾಡಬಾರದೆಂಬ ನಿಷಿದ್ಧವಿದೆ.

ಮಗುವಿನ ಜನನ

ಮಗು ಜನಿಸಿದರೆ ಜನಿಸಿದ ಮನೆಯಲ್ಲಿ ಸಡಗರ. ಆದರೆ ಮಗುವಿಗೆ ಜನ್ಮ ನೀಡಿದ ತಾಯಿಗೆ ಸೂತಕ. ಆಕೆ ಪ್ರತ್ಯೇಕವಾಗಿರಬೇಕು. ಯಾರೂ ಮುಟ್ಟುವಂತಿಲ್ಲ. ಅಡಿಗೆ ಮಾಡುವಂತಿಲ್ಲ ಎನ್ನುವ ನಿಷಿದ್ಧವಿದೆ. ಮಗುವಿಗೆ ಜನ್ಮ ಮಾಡಿಸಲು ಸೂಲಗಿತ್ತಿ ಬರುವಳು. ಜನ್ಮ ಮಾಡಿಸಿದ ನಂತರ ಮೊರದಲ್ಲಿ ಅನ್ನವನ್ನು ಸುತ್ತ ಗುಂಡಗೆ ಉಂಡೆ ಮಾಡಿ ಅದರಲ್ಲಿ ದೀಪ ಹಚ್ಚಿಡಲಾಗುವುದು. ಈ ದೀಪವನ್ನು ಸೂಲಗಿತ್ತಿ ತನ್ನ ಮನೆಗೆ ತೆಗೆದುಕೊಂಡು ಹೋಗಬೇಕು. ಹೋಗುವಾಗ ದಾರಿಯ ಮಧ್ಯದಲ್ಲಿ ಕೆಟ್ಟುಹೋದರೆ

ಮಗುವಿನ ಆಯಸ್ಸು ಅರ್ಧ ಇದೆ ಎಂದು ನಂಬಲಾಗುವುದು. ಆರದಿದ್ದರೆ ಪೂರ್ಣ ಆಯಸ್ಸು ಇದೆ ಎಂದು ನಂಬಲಾಗುವುದು. ಆ ದೀಪ ತನ್ನಿಂದ ತಾನೇ ಕೆಟ್ಟುಹೋಗುವವರೆಗೆ ಆರಿಸುವಂತಿಲ್ಲ, ಎಂಬ ನಿಷಿದ್ಧವಿದೆ. ಹುಟ್ಟಿದ ಮಗು ಮೂಲಾ ನಕ್ಷತ್ರದಲ್ಲಿ ಹುಟ್ಟಿದರೆ ೩ ವರ್ಷಗಳಲ್ಲಿ ತಂದೆ ಅಥವಾ ತಾಯಿಗೆ ದೋಷವಾಗುತ್ತದೆ. ತಂದೆ ಇಲ್ಲವೆ ತಾಯಿ ಮರಣ ಹೊಂದಬಹುದು. ಇದು ಸತ್ಯವಾಗಿಯೂ ನಡೆಯುತ್ತದೆ ಎನ್ನುತ್ತಾರೆ.

ಮಗುವಿನ ನಾಮಕರಣ

ಈ ಸಮುದಾಯದವರು ಮಗು ಹುಟ್ಟಿದ ಐದು ದಿನಗಳಲ್ಲಿ ನಾಮಕರಣ ಮಾಡಬೇಕು. ನಾಮಕರಣ ಮಾಡಲು ಮಗುವಿನ ಸೊದರತ್ತೆಯೇ ಬರಬೇಕು. ಆಕೆ ಹೊಸ ಬಟ್ಟೆಕೊಟ್ಟು ಮಗುವಿನ ಕಿವಿಯಲ್ಲಿ ಮೂರುಬಾರಿ ಹೆಸರನ್ನು ಹೇಳಬೇಕು. ಅಂದು ರಾತ್ರಿ ಸೆಟದೇವಿ (ವಿಧಿಮುಂದೆ/ವಿಧಿ ದೇವಿ) ಮಗುವಿಗೆ ವಿಧಿ ಬರೆಯಲು ಬರುತ್ತಾಳೆ. ಅದಕ್ಕಾಗಿ ನೆಲ ಸಾರಿಸಿ ರಾತ್ರಿ ಬಚ್ಚಲು ಮನೆ ಮತ್ತು ಮಗುವಿನ ತಲೆಯ ಹತ್ತಿರ ವೀಳ್ಯದೆಲೆ, ಅಡಿಕೆ ಕಾಯಿ, ಕುಂಕುಮ ಇಟ್ಟು, ಸೆಟಿದೇವಿ ವಿಗ್ರಹಕ್ಕೆ ಪೂಜೆ ಮಾಡಿ ತಂಬಿಗೆಯಲ್ಲಿ ನೀರನ್ನು ಇಡಲಾಗುವುದು. ಸೆಟಿದೇವಿ ಬಂದು ಹೋಗುವವರೆಗೂ ಅದನ್ನು ಯಾರು ಮುಟ್ಟಬಾರದು. ರಾತ್ರಿ ದೀಪವನ್ನು ಹಚ್ಚಬಾರದು, ಬಾಗಿಲನ್ನೂ ತೆರೆದಿರಬೇಕು. ಮಗು ಅತ್ತರೂ ಮುಟ್ಟಬಾರದು, ಯಾರೂ ಮಾತನಾಡಬಾರದು ಎನ್ನುವ ನಿಷಿದ್ಧವಿದೆ. ಈ ನಿಯಮವನ್ನು ಉಲ್ಲಂಘಿಸಿದರೆ ಅನಾಹುತ ತಪ್ಪಿದ್ದಲ್ಲ. ಏಕೆಂದರೆ ೮೫ ವರ್ಷದ ದ್ಯಾಮವ್ವ ನಾಯಿಕ ಎನ್ನುವ ಮಹಿಳೆಯ ಅನುಭವದ ಪ್ರಕಾರ ತನ್ನ ೨ನೇ ಮಗುವಿಗೆ ಸೆಟಿದೇವಿ ವಿಧಿ ಬರೆಯಲು ಬರುವ ದಿನ ಪದ್ಧತಿಯಂತೆ ಸೆಟಿದೇವಿ ಮೂರ್ತಿ, ಅದರ ಪೂಜೆಗೆ ಬೇಕಾದ ಸಾಮಾನುಗಳನ್ನು ತಂದು ಪೂಜೆ ಮಾಡಿದ ನಂತರ ಮಗು ಅದನ್ನು ಮುಟ್ಟಿ ತಿಂದಿತು. ಕೋಪ ಬಂದು ಮಗುವಿಗೆ ಹೊಡೆದು ಮಲಗಿದೆ. ರಾತ್ರಿ ೧೨ರ ಸಮಯವಿರಬೇಕು ಸೆಟಿದೇವಿಯ ಬಂದು ಬಚ್ಚಲಿಗೆ ಹೋಗಿ ನನ್ನ ಕಡೆ ಕೆಟ್ಟ ದೃಷ್ಠಿಯಿಂದ ನೋಡಿದಂಗೆ ಆಯಿತು. ತಕ್ಷಣವೇ ನನಗೆ ಚಳಿಜ್ವರ ನಡುಕ ಚಾಲೂ ಆಯ್ತು ನಾನಿನ್ನೂ ಬದುಕೊಲ್ಲ, ಸಾಯೊಳು ಸಾಯ್ತೀನಿ ಮಗೂಗೆ ಹಾಲಾದ್ರೂ ಕೊಡಸ್ತೀನಿ ಅಂತಕೇಳಿ ಮಗೂಗೆ ಎದೆ ಹಾಲು ಕೊಟ್ಟು ನಂತರ ನನಗೆ ಬಂದ ಜ್ವರ ಚಳಿ ತಕ್ಷಣ ಹೋಗಿ, ಮಗೂಗೆ ಬಂತು ಯಾವ ಔಷಧಿ ಕೊಟ್ರೂ ಉಪಯೋಗ ಆಗ್ಲಿಲ್ಲ. ಮೂರುದಿನದ ನಂತರ ಮಗು ಸತ್ತು ಹೋಯಿತು, ಎಂದು ಹೇಳುತ್ತಾಳೆ. ವಾಲ್ಮೀಕಿ ಸಮುದಾಯದಲ್ಲಿ ಒಂದು ವಿಶೇಷವೆಂದರೆ ಹುಟ್ಟಿದ ಮಗುವನ್ನು ಪಂಚಕದಲ್ಲಿ ಬೇಲಿದಾಟಿಸುವ ಪದ್ಧತಿ. ವಾಲ್ಮೀಕಿ ಸಮುದಾಯ ಕಳ್ಳತನ ವೃತ್ತಿಯಾಗಿರುವುದರಿಂದ ಮಗು ಕಳ್ಳತನ ಸಮಯದಲ್ಲಿ ಎಂತಹ ಬೇಲಿಯನ್ನಾದರೂ ದಾಟಿ ತಪ್ಪಿಸಿಕೊಳ್ಳಲಿ ಎನ್ನುವ ಭಾವನೆ, ಅದು ಈಗ ಇಲ್ಲವಾಗಿದೆ.

ಪಂಚಕದಲ್ಲಿನ ನಂಬಿಕೆಗಳು

ಅಮವಾಸ್ಯೆ ಮತ್ತು ಹುಣ್ಣಿಮೆಯ ಸಂದರ್ಭದಲ್ಲಿನ ಪಂಚಕದಲ್ಲಿ ಯಾವ ಶುಭ ಕಾರ್ಯವನ್ನು

ನಡೆಸಬಾರದು ಎಂಬ ನಿಷಿದ್ಧವಿದೆ. ಪಂಚಕದಲ್ಲಿ ಗಂಡು ಹುಟ್ಟಿದರೆ ಮುಂದೆ ೫ ಗಂಡು ಮಕ್ಕಳು ಹುಟ್ಟುತ್ತವೆ ಎನ್ನುತ್ತಾರೆ. ಅದರಲ್ಲೂ ಧನಿಷ್ಟ ನಕ್ಷತ್ರ ಬಹಳ ಕೆಟ್ಟದ್ದು, ಆದರೆ ಈ ನಕ್ಷತ್ರದಲ್ಲಿ ದೇವರ ಮೂರ್ತಿಯನ್ನು ಪ್ರತಿಷ್ಠಾಪಿಸಿದರೆ ಏನು ಆಗುವುದಿಲ್ಲ ದೇವರು ಬಂದು ನೆಲೆಸುತ್ತಾನೆ. ಪಂಚಕಲ್ಲಿನ ೫ ನಕ್ಷತ್ರಗಳ ನಡುವೆ ಒಂದು ನಿಮಿಷ ಮಾತ್ರ ಪಂಚಕವಿರುತ್ತದೆ. ಕೃಷ್ಣ ಮತ್ತು ಸುಧಾಮರ ಜನನದ ನಿದರ್ಶನವನ್ನು ಇದಕ್ಕೆ ಉದಾಹರಣೆಯನ್ನಾಗಿ ನೀಡುತ್ತಾರೆ. ಇದಕ್ಕೆ ಕೆಲವೊಂದು ಶಾಸ್ತ್ರ ನಿಯಮಗಳನ್ನು ಮಾಡಲಾಗುವುದು ಇಲ್ಲವಾದರೆ ದೋಷ ತಪ್ಪುವುದಿಲ್ಲ. ಆದ್ದರಿಂದ ಪಂಚಕದ ದಿನ ಮನೆ ಕೆಲಸ ಮಾಡಬಾರದೆಂಬ ನಿಷೇಧವಿದೆ ಅಂತೋ ಬೋಸಲೆ ಎನ್ನುವವರು ಪಂಚಕದಲ್ಲಿಯೇ ಮನೆ ಕಟ್ಟಿದ್ದಾರೆ. ಅವರ ಸಲಹೆಯಂತೆ ಪಂಚಕದಲ್ಲೇ ಕಲ್ಲು ತರುವುದು, ಗೋಡೆ ಕಟ್ಟುವುದು, ಪಂಚಕದ ದಿನದಲ್ಲೇ ಮನೆಗೆ ಗೃಹ ಪ್ರವೇಶ ಮಾಡುವುದನ್ನು ಮಾಡಿಸಿದ್ದಾರೆ. ಮನೆಕಟ್ಟುವ ೨೦ ವರ್ಷ ಹಿಡಿದಿದೆ ಅಂತಹ ಮನೆಗೆ ಏನೂ ಆಗಿಲ್ಲ ಆದರೆ ಅದನ್ನು ಶಾಸ್ತ್ರೋಕ್ತವಾಗಿ ಅವರಿಂದಲೇ ಮಾಡಿಸಬೇಕು ಎನ್ನುತ್ತಾರೆ. ಮಥಬಾವಿಯಲ್ಲಿ ಒಬ್ಬರ ತೋಟದಲ್ಲಿ ಮೇವು ಕಳ್ಳತನವಾಗುತ್ತಿತ್ತು. ಅದಕ್ಕೆ ಅವರು ನಾನು ಹೇಳಿದಂತೆ ಮಾಡು ಎಂದು ಹೇಳಿ ಪಂಚಕದ ದಿನ ನಕ್ಷತ್ರ ನೋಡಿ ಬಣವೆ ಒಟ್ಟಲು ಹೇಳಿದರು. ಒಟ್ಟುವಾಗ ಒಂದು ಮೆದೆ ಹುಲ್ಲನ್ನು ಮೇಲಕ್ಕೆ ಎಸೆದರು ಅದಕ್ಕೆ ಮೇಲೆ ತಕ್ಷಣ ಬೆಂಕಿ ಹತ್ತಿತು. ಇದು ಕಣ್ಣಾರೆ ಕಂಡ ಅನುಭವ ಎನ್ನುತ್ತಾರೆ.

ಪಂಚಕದಲ್ಲಿ ಹೊರ ಪಂಚಕ ಒಳಪಂಚಕವೆಂದು ಕರೆಯುತ್ತಾರೆ. ಅಮವಾಸ್ಯೆ ಮುಂದೆ ಬರುವ ಪಂಚಕವನ್ನು ಹೊರ ಪಂಚಕವೆಂದು ಕರೆಯುತ್ತಾರೆ. ಹುಣ್ಣಿಮೆಯ ಮೊದಲು ಬರುವ ಪಂಚಕವನ್ನು ಒಳ ಪಂಚಕವೆಂದು ಕರೆಯುತ್ತಾರೆ. ಹೊರ ಪಂಚಕದಲ್ಲಿ ಸತ್ತರೆ ಅಂತಹ ಸಂದರ್ಭದಲ್ಲಿ ಊರಿನ ಅಥವಾ ಕೇರಿಯಲ್ಲಿ ೫ ದಿನ ಐದು ಜನರು ಸಾಯುತ್ತಾರೆ. ಒಳಪಂಚಕವಾದರೆ ಮನೆಯ ಒಳಗಿನವರೇ ಐದು ಜನ ಸಾಯುತ್ತಾರೆ. ಇದು ಸತ್ಯವಾಗಿಯು ನಡೆಯುತ್ತಿರುವ ಘಟನೆಯಾಗಿದೆ. ಆದ್ದರಿಂದ ಮನೆಯವರು ಒಂದು ತಿಂಗಳಿನಿಂದ ಮೂರು ತಿಂಗಳವರೆಗೆ ಮನೆಯನ್ನು ಖಾಲಿ ಮಾಡಲಾಗುತ್ತದೆ. ಮನೆಗೆ ಬೀಗ ಹಾಕಲಾಗುತ್ತದೆ. ಮೂರು ತಿಂಗಳು ಮುಗಿದ ನಂತರ ಮನೆಯ ಬೀಗವನ್ನು ಗುರು ಬಂದು ತೆಗೆಯುವನು. ನಂತರ ಮನೆಯನ್ನು ಸಾರಿಸಿ ಅಡಿಗೆ ಮಾಡಿ ಊಟ ಹಾಕಿಸಿದ ನಂತರ ಮನೆಯಲ್ಲಿ ವಾಸಿಸಲು ಪ್ರಾರಂಭಿಸುತ್ತೇವೆ. ಇದು ಇಂದಿಗೂ ಇದೆ. ಪಂಚಕದಲ್ಲಿನ ಶ್ರಾವಣ, ಉತ್ತರಾಷಾಢ, ಪೂರ್ವಾಷಾಢ, ಶತತಾರ, ಧನಿಷ್ಟ, ಈ ಐದು ನಕ್ಷತ್ರಗಳಿರುವ ಅವಧಿಯಲ್ಲಿ ಏನೂ ಶುಭಕಾರ್ಯ ಮಾಡಬಾರದೆಂಬ ನಿಷೇಧವಿದೆ. ಪಂಚಕದಲ್ಲಿ ಸತ್ತ ವ್ಯಕ್ತಿಯಿಂದ ಮತ್ತೊಬ್ಬರು ಬಲಿಯಾಗಬಾರದೆಂದು ಅದಕ್ಕಾಗಿ ೨ ಮೊಟ್ಟೆ, ೨ ತೆಂಗಿನಕಾಯಿ, ನಿಂಬೆಹಣ್ಣು ಮತ್ತು ಒಂದು ಗೊಂಬೆಯನ್ನು ಮಾಡಿ ಸತ್ತ ವ್ಯಕ್ತಿಯ ಎದೆಯ ಮೇಲಿಟ್ಟು ಹೂಳಲಾಗುತ್ತದೆ. ಇದರಿಂದ ಗಂಡಾಂತರ ತಪ್ಪುತ್ತದೆ ಎನ್ನುವ ನಂಬಿಕೆ ಇದೆ. ಆದ್ದರಿಂದ ಪಂಚಕದಲ್ಲಿ ಯಾವುದೇ ಕೆಲಸವನ್ನು ಮಾಡಬಾರದೆಂಬ ನಿಷೇಧವಿದೆ.

ವಿಧವೆಯರಿಗೆ ನಿಷೇಧ

ಹಿಂದೂ ಸಂಪ್ರದಾಯದಲ್ಲಿ ಗಂಡನನ್ನು ಕಳೆದುಕೊಂಡ ಮಹಿಳೆಗೆ ನಿಷೇಧಗಳು ಹೆಚ್ಚಿವೆ. ಬ್ರಾಹ್ಮಣ ಸಮುದಾಯಗಳು ಚಿಕ್ಕವಯಸ್ಸಿನಲ್ಲಿ ವಿಧವೆಯಾದ ಹೆಣ್ಣಿನ ಕುಂಕುಮ ಅಳಿಸುವುದು, ತಲೆಬೋಳಿಸುವುದು, ಬಿಳಿ ಸೀರಿ ಉಡಿಸುವುದು, ತಾನೆ ಕೈಯಿಂದ ಅಡುಗೆ ಮಾಡಿಕೊಂಡು ಊಟ ಮಾಡುವುದು ಅಡುಗೆ ಮನೆ ಬಿಟ್ಟು ಹೊರಬರಬಾರದೆಂಬ ನಿಷಿದ್ಧಗಳಿವೆ. ಆದರೆ ವಾಲ್ಮೀಕಿ ಸಮುದಾಯಗಳಲ್ಲಿ ಇಂತಹ ನಿಷಿದ್ಧಗಳು ಅತಿಯಾಗಿ ಬಿಗುವಿನಿಂದ ಕೂಡಿಲ್ಲ. ಗಂಡ ಸತ್ತ ಮಹಿಳೆಯ ಕುಂಕುಮ ತೆಗೆಯಲಾಗುವುದು. ಹಸಿರು ಬಳೆ ಶುಭ ಸೂಚಕ ಇರುವುದರಿಂದ ಅವುಗಳನ್ನು ತೆಗೆದುಹಾಕಲಾಗುವುದು. ಹೂ ಮುಡಿಯುವಂತಿಲ್ಲ. ಶುಭ ಸಮಾರಂಭಗಳಲ್ಲಿ ಭಾಗವಹಿಸುವಂತಿಲ್ಲ ಎಂಬ ನಿಷಿದ್ಧವಿದೆ. ಶುಭ ಕಾರ್ಯಗಳಿಗೆ ಹೋಗುವಾಗ ಇಂತಹ ಮಹಿಳೆಯರು, ಅಡ್ಡ ಬಂದರೆ ಕೆಲಸಗಳಾಗುವುದಿಲ್ಲ ಎಂದು ನಂಬಲಾಗುತ್ತಿದೆ. ಇತ್ತೀಚೆಗೆ ಈ ನಿಷಿದ್ಧಗಳು ಸಡಿಲಿಕೆಯಾಗಿವೆ. ಈಗ ಕೆಲವರು ತಾಳಿಯನ್ನು ತೆಗೆಯುತ್ತಿಲ್ಲ. ಬಳೆಯನ್ನು ತೆಗೆಯುತ್ತಿಲ್ಲ. ಕಾಲ ಬದಲಾಗಿದೆ ಎನ್ನುವುದು ಈ ಸಮುದಾಯದ ಅಭಿಪ್ರಾಯವಾಗಿದೆ.

ಸ್ಮಶಾನಕ್ಕೆ ಮಹಿಳೆಯರ ನಿಷೇಧ

ಹಿಂದು ಸಂಪ್ರದಾಯದ ಪ್ರಕಾರ ಮಹಿಳೆಯರು ಸೂಕ್ಷ್ಮ ಸ್ವಭಾವದವರಾಗಿರುತ್ತಾರೆ. ಬೇಗ ದೆವ್ವ ಭೂತಗಳಿಗೆ ವಶೀಕರಣರಾಗಿರುತ್ತಾರೆ ಎನ್ನುವ ಭಾವನೆಯಿಂದ ಸ್ಮಶಾನಕ್ಕೆ ಕರೆದುಕೊಂಡು ಹೋಗಬಾರದೆಂಬ ನಂಬಿಕೆ ಇದೆ. ಅದಕ್ಕಾಗಿ ಮಹಿಳೆಯರು ಸ್ಮಶಾನಕ್ಕೆ ಹೋಗುವುದಕ್ಕೆ ನಿಷೇಧವಿದೆ. ಆದರೆ ವಾಲ್ಮೀಕಿ ಸಮುದಾಯದಲ್ಲಿ ಇಂತಹ ಸಂಪ್ರದಾಯಗಳು ಇರುವುದಿಲ್ಲ.

ಋತುಮತಿಯ ಸಂದರ್ಭದಲ್ಲಿ ನಂಬಿಕೆ, ವಿಧಿ-ನಿಷೇಧಗಳು

ಮಹಿಳೆಯು ಋತುಮತಿಯಾದಾಗ ೧೨ ವರ್ಷದ ಸೂತಕವಿರುತ್ತದೆ. ಅದರಿಂದ ೫ ದಿನಗಳವೆಗೆ ಆಕೆಯನ್ನು ಹೊರಗಡೆ ಇಲ್ಲವೆ ಪ್ರತ್ಯೇಕವಾಗಿ ಇಡಲಾಗುವುದು. ಅಂತಹ ಸಂದರ್ಭದಲ್ಲಿ ಆಕೆಯನ್ನು ಯಾರು ಮುಟ್ಟುವುದಿಲ್ಲ. ಆಕೆಗೆ ಸ್ನಾನಮಾಡಿಸಿದವರು ಸ್ನಾನ ಮಾಡಿ ಮನೆಯ ಒಳಗೆ ಬರಬೇಕೆಂಬ ನಿಯಮವಿದೆ.

ನಂಬಿಕೆಗಳು, ಪದ್ಧತಿಗಳು, ನಿಯಮಗಳು ಮತ್ತು ಸಂಸ್ಥೆಗಳ ರೂಪದಲ್ಲಿ ಮಾನವೀಯ ಮೌಲ್ಯಗಳನ್ನು ಸಂರಕ್ಷಿಸುವ ಸಾಂಸ್ಕೃತಿಕ ವಿಧಿಗಳೆಂದೇ ಹೇಳಬಹುದು. ಆದರೆ ನಂಬಿಕೆಗಳಿಂದ ಮೂಢನಂಬಿಕೆಗಳನ್ನು ಪ್ರತ್ಯೇಕಿಸುವ ಎಚ್ಚರವು ಜನರಲ್ಲಿ ಇಂದು ಬೆಳೆದುಕೊಂಡು ಬಂದಿದೆ. ಅಜ್ಞಾನ, ಭೀತಿ ಮತ್ತು ಭ್ರಮೆಗಳೇ ಮೂಡ ನಂಬಿಕೆಗಳ ಹುಟ್ಟಿಗೆ ಕಾರಣ. ಬಹಳಷ್ಟು ಸಲ ಮೂಢನಂಬಿಕೆಗಳು, ನಂಬಿಕೆಗಳಂತೆ ಭಾಸವಾಗುವುದರಿಂದ ಆ ಎರಡರ ನಡುವೆ ಗಡಿರೇಖೆ ಎಳೆಯುವುದು ಕಷ್ಟವಾಗುತ್ತದೆ. ಆದರೂ ವಿವೇಚನೆ, ವಿಚಾರ ಬುದ್ಧಿಗಳ ನೆರವಿನಿಂದ ಒಂದರಿಂದ ಮತ್ತೊಂದನ್ನು ಪ್ರತ್ಯೇಕಗೊಳಿಸುವುದು ಕಷ್ಟವಾಗದು. ಮೂಢನಂಬಿಕೆಗಳ ಅರ್ಥ ಹೀನತೆಯನ್ನು, ಅವಿಚಾರತೆಯನ್ನು ಅವುಗಳ ಟೊಳ್ಳುತನವನ್ನು ಬಯಲಿಗೆಳೆ

ಯಲು ಸ್ಥೂಲಪರೀಕ್ಷೆಯೇ ಸಾಕು. ಮನುಷ್ಯ ಅವುಗಳಲ್ಲಿ ಸುಖ, ಶಾಂತಿ, ಧೈರ್ಯಗಳನ್ನು ಕಾಣುತ್ತಾನೆ. ಮಾನವನ ಸಕಲ ಚಟುವಟಿಕೆಗಳಲ್ಲಿ ಅವನು ನಿರ್ಮಿಸಿರುವ ಸಂಸ್ಥೆಗಳು, ಕುಟುಂಬ, ಸಮಾಜ, ಸರ್ಕಾರ ಎಲ್ಲವುಗಳಲ್ಲಿ ನಂಬಿಕೆಗಳೂ ಬೇರು ಬಿಟ್ಟಿವೆ. ಒಂದೇ ಮಾತಿನಲ್ಲಿ ಹೇಳುವುದಾದರೆ ನಂಬಿಕೆಯೇ ಬಾಳು, ಬಾಳೇ ನಂಬಿಕೆ, ಇದೇ ನಾಗರೀಕತೆಯ ಮೂಲವಾಗಿದೆ.

ನಂಬಿಕೆಗಳನ್ನು ಸಾರಾಸಗಟಾಗಿ ಊಹಾತ್ಮಕ, ವಿಚಾರಹೀನ ಹಾಗೂ ಅವಾಸ್ತವೆಂದು ಅಲ್ಲಗಳೆಯುವ ಹಾಗಿಲ್ಲ. ದೀರ್ಘಾಲೋಚನೆ ಅನುಭವಗಳ ಫಲವಾಗಿ ಅವು ರೂಪ ಪಡೆದಿರುವುದಂತೂ ಸತ್ಯ. ವ್ಯಕ್ತಿಗಳ ಹಾಗೂ ಸಮಾಜದ ಹಿತರಕ್ಷಣೆಗೆಂದು ಹಿರಿಯರು ನಿಗಧಿಸಿದ ಶೀಲ ನಿಯಮಗಳನ್ನಾಧರಿಸಿ ಹುಟ್ಟಿದ ನಂಬಿಕೆಗಳು ವಿಚಾರಹೀನವಾದವುಗಳೆಂದು ತಿರಸ್ಕರಿಸುವುದು ಸರಿಯಲ್ಲವೆನಿಸುತ್ತದೆ. ವಿಶಾಲವಾದ ಅರ್ಥದಲ್ಲಿ ನಂಬಿಕೆ ಎಂದರೆ ಜ್ಞಾನವೇ ಎಂದು ಗೊತ್ತಾಗುತ್ತದೆ.

ಅನೇಕ ನಂಬಿಕೆಗಳಿಗೆ ಶಾಶ್ವತ ಸಾಂಸ್ಕೃತಿಕ ಮೌಲ್ಯ ವಿದೆಯೆಂಬುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ನಂಬಿಕೆಗಳ ಜಗತ್ತು ಮೊರೆಯಿಲ್ಲದ್ದು, ಬದುಕಿನಷ್ಟೇ ಅದು ವೈವಿಧ್ಯಮಯವಾಗಿದೆ. ವಿಶಾಲವಾಗಿದೆ, ಅಂತೆಯೇ ಸಂಕೀರ್ಣವಾಗಿದೆ.

ಈ ಸಮುದಾಯದ ಕೆಲವು ನಿಷಿದ್ಧಗಳು ಇಂತಿವೆ.

೧. ಬೀಸುವ ಕಲ್ಲನ್ನು, ಒರಳನ್ನು ಒದೆಯಬಾರದು.

೨. ಕೂದಲು ಮತ್ತು ಉಗುರುಗಳನ್ನು ಸಿಕ್ಕಲ್ಲಿ ಬಿಸಾಕಬಾರದು.

೩. ಮಕ್ಕಳು ಆದರೆ ವರಕೊಟ್ಟ ದೇವರಿಗೆ ಹರಕೆ ಹೊರುವುದು.

೪. ಸತ್ತವರಿಗೆ ನೀಡಿದ ಮೂರುಕೂಳನ್ನು ಕಾಗೆ ಮುಟ್ಟದಿದ್ದರೆ ಅವರಿಗೆ ಮುಕ್ತಿಯಿಲ್ಲ.

೫. ಮಕ್ಕಳ ಮೊದಲ ಕೂದಲನ್ನು ದೇವರಿಗೆ ಮುಡಿಕೊಡುವುದು.

೬. ಮಲಗಿರುವ ಮಕ್ಕಳಿಗೆ ಅಲಂಕಾರ ಮಾಡಬಾರದು.

೭. ಮೊದಲು ಬಿದ್ದಹಲ್ಲನ್ನು ಸೆಗಣಿಯಲ್ಲಿ ಇಟ್ಟು ಗರ್ಭಿಣಿಯರ ಮಾಳಿಗೆಯ ಮೇಲೆ ಎಸೆಯುವುದು.

೮. ಬಸುರಿಯವರ ಆಸೆಯನ್ನು ಪೂರೈಸಿಬೇಕು, ಇಲ್ಲದಿದ್ದರೆ ಮಗುವಿನ ಕಿವಿಸೋರುತ್ತದೆ.

೯. ಬಂಜೆಯರು ಮಕ್ಕಳನ್ನು ಮುಟ್ಟಬಾರದು.

೧೦. ತೊಲೆಯ ಕೆಳಗೆ ಮಲಗಬಾರದು.

೧೧. ಹೊಸ್ತಿಲು ಮೇಲೆ ಕುಳಿತುಕೊಳ್ಳಬಾರದು ಮತ್ತು ನಿಲ್ಲಬಾರದು.

೧೨. ರಾತ್ರಿ ತಲೆ ಬಾಚಿಕೊಳ್ಳುವುದು ಸರಿಯಲ್ಲ.

೧೩. ದೀಪಹಚ್ಚಿದ ಮೇಲೆ ಮನೆಯಿಂದ ಏನನ್ನು ಕೊಡದಿರುವುದು.

೧೪. ಬೆಕ್ಕು ಅಡ್ಡಬಂದರೆ ಪ್ರಯಾಣ ನಿಷಿದ್ಧ

೧೫. ಪರರ ಮನೆಯ ಬೆಕ್ಕು ತಾನಾಗಿಯೇ ಮನೆಗೆ ಬಂದರೆ ಶುಭ.

೧೬. ತಲೆಯ ಮೇಲೆ ಕಾಗೆ ಕುಳಿತರೆ ಸಾವಿನ ಸುದ್ದಿ.

೧೭. ಕಾಗೆ ಮನೆಯ ಮೇಲೆಕುಳಿತು ಕೂಗಿದರೆ ನೆಂಟರು ಬರುತ್ತಾರೆ.

೧೮. ಗೂಬೆಯ ಶಬ್ದ ಅಶುದ್ಧ.

೧೯. ಹಾವುಗಳ ಸಂಭೋಗ ಕ್ರಿಯೆ ನೋಡಿದರೆ ಅಶುಭ.

೨೦. ಬೆಳಗಿನ ಸಮಯದಲ್ಲಿ ನರಿಯನ್ನು ನೋಡಿದರೆ ಶುಭ.

೨೧. ಪೂರ್ವ ಸಿದ್ಧತೆಯಲ್ಲದೆ ಬೇಟೆಗೆ ಹೋಗಬಾರದು.

೨೨. ಸ್ತ್ರೀಯರು ಬೇಟೆಯಾಡಬಾರದು.

೨೩. ನೊಗಮುರಿದ ಎತ್ತುಗಳನ್ನು ಮನೆಯಲ್ಲಿ ಇಟ್ಟುಕೊಳ್ಳಬಾರದು.

೨೪. ಕಾಡಿಗೆ ಕಣ್ಣಿನ ಎತ್ತುಗಳನ್ನು ಮನೆಯಲ್ಲಿ ಇಟ್ಟುಕೊಳ್ಳಬಾರದು.

೨೫. ಹೊಲದಲ್ಲಿ ಗಳೆಯನನ್ನು ದಕ್ಷಿಣ ಮತ್ತು ಪಶ್ಚಿಮಕ್ಕೆ ನಿಲ್ಲಿಸುವುದಿಲ್ಲ.

೨೬. ಗಾಳಿ ಬೀಸುವ ದಿಕ್ಕಿನಲ್ಲಿ ಬೇಟೆಯಾಡಬಾರದು.

೨೭. ಓಕುಳಿಯ ಸಂದರ್ಭದಲ್ಲಿ ಹೊಂಡಗಳಿಗೆ ಈ ಸಮುದಾಯದವರೇ ನೀರು ತುಂಬುವುದು.

ಮೇಲಿನ ಎಲ್ಲಾ ಮಾಹಿತಿಯನ್ನು ಅನುಸರಿಸಿ ವಾಲ್ಮೀಕಿ ಸಮುದಾಯದವರು ಅಥಣಿ ಪರಿಸರದಲ್ಲಿ ರೂಢಿಸಿಕೊಂಡು ಬಂದಿರುವ ನಂಬಿಕೆ, ವಿಧಿ-ನಿಷೇಧಗಳು ಈರೀತಿಯಾಗಿವೆ.

* ಋತುಮತಿಯಾದ ಹುಡುಗಿ ಹೊರಗಡೆ ಎದುರಿಗೆ ಇರುವಂತಿಲ್ಲ.
* ಬಾಣಂತಿಯು ಹೆರಿಗೆ ಸಂದರ್ಭದಲ್ಲಿ ಈಕೆಯ ತಾಯಿಯು ಉಪವಾಸವಿರಬೇಕು.
* ಮಗಳಿಗೆ ಹೆರಿಗೆ ನೋವು ಬಂದಾಗ ತಾಯಿ ಎದುರಿಗೆ ಇರುವಂತಿಲ್ಲ. ಮನೆಯಿಂದ ಹೊರಗೆ ಇರಬೇಕು.
* ಹೆರಿಗೆಯಾದ ಕೂಡಲೇ ಮಗುವಿನ ತಂದೆ ಮಗುವಿನ ಮುಖ ನೇರವಾಗಿ ನೋಡುವಂತಿಲ್ಲ.
* ಗರ್ಭಿಣಿಯರಾಗಿದ್ದಾಗ ಬಾಳೆಯಹಣ್ಣು, ಪಪ್ಪಾಯ ಹಣ್ಣು ತಿನ್ನುವಂತಿಲ್ಲ. ಹಾಗೆಯೇ ಎಳ್ಳಿನ ಪದಾರ್ಥಗಳನ್ನು ತಿನ್ನುವಂತಿಲ್ಲ.

* ಹುಟ್ಟಿದ ಮಗುವಿಗೆ ಎಣ್ಣೆ ಸ್ನಾನ ಮಾಡಿಸಿ ಮೊರದಲ್ಲಿ ಹಾಕಿಕೊಂಡು ಒಂದು ಬಟ್ಟೆಯಲ್ಲಿ ಹಾಕುತ್ತಾರೆ.
* ಗರ್ಭಿಣಿ ಮಹಿಳೆ ಬಹಳ ಸುಡುವ ನೀರಸ್ನಾನ ಮಾಡಿದರೆ ನರಗಳು ಸಡಿಲಗೊಂಡು ಸುಲಭ ಹೆರಿಗೆಯಾಗುತ್ತದಂತೆ.
* ಗರ್ಭಿಣಿ ಮಹಿಳೆ ರಾತ್ರಿ ಹೊತ್ತು ಅಂಗಳದಲ್ಲಿ ಮಲಗುವ ಹಾಗಿಲ್ಲ.
* ಋತುಮತಿಯಾದ ಹುಡುಗಿ, ಬಾಣಂತಿಯರು ಮಲಗುವಾಗ ತಲೆದಿಂಬಿನ ಕೆಳಗೆ ಕುಡುಗೋಲು, ನಿಂಬೆಹಣ್ಣು, ಕಸಬರಿಕೆ ಇಟ್ಟುಕೊಂಡು ಮಲಗಬೇಕು.
* ಋತುಮತಿಯಾದ ಹುಡುಗಿಯನ್ನು ಪ್ರತ್ಯೇಕವಾಗಿ ಇಡುತ್ತಾರೆ.
* ಚಿಕ್ಕಮಗುವನ್ನು ಮುಟ್ಟಾದವರು ಎತ್ತಿ ಆಡಿಸುವಂತಿಲ್ಲ.
* ಮಕ್ಕಳಿಗೆ ಬಂಜೆ ಹೆಣ್ಣಿನ ಎದುರಿಗೆ ಹಾಲುಣಿಸುವುದಿಲ್ಲ.
* ಮನೆದೇವರಲ್ಲಿ ಮಗುವಿಗೆ ಜವಳ ತೆಗೆಯುವ ತನಕ ಕ್ಷೌರವನ್ನು ಮಾಡಿಸುವಂತಿಲ್ಲ.
* ಮಗುವಿಗೆ ಐದು ತಿಂಗಳಾಗುವ ತನಕ ಬಾಚಣಿಕೆಯನ್ನು ತಲೆಗೆ ಇಡುವಂತಿಲ್ಲ.
* ದೇವರಲ್ಲಿ ಹೂ ಕೇಳಿದಾಗ ಬಲಗಡೆಯಿಂದ ಕೊಟ್ಟರೆ ಕೆಲಸ ವಾಗುತ್ತದೆ.
* ದೈವವು ಹೂವನ್ನು ಪ್ರಸಾದವಾಗಿ ಎಡಗಡೆ ಭಾಗದಿಂದ ನೀಡಿದರೆ ಅಶುಭ.
* ಶುಕ್ರವಾರ ಮನೆಯ ಸೊಸೆ ತವರು ಮನೆಗೆ ಹೋಗುವಂತಿಲ್ಲ.
* ಮಂಗಳವಾರ ಮಗಳನ್ನು ಮನೆಬಿಟ್ಟು ಗಂಡನ ಮನೆಗೆ ಕಳಿಸುವಂತಿಲ್ಲ.
* ರಾತ್ರಿ ಹೊತ್ತು ಮಹಿಳೆ ತಲೆಯನ್ನು ಬಾಚುವುದಿಲ್ಲ.
* ರಾತ್ರಿ ಹೊತ್ತು ಕಸ ಗುಡಿಸಿ ಕಸವನ್ನು ಹೊರಹಾಕುವಂತಿಲ್ಲ.
* ಮನೆಯ ಮುಂದೆ, ಅಥವಾ ಮಾಳಿಗೆಯ ಮೇಲೆ ಕಾಗೆ ಕೂಗಿದರೆ ನೆಂಟರು ಬರುತ್ತಾರೆ.
* ಮಾತಾಡುವಾಗ ಹಲ್ಲಿ ಲೊಚಗುಟ್ಟಿದರೆ ಕೆಲಸ ಸಿದ್ಧಿ.
* ಎಲ್ಲಿಗಾದರೂ ಹೊರಟಾಗ ಕತ್ತೆ ಅರಚಿದರೆ ಶುಭ.
* ಸಂಬಾರಕಾಗೆ (ರತ್ನಪಕ್ಷಿ)ಯ ದರುಶನ ಶುಭ.
* ಬೆಳಿಗ್ಗೆ ನರಿಯ ಮುಖವನ್ನು ನೋಡಿದರೆ ಶುಭವಾಗುತ್ತದೆ.
* ಬೆಕ್ಕು ಮುಖವನ್ನು ತೊಳೆದರೆ ಶುಭವಾಗುವುದು.

* ಬಿತ್ತುವಾಗ ಎತ್ತು ಬಲಕ್ಕೆ ಮಲಗಿದರೆ ಬೆಳೆ ಸಮೃದ್ಧಿ.
* ಮುತ್ತೈದೆಯರು ಬಿತ್ತನೆ ಕೆಲಸದಲ್ಲಿ ಬಾಗಿಯಾಗಬೇಕು.
* ಬಿತ್ತನೆ ಕೆಲಸಕ್ಕೆ ಮತ್ತು ರೈತಾಪಿ ಸಾಮಾನುಗಳಿಗೆ ಪೂಜೆ.
* ಮನೆದೇವರ ದರುಶನ ಪಡೆಯುವುದು.
* ಅಮಾವಾಸ್ಯೆಯ ದಿನ ಗಂಡು ಹುಟ್ಟಿದರೆ ಚಿಂತೆಗೀಡಾಗುವುದು.
* ಹುಣ್ಣಿಮೆಯ ದಿನ ಹೆಣ್ಣು ಹುಟ್ಟಿದರೆ ಚಿಂತೆಗೀಡಾಗುವುದು.
* ಹೂವಿನ ಬುಟ್ಟಿ ಎದುರಾದರೆ ಕೆಲಸ ಸುಲಭವಾಗಿ ನಡೆಯುತ್ತದೆ.
* ಹಾವುಗಳ ಸಂಭೋಗ ಕ್ರಿಯೆಯಲ್ಲಿ ನಿರತವಾಗಿದ್ದನ್ನು ಕಂಡರೆ ಅಪಶಕುನ.
* ದೇವಸ್ಥಾನಗಳಿಗೆ ಪಾದರಕ್ಷೆಗಳನ್ನು ಹಾಕಿಕೊಂಡು ಹೋಗಬಾರದು.
* ದೇವಿಯನ್ನು ನೆನಪಿಸಿಕೊಂಡರೆ ದುಷ್ಟಶಕ್ತಿಗಳು ನಮ್ಮ ಬಳಿ ಸುಳಿಯುದಿಲ್ಲ.
* ಬೇವಿನಕಟ್ಟಿಗೆ ಮತ್ತು ಬನ್ನಿಯ ಕಟ್ಟಿಗೆಯನ್ನು ಉರಿಸಿದರೆ ಕಷ್ಟಗಳು ಬರುತ್ತವೆ.
* ಕಟ್ಟೆಯ ಮೇಲೆ ಕುಳಿತು ಕಾಲು ತೂಗಬಾರದು.
* ಸತ್ತಿರುವ ವ್ಯಕ್ತಿಯಲ್ಲಿ ಉಡುದಾರ ತೆಗೆಯುವುದು.
* ಸತ್ತ ಮಹಿಳೆಯ ಮೈಮೇಲೆ ಬಂಗಾರ ಬಿಡುವುದಿಲ್ಲ.
* ಸತ್ತಿರುವ ವ್ಯಕ್ತಿಯನ್ನು ಊಳುವುದು ರೂಢಿ.
* ತೊನ್ನು ರೋಗ ಇರುವ ವ್ಯಕ್ತಿಯನ್ನು ಸುಡುತ್ತಾರೆ.
* ಬಾಣಂತಿ ಸತ್ತರೆ ಸುಡುತ್ತಾರೆ.
* ಸ್ಥಿರ ಮುತ್ತೈದೆಯರು ಸತ್ತರೆ ಸುಡುವುದು
* ದೇವರನ್ನು ಹೊತ್ತ ಗಂಡಸರನ್ನು (ದಾಸಪ್ಪ) ಸುಡುವುದು.
* ಅವಿವಾಹಿತ ಮಹಿಳೆ ಮತ್ತು ಪುರುಷ ಸತ್ತರೆ ಬೋರಲು ಮಲಗಿಸಿ ಮಣ್ಣು ಮಾಡುವುದು.
* ಶವಸಂಸ್ಕಾರ ಹೋದವರು ನೇರವಾಗಿ ಮನೆಗೆ ಬರುವಂತಿಲ್ಲ.
* ಮೃತದೇಹವನ್ನು ಬಹಳ ಹೊತ್ತಿನ ತನಕ ಇಡುವಂತಿಲ್ಲ.
* ಸಾವು ಸಂಭವಿಸಿದ ಮನೆಗೆ ಸೂತಕ ಬಂದಿರುತ್ತದೆ.

* ಋತುಮತಿಯಾದ ಹುಡುಗಿ ಮಕ್ಕಳನ್ನು, ಮುಟ್ಟುವಂತಿಲ್ಲ.
* ಹೊಸ್ತಿಲು ಮೇಲೆ ಸೀನುವುದು ಒಳಿತಲ್ಲ.
* ಮಗುವು ಮೊರದಲ್ಲಿ ಸೀನಿದರೆ, ಮೊರದ ತುಂಬ ಕಡುಬು ಮಾಡಬೇಕು.
* ಮನೆಯಲ್ಲಿ ಮಹಿಳೆ ನೆಲಕ್ಕೆ ಕಾಲು ಸವರಿಸಿಕೊಂಡು ಓಡಾಡುವಂತಿಲ್ಲ.
* ಮುಟ್ಟಾದವರು ಕೊನೆಯ ನೀರು ಮುಗಿಯುವವರೆಗೂ ಪೂಜೆ, ದೇವತಾಕಾರ್ಯಗಳಲ್ಲಿ ಭಾಗವಹಿಸುವಂತಿಲ್ಲ.
* ಗರ್ಭಿಣಿ ಸ್ತ್ರೀ ಕಾಲುಚಾಚಿಯೇ ಕುಳಿತಿರಬೇಕು. ಮಡಿಚಿಕೊಂಡು ಕೂಡುವಂತಿಲ್ಲ.
* ಆಕಳು, ಎತ್ತುಗಳನ್ನು ಹೊಡೆಯುವಂತಿಲ್ಲ.
* ಬೇಟೆಯಾಡುವುದು ಇವರ ನಿಯಮ ಇದರಡಿಯಲ್ಲಿ ಕೇವಲ, ಮೊಲ, ಜಿಂಕೆ, ಕೌಜುಗ, ಬುರ್ಲಿಯಂತಹ ಪ್ರಾಣಿಪಕ್ಷಿಗಳನ್ನು ಬೇಟೆಯಾಡುವುದು.
* ಸ್ತ್ರೀಯರು ಬೇಟೆಯಾಡುವಂತಿಲ್ಲ.
* ಸ್ತ್ರೀಯರ ಹಣೆಯ ಮೇಲೆ ದುಂಡಾಗಿ ಕುಂಕುಮ ಹಚ್ಚುವುದು.
* ಸ್ತ್ರೀಯರು ಮೂಗಿನ ಬಲಕ್ಕೆ ಮೂಗುತಿ ಧರಿಸುವುದಿಲ್ಲ.
* ಒಂದೇ ಬೆಡಗುಳ್ಳ ವಧು-ವರರು ವಿವಾಹ ಆಗುವಂತಿಲ್ಲ.
* ದೇವತೆಗೆ ಪ್ರಾಣಿಬಲಿಯನ್ನು ಟಗರು ಓತವನ್ನು ಬಿಟ್ಟು ಅನ್ಯ ಪ್ರಾಣಿಗಳನ್ನು ಕೊಡುವುದಿಲ್ಲ.
* ಮನೆಯ ಶುಭ ಕಾರ್ಯಗಳಲ್ಲಿ ಕರಿ ಕಂಬಳಿಯನ್ನು ಹಾಸುವುದು.

೪.೪. ಹರಕೆಗಳು

ಅಥಣಿ ಪರಿಸರ ವಾಲ್ಮೀಕಿ ಸಮುದಾಯದವರು ದುರುಗವ್ವಾ ನಮ್ಮನ್ನು ಕಾಪಾಡು, ಯಲ್ಲವ್ವ ನಮ್ಮನ್ನು ಕಾಪಾಡಿಕೊ, ಆಂಜನೇಯ ನಮ್ಮನ್ನು ಸಲಹು, ಬಸವಣ್ಣ, ಶಿವಯೋಗಿ, ಸಿದ್ದೇಶ್ವರ, ಸಂಗಮೇಶ್ವರ, ಶಿವನೇ ನಮ್ಮನ್ನು ಕಾಪಾಡು ಎಂದು, ತಮ್ಮನ್ನು ದೇವರು ಕಾಪಾಡುತ್ತಾನೆಂದು ನಂಬಿಕೆಯಿಟ್ಟು ಹಲವಾರು ಹರಕೆಯನ್ನು ಹೊರುತ್ತಾರೆ. ಹೀಗೆ ದೇವರು ಕಾಪಾಡುತ್ತಾನೆ ಎನ್ನುವ ನಂಬಿಕೆಯು ಮನುಷ್ಯನಿಗೆ ಒಮ್ಮೆ ಬಂತೆಂದರೆ ಅವನು ಆ ದೇವರಿಗೆ ಏನನ್ನಾದರೂ ಸಲ್ಲಿಸಲು ಸಿದ್ಧನಾಗುವನಂತೆ, ಇಲ್ಲಿಯ ಈ ಸಮುದಾಯದವರು ಏನು ಮಾಡಲು ಸಿದ್ಧರು. ಕಾರಣ ಹಲವಾರು ರೀತಿಯ ಹರಕೆಗಳನ್ನು ಸಂಪ್ರದಾಯ ಬದ್ಧವಾಗಿ ಹೊರುತ್ತಾ ಬಂದಿದ್ದಾರೆ.

ಜೀವನದೊಳಗೆ ಕಷ್ಟ-ಕಾರ್ಪಣ್ಯಗಳು ಸಂಭವಿಸಿದಾಗ ಅವುಗಳು ದೂರವಾದರೆ, ನಾನಾರೀತಿಯ ಹರಕೆಗಳನ್ನು ಕಟ್ಟಿಕೊಂಡು ಭಯಭಕ್ತಿಯಿಂದ ಪೂರೈಸುವುದು ರೂಢಿಗತವಾಗಿ ಬಂದಿದೆ. ಬೆಳ್ಳಿಬಂಗಾರದ

ಸಾಮಾನುಗಳನ್ನು ಹರಕೆ ಹೊತ್ತವರು ತಮಗೆ ಒದಗದಿದ್ದರೂ ಸಾಲದ ಮೊರೆಹೋಗಿ ಮುಟ್ಟಿಸುವುದುಂಟು. "ಹರಕೆಯು ಹನ್ನೆರಡು ವರುಷ" ಎಂದು ತಿಳಿದ ಇವರು ಹರಕೆಯನ್ನು ತೀರಿಸಲು ದೇವರಿಂದಲೇ ಬೇಡಿಕೊಳ್ಳುತ್ತಾ, ನಮ್ಮಪ್ಪ, ನಮ್ಮವ್ವ ಈ ವರ್ಷ ನಿನಗೆ ಅಂದುಕೊಂಡ ಹರಕೆ ಮುಟ್ಟಿಸಲು ಆಗಲಿಲ್ಲ ನಮಗೆ ಇನ್ನೊಂದು ಕಾಲಾವಕಾಶಕೊಡು ಎಂದು ಪುನಃ ಬೇಡಿಕೊಳ್ಳುತ್ತಾರೆ. ಅದನ್ನು ಮುಂದಿನ ಅವಧಿಯಲ್ಲಿ ತೀರಿಸುತ್ತಾರೆ. ಹೀಗೆ ಏನಾದರೂ ಮನೆಯಲ್ಲಿ ಮಕ್ಕಳಿಗೆ , ಹಿರಿಯರಿಗೂ ಕಾಡಾಟ ಪ್ರಾರಂಭವಾದರೆ ಬೇಡಿಕೊಂಡಂತಹ ಹರಕೆಗಳನ್ನು ನೆನಪು ಮಾಡಿಕೊಂಡು, ಅದಕ್ಕೆ ಹೀಗಾಗಿದೆ ಎಂದು ಬೇಗನೆ ಹರಕೆ ತೀರಿಸುವ ಕೆಲಸಕ್ಕೆ ಮುಂದಾಗುತ್ತಾರೆ.

* ತಮ್ಮ ಕುಲದೇವಕ್ಕೆ ದೀಡುನಮಸ್ಕಾರ ಮಾಡುವುದು.
* ಬಹಳ ದಿನದ ನಂತರ ಬೇಡಿಕೊಂಡಂತೆ ಮಕ್ಕಳನ್ನು ಪಡೆದವರು ದೇವಸ್ಥಾನದ ಗೋಡೆಯ ಮೇಲಿಂದ ಕೆಳಕ್ಕೆ ಎಸೆಯುವುದು.
* ದೇವಸ್ಥಾನಗಳಿಗೆ ಸುಣ್ಣ ಬಣ್ಣ ಬಳಿಸುವುದು.
* ದೇವಸ್ಥಾನದಲ್ಲಿ ಚಿತ್ರಗಳನ್ನು ಕಟ್ಟಿಸಿಕೊಡುವುದು.
* ದೀಪಗಳನ್ನು ಒಪ್ಪಿಸುವುದು.
* ಘಂಟೆಗಳನ್ನು ಕೊಡಿಸುವುದು.
* ಪಲ್ಲಕ್ಕಿ ಕೊಡಿಸುವುದು
* ದೀಪ ಹಚ್ಚುವುದು.ಇಂತಿಷ್ಟು ದಿನಗಳವರೆಗೆ ವಾರದ ದಿವಸ ಉಪವಾಸ.
* ಉರುಳು ಸೇವೆ ಮಾಡುವುದು
* ದೇವತೆಗಳ ಮೆರವಣಿಗೆಯಲ್ಲಿ ಅಡ್ಡಬೀಳುವುದು.
* ಪ್ರಾಣಿಬಲಿಯನ್ನು ಕೊಡುವುದು.
* ಕುಲದೇವತೆಗೆ ಸೀರೆ ಕುಪ್ಪಸ ಒಪ್ಪಿಸುವುದು.
* ಹನುಮಪ್ಪನಿಗೆ ಎಲೆಪೂಜೆ ಮಾಡಿಸುವುದು.
* ಹನುಮಪ್ಪನಿಗೆ ಕುಂಕುಮ ಪೂಜೆ ಮಾಡಿಸುವುದು.
* ಸ್ತ್ರೀದೇವತೆಗಳಿಗೆ ಕುಂಕುಮಾರ್ಚನೆ ಮಾಡಿಸುವುದು.
* ಜೋಗತಿಯರಿಗೆ ಊಟ ಹಾಕಿಸುವುದು.
* ದೇವಸ್ಥಾನದಲ್ಲಿ ಪ್ರಸಾದ, ದಾಸೋಹ ನೀಡುವುದು.

* ದೇವತೆಗಳಿಗೆ ಹೂವಿನಹಾರ ಒಪ್ಪಿಸುವುದು.
* ಕಾಯಿಯನ್ನು ಒಡೆಸುವುದು.
* ಬೆಳ್ಳಿ, ಬಂಗಾರದ ಸಾಮಾನು ಒಪ್ಪಿಸುವುದು.
* ಕಾರ್ತಿಕ ಹಚ್ಚುವುದು.
* ಮೊದಲ ಬೆಳೆಯ ಒಂದಿಷ್ಟು ಭಾಗ ದೇವರಿಗೆ ಒಪ್ಪಿಸುವುದು.
* ಗಿಣ್ಣದ ಹಾಲು ಒಪ್ಪಿಸುವುದು.
* ಜಾತ್ರೆಯಲ್ಲಿ ಅರವಟ್ಟಿಗೆ ನಡೆಸುವುದು.

ಅಧ್ಯಾಯ ಐದು

ವಾಲ್ಮೀಕಿ ಸಮುದಾಯದ ಸಾಮಾಜಿಕ, ಶೈಕ್ಷಣಿಕ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಗಳು

೫.೧. ಸಾಮಾಜಿಕ ಜೀವನ

- ೫.೧.೧. ವಸತಿ ವ್ಯವಸ್ಥೆ
- ೫.೧.೨. ಕುಟುಂಬ ವ್ಯವಸ್ಥೆ
- ೫.೧.೩. ವಿವಾಹ ಪದ್ಧತಿ
- ೫.೧.೪. ನ್ಯಾಯ ಪದ್ದತಿ
- ೫.೧.೫. ಆಹಾರ ಪದ್ದತಿ
- ೫.೧.೬. ಉಡುಗೆ, ತೊಡುಗೆ
- ೫.೧.೭. ಭಾಷೆ

೫.೨. ಶೈಕ್ಷಣಿಕ ಸ್ಥಿತಿಗತಿ

೫.೩. ಧಾರ್ಮಿಕ ಸ್ಥಿತಿಗತಿ

೫.೪. ರಾಜಕೀಯ ಸ್ಥಿತಿಗತಿ

೫.೫. ಆರ್ಥಿಕ ಸ್ಥಿತಿಗತಿ

ಅಧ್ಯಾಯ ಐದು

ವಾಲ್ಮೀಕಿ ಸಮುದಾಯದ ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಗಳು

೫.೧. ಸಾಮಾಜಿಕ ಜೀವನ

ಭಾರತವು ವಿವಿಧ ಸಮುದಾಯದ, ಜನಾಂಗ, ಧರ್ಮ, ಭಾಷೆ, ಸಂಸ್ಕೃತಿಗಳ ಬಹುರೂಪಿ ಸಮಾಜವಾಗಿದ್ದು, ಇತರರೊಡನೆ ಅನ್ಯೋನ್ಯತೆಯಿಂದ ಬದುಕುವ ಅವಕಾಶವಿದ್ದರೂ, ಸಾಮಾಜಿಕ ನಿರ್ಬಂಧ ಇದ್ದು ಇನ್ನೂ ಸಂಪೂರ್ಣವಾಗಿ ಸುಧಾರಣೆಯಾಗಿಲ್ಲವೆಂದೇ ಹೇಳಬಹುದು.

ಸಮಾಜವು ನಿಂತ ನೀರಲ್ಲ. ಅದು ನಿತ್ಯ ಪರಿವರ್ತನಾಶೀಲವಾದುದು. ತನ್ನೊಳಗಿನ ಹಲವಾರು ಅಂಶಗಳಲ್ಲಿ ಬದಲಾವಣೆಗಳನ್ನು ಕಂಡಿದೆ. ಮಾನವ ಹಾಗು ಸಮಾಜ ಇವು ಒಂದನ್ನು ಬಿಟ್ಟು ಮತ್ತೊಂದಿಲ್ಲ. ಮಾನವ ಸಮಾಜದ ಚರಿತ್ರೆ ತುಂಬಾ ದೀರ್ಘವಾದದು. ಒಂದು ಕಾಲದ ಅನಾಗರಿಕ ಮಾನವಸಮುದಾಯ ಬೆಳೆದು ಆಧುನೀಕರಣಗೊಂಡಿದೆ. ಮಾನವನು ಜನಿಸಿ ಹಂತಹಂತವಾಗಿ ವಿಕಾಸಹೊಂದಿ, ಬೌದ್ಧಿಕ ಹಾಗು ಭೌತಿಕ ಅಂಶಗಳಲ್ಲಿ ಬದಲಾವಣೆ ಹೊಂದಿದ್ದಾನೆ. ಹಾಗೆಯೇ ಸಮಾಜವು ಸಹ ವಿಕಾಸ ಹೊಂದುತ್ತಲೇ ಬಂದಿದೆ. ಬದಲಾವಣೆ ಮತ್ತು ಪರಿವರ್ತನಾ ಅಂಶಗಳಲ್ಲಿ ವಾಲ್ಮೀಕಿ ಸಮುದಾಯದ ಜನರ ಜೀವನವು ಒಂದಾಗಿದೆ. ದೇಶದ ವಿವಿಧೆಡೆ ನೆಲೆಸಿರುವ ಈ ಸಮುದಾಯದವರ ಬದುಕು ವಿವಿಧ ಕಾರಣಗಳಿಂದಾಗಿ ಸ್ಥಿತ್ಯಂತರಗೊಂಡಿದೆ. ಈ ಅಂಶವನ್ನು ಇಟ್ಟುಕೊಂಡು ವಾಲ್ಮೀಕಿ ಸಮುದಾಯದ ಸಾಮಾಜಿಕ ಜೀವನದಲ್ಲಿ ಇಂದು ಬದಲಾವಣೆಯಾಗಿರುವುದನ್ನು ನಾವು ಗಮನಿಸಬಹುದು.

ಇಂದಿನ ದಿನಗಳಲ್ಲಿ ಸಮಾಜದ ಮೇಲೆ ಹಿಡಿತ ಸಾಧಿಸಿರುವ ಮುಖ್ಯ ಅಂಶಗಳಾದ ಆಧುನೀಕರಣ, ನಗರೀಕರಣ, ಪಾಶ್ಚಾತ್ಯೀಕರಣ, ಔದ್ಯೋಗೀಕರಣಗಳ ಪ್ರಭಾವಕ್ಕೆ ಒಳಗಾಗಿ ಈ ಸಮುದಾಯದವರು ಬದಲಾವಣೆ ಹೊಂದುತ್ತಿದ್ದಾರೆ. ಈ ವಾಲ್ಮೀಕಿ ಸಮುದಾಯದ ಮೇಲೆ ಇತರೆ ಜಾತಿ ಸಮುದಾಯಗಳು ಪ್ರಭಾವ ಬೀರಿ ಇಂದು ತನ್ನಲ್ಲಿರುವ ಕೆಲವು ಆಚರಣಾಕ್ರಮ ಹಾಗು ಜೀವನದ ವಿಧಾನದಲ್ಲಿ ಬದಲಾವಣೆಯಾಗಿರುವುದು ಕಂಡುಬರುತ್ತದೆ.

೫.೧.೧. ವಸತಿ ವ್ಯವಸ್ಥೆ

ಈ ಸಮುದಾಯದವರು ವಾಸಿಸುವ ಯಾವುದೇ ಊರುಗಳಲ್ಲಿ, ಪ್ರಮುಖ ಬೀದಿಗಳಲ್ಲಿ

ಮೇಲ್ವರ್ಗದ ಜನರು ವಾಸಿಸುತ್ತಿದ್ದಾರೆ. ಇವರು ಊರಿನ ಹಿಂದಿನ ಭಾಗದಲ್ಲಿ ಅಥವಾ ಊರಾಚೆ ಹಟ್ಟಿಗಳನ್ನು ಕಟ್ಟಿಕೊಂಡು ವಾಸಿಸುವ ದೃಶ್ಯ ಇಂದಿಗೂ ನಮಗೆ ಕಂಡುಬರುತ್ತದೆ. ಅಲ್ಲದೆ ವಾಲ್ಮೀಕಿ ಸಮುದಾಯದವರು ತಮ್ಮ ಮನೆಗಳನ್ನು ಮೊದಲು ಕವಚೆಹುಲ್ಲು, ಕಬ್ಬಿನ ಒಗಡು, ಲಕ್ಕಿಬರಲು, ತೆಂಗಿನ ಗರಿ, ನುಗ್ಗೆಯ ಬೆಂಡುಗಳಿಂದ ಮನೆಯನ್ನು ನಿರ್ಮಿಸಿ ಕೊಳ್ಳುತ್ತಿದ್ದರು. ಹಾಗೆಯೇ ತಮ್ಮ ಹಟ್ಟಿಗಳಲ್ಲಿ ಇತರರು ಪ್ರವೇಶಿಸದಂತೆ ನೋಡಿಕೊಳ್ಳುತ್ತಿದ್ದರು. ಕ್ರಮೇಣ ಬದಲಾವಣೆಯ ಅಲೆಗೆ ಸಿಲುಕಿ ಇವರ ರೀತಿ-ನೀತಿ, ವಸತಿಯನ್ನು ನೋಡಿದ ಕೂಡಲೇ ಇವರು ವಾಲ್ಮೀಕಿ ಸಮುದಾಯದವರು ಎನ್ನುವ ಕಾಲವೊಂದಿತ್ತು. ಆದರೆ ಇಂದು ಯಾವುದೇ ಸಮುದಾಯಕ್ಕೂ ನಾವೇನು ಕಡಿಮೆ ಎನ್ನುವಷ್ಟರ ಮಟ್ಟಿಗೆ ಸಾಮಾಜಿಕವಾಗಿ ಮುಂದೆ ಬಂದಿದ್ದಾರೆ. ತಮಗೆ ಬೇಕಾದ ರೀತಿಯಲ್ಲಿ ಹುಲ್ಲಿನಿಂದ, ಕಟ್ಟಿಗೆಯಿಂದ ಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದ ಇವರು ಇಂದು ಈ ಪರಿಸರದಲ್ಲಿ ಆರ್ಥಿಕವಾಗಿ ಪ್ರಬಲವಾದವರು, ಸಿಮೆಂಟು, ಇಟ್ಟಿಗೆ, ಕಬ್ಬಿಣ ಮೊದಲಾದ ವಿನೂತನ ಮಾದರಿಯ ಹಾಗೂ ವಾಸ್ತು ಶಾಸ್ತ್ರದ ಹಿನ್ನೆಲೆಯಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇನ್ನು ಕೆಲವರು, ಇಂದಿರಾ ಆವಾಜಯೋಜನೆ, ರಾಜೀವಗಾಂಧಿ ಆಶ್ರಯಯೋಜನೆಯಂತಹ ಸೌಲಭ್ಯವನ್ನು ಪಡೆದ ಫಲಾನುಭವಿಗಳು ಪತ್ರಾಸು (ಸಿಮೆಂಟಿನ ತಗಡು) ಪರಿಸೆ (ಕಡಪದ ಕಲ್ಲು) ಬಳಸಿದಂತಹ ಮನೆಗಳಲ್ಲಿ ವಾಸವಾಗಿದ್ದಾರೆ. ಅಲ್ಪಸ್ವಲ್ಪ ಭೂಮಿ ಇದ್ದವರು ಹೊಲಗದ್ದೆಗಳಲ್ಲಿಯೇ ಪ್ರಾಚೀನ ಪರಂಪರೆಯಂತೆ ಮನೆಯನ್ನು ಮಾಡಿಕೊಂಡು ತಮ್ಮ ಮೂಲ ನೆಲೆಯ ನೆನಪು ತಂದುಕೊಡುವ ರೀತಿಯಲ್ಲಿ ಬದುಕುತ್ತಿದ್ದಾರೆ. ಈ ಪರಿಸರದಲ್ಲಿ ಇವರು ಇಂದಿಗೂ ಬಹುತೇಕ ತೋಟಪಟ್ಟಿಯಲ್ಲಿ ಮನೆಮಾಡಿಕೊಂಡು ವಾಸಿಸುತ್ತಿದ್ದಾರೆ.

೫.೧.೨. ಕುಟುಂಬ ವ್ಯವಸ್ಥೆ

ಅಥಣಿ ಪರಿಸರದ ವಾಲ್ಮೀಕಿ ಸಮುದಾಯದಲ್ಲಿ ಅವಿಭಕ್ತ ಕುಟುಂಬ ಪದ್ಧತಿಯು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಿದೆ. ಇತ್ತೀಚಿನ ದಿನಮಾನಗಳಲ್ಲಿ ಜನರು ವಿವಿಧ ವೃತ್ತಿಗಳನ್ನು ಅನುಸರಿಸಿ, ಜೀವನ ಸಾಗಿಸುವುದರಿಂದ ಕೈಗಾರೀಕರಣ, ನಗರೀಕರಣ, ಶಿಕ್ಷಣ, ಉದ್ಯೋಗದಂತಹ ಪ್ರಭಾವಕ್ಕೆ ಒಳಗಾಗಿ ತಮಗೆ ಅನುಕೂಲವಾಗುವ ಸ್ಥಳಗಳಲ್ಲಿ, ಜೀವಿಸಲು ಮುಂದಾಗಿ ಅವಿಭಕ್ತ ಕುಟುಂಬಗಳೆಲ್ಲ ವಿಭಕ್ತ ಕುಟುಂಬಗಳಾಗಿ ಪರಿವರ್ತನೆಯನ್ನು ಹೊಂದುತ್ತಿವೆ. ಇವರ ಜೀವನವು ಇಂದು ಪರಿಸರ ಹಾಗೂ ಪರಿಸ್ಥಿತಿಗೆ ಅನುಗುಣವಾಗಿ ಬದಲಾವಣೆಯನ್ನು ಹೊಂದುತ್ತಾ ಸಾಗಿದೆ. ಪುರುಷಪ್ರಧಾನ ಕುಟುಂಬಗಳು ಎಲ್ಲೆಲ್ಲೂ ಕಂಡುಬರುತ್ತಿದ್ದು, ಆತನೇ ಕುಟುಂಬದ ಯಜಮಾನ. ಕುಟುಂಬದ ಎಲ್ಲಾ ಸದಸ್ಯರ ಮೇಲು ಆತನು ಅಧಿಕಾರ ನಡೆಸುತ್ತಾನೆ. ಸ್ತ್ರೀಯರಿಗೆ ಗೌರವ ಸ್ಥಾನವನ್ನು ಕೊಟ್ಟಿದ್ದಾನೆ. ಈಕೆ ಮನೆ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೊಂದಿದ್ದಾಳೆ. ಆದರೆ ಇಂದು ಮನುಷ್ಯ ನಾಗರೀಕತೆಯ ಕಡೆಗೆ ವಾಲಿರುವುದರಿಂದ ಈ ವ್ಯವಸ್ಥೆಯಲ್ಲಿ ಸ್ವಲ್ಪ ಬದಲಾವಣೆಯಾಗಿರುವುದನ್ನು ಕಾಣಬಹುದು. ಈ ಸಮುದಾಯದ ಪುರುಷರು ಹಲವಾರು ದುಶ್ಚಟಗಳಿಗೆ ಬಲಿಯಾಗಿ ತಮ್ಮ ಕುಟುಂಬವನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗುವಲ್ಲಿ ಸೋತಿದ್ದಂತಹ ಸಂದರ್ಭದಲ್ಲಿ ಮಹಿಳೆಯೇ ಯಜಮಾನಿಯಾಗಿ,

ತಾಯಿಯಾಗಿ, ಹೆಂಡತಿಯಾಗಿ, ಈ ಕುಟುಂಬಗಳನ್ನು ಸುರಕ್ಷಿತವಾಗಿ ನೋಡಿಕೊಂಡು ಹೋಗುವುದು ಕಂಡುಬರುತ್ತಿದೆ.

೫.೧.೩. ವಿವಾಹ ಪದ್ಧತಿ

ವಿವಾಹ ಮತ್ತು ಕುಟುಂಬ ಇವು ಸಾಮಾಜಿಕವಾಗಿ ಬಹಳ ಪ್ರಾಮುಖ್ಯವನ್ನು ಗಳಿಸಿರುವ ಸಂಸ್ಥೆಗಳು. ಮಾನವನ ಲೈಂಗಿಕ ಸ್ವಚ್ಛಂದತೆಯನ್ನು ನಿವಾರಣೆಮಾಡಿ ಆತನ ಲೈಂಗಿಕ ಬಯಕೆಯ ಪೂರೈಕೆಗೆ ಕ್ರಮಬದ್ಧವಾದ ವ್ಯವಸ್ಥೆಯೊಂದನ್ನು ನಿರ್ಮಿಸಲೋಸುಗ ವಿವಾಹವು ಹುಟ್ಟಿಕೊಂಡಿರಬೇಕು. ವಿವಾಹ ವೆನ್ನುವಂತಹ ಒಂದು ಸಂಸ್ಥೆ ಸಾರ್ವತ್ರಿಕ ಸ್ವರೂಪದ್ದಾಗಿದ್ದರೂ ಅದರ ರೂಪ ಸ್ವರೂಪಗಳು ಎಲ್ಲಾ ಕಡೆ ಒಂದೇ ರೀತಿಯಲ್ಲಿ ಇರುತ್ತವೆ ಎನ್ನಬಹುದು. ವಿವಾಹದ ವಯಸ್ಸು, ಸಂಗಾತಿಗಳ ಆಯ್ಕೆಯ ಕ್ರಮ, ವಿವಾಹ ಸಮಾರಂಭದ ಸ್ವರೂಪ, ವಿವಾಹವೊಂದರ ಮುಖಾಂತರ ಸಂಗಾತಿಗಳಾಗುವವರ ಸಂಖ್ಯೆ, ಅಂದರೆ ವಿವಾಹದ ವಿವಿಧ ವಿಧಗಳು, ವಿವಾಹ ವಿಚ್ಛೇದನ, ಲೈಂಗಿಕ ಜೀವನಕ್ಕೆ ಸಂಬಂಧಿಸಿದ ನಿಯಮಗಳು ಒಂದೊಂದು ಕಡೆಗೆ ಒಂದೊಂದು ರೀತಿಯಲ್ಲಿ ನಡೆದುಕೊಂಡು ಬಂದಿರುತ್ತವೆ. ಭಾರತದಂತಹ ದೇಶದಲ್ಲಿ ಹಿಂದುಗಳ ನಂಬಿಕೆಯಂತೆ ಪಿತೃಋಣವನ್ನು ತೀರಿಸಲು ಸತ್‌ಪುತ್ರನ ಅಗತ್ಯವಿದೆಯಾದ್ದರಿಂದ ಅಂತಹ ಪುತ್ರನನ್ನು ಪಡೆಯಲು ವಿವಾಹಗಳು ಒಂದು ಪವಿತ್ರಸ್ಥಾನ ಪಡೆದುಕೊಂಡಿವೆ. ಅಂತೆಯೇ ಭಾರತದಲ್ಲಿ ವಿವಾಹವಿಲ್ಲದ ಸಂಸ್ಥೆಯು ಸರ್ವವ್ಯಾಪಕವಾಗಿರಲು ಅದರ ಉದ್ದೇಶಗಳು ಮತ್ತು ಕಾರ್ಯಗಳೇ ಕಾರಣ. ಸಮಾಜ ಶಾಸ್ತ್ರಜ್ಞ, ಕೆ.ಎಂ.ಕಪಾಡಿಯರವರು ಹೇಳುವಂತೆ ಧರ್ಮ, ಪ್ರಜಾ ಮತ್ತು ಕಲೆ, ಧರ್ಮಾಚರಣೆ, ಸಂತಾನೋತ್ಪತ್ತಿ ಮತ್ತು ಲೈಂಗಿಕತೃಪ್ತಿ ಇವು ಹಿಂದೂ ವಿವಾಹ ಪದ್ಧತಿಯ ಮುಖ್ಯ ಉದ್ದೇಶಗಳಾಗಿವೆ.

ಹೀಗೆ ಗಂಡು-ಹೆಣ್ಣಿನ ಸಂಬಂಧವನ್ನು ಕಾನೂನುಬದ್ಧಗೊಳಿಸಿ ಸಂತಾನವನ್ನು ಬೆಳೆಸಿಕೊಳ್ಳುವುದಕ್ಕೆ ಅನುವು ಮಾಡಿಕೊಡುವ ವ್ಯವಸ್ಥೆ ಇದಾಗಿದೆ. ಅಥಣಿ ಪರಿಸರದ ವಾಲ್ಮೀಕಿ ಸಮುದಾಯದಲ್ಲಿ ಹಲವಾರು ಬೆಡಗುಗಳು ಕಂಡು ಬರುತ್ತಿದ್ದು, ಒಂದೇ ರೀತಿಯ ಬೆಡಗುಗಳಲ್ಲಿ ವಿವಾಹವು ನಡೆಯುವುದಿಲ್ಲ. ಅಣ್ಣತಮ್ಮಂದಿರು ಎಂಬ ಭಾವನೆ ಇವರಲ್ಲಿದೆ. ಆದರೆ ಭಿನ್ನ ಬೆಡಗುಗಳಲ್ಲಿ ವಿವಾಹವೇರ್ಪಡುತ್ತದೆ. ಒಂದು ವೇಳೆ ವಧು-ವರರು ಪ್ರೇಮಿಸಿ ಒಂದೇ ಬೆಡಗದವರಾಗಿದ್ದು ಹಿರಿಯರಿಗೆ ಹೇಳದೆ ಕೇಳದೆ ಮದುವೆಯಾಗಿ ಬಂದರೆ ಅವರಿಗೆ ಸಮುದಾಯದ ದೈವದವರು, ಅಥವಾ ಕುಟುಂಬದ ಹಿರಿಯರು ಆ ವಿವಾಹ ಬಂಧನವನ್ನು ಅವರಿಗೆ ತಿಳುವಳಿಕೆ ಹೇಳುವುದರ ಮೂಲಕ ಬಂಧಮುಕ್ತರನ್ನಾಗಿ ಮಾಡುತ್ತಾರೆ. ಪುನಃ ಅವರಿಗೆ ಬೇರೆಡೆಗೆ ವರ ಅಥವ ವಧುವನ್ನು ಗೊತ್ತುಮಾಡಿ ಮದುವೆ ಮಾಡಿಸುತ್ತಾರೆ.

ವಿವಾಹ ಒಂದು ಸಂಸ್ಕಾರವಿಧಿ. ಇದನ್ನು ವಿಧಿವತ್ತಾಗಿ ನಡೆಸಿಕೊಂಡು ಬಂದಿದ್ದಾರೆ. ಇಲ್ಲಿ ಕುಟುಂಬ ವ್ಯವಸ್ಥೆಯ ಅಡಿಯಲ್ಲಿ ಬರುವ ವೈವಾಹಿಕ ಪದ್ಧತಿಯಲ್ಲಿ ಇಂದಿಗೂ ಸೋದರ ಸಂಬಂಧಿ ಮದುವೆಗಳು ಬಹುಆಸಕ್ತಿಯಿಂದ ನಡೆಯುತ್ತವೆ. ಅಂದರೆ ಒಳಗಿನ ಸಂಬಂಧಗಳು. ಅತ್ತೆಯ/ಅಕ್ಕನ ಮಗಳನ್ನು ಮದುವೆಯಾಗುವರು. ಮದುವೆಗಳು ಬಹುತೇಕ ಗಂಡಿನ ಮನೆಮುಂದೆಯೇ ನಡೆಯುವುದು

ಕಂಡುಬರುತ್ತಿದೆ. ಹಸೆಕಟ್ಟೆ, ಇಲ್ಲವೆ ಬೀಸುವಕಲ್ಲು, ನೆಟ್ಟಕ್ಕಿ ಪುಟ್ಟಿಯಲ್ಲಿ ಮದುಮಕ್ಕಳನ್ನು ನಿಲ್ಲಿಸಿ ತೆರೆಯನ್ನು ಹಿಡಿದು ತಾಳಿಕಟ್ಟಿಸುವ ಪದ್ಧತಿಯು ಜಾರಿಯಲ್ಲಿದೆ. ಹೆಣ್ಣಿಗೆ ದಂಡೆಯನ್ನು ಹಾಕುತ್ತಾರೆ. ಇಲ್ಲವೇ ಮುತ್ತಿನ ಬಾಸಿಂಗ ಕಟ್ಟುತ್ತಾರೆ. ಗಂಡಿಗೆ ಟೊಪ್ಪಿಗೆಯನ್ನು ಹಾಕಿ ಮುತ್ತಿನ ಬಾಸಿಂಗ ಕಟ್ಟುತ್ತಾರೆ.

ಈ ಪರಿಸರದ ವಾಲ್ಮೀಕಿ ಸಮುದಾಯದಲ್ಲಿ ಹೆಣ್ಣಿಗೆ ತೆರವು ಕೊಡುವ ಪದ್ಧತಿಯು ಇನ್ನು ಜೀವಂತವಾಗಿದೆ. ಅಂದರೆ ಧಾನ್ಯಗಳ ರೂಪದಲ್ಲಿಯಾದರೂ, ಹಣದ ರೂಪದಲ್ಲಿಯಾದರೂ ಮದುವೆ ಹಿಂದಿನ ದಿನ ನಿಶ್ಚಿತಾರ್ಥದ ದಿನದಂದು ತೆರವು ಕೊಡುವ ಪದ್ಧತಿ ಇದೆ.

ಈ ಪರಿಸರದಲ್ಲಿ ಮದುವೆಗಳು ಎರಡು ರೀತಿಯಲ್ಲಿ ಜರುಗುತ್ತವೆ. ಆಡಂಬರದ, ಆದ್ದೂರಿಯ ೫ ದಿನಗಳ ಕಾಲ ನಡೆಯುವ ಸಾಂಪ್ರದಾಯಿಕ ಮದುವೆಗಳು ಹಾಗೂ ಒಂದೇ ದಿನದಲ್ಲಿ ಹುಡುಗಿಯನ್ನು ನೋಡಿದ ಕೂಡಲೇ ಪಸಂದ (ಒಪ್ಪಿಗೆ) ಬಂದರೆ ತತ್‌ಕ್ಷಣವೇ ನಿರಾಡಂಬರವಾಗಿ ನಡೆಯುವ ಮದುವೆ 'ಯಾದಿಮೆ ಶ್ಯಾದಿ' ಇದರಲ್ಲಿ ಜನರು ಕಡಿಮೆ, ಸಮಯಾವಕಾಶ ಉಳಿಯುತ್ತೆ, ಖರ್ಚು ಅಷ್ಟಕ್ಕಷ್ಟೆ ವಧುವರರು ದಾಂಪತ್ಯಕ್ಕೆ ಕಾಲು ಇಡುತ್ತಾರೆ. ಈ ವಿವಾಹ ಪದ್ಧತಿಯನ್ನು ಕುರಿತು ಜೀವನಾವರ್ತನದ ಆಚರಣೆಯಲ್ಲಿ ವಿವರಿಸಲಾಗಿದೆ.

೫.೧.೪.ನ್ಯಾಯ ಪದ್ಧತಿ

ಕುಟುಂಬಗಳ ಸೌಖ್ಯಕ್ಕೆ, ಹಳ್ಳಿಗಳ ಶಾಂತಿಗೆ ತಮ್ಮದೇ ಆದ ನ್ಯಾಯ ಪದ್ಧತಿಯನ್ನು ಜನಪದರು ರೂಢಿಸಿಕೊಂಡು ಬಂದಿದ್ದಾರೆ. ಜನ ಶಾಂತಿಯಿಂದ ಬದುಕಬೇಕು ಎಂದರೆ ನೀತಿ-ನಿಯಮಗಳು ಮುಖ್ಯವಾಗಿ ಬೇಕಾಗುತ್ತವೆ. ಹಿಂದೆಲ್ಲ ರಾಜ ಅಥವಾ ಸಂಸ್ಥಾನಿಕರ ಪರವಾಗಿ ಗೌಡನೋ, ಶ್ಯಾನುಭೋಗನೋ, ಪಾಟೀಲನೋ, ಊರಿನ ಆಡಳಿತ ವ್ಯವಸ್ಥೆಯನ್ನು ನಿಯಂತ್ರಿಸುತ್ತಿದ್ದನು. ರಾಜಕೀಯ ಕಟ್ಟಳೆಗಳಿಗಿಂತ ಸಾಮಾಜಿಕ ಕಟ್ಟಳೆಗಳೇ ಗ್ರಾಮೀಣರಿಗೆ ಹೆಚ್ಚು ಮುಖ್ಯವಾಗುತ್ತಿವೆ. ಕಾನೂನಿನನ್ವಯ ಜಾರಿಗೆ ಬರುವ ಕಟ್ಟಳೆಗಳಿಗಿಂತ ಸಾಮಾಜಿಕ ಕಟ್ಟಳೆಗಳು ಹೆಚ್ಚು ಆತ್ಮೀಯವೆನಿಸುತ್ತವೆ.

ಸಾಮಾಜಿಕ ನಿಯಂತ್ರಣದ ಅನೌಪಚಾರಿಕ ಸಾಧನಗಳಲ್ಲಿ ನ್ಯಾಯ ಪಂಚಾಯತಿ ಮುಖ್ಯವಾದದ್ದು. ಪ್ರಾಚೀನ ಸಾಮಾಜಿಕ ಜೀವನದಲ್ಲಿ ನ್ಯಾಯ ಪಂಚಾಯ್ತಿ ತೀರ್ಮಾನ ಸಮುದಾಯಗಳನ್ನೇ ಅವಲಂಬಿಸಿದ್ದವು. ಏಕೆಂದರೆ ಅವುಗಳ ಗಾತ್ರ ಚಿಕ್ಕವು, ಜನಸಂಖ್ಯೆ ಕಡಿಮೆ. ಜೀವನದ ವಿವಿಧ ಕ್ಷೇತ್ರಗಳು ಸರಳ ಸ್ವರೂಪದವುಗಳಾಗಿದ್ದವು. ಜನರು ಸಾಮಾಜಿಕ ಜೀವನದ ಸಂಬಂಧಗಳನ್ನು ಹೊಂದಿದ್ದರೂ ಭಾರತದ ಜಾತಿಗಳನ್ನು ಬುಡಕಟ್ಟು ಸಮುದಾಯಗಳನ್ನು ಗಮನಿಸಿದಾಗ ಇವು ತಮ್ಮದೇ ಆದ ನ್ಯಾಯಪದ್ಧತಿಯ ಕ್ರಮವನ್ನು ಅನುಸರಿಸಿರುವುದು ಕಂಡುಬರುತ್ತದೆ. ಎಲ್ಲಾ ಜಾತಿ, ಸಮುದಾಯಗಳ, ಬುಡಕಟ್ಟುಗಳ ನ್ಯಾಯ ಪದ್ಧತಿಯ ಮೂಲ ಉದ್ದೇಶ ಒಂದೇ ಆಗಿದ್ದರೂ, ಸಮುದಾಯಗಳಲ್ಲಿನ ಪದ್ಧತಿಯಲ್ಲಿರುವ ರಚನಾಕ್ರಮಗಳು ಮಾತ್ರ ಭಿನ್ನತೆಯಿಂದ ಕೂಡಿರುವುದನ್ನು ಕಾಣಬಹುದಾಗಿದೆ. ನ್ಯಾಯದ ಧ್ಯೇಯೋದ್ದೇಶಗಳನ್ನು ಸಾಧಿಸಲು ಮತ್ತು ಜನಜೀವನದಲ್ಲಿ ಸುವ್ಯವಸ್ಥಿತೆಯನ್ನುಂಟು ಮಾಡಲು ನ್ಯಾಯ

ಪಂಚಾಯ್ತಿ ರಚಿಸಿಕೊಳ್ಳಲಾಗುವುದು. ಅಂತೆಯೇ ನ್ಯಾಯ ಪಂಚಾಯ್ತಿಯು ಯೋಜಿತ ರೀತಿಯಲ್ಲಿ ರೂಪುಗೊಂಡು ಚಾಲನೆಯಲ್ಲಿರುವ ಸಾಮಾಜಿಕ ನಿಯಂತ್ರಣದ ಒಂದು ಅನೌಪಚಾರಿಕ ಸಾಧನವಾಗಿದೆ.

ಒಂದು ಜನ ಸಮುದಾಯದ ನಂಬಿಕೆ, ಆಚರಣೆ, ಆದರ್ಶ ಮೌಲ್ಯಗಳು ನ್ಯಾಯ ನಿರ್ಣಯಗಳ ಪದ್ಧತಿಗಳನ್ನು ರೂಪಿಸುತ್ತವೆ. ಈ ನ್ಯಾಯ ಪದ್ಧತಿ ಕ್ರಮವು ಬುಡಕಟ್ಟುಗಳಲ್ಲಿ ತುಂಬಾ ಗೌರವ ಮತ್ತು ನಿಷ್ಠೆಯಿಂದ ನಡೆಯಲ್ಪಡುತ್ತವೆ.

ಸರಕಾರವು ರಚಿಸಿದ ನ್ಯಾಯವ್ಯವಸ್ಥೆಗಿಂತ ಹೆಚ್ಚಿನ ಮಹತ್ವವನ್ನು ಈ ಸಮುದಾಯಗಳ ನ್ಯಾಯವ್ಯವಸ್ಥೆ ಹೊಂದಿರುತ್ತದೆ. ಇತರ ಸಮುದಾಯಗಳಲ್ಲಿಯಂತೆ ವಾಲ್ಮೀಕಿ ಸಮುದಾಯದಲ್ಲಿ ನ್ಯಾಯಪದ್ಧತಿಯು ತನ್ನದೇ ಆದ ಮಹತ್ವವನ್ನು ಹೊಂದಿದೆ. ಅಥಣಿ ಪರಿಸರದ ವಾಲ್ಮೀಕಿ ಸಮುದಾಯದಲ್ಲಿ ನ್ಯಾಯತೀರ್ಮಾನ ಮಾಡುವ ಒಂದು ಗುಂಪಿಗೆ ಅಥವಾ ಆ ಸದಸ್ಯರಿಗೆ ದೈವದವರು ಎಂದು, ಹಿರಿಯರು ಎಂದು, ಪಂಚಾಯ್ತಿ ಕಟ್ಟೆಯವರು ಎಂದು ಕರೆಯುತ್ತಾರೆ. ಆಪಾದಿತ ವ್ಯಕ್ತಿಯು ಮಾಡಿದ ಪ್ರಮಾದಕ್ಕನುಗುಣವಾಗಿ ತೀರ್ಪು ನಿರ್ಧರಿತವಾಗುತ್ತದೆ.

ನಮ್ಮ ಬಹುಪಾಲು ಹಳ್ಳಿಗಳನ್ನು ಆಳುವ ವರ್ಗ ವರ್ಣ ವ್ಯವಸ್ಥೆ ಜನಪದ ನ್ಯಾಯ ಸಂದರ್ಭವನ್ನು ವ್ಯಾಪಿಸಿದಂತೆ, ಸಾಮಾನ್ಯವಾಗಿ ಉಚ್ಚಕುಲದವರು, ಶ್ರೀಮಂತರು, ಇಲ್ಲಿ ಹಿರಿಯರೆಂಬುದು ಸತ್ಯ. ಮದುವೆ ಮುಂಜಿಗಳಲ್ಲಿ ಅಣ್ಣ ತಮ್ಮಂದಿರು ಬೇರೆಯಾಗುವಲ್ಲಿ ಇವರು ಬೇಕು. ಮನೆಯ ಜಾಗದ ಜಗಳ, ಆಸ್ತಿಯ ಜಗಳ, ದುಡ್ಡು ಬಂಗಾರದ ಜಗಳ ಎಲ್ಲವನ್ನು ಈ ಹಿರಿಯರೇ ಬಗೆಹರಿಸುತ್ತಾರೆ. ಒಂದರ್ಥದಲ್ಲಿ ಇವರುಗಳು ಅಧಿಕೃತ ನ್ಯಾಯಧೀಶರಾಗಿ ಕೆಲಸಮಾಡುತ್ತಾರೆ.

ಈ ಸಮುದಾಯದಲ್ಲಿ ಅಪರಾಧಕ್ಕೆ ತಕ್ಕಂತೆ ಶಿಕ್ಷೆಯನ್ನು ಬೇರೆ ಬೇರೆ ರೀತಿಯಲ್ಲಿ ವಿಧಿಸಲಾಗುತ್ತಿದೆ. ಕಳ್ಳತನ, ಕುಡಿತ, ಜಮೀನುಹಗರಣ, ಹಲ್ಲೆ ಮುಂತಾದ ಅಪರಾಧಗೈದ ಸಂದರ್ಭಗಳಿಗಿಂತಲೂ ಹೆಣ್ಣು ಮಕ್ಕಳ ಮಾನಕ್ಕೆ ಸಂಬಂಧಿಸಿದ ಅಪರಾಧ ಹಳ್ಳಿಗಳಲ್ಲಿ ತೀವ್ರವಾಗಿ ಪರಿಗಣಿಸಲ್ಪಡುತ್ತದೆ. ಒಂದು ಕಡೆಗೆ ಕುಲದವರು ಬಹಿಷ್ಕಾರ ಹಾಕುವುದು ಇನ್ನೊಂದೆಡೆ ಇಡೀ ಊರೇ ಬಹಿಷ್ಕಾರ ಹಾಕುವ ಪದ್ಧತಿಯು ಹಿಂದಕ್ಕೆ ಜಾರಿಯಲ್ಲಿತ್ತು. ಆದರೆ ಇಂದು ವೈಜ್ಞಾನಿಕವಾಗಿ ಮುಂದುವರಿದ ಸಂದರ್ಭದಲ್ಲಿ, ನಗರೀಕರಣದ ಸ್ಪರ್ಶದ ಸಂದರ್ಭದಲ್ಲಿ ಈ ಸಮುದಾಯದ ಯಾವುದೇ ಮಹಿಳೆಯ ಮೇಲೆ ಅದೇ ಸಮುದಾಯದವರು ಅಥವಾ ಬೇರೆ ಸಮುದಾಯದ ಪುರುಷರು ಮಾನಭಂಗ ಮಾಡಿದ ಸಂದರ್ಭದಲ್ಲಿ ಅವರಿಬ್ಬರನ್ನು ಒಂದುಗೂಡಿಸುವ, ಇಲ್ಲವೇ ಬೇರೆ ಕಡೆಗೆ ಮದುವೆ ಮಾಡಿಕೊಡುವುದನ್ನು ನೋಡಬಹುದು. ಹೆಣ್ಣಿನ ಮದುವೆಯ ಖರ್ಚಿಗೆ ಬೇಕಾಗುವಷ್ಟು ಹಣ ಅಪಾದಿತವ್ಯಕ್ತಿ ಕೊಡಬೇಕು. ಇಲ್ಲಿ ಗೌಪ್ಯತೆಯನ್ನು ಕಾಪಾಡುತ್ತಾರೆ. ಎರಡು ಕಡೆಯವರಿಗೂ ಒಪ್ಪಂದ ಮಾಡಿಸುವ ಪ್ರಯತ್ನ ಮಾಡುತ್ತಾರೆ. ನ್ಯಾಯ ಸಮ್ಮತವಾಗಿ ಬಗೆಹರಿಸಲು ಪ್ರಯತ್ನಿಸುತ್ತಾರೆ. ಅಥಣಿ ಪರಿಸರದ ವಾಲ್ಮೀಕಿ ಸಮುದಾಯದಲ್ಲಿ ಪುರುಷ ತನಗಿಂತ ಕೆಳಸಮುದಾಯದ ಇಲ್ಲವೇ ಮೇಲಿನ ಸಮುದಾಯದ ಮಹಿಳೆಯನ್ನು ಮದುವೆಯಾದರೆ, ದೈವದವರು

ಅವರನ್ನು ಮನ್ನಿಸಿ ಮನೆಯೊಳಗೆ ಕರೆದುಕೊಳ್ಳುತ್ತಾರೆ. ಆದರೆ ಮಹಿಳೆ ಹೀಗೆ ಮಾಡಿದರೆ ಮನೆಯೊಳಗೆ ಸೇರಿಸಿಕೊಳ್ಳುವುದು ಅತಿ ವಿರಳ.

ಭಾರತೀಯ ಹಳ್ಳಿಗಳಲ್ಲಿ ಸಾಮಾಜಿಕ ನ್ಯಾಯವು ಸಮಾಜದ ವ್ಯವಸ್ಥೆಯನ್ನು ನಿಯಂತ್ರಿಸುವುದರ ಮೂಲಕ ಸಮಾಜದಲ್ಲಿ ಅಹಿತಕರ ಘಟನೆಗಳು ನಡೆಯದಂತೆ ತಡೆಗಟ್ಟುವುದಾಗಿತ್ತು. ಇದಕ್ಕಾಗಿ ತಮ್ಮದೇ ಆದ ಸಾಮಾಜಿಕ ಕಟ್ಟಳೆಗಳ ಮೂಲಕ ವಿಧಿ-ವಿಧಾನಗಳ ಮೂಲಕ, ನ್ಯಾಯ ಪದ್ಧತಿಗಳನ್ನು ಅಳವಡಿಸಿಕೊಳ್ಳುತ್ತಿದ್ದರು. (ಸಾಮಾನ್ಯವಾಗಿ ಉಚ್ಚ ಕುಲದವರು ಶ್ರೀಮಂತರು ಇಲ್ಲಿ ಹಿರಿಯರಾಗಿದ್ದು ನ್ಯಾಯ ತೀರ್ಮಾನ ಮಾಡುವ ಪದ್ಧತಿ ಇದೆ. ಆಯಾ ಸಮುದಾಯದ ಹಿರಿಯ ಊರ ಗೌಡ, ನಾಯಕನಾದವನು ನ್ಯಾಯ ತೀರ್ಮಾನಮಾಡುತ್ತಿದ್ದರು.) ಈ ನ್ಯಾಯ ನಿರ್ಣಯಗಳು ಸಾಮಾಜಿಕ, ಧಾರ್ಮಿಕ ಚೌಕಟ್ಟನ್ನು ಪಡೆದುಕೊಂಡಿರುತ್ತಿದ್ದರಿಂದ ಯಾರೂ ಉಲ್ಲಂಘಿಸುತ್ತಿರಲಿಲ್ಲ.

ಅಪರಾಧಗಳು ಭಿನ್ನವಾಗಿದ್ದರೆ ಅವುಗಳಿಗೆ ತಕ್ಕಂತೆ ನ್ಯಾಯ ನಿರ್ಧಾರ ಮಾಡಲಾಗುತ್ತಿತ್ತು. ಅಪರಾಧಿಯು ಅಪರಾಧ ಮಾಡಿದರೆ ಅವನ ಕೈಯನ್ನು ಕಾಯ್ದ ಎಣ್ಣೆಯಲ್ಲಿ ಅದ್ದುವುದು, ದಂಡವನ್ನು ಕಟ್ಟುವುದು, ಬಾಡೂಟವನ್ನು ಹಾಕಿಸುವುದು, ಬಹಿಷ್ಕಾರ ಹಾಕುವುದು ಮೊದಲಾದ ಪದ್ಧತಿಗಳಿದ್ದವು. ವಾಲ್ಮೀಕಿ ಸಮುದಾಯದಲ್ಲಿಯೂ ಇದೇ ಪದ್ಧತಿಗಳು ಚಾಲ್ತಿಯಲ್ಲಿದ್ದವು.

ವಾಲ್ಮೀಕಿ ಸಮುದಾಯದವರು ಕಳ್ಳತನವನ್ನೇ ತಮ್ಮ ಮೊದಲು ಮೂಲ ವೃತ್ತಿಯನ್ನಾಗಿ ಹೊಂದಿದ್ದರು ಎನ್ನುವುದರಿಂದ ಅವರನ್ನು ಎಲ್ಲರೂ ಅನುಮಾನದಿಂದ ಕಾಣುತ್ತ, ಅವರೊಂದಿಗೆ ಹೆಚ್ಚಿನ ಸಂಬಂಧಗಳನ್ನು ಹೊಂದಿರಲಿಲ್ಲ. ಈ ಸಮುದಾಯದಲ್ಲಿ ಯಾರೂ ಹೆಚ್ಚು ಕಳ್ಳತನ ಮಾಡಿಕೊಂಡು ಬರುತ್ತಾನೆ. ಅಂತಹ ವ್ಯಕ್ತಿಗೆ ಗೌರವ ನೀಡುತ್ತಿದ್ದರು. ಕಳ್ಳತನದ ಗುಂಪಿನ ನಾಯಕನನ್ನಾಗಿ ಮಾಡುತ್ತಿದ್ದರು. ವಾಲ್ಮೀಕಿ ಸಮುದಾಯದಲ್ಲಿ ಯಾರಾದರೂ ಇನ್ನೊಬ್ಬರ ಮನೆಗೆ ಹೋದಾಗ ಹಾಲನ್ನು ಕುಡಿಯಬಾರದೆಂಬ ನಿಯಮವನ್ನು ಹಾಕಿಕೊಂಡಿದ್ದರು. ಹಾಲು ಕುಡಿದರೆ ಅಂತಹ ಮನೆಯಲ್ಲಿ ಋಣಾನುಬಂಧ ಏರ್ಪಟ್ಟು ಕಳ್ಳತನ ಮಾಡಲಾಗುವುದಿಲ್ಲ ಎನ್ನುವ ಭಾವನೆ ಇತ್ತು. ಆದರೆ ಇತ್ತೀಚೆಗೆ ಕಳ್ಳತನ ಮಾಡಿದರೆ ಅದಕ್ಕೆ ತಕ್ಕಂತೆ ಹಳ್ಳಿಗಳಲ್ಲಿಯೂ ಹಿರಿಯರ ಸಮ್ಮುಖದಲ್ಲಿ ದಂಡವಿಧಿಸುವ ಪದ್ಧತಿ ಅಸ್ತಿತ್ವಕ್ಕೆ ಬಂದಿದೆ, ಎನ್ನುತ್ತಾರೆ ಈ ಸಮುದಾಯದ ವಕ್ತೃಗಳು. ಗ್ರಾಮದ ಯಾವನೇ ವ್ಯಕ್ತಿಯು ಮಹಿಳೆಯನ್ನು ಬಲತ್ಕಾರ ಮಾಡಿದರೆ ಅಂತಹ ವ್ಯಕ್ತಿಗೆ ಗ್ರಾಮಕ್ಕೆ, ದೇವರ ಹುಂಡಿಗೆ ಇಂತಿಷ್ಟು ದಂಡ ಕಟ್ಟಬೇಕು ಎಂದು ನಿರ್ಧರಿಸಲಾಗುತ್ತಿತ್ತು. ಮಹಿಳೆಯೊಂದಿಗೆ ಅನೈತಿಕ ಸಂಬಂಧವನ್ನು ಇಟ್ಟುಕೊಂಡಾಗ ವಿವಾಹವಾಗದ ಮಹಿಳೆ ಗರ್ಭಧರಿಸಿದರೆ ಅಂತಹ ಸಂದರ್ಭದಲ್ಲಿ ಇಡೀ ಊರಿನ ಗ್ರಾಮಸ್ಥರು ಸೇರಿ ಗರ್ಭಧರಿಸಿದ ಮಹಿಳೆಯ ಮನೆಯ ಮುಂದೆ ತಿಂದುಂಡು, ತೊಳೆದ ಪಾತ್ರೆಗಳ ಮುಸುರೆಯನ್ನು ಚೆಲ್ಲಲು ಗುಂಡಿ ಮಾಡಿದಂತಹ ಸ್ಥಳದಲ್ಲಿ ಎಂಜಲು ಚೆಲ್ಲಲಾಗುತ್ತಿತ್ತು. ಎಂಜಲು ಚೆಲ್ಲಿದ್ದನ್ನು ಗರ್ಭಾವಸ್ಥೆಗೆ ಕಾರಣವಾದ ವ್ಯಕ್ತಿ ತೆವಳುತ್ತಾ ಅಂದರೆ ಕೈ ಮತ್ತು ಕಾಲುಗಳೆರಡರ ಮೂಲಕ ಅಂಬೆಗಾಲಿಡುತ್ತಾ ಬರಬೇಕು. ಬಂದು

ನಾಯಿ ನಾಲಿಗೆಯಿಂದ ನೀರು ಕುಡಿಯುವ ತರ ನಾಲಿಗೆಯನ್ನು ಎಂಜಲು ಗುಂಡಿಗೆ ಹಾಕಬೇಕು. ಆಗ ಗರ್ಭದರಿಸಿದ ಮಹಿಳೆ ಅಚ್ಛಾ (ನಾಯಿ ಓಡಿಸುವ ಭಾಷೆ) ಎಂದು ಹೇಳಬೇಕು. ಹೇಳಿದ ತಕ್ಷಣ ನಾಯಿ ಓಡುವ ರೀತಿಯಲ್ಲಿ ಹಿಂದೆ ಹೋಗಿ ಪುನಃ ಬರಬೇಕು. ಹೀಗೆ ಮೂರು ಬಾರಿ ಮಾಡಬೇಕು. ಇದು ಮುಗಿದ ನಂತರ ಗರ್ಭಧರಿಸಿದ ಮಹಿಳೆಯ ಜೊತೆಗೆ ನಾಲ್ಕು ಜನರನ್ನು ಸೇರಿಸಿ ೩ ದಿನ ಒಲೆ ತೆಗೆದು ಬರಲು ಊರಿಂದ ಹೊರಗೆ ಕಳುಹಿಸಲಾಗುತ್ತಿತ್ತು. ಮರಳಿ ನಂತರ ಅವರಿಬ್ಬರಿಗೆ ವಿವಾಹ ಮಾಡಲಾಗುತ್ತಿತ್ತು.

ವಿವಾಹವಾಗದ ಮಹಿಳೆ ಮತ್ತು ಗಂಡ ಸತ್ತ ಮಹಿಳೆ ಮಕ್ಕಳಿಗೆ ಜನ್ಮ ನೀಡಿದರೆ ಇಂತಹ ಮಹಿಳೆಯನ್ನು ಊರಿಂದ ಹೊರಗೆ ಇಂತಿಷ್ಟು ದಿನ ಎಂದು ಇಡಲಾಗುತ್ತಿತ್ತು. ಗಂಡ ಸತ್ತ ಮಹಿಳೆ ಸೆರಗನ್ನು ಮುಚ್ಚಿಕೊಂಡೆ ಇರಬೇಕಾಗಿತ್ತು. ಇವರಿಗೆ ಹುಟ್ಟಿದ ಮಕ್ಕಳನ್ನು ಉಡುಕಿಯವಳೆಂದು ಕರೆಯುತ್ತಿದ್ದರು. ಅಂತಹವರಿಗೆ ರಾತ್ರೋ ರಾತ್ರಿ ಉಡಕಿಯವನೊಂದಿಗೆ ವಿವಾಹ ಮಾಡಲಾಗುತ್ತಿತ್ತು ಆದರೆ ಇಂತಹ ನ್ಯಾಯ ಪದ್ಧತಿ ನಗರೀಕರಣ, ಆಧುನೀಕರಣ ವಾಗುತ್ತಿದ್ದಂತೆ ಗ್ರಾಮೀಣ ಸೊಗಡಿನಿಂದ ಮಾಯವಾಗಿದೆ.

ಇನ್ನು ದೇವರ ಕಾರ್ಯದಲ್ಲಿ ಅಥವಾ ಗ್ರಾಮಸ್ಥರ ಗ್ರಾಮದ ಸಾಮಾಜಿಕ ಕಟ್ಟಳೆಗಳನ್ನು ಮೀರಿ ವರ್ತಿಸುವ ವ್ಯಕ್ತಿಯನ್ನು ಕುಲದಿಂದ, ಗ್ರಾಮದಿಂದ ಇಂತಿಷ್ಟು ದಿನ ವರ್ಷ ಬಹಿಷ್ಕಾರ ಹಾಕಲಾಗುತ್ತಿತ್ತು. ಬಹಿಷ್ಕಾರಕ್ಕೆ ಒಳಗಾದವರಿಗೆ ಯಾರು ಸಹಾಯಮಾಡುವಂತಿರಲಿಲ್ಲ. ಇಂತಹ ಸಂದರ್ಭದಲ್ಲಿ ಅಪರಾಧಿಯು ಶರಣಾಗತನಾದರೆ, ದಂಡವನ್ನು ಕಟ್ಟಿ ಬಾಡೂಟವನ್ನು ಹಾಕಬೇಕಾಗಿತ್ತು.

ಹೀಗೆ ಗ್ರಾಮೀಣ ಸಮುದಾಯಗಳಲ್ಲಿ ಇನ್ನೂ ಹಲವಾರು ನಂಬಿಕೆಗಳು ವಿಧಿ-ನಿಷಿದ್ಧಗಳು ಮತ್ತು ನ್ಯಾಯಪದ್ಧತಿಗಳು ಅಸ್ತಿತ್ವದಲ್ಲಿದ್ದವು. ಇವುಗಳಲ್ಲಿ ಬಹುತೇಕ ಪದ್ಧತಿಗಳು, ನಂಬಿಕೆಗಳು ಆಧುನಿಕತೆಯ ಸಂಸರ್ಗ, ಜಾಗತೀಕರಣ, ಅಸ್ಥಿತ್ವಕ್ಕೆ ಬಂದಂತೆ ಕಣ್ಮರೆಯಾಗುತ್ತಿವೆ. ಹಳ್ಳಿಗಳ ಜಾನಪದ ನೆಲೆಯಲ್ಲಿನ ಇಂತಹ ವಿಧಿ, ನಿಷೇಧಗಳು, ಜಾಗತೀಕರಣದ ಜ್ವಾಲೆಯಲ್ಲಿ ಕಣ್ಮರೆಯಾಗುತ್ತಿರುವುದರಿಂದ ಗ್ರಾಮಗಳ ಸಾಮರಸ್ಯ, ಮಾನವೀಯತೆ, ಅಂತಃಕರಣ, ಸಮಾನತೆ ಮೌಲ್ಯಗಳು ಇಲ್ಲವಾಗುತ್ತಾ ದಿನನಿತ್ಯದ ಬದುಕಿನಲ್ಲಿ ಆತಂಕ ತಲ್ಲಣಗಳನ್ನು ತಂದೊಡ್ಡಿವೆ. ಹಳ್ಳಿಗಳಿಗೆ ಫ್ಯಾಷನ್ ದಾಳಿಯಿಟ್ಟಿದೆ. ಹಿರಿಯರು ನೀಡಿದ ಸಲಹೆ ಹಿತನುಡಿಗಳಿಗೆ ಯುವಕರು ಮೂಗು ಮುರಿಯುತ್ತಿದ್ದಾರೆ. ಕುಡಿತ, ಗುಟಕಾ, ಮಟಕಾ, ಪ್ರೇಮ ಗೀಮ ಎಂಬ ಹೆಸರಿನಲ್ಲಿ ಹಳ್ಳಿಗಳು ನಾಶದ ಅಂಚಿನತ್ತ ಸಾಗುತ್ತಿವೆ.

ಇಂತಹ ಸಂದರ್ಭದಲ್ಲಿ ಹಳ್ಳಿಗಳ ಜನಪದ ನೆಲೆಯಲ್ಲಿ ಕಂಡುಬರುವ ಕ್ರೀಡೆ, ಸಂಸ್ಕೃತಿ, ನಂಬಿಕೆ, ನಿಯಮಗಳನ್ನು ಪುನರ್ ಜೀವನಗೊಳಿಸಬೇಕಾಗಿದೆ. ಇಲ್ಲವಾದರೆ ಹಳ್ಳಿಗಳು ಹಳ್ಳಿಗಳಾಗಿ ಉಳಿಯುವುದಿಲ್ಲ. ಸಮಸ್ಯೆಗಳ ಸರಮಾಲೆಗಳೇ ಎದುರಾಗಿ ಬದುಕು ದುಸ್ತರವಾಗುವಂತೆ ಮಾಡುತ್ತವೆ.

ಸಮಾಜದಲ್ಲಿ ನ್ಯಾಯ ಸಂಹಿತೆಯು ದಂಡ, ಶಿಕ್ಷೆ, ಬಹಿಷ್ಕಾರ ಈ ಮೂರು ಹಂತದಲ್ಲಿಯೂ ನಡೆಯುತ್ತದೆ. ಹಿರಿಯರಾದವರು, ದೈವದವರು ಬಹಳಷ್ಟು ವಿಚಾರವನ್ನು ಮಾಡಿ ಆಯಾ ವ್ಯಕ್ತಿಗಳ

ಸಮಸ್ಯೆಗಳನ್ನು ಪರಿಗಣಿಸಿ ತೀರ್ಪನ್ನು ಇಂದು ಕೊಡುವಲ್ಲಿ ಬಹಳಷ್ಟು ಸಡಿಲಿಕೆ ಕಂಡುಬರುತ್ತದೆ. ಹೊಂದಾಣಿಕೆಯ ಗುಣವನ್ನು ಹುಟ್ಟುಹಾಕುವ ಪ್ರಯತ್ನ ಇಲ್ಲಿ ನಡೆಯುತ್ತದೆ. ಸಣ್ಣ ಪುಟ್ಟ ತಪ್ಪು ಒಪ್ಪುಗಳ ಸಂದರ್ಭದಲ್ಲಿ ದೈವಕ್ಕೆ ಶರಣಾಗುವುದರ ಮುಖಾಂತರ ಅಡ್ಡ ಬಿದ್ದರೆ ಶಿಕ್ಷೆಯಿಂದ ಪರಿಹಾರಸಿಗುತ್ತದೆ. ಸಮುದಾಯದ ಹೆಣ್ಣು ಅಥವ ವಿಧವೆ ಪರಪುರುಷನೊಂದಿಗೆ ಲೈಂಗಿಕ ಸಂಪರ್ಕವನ್ನು ಇಟ್ಟುಕೊಂಡಿದ್ದರೆ ಅವಳನ್ನು ನೀತಿಗೆಟ್ಟವಳು, ಕುಲಗೆಟ್ಟವಳು ಎಂದು ಸಂಬೋಧಿಸಿ ಸಮುದಾಯದಿಂದ ಹೊರಹಾಕುವ ಅಥವಾ ಇಂತಿಷ್ಟು ವರ್ಷಗಳ ಕಾಲ ಸಮುದಾಯದ, ಕುಟುಂಬದ ಸಂಪರ್ಕ ಕಡಿದು ಹಾಕುವ ಪ್ರಯತ್ನ ಇಲ್ಲಿ ನಡೆಯುತ್ತದೆ. ಅಲ್ಲದೆ ಪರಂಪರಾಗತವಾಗಿ ನಡೆದುಕೊಂಡು ಬಂದಿರುವ ದೈವ, ಹಿರಿಯರು, ಪಂಚರು ಇವರನ್ನು ಆಧುನಿಕ ಸಮುದಾಯ ನಂಬದೇ ಕೋರ್ಟ್ ಕಛೇರಿ ಎಂದು ಅಲೆದಾಡಲು ಮುಂದಾಗಿದ್ದಾರೆ.

೫.೧.೫. ಆಹಾರ ಪದ್ಧತಿ

ಪ್ರತಿಯೊಂದು ಸಮುದಾಯವು ಆಹಾರ ಪದ್ಧತಿಯಲ್ಲಿ ತನ್ನದೇ ಆದ ವಿಶಿಷ್ಟ ರೀತಿಗಳನ್ನು ಅನುಸರಿಸುತ್ತಾ ಬಂದಿರುವುದು ಕಂಡುಬರುತ್ತದೆ. ಆಹಾರದ ವಿಶಿಷ್ಟ ರೀತಿಯ ಪ್ರಯುಕ್ತ ಜಾತಿಗಳು ಹುಟ್ಟಿರಬೇಕು ಎನಿಸುತ್ತದೆ. ಆಹಾರವು ಒಂದು ಜಾತಿಯಲ್ಲಿ ಜೀವಂತವಾಗಿದ್ದುಕೊಂಡು ಆರ್ಥಿಕ ಸ್ಥಿತಿಗತಿಯನ್ನು ಪರಿಚಯಿಸುವ ಪ್ರಮುಖ ಭೂಮಿಕೆಯಾಗಿದೆ. ಕನಕದಾಸರು ಹೇಳುವ ಹಾಗೆ ಮನುಷ್ಯನ ಹಲವಾರು ವೃತ್ತಿಗಳನ್ನು ಕೈಕೊಂಡು, ಭಂಗಬಿದ್ದು, ವ್ಯಂಗ್ಯವಾಡಿ, ದುಡಿಯುವುದು, ಗಳಿಸುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ, ಆಹಾರಕ್ಕಾಗಿ ನಿತ್ಯವೂ ದುಡಿಯಲೇ ಬೇಕು. ಮನುಷ್ಯನಿಗೆ ಆಹಾರವಿಲ್ಲದಿದ್ದರೆ ಬದುಕೇ ಇಲ್ಲ, ಉಸಿರೂ ಇಲ್ಲ, ನಡಿಗೆಯೂ ಇಲ್ಲ. ಆಹಾರ ಕೇವಲ ಮನುಷ್ಯನಿಗೆ ಮಾತ್ರವಲ್ಲದೆ ಪ್ರಕೃತಿಯಲ್ಲಿ ಹುಟ್ಟಿರುವ ಪ್ರತಿಯೊಂದು ಜೀವಿಗೂ ಅಗತ್ಯವಾಗಿದೆ. ಆಹಾರದ ವರ್ಗೀಕರಣದಿಂದಾಗಿ ಭಿನ್ನ ಸಮುದಾಯಗಳು ಭೌಗೋಳಿಕ ಪ್ರದೇಶದಲ್ಲಿ ವಾಸಿಸುತ್ತವೆ. ಊರುಗಳ ಪ್ರಮುಖ ಬೀದಿಗಳಲ್ಲಿ ಬಹುತೇಕ ಮೇಲ್ವರ್ಗ ಅದರ ಹಿಂದೆಯೇ ಮಧ್ಯಮ ವರ್ಗ ಕೊನೆಯಲ್ಲಿ ಕೆಳವರ್ಗದವರು ವಾಸಿಸುತ್ತಿರುವುದು ಈ ಪರಿಸರದ ಎಲ್ಲಾ ಊರುಗಳಲ್ಲಿಯೂ ಕಾಣಬಹುದು. ವಾಲ್ಮೀಕಿ ಸಮುದಾಯವು ಆಹಾರಕ್ಕಾಗಿ ತಮ್ಮ ಮೂಲವೃತ್ತಿಯನ್ನು ಬಿಟ್ಟು ವ್ಯವಸಾಯ, ಕೂಲಿ ಕುಂಬಳಿಯನ್ನು ಮಾಡಿಕೊಂಡು ಆಹಾರ ಸಂಪಾದಿಸುತ್ತಿದ್ದಾರೆ. ಇವರು ಮೂಲತಃ ಬೇಟೆಗಾರರಾಗಿದ್ದರೂ, ಇಂದು ಈ ವೃತ್ತಿಯನ್ನು ಮನೋರಂಜನೆಗಾಗಿ ಇಲ್ಲವೆ ಹಬ್ಬಹರಿದಿನದಂತಹ ಸಂದರ್ಭದಲ್ಲಿ ಅನುಸರಿಸುತ್ತಾ ಬಂದಿದ್ದು, ಮಾಂಸಹಾರಿಗಳಾಗಿದ್ದರೂ, ಸಸ್ಯಹಾರವೇ ಪ್ರಮುಖ ಆಹಾರ ಪದ್ಧತಿ ಜಾರಿಯಲ್ಲಿದೆ. ಇವರು ಆಹಾರವನ್ನು ತಯಾರಿಸಲು ಮಣ್ಣಿನ ಮಡಿಕೆ, ಕುಡಿಕೆ, ಗಡಿಗೆ ಮತ್ತು ಆಧುನಿಕ ಗೃಹೋಪಯೋಗಿ ವಸ್ತುಗಳನ್ನು ಹೆಚ್ಚಾಗಿ ಬಳಸುತ್ತಿದ್ದು ಆಹಾರ ತಯಾರಿಸುವಲ್ಲಿ ದ್ವಿದಳಧಾನ್ಯಗಳು, ಮೊಳಕೆಕಟ್ಟಿದ ಕಾಳುಗಳು, ತರಕಾರಿ, ಹಾಲು, ಮೊಸರು, ತುಪ್ಪ ಮತ್ತು ಮಾಂಸ ಉಪಯೋಗಿಸುತ್ತಾರೆ. ಕುಂಬಾರರು ತಯಾರಿಸಿದ ಮಣ್ಣಿನ ಒಲೆಗಳನ್ನು ತಂದು ಅಡುಗೆ ಮನೆಯಲ್ಲಿ ಒಂದು ಗೊತ್ತಾದ ಸ್ಥಳದಲ್ಲಿ ಹುದುಗಿಟ್ಟು ಬೆಂಕಿಹಚ್ಚಿ ಆಹಾರ ಬೇಯಿಸುತ್ತಾರೆ.

ಮನುಷ್ಯನು ಹಸಿವು ನಿವಾರಿಸಿಕೊಳ್ಳಲು ಆಹಾರ ಸೇವಿಸುತ್ತಾನೆ. ಒಂದು ಕಾಲಕ್ಕೆ ಕೇವಲ ಹಸಿಯಾದ ಆಹಾರ ಪದಾರ್ಥಗಳನ್ನು ಸೇವಿಸುತ್ತಿದ್ದನು. ಬೆಂಕಿಯ ಆವಿಷ್ಕಾರವಾದ ಮೇಲೆ ರುಚಿಯ ಬೆನ್ನುಹತ್ತಿ ಬಗೆ ಬಗೆಯ ಅಡುಗೆ ಮಾಡಿಕೊಳ್ಳುತ್ತಾ, ಹಲವಾರು ರೀತಿಯ ಅಡುಗೆ ಪದಾರ್ಥಗಳನ್ನು ಕಂಡುಹಿಡಿದು ಬೇಯಿಸಿಕೊಂಡು ತಿನ್ನುವುದನ್ನು ಕಲಿತ. ಹೀಗೆ ಅಡುಗೆಯ ಅಭಿರುಚಿ ವ್ಯಕ್ತಿಯಿಂದ ವ್ಯಕ್ತಿಗೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತ ವೈವಿಧ್ಯಮಯ ಆಹಾರ ಪದಾರ್ಥಗಳು ಬಳಕೆಗೆ ಬಂದಿವೆ.

ಅದರಲ್ಲೂ ಕರ್ನಾಟಕಕ್ಕಷ್ಟೇ ಸಂಬಂಧಿಸಿದಂತೆ ಆಹಾರ ಮತ್ತು ಪಾನೀಯಗಳು ಪ್ರಾದೇಶಿಕತೆಯ ಕಾರಣವಾಗಿ ಬೇರೆ ಬೇರೆಯಾಗಿವೆ. ಈ ವಿಷಯದಲ್ಲಿ ದಕ್ಷಿಣ ಕರ್ನಾಟಕ, ಕರಾವಳಿ, ಉತ್ತರ ಕರ್ನಾಟಕ, ಕೊಡಗು ಎಂದು ನಾಲ್ಕು ವಿಭಾಗಗಳನ್ನು ತಜ್ಞರುಗಳು ಗುರುತಿಸುತ್ತಾರೆ. ಈ ಒಂದೊಂದು ಪ್ರದೇಶದ ಅಡುಗೆಗಳನ್ನು ನಿತ್ಯದ ಅಡುಗೆ, ವಿಶೇಷ ಸಂದರ್ಭದ ಅಡುಗೆ ಎಂದು ಮುಖ್ಯವಾಗಿ ಎರಡು ವಿಭಾಗಗಳಾಗಿ ನೋಡಬಹುದು. ಮಾಂಸದ ಅಡುಗೆ ಮತ್ತು ನಂಚಿಕೆಗಳನ್ನು ಈ ಎರಡರಲ್ಲೂ ಸಮೀಕರಿಸಬಹುದು. ಪಾನೀಯಾಗಳನ್ನು ಪ್ರತ್ಯೇಕವಾಗಿ ನೋಡಬಹುದು.

ಒಟ್ಟು ಕರ್ನಾಟಕದೊಳಗೆ ರೊಟ್ಟಿಯು ಅಂದರೆ ಜೋಳದ ರೊಟ್ಟಿ, ಸಜ್ಜೆಯ ರೊಟ್ಟಿ, ರಾಗಿರೊಟ್ಟಿ, ಅಕ್ಕಿರೊಟ್ಟಿ ಎಂದು ಹಾಗೆಯೇ ಜೋಳದ ಮುದ್ದೆ, ರಾಗಿಯ ಮುದ್ದೆ, ಅಕ್ಕಿಯ ಅನ್ನ, ಜೋಳದ ಅನ್ನ, ನವಣೆಅಕ್ಕಿ ಅನ್ನ ಎಂದು, ಗೋದಿಯಿಂದ ತಯಾರಿಸುವ ಚಪಾತಿ, ಪೂರಿ ಎಂದು ವಿವಿಧ ರೀತಿಯ ಅಡುಗೆಗಳನ್ನು ಇವಕ್ಕೆ ಜೋಡಿಯಾಗಿ ಹಲವಾರು ರೀತಿಯ ತರಕಾರಿ, ಪಲ್ಯೆಗಳು, ದವಸಧಾನ್ಯಗಳು, ಸೊಪ್ಪು ಸೆದೆ ಇತ್ಯಾದಿಯಾಗಿ ಬಳಸುತ್ತಾ ಬಂದಿದ್ದಾರೆ. ಇವರಲ್ಲಿ ನಾನು ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದ ಅಥಣಿ ಪರಿಸರದ ವಾಲ್ಮೀಕಿ ಸಮುದಾಯದವರ ಆಹಾರ ಪದ್ಧತಿ ಪ್ರಸ್ತುತ ಸಂದರ್ಭದಲ್ಲಿ ಹೇಗಿದೆ ಎನ್ನುವುದನ್ನು ನೋಡುತ್ತೇನೆ.

ಉತ್ತರ ಕರ್ನಾಟಕದ ಜನರು ಜೋಳವನ್ನು ಮತ್ತು ಹಲವಾರು ರೀತಿಯ ಕಾಳುಗಳನ್ನು ಬೆಳೆಯುವುದರಿಂದ ಈ ಪ್ರದೇಶದಲ್ಲಿ ಸಾಕಷ್ಟು ಬಗೆಯ ಅಡುಗೆ ಪದಾರ್ಥಗಳನ್ನು ಕಾಣಬಹುದು. ಜೋಳದ ರೊಟ್ಟಿ, ಗೋಧಿಯ ಚಪಾತಿ ಈ ಜನರ ನಿತ್ಯದ ಆಹಾರದಲ್ಲಿ ಪ್ರಮುಖವಾಗುತ್ತವೆ. ಹೀಗೆ ಇವರ ಆಹಾರ ಪದ್ಧತಿಯಲ್ಲಿ ಮೂರು ವಿಧಗಳಾಗಿ ನೋಡಬಹುದು.

೧. ನಿತ್ಯದ ಅಡುಗೆ

೨. ಹಬ್ಬ, ಜಾತ್ರೆ, ಮದುವೆ ವಿಶೇಷ ಸಂದರ್ಭದ ಅಡುಗೆ

೩. ಪಾನೀಯಗಳು

ನಿತ್ಯದ ಅಡುಗೆಗಳು

ನಿತ್ಯದ ಅಡುಗೆಯಲ್ಲಿ ಇವರಿಗೆ ಬಹಳಷ್ಟು ಪ್ರೀತಿ ಇರುವುದು ಜೋಳದ ರೊಟ್ಟಿ. ದಕ್ಷಿಣ

ಕರ್ನಾಟಕದವರು ರಾಗಿಯ ರೊಟ್ಟಿ ಮಾಡುವುದಕ್ಕೂ, ಉತ್ತರ ಕರ್ನಾಟಕದವರು ಜೋಳದ ರೊಟ್ಟಿ ಮಾಡುವುದಕ್ಕೂ ಬಹಳಷ್ಟು ವ್ಯತ್ಯಾಸವೇನು ಇಲ್ಲ. ಆದರೆ ಅಥಣಿ ಪರಿಸರದಲ್ಲಿ ವಾಲ್ಮೀಕಿ ಸಮುದಾಯದವರು ರೊಟ್ಟಿಯನ್ನು ತಯಾರಿಸುವುದು ಸ್ವಲ್ಪ ಭಿನ್ನ. ಜೋಳದ ಹಿಟ್ಟನ್ನು ಕೊಣಬಿಗೆ ಹಾಕಿಕೊಂಡು ನಾದಿ, ಸಣ್ಣ ಸಣ್ಣ ಹಿಡಿಯಷ್ಟಿರುವ ಹುಂಡಿಗಳನ್ನು ಅಂದರೆ ನಾದಿಕೊಂಡ ಹಿಟ್ಟನ್ನು ತೆಗೆದುಕೊಂಡು ಕೊಣಬಿಗೆಯಲ್ಲಿ ತಟ್ಟುತ್ತಾರೆ. ಇದರಲ್ಲಿ ವಿಶೇಷವೇನೂ ಇಲ್ಲ ನಾಡಿನಾದ್ಯಂತ ಎಲ್ಲರೂ ಹೀಗೆಯೇ ರೊಟ್ಟಿ ತಟ್ಟುತ್ತಾರೆ. ಆದರೆ ಬೇಯಿಸುವುದರಲ್ಲಿ ಭಿನ್ನತೆಯಿದೆ. ದುಂಡಾಗಿ ತಟ್ಟಿದ ರೊಟ್ಟಿಯನ್ನು ಹೆಂಚು ಅಥವಾ ಕಾಯಿಸಿದ ತೆವಿಗೆ ಹಾಕಿ ಬೇಯಿಸುವುದೂ ಸಾಮಾನ್ಯ. ಆದರೆ ಈ ಭಾಗದ ಬಹಳ ಸಮುದಾಯಗಳು ಅದರಲ್ಲೂ ವಾಲ್ಮೀಕಿ ಸಮುದಾಯದವರು ಹೆಂಚು ಅಥವಾ ತೆವಿಯಲ್ಲಿ ಸ್ವಲ್ಪ ಬೇಯಿಸಿ ನಂತರ ಅದನ್ನು ಕಿಚ್ಚಿನಲ್ಲಿ ಅಂದರೆ ಕೆಂಡದ ಮೇಲೆ ಹಾಕಿ ಸುಡುತ್ತಿರುವುದನ್ನು ನಾವು ನೋಡಬಹುದು. ಒಲೆಯಿಂದ ಕೆಂಡವನ್ನು ಹೊರಗೆ ತೆಗೆದು ಸುಡುವಾಗ ಹತ್ತಿರದಲ್ಲಿಯೇ ಕುಳಿತಿರುವ ಇವರಿಗೆ ಬೆಂಕಿಯ ಶಾಖವು ಬಹಳಷ್ಟು ತಟ್ಟುತ್ತದೆ. ಏಕೆಂದರೆ ಗಂಟೆಗಟ್ಟಲೆ ಬಹಳ ರೊಟ್ಟಿ ಸುಡಬೇಕಾಗಿರುವುದರಿಂದ. ಆ ಕಾರಣಕ್ಕಾಗಿಯೋ ಇರಬೇಕು,

ಕುಟ್ಟುವುದು ಖುಷಿಬಾಳ

ಬೀಸುವುದು ಬಿಗಿಬಾಳ

ರೊಟ್ಟಿ ಸುಡುವುದು ಜಳ ಬಾಳ

ಎನ್ನುವ ಹಾಡು ಇವರ ಬಾಯಿಂದ ಬರುತ್ತದೆ. ಇಂತಹ ರೊಟ್ಟಿಗೆ ಜೊತೆಯಾಗಿ ಆಸರೆಯಾಗಿ ಕಾಳಿನ ಪಲ್ಯೆ ಮತ್ತು ತರಕಾರಿ ಪಲ್ಯೆಗಳು ಇರುತ್ತವೆ. ಕಾಳಿನ ಪಲ್ಯೆಗಳಲ್ಲಿ ಹೆಸರು, ಮೂಕಣಿ (ಮಡಿಕೆಕಾಳು) ಕಡಲೆ, ಬಟಾಣಿ, ಅಲಸಂದಿ, ಮೊದಲಾದವುಗಳನ್ನು ಬಳಸುತ್ತಾರೆ. ಮುಕಣಿಕಾಳು ಇತರೆ ಕೆಲಕಾಳುಗಳನ್ನು ಮೊಳಕೆ ಮಾಡಿಯೇ ಪಲ್ಲೆ ಮತ್ತು ಸಾರು ಮಾಡುವುದು ರೂಢಿ. ಅಲ್ಲದೆ ಇವರಿಗೆ ಅತ್ಯಂತ ಪ್ರೀತಿಯೆಂದರೆ ಖಾರಬೇಳೆ ಪಲ್ಲೆ. ಇದು ತೊಗರಿಬೇಳೆ ಅಥವ ಕಡಲೆಬೇಳೆ ಆಗಬಹುದು. ಇದನ್ನು ರಾತ್ರಿ ನೆನೆಯುವುದಕ್ಕೆ ಬಿಟ್ಟು ಮರುದಿನ ಇದಕ್ಕೆ ಒಗ್ಗರಣೆ ಹಾಕುತ್ತಾರೆ. ಬಹುಬೇಗ ಕೆಡುವ ಪದಾರ್ಥ ಇದಲ್ಲ. ದೂರದ ಪ್ರದೇಶಕ್ಕೆ ಹೋಗುವಾಗ ಇದು ಇದ್ದೇ ಇರುತ್ತದೆ. ಅಲ್ಲದೆ ಕಡಲೆ ಬೇಳೆ ಹಿಟ್ಟಿನ ಪಲ್ಲೆ ಜುನಕ ಎಂದು ತಯಾರಿಸುತ್ತಾರೆ. ಇದು ನಮ್ಮ ಆಧುನಿಕ ಸಿಹಿತಿಂಡಿ ಕರದಂಟು ಇದ್ದಹಾಗೆ ಇರುತ್ತದೆ. ಆದರೆ ಖಾರಪದಾರ್ಥ. ಚಪಾತಿ ರೊಟ್ಟಿಯ ಜೊತೆ ಇದನ್ನು ಬಳಸುತ್ತಾರೆ. ಇದು ಕೂಡ ಬೇಗ ಕೆಡುವ ಪದಾರ್ಥವಲ್ಲ. ಬೇಳೆ ಮತ್ತು ಕಾಳಿನ ಪಲ್ಲೆಗಳನ್ನು ಒಂದೊಂದು ದಿನ ಮಾಡುವಾಗ ಬೇಳೆ ಅಥವಾ ಕಾಳು ಬೇಯಿಸಿದ ನೀರನ್ನೇ ಬಸಿದುಕೊಂಡು, ಉಪ್ಪು, ಖಾರ, ಹುಳಿ, ಬೆರಸಿ ಅದಕ್ಕೆ ಒಗ್ಗರಣೆ ಹಾಕಿ ಸಾರು ತಯಾರಿಸುತ್ತಾರೆ. ಈ ಭಾಗದಲ್ಲಿ ಬಹುತೇಕ ನೀರು ಸಾರು ಬಳಕೆಯಲ್ಲಿದೆ. ಇದು ಅನ್ನಕ್ಕೂ, ನುಚ್ಚಿನ ಅನ್ನಕ್ಕೂ ಜೋಡಿಯಾಗಿರುತ್ತದೆ. ನುಚ್ಚಿನ ಅನ್ನ ಅಂದರೆ ಜೋಳವನ್ನು ದಪ್ಪವಾಗಿ ಒಡೆಸಿ

ನುಚ್ಚು ಮಾಡಿರುತ್ತಾರೆ. ಹಿಟ್ಟಿಗಿಂತಲೂ ದಪ್ಪವಾಗಿರುವ ಈ ನುಚ್ಚನ್ನು ನೀರಿನಲ್ಲಿ ಕುದಿಸಿ ನುಚ್ಚಿನ ಅನ್ನ ತಯಾರಿಸುತ್ತಾರೆ. ಇದರ ಜೊತೆಗೆ ಮಜ್ಜಿಗೆ ಸಾರು, ಉಳಿಸಾರು ಮಾಡುವುದುಂಟು.

ಇನ್ನೊಂದು ವಿಶೇಷವೆಂದರೆ ದುಂಡುಗಡಲೆಯ ಸೊಪ್ಪನ್ನು ಯಾವುದಾದರೂ ನೆನಸಿದ ಭ್ಯಾಳಿಯ ಜೊತೆಗೆ ಒಗ್ಗರಣೆ ಹಾಕಿ ಪಲ್ಲೆಯನ್ನು ತಯಾರಿಸುತ್ತಾರೆ. ಹಾಗೆಯೇ ಇವರಿಗೆ ಬದನೆಕಾಯಿ ಪಲ್ಲೆಯು ದಿನಾಲು ಇರಲೇಬೇಕು.

ಅಲ್ಲದೆ ಈ ಸಮುದಾಯದವರು ಗುಡ್ಡ ಗಾಡುಗಳಲ್ಲಿ, ಕಾಡುಗಳಲ್ಲಿ ವಾಸಿಸುತ್ತಿದ್ದ ಸಮಯದಲ್ಲಿ ಹೇಗೆ ಹಸಿ ಸೊಪ್ಪು ಗೆಡ್ಡೆ-ಗೆಣಸುಗಳನ್ನು ತಿನ್ನುತ್ತಿದ್ದರೋ ಹಾಗೆಯೇ ಈ ಹೊತ್ತಿನ ತನಕವೂ ಊಟದ ಸಮಯದಲ್ಲಿ ಮೆಂತೆಪಲ್ಲೆ, ಉಳ್ಳಾಗಡ್ಡಿಗಿಡ, ಸೌತೆಕಾಯಿ, ಗಜ್ಜರಿಕಾಯಿ, ಟೊಮೆಟೋ, ಉಳ್ಳಾಗಡ್ಡಿ, ಆಕರಿಕೆ ಪಲ್ಲೆ ಮುಂತಾದುವುಗಳನ್ನು ಹಸಿಯದಾಗಿಯೇ ತಿನ್ನುವುದನ್ನು ಕಾಣಬಹುದು. ಊಟದ ತಾಟು ತಯಾರಿಸುವುದನ್ನು ನೋಡಬೇಕು, ಪ್ರಾಣಿಗಳಿಗೆ ಮೇಯಲು ಕತ್ತರಿಸಿಟ್ಟ ಮೇವಿನರೀತಿ ತಟ್ಟೆಯಲ್ಲಿ ಈ ಪದಾರ್ಥಗಳು ತಟ್ಟೆಯ ತುಂಬ ತುಂಬಿರುತ್ತವೆ. ಊಟದ ಜೊತೆಗೆ ಹುರಿದ ಶೇಂಗಾ ಬೀಜವು ಇರುತ್ತದೆ. ನಿತ್ಯದ ಅಡುಗೆಯಲ್ಲಿ ಯಾವಾಗಲಾದರೊಮ್ಮೆ ಮಾಂಸದ ಅಡುಗೆಯೂ ಇವರಿಗೆ ಬೇಕು.

ಮದುವೆ, ಹಬ್ಬ, ಜಾತ್ರೆಯಂತಹ ಸಂದರ್ಭದಲ್ಲಿ ಹೋಳಿಗೆ, ಕಡುಬು, ಸಜ್ಜಕ, ಹುಗ್ಗಿ, ಶಿರಾ, ಪಲಾವು, ಬೊಂದೆ, ಹಾಲುಹುಗ್ಗಿ ಮುಂತಾದ ಸಿಹಿ ಪದಾರ್ಥಗಳನ್ನು ಮಾಡುತ್ತಾರೆ. ಮೊದಲಿಗೆ ಈ ಹೋಳಿಗೆಯನ್ನು ಕಡಲೆಬೇಳೆ ಅಥವಾ ತೊಗರಿಬೇಳೆ ಕುದಿಸಿ, ಬಸಿದುಕೊಂಡು, ಅದಕ್ಕೆ ಬೆಲ್ಲಹಾಕಿ ಮತ್ತಷ್ಟು ಬಿಸಿಮಾಡಿ ಆರಿದ ನಂತರ ಊರಣವನ್ನು ಮಾಡಿಕೊಂಡು ತರುವಾಯ ಹೋಳಿಗೆಯನ್ನು, ಕಡುಬನ್ನು ಮಾಡುತ್ತಾರೆ. ವಿಶೇಷವೆಂದರೆ ಕರ್ನಾಟಕದ ಬಹುತೇಕ ಭಾಗದಲ್ಲಿ ಮೈದಾ ಹಿಟ್ಟಿನ ಕಣಕವನ್ನು ಹೋಳಿಗೆ ಮಾಡಲು ಬಳಸುತ್ತಾರೆ. ಆದರೆ ಅಥಣಿ ಪರಿಸರದ ವಾಲ್ಮೀಕಿ ಸಮುದಾಯದವರು ಗೋಧಿಯ ಹಿಟ್ಟಿನ ಕಣಕವನ್ನು ಮಾಡಿ, ಅದರೊಳಗೆ ಊರಣತುಂಬಿ ಹೋಳಿಗೆ ಮಣೆಯ ಮೇಲೆ ತೀಡುತ್ತಾರೆ. ನಂತರ ತವಿಯ ಮೇಲೆ ಹಾಕಿ ಬೇಯಿಸುತ್ತಾರೆ. ಇನ್ನು ಕಡುಬಿಗೂ ಹೂರಣ ಮತ್ತು ಗೋದಿಹಿಟ್ಟಿನ ಕಣಕ ಬೇಕು. ಇದನ್ನು ಕೆಲವರು ಎಣ್ಣೆಯಲ್ಲಿ ಕಡುಬನ್ನು ಕರಿಯುತ್ತಾರೆ. ಮತ್ತೆ ಕೆಲವರು ನೀರಿನಲ್ಲಿ ಬೇಯಿಸುತ್ತಾರೆ. ಈ ರೀತಿ ನಾಡಿನ ಬಹಳಷ್ಟು ಕಡೆ ಮಾಡಿಕೊಂಡು, ಹಾಲು-ತುಪ್ಪದ ಜೊತೆ ಊಟಮಾಡುವುದನ್ನು ನಾವು ನೋಡಿದ್ದೇವೆ. ಆದರೆ ಇಲ್ಲಿ ಇವರಲ್ಲಿ ಬೆಲ್ಲದ ನೀರಿನ ಜೊತೆ ಅದ್ದಿಕೊಂಡು ತಿನ್ನುವುದನ್ನು ನಾವು ಕಾಣಬಹುದು. ಹೋಳಿಗೆಯ ತರುವಾಯ ಉಣ್ಣುವ ಅನ್ನಕ್ಕೆ ಹೋಳಿಗೆಗೆ ಬೇಯಿಸಿಕೊಂಡ ಬೇಳೆಯನ್ನು ಬಳಿಸಿದ ನೀರಿನಿಂದಲೇ ಕಟ್ಟಿನ ಸಾರು ತಯಾರಿಸುತ್ತಾರೆ. ಸಜ್ಜಕ ಎನ್ನುವುದು ಗೋಧಿಯ ಪದಾರ್ಥ. ಗೋಧಿಯನ್ನು ಒಡೆಸಿ ನುಚ್ಚು ತಯಾರಿಸಿಕೊಂಡು, ಅದನ್ನು ನೀರಿನಲ್ಲಿ ಬೆಲ್ಲದೊಂದಿಗೆ ಕುದಿಸಿ ಮಾಡುತ್ತಾರೆ. ಇದು ಬಾಣಂತಿಯರಿಗೂ ಯೋಗ್ಯ ಆಹಾರವಂತೆ. ಗೋಧಿಕಾಳನ್ನು ರಾತ್ರಿಯಿಡಿ ನೆನಸಿ ಬೆಲ್ಲದೊಂದಿಗೆ ನೀರಿನಲ್ಲಿ ಕುದಿಸಿ ಹುಗ್ಗಿಯನ್ನು ಮಾಡುತ್ತಾರೆ. ಎಳ್ಳ ಅಮಾವಾಸ್ಯೆ,

ಸಂಕ್ರಮಣದ ಸಂದರ್ಭದಲ್ಲಿ ಸಜ್ಜೆ ರೊಟ್ಟಿ, ಕಡಲೆಹೋಳಿಗೆ, ರವಾದ ಹುಂಡಿ ಮುಂತಾದವುಗಳನ್ನು ಮಾಡುತ್ತಾರೆ.

ಈ ಪರಿಸರದ ವಾಲ್ಮೀಕಿ ಸಮುದಾಯದವರು ಮದುವೆಯ ಸಂದರ್ಭದಲ್ಲಿ ವಿಶೇಷವಾಗಿ ಹಾಲು ಹುಗ್ಗಿ ಮಾಡುತ್ತಾರೆ. ಗೋಧಿಯನ್ನು ಒಡೆಸಿ ನುಚ್ಚು ಮಾಡಿಕೊಂಡು, ಅದನ್ನು ಬೆಲ್ಲದೊಂದಿಗೆ ನೀರಿನಲ್ಲಿ ಕುದಿಸಿ, ಅದಕ್ಕೆ ಕಾರಿಕದ ತುಂಡುಗಳು, ಬಾದಾಮಿ, ಗೋಡಂಬಿ, ಏಲಕ್ಕಿ, ಜೊತೆಗೆ ಶೇಂಗಾಬೀಜ ಅರೆದು ಪುಡಿಮಾಡಿ ಹಾಕಿ ಚೆನ್ನಾಗಿ ಕುದಿಸಿ ತಯಾರಿಸುತ್ತಾರೆ. ಇನ್ನೇನು ಊಟ ಪ್ರಾರಂಭವಾಗುವುದಕ್ಕೂ ಮುಂಚೆ ಕೊಡಗಟ್ಟಲೆ ಹಾಲು ಹಾಕಿ ಚೆನ್ನಾಗಿ ಕಲೆಸಿ ಬಿಸಿಮಾಡಿ ಉಣಬಡಿಸುತ್ತಾರೆ. ಇದು ಬಹಳ ರುಚಿಯಾದ ಸಿಹಿ ಅಡುಗೆ. ಇನ್ನು ಶಿರಾ, ಬೊಂದೆ ವಿಶೇಷ ಸಂದರ್ಭದಲ್ಲಿ ಇದ್ದೇ ಇರುತ್ತದೆ.

ಈ ಭಾಗದ ವಾಲ್ಮೀಕಿ ಸಮುದಾಯದವರು ಖಾರದ ಪುಡಿ ತಯಾರಿಸಿಟ್ಟುಕೊಳ್ಳುವುದು ಒಂದು ವಿಶೇಷ. ಒಣಗಿದ ಕೆಂಪು ಮೆಣಸಿನ ಕಾಯಿಯ ಜೊತೆಗೆ ಕೊಬ್ಬರಿ, ಈರುಳ್ಳಿ, ಬೆಳ್ಳುಳ್ಳಿ, ವಿವಿಧ ರೀತಿಯ ಸಾಂಬಾರ ಪದಾರ್ಥಗಳು (ದಾಲ್ಚಿನ್ನಿ, ಲವಂಗ, ಮೆಣಸು, ಚಕ್ಕಿ, ಸಾಜೀರಿಗೆ ಮೊಗ್ಗು) ಮುಂತಾದವುಗಳನ್ನು ಸೇರಿಸಿ ಪುಡಿ ಮಾಡಿಸಿಟ್ಟುಕೊಂಡಿರುತ್ತಾರೆ. ಇದನ್ನು ಗಾಣದ ಎಣ್ಣೆಯ ಜೊತೆ, ಅಥವಾ ತುಪ್ಪದ ಜೊತೆ, ಕಲೆಸಿಕೊಂಡು ರೊಟ್ಟಿ ಅಥವಾ ಚಪಾತಿಯ ಜೊತೆ ತಿನ್ನಲು ಬಹಳ ರುಚಿಯಾಗಿರುತ್ತದೆ.

ಅಲ್ಲದೆ ಈ ಸಮುದಾಯದವರು ಅಥಣಿ ಪರಿಸರದಲ್ಲಿ ಸುಮಾರು ಹಳ್ಳಿಗಳಲ್ಲಿ ಕಂಡುಬರುತ್ತಾರೆ. ಇವರೆಲ್ಲರೂ ಬಹುತೇಕ ಮಾಂಸಾಹಾರಿಗಳು. ಆದರೆ ಯಾರಿಗೂ ನಿತ್ಯದ ಅಡುಗೆ ಇದಲ್ಲ. ಇದನ್ನು ಅಪರೂಪಕ್ಕೆ ಯಾವಾಗಲೋ, ರವಿವಾರಕ್ಕೊಮ್ಮೆ ಇಲ್ಲವೆ ನೆಂಟರು ಬಂದಾಗ ಹಬ್ಬದ ತರುವಾಯ ಮಾಂಸದ ಪದಾರ್ಥಗಳನ್ನು ಅಡುಗೆಗಾಗಿ ತಯಾರಿಸುತ್ತಾರೆ. ಅದರಲ್ಲಿ ಆಡು, ಕುರಿ, ಕೋಳಿ, ಕಾಡು ಹಂದಿ, ಕೆಲವರು ದನದ ಮಾಂಸವನ್ನು, ಮೀನು, ಮೊಲ ಹೀಗೆ ಈ ಎಲ್ಲ ಪ್ರಾಣಿಗಳ ಮಾಂಸವನ್ನು ತಿನ್ನುತ್ತಾರೆ. ಜೊತೆಗೆ ಕೌಜುಗ, ನವಿಲುಗಳಂತ ಪಕ್ಷಿಗಳ ಮಾಂಸವನ್ನು ತಿನ್ನುತ್ತಾರೆ. ಹಬ್ಬಗಳ ನಂತರ ಬೇಟೆಗೆ ಹೋಗುವ ಪದ್ಧತಿಯ ಇನ್ನೂ ಜಾರಿಯಲ್ಲಿದೆ. ಅಥವಾ ಪ್ರಾಣಿಗಳನ್ನು ದೇವರಿಗೆ ಬಲಿಕೊಡುವ ಪದ್ಧತಿಯ ಅಡಿಯಲ್ಲಿ ಮಾಂಸದ ಆಹಾರವನ್ನು ಭಕ್ತಿಯ ಸಂಕೇತವಾಗಿಯೂ ಬಳಸುತ್ತಾರೆ.

ಪಾನೀಯಾಗಳು

ಸಿಹಿಪಾನಕವಾಗಿ ನಿಂಬೆಹಣ್ಣಿನ ಶರಬತ್ತನ್ನು ಇಲ್ಲಿಯ ವಾಲ್ಮೀಕಿ ಸಮುದಾಯದವರು ಮಾಡುತ್ತಾರೆ. ಕುಂಬಾರರು ತಯಾರಿಸಿದ ಮಡಿಕೆಯ ನೀರಿಗೆ ನಿಂಬೆ ಹಣ್ಣಿನ ಹುಳಿ ಹಿಂಡಿ, ಅದಕ್ಕೆ ತಕ್ಕ ಪ್ರಮಾಣದ ಸಕ್ಕರೆ ಬೆರೆಸಿ ಸುವಾಸನೆಗೆಂದು ಯಾಲಕ್ಕಿ ಅರೆದು ಹಾಕಿ ಶರಬತ್ತು ತಯಾರಿಸುತ್ತಾರೆ. ಬೇಸಿಗೆಯ ದಿನದಲ್ಲಿ ಇದು ಹೆಚ್ಚು ಬಳಕೆಯಲ್ಲಿರುತ್ತದೆ. ಮಾದಕ ಪಾನೀಯವಾಗಿ ಸಾರಾಯಿ ಬಳಸುತ್ತಾರೆ. ಸಾರಾಯಿಯನ್ನು ಕೆಲ ಕಡೆ ಸ್ವತಃ ತಾವೇ ತಯಾರಿಸುತ್ತಾರಂತೆ. ಮತ್ತೆ ಕೊಂಡುತರುವುದು ರೂಢಿ. ಈ ಸಾರಾಯಿಯನ್ನು ಬಾಣಂತಿಯರಿಗೂ ಕುಡಿಸುತ್ತಾರೆ. ಕಾರಣ ಅವರು ಬೇಗ ಸದೃಢರಾಗುತ್ತಾರೆ ಎನ್ನುವ

ನಂಬಿಕೆ. ಇದು ದಿನಾಲು ಬಳಕೆಯಲ್ಲಿ ಇಲ್ಲದಿದ್ದರೂ ಮಾಂಸದ ಊಟದ ಜೊತೆಗೆ ಈ ಭಾಗದವರಿಗೆ ಇರಬೇಕು.

ಇನ್ನು ಸಾಕು ಪ್ರಾಣಿಗಳ ಉತ್ಪನ್ನಗಳಿಂದ ಅಂದರೆ ಕುರಿ, ಆಕಳು, ಎಮ್ಮೆಯ ಹಾಲನ್ನು ಮೊಸರು ಮಾಡಿ ಕಡೆದು ಮಜ್ಜಿಗೆ ಮಾಡಿ ಮಜ್ಜಿಗೆಗೆ ಸ್ವಲ್ಪ ಉಪ್ಪು ಬೆರೆಸಿ ಕುಡಿಯುವುದು. ಮತ್ತೆ ಇದೇ ಮಜ್ಜಿಗೆಗೆ ಕೊತ್ತುಂಬರಿ, ಬೆಳ್ಳುಳ್ಳಿ, ಜೀರಿಗೆ ಉಪ್ಪು ಅರೆದು ಹಾಕಿ ಬೆರೆಸಿ ಅದಕ್ಕೆ ಜೀರಿಗೆ, ಸಾಸ್ಸಿ, ಒಣಮೆಣಸಿನಕಾಯಿ ಕರಿಬೇವು ಒಗ್ಗರಣೆ ಹಾಕಿ ಮಸಾಲ ಮಜ್ಜಿಗೆ ಎಂದು ತಯಾರಿಸಿಕೊಂಡು ಕುಡಿಯುತ್ತಾರೆ ಮತ್ತು ಅನ್ನ-ನುಚ್ಚಿನ ಜೊತೆ ಊಟಮಾಡುತ್ತಾರೆ.

ಒಟ್ಟಾರೆ ಅಥಣಿ ಪರಿಸರದಲ್ಲಿ ಕಂಡುಬರುವ ಹಲವಾರು ಹಳ್ಳಿಗಳಲ್ಲಿನ ವಾಲ್ಮೀಕಿ ಸಮುದಾಯದವರು ಇತರೆ ಸಮುದಾಯಕ್ಕಿಂತ ಭಿನ್ನವಾದ ಆಹಾರಪದ್ದತಿಯನ್ನು ಅನುಸರಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

೫.೧.೬. ಉಡುಗೆ-ತೊಡುಗೆ

ಯಾವುದೇ ಒಂದು ಬುಡಕಟ್ಟು ಸಮುದಾಯವು ತನ್ನದೇ ಆದ ಆಡುಭಾಷೆ, ಸಂಸ್ಕೃತಿ, ಆಚರಣೆಗಳನ್ನು ಒಳಗೊಂಡಿರುವಂತೆಯೇ ತಮ್ಮ ತಮ್ಮ ಉಡುಗೆ-ತೊಡುಗೆಗಳಲ್ಲಿಯೂ ವಿಶೇಷತೆಯನ್ನು ಕಾಯ್ದುಕೊಂಡಿರುತ್ತದೆ. ಇದಕ್ಕೆ ಅಥಣಿ ಪರಿಸರದ ವಾಲ್ಮೀಕಿ ಬುಡಕಟ್ಟು ಸಮುದಾಯವು ಹೊರತಲ್ಲ. ಪ್ರಾದೇಶಿಕವಾಗಿ ವಾಲ್ಮೀಕಿ ಸಮುದಾಯದಲ್ಲಿಯೂ ಕೂಡ ವೇಷ-ಭೂಷಣಗಳಲ್ಲಿ, ಆಹಾರ ಪದ್ಧತಿಯಲ್ಲಿ, ಆಚರಣೆಗಳಲ್ಲಿ ಬದಲಾವಣೆ ಹೊಂದಿದಂತೆ, ಇಲ್ಲಿಯು ಉಡುಗೆ ತೊಡುಗೆಗಳಲ್ಲಿ ಕೊಂಚ ಬೇರೆಡೆಗಿಂತ ವ್ಯತ್ಯಾಸ ಕಂಡುಬಂದರೂ, ಇಂದು ಆಧುನಿಕತೆಯ ಸ್ಪರ್ಶದಿಂದಾಗಿ, ಹಲವಾರು ನಗರ ಪ್ರದೇಶಗಳಿಗೆ ವಿವಿಧ ಕೆಲಸ ಕಾರ್ಯಗಳಿಗಾಗಿ ಹೋಗಿ ಓಡಾಡಿಕೊಂಡು ಬರುವುದರಿಂದ ತಮ್ಮ ಮೂಲ ಉಡುಗೆ-ತೊಡುಗೆ ಅಥವಾ ತಮ್ಮಲ್ಲಿರುವ ಉಡುಗೆ-ತೊಡುಗೆಗಿಂತ ಭಿನ್ನ ಉಡುಗೆ-ತೊಡುಗೆಯ ಕಡೆ ಗಮನಹರಿಸಿದ್ದರೂ, ಮೈಮುಚ್ಚುವ ರೀತಿಯಲ್ಲಿ ಬಟ್ಟೆ ತೊಡುತ್ತಾರೆ. ಮಹಿಳೆಯರು ಅರೆಬರೆ ಉಡುಗೆಗಳನ್ನು ಉಡುವುದಿಲ್ಲ. ಉಡುಗೆಯು ಮಾನವನ ಮರ್ಯಾದೆಯನ್ನು ಕಾಪಾಡಿದರೆ, ತೊಡುಗೆಯು ಅವನ ಸೌಂದರ್ಯವನ್ನು ಹೆಚ್ಚಿಸಲು ಸಹಾಯಕ. ಹೀಗೆ ಮಾನಮುಚ್ಚುವ ಉಡುಗೆಯನ್ನು ಇವರು ರೂಢಿಸಿಕೊಂಡು ಬಂದಿದ್ದಾರೆ. ಇಂತಹ ಉಡುಗೆಯು ಸಮುದಾಯದ ಘನತೆ, ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಬದುಕನ್ನು ಪ್ರತಿಬಿಂಬಿಸುತ್ತವೆ. ಉಡುಗೆಗಳಲ್ಲಿ ಮಹಿಳೆಯರಿಗೆ ಕೆಲವು ಕಟ್ಟುಪಾಡುಗಳಿವೆ. ಮೈಮುಚ್ಚುವಂತಹ ಸೀರೆಯನ್ನು ಉಟ್ಟುಕೊಂಡು ತಲೆಯಮೇಲೆ ಸೆರಗು ಹಾಕಿಕೊಳ್ಳಬೇಕು. ಮೈನೆರೆದ ಬಾಲೆ ಸೀರೆಯನ್ನು ಉಡಬೇಕು. ಶಾಲಾಕಾಲೇಜಿಗೆ ಹೋಗುತ್ತಿದ್ದರೆ ನಿಯಮ ಅನ್ವಯಿಸುವುದಿಲ್ಲ.

ಸ್ತ್ರೀಯರು ಸೌಂದರ್ಯ ಸಂಕೇತವಾಗಿ ಹಬ್ಬ ಹರಿದಿನಗಳಲ್ಲಿ ವಿಧ ವಿಧವಾದ ಕೇಶಾಂಲಕಾರ ಮಾಡಿಕೊಳ್ಳುತ್ತಾರೆ. ಹಣೆಯ ಮೇಲೆ ಅರಿಷಿಣ, ದೊಡ್ಡದಾಗಿ ದುಂಡಾಗಿ ಕುಂಕುಮ ಇಟ್ಟುಕೊಂಡು

ತಲೆಯಲ್ಲಿ ಹೂಮುಡಿಯುತ್ತಾರೆ. ಯಾವುದೇ ಶುಭ-ಶೋಭಾನಾದಿಗಳಲ್ಲಿ, ಧಾರ್ಮಿಕ ಸಂದರ್ಭದಲ್ಲಿ ಮಹಿಳೆಯರು ತಲೆಯ ಮೇಲೆ ಸೆರಗು ಹಾಕಿಕೊಂಡು ಕಳಸ ಬೆಳಗುವುದನ್ನು, ದೇವರಿಗೆ ಕೈಮುಗಿಯುವುದನ್ನು, ಹಿರಿಯರ ಎದುರುಗಡೆ ಸೆರಗು ಹೊದ್ದುಕೊಳ್ಳುತ್ತಿರುವುದನ್ನು ನೋಡಬಹುದು. ಇಲ್ಲಿಯು ವಾಲ್ಮೀಕಿ ಸಮುದಾಯದವರು ಸಾಂಪ್ರದಾಯಿಕ ಉಡುಗೆಯನ್ನು ಧರಿಸುತ್ತಾರೆ. ಬಹುತೇಕ ಹಿರಿಯ ಮಹಿಳೆಯರು ಕಚ್ಚೆಹಾಕಿ ೧೬ ಮೊಳದ ಸೀರೆ ಉಟ್ಟರೆ, ನಡು ವಯಸ್ಸಿನ ಮಹಿಳೆಯರು ನೈಲಾನ್, ಪಾಲಿಸ್ಟರ್ ಸೀರೆಗಳನ್ನು ಉಡುತ್ತಾರೆ. ಚಿಕ್ಕ ವಯಸ್ಸಿನ ಹುಡುಗಿಯರು ಪರಕಾರ-ಜಂಪರ್ ತೊಡುವುದು ಶಾಲೆ-ಕಾಲೇಜಿಗೆ ಹೋಗುವ ಹುಡುಗಿಯರು ಚೂಡಿದಾರ ಹಾಕುತ್ತಾರೆ. ಹಿರಿಯ ಪುರುಷರು ದೋತಿ, ಉದ್ದನೆಯ ಶರ್ಟ್, ಟೊಪ್ಪಿಗೆ ಧರಿಸುತ್ತಾರೆ. ವ್ಯವಸಾಯ ಮಾಡುವ ಪುರುಷರು ದೋತಿ ಇಲ್ಲವೇ ಲುಂಗಿಯನ್ನು ಉಡುತ್ತಾರೆ. ವಿದ್ಯಾವಂತ ಯುವಕರು ಪ್ಯಾಂಟ್ ಷರ್ಟ್ ಧರಿಸುತ್ತಾರೆ.

ಮಹಿಳೆಯರು ಕಾಲಲ್ಲಿ ಬೆಳ್ಳಿಯ ಚಾಳ (ಚೈನುಕಾಲು) ಕಿವಿಯಲ್ಲಿ ಬಂಗಾರದ ಓಲೆಗಳನ್ನು ಧರಿಸುತ್ತಾರೆ. ಕೈಯಲ್ಲಿ ಬಿಲವಾರ (ಬಂಗಾರ/ಗಿಲೀಟು) ಗಾಜಿನ ಬಳೆಗಳನ್ನು ತೊಡುತ್ತಾರೆ. ಬೇವಿನ ಕಾಯಿ ಮಾದರಿಯ ಬೋರಮಳ ಸರವನ್ನು ವಿಶೇಷವಾಗಿ ಕೊರಳಿಗೆ ಹಾಕುತ್ತಾರೆ. ಮೂಗಿನಲ್ಲಿ ದೊಡ್ಡಗಾತ್ರದ ಮುತ್ತಿನ ಮೂಗುತಿಯನ್ನು ಧರಿಸುತ್ತಾರೆ. ಇಂದು ಆಧುನಿಕತೆಯ ಪ್ರಭಾವಕ್ಕೆ ಒಳಗಾದ ಇವರು ವಿವಿಧ ಮಾದರಿಯ ಆಭರಣ, ಉಡುಗೆ-ತೊಡುಗೆಯ ಕಡೆಗೆ ವಾಲುತ್ತಿರುವುದು ಕಂಡುಬರುತ್ತದೆ. ಅಲ್ಲದೆ ಹಲವಾರು ಸಮುದಾಯದವರ ಜೊತೆಗೆ ಬೆರೆತು ಸೀರೆ, ಕಚ್ಚೆ ಹಾಕುವ ಪದ್ಧತಿಯು ಸಡಿಲಗೊಂಡಿದೆ. ಹಬ್ಬ ಹರಿದಿನಗಳಲ್ಲಿ ವಿಶೇಷವಾಗಿ ಹಿರಿಯ ಮಹಿಳೆಯರು ಟೋಪು ಸೆರಗಿನ ಸೀರೆಗಳನ್ನು ಉಡುತ್ತಾರೆ. ಚಿಕ್ಕಮಕ್ಕಳಿಗೆ ಕಿವಿಯನ್ನು ಚುಚ್ಚುವ ಪದ್ಧತಿ ಇದ್ದು, ಮುರು ಚುಚ್ಚುತ್ತಾರೆ. ಎಡಭಾಗಕ್ಕೆ ಕನ್ನೆಯರು ಮೂಗುತಿ ಧರಿಸುತ್ತಾರೆ. ದಪ್ಪನೆಯ ಕಾಲುಂಗರ ಇಡುತ್ತಾರೆ. ಮಕ್ಕಳಿಗೆ ಉಡುದಾರ, ಲಿಂಗದ ಕಾಯಿ, ಕಡಗ, ಕಾಲ್ಗೆಜ್ಜೆ ಹಾಕುತ್ತಾರೆ.

೫.೧.೭. ಭಾಷೆ

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಈ ಸಮುದಾಯದವರು ಎಲ್ಲೆಲ್ಲಿ ವಾಸವಾಗಿದ್ದರೋ ಆ ಪರಿಸರಕ್ಕೆ ಅನುಗುಣವಾಗಿ ಮಾತಾಡುವುದನ್ನು ಕಲಿತಿದ್ದಾರೆ. ಇವರಿಗೆಂದೇ ಪ್ರತ್ಯೇಕ ಭಾಷೆಯೆಂಬುದಿಲ್ಲ. ಇಲ್ಲಿನ ಪರಿಸರದವರು ಮರಾಠಿ ಪ್ರಭಾವದಿಂದ ಮರಾಠಿ ಮಿಶ್ರಿತ ಕನ್ನಡವನ್ನು ಮಾತಾಡುತ್ತಾರೆ. ಇಲ್ಲವೇ ಸುಧಾರಿಸಿದ ಕನ್ನಡ ಮಾತಾಡುವರು, ಮರಾಠಿಯನ್ನಷ್ಟೇ ಮಾತಾಡುವ ಜನರು, ಮರಾಠಿ-ಕನ್ನಡ ಕೂಡಿಯೇ ಮಾತನಾಡುವ ಜನರನ್ನು ಕಾಣಬಹುದು.

ಭಾಷೆಯೊಂದು ಆಡುವ ನುಡಿ. ಈ ನುಡಿಯನ್ನು ಹಿಡಿದಿಡುವ ಸಾಧನ ಲಿಪಿ. ಭಾಷೆಯು ಮೊದಲು ಹುಟ್ಟಿಕೊಂಡಿದ್ದು, ನಂತರ ಅದನ್ನು ಗುರುತಿಸಲು ಲಿಪಿ ಜನ್ಮತಳೆಯಿತು. ಮೂಲಭಾಷೆಗಳಿಗೆ ಅನೇಕ ಉಪಭಾಷೆಗಳು ಹುಟ್ಟಿಕೊಂಡವು. ಲಿಪಿಬದ್ಧವಾದ ಬಳಿಕ ಪರಿಷ್ಕರಣೆಗೊಂಡ ಭಾಷೆಯು ಬಾಯಿ

ಮಾತಿನಲ್ಲಿ, ಆಡು ನುಡಿಯಲ್ಲಿ ಏಕರೂಪವಾಗಿ ಉಳಿದಿಲ್ಲ. ಭಾಷೆಯನ್ನು ಎಲ್ಲಾ ವರ್ಗದವರೂ ಬಳಸುವುದರಿಂದ ಅದು ಮೂಲದಲ್ಲಿ ಒಂದೇ ರೀತಿಯಾಗಿದ್ದರೂ ಆಡುವ ಮಾತಿನಲ್ಲಿ ಅನೇಕ ರೂಪು ತಳೆಯಿತು.

ಭಾಷಾ ಉಚ್ಚಾರಣೆ ಆಡುನುಡಿಗೆ ಭೌಗೋಳಿಕ ಹಿನ್ನೆಲೆಯು ಕಾರಣವಾಗುತ್ತದೆ. ಕಾರಣ ಈ ಭಾಗದ ಕನ್ನಡ ಭಾಷೆಯನ್ನು ಮುಂಬಯಿ ಕನ್ನಡ ಎಂದು ವಿಭಾಗಿಸಲಾಗಿದೆ. ಈ ಪ್ರದೇಶದ ಕನ್ನಡ ಭಾಷೆ ಒಂದೇ ಆಗಿದ್ದರೂ ಕೂಡ ಅದರಲ್ಲಿ ಸೇರಿಕೊಂಡ ಬೇರೆ ಬೇರೆ ಭಾಷೆಗಳ ಪದಗಳು, ಉಚ್ಚರಿಸುವ ರೀತಿ, ಮಾತಾಡುವ ಪದ್ಧತಿ ವಿವಿಧ ರೀತಿಯದಾಗಿದೆ. ಭಾಷೆಯು ಯಾವಾಗಲೂ ವ್ಯತ್ಯಾಸಹೊಂದುತ್ತಲೇ ಇರುತ್ತದೆ. ಅದು ನಿಂತ ನೀರಲ್ಲ. ಸದಾಕಾಲ ಹರಿಯುವ ಪ್ರವಾಹವಿದ್ದಂತೆ. ತನ್ನ ಪಾತ್ರಗಳನ್ನು ಬದಲಿಸುತ್ತಾ ಇರುತ್ತದೆ. ನಮ್ಮ ಅನುಭವಗಳು, ಸಂಸ್ಕಾರಗಳು, ಸಂಪರ್ಕಗಳು ಬೇರೆ ಬೇರೆಯಾದಂತೆ ನಮ್ಮ ಆಡು ನುಡಿ ಬೇರೆಯಾಗುತ್ತಾ ಹೋಗುತ್ತದೆ. ಈ ಪ್ರಸ್ತುತ ವಾಲ್ಮೀಕಿ ಸಮುದಾಯದವರ ಭಾಷೆ ಎನ್ನುವ ಅಧ್ಯಾಯದಲ್ಲಿ ಅಥಣಿ ಪರಿಸರದ ಕನ್ನಡ ಆಡುನುಡಿಯ ಬಗ್ಗೆ ತಿಳಿದುಕೊಳ್ಳುವ ಮೊದಲು ಅಥಣಿ ವಿಭಾಗದ ಹಿನ್ನೆಲೆಯನ್ನು ಅರಿತುಕೊಳ್ಳುವುದು ಅನಿವಾರ್ಯವಾಗಿದೆ.

ಅಥಣಿಯು ಕರ್ನಾಟಕ ರಾಜ್ಯದ ಉತ್ತರ ಪಶ್ಚಿಮ ಗಡಿಯ ಒಂದು ತಾಲೂಕು ಪ್ರದೇಶ. ಇದು ಬೆಳಗಾವಿ ಜಿಲ್ಲೆಯಲ್ಲಿದೆ. ಇದರ ಪಶ್ಚಿಮಕ್ಕೆ ಹೊಂದಿಕೊಂಡು ಮಹಾರಾಷ್ಟ್ರ ರಾಜ್ಯವಿದೆ. ನೂರಾರು ವರ್ಷಗಳಿಂದ ಈ ಪರಿಸರದ ಮೇಲೆ ಮರಾಠಿ ಪ್ರಭಾವ ಹಾಗೂ ಪ್ರಾಬಲ್ಯ ಇದೆ. ಮೊದಲಿಗೆ ಇದು ಮುಂಬಾಯಿ ಪ್ರಾಂತ್ಯದಲ್ಲಿತ್ತು. ಅದಕ್ಕೂ ಪೂರ್ವದಲ್ಲಿ ಈ ಭಾಗದ ಅನೇಕ ಪ್ರದೇಶಗಳು ಮರಾಠಿ ಆಳರಸರ ಕೈವಶದಲ್ಲಿದ್ದವು. ಹೀಗಾಗಿ ಈ ಪರಿಸರದ ಮೇಲೆ ಮರಾಠಿ ಭಾಷೆಯ ಪ್ರಭಾವ ತಾನೇ ತಾನಾಗಿ ಆಗಿದೆ. ಅಥಣಿ ಪರಿಸರದ ಪಶ್ಚಿಮ ಹಾಗೂ ಉತ್ತರಭಾಗ ಹೆಚ್ಚಾಗಿ ಮರಾಠಿ ಪ್ರಾಬಲ್ಯಕ್ಕೆ ಒಳಗಾಗಿದ್ದರೆ, ಪೂರ್ವ ಹಾಗೂ ದಕ್ಷಿಣ ಭಾಗ ಪೂರ್ತಿಯಾಗಿ ಅಲ್ಲದಿದ್ದರೂ ಹೆಚ್ಚಾಗಿ ಅಚ್ಚಗನ್ನಡವನ್ನು ಬಳಸಿಕೊಂಡಿದೆ. ದಿವಂಗತ ಮಿರ್ಜಿ ಅಣ್ಣಾರಾಯರ ನಿಸರ್ಗ, ರಾವಬಹದ್ದೂರ ಅವರ ಗ್ರಾಮಾಯಣ, ದು.ನಿ.ರಿ. ಬೆಳಗಲಿಯವರ ಹಡೆದವರು ಈ ಕಾದಂಬರಿಯಲ್ಲಿನ ಆಡು ಮಾತುಗಳು ಈ ಪರಿಸರದ ವೈವಿಧ್ಯಮಯ ಭಾಷೆಯ ರಸಾನುಭವಗಳಾಗಿವೆ.

ಈ ಪರಿಸರದ ಆಡು ಭಾಷೆಯಲ್ಲಿ ಅದರಲ್ಲೂ ವಾಲ್ಮೀಕಿ ಸಮುದಾಯದವರಲ್ಲಿ ಅನುಸ್ವಾರ ವ್ಯತ್ಯಾಸವಾಗುತ್ತದೆ. ಇಲ್ಲದಿದ್ದರೆ ಪಲ್ಲಟಗೊಳ್ಳುತ್ತಾ ಹೋಗುವುದು ಇದು ಒಂದು ವಿಶೇಷ. ಕನ್ನಡದಲ್ಲಿ ಚಿಪ್ಪಿಗ ಚಿಂಪಿಗನಾಗಿ ಮತ್ತೆ ಇಲ್ಲಿ ಸಿಪಿಗನಾಗುತ್ತಾನೆ. ಇಲ್ಲಿ ಸಿಂಪಿಗನಿಗೆ ಸಿಪ್ಪಿಗ್ಯಾ ಎಂದು ಕರೆಯುತ್ತಾರೆ. ಅದರಂತೆ ಗಂಡಸು ಗನಸರಾಗಿ ಮಾರ್ಪಾಡು ಹೊಂದುತ್ತದೆ. ಲೋಪವಾದ ಅನುಸ್ವಾರ ಒಮ್ಮೊಮ್ಮೆ ಆದೇಶವಾಗಿಯೂ ಬರುತ್ತದೆ. ಗೌಡರು ಗೌಂಡರು ಆಗುತ್ತದೆ. ಅಹುದು-ಹೌದು ಇದು ಹೌಂದೋ ಆಗುತ್ತದೆ. ಗೊತ್ತು-ಗೊಂತು, ಕೂಡು-ಕುಂಡು ಆಗುವುದು ಸಾಮಾನ್ಯ.

ಅಥಣಿಯ ಪೂರ್ವಭಾಗದ ಕೆಲ ಹಳ್ಳಿಗಳಲ್ಲಿ ವಾಲ್ಮೀಕಿ ಸಮುದಾಯದವರು ಹಾಗೂ ಇತರೆ ಸಮುದಾಯದವರೂ ಕೂಡ ಬರಲಿಕ್ಕೆ-ಹೋಗಲಿಕ್ಕೆ ಪದಗಳನ್ನು ಬರ್ರ್ಯಾಕ-ಹೋಗ್ಯಾಕ ಎಂದು ಬಳಸಿದರೆ ಕರೆಯಲಿಕ್ಕೆ ಎನ್ನುವುದಕ್ಕೆ ಕರೀಕ, ನೋಡಲಿಕ್ಕೆ ಎನ್ನುವುದಕ್ಕೆ ನೋಡಕ, ಹಸಿದ-ಹಸ್ತ, ಇದ್ದೇನೆ-ಇದೀನು ಎನ್ನುವ ಪದಬಳಕೆ ಇದೆ. ಇಂತಹ ಹಲವಾರು ಪದಗಳಲ್ಲಿ ಮರಾಠಿ ಪ್ರಭಾವವಾಗಿ ಬಳಸಲ್ಪಡುತ್ತವೆ.

ಅಂಕಿ ಸಂಖ್ಯೆಯಗಳ ವಿಷಯದಲ್ಲಿಯೂ ಹೀಗೆ ಆಗುವುದುಂಟು. ಇಲ್ಲಿಯೂ ಮರಾಠಿಮಯ. ಆಡೀಚು ರೂಪಾಯಿ ಕೊಡುದಿತ್ತು. ದೀಡ ರೂಪಾಯಿ ಕೊಡು, ಏಕರ ಗಾಡಿಗೆ ಹೋಗಬೇಕು. ಹೀಗೆ ಒಂದು, ಎರಡು, ಮೂರಕ್ಕಿಂತ ಏಕ, ದೋನ, ತೀನ್ ಇವೇ ರೂಢಿಯಲ್ಲಿವೆ. ಸಮಯವನ್ನು ಹೇಳುವಲ್ಲಿಯೂ ಮರಾಠಿ ಪದಗಳು ಕನ್ನಡಕ್ಕೆ ಅಂಟಿಕೊಳ್ಳುತ್ತವೆ. ಹನ್ನೊಂದುವರೆ, ಹನ್ನೆರಡುವರೆಗಳಿಗೆ ಸಾಡೆ, ಅಕಾರಾ ಸಾಡೇ ಬಾರ ಎಂದು ಹೇಳುತ್ತಾರೆ.

ಕನ್ನಡದಲ್ಲಿ ಹೇಳಬೇಕೆಂದರೂ ಬಹಳಷ್ಟು ಜನ ಸವ್ವಾ ಹನ್ನೊಂದು, ಸವ್ವಾ ಹನ್ನೆರಡು, ಪೂಣೆಮೂರು, ಪೂಣಾನಾಕು ಎಂದು ಹೇಳುತ್ತಾರೆ. ಹನ್ನೊಂದು ಕಾಲು, ಒಂದುವರೆ, ಹನ್ನೆರಡು ಮುಕ್ಕಾಲು ಮೂರು ಮುಕ್ಕಾಲು ಇಂಥಹ ಪದ ಬಳಕೆಯನ್ನು ಕೇಳಿದಾಗ ಇವರಿಗೆ ಅಪರಿಚಿತ ಭಾಷೆ ಕೇಳಿದಂತೆ ಆಗುತ್ತದೆ, ಅರ್ಥವೇ ಆಗುವುದಿಲ್ಲ.

ಅಥಣಿ ತಾಲೂಕಿನ ಗಡಿಭಾಗದ ಕೆಲಹಳ್ಳಿಗಳಲ್ಲಿ ಕನ್ನಡ ಮಾತಾಡುವ ಈ ಸಮುದಾಯದವರು ಭಾಷೆಯಲ್ಲಿ ಮರಾಠಿ ಮಿಶ್ರಣವಿರುವುದು ಕಂಡುಬರುತ್ತದೆ. ಇನ್ನು ಕೆಲವರು ಕನ್ನಡವನ್ನು ಅಷ್ಟು ಸರಿಯಾಗಿ ಮಾತಾಡುವುದಿಲ್ಲ. ತಾಬಡ-ತೊಬಡ ಬರಕ ಹೇಳು (ಬೇಗ ಬೇಗ ಬರಕಾ ಹೇಳು) ಅಜೀಬಾತ್ ನಂಗ ಅದು ತಿಳ್ಯಾಕಿಲ್ಲ ಬಿಡ (ಖಂಡಿತವಾಗಿ ನನಗೆ ಅದು ತಿಳಿಯುವುದಿಲ್ಲ ಬಿಡು). ಜರ್‌ಕತ್ ನೀ ಬರಲಿಲ್ಲಾ ಅಂದರ ನೋಡ (ಒಂದು ವೇಳೆ ನೀನು ಬರಲಿಲ್ಲ ಅಂದರೆ ನೋಡು) ನನಗೆ ಭಾಳ ಕಂಟಾಳ ಬಂದದೆ (ನನಗೆ ಬಹಳ ಸಿಟ್ಟು ಬಂದಿದೆ) ಅವನ ಸೋಬಲೆ ಬ್ಯಾಡಲೇ ಅಂತ ರಗಡ ಹೇಳಿನಿ (ಅವನ ಸ್ನೇಹ ಬೇಡ ಎಂದು ಬಹಳ ಸಲ ಹೇಳಿದ್ದೇನೆ). ಸಂಡಾಸಕ ಹೋಗಿ ಬಯ್ನಿ (ಬಹಿರ್ದೆಸೆಗೆ, ಹೋಗಿ ಬಂದೆ) ಇಂದ ಯಾಡ್ನ ಸರಪೇ ಉಲಟೀ ಆಯ್ತು (ಇಂದು ಎರಡು ಸಲ ವಾಂತಿ ಆಯ್ತು) ಮೈಗೆ ಉರಿ ಬಂದವು (ಜ್ವರ ಅಥವ ಮೈಬಿಸಿ ಯಾಗುವುದು) ಇಂತಹ ಹಲವಾರು ಪದಗಳು ದಿನನಿತ್ಯ ಬಳಸಲ್ಪತ್ತವೆ. ಈ ಹಿನ್ನೆಲೆಯಲ್ಲಿ ಅವುಗಳನ್ನು ಹೀಗೆ ಉದಾಹರಣೆಯಾಗಿ ನೋಡಬಹುದು.

ಅಥಣಿ ಪರಿಸರದ ಮರಾಠಿ ಮಿಶ್ರಿತ ಆಡು ನುಡಿ	ಅಚ್ಚಕನ್ನಡ ಪದ
ನಾಭೀ ನೀಭಿ	ನಾನು ನೀನು
ಶ್ಯಾಣ್ಯಾ	ಜಾಣ

ಖರೆ	ನಿಜ
ಮಸ್ತ	ಬಹಳ
ತಾಬಡ ತೋಬಡ	ಬೇಗ
ಹಾಲ್	ಕಷ್ಟ
ಲಾಲಭಡಕ್	ಅತೀಕೆಂಪು
ತೋಂಡೀ	ಮೌಖಿಕ
ಕಬೂಲಿ	ಒಪ್ಪಿಗೆ
ಘೂಣಿ	ಹೊಸ್ತಿಲು
ಆಜುಬಾಜು	ನೆರೆಹೊರೆ
ಅಗದಿ	ತೀರ
ಜರ	ಒಂದಿಷ್ಟು
ಠಗ್ಯಾ	ಮೋಸಗಾರ
ಖಬರ	ಅರಿವು
ಪಸಂದ	ಒಪ್ಪಿಗೆ
ಪಾಪಾಣ್ಯಾರು	ಬೀಗರು
ಸಮ್ಮಸು	ತಿಳಿ
ಥೋಡೆ	ಸ್ವಲ್ಪ
ಮರಾಠಿಯಲ್ಲದ ಈ ಭಾಗದ ದೇಶಿ ಪದಗಳು	ಅಚ್ಚಗನ್ನಡ ಪದಗಳು
ಕಸಾರಕಿ	ಜಡ್ಡು, ಜ್ವರ
ಮೋಕಳೀಕ	ಮುಕ್ತ
ಮಾರಿ	ಮುಖ
ಬಂದ ಕ್ಯಾಸಿಂದ	ಬಂದಕೂಡಲೆ
ಹೋಗಿಕ್ಯಾಸಿಂದ	ಹೋದಕೂಡಲೇ

ದೌಳವ	ಸಿರಿವಂತ
ಅಡಚಣೆ	ಕಷ್ಟ
ದೇಖರೇಖ	ಮೇಲ್ವಿಚಾರಣೆ
ಪ್ಯಾಲಿ	ಮೂರ್ಖ
ಟಬರು	ಸೊಕ್ಕು
ಗಸಕ್ಕನ	ಲಗುಬಗೆ
ತರಬು	ನಿಲ್ಲಿಸು
ಪಾಡ	ಲೇಸು
ಹರಿವತ್ತು	ಬೆಳಿಗ್ಗೆ
ಬೆರಕಿ	ಚತುರ

ಇಂತಹ ನೂರಾರು ಪದಗಳನ್ನು ಅಥಣಿ ಪರಿಸರದ ವಾಲ್ಮೀಕಿ ಸಮುದಾಯವರೇ ವಿಶೇಷವಾಗಿ ಬಳಕೆ ಮಾಡುತ್ತಾರೆ.

೫.೨. ಶೈಕ್ಷಣಿಕ ಸ್ಥಿತಿಗತಿ

ಒಂದು ಪರಿಸರದ ಸಮುದಾಯವನ್ನು ಕುರಿತು ಅಧ್ಯಯನಕ್ಕೆ ತೊಡಗಿದಾಗ ಆ ಪ್ರದೇಶದ ಒಟ್ಟು ಅಭಿವೃದ್ಧಿ ಹಾಗೂ ಅಲ್ಲಿನ ವೈಶಿಷ್ಟ್ಯತೆಗಳೊಂದಿಗೆ ಇಂದಿನ ಆಧುನಿಕತೆಗೆ ಅನುಗುಣವಾಗಿ ಆ ಪರಿಸರದ, ಆ ಸಮುದಾಯದ ಶೈಕ್ಷಣಿಕ ವ್ಯವಸ್ಥೆ ಹೇಗೆ ಬೆಳವಣಿಗೆ ಹೊಂದುತ್ತಾ ಬಂದಿದೆ ಎಂಬುದನ್ನು ಅವಲೋಕಿಸಬೇಕಾದುದು ಬಹುಮಹತ್ವದ ಅಂಶ. ಅಥಣಿ ಪರಿಸರದ ಒಟ್ಟು ಶೈಕ್ಷಣಿಕ ಅಭಿವೃದ್ಧಿಯನ್ನು ಪರಿಗಣಿಸಿದಾಗ ಇಲ್ಲಿ ಪ್ರಾಚೀನ ಕಾಲದಿಂದಲೂ ಇಂದಿನತನಕ ಮಹತ್ವದ ಪಾತ್ರವಹಿಸಿಕೊಂಡು ಬಂದಿದೆ. ಅದರಲ್ಲಿಯೂ ಇಂದು ಸರಕಾರ ಮತ್ತು ಸಂಘಸಂಸ್ಥೆಗಳು ಶಿಕ್ಷಣ ಪ್ರಸಾರದಲ್ಲಿ ಮಹತ್ವದ ಪಾತ್ರವಹಿಸುತ್ತಿದ್ದು ಸ್ವಾತಂತ್ರ್ಯ ಪೂರ್ವದಲ್ಲಿ ಉತ್ತರ ಕರ್ನಾಟಕದ ಗಡಿ ಭಾಗವಾದ ಅಥಣಿಯು ಮೊದಲು ಸಾಂಗಲಿ, ಜತ್ತ ಮತ್ತು ಜಮಖಂಡಿ ಮರಾಠ ಆಳರಸರ ಪ್ರಭಾವಕ್ಕೆ ಒಳಗಾಗಿತ್ತು. ಇದರಿಂದ ಮರಾಠಿ ಭಾಷೆಯ ಬಳಕೆ ಹೆಚ್ಚಾಗಿದೆ. ಕನ್ನಡ ಪ್ರದೇಶವಾದರೂ ಕನ್ನಡ ಭಾಷೆಯ ಬಳಕೆ ಮನೆಯ ಒಳಗಡೆ ಮಾತ್ರ ಉಳಿದುಕೊಂಡಿತು. ಈ ಭಾಗದಲ್ಲಿ ಮೊದಲಿಗೆ ಮರಾಠಿ ಶಾಲೆಗಳಿದ್ದವು. ತದನಂತರ ೧೮೫೭ರ ನಂತರ ಕನ್ನಡ ಶಾಲೆ ಇಲ್ಲಿ ಪ್ರಾರಂಭವಾಯಿತು. ಅದಾದ ಬಳಿಕ ಇಂದು ನಾಯಿಕೊಡೆಗಳಂತೆ ಶಿಕ್ಷಣ ಸಂಸ್ಥೆಗಳು ಹುಟ್ಟಿಕೊಂಡು ಎಲ್ಲಾ ಸಮುದಾಯದ ಜನರು ವಿದ್ಯಾವಂತರಾಗಿ ಹೊರಬಂದಿದ್ದಾರೆ. ಸರ್ಕಾರಿ ನೌಕರಿಯನ್ನು ಹಿಡಿದಿದ್ದಾರೆ.

ಈ ಹಿನ್ನೆಲೆಯಲ್ಲಿ ಅಥಣಿ ಪರಿಸರದ ವಾಲ್ಮೀಕಿ ಸಮುದಾಯದವರ ಶೈಕ್ಷಣಿಕ ಸ್ಥಿತಿಗತಿಯು ಮಂದಗತಿಯದಾಗಿದೆ ಎಂತಲೇ ಹೇಳಬಹುದು. ಇವರಲ್ಲಿ ಶಿಕ್ಷಣದ ಕೊರತೆಯು ಇರುವುದು ಪರಿಸರದ ಎಲ್ಲಾ ಕಡೆಯಲ್ಲಿಯೂ ಕಂಡುಬರುತ್ತದೆ. ಹೆಚ್ಚಿನ ಜನರು ಅನಕ್ಷರಸ್ಥರ ಸಾಲಿಗೆ ಸೇರುವುದು ಕ್ಷೇತ್ರಕಾರ್ಯ ಕೈಗೊಂಡಾಗ ತಿಳಿದುಬಂತು. ಇದರಿಂದ ಹೆಚ್ಚಿನ ವಿಷಯಗಳಾಗಲಿ, ಮಾಹಿತಿಗಳನ್ನಾಗಲಿ, ಪೂರ್ವ ಐತಿಹ್ಯದ ಬಗ್ಗೆಯಾಗಲಿ ತಿಳಿದುಕೊಳ್ಳಲು ಬಹಳ ಕಷ್ಟ ಪಡಬೇಕಾಯಿತು. ಕೆಲವಾರು ಹಳ್ಳಿಗಳಲ್ಲಿ ಕ್ಷೇತ್ರಕಾರ್ಯಕ್ಕೆ ಹೋದಾಗ ಹಿರಿಯ ಪುರುಷ ಮಹಿಳೆಯರು ನಮ್ಮ ಬಗ್ಗೆ ಯಾರು ಇಷ್ಟೊಂದು ಕಾಳಜಿ ವಹಿಸಿರಲಿಲ್ಲ ನೀವಾದರೂ ನಮಗೆ ಮತ್ತು ನಮ್ಮ ಮಕ್ಕಳಿಗೆ ತಿಳುವಳಿಕೆ ಹೇಳಲು ಬಂದಿರುವಿರೆಲ್ಲಾ, ಇನ್ನು ಮುಂದಾದರು ಶಾಲೆಗೆ ನಮ್ಮ ಮಕ್ಕಳನ್ನು ಕಳುಹಿಸುತ್ತೇವೆ ಎಂದು ದುಃಖದಿಂದ ನುಡಿದರು. ಅಲ್ಲದೆ ನಿಮ್ಮ ಮಕ್ಕಳನ್ನು ಯಾಕೆ ಇದುವರೆಗೂ ಮೆಟ್ರಿಕ್ ನಂತರದತನಕ ಕಲಿಯಲು ಕಳಿಸಲಿಲ್ಲ ಎಂದು ಪ್ರಶ್ನಿಸಿದರೆ, ಅವರು, ಏನು ಮಾಡೋದು ಅಪ್ಪಾ ಮಳೆ ಬಂದರೆ ಸಾಕು, ಮರುದಿನ ಮೊಲಗಳ ಹೆಜ್ಜೆ ಗುರುತು ಹಚ್ಚಿ ಬೇಟೆಯಾಡಲು ಮಕ್ಕಳು ಹೋಗುತ್ತವೆ ಎಂದು ತಮ್ಮ ಮೂಲ ವೃತ್ತಿಯ ನೆನಪು ತೆಗೆದರು. ಅಂದರೆ ಇಲ್ಲಿನ ಕೆಲವು ಕಡೆ ವಾಲ್ಮೀಕಿ ಸಮುದಾಯದವರು ಇಂದಿಗೂ ಬೇಟೆಯಾಡುವ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದಾರೆ. ದೊಡ್ಡವರು, ಮಕ್ಕಳು, ಬೇಟೆಯ ಬಲೆಯನ್ನು, ಕೊಡ್ಲಿ, ಕುಡುಗೋಲು, ಬಡಿಗೆಯನ್ನು ತೆಗೆದುಕೊಂಡು ಅಡವಿಗೆ ಹೋಗಿ ಮೊಲ, ಕೌಜುಗ, ಬುರ್ಲಿ, ಬೆಳವ, ಮುಂತಾದವುಗಳನ್ನು ಬೇಟೆಯಾಡಿಕೊಂಡು ಬರುತ್ತಾರೆ.

ಅಲ್ಲದೆ ಹಲವಾರು ೧೪-೧೫ವರ್ಷದ ಹುಡುಗರನ್ನು ಬೆಟ್ಟಿಯಾಗಿ ನೀವು ಏನು ಮಾಡುತ್ತೀರಿ ಎಂದು ಕೇಳಿದರೆ ಫ್ಯಾಕ್ಟರಿಗಳಲ್ಲಿ, ಸಕ್ಕರೆ ಕಂಪನಿಗಳಲ್ಲಿ ಕೆಲಸಕ್ಕೆ ಹೋಗುತ್ತೇವೆ ದಿನವೊಂದಕ್ಕೆ ೭೦ರೂ ಕೊಡುತ್ತಾರೆ ಎಂದು ಹೇಳಿದರು. ಆಗ ನಾನು ಹಿರಿಯರಿಗೆ ಪ್ರಶ್ನಿಸಿ ನಿಮ್ಮ ಮಕ್ಕಳಿಗೆ ಕೆಲಸವನ್ನು ಮಾಡಿಯೇ ದುಡಿದು ಜೀವನ ಸಾಗಿಸಬೇಕಾದ ಅನಿವಾರ್ಯತೆ ನಿಮ್ಮ ಈ ಚಿಕ್ಕ ಮಗುವಿಗೆ ಏನು ಬಂದಿದೆ ಹಿರಿಯರೆಲ್ಲರೂ ದುಡಿದು ಮಕ್ಕಳನ್ನು ಓದಿಸುವುದು ತಾನೆ? ಎಂದು ಹೇಳಿದಾಗ ಮೌನವಾಗಿ ತಲೆ ತಗ್ಗಿಸುತ್ತಾರೆ.

ಇತ್ತೀಚಿಗೆ ವಾಲ್ಮೀಕಿ ಸಮುದಾಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಾರಾದರೂ, ಕಾಲೇಜು ಹಂತದಲ್ಲಿ ಇವರ ದಾಖಲಾತಿ ಅತೀ ಕಡಿಮೆ ಇರುತ್ತದೆ. ಆದರೂ ಇವರಲ್ಲಿ ಹಲಕೆಲವರು ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡಿಕೊಂಡು ಸರ್ಕಾರಿ ನೌಕರಿಯನ್ನು ಹಿಡಿದು ಸುಂದರವಾದ ಜೀವನವನ್ನು ನಡೆಸುತ್ತಿದ್ದಾರೆ.

ಸಮುದಾಯದ ಸಮಾಜ ಸಂಘಟನೆಯ ಕೆಲಸವು ಇಂದು ಪ್ರಗತಿಯ ಪಥದತ್ತ ಸಾಗುತ್ತಿರುವುದರಿಂದ, ವಿದ್ಯಾವಂತ ಯುವಕರು ಕೆಲವು ಆಸಕ್ತಿಯುಳ್ಳ ಯುವಕರು, ಸಮಾಜವು ಮುಂದುವರೆದು ಪ್ರಗತಿ ಸಾಧಿಸಲು ಶಿಕ್ಷಣವಂತರಾಗಿ ಮುಂದೆ ಬರುವಲ್ಲಿ ಪ್ರಯತ್ನಿಸುತ್ತಿದ್ದಾರೆ.

ಶ್ರೀ ವಾಲ್ಮೀಕಿ ಸಮಾಜ ಸೇವಾ ಸಂಘ (ರಿ) ಕುಡಚಿ (ರಾಯಭಾಗ ತಾಲೂಕ-ಅಥಣಿ ಪರಿಸರ)

ಶ್ರೀ ವಾಲ್ಮೀಕಿ ಯುವ ಸಮಾಜ ಸೇವಾ ಸಂಘ (ರಿ) ಐನಾಪುರ

ಶ್ರೀ ವಾಲ್ಮೀಕಿ ಸಮಾಜ ಸೇವಾ ಸಂಘ (ರಿ) ಬ್ಯಾಡರಹಟ್ಟಿ

ಇಂತಹ ಸಂಘಟನೆಗಳನ್ನು ಸ್ಥಾಪಿಸಿಕೊಂಡು ವಿದ್ಯಾವಂತ ಯುವಕರು ಈ ಪರಿಸರದ ತಮ್ಮ ಸಮುದಾಯದವರಿಗೆ ಸಿಗಬೇಕಾದ ಸವಲತ್ತುಗಳನ್ನು ಒದಗಿಸಿಕೊಡಲು ಹಾಗೂ ಮಕ್ಕಳು ವಿದ್ಯಾವಂತರಾಗುವಂತೆ ದುಡಿಯುತ್ತಿದ್ದಾರೆ.

ಇಂದು ಈ ಸಮುದಾಯದವರ ಶಿಕ್ಷಣದ ಬಗ್ಗೆ ಬಹಳಷ್ಟು ಒಲವು ತೋರುತ್ತಿದ್ದಾರೆ. ತಮ್ಮಂತೆ ತಮ್ಮ ತಮ್ಮ ಮಕ್ಕಳು ಪಡಬಾರದ ಕಷ್ಟವನ್ನು ಪಡಬಾರದು ಎನ್ನುವ ತಿಳುವಳಿಕೆ ಬಂದು ಶಿಕ್ಷಣ ಸಂಸ್ಥೆಗಳ ಕದ ತಟ್ಟುತ್ತಿದ್ದಾರೆ. ನಮ್ಮಂತೆ ನಮ್ಮ ಮಕ್ಕಳು ಅವಿದ್ಯಾವಂತರಾಗಬಾರದೆಂದು ಶಾಲಾ ಕಾಲೇಜುಗಳ ಮೆಟ್ಟಿಲು ಹತ್ತಿಸುತ್ತಿದ್ದಾರೆ.

ವ್ಯಕ್ತಿತ್ವ ವಿಕಾಸಕ್ಕೆ ಮಾನವಹಕ್ಕು ಮತ್ತು ಸ್ವಾತಂತ್ರ್ಯವನ್ನು ಗೌರವಿಸುವುದಕ್ಕೆ ಶಿಕ್ಷಣ ಅಗತ್ಯವಾದುದು ಎನ್ನುವ ಅರಿವು ವಿದ್ಯಾವಂತ ಯುವಕರಿಗೆ ಬಂದು ತಮ್ಮ ಸಮುದಾಯದ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನ ಹರಿಸುತ್ತಿದ್ದಾರೆ. ನಾವು ನಮ್ಮನ್ನು ಗೌರವಿಸುವುದಕ್ಕೆ, ಹಾಗೆಯೇ ಇತರರು ನಮ್ಮನ್ನು ಗೌರವಿಸಿವುದಕ್ಕೆ, ನಮ್ಮ ಸಮಾಜದ ಏಳ್ಗೆಗೆ ಇರುವ ಸಾಧನ ಶಿಕ್ಷಣ ಎನ್ನುವುದನ್ನು ಮನಗಂಡಿದ್ದಾರೆ. ಆದರೂ ಶಿಕ್ಷಣ ಪಡೆದು ಕೊಳ್ಳುವುದರಲ್ಲಿ ಮುಂದಾಗಿರುವ ಇವರಲ್ಲಿ ವೃತ್ತಿಪರ ಶಿಕ್ಷಣದ ಕೊರತೆ ಎಲ್ಲೆಲ್ಲೂ ಕಂಡುಬರುತ್ತದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಲವಾರು ಜನ ವಿದ್ಯಾವಂತರು, ಸರ್ಕಾರಿ ಅಧಿಕಾರಿಗಳು ಕಂಡು ಬಂದರಾದರೂ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ ಪಡೆದವರು ಕಾಣಲೇ ಇಲ್ಲ. ಕರ್ನಾಟಕದಲ್ಲಿಯೇ ವಾಲ್ಮೀಕಿ ಸಮುದಾಯದವರ ಶೈಕ್ಷಣಿಕ ಸ್ಥಿತಿಯು ಮಂದಗತಿಯಲ್ಲಿದೆ.

ಅಥಣಿ ಪರಿಸರದ ವಾಲ್ಮೀಕಿ ಸಮುದಾಯದಲ್ಲಿ ಮೂಲತಃ ಅಥಣಿಯವರೇ ಆದ ರಮೇಶ ಸಿಂಧಗಿ, ಸತೀಶ್ ಸಿಂಧಗಿ ಸಹೋದರರು ಸಂತೋಷ ಹೋಟೆಲ್ ಮಾಲೀಕರು ಇವರು ಪದವಿ ಹಂತದ ವಿದ್ಯಾಭ್ಯಾಸ ಮುಗಿಸಿ ಸಂಯುಕ್ತ ಕರ್ನಾಟಕ ಕನ್ನಡ ಪ್ರಭ ಪತ್ರಿಕೆಯ ವರದಿಗಾರರಾಗಿ, ಶಿಕ್ಷಣದ ಕುರಿತು ಕಾಳಜಿ ಇರುವ ಇವರು ಈ ಸಮುದಾಯದ ಪ್ರಮುಖರಲ್ಲಿ ಕಂಡುಬರುತ್ತಾರೆ.

ಹಾಗೆಯೇ ನಾರಾಯಣ ಸಂಗಪ್ಪ ನಾಯಕ ಅವರು ಅಡಹಳ್ಳಿ ಗ್ರಾಮದವರು ಇವರು ಕನ್ನಡದಲ್ಲಿ ಪದವಿಪಡೆದು ಕೆ.ಪಿ.ಎಸ್.ಸಿ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಾಸಾಗಿ ಹೈಕೋರ್ಟ್ ಸಂಚಾರಿ ಪೀಠ ಗುಲ್ಬರ್ಗಾದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ, ಸದಾಶಿವ ನರಸಿಂಹ ಮಾಕಣ್ಣನವರು ಶೇಡಬಾಳದವರು ಕುಡಚಿ ಹೈಸ್ಕೂಲ್‌ನಲ್ಲಿ ದೈಹಿಕ ಶಿಕ್ಷಕರಾಗಿ ಕೆಲಸ ಮಾಡುತ್ತಾರೆ. ಹಾಗೆಯೇ ಶೇಡಬಾಳದವರೇ ಆದ ಸಿದ್ದಪ್ಪ ಭೀಮಪ್ಪ ಕಣಗಲಿ ಇವರು ರಾಯಭಾಗದಲ್ಲಿ ಉಪನ್ಯಾಸಕರು. ಮಹದೇವ ಬಸಪ್ಪ, ಮಾಕಣ್ಣನವರು

ಶಿಕ್ಷಕರು, ಪ್ರಕಾಶ ಶ್ರೀಶೈಲ ಐನಾಪುರ-ನಿಪ್ಪಾಣಿ ಹೈಸ್ಕೂಲಿನಲ್ಲಿ ಶಿಕ್ಷಕರು. ಕಲ್ಲಪ್ಪ ಶ್ರೀಶೈಲ ಐನಾಪುರ ಪೋಲಿಸ್ ಇಲಾಖೆಯಲ್ಲಿ ಕೆಲಸ ಅಥಣಿಯಲ್ಲಿ. ಶ್ರೀ ಬೋಜನ್ನವರು ಧಾರವಾಡ ಜಿಲ್ಲೆಯಲ್ಲಿ ಪಿ.ಎಸ್.ಐ. ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಶಂಕರ ದುಂಡಪ್ಪ ನಾಯಕ ಪ್ರಾಥಮಿಕ ಶಾಲಾ ಶಿಕ್ಷಕರು ಐನಾಪುರ.

ಇನ್ನು ಬಹಳಷ್ಟು ಜನರು ಎಸ್.ಎಸ್.ಎಲ್.ಸಿ. ನಂತರದ ಶಿಕ್ಷಣವನ್ನು ಪಡೆಯಲು ಆಗದಿದ್ದುದಕ್ಕೆ ಕ್ಷೇತ್ರಕಾರ್ಯಕ್ಕೆ ಹೋದಾಗ ಕಾರಣಗಳನ್ನು ಕೇಳಿದರೆ ನಾನು ೯ನೇ ತರಗತಿಯವರೆಗೂ ಓದಬೇಕಾಯ್ತು ಓದಲು ಹೆಚ್ಚಿನ ಆಸಕ್ತಿ ಇದ್ದರೂ, ನಮ್ಮ ಮನೆಯ ಪರಿಸ್ಥಿತಿಯಿಂದಾಗಿ ನಾನು ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಸೇರಬೇಕಾಯ್ತು ಎಂದು ಹೇಳಿದರೆ, ಮತ್ತೊಬ್ಬರು ನಾನು ಶಾಲೆಗೆ ಹೋಗಬೇಕು ಎಂದು ಹಠ ಮಾಡಿದರೂ ನಮ್ಮಪ್ಪ ನನ್ನನ್ನು ಬೇಟೆಗೆಂದು ಅಡವಿಗೆ ಕರೆದೊಯ್ಯುತ್ತಿದ್ದರೂ ಎಂದು, ಮತ್ತೊಬ್ಬ ಮಹಿಳೆಯನ್ನು ಕೇಳಿದಾಗ ನಾನು ವಿದ್ಯೆಯನ್ನು ಕಲಿಯಬೇಕು ಎಂಬ ಹಂಬಲವುಳ್ಳವಳಾಗಿದ್ದೆ ಆದರೆ ನನ್ನ ಮನೆಯಲ್ಲಿ ನನ್ನ ತಮ್ಮ ತಂಗಿಯರನ್ನು ನೋಡಿಕೊಳ್ಳುವ ಕೆಲಸ, ಅಮ್ಮ ಕೂಲಿಗೆ ಹೋಗುವುದಿತ್ತು ಎಂದು ಅಳಲು ತೋಡಿಕೊಂಡರು. ಒಟ್ಟಾರೆ ಈ ಸಮುದಾಯದ ಬಹುತೇಕ ಜನರು ಮೆಟ್ರಿಕ್ (ಎಸ್‌ಎಸ್‌ಎಲ್‌ಸಿ) ತನಕ ಬರುವುದರಲ್ಲಿಯೇ ಸಾಕುಬೇಕಾಗಿದೆ. ನಾವು ನಮ್ಮ ಹಿರಿಯರು ಮಾಡಿದ ತಪ್ಪಿನಿಂದಾಗಿ ಶಾಲೆಯನ್ನು ಬಿಡಬೇಕಾಯ್ತು, ಇನ್ನಾದರೂ ನಮ್ಮ ಮಕ್ಕಳನ್ನು ಓದಿಸಬೇಕು ಎನ್ನುವ ತಿಳುವಳಿಕೆ ಈ ಸಮುದಾಯದಲ್ಲಿ ಎದ್ದು ಕಾಣುತ್ತಿದೆ. ನಮ್ಮ ಅಜ್ಞಾನದಿಂದ ನಾವು ನಮ್ಮ ಮಕ್ಕಳು ಶಿಕ್ಷಣದ ಕುರಿತು ಆಸಕ್ತಿ ಕೆಲ ಸಂದರ್ಭದಲ್ಲಿ ಮಾಡದಿದ್ದರಿಂದ ಅಕ್ಷರಭ್ಯಾಸದಿಂದ ವಂಚಿತರಾಗಿದ್ದೇವೆ ಎಂದು ಮತ್ತೊಂದು ಕಡೆ ತಮ್ಮ ಅಜ್ಞಾನವನ್ನು ಹಳಿದುಕೊಂಡರು.

ಇನ್ನು ಗಡಿಭಾಗಕ್ಕೆ ಹೊಂದಿಕೊಂಡಂತಿರುವ ಕೆಲಹಳ್ಳಿಗಳಲ್ಲಿ ಇವರಿಗೆ ಶಿಕ್ಷಣದ ಬಗ್ಗೆ ಸರಿಯಾದ ಮಾಹಿತಿ ಕೊಡುವವರ ಅಭಾವ ಕಂಡುಬರುತ್ತದೆ. ಏನು ಓದಬೇಕು, ಶಾಲೆಯಲ್ಲಿ ಇತರರಂತೆ ಹೇಗೆ ಮುಂದೆ ಬರಬೇಕು, ಜನ್ಮ ದಿನಾಂಕ, ಪ್ರಮಾಣ ಪತ್ರ, ವಯಸ್ಸು, ಹೀಗೆ ಹತ್ತು ಹಲವು ವಿವರಗಳ ಬಗ್ಗೆ ಅಸ್ಪಷ್ಟ ತಿಳುವಳಿಕೆ ಇದೆ. ಎಸ್.ಎಸ್.ಎಲ್.ಸಿ. ಪಾಸಾದ ಕೂಡಲೇ ಮುಂದೆ ಏನು ಓದಬೇಕು ಯಾವ ಮಾರ್ಗ ಸೂಕ್ತವಾದುದು. ಯಾವ ವಿಷಯ ಆಯ್ಕೆಮಾಡಿಕೊಂಡರೆ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ ಎಂಬ ಹತ್ತು ಹಲವು ಪ್ರಶ್ನೆಗಳು ಇವರ ಮುಂದೆ ಕಾಡುತ್ತವೆ. ಇಂತಹ ವಿಷಯಗಳನ್ನು ಕುರಿತು ಚಿಂತಿಸುವವರು, ಮಾರ್ಗದರ್ಶನ ಮಾಡುವವರು, ಈ ಸಮುದಾಯದವರಲ್ಲಿ ಕಡಿಮೆ. ಎಲ್ಲೋ ಒಬ್ಬಿಬ್ಬರು ಮಾರ್ಗದರ್ಶನ ಮಾಡುವವರಿದ್ದಾರೆ. ಆದರೆ ಆರ್ಥಿಕತೆಯ ಕೊರತೆ ಏನೇ ಆದರೂ ಅಥಣಿ ಪರಿಸರದ ವಾಲ್ಮೀಕಿ ಸಮುದಾಯದವರಲ್ಲಿ ಶಿಕ್ಷಣದ ಅದರಲ್ಲೂ, ಮೂಲಶಿಕ್ಷಣ ಕೊರತೆ ಬಹುತೇಕ ಹಳ್ಳಿಗಳಲ್ಲಿ ಕಂಡು ಬರುತ್ತದೆ. ಈ ಸಮುದಾಯವು ಶೈಕ್ಷಣಿಕವಾಗಿ ಅಷ್ಟರಮಟ್ಟಿಗೆ ಹಿಂದುಳಿದಿದೆ ಎಂತಲೇ ಹೇಳಬಹುದು.

೫.೩. ಧಾರ್ಮಿಕ ಪದ್ಧತಿ

ಧಾರ್ಮಿಕತೆ ಅಥವಾ ಧರ್ಮ ಎನ್ನುವುದು ಮಾನವನನ್ನು ಮಹಾಮಾನವ, ದೇವತಾ ಮನುಷ್ಯ

ನನ್ನಾಗಿ ಮಾಡುವ ಒಂದು ಸಾಧನ ಎಂದು ಹೇಳಬಹುದು. ವಿಶ್ವದ ಎಲ್ಲಾ ಧರ್ಮಗಳ ಶಾಸ್ತ್ರ ಗ್ರಂಥಗಳು ಪ್ರತಿಯೊಂದು ಜೀವಿಯಲ್ಲಿಯೂ ದೈವಾಂಶದ ಪ್ರತಿರೂಪವನ್ನು ಕಾಣಬೇಕೆಂದು ಬೋಧಿಸಿವೆ.

ಬಸವಣ್ಣನವರು,

ಕಳಬೇಡ ಕೊಲಬೇಡ

ಹುಸಿಯ ನುಡಿಯಲು ಬೇಡ

ಅನ್ಯರಿಗೆ ಅಸಹ್ಯ ಪಡಬೇಡ

ತನ್ನ ಬಣ್ಣಿಸಬೇಡ ಇದಿರು ಅಳಿಯಲು

ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ

ಇದೇ ನಮ್ಮ ಕೂಡಲ ಸಂಗಮದೇವನೊಲಿವಪರಿ ಎಂದು ಈ ಸಪ್ತ ಸೂತ್ರಗಳಲ್ಲಿ ಧರ್ಮದ ಒಟ್ಟು ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಧರ್ಮೋರಕ್ಷತಿ ರಕ್ಷಿತಃ ಅಂದರೆ ನಾವು ಧರ್ಮವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ ಎಂಬ ಗೀತಸಾರವು ನಮ್ಮ ಕರ್ತವ್ಯವನ್ನು ಹೆಚ್ಚರಿಸಿದೆ. ಅಹಿಂಸೆಯೇ ಅತ್ಯುತ್ತಮ ಧರ್ಮವೆಂಬುದು ಈ ಎಲ್ಲಾ ಧರ್ಮಗಳ ಸಾರ. ಅಂತೆಯೇ ಅಥಣಿ ಪರಿಸರದಲ್ಲಿ ಹಿಂದೂಧರ್ಮ, ಜೈನಧರ್ಮ, ಇಸ್ಲಾಂ ಧರ್ಮದ ಜನರು ವಾಸವಾಗಿದ್ದಾರೆ. ಅದರಲ್ಲೂ ಹಿಂದೂಧರ್ಮ, ಜೈನಧರ್ಮದ ಜನರು ಹೆಚ್ಚು ಇದ್ದಾರೆ. ಈ ಎಲ್ಲಾ ಧರ್ಮಗಳಿಗೆ ಸಂಬಂಧಿಸಿದಂತೆ ಮಠ ಮಂದಿರಗಳು, ಬಸದಿಗಳು, ಗುಡಿ-ಗುಂಡಾರಗಳು, ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಅಥಣಿ ಪರಿಸರದ ವಾಲ್ಮೀಕಿ ಸಮುದಾಯದವರ ಧಾರ್ಮಿಕ ಪದ್ಧತಿಯನ್ನು ಇಲ್ಲಿ ನೋಡಲಾಗಿದೆ.

ಪ್ರಾಚೀನ ಭಾರತದ ಇತಿಹಾಸವನ್ನು ಒಮ್ಮೆ ತಿರುವಿನೋಡಿದಾಗ ಈ ವಾಲ್ಮೀಕಿ ಬುಡಕಟ್ಟು ಸಮುದಾಯವು ಆರ್ಯರ ಆಕ್ರಮಣಕ್ಕೊಳಗಾಗಿ ಕಾಡು-ಮೇಡುಗಳಲ್ಲಿಯೇ ವಾಸ ಮಾಡಬೇಕಾಯಿತು. ಹೀಗೆ ಕಾಡುಗಳಲ್ಲಿ ಗುಡ್ಡ-ಬೆಟ್ಟಗಳಲ್ಲಿ ವಾಸಮಾಡುತ್ತಿರುವಾಗ ಇವರು ಕಾಡುದೇವತೆಯನ್ನು ಬಹಳ ನಿಷ್ಠೆಯಿಂದ ಪೂಜಿಸುತ್ತಿದ್ದರು. ಕಾಡುದೇವತೆಯಲ್ಲಿ ಅಪಾರ ನಂಬಿಕೆಯನ್ನು ಇಟ್ಟಿದ್ದ ಇವರು ಈ ದೇವತೆಯನ್ನು ಸಂತೃಪ್ತಿಪಡಿಸಲು ಪ್ರಾಣಬಲಿ ಹಾಗು ನರಬಲಿಯನ್ನು ಕೊಡುತ್ತಿದ್ದರು. ಹಾಗೆಯೇ ಸಾಮೂಹಿಕವಾಗಿ ದೇವರ ಮುಂದೆ ಹಾಡುತ್ತ ನೃತ್ಯಗೈಯುತ್ತಿದ್ದರು. ಇಂತಹ ಒಂದು ಪದ್ಧತಿಯನ್ನು ನಾವು ಇಂದಿಗೂ ದೇವತಾಕಾರ್ಯ, ಹಬ್ಬ-ಜಾತ್ರೆಯಂತಹ, ಸಂದರ್ಭದಲ್ಲಿ ಈ ಪರಿಸರದೊಳಗೆ ಕಾಣಬಹುದು. ಬಹಳಷ್ಟು ಸಂಭ್ರಮದಿಂದ ಇಂತಹ ಉತ್ಸವಗಳನ್ನು ಅಂದು ಮಾಡಿಕೊಂಡು ಬಂದ ಸಂದರ್ಭದಲ್ಲಿ ಒಂದು ವೇಳೆ ದೇವತೆಗೆ ನಾವು ಬಲಿಯನ್ನು ಕೊಡದಿದ್ದರೆ ಮುನಿಸಿಕೊಳ್ಳುತ್ತಾಳೆ. ಕೋಪಗೊಂಡ ದೇವತೆ ನಮ್ಮನ್ನು ಕಾಡುತ್ತಾಳೆ ಎಂದು ತಿಳಿದ ಇವರು ಪ್ರಾಣ ಬಲಿ ಕೊಡುತ್ತಾ ಬಂದರು ಎಂದು ತಿಳಿಯುತ್ತದೆ.

ಆದರೆ ಈಗಲೂ ಕೂಡ ಅಥಣಿ ಪರಿಸರದ ವಾಲ್ಮೀಕಿ ಸಮುದಾಯದವರು ಊರಲ್ಲಿ ವಾಸಮಾಡಲಿಕ್ಕೆ ಪ್ರಾರಂಭಿಸಿ ಇತರರಂತೆ ಹಲವಾರು ದೇವತೆಗಳ ಮಂದಿರಗಳನ್ನು ನಿರ್ಮಿಸಿಕೊಂಡು ಪೂಜಿಸುತ್ತಾ ಬಂದಿದ್ದಾರೆ. ಇವರು ಹೆಚ್ಚಿನ ಸಂಖ್ಯೆಯಲ್ಲಿ ಸ್ತ್ರೀದೇವತೆಗಳನ್ನು ಆರಾಧಿಸಿಕೊಂಡು ಬಂದಿರುವುದು ಒಂದು ವಿಶೇಷ.

ಕಟಗೇರಿ ಲಕ್ಕವ್ವ ಕೊಕ್ಕಟನೂರ ಯಲ್ಲವ್ವ ಗುಡ್ಡದ ಎಲ್ಲವ್ವ (ಸೌದತ್ತಿ) ಮುರುಗವ್ವ, ರೇಣುಕವ್ವ, ಲಗಮವ್ವ, ಮಹಾಲಕ್ಷ್ಮಿ, ಚಂದ್ರಗಿರಿಯ ಚಂದ್ರವ್ವ, ಉದಕಟ್ಟೆ ಉದ್ದವ್ವ ಹಾಗೆಯೇ ಪುರುಷ ದೇವತೆಗಳಾದ ಸಿದ್ದರಾಯ, (ಸಿದ್ದೇಶ್ವರ) ಶಿವಯೋಗಿ. ಆಂಜನೇಯ ದೇವರುಗಳನ್ನು ಪೂಜಿಸುತ್ತಾ ಹರಕೆ ಸಲ್ಲಿಸುತ್ತಾ ಬಂದಿರುವುದು ತಿಳಿಯುತ್ತದೆ. ಮತೀಯ ಸಾಮರಸ್ಯಕ್ಕೆ ಉದಾಹರಣೆಯಾಗಿ ಪೀರಲು ದೇವರನ್ನು ಯಮನೂರು ಸ್ವಾಮಿಯನ್ನು ಆರಾಧಿಸುತ್ತಾರೆ. ಹರಕೆ ಹೊರುತ್ತಾರೆ. ತಮ್ಮ ಬೇಡಿಕೆ ಈಡೇರಿದರೆ ಹರಕೆ ಸಲ್ಲಿಸುತ್ತಾರೆ. ಹಾಗೆಯೇ ಅಥಣಿಯ ಶೇಡಬಾಳದಲ್ಲಿ ಈ ಸಮುದಾಯದವರು ಬಸವೇಶ್ವರ ರಥೋತ್ಸವದ ದಿನ ರಥಕ್ಕೆ ಬೇಡಿಕೆ ಈಡೇರಿದುದರಿಂದ ತೆಂಗಿನ ಕಾಯಿಯನ್ನು ಹರಕೆಯ ರೂಪದಲ್ಲಿ ಕಟ್ಟಿರುವುದನ್ನು ಮುಂದೆ ಛಾಯಾಚಿತ್ರದಲ್ಲಿ ನೋಡಬಹುದು. (ಹೀಗೆ ಇವರು ಅನೇಕ ದೇವರುಗಳನ್ನು ಪೂಜಿಸುತ್ತಾ ಬಂದಿದ್ದಾರೆ) ಸ್ತ್ರೀದೇವತೆಗಳಾದ ಕೊಕಟನೂರಿನ ಯಲ್ಲಮ್ಮ, ಸವದತ್ತಿಯ ಯಲ್ಲವ್ವ, ಲಕ್ಕಮ್ಮ ಮುರುಗಾಬಾಯಿ ಕೊಕಟನೂರು ಯಲ್ಲಮ್ಮ, ಸವದತ್ತಿಯ ಯಲ್ಲಮ್ಮನನ್ನು ವಿಶೇಷವಾಗಿ ವೈಭವದಿಂದ ಪೂಜಿಸುತ್ತಾರೆ. ವರ್ಷಕ್ಕೊಮ್ಮೆಯಾದರೂ ಸವದತ್ತಿಯ ಗುಡ್ಡಕ್ಕೆ ಹರಕೆಯನ್ನು ತೀರಿಸಲು ಹೋಗುತ್ತಾರೆ. ಸರಕಾರದ ನಿಯಂತ್ರಣವಿದ್ದರೂ ಈ ಪರಿಸರದ ಕೆಲವರು ಸವದತ್ತಿಗೆ ಹೋಗಿ ಮುತ್ತು ಕಟ್ಟಿಸಿಕೊಂಡು ದೇವದಾಸಿಯರಾಗಿ ಮುಂದುವರಿಯುವ ಜನರು ಹಿಂದಕ್ಕೆ ಇಲ್ಲಿ ಕಂಡುಬರುತ್ತಿದ್ದರು. ಆದರೆ ಇಂದು ಸಮುದಾಯದವರು ಪ್ರಜ್ಞಾವಂತರಾಗುತ್ತಿದ್ದಾರೆ. ಇದಕ್ಕೆ ಪೂರಕವಾಗಿ ದೇವದಾಸಿ ವಿಮೋಚನಾ ಸಂಸ್ಥೆಯು ಅಥಣಿಯಲ್ಲಿ ಹುಟ್ಟಿ ಈ ಅನಿಷ್ಟ ಪದ್ಧತಿಯ ನಿರ್ಮೂಲನೆಗಾಗಿ ಕಂಕಣಕಟ್ಟಿ ನಿಂತಿದೆ.

ಇವರು ಸ್ತ್ರೀದೇವತೆಗಳಿಗೆ ಸಾಕುಪ್ರಾಣಿಗಳಾದ ಕುರಿ, ಓತ, ಟಗರು, ಕೋಳಿಗಳನ್ನು ಇಂದಿಗೂ ಬಲಿಕೊಟ್ಟುಕೊಂಡು ಬಂದು ಮಾಂಸದಡುಗೆಯನ್ನು ನೈವೇದ್ಯಕ್ಕೆ ಇಡುವುದು ಕಂಡುಬರುತ್ತದೆ. ಇನ್ನು ವಿಶೇಷವಾಗಿ ಮುರುಗಾದೇವಿಯನ್ನು ಪೂಜಿಸುವುದು. ವರ್ಷದ ಶ್ರಾವಣ ಮಾಸದ ಕೊನೆಯ ಮಂಗಳವಾರ ಅಥಣಿಯಲ್ಲಿ ಬಹಳಷ್ಟು ವಿಜೃಂಭಣೆಯಿಂದ ಜಾತ್ರೆಯನ್ನು ಮಾಡುತ್ತಾರೆ. ಈ ದೇವಸ್ಥಾನದ ಪಕ್ಕದಲ್ಲಿಯೇ ಪೋಲಿಸ್‌ಠಾಣೆ ಇದ್ದರೂ ಪ್ರಾಣಿಬಲಿಯನ್ನು ಕೊಡುವುದನ್ನು ನಿಲ್ಲಿಸಲು ಆಗಿಲ್ಲ. ಅನೇಕ ಪ್ರಾಣಿಗಳನ್ನು ಬಲಿಕೊಟ್ಟು, ತಮ್ಮ ಹರಕೆಗಳನ್ನು ತೀರಿಸುತ್ತಾರೆ.

ಅಥಣಿ ಪರಿಸರದ ಕಟಗೇರಿಯ ಲಕ್ಕವ್ವ, ಬ್ಯಾಡರಹಟ್ಟಿಯ ಲಕ್ಕವ್ವ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ ದೇವಾಲಯಗಳಾಗಿದ್ದು ವಿಶೇಷವಾಗಿ ಈ ಸಮುದಾಯದವರು ಹೋಳಿಗೆ ನೈವೇದ್ಯವನ್ನು ಹಬ್ಬ-ಜಾತ್ರೆಯಂತಹ ಸಂದರ್ಭದಲ್ಲಿ ಮಾಡುತ್ತಾರೆ. ಹರಕೆಯನ್ನು ಹೊರುತ್ತಾರೆ. ಬೇಡಿಕೆಯು ಈಡೇರಿದಾಗ ದೇವತೆಗಳ ಸೇವೆಯನ್ನು ತಾವಂದುಕೊಂಡಂತೆ ಮಾಡಿಕೊಂಡು ಬಂದಿರುವುದನ್ನು ಕಾಣಬಹುದು.

ಕಟಗೇರಿಯ ಲಕ್ಕವ್ವನ ದೇವಸ್ಥಾನಕ್ಕೆ ಎಳೆಯ ಮಕ್ಕಳನ್ನು ಕರೆದುಕೊಂಡು ಹೋಗುವುದಿಲ್ಲ. ಕಾರಣ ಅನಾದಿ ಕಾಲದಿಂದಲೂ ನಂಬಿಕೊಂಡು ಬಂದಿರುವ ನಂಬಿಕೆ. ಇದುವರೆಗೂ ತಮ್ಮ ಮಕ್ಕಳನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗುವುದಿಲ್ಲ.

ಅಥಣಿ ಪರಿಸರದ 'ಕಲ್ಲೊತ್ತಿ' ಗ್ರಾಮದಲ್ಲಿ ಬಹುತೇಕ ವಾಲ್ಮೀಕಿ ಸಮುದಾಯದವರೆ ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದು ಮರಗಾದೇವಿಯನ್ನು ಅತ್ಯಂತ ಶ್ರದ್ಧೆ, ನಿಷ್ಠೆಯಿಂದ ಪೂಜಿಸಿಕೊಂಡು ಬಂದಿದ್ದಾರೆ.

ಇನ್ನು ಸ್ತ್ರೀ ದೇವತೆಗಳ ಜೊತೆ ಜೊತೆಗೆ ಪುರುಷ ದೇವರುಗಳಾದ ಶಿವ, ಬಸವಣ್ಣ, ಸಿದ್ದೇಶ್ವರ, ಬೇಡರಕಣ್ಣಪ್ಪ, ಶ್ರೀರಾಮ, ಆಂಜನೇಯ ದೇವರುಗಳನ್ನು ಆರಾಧಿಸಿಕೊಂಡು ಬಂದಿದ್ದು, ಹಲವಾರು ಜಾತ್ರೆ-ಉತ್ಸವಗಳಲ್ಲಿ ಪಾಲ್ಗೊಳ್ಳುತ್ತಾ ಬಂದಿದ್ದಾರೆ.

ಒಟ್ಟಿನಲ್ಲಿ ಅಥಣಿ ಪರಿಸರದಲ್ಲಿ ಜೈನರು, ವೀರಶೈವರು, ಬ್ರಾಹ್ಮಣರು, ಮುಸ್ಲಿಂರು, ಕುರುಬರು, ಬಡಿಗೇರು, ಕಮ್ಮಾರರು ಹೀಗೆ ತಮಗಿಂತ ಮುಂದುವರೆದ ಸಮುದಾಯಗಳ ಜೊತೆಯಲ್ಲಿ ಇಂದು ಅನ್ಯೋನ್ಯವಾಗಿ ಬೆರೆತುಕೊಂಡು ಬಂದಿರುವ ಇವರು ಹಲವಾರು ಶಿಷ್ಟಾಚಾರಗಳನ್ನು ಮೈಗೂಡಿಸಿಕೊಂಡು ಬಂದು, ಮೇಲ್ವರ್ಗದ ದೇವತೆಗಳನ್ನು ಪೂಜಿಸಿಕೊಂಡು, ಇತರರಂತೆಯೇ ತಾವೂ ಕೂಡ ಆಹಾರ ಪದ್ಧತಿಯಲ್ಲಿ ಬದಲಾವಣೆಯನ್ನು ಮಾಡಿಕೊಂಡು ಬಂದಿದ್ದು, ಹೋಳಿಗೆ, ಹುಗ್ಗಿ, ಇನ್ನಿತರೆ ಸಿಹಿ ಪದಾರ್ಥಗಳನ್ನು ಹಬ್ಬ-ಜಾತ್ರೆಯಂತಹ ಸಂದರ್ಭದಲ್ಲಿ ದೇವರಿಗೆ ನೈವೇದ್ಯ ಮಾಡುವುದನ್ನು ರೂಢಿಸಿಕೊಂಡು ಬಂದಿದ್ದಾರೆ. ಅಂದರೆ ಆಧುನಿಕ ಸಂದರ್ಭದೊಳಗೆ ಮೇಲ್ವರ್ಗದ ಸಮುದಾಯದ ಜೊತೆ ಸಾಮರಸ್ಯದಿಂದ ಬದುಕಲು ಕಲಿಯುವುದನ್ನು ರೂಢಿಸಿಕೊಳ್ಳುವುದರಲ್ಲಿ ಮುಂದುವರೆದಿದ್ದಾರೆ.

೫.೪. ರಾಜಕೀಯ ಸ್ಥಿತಿಗತಿ

ಇಡೀ ಭಾರತದಲ್ಲಿ ಚದುರಿ ಹೋಗಿರುವ ವಾಲ್ಮೀಕಿ ಸಮುದಾಯವು ರಾಜ್ಯದ ಹಲವಾರು ಕಡೆ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಿದ್ದು, ಸ್ವಾತಂತ್ರ್ಯ ನಂತರದಲ್ಲಿ ಬಹುತೇಕ ಭಾಗಗಳಲ್ಲಿ ಇವರಲ್ಲಿ ತಕ್ಕಮಟ್ಟಿನ ಸುಧಾರಣೆ ಕಂಡುಬರುತ್ತದೆ. ಆದರೆ ಬೆಳಗಾವಿ ಜಿಲ್ಲೆಯ ಅಥಣಿ ಪರಿಸರದಲ್ಲಿ ವಾಸಿಸುವ ಇವರ ಪರಿಸ್ಥಿತಿಯು ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕ, ಶೈಕ್ಷಣಿಕವಾಗಿ ಅಷ್ಟಾಗಿ ನಿರೀಕ್ಷಿತ ಮಟ್ಟದಲ್ಲಿ ಬದಲಾವಣೆಗೊಂಡಿಲ್ಲವೆಂತಲೇ ಹೇಳಬಹುದು. ಆರ್ಥಿಕ ಬೆಂಬಲವಿಲ್ಲದೇ, ಶಿಕ್ಷಣದ ಬೆಂಬಲವೂ ಇಲ್ಲದೆ ರಾಜಕೀಯದ ಅರಿವು ಮಾರ್ಗದರ್ಶನಗಳ ನೆರವಿಲ್ಲದೆ ಬವಣೆಯನ್ನು ಅನುಭವಿಸುತ್ತಿದ್ದಾರೆ.

ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಹಣವಂತ ಸಮುದಾಯಗಳಿಗೆ ಮಾತ್ರ ಅಧಿಕಾರ ಎಂಬ ಒಂದು ಅನುಶಾಸನ ಮೌಖಿಕ ಅರ್ಥವಂತಿಕೆಯಾಗಿ ಇಲ್ಲಿ ಉಳಿದುಕೊಂಡು ಬಂದಿದೆ. ಹೀಗಾಗಿ ಈ ಸಮುದಾಯದ ಜನಸಂಖ್ಯೆಯು ಕಡಿಮೆ ಇದ್ದು, ಆರ್ಥಿಕ ಪರಿಸ್ಥಿತಿಯು ಹೀನಾಯ ಸ್ಥಿತಿಯಲ್ಲಿರುವುದರಿಂದ

ಇವರ ರಾಜಕೀಯ ಜೀವನವನ್ನು ಕುರಿತು ಅಧ್ಯಯನ ಮಾಡಿದರೆ ಈ ಸಮುದಾಯದವರಿಗೆ ರಾಜಕೀಯ ಎಂದರೇನು? ಸರ್ಕಾರ ಎಂದರೇನು? ಎಂದು ಅರ್ಥ ಮಾಡಿಕೊಳ್ಳದೆ ತಮ್ಮ ದಿನನಿತ್ಯದ ಸಾಂಸಾರಿಕ ಜೀವನವನ್ನು ತೂಗಿಸಿಕೊಂಡು ಮುನ್ನಡೆಯುವುದರಲ್ಲಿಯೇ ತೃಪ್ತರಾಗಿ ನಾಳಿನ ಚಿಂತೆ ಏಕೆ? ಎಂದು ಇದ್ದುದರಲ್ಲಿಯೇ ಜೀವನ ನಡೆಸುವ, ಅರೆ ಹೊಟ್ಟೆಯಲ್ಲಿಯೇ ಜೀವನ ಸಾಗಿಸಿಕೊಂಡು ಬಂದವರನ್ನು ನಾವು ಇಲ್ಲಿ ಕಾಣಬಹುದು. ಇಂದಿನ ಪರಿಸ್ಥಿತಿಯಲ್ಲಿ ಯಾವುದೇ ಒಂದು ಸಮುದಾಯಕ್ಕೆ ಸೌಲಭ್ಯ-ಸೌವಲತ್ತುಗಳು ಸಿಗಬೇಕಾದರೆ ಇವರು ತಮ್ಮ ಮತಗಳನ್ನು ಬಲಿಷ್ಠ ಜಾತಿಗಳಿಗೆ ಮಾರಬೇಕು. ಇಲ್ಲವೇ ಸರಕಾರವೇ ಇವರಿಗೆ ಕರುಣೆ ತೋರಬೇಕು. ಹಾಗಾದಾಗ ಮಾತ್ರ ಅಲ್ಪ-ಸ್ವಲ್ಪ ಸೌಲಭ್ಯ ಸಿಗಲು ಸಾಧ್ಯವಾದೀತು.

ಇಲ್ಲವೆ ಖಡ್ಗ ಹಿಡಿದ ಕೈಗಳು ಪೆನ್ನು ಹಿಡಿಯಬೇಕು ಎನ್ನುವ ಸಮಷ್ಟಿ ಪ್ರಜ್ಞೆಯನ್ನು ಇವರಲ್ಲಿ ಮೂಡಿಸಬೇಕಾಗಿದೆ. ಸಹಸ್ರಾರು ವರ್ಷಗಳಿಂದಲೂ ಅತ್ಯಂತ ಉತ್ಸಾಹಿ ಸಮುದಾಯವೆಂದು ಪ್ರಖ್ಯಾತಿಯನ್ನು ಹೊಂದಿದ್ದು, ವೀರಜೀವನ ನಡೆಯಿಸಿ ಹುಲಿಯಾಗಿ ಚರಿತ್ರೆಯಲ್ಲಿ ಹೆಸರು ಮಾಡಿರುವ ನಮ್ಮ ಪೂರ್ವಜರು, ಸಿಂಧೂರ ಲಕ್ಷ್ಮಣನು ಈ ನೆಲದಲ್ಲಿ ಬ್ರಿಟೀಷರಿಗೆ ಸಿಂಹ ಸ್ವಪ್ನವಾಗಿರುವುದನ್ನು ನೆನಪಿಸಿಕೊಳ್ಳುವ ಈ ಸಮುದಾಯ ಅಂತಹ ಧವಳ ಕೀರ್ತಿಗೆ ಕಳಂಕ ತರುವ ಕೆಲಸಕ್ಕೆ ಇಂದು ಕಾರಣರಾಗಿ ಸಿಂಹದ ಮರಿಗಳಾಗಿ ಹೊರಬರಲು ಪ್ರಯತ್ನಿಸುವುದಿಲ್ಲ ಎನ್ನುವ ಯೋಚನೆಯಲ್ಲಿ ಇವರಿಗೆ ಅಪಾರವಾದ ಬಡತನ ಕಾರಣವಾಗಿ ಕಾಡುತ್ತಿದೆ.

ನಾಗರೀಕತೆಯ ಪ್ರಭಾವದಿಂದಾಗಿ ಸ್ವಲ್ಪ ಸುಧಾರಿಸಿಕೊಳ್ಳುತ್ತಿರುವ ಸಮುದಾಯ ತನ್ನ ಮೂಲವೃತ್ತಿಯನ್ನು ಬದುಕಿನ ಅವಿಭಾಜ್ಯ ಅಂಗವೆಂದು ತಿಳಿದು ಕಾಲಕಳೆಯುತ್ತವೆ. ಇಲ್ಲಿನ ಈ ಸಮುದಾಯಗಳಿಗೆ ಶಿಕ್ಷಣದ ಕೊರತೆಯು ಕಾರಣವಾಗಿದೆ. ಮೊದಲೇ ಆರ್ಥಿಕವಾಗಿ ಹಿಂದುಳಿದಿರುವ ಇವರು ಅನಕ್ಷರತೆಯಿಂದ ಇನ್ನಷ್ಟು ಹಿಂದುಳಿದು ರಾಜಕೀಯ ಜ್ಞಾನ ಪಡೆಯುವಲ್ಲಿ ಮುಂದಾಗಬೇಕಾಗಿದೆ. ಅಥಣಿ ಪರಿಸರದಲ್ಲಿ ಈ ಸಮುದಾಯವು ಜನಸಂಖ್ಯಾ ದೃಷ್ಟಿಯಿಂದ ಕಡಿಮೆ ಇರುವುದರಿಂದ ಇವರನ್ನು ಆಡಳಿತ ರೂಢ ರಾಜಕೀಯ ವ್ಯಕ್ತಿಗಳು ಅಲಕ್ಷಿಸುವ ಅಪಾಯವು ಕಂಡುಬರುತ್ತದೆ. ಇಲ್ಲಿ ಧ್ವನಿ ಕಳೆದುಕೊಂಡಿರುವ ಸಮುದಾಯವು ಇಂದು ತಮ್ಮ ಮಕ್ಕಳ ಮುಂದಿನ ಭವಿಷ್ಯಕ್ಕಾಗಿ ಸರ್ಕಾರದಿಂದ ಸೌಲಭ್ಯಗಳನ್ನು ಪಡೆಯಲು ಮುಂದೆ ಬರಬೇಕಾಗಿದೆ. ವಿದ್ಯಾಭ್ಯಾಸಕ್ಕಾಗಿ ಮೀಸಲಾತಿ ಹಾಗೂ ವೃತ್ತಿಯಲ್ಲಿ ಪಾಲು ಪಡೆಯುವಲ್ಲಿ ಈ ಸಮುದಾಯಗಳು ಜಾಗೃತರಾಗಬೇಕು.

ಕೇವಲ ವಾಲ್ಮೀಕಿ ಜಯಂತಿ, ಸಭೆ ಸಮಾರಂಭಗಳಷ್ಟೇ ಸಂಘಟನೆಯಲ್ಲಿ ಪ್ರಯೋಜನಕಾರಿಯಲ್ಲ ಎನ್ನುವ ತಿಳುವಳಿಕೆ ಇಂದು ಬರಬೇಕಾಗಿದೆ. ಆವೇಶಭರಿತವಾದ ಮಾತುಗಳಿಂದ ನ್ಯಾಯ ಸಿಗುವುದಿಲ್ಲ. ಈ ಪರಿಸರ ಮತ್ತು ಇವರಲ್ಲಿಯೇ ಇರುವ ತಾರತಮ್ಯ ಹೋಗಲಾಡಿಸುವಂತಹ ಯಾವುದೇ ಸಂಸ್ಥೆ, ಆಯೋಗ ಇಲ್ಲಿ ರಚನೆಗೊಂಡಿಲ್ಲ. ಸಮಾಜದ ಹಿರಿಯರು, ಮುಖಂಡರು, ಈ ಕುರಿತು ಚಿಂತಿಸುವುದು

ಅನಿವಾರ್ಯವಾಗಿದೆ. ಅಥಣಿ ತಾಲೂಕು ಅಥಣಿ ಮತ್ತು ಕಾಗವಾಡ ಎರಡು ವಿಧಾನಸಭಾ ಮತಕ್ಷೇತ್ರಗಳನ್ನು ಹೊಂದಿದ್ದು. ಇಲ್ಲಿ ಯಾವುದೇ ಒಬ್ಬ ವ್ಯಕ್ತಿಯು ಇದುವರೆಗೂ ಎಂ.ಎಲ್.ಎ., ಎಂ.ಪಿ ಎಂದು ಈ ಸಮುದಾಯಗಳಲ್ಲಿ ಕಂಡುಬರುವುದಿಲ್ಲ. ಎಲ್ಲೋ ಒಂದು ಕಡೆಗೆ ಇಂದು ಮೀಸಲಾತಿಯ ಅಡಿಯಲ್ಲಿ ಅಥಣಿ ಪುರಸಭೆಯ ಸದಸ್ಯರಾಗಿ ಶ್ರೀದೇವಿನಾಯಕ ಎಂಬುದು ಆಯ್ಕೆಗೊಂಡಿದ್ದಾರೆ, ಮತ್ತೊಂದೆಡೆ ಶೇಡಬಾಳದ ಶ್ರೀಮತಿ ಸುನಿತಾ ಸದಾಶಿವ ಮಾಕಣ್ಣನವರ ಜಿಲ್ಲಾ ಪಂಚಾಯ್ತ ಸದಸ್ಯರಾಗಿ ಆಯ್ಕೆಗೊಂಡಿದ್ದಾರೆ. ಅಲ್ಲದೆ ಗ್ರಾಮಪಂಚಾಯ್ತಿಗಳಲ್ಲಿ ಅಲ್ಲಲ್ಲಿ ಸರ್ಕಾರಿ ಮೀಸಲಾತಿಯ ಅಡಿಯಲ್ಲಿ ಅಧ್ಯಕ್ಷರಾಗಿ, ಸದಸ್ಯರಾಗಿ ಮುಂದುವರಿದುಕೊಂಡು ಬಂದಿದ್ದರಾದರೂ ಇವರಲ್ಲಿ ಶಿಕ್ಷಣದ ಕೊರತೆಯಿರುವುದರಿಂದ ಇವರುಗಳ ಅಧಿಕಾರವನ್ನು ಜೊತೆಗಿರುವ ಇತರೆ ಮುಂದುವರಿದ ಸಮುದಾಯದ ಅಧ್ಯಕ್ಷರು, ಸದಸ್ಯರು ಕಸಿದುಕೊಂಡು ಕೇವಲ ರಬ್ಬರ್‌ಸ್ಟ್ಯಾಂಪ್ ಆಗಿ ಕೆಲಸ ನಿರ್ವಹಿಸಿಕೊಂಡು ಬಂದಿದ್ದಾರೆ. ಇದಕ್ಕೆ ಹೊರತಾಗಿ ಶ್ರೀಮತಿ ಸುನಿತಾ ಸದಾಶಿವ ಮಾಕಣ್ಣನವರ ವಿದ್ಯಾವಂತ ಪರಿಸರದಲ್ಲಿ ಇರುವುದರಿಂದ ಹಲವಾರು ಸಾಮಾಜಿಕ ಕಾರ್ಯಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಕರ್ನಾಟಕ ಸಾಂಸ್ಕೃತಿಕ ಅಕಾಡೆಮಿ ಬೆಂಗಳೂರಿನಿಂದ ಕರ್ನಾಟಕ ಭೂಷಣ, ಪ್ರತಿಭಾ ಪುರಸ್ಕಾರಗಳನ್ನು ಪಡೆಯುವಷ್ಟು ಸಮಾಜದ ಕೆಲಸ ಮಾಡುತ್ತಾ ಬಂದಿದ್ದಾರೆ.

ಅಷ್ಟೇ ಅಲ್ಲದೇ ಕರ್ನಾಟಕದ ಇತರೆಡೆ ರಾಜಕೀಯವಾಗಿ ತಮ್ಮ ಛಾಪನ್ನು ಮೂಡಿಸಿದವರು- ಸುರಪುರದ ರಾಜ ಪಿಡ್ಡನಾಯಕ, ಬ್ಯಾರಿಸ್ಟರ್ ರಾಜ ವೆಂಕಟಪ್ಪ ನಾಯಕ, ಬಿಳಿಚೋಡು ಭೀಮಪ್ಪ ನಾಯಕ, ಎಲ್.ಜಿ. ಹಾವನೂರು, ಚಳ್ಳಕೇರಿ ತಿಪ್ಪೇಸ್ವಾಮಿ, ಬಳ್ಳಾರಿಯ ಅಲ್ಲಿಪುರದ ಹನುಮಂತಪ್ಪ, ತೆಕ್ಕಲಕೋಟೆ ಸಿದ್ದಪ್ಪ, ಹೂವಿನ ಹಡಗಲಿಯ ತಳವಾರ ಸಣ್ಣವೆಂಕಪ್ಪ, ಹೊಸಪೇಟೆಯ ಗುಜ್ಜಲ ಹನುಮಂತಪ್ಪ, ಜಯಲಕ್ಷ್ಮಿ, ಕೂಡ್ಲಿಗಿಯ ಎನ್.ಟಿ. ಬೊಮ್ಮಣ್ಣ, ಸಿರುಗುಪ್ಪದ ಎಂ.ಎಸ್.ಸೋಮಲಿಂಗಪ್ಪ, ಬಳ್ಳಾರಿಯ ಶ್ರೀರಾಮುಲು, ಜಗಲೂರಿನ ಶಾಸಕ ಎಂ.ಬಸಪ್ಪ, ತುಮಕೂರು ಎಂ.ಎಲ್.ಸಿ. ವಿ.ಎಸ್.ಉಗ್ರಪ್ಪ, ಗೋಕಾಕ ಎಂ.ಎಲ್.ಸಿ., ಮಾಜಿ ಶಾಸಕರು ಶ್ರೀ ಸತೀಶ್ ಜಾರಕಿಹೊಳಿ, ಗೋಕಾಕ್ ಶಾಸಕರು ಶ್ರೀ ರಮೇಶ ಜಾರಕಿಹೊಳಿ, ಗೋಕಾಕ್ ಆರಭಾವಿ ಕ್ಷೇತ್ರ ಸಚಿವರು ಶ್ರೀ ಬಾಲಚಂದ್ರ ಜಾರಕಿಹೊಳಿ, ಹೀಗೆ ರಾಜ್ಯದ ಹಲವೆಡೆ ಹಾಗೂ ಬೆಳಗಾವಿ ಜಿಲ್ಲೆಯ ಗೋಕಾಕ್ ಪರಿಸರದಲ್ಲಿ ವಾಲ್ಮೀಕಿ ಸಮುದಾಯದವರು ರಾಜಕೀಯ ಕ್ಷೇತ್ರದಲ್ಲಿ ಅಷ್ಟರಮಟ್ಟಿಗೆ ತಮ್ಮನ್ನು ತೊಡಗಿಸಿಕೊಂಡಿದ್ದರೂ ಅಥಣಿ ಪರಿಸರದಲ್ಲಿ ಕೇವಲ ಮೀಸಲಾತಿ ಅಡಿಯಲ್ಲಿ ಗ್ರಾಮಪಂಚಾಯ್ತಿ, ತಾಲೂಕ್ ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಅಧ್ಯಕ್ಷರು, ಸದಸ್ಯರುಗಳಾಗಿ ಅಷ್ಟೇ ಕಂಡುಬರುತ್ತಾರೆ. ಯಾವುದೇ ಎಂ.ಎಲ್.ಎ., ಎಂ.ಎಲ್.ಸಿ.ಯಾಗಿ ಹೊರಬಂದಿರುವುದು ಕಂಡುಬರುವುದಿಲ್ಲ.

ಇಡೀ ಪರಿಸರದ ಸಮುದಾಯವನ್ನು ಕುರಿತು ಅಧ್ಯಯನಕ್ಕೆ ತೊಡಗಿದ ನಮಗೆ ಕ್ಷೇತ್ರಕಾರ್ಯದಿಂದ ತಿಳಿದು ಬರುವುದೆಂದರೆ ರಾಜಕೀಯದಲ್ಲಿ ಇವರ ಪಾತ್ರ ಕೇವಲ ಹಣವಂತ ಮೇಲ್ಜಾತಿಯವರು ಹೇಳುವ

ಪಕ್ಷ ಅಥವಾ ವ್ಯಕ್ತಿಗೆ ಮತ ಚಲಾಯಿಸುವ ಮಟ್ಟಕ್ಕೆ ಸೀಮಿತಗೊಂಡಿದೆ. ಹಾಗೂ ಜಿಲ್ಲೆ ಮತ್ತು ತಾಲೂಕು ಮಟ್ಟದ ರಾಜಕೀಯ ಕ್ಷೇತ್ರಗಳಲ್ಲಿಯೂ ಇವರ ಪಾತ್ರ ಅಷ್ಟಕ್ಕಷ್ಟೆ. ಯಾವುದೋ ಒಂದೆರಡು ಪ್ರದೇಶಗಳಲ್ಲಿ ಸಣ್ಣಪುಟ್ಟ ರಾಜಕೀಯ ಬಿಟ್ಟರೆ ಮತ್ಯಾವುದೇ ವಿಧದಲ್ಲಿ ರಾಜಕೀಯ ಸ್ಥಿತಿಗತಿ ಸುಧಾರಿಸಬೇಕಾಗಿದೆ. ಇನ್ನು ಈ ಸಮುದಾಯದಲ್ಲಿ ಹೆಚ್ಚಾಗಿ ಬಡತನ, ಅನಕ್ಷರತೆಗಳು ಹೋಗುವರೆಗೂ ಇವರ ಸ್ಥಿತಿಯು ಚಿಂತಾಜನಕವೆನಿಸುತ್ತದೆ. ಇವರು ಸಮಾಜದಲ್ಲಿ ಮುಂದುವರಿಯಬೇಕಾದರೆ ಪ್ರಜ್ಞಾವಂತ ಮಾರ್ಗದರ್ಶಕರು, ರಾಜ್ಯ ಸರಕಾರದ ಅಧಿಕಾರದಲ್ಲಿರುವ ಇದೇ ಸಮುದಾಯದ ನಾಯಕರು ತಮ್ಮ ಕ್ಷೇತ್ರದ ಕಾರ್ಯವನ್ನಷ್ಟೆ ಅಲ್ಲದೆ ಅದರಾಚೆಯು ಸಮುದಾಯದವರ ಕುರಿತ ಚಿಂತನ-ಮಂಥನ ಮಾಡಿದಾಗ ಕೇಂದ್ರಸರ್ಕಾರ ಮತ್ತು ಸ್ವಯಂ ಸೇವಾ ಸಂಘಗಳು ನಿಸ್ವಾರ್ಥವಾಗಿ ಕೆಲಸ ನಿರ್ವಹಿಸಿದಾಗ ಹಿಂದುಳಿದ ಸಮುದಾಯದೊಳಗೆ ಶಿಕ್ಷಣ ಪಡೆದವರು, ಹಿರಿಯರು, ಮುಖಂಡರು ತಿಳುವಳಿಕೆಯನ್ನು ನೀಡಬೇಕು. ಹಾಗಾದಾಗ ಅಭಿವೃದ್ಧಿ ಸಾಧ್ಯ.

೫.೫. ಆರ್ಥಿಕ ಸ್ಥಿತಿಗತಿ

ಕರ್ನಾಟಕದಲ್ಲಿ ವಾಲ್ಮೀಕಿ ಸಮುದಾಯವು ಭವ್ಯ ಪರಂಪರೆಯನ್ನು ಹೊಂದಿದೆ. ಕರ್ನಾಟಕದ ರಾಯಚೂರು, ಬಳ್ಳಾರಿ, ತುಮಕೂರು, ಚಿತ್ರದುರ್ಗ, ಬೆಳಗಾವಿ, ಕೋಲಾರ ಜಿಲ್ಲೆಗಳ ಕೆಲವು ತಾಲೂಕುಗಳಲ್ಲಿ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಂತೆ ಈ ಸಮುದಾಯದ ಜನರು ಬಹುಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಇವರುಗಳು ಗಡಿಭಾಗದಲ್ಲಿ ಸ್ಥಾಪಿಸಿರುವ ಸಾಹಸ ಸಿದ್ದಿಗಳೆಲ್ಲವೂ ಪುರಾಣ-ಇತಿಹಾಸಕ್ಕೆ ಸಂಬಂಧಿಸಿದ್ದು, ಆಧುನಿಕ ಜೀವನದ ಸವಾಲುಗಳನ್ನು ಎದುರಿಸಿ ಬದುಕಿದ್ದು, ಆಧುನಿಕ ಜೀವನದ ಸವಾಲುಗಳನ್ನು ಎದುರಿಸಿ ಬದುಕಲು ಬೇಕಾಗಿರುವ ಆರ್ಥಿಕ ಸ್ಥಿತಿ-ಗತಿಯಲ್ಲಿ ತುಂಬಾ ದುರ್ಬಲರೆಂದೇ ಹೇಳಬಹುದು. ಇದಕ್ಕೆ ಕಾರಣವೆಂದರೆ ಶತಶತಮಾನಗಳ ಕಾಲ ಈ ಸಮುದಾಯವು ನಾಡಿನಿಂದ ದೂರ ಉಳಿದು, ಅರಣ್ಯ ಪ್ರದೇಶಗಳಲ್ಲಿ ತಮ್ಮದೇ ಆದ ಆಚಾರ-ವಿಚಾರ ಸಂಪ್ರದಾಯಗಳನ್ನು ರೂಢಿಸಿಕೊಂಡು ಜೀವನಾಧಾರಕ್ಕೆ ಪಶುಸಂಗೋಪನಾ, ಬೇಟೆಯನ್ನು ಅವಲಂಬಿಸಿ ವಲಸೆ ಜೀವನ ನಡೆಸಿರುವುದು ಕಂಡುಬರುತ್ತದೆ. ಅರಣ್ಯಗಳು ನಾಶವಾದಂತೆಲ್ಲ ಈ ಸಮುದಾಯದವರು ನಾಡಿನವರೊಂದಿಗೆ ಸಂಪರ್ಕ ಬೆಳೆಸಿಕೊಂಡು ಬದುಕು ಸಾಗಿಸುವುದು ಅನಿವಾರ್ಯವಾಯಿತು. ತಮ್ಮದೇ ಆದ ಜೀವನ ಮೌಲ್ಯಗಳ ನೆಲೆಯಲ್ಲಿ ಸ್ವಾವಲಂಬಿ ಬದುಕನ್ನು ಸಾಗಿಸಿದ ಇವರು ಶಿಕ್ಷಣ, ಬಂಡವಾಳ, ವ್ಯವಹಾರಜ್ಞಾನ ಮುಂತಾದವುಗಳಲ್ಲಿ ಹಿಂದುಳಿದುದರಿಂದ ನಾಡಿನಲ್ಲಿ ಪರಾವಲಂಬಿ ಬದುಕನ್ನು ಸಾಗಿಸಬೇಕಾಯಿತು.

ಆರ್ಥಿಕತೆಯ ಅಭಿವೃದ್ಧಿಗೆ ಪೂರಕವಾದ ಕೃಷಿ, ಶಿಕ್ಷಣ, ವಾಣಿಜ್ಯ, ವ್ಯಾಪಾರ, ಉದ್ಯೋಗ ಮುಂತಾದವುಗಳಲ್ಲಿ ಈ ಸಮುದಾಯವು ತುಂಬಾ ಹಿಂದುಳಿದಿದೆ. ಪರಿಣಾಮ ಆಹಾರ, ವಸತಿ, ಶಿಕ್ಷಣ, ಆರೋಗ್ಯ ಮುಂತಾದ ಮೂಲಭೂತ ಸೌಲಭ್ಯಗಳನ್ನು ಹೊಂದಿರದೇ ಕಡುಬಡನತವನ್ನು ಅನುಭವಿಸುತ್ತದೆ.

ಇವರ ಜೀವನ ಕ್ರಮ ಮತ್ತು ಜೀವನಾಧಾರಕ್ಕೆ ಅವಲಂಬಿಸಿರುವ ವೃತ್ತಿಗಳನ್ನು ಸಾಮಾಜಿಕ, ರಾಜಕೀಯ, ಶೈಕ್ಷಣಿಕವಾಗಿ ಆದಂತಹ ಏಳು-ಬೀಳುಗಳನ್ನು ಅವಲೋಕಿಸಿದಾಗ ಆರ್ಥಿಕ ಸ್ಥಿತಿ-ಗತಿಯನ್ನು ತಿಳಿಯಲು ಸಾಧ್ಯವಾಗುತ್ತದೆ.

ಯಾವುದೇ ಒಬ್ಬ ವ್ಯಕ್ತಿಯ ಅಥವಾ ಒಂದು ಸಮುದಾಯದ ಜೀವನ ಮೌಲ್ಯವನ್ನು ನಿರ್ಧರಿಸುವಲ್ಲಿ ಬೇಟೆ, ಕೃಷಿ, ಪಶುಪಾಲನೆಯು ಪ್ರಮುಖ ಪಾತ್ರ ವಹಿಸುತ್ತದೆ. ಹೀಗೆ ಮನುಷ್ಯ ಒಂದೊಂದು ಹಂತವನ್ನು ತಲುಪಿ ಆತನ ಬದುಕಿನ ರೂಪುರೇಷೆಗಳು ಬದಲಾದುದನ್ನು ಇತಿಹಾಸದ ಮೂಲಕ ತಿಳಿಯಬಹುದು. ಈ ಹಿನ್ನೆಲೆಯಲ್ಲಿ ವಾಲ್ಮೀಕಿ ಸಮುದಾಯದ ಜನತೆ ವಾಸಿಸುವುದಕ್ಕಾಗಿ ಮೊದಲಿಗೆ ಗುಡ್ಡಗಾಡು ಪ್ರದೇಶಗಳನ್ನು, ಅತ್ಯಂತ ಕಡಿಮೆ ಮಳೆಬೀಳುವ ಬಂಜರು ಭೂಪ್ರದೇಶವನ್ನು ಆಯ್ಕೆ ಮಾಡಿಕೊಂಡರು. ಇಂತಹ ಒಣಬೇಸಾಯಕ್ಕೆ ಯೋಗ್ಯವಾದ ಗುಡ್ಡ-ಗಾಡು ಪ್ರದೇಶವೆಂದು ಕರೆಯುವ ಅಥಣಿ ಪರಿಸರದ ಬಹುಪಾಲು ಭೂಮಿಯಲ್ಲಿ ಇರುವ ಊರುಗಳಲ್ಲಿಯೇ ಹೆಚ್ಚಾಗಿ ಈ ಸಮುದಾಯದವರು ಕಂಡುಬರುತ್ತಾರೆ. ಇವರುಗಳಲ್ಲಿ ೨ ಅಥವಾ ೩ ಎಕರೆ ಭೂಮಿಯನ್ನು ಹೊಂದಿರುವ ಸಣ್ಣ-ಸಣ್ಣ ರೈತರೇ ಇಲ್ಲಿ ಇದ್ದು, ಇವರು ಜೋಳ, ಹುರುಳಿ, ಮಡಿಕೆ, ಸಜ್ಜೆ, ನವಣೆ ಮುಂತಾದ ಸಾಮಾನ್ಯ ದವಸ ಧಾನ್ಯಗಳನ್ನು ಶೇಂಗಾ, ಸೂರ್ಯಕಾಂತಿ, ಮೆಕ್ಕೆಜೋಳ, ದ್ರಾಕ್ಷಿ, ಕಬ್ಬು ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ಆದರೂ ಇವರು ವಾಸಿಸುವ ಹಟ್ಟಿ-ಹಳ್ಳಿಗಳಲ್ಲಿ ಸರಿಯಾದ ಮಾರುಕಟ್ಟೆ ವ್ಯವಸ್ಥೆ ಇಲ್ಲದ್ದಕ್ಕಾಗಿ 'ಹಗ್ಗಕ್ಕೆ ಮುಗ್ಗು ಜೋಳ' ಎನ್ನುವ ಹಾಗೆ ಸಾಲಪಡೆದ ಮುಲಾಜಿಗೆ, ಸ್ಥಳೀಯ ಬಂಡವಾಳದಾರರಿಗೆ ಇಲ್ಲವೆ ಅನಧಿಕೃತ ಸಂಚಾರಿ ದಲ್ಲಾಳಿಗಳಿಗೆ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದುದರಿಂದ, ಪರಿಶ್ರಮಕ್ಕೆ ತಕ್ಕ ಪ್ರತಿಫಲ ಪಡೆಯುವಲ್ಲಿ ಸೋತು ಆರ್ಥಿಕವಾಗಿ ದುರ್ಬಲರಾಗುತ್ತಿದ್ದಾರೆ.

ಈ ರೀತಿ ಸಮುದಾಯವು ಅನುಸರಿಸುತ್ತಿರುವ ಆರ್ಥಿಕ ಚಟುವಟಿಕೆಗಳು ಮಾನವನ ಶ್ರಮ ಸಂಪತ್ತಿನ ಬಳಕೆ ಸಂಪನ್ಮೂಲಗಳ ಪಾತ್ರ, ಜನಸಂಖ್ಯೆ ಶಿಕ್ಷಣದ ಪಾತ್ರ, ಪ್ರಭಾವ, ಕೌಟುಂಬಿಕ ಜೀವನದ ಅಡಚಣೆಗಳು, ಉದ್ಯೋಗಗಳ ಹಂಚಿಕೆಯಿಂದ ಬದಲಾಗುತ್ತಿರುವ ಸಮಾಜದಲ್ಲಿ ನಿರ್ಮಿಸಿಕೊಂಡಿರುವ ರೀತಿ-ನೀತಿ ತಿಳಿಯುವುದು ಅವಶ್ಯವಾಗಿದೆ. ಹೀಗೆ ಸಮುದಾಯದ ಜೀವನ ವಿಧಾನದಲ್ಲಿ ಆರ್ಥಿಕತೆ ಎಂಬುದು ತುಂಬಾ ಮಹತ್ವದ ಪಾತ್ರ ವಹಿಸುತ್ತದೆ. ಈ ಎಲ್ಲಾ ಬದಲಾವಣೆಗಳಿಂದ ಸಾಂಸ್ಕೃತಿಕ ಅಂಶಗಳಾದ ಸಾಮಾಜಿಕ, ರಾಜಕೀಯ, ಧಾರ್ಮಿಕ ರೀತಿ-ನೀತಿಗಳಲ್ಲಿನ ಬದಲಾವಣೆಗಳು ಆರ್ಥಿಕ ವ್ಯವಸ್ಥೆಯ ಆಧಾರದ ಮೇಲೆ ನಿರ್ಧಾರವಾಗುತ್ತವೆ.

ಯಾವುದೇ ಒಂದು ಸಮುದಾಯದ ಸರ್ವಾಂಗೀಣ ಆಶಯಗಳು ರೂಪುಗೊಳ್ಳುವುದು ಆರ್ಥಿಕವಾಗಿ ಆ ಸಮುದಾಯ ಯಾವ ಸ್ಥಿತಿಯಲ್ಲಿದೆ ಎಂಬುದರಿಂದ. ಹಾಗೂ ಬದುಕಿನ ಎಲ್ಲಾ ವಿವರಗಳು ರೂಪುಗೊಳ್ಳುವುದು ಯಾವ ಬಗೆಯ ಉತ್ಪಾದನಾ ಚಟುವಟಿಕೆಯಲ್ಲಿ ಪಾಲ್ಗೊಂಡಿದೆ ಎಂಬುದರಿಂದ. ಕಾರಣ ಆರ್ಥಿಕ ಚಟುಮಟಿಕೆಗಳು ಸಮುದಾಯವೊಂದರ ಬದುಕಿನ ಗಡಿಯನ್ನು ಅವಲಂಬಿಸಿವೆ. ಇವರಲ್ಲಿನ

ಶಿಕ್ಷಣ ಮತ್ತು ಬಂಡವಾಳದ ಕೊರತೆಯಿಂದಾಗಿ ವ್ಯಾಪಾರ ವಹಿವಾಟಿನಲ್ಲಿಯೂ ಇವರು ಅಷ್ಟಾಗಿ ಪಾಲ್ಗೊಳ್ಳುವುದಿಲ್ಲ.

ಮೂಲತಃ ಬೇಟೆಯಾಡುವುದು ಇವರ ಉದ್ಯೋಗವಾಗಿದ್ದಿತು. ಹೊಲಗದ್ದೆಗಳಲ್ಲಿ ಹಳ್ಳಕೊಳ್ಳಗಳಲ್ಲಿ, ಕಳ್ಳತನವನ್ನು ಮಾಡುತ್ತಿದ್ದರು. ಇದಕ್ಕೆ ಕಾರಣ ಇವರಲ್ಲಿನ ಕಡುಬಡತನ. ಅಂದರೆ ಇವತ್ತಿಗೂ ಈ ಪರಿಸರದಲ್ಲಿ ಬಡತನ ರೇಖೆಗಿಂತ ಕೆಳಗಿದ್ದು ಜೀವನ ಸಾಗಿಸುತ್ತಿದ್ದಾರೆ. ಇವರಿಗೆ ತಮ್ಮದೇ ಆದ ಸ್ವಂತ ಜಮೀನು ಇಂದಿಗೂ ಕೆಲವರಿಗೆ ಇಲ್ಲವೇ ಇಲ್ಲ. ಬೇರೆ-ಬೇರೆ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಆಸಕ್ತಿ ವಹಿಸುತ್ತಿಲ್ಲ. ಹಾಗಾಗಿ ಇಲ್ಲಿಯ ವಾಲ್ಮೀಕಿ ಸಮುದಾಯದವರ ಬಹುತೇಕ ಜೀವನ ಕಷ್ಟದಾಯಕವಾಗಿದೆ ಎಂತಲೇ ಹೇಳಬಹುದು. ಆದಾಗ್ಯೂ ಹಲಕೆಲವರು ವಿದ್ಯಾವಂತರಾಗಿದ್ದು ಅಥವಾ ವಿದ್ಯೆ ಕಲಿಯದಿದ್ದರೂ ಆಧುನಿಕತೆಯ ಪ್ರಭಾವ ಮತ್ತು ನಾವು ಕೂಡ ಇತರರಂತೆ ಮುಂದೆ ಬರಬೇಕು ಎನ್ನುವ ಕಾರಣದಿಂದ ಇತ್ತೀಚಿನ ದಿನಗಳಲ್ಲಿ ಬದಲಾವಣೆಯನ್ನು ಹೊಂದುತ್ತಲಿದ್ದಾರೆ. ತಮ್ಮ ಆರ್ಥಿಕ ಜೀವನ ಸುಧಾರಿಸಿಕೊಳ್ಳಲು ಇಂದು ವ್ಯವಸಾಯ ವೃತ್ತಿಯನ್ನು ನಿರ್ವಹಿಸುತ್ತಿದ್ದಾರೆ. ಹಲಕೆಲವರು ಕೂಲಿಕೆಲಸವನ್ನು ಮಾಡಿಕೊಂಡು ಕೈಗಾರಿಕೆಯಲ್ಲಿಯೂ ಕೂಡ ಕೂಲಿ ಕಾರ್ಮಿಕರಾಗಿ ದುಡಿದು ಆರ್ಥಿಕ ಪ್ರಬಲತೆಯನ್ನು ಹೊಂದುತ್ತಿದ್ದಾರೆ. ಸರಕಾರದ ಹಲವಾರು ಯೋಜನೆಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಉದ್ಯೋಗ ಪಡೆಯಲು ತರಬೇತಿ ಪಡೆಯುವುದು, ಬ್ಯಾಂಕುಗಳ ಮೂಲಕ ಸಾಲಸೌಲಭ್ಯಗಳನ್ನು ಪಡೆಯುವುದು, ಸರಕಾರಿ ಆಶ್ರಯ ಯೋಜನೆಯಂತಹ ಮನೆಗಳನ್ನು ಕಟ್ಟಿಸಿಕೊಳ್ಳುವುದು, ಗಂಗಾಕಲ್ಯಾಣ ಯೋಜನೆಯ ಮೂಲಕ ನೀರಾವರಿ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ.

ಅಲ್ಲದೆ ಅಥಣಿ ಪರಿಸರದ ೧೮-೨೦ಹಳ್ಳಿಗಳಲ್ಲಿ ಈ ಸಮುದಾಯದವರು ವಾಸವಾಗಿದ್ದು ಅವುಗಳಲ್ಲಿ ಅರ್ಧದಷ್ಟು ಹಳ್ಳಿಗಳಲ್ಲಿ ನೀರಾವರಿಯ ಪ್ರದೇಶವಿದ್ದು, ಇವರು ಅಧಿಕ ಪ್ರಮಾಣದಲ್ಲಿ ಕಬ್ಬು ಬೆಳೆದು ತಮ್ಮ ಆರ್ಥಿಕತೆಯನ್ನು ಅಭಿವೃದ್ಧಿಪಡಿಸಿಕೊಂಡಿದ್ದಾರೆ. ಇನ್ನರ್ಧ ಹಳ್ಳಿಗಳಲ್ಲಿ ನೀರಾವರಿ ವ್ಯವಸ್ಥೆಯು ಇಲ್ಲದ ಕಾರಣ ತೆರೆದಬಾವಿ, ಕೊಳವೆಬಾವಿಗಳ ಮೂಲಕ ಮಳೆಯನ್ನು ಅವಲಂಬಿಸಿದ್ದು, ಅರಿಷಿಣ, ದಾಳಿಂಬೆ, ಸೂರ್ಯಕಾಂತಿ, ಶೇಂಗಾ, ಹೆಸರು, ಮಡಕೆ, ಜೋಳ, ಮೆಕ್ಕೆಜೋಳ, ಸಜ್ಜೆ ಮುಂತಾದ ಬೆಳೆಗಳನ್ನು ಬೆಳೆದು ತಮ್ಮ ಆರ್ಥಿಕ ಜೀವನವನ್ನು ಸರಿಯಾದ ರೀತಿಯಲ್ಲಿ ಸಾಗಿಸಿಕೊಂಡು ಹೋಗುತ್ತಾರೆ. ಅಥಣಿ ಪರಿಸರದಲ್ಲಿ ೪ ಸಕ್ಕರೆ ಕಾರ್ಖಾನೆಗಳು, ಒಂದು ಖಾದಿ ಗ್ರಾಮೋದ್ಯೋಗ, ಒಂದು ಎಣ್ಣೆ ಕೈಮಗ್ಗದವು ಇದ್ದು ಈ ವಲಯದಲ್ಲಿ ವಾಲ್ಮೀಕಿ ಸಮುದಾಯದವರು ತಕ್ಕಮಟ್ಟಿಗೆ ಉದ್ಯೋಗ ಪಡೆದುಕೊಳ್ಳುತ್ತಿದ್ದಾರೆ.

ಇವರಲ್ಲಿ ಬಹಳಷ್ಟು ಜನರು ಸರ್ಕಾರಿ ಸರ್ಕಾರಿಯೇತರ ಸಂಸ್ಥೆಗಳಲ್ಲಿ ಉದ್ಯೋಗವನ್ನು ಪಡೆದುಕೊಂಡು ಆರ್ಥಿಕತೆಯನ್ನು ಅಭಿವೃದ್ಧಿಪಡಿಸಿಕೊಂಡಿದ್ದಾರೆ. ಇವರಲ್ಲಿ ಕೂಲಿ ಕಾರ್ಮಿಕರ ಸಂಖ್ಯೆಯು ಹೆಚ್ಚಾಗಿದ್ದು, ಪ್ರತಿನಿತ್ಯ ಹೊಲಗದ್ದೆಗಳಲ್ಲಿ, ಕಾರ್ಖಾನೆಗಳಲ್ಲಿ, ಸರಕಾರಿ ಕಾಮಗಾರಿಗಳಲ್ಲಿ ಶ್ರಮಿಸುತ್ತಿದ್ದಾರೆ. ಇವರನ್ನು ಅಧಿಕಾರಿಗಳು, ಬಂಡವಾಳಗಾರರು ನಯವಾಗಿ ಶೋಷಣೆ ಮಾಡುವುದು ಕಂಡುಬರುತ್ತದೆ.

ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸಕೊಟ್ಟು ಪ್ರತಿಫಲ ಕಡಿಮೆ ಕೊಡುವುದು ಅಲ್ಲದೆ ಇವರಿಗೆ ಜೀವವಿಮೆ, ವಸತಿ, ಪೌಷ್ಟಿಕಆಹಾರ, ಔಷಧೋಪಚಾರ ಮುಂತಾದ ಮೂಲ ಸೌಲಭ್ಯಗಳಿಂದಲೂ ವಂಚಿತರಾಗಿಯೂ ಹಗಲು-ರಾತ್ರಿ ದುಡಿದು ಬೆಂಡಾಗುತ್ತಿದ್ದಾರೆ. ಇವರಿಗೆ ಭದ್ರತೆಯನ್ನು ನೀಡಲು ಸರಕಾರ ಸಂಘ ಸಂಸ್ಥೆಗಳು ಸಹಕರಿಸುತ್ತಿವೆ.

ಅಥಣಿ ಪರಿಸರದಲ್ಲಿ ೯ ಬ್ಯಾಂಕುಗಳಿದ್ದು, ಅವುಗಳಲ್ಲಿ ೫ ರಾಷ್ಟ್ರೀಕೃತ ಬ್ಯಾಂಕುಗಳಿವೆ. ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕುಗಳ ಮೂಲಕ ಸಾಲವನ್ನು ಕೊಡುವ ವ್ಯವಸ್ಥೆಯನ್ನು ಮಾಡಲಾಗಿದೆ. ೬೦ಕ್ಕಿಂತ ಅಧಿಕ ಸಹಕಾರಿ ಬ್ಯಾಂಕುಗಳಿದ್ದು ಇಲ್ಲಿಂದಲೂ ಸಾಲವನ್ನು ಪಡೆದುಕೊಳ್ಳುತ್ತಿದ್ದಾರೆ. ಇವರಿಗೆ ಬ್ಯಾಂಕುಗಳು ಕಡಿಮೆ ಬಡ್ಡಿದರದಲ್ಲಿ ಸಾಲ ಒದಗಿಸುತ್ತಿವೆ. ಈ ಮುಖಾಂತರವಾಗಿ ಆರ್ಥಿಕವಾಗಿ ಪ್ರಬಲತೆಯನ್ನು ಸಾಧಿಸುತ್ತಿದ್ದಾರೆ.

ಅಧ್ಯಾಯ ಆರು

ಇತರೆ ಸಮುದಾಯದೊಂದಿಗೆ ಸಂಬಂಧ

ಅಧ್ಯಾಯ ಆರು

ಇತರೆ ಸಮುದಾಯದೊಂದಿಗೆ ಸಂಬಂಧ

ಜಗತ್ತಿನ ಕೆಲವು ಬುಡಕಟ್ಟುಗಳನ್ನು ನಾವು ಸಮುದಾಯಗಳು ಎಂದು ಕರೆಯಲಾಗುತ್ತಿದ್ದು, ವಾಲ್ಮೀಕಿ ಸಮುದಾಯವು ಒಂದು ಬುಡಕಟ್ಟು ಆಗಿದೆ. ಇಂತಹ ಬುಡಕಟ್ಟುಗಳು ಒಂದು ಗೊತ್ತಾದ ಸ್ಥಳದಲ್ಲಿ ಸಾಮೂಹಿಕವಾಗಿ ಬದುಕುವುದು ಸಮುದಾಯವೊಂದರ ಲಕ್ಷಣವು ಆಗಿರುತ್ತದೆ. ಅವರು ವಾಸಿಸುವ ಪರಿಸರದ ಇತರೆ ಸಮೂಹದೊಂದಿಗೆ ಪರಸ್ಪರಾವಲಂಬನೆಯಿಂದ ಬದುಕುವುದನ್ನು ನಾವು ಇತ್ತೀಚಿನ ದಿನಮಾನಗಳಲ್ಲಿ ಕಾಣುತ್ತೇವೆ. ಆಧುನಿಕತೆಯು, ನವನಾಗರೀಕತೆಯು ಬೆಳೆದಂತೆಲ್ಲ ನಗರೀಕರಣಕ್ಕೆ ಒಳಗಾಗುತ್ತಿರುವ ಈ ಸಂದರ್ಭದಲ್ಲಿ ಬುಡಕಟ್ಟು ಸಮುದಾಯಗಳು ತಮ್ಮ ಮೂಲನೆಲೆ, ವೃತ್ತಿ, ನಂಬಿಕೆ, ಸಂಪ್ರದಾಯ, ಆಚರಣೆಗಳಂತಹ ಪದ್ಧತಿಯಿಂದ ಹೊರಬರುವ ಹಾಗೆಯೇ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಮತ್ತೊಂದು ಮುಂದುವರಿದ ಸಮುದಾಯದ ಸಂಸ್ಕೃತಿಯನ್ನು ಅನುಸರಿಸುವಲ್ಲಿ ದಾಪುಗಾಲು ಇಡುವುದನ್ನು ನಾವು ಎಲ್ಲೆಲ್ಲಿಯೂ ಕಾಣಬಹುದು.

ಹೀಗೆ ನಾಗರೀಕತೆಯು ಬೆಳೆದಂತೆಲ್ಲ ಬುಡಕಟ್ಟು ಸಮುದಾಯಗಳು ಸಮಾಜಗಳಾಗಿ ಪರಿವರ್ತನೆಯನ್ನು ಹೊಂದುತ್ತಲಿವೆ. ಇಂದು ಬಹುತೇಕ ಸಮಾಜಗಳಾಗಿ ಅಸ್ತಿತ್ವವನ್ನು ಪಡೆಯುತ್ತಲಿವೆ. ಈ ಹಿನ್ನೆಲೆಯಲ್ಲಿ ಅಥಣಿ ಪರಿಸರದ ವಾಲ್ಮೀಕಿ ಸಮುದಾಯವು ಹಲವಾರು ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ಕಾರಣೀಭೂತವಾಗಿದೆ ಎಂತಲೇ ಹೇಳಬಹುದು.

ಈ ಪರಿಸರದ ಕಲ್ಲೊತ್ತಿ, ಶೇಡಬಾಳ, ಬ್ಯಾಡರಹಟ್ಟಿ, ರಡ್ಡೇರಹಟ್ಟಿ, ಐನಾಪುರ, ಅಡಹಳ್ಳಿ ಮುಂತಾದ ಹಳ್ಳಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದು ಇವರ ಮೂಲ ಉದ್ಯೋಗ ಬೇಟೆಯಾಡುವುದು. ಮಳೆಯ ಮರುದಿನ ಮೊಲಗಳ ಹೆಜ್ಜೆಗುರುತು ಹಿಡಿದು ಬೇಟೆಯಾಡಿಕೊಂಡು ಊಟಮಾಡುವುದರ ಮುಖಾಂತರ, ಅಥವಾ ಇನ್ನಾವುದೇ ಸಾಕುಪ್ರಾಣಿಯನ್ನು ಸ್ತ್ರೀದೇವತೆಗಳಿಗೆ ರಾಜಾರೋಷವಾಗಿ ಬಲಿಕೊಟ್ಟು, ಅಲ್ಲಿಯೇ ಮಾಂಸದಡುಗೆ ಮಾಡಿಕೊಂಡು, ಕುಡಿದು ಕುಪ್ಪಳಿಸಿ ಉಂಡು ಉಟ್ಟು ಇತರೆ ಸಮಾಜದವರಿಗೆ ಅಸಹ್ಯ ಹುಟ್ಟಿಸುವಂತಹ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾಗ, ಮುಂದುವರಿದ ಸಮಾಜದವರು ಇವರನ್ನು ನೋಡಿ ಮೂಗು ಮುರಿದುಕೊಳ್ಳುವಂತಹ ಕಾಲ ಒಂದಿತ್ತು. ಆದರೆ ಇಂದು ಈ ಸಮುದಾಯದವರು ಈ ಕುರಿತು ಪ್ರಜ್ಞಾವಂತರಾಗಿದ್ದು ಇಂತಹ ಪದ್ಧತಿಗಳನ್ನು ತಮ್ಮ ತಮ್ಮ ಇತಿಮಿತಿಯಲ್ಲಿ ಮುಚ್ಚುಮರೆಯಲ್ಲಿ ಅನುಸರಿಸಿಕೊಂಡು ಬಂದು ಇತರೆ ಸಮುದಾಯವರಿಗೆ ತಮ್ಮನ್ನು ಕಂಡಾಗ ಕೀಳರಿಮೆ ಆಗದಂತೆ ಜಾಗೃತಿಯನ್ನು ವಹಿಸುತ್ತಾ ಬಂದಿದ್ದಾರೆ.

ಶಿಕ್ಷಣದಿಂದ ವಂಚಿತರಾದ ಇವರು ಕಳ್ಳತನ, ಹಿಂಸೆ ಮೊದಲಾದ ದುಷ್ಕೃತ್ಯಗಳನ್ನು ಎಸಗುತ್ತಿದ್ದರಂತೆ. ಆದರೆ ಈಗ ಈ ತರದ ಕೃತ್ಯಗಳಿಂದ ಮುಕ್ತರಾಗಿದ್ದಾರೆ. ತಿಳುವಳಿಕೆ ಬಂದಿದ್ದು, ದುಡಿದು ತಿನ್ನುವ ಕೆಲಸಕ್ಕೆ ಮುಂದಾಗಿದ್ದಾರೆ. ಇದು ಇತರ ಮುಂದುವರಿದ ಸಮುದಾಯದವರೊಂದಿಗಿನ ಸಂಬಂಧ, ಅವರೊಂದಿನ ಒಡನಾಟ ಮತ್ತು ಪಾಲ್ಗೊಳ್ಳುವಿಕೆಯನ್ನು ಅವರ ಸಾಮಾಜಿಕ ಸ್ಥಾನಮಾನಗಳ ಚಿತ್ರಣವನ್ನು ಅನಾವರಣಗೊಳಿಸುತ್ತದೆ. ಅಂದರೆ ವಾಲ್ಮೀಕಿ ಸಮುದಾಯದವರು ಯಾವುದೇ ಮದುವೆ, ಮುಂಜಿವೆ, ನಾಮಕರಣದಂತಹ ಸಂದರ್ಭಗಳಿಗೂ, ಹಾಗೂ ಕೇವಲ ಇವರ ಮನೆಯೊಳಗೆ ಇತರರು ಬರುವುದನ್ನು ಕಾಣಲಾಗುತ್ತಿರಲಿಲ್ಲ. ಒಂದು ರೀತಿಯ ಅಸ್ಪೃಶ್ಯತಾ ಮನೋಭಾವನೆ ಅವರಲ್ಲಿತ್ತೆಂದು ತಿಳಿಯುತ್ತದೆ. ಹಾಗೆಯೇ ವಾಲ್ಮೀಕಿ ಸಮುದಾಯದವರು ಮುಂದುವರಿದ ಸಮುದಾಯದವರ ಮದುವೆ, ಇನ್ನಿತರೆ ಕಾರ್ಯಗಳಲ್ಲಿ ಪಾಲ್ಗೊಳ್ಳುವಂತಿರಲಿಲ್ಲ. ಜೊತೆಗೆ ಈ ಸಮುದಾಯದವರ ಮನೆಗೆ ಹೋಗದೆ ಮನೆಯ ಹೊರಗಡೆಯೇ ನಿಲ್ಲಿಸಿ ಮಾತಾಡುತ್ತಿದ್ದರು. ಒಂದು ವೇಳೆ ಒಳಗಡೆ ಕರೆದುಕೊಂಡರೂ ಅದು ಹುಸಿ, ಅಥವಾ ಗೋದಲಿಕಟ್ಟೆಯವರೆಗೂ ಅಷ್ಟೆ. ಪಡಸಾಲಿಯವರೆಗೂ ಕರೆಯುತ್ತಿರಲಿಲ್ಲ. ಅಲ್ಲದೆ ಚಹಾ, ನಾಸ್ಟಗಳನ್ನು ತೆಗೆದುಕೊಂಡರೆ ತಾಟು, ಕಪ್ಪುಗಳನ್ನು ಹೊರಗಡೆಯೇ ತಿಕ್ಕಿ ತೊಳೆದು ಬರಬೇಕಾಗುತ್ತಿತ್ತು. ಇವರೂ ಕೂಡ ಆ ಮಟ್ಟದ ಕೀಳರಿಮೆಯನ್ನು ಇಟ್ಟುಕೊಂಡಿದ್ದರು. ಸರಿಯಾದ ರೀತಿಯಲ್ಲಿ ಇತರ ಸಮುದಾಯದವರೊಂದಿಗೆ ಬಳಕೆಯಾಗುತ್ತಿರಲಿಲ್ಲ. ಆದರೆ ಇಂದು ಹತ್ತಾರು ವರ್ಷಗಳಲ್ಲಿ ಬಹಳಷ್ಟು ಬದಲಾವಣೆಗಳುಂಟಾಗಿ ಇವರಲ್ಲಿ ಸಾಮರಸ್ಯ, ಅನ್ಯೋನ್ಯತೆ, ಹೊಂದಾಣಿಕೆಯನ್ನು, ಬಳಕೆಯನ್ನು ಕಾಣಬಹುದು. ಇದಕ್ಕೆ ಕಾರಣ ವಾಲ್ಮೀಕಿ ಸಮುದಾಯದವರಲ್ಲಾದ ಬದಲಾವಣೆ. ಇವರ ಭಾಷೆ, ಉಡುಗೆ ತೊಡುಗೆ, ಆಹಾರ ಪದ್ಧತಿ, ಸ್ವಚ್ಛತಾ ಪ್ರಜ್ಞೆ ಇವರನ್ನು ಇತರರು ತಮ್ಮ ಕೆಲಸ ಕಾರ್ಯ, ಶುಭ ಶೋಭಾನಾದಿಗಳಲ್ಲಿ ಆಹ್ವಾನಿಸುವಂತೆ ಮಾಡಿದೆ.

ಧಾರ್ಮಿಕ ಸಂದರ್ಭಗಳಲ್ಲಿಯೂ ವಾಲ್ಮೀಕಿ ಸಮುದಾಯದವರು ತಮ್ಮ ಕುಲದೈವದ ಜೊತೆಗೆ ದುರುಗವ್ವಾ, ಮುರುಗವ್ವಾ, ಲಕ್ಷ್ಮೀದೇವಿ, ಯಲ್ಲಮ್ಮ, ಹನುಮಪ್ಪ ದೇವರುಗಳನ್ನು ಹೊರತುಪಡಿಸಿ, ಸಿದ್ದೇಶ್ವರ, ಶ್ರೀಶಿವಯೋಗಿ, ರಾಘವೇಂದ್ರ, ಈರಣ್ಣ, ಬಸವಣ್ಣ, ಸಂಗಮೇಶ್ವರ, ಈಶ್ವರ ಮುಂತಾದ ದೇವರುಗಳನ್ನು ಪೂಜಿಸುತ್ತಿರುವುದು ಮತ್ತೊಂದು ಕಾರಣ. ಅಲ್ಲದೆ ತಮ್ಮ ದೇವತಾ ಆರಾಧನೆಯ ಸಂದರ್ಭದಲ್ಲಿನ ಅನಿಷ್ಟಪದ್ಧತಿಗಳನ್ನು ಅರ್ಥವಿಲ್ಲದ ಆಚರಣೆಗಳನ್ನು ತಕ್ಕಮಟ್ಟಿಗೆ ಕಡಿಮೆಮಾಡಿಕೊಂಡು ಶುಚಿತ್ವದ ಕಡೆಗೆ ಗಮನಹರಿಸುತ್ತಾರೆ. ಒಂದು ಸಂದರ್ಭದಲ್ಲಿ ಮುಂದುವರಿದ ಸಮುದಾಯಗಳ ಮಂದಿರಕ್ಕೂ ಪ್ರವೇಶವಿಲ್ಲದ ಈ ಜನರಿಗೆ ಇಂದು ಇವರ ಶುಭ್ರತೆಗನುಗುಣವಾಗಿಯೇ ಅವಕಾಶ ಸಿಕ್ಕಿದೆ ಅಲ್ಲದೆ ದೀಪಾವಳಿಯಲ್ಲಿ ಲಕ್ಷ್ಮೀಪೂಜೆ ಮಾಡುವುದು, ದಸರಾದಲ್ಲಿ ದೀಪಾರಾದನೆ ಮಾಡುವುದು ಹಾಗೆಯೇ ಸತ್ಯನಾರಾಯಣನಂತ ಪೂಜೆ ವ್ರತಗಳನ್ನು ಇಂದು ಇವರು ಮಾಡುತ್ತಾ ಬಂದಿದ್ದು, ಇತರರನ್ನು ಈ ಸಂದರ್ಭದಲ್ಲಿ ಆಹ್ವಾನಿಸಿ ಪ್ರಸಾದ ವಿತರಣೆಯಂತಹ ಸಂದರ್ಭವು ಇವರನ್ನು ಮತ್ತಷ್ಟು ಒಂದುಗೂಡಿಸಿದೆ. ಮದುವೆ ಕಾರ್ಯಕ್ರಮ ಅಥವಾ ಇತರೆ ದೇವತಾ ಕಾರ್ಯಕ್ರಮಗಳಲ್ಲಿ ಪರಸ್ಪರರು

ಭಾಗವಹಿಸುತ್ತಾರೆ. ಹೀಗೆ ವಾಲ್ಮೀಕಿ ಸಮುದಾಯವು ಇತರೆ ಸಮುದಾಯದೊಂದಿಗೆ ಅನ್ಯೋನ್ಯತೆಯ ಸಂಬಂಧವನ್ನು ಕಲ್ಪಿಸಿಕೊಳ್ಳುತ್ತಿದೆ. ಇದು ಸಂಪೂರ್ಣವಾಗಿ ಸಾಗಿಬಂದಿದೆಯೆಂದಲ್ಲ. ಈ ಪರಿಸರದ ಕೆಲ ಊರುಗಳಲ್ಲಿ ಇನ್ನು ತಮ್ಮ ಮೂಢನಂಬಿಕೆಗಳಿಂದ ಜನರು ಹೊರಬಂದಿಲ್ಲ. ಇತರರೊಂದಿಗೆ ಹೊಂದಾಣಿಕೆಯ ಮನೋಭಾವನೆಯಿಂದ ಜೀವನ ನಡೆಸುತ್ತಿಲ್ಲ. ಕೆಲ ಗ್ರಾಮಗಳಲ್ಲಿ ಕೀಳರಿಮೆಗೆ ಒಳಗಾಗಿ ತಮ್ಮನ್ನು ತಾವು ಕೀಳು ಎಂದು ತಿಳಿದುಕೊಂಡು ಯಾವುದೇ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಅಷ್ಟರ ಮಟ್ಟಿಗೆ ಕಂಡುಬರುತ್ತಿಲ್ಲ.

ಕೆಲ ಗ್ರಾಮಗಳಲ್ಲಿ ತಮ್ಮ ಸಂಸ್ಕೃತಿಯ ಮೂಲ ನೆಲೆಗಳಾದ ಆಚರಣೆ, ಸಂಪ್ರದಾಯ, ನಂಬಿಕೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದು, ಇತರರು ಮೂಗುಮುರಿಯುವಂತೆ ನಡೆದುಕೊಳ್ಳುತ್ತಿದ್ದಾರೆ. ಅಲ್ಲದೆ ಬಹಳಷ್ಟು ಜನರು ವೀರಶೈವರೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದ್ದಾರೆ. ಹಾಗೆಯೇ ತಮ್ಮ ಸಮುದಾಯದಲ್ಲಿ ಯಾವುದೇ ಘಟನೆಗಳು ನಡೆದರೂ, ಅಂದರೆ ಹುಟ್ಟು, ಸಾವು, ಸೀಮಂತ, ನಾಮಕರಣ ಮುಂತಾದ ಸಂದರ್ಭದಲ್ಲಿ ಜಾತಕವನ್ನು ಅಥವಾ ಹೊತ್ತಿಗೆಯನ್ನು ತೆಗಿಸಿ ನೋಡಿ ಬ್ರಾಹ್ಮಣ ಸಮುದಾಯದ ಶಾಸ್ತ್ರ ಜೋತಿಷಿಗಳಿಂದ ಮಾಹಿತಿ ಪಡೆದು ಅವರು ಹೇಳಿದ ರೀತಿಯಲ್ಲಿಯೇ ಹೋಮ, ದಾನಗಳನ್ನು ಪೂರೈಸುವುದು, ನಡೆದುಕೊಳ್ಳುವುದು ರೂಢಿಯಲ್ಲಿ ಬಂದಿರುವುದನ್ನು ನೋಡಿದರೆ, ಬ್ರಾಹ್ಮಣ ಸಮುದಾಯದವರೊಂದಿಗೂ ಅನ್ಯೋನ್ಯತೆಯ ಮಧುರ ಸಂಬಂಧ ಹೊಂದಿದ್ದಾರೆ.

ಹಾಗೆಯೇ ತಮ್ಮ ವೃತ್ತಿ ಮತ್ತು ವ್ಯವಸಾಯದ ಸಾಮಗ್ರಿಗಳನ್ನು ಕಂಬಾರರು ಹಾಗೂ ಬಡಿಗೇರು ಕಡೆಯಿಂದ ಮನೆಯಲ್ಲಿನ ಇದ್ದಿಲು ಅಥವಾ ದವಸಧಾನ್ಯಗಳನ್ನು ಕೊಟ್ಟು ಮಾಡಿಸಿಕೊಳ್ಳುವುದು, ವರ್ಷದ ಸುಗ್ಗಿಯ ದಿನಗಳಲ್ಲಿ ಕಾಳು ಕಡಿಯನ್ನು ಕೊಡುವುದು, ಇವೆಲ್ಲವನ್ನು ನೋಡಿದಾಗ ವಾಲ್ಮೀಕಿ ಸಮುದಾಯದವರು ಈ ಪರಿಸರದಲ್ಲಿ ಯಾರಿಂದಲೂ ವೈರತ್ವವನ್ನು ಸಾಧಿಸುವುದು, ಒಂದು ಸಮುದಾಯವನ್ನು ಎತ್ತಿಕಟ್ಟುವುದು, ಇನ್ನೊಂದು ಸಮುದಾಯದ ಕುರಿತು ಕೀಳಾಗಿ ಮಾತಾಡಿಕೊಳ್ಳುವುದು ಎಲ್ಲಿಯೂ ಕಂಡುಬರುವುದಿಲ್ಲ. ಎಲ್ಲರ ಜೊತೆಯಲ್ಲಿ ಆತ್ಮೀಯವಾಗಿ ಬೆರೆತುಕೊಂಡು ಬಂದಿರುವುದು ಕಂಡುಬರುತ್ತದೆ.

ಇಂದು ಹಲವಾರು ಮುಂದುವರಿದ ಸಮುದಾಯದವರು ಹಬ್ಬ-ಹರಿದಿನಗಳನ್ನು ಕಂಡು, ಇವರು ಸ್ವಚ್ಛತೆಯ ಕಡೆಗೆ ಹೆಚ್ಚಿನ ಗಮನಕೊಡುತ್ತಿದ್ದು, ಅವರಿಗೆ ಇಷ್ಟವಾಗುವಂತೆ ಆಹಾರ, ಆಚಾರ-ವಿಚಾರಗಳಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುತ್ತ ಅದೇ ಸಾಮರಸ್ಯದಿಂದ ಜೀವನ ನಡೆಸುವ ಸಿದ್ಧತೆಯನ್ನು ಮಾಡಿಕೊಂಡಿದ್ದಾರೆ.

ಮೂಲದಿಂದಲೂ ಬೇಟೆಯಾಡುತ್ತಾ, ಕಳ್ಳತನ ಮಾಡುತ್ತಾ ಬಂದಂತಹ ಸಮುದಾಯವು ಕಾಲಾನಂತರ ಬೇಟೆಯಿಂದ, ವ್ಯವಸಾಯ ವೃತ್ತಿಯನ್ನು, ಪಶುಪಾಲನಾ ವೃತ್ತಿಯನ್ನು ಮಾಡುವುದನ್ನು ರೂಢಿಸಿಕೊಂಡು ಬಂದಿರುವುದನ್ನು ಹಾಗೆಯೇ ಅವಶ್ಯಬಿದ್ದಲ್ಲಿ/ಬಹುತೇಕ ಈ ಸಮುದಾಯದವರು ಸೈನಿಕ ವೃತ್ತಿಯನ್ನು

ನಿರ್ವಹಿಸಿಕೊಂಡು ಬಂದಿರುವುದು ಇಂದಿಗೂ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಅಥಣಿ ಪರಿಸರದ ಬಹಳಷ್ಟು ಜನ ವಾಲ್ಮೀಕಿ ಸಮುದಾಯದವರು ಮಿಲ್ಟ್ರಿಪಡೆಯಲ್ಲಿ ಸೇವೆಸಲ್ಲಿಸುತ್ತಾ ಬಂದು, ಅಲ್ಲಿ ಮಾಡಿದ ಸಾಧನೆಯಿಂದಾಗಿ ಈ ಪರಿಸರದಲ್ಲಿ ಇತರರು ಗೌರವಿಸಿ ಸತ್ಕರಿಸುವುದನ್ನು ಕಂಡಾಗ ಈ ಸಮುದಾಯದವರ ಮೇಲೆ ಇತರೆ ಸಮುದಾಯದವರಿಗೆ ಸಹಜವಾಗಿ ಹೆಮ್ಮೆ ಹಾಗೂ ಗೌರವ ಹುಟ್ಟುವಂತೆ ನಡೆದುಕೊಂಡಿದ್ದಾರೆ.

ಹೊಟ್ಟೆ ಪಾಡಿಗಾಗಿ ಇಂದು ಹಲವಾರು ವೃತ್ತಿಯನ್ನು ಕೈಗೊಂಡಿರುವ ಇವರು ಜಾಗತೀಕರಣದಂತಹ ಸಂದರ್ಭದಲ್ಲಿ ತಮ್ಮ ಮೂಲ ಸಂಸ್ಕೃತಿಗೆ ಧಕ್ಕೆಯುಂಟಾಗದಂತೆ ಇತರರೊಂದಿಗೆ ಬೆರೆತು ಆಧುನಿಕತೆಯ ಭರಾಟೆಯಲ್ಲಿಯೂ ಸಾಮಾಜಿಕವಾಗಿ ಬದಲಾವಣೆಯನ್ನು ಹೊಂದುತ್ತಿದ್ದಾರೆ. ಇನ್ನು ಆರ್ಥಿಕವಾಗಿ ಪ್ರಾಬಲ್ಯವನ್ನು ಪಡೆದಿರುವ ಕೆಲವೆಡೆ ಇವರು ಇತರರೊಂದಿಗೆ ತಾವಾಗಿಯೇ ಗುರುತಿಸಿ ಗೌರವ ಬಯಸದಿದ್ದರೂ, ಮುಂದುವರಿದ ಸಮಾಜದವರು ಇವರನ್ನು ಗೌರವಿಸುವುದನ್ನು ಕಾಣಬಹುದು.

ಇನ್ನು ಕುಡಚಿ, ಬೇಡರಹಟ್ಟಿ, ಐನಾಪುರದಲ್ಲಿ ವಾಲ್ಮೀಕಿ ಸಮಾಜ ಸೇವಾಸಂಘ, ಸಮುದಾಯ ಭವನದಂತಹ ಉದ್ಘಾಟನಾ ಸಮಾರಂಭದಲ್ಲಿ ಬಹುತೇಕ ಇತರೆ ಸಮುದಾಯದವರು ನಿಂತು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಯಾಗಲು ಮುಂದಾಗಿದ್ದುದನ್ನು ನೋಡಿದರೆ ವಾಲ್ಮೀಕಿ ಸಮುದಾಯದವರ ಮೇಲೆ ಒಂದು ರೀತಿಯ ಬ್ರಾತೃತ್ವ ಭಾವನೆಯಿರುವುದು ತಿಳಿದು ಬರುತ್ತದೆ.

ಒಟ್ಟಾರೆ ಯಾವುದೇ ಸಮುದಾಯದವರ ಜೊತೆ ವಿರೋಧಾಭಾಸವನ್ನು ವ್ಯಕ್ತಪಡಿಸದೆ ಮುಂದುವರಿದ ಸಮುದಾಯದವರ ದೇವತೆಗಳನ್ನು ಇವರು ಪೂಜಿಸುತ್ತಾ, ಆರಾಧಿಸಿ ಹರಕೆಯನ್ನು ಹೊತ್ತು ಈಡೇರಿಸಿದರೆ, ಇತರೆ ಸಮುದಾಯದವರು ಅವರಖೋಡ ಆಂಜನೇಯನಿಗೆ, ಯಲ್ಲವ್ವ, ಲಕ್ಷ್ಮಿ ಹಬ್ಬದಂತಹ ಸಂದರ್ಭದಲ್ಲಿ ಪಾಲ್ಗೊಂಡು ಕಾಯಿ-ಕರ್ಪೂರ ಅರ್ಪಿಸುವುದು ದೇವರ ಸೇವೆಮಾಡುವುದು ಕಂಡುಬರುತ್ತದೆ.

ಅಥಣಿಯ ಸಿದ್ದೇಶ್ವರ ಜಾತ್ರೆ, ಈ ಭಾಗದ ವಿವಿಧೆಡೆಯಲ್ಲಿ ನಡೆಯುವ ಜಾತ್ರೆ ಉತ್ಸವಗಳಲ್ಲಿ ಇತರೆ ಸಮುದಾಯದೊಳಗೆ ಸಾರಮಸ್ಯದಿಂದ ಇರುವುದು, ಪಾಲ್ಗೊಳ್ಳುವದು ಕಂಡುಬರುತ್ತದೆ. ಅಲ್ಲದೆ ಮುಸ್ಲಿಂ ಹಬ್ಬಗಳಾದ ಮೊಹರಂ, ರಮಜಾನ್ ಹಬ್ಬದಲ್ಲಿ ಈ ಸಮುದಾಯದವರು ಭಕ್ತಿ, ಶ್ರದ್ಧೆಯಿಂದ ಹಬ್ಬವನ್ನು ಆಚರಿಸಿದರೆ ಮುಸ್ಲಿಂರು ಕೂಡ ಹಿಂದುಗಳ ಎಲ್ಲಾ ಧಾರ್ಮಿಕ ಸಂದರ್ಭದಲ್ಲಿ ಭಾಗಿಯಾಗುತ್ತಾರೆ. ಹಾಗೆಯೇ ಜೈನ ಧರ್ಮೀಯರ ಜೊತೆಗೂ ಇವರು ಅನ್ಯೋನ್ಯತೆಯಿಂದ ಜೀವನ ಸಾಗಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

ಹೀಗೆ ಶೇಡಬಾಳ, ತೆವರೆಟ್ಟಿ, ಐಗಳಿ, ಸತ್ತಿಗಳಲ್ಲಿ ಮೊಹರಂ (ಅಲಾಯಿಹಬ್ಬ) ಹಬ್ಬವನ್ನು ಸಂಭ್ರಮದಿಂದ ವಾಲ್ಮೀಕಿ ಸಮುದಾಯದವರು ಇತರೆ ಸಮುದಾಯದೊಂದಿಗೆ ಸೇರಿ ಆಚರಿಸುವುದನ್ನು ನೋಡಬಹುದು. ಹಾಗೆಯೇ ರಿವಾಯತ ಪದಗಳು ಇಲ್ಲಿ ತುಂಬಾ ಜನಪ್ರಿಯವಾಗಿದ್ದು ಎಲ್ಲರೂ ಒಂದು ಕಡೆ ಕುಳಿತು ಆಸಕ್ತಿಯಿಂದ ಕೇಳುವರು. ಅಲ್ಲದೆ ಅಥಣಿಯ ಮಾಬುಸುಬಾನಿ ಉರುಸು ಅತ್ಯಂತ ಸಂಭ್ರಮದಿಂದ ಜರುಗುತ್ತದೆ.

ಜಾನಪದದಲ್ಲಿ ಬರುವ ಹತ್ತು ಹಲವು ಆಚರಣೆಗಳಾದ ನಾಗರ ಪಂಚಮಿ, ಗುಳ್ಳವ್ವ, ಕಾರಹುಣ್ಣಿಮೆ, ಚರಗ ಚೆಲ್ಲುವುದು, ಬನ್ನಿ ಮುಡಿಯುವುದು, ಸಂಕ್ರಮಣದಂತಹ ಸಂದರ್ಭದಲ್ಲಿ ಹತ್ತು-ಹಲವು ಜನಾಂಗದ ಜನರು ಒಂದೆಡೆ ಸೇರಿ ಒಟ್ಟಾಗಿ ಆಚರಿಸುವುದನ್ನು ಈ ಪರಿಸರ ಪ್ರತಿಹಳ್ಳಿಗಳಲ್ಲಿ ಕಾಣಬಹುದು.

ಅಥಣಿ ಪರಿಸರದ ಕಾಗವಾಡ, ಶೇಡಬಾಳ, ಕಲ್ಲೊತ್ತಿ ಮುಂತಾದ ಊರುಗಳಲ್ಲಿ ಸಾಮರಸ್ಯದಿಂದ ಊರಿನ ಎಲ್ಲಾ ಮತೀಯರು ಸೇರಿ ಆಚರಿಸುವ ಹಬ್ಬ ಕಾರಹುಣ್ಣಿಮೆ. ಇಲ್ಲಿ ಸಾವಿರಾರು ಜನರು ಭಾಗಿಯಾಗಿ ಯಾವ ಎತ್ತು ಕರಿ ಹರಿಯುವುದೆಂದು ನೋಡುವ ಕುತೂಹಲ ತುಂಬಿರುತ್ತದೆ.

ಹುಣಸಟ್ಟಿಯಲ್ಲಿ ಪಂಚಮಿ ಹಬ್ಬ ವೈಶಿಷ್ಟ್ಯಪೂರ್ಣ. ನಾಗಪ್ಪನಿಗೆ ಶಿರಿಯಾಳ ಶೆಟ್ಟಿಯ ದಿವಸ ಊರಿನವರೆಲ್ಲರೂ ಸಾಮೂಹಿಕವಾಗಿ ಹಾಲೆರೆಯುವ ಕಾರ್ಯಕ್ರಮ. ಹಾಲೆರದ ಕುರುಹಾಗಿ ಗಂಡಸರ ಬಲಗೈಗೆ ಕಂಕಣ ಕಟ್ಟಿದರೆ ಹೆಣ್ಣು ಮಕ್ಕಳಿಗೆ ಎಡಗೈಗೆ ಕಂಕಣ ಕಟ್ಟುತ್ತಾರೆ. ಊರಿನ ಚಾವಡಿಯ ಮುಂದೆ ಪ್ರತಿಷ್ಠಾಪಿಸಿದ ನಾಗಪ್ಪನಿಗೆ ಹಾಲನೆರೆಯುತ್ತಾರೆ. ರಾತ್ರಿ ಬಯಲಾಟವಿರುತ್ತದೆ. ಸಂಜೆ ಶಕ್ತಿ ಪ್ರದರ್ಶನಕ್ಕಾಗಿ ವಿವಿಧ ದೈಹಿಕ ಕಸರತ್ತಿನ ಆಟಗಳಿರುತ್ತವೆ. ಇದರಲ್ಲಿ ಬಹುತೇಕ ವಾಲ್ಮೀಕಿ ಸಮುದಾಯದವರು ಹೆಚ್ಚು ಪಾಲ್ಗೊಳ್ಳುತ್ತಾರೆ.

ಅಥಣಿ ಪರಿಸರದ ಮಂಗಸೂಳಿಯಲ್ಲಿ ವಿಜಯದಶಮಿ ವಿಶೇಷ ಪಡೆದುಕೊಂಡರೆ ಮುರುಗುಂಡಿಯಲ್ಲಿ ಮರುಸಿದ್ದನ ಜಾತ್ರೆ, ಐನಾಪುರದಲ್ಲಿ ಸಂಕ್ರಮಣ, ಅವರಖೋಡದಲ್ಲಿ ಹನುಮಂತನ ಓಕುಳಿ, ಚಮಕೇರಿಯಲ್ಲಿ ಬಬಲಾದಿ ಪರಂಪರೆಯ ಸಹಪಂಕ್ತಿ ಭೋಜನ ಇತ್ಯಾದಿ ಜಾನಪದ ಆಚರಣೆಗಳಲ್ಲಿ ವಾಲ್ಮೀಕಿ ಸಮುದಾಯದವರು ಈ ಪರಿಸರದ ಉಳಿದ ಸಮುದಾಯದವರೊಂದಿಗೆ ಬಾತೃತ್ವ ಭಾವನೆಯಿಂದ ನಡೆದುಕೊಂಡು ಬಂದಿರುವುದು ವೈಶಿಷ್ಟ್ಯವಾಗಿದೆ.

ಹೀಗೆ ಕರ್ನಾಟಕದ ಇತರೆ ಕಡೆಗಳಲ್ಲಿರುವಂತೆ ಅಥಣಿ ತಾಲೂಕಿನಲ್ಲಿಯೂ ಹಲವು ಮತ-ಪಂಥಗಳು, ವಿವಿಧ ಧರ್ಮಗಳ ವಿವಿಧ ವರ್ಗಗಳ ಜನರು ವಾಸವಾಗಿದ್ದು, ವೀರಶೈವರು, ಜೈನರು, ಕುರುಬರು, ಬೇಡರು, ತಳವಾರರು, ಮರಾಠರು, ವಡ್ಡರು, ಮುಸ್ಲಿಂರು ಕಾಣುತ್ತಾರೆ. ಇವರುಗಳು ತಮ್ಮ ತಮ್ಮ ಜೀವನ ನಿರ್ವಹಣೆಗೆ ಯಾವುದೇ ವೃತ್ತಿಯನ್ನು ಕೈಗೊಂಡಿದ್ದರೂ ಧಾರ್ಮಿಕ ಸಂದರ್ಭಗಳಲ್ಲಿ ಒಗ್ಗಟ್ಟಿನಿಂದ ಎಲ್ಲರೂ ಮತೀಯ ಭೇದಭಾವ ಮರೆತು ಜಾತ್ರೆ, ಹಬ್ಬ-ಹರಿದಿನ, ಓಕುಳಿಯಂತಹ ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿರುವುದು ಕಂಡುಬರುತ್ತದೆ. ಇಲ್ಲಿಯ ಎಲ್ಲಾ ಸಮುದಾಯದವರು ದೇವರು-ಧರ್ಮದಲ್ಲಿ ಅಪಾರ, ಅಚಲ ವಿಶ್ವಾಸ ಉಳ್ಳವರಾಗಿದ್ದಾರೆ.

ಒಟ್ಟಿನಲ್ಲಿ ಅಥಣಿ ಪರಿಸರವು ಹಲವು ಧರ್ಮಗಳ, ಸಂಸ್ಕೃತಿಯ ಸಂಗಮವಾಗಿದೆ. ಈ ಎಲ್ಲ ಧರ್ಮಿಯರಲ್ಲಿ ಸಾಮರಸ್ಯವಿರುವುದು ಗಮನಿಸುವ ಅಂಶವಾಗಿದೆ. ಹೀಗೆ ಎಲ್ಲಾ ಸಮುದಾಯದ ಜೊತೆಗೆ ಹಾಸುಹೊಕ್ಕಾಗಿ ವಾಲ್ಮೀಕಿ ಸಮುದಾಯವು ಬೆರೆತುಕೊಂಡು ಹೋಗಿದೆ.

ಅಧ್ಯಾಯ ಏಳು

ಸಮುದಾಯದ ಕಲೆ, ಕಲಾವಿದರು ಮತ್ತು ಕ್ರೀಡೆಗಳು

ಅಧ್ಯಾಯ ಏಳು

ಸಮುದಾಯದ ಕಲೆ, ಕಲಾವಿದರು, ಕ್ರೀಡೆಗಳು

೭.೧. ಕಲೆ ಮತ್ತು ಕಲಾವಿದರು

ನಮ್ಮ ಭಾರತವು ಹಳ್ಳಿಗಳಿಂದ ಕೂಡಿದ ದೇಶ. ಈ ಹಳ್ಳಿಗಳಲ್ಲಿ ವಾಸಿಸುವ ಜನಸಾಮಾನ್ಯರು ಮುಖ್ಯವಾಗಿ ಕೃಷಿಯನ್ನೆ ಅವಲಂಬಿಸಿರುವರು. ಸದಾ ಸ್ವಾವಲಂಬಿಗಳಾಗಿ ತಮ್ಮ ಬದುಕನ್ನು ಹಸನುಗೊಳಿಸಿಕೊಂಡಿರುವರು. ಅದರಲ್ಲೂ ಕರ್ನಾಟಕದ ಗ್ರಾಮೀಣ ಜನರ ಬದುಕು ಅತ್ಯಂತ ಪ್ರಾಮಾಣಿಕವಾದುದು. ಅದರಂತೆ ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯ ಉತ್ತರದ ಗಡಿಯಲ್ಲಿರುವ ಅಥಣಿ ತಾಲೂಕು ರಾಜ್ಯದಲ್ಲಿಯೇ ವಿಸ್ತಾರವಾದ ತಾಲೂಕಾಗಿದೆ. ಅಥಣಿ ಮತ್ತು ಕಾಗವಾಡ ಹೀಗೆ ಎರಡು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದೆ. ಅಥಣಿ ತಾಲೂಕು ಬಿಜಾಪುರ ಜಿಲ್ಲೆಗೆ ಹೊಂದಿಕೊಂಡಿರುವುದರಿಂದ ಸಂಪೂರ್ಣ ಬೆಳವಲ ಪ್ರದೇಶದಲ್ಲಿ ಬರುತ್ತದೆ. ಪಶ್ಚಿಮದಲ್ಲಿ ಮಹಾರಾಷ್ಟ್ರದ ಸೀಮೆ ಇರುವುದರಿಂದ ಮರಾಠಿ ಭಾಷೆಯ ಪ್ರಭಾವವು ಕೂಡ ಸ್ವಲ್ಪಮಟ್ಟಿಗೆ ಆಗಿರುವುದು ಕಂಡುಬರುತ್ತದೆ.

ಯಾವುದೇ ಪರಿಸರದ ಜನಸಾಮಾನ್ಯರ ಬಾಯಿಂದ ಮೂಡಿಬಂದ ನವರಸಯುಕ್ತವಾದ ಧ್ವನಿ ಮುತ್ತುಗಳೇ ಜನಪದ ಸಾಹಿತ್ಯರೂಪದಲ್ಲಿ ಹೊರಹೊಮ್ಮಿರುತ್ತವೆ. ಜನಪದ ಸಾಹಿತ್ಯವು ಅಪಾರವಾದ ಸಾಗರವಿದ್ದಹಾಗೆ. ಈ ಬಗ್ಗೆ ಸಂಪೂರ್ಣ ವಿವರಣೆಯನ್ನು ಕೊಡುವುದು ನನ್ನಿಂದ ಆಗಲಿಕ್ಕಿಲ್ಲ. ಕಾರಣ ಕ್ಷೇತ್ರಕಾರ್ಯವನ್ನು ಕೈಗೊಳ್ಳುವಾಗ ನಾನು ಕೆಲವು ಹಳ್ಳಿಗಳನ್ನು ಪ್ರಮುಖವಾಗಿ ಆಯ್ಕೆಮಾಡಿಕೊಂಡು ನೋಡಿದ್ದೇನೆ. ಹೊರತು ಪಡಿಸಿ ಅದೆಷ್ಟೋ ಜನಪದ ಸಾಹಿತ್ಯ ಹುದುಗಿರಬಹುದು. ದಿನನಿತ್ಯವು ನಮ್ಮ ಜೀವನದಲ್ಲಿ ಬಳಸುವ ಪದಗಳೆಲ್ಲ ಜನಪದ ಸಾಹಿತ್ಯವೇ ಆಗಿರುತ್ತದೆ. ನಮ್ಮ ಪೂರ್ವಜರು ಆಡಿದ ಮಾತುಗಳನ್ನು, ಹಾಡುಗಳನ್ನು ಕೇಳಿ ಬರವಣಿಗೆ ಬಲ್ಲವರು ಬರೆದಿಟ್ಟುಕೊಂಡು ಅದಕ್ಕೊಂದು ಸಾಹಿತ್ಯಿಕ ರೂಪುಕೊಟ್ಟು, ಜನಸಾಮಾನ್ಯರ ನಾಲಿಗೆಯಿಂದ ಧ್ವನಿಯಾಗಿ ಬಂದುದನ್ನು ಜನಪದ ಸಾಹಿತ್ಯ ಅಂತ ಕರೆದಿರಬೇಕು.

ಈ ಜನಪದ ಸಾಹಿತ್ಯವು ಗ್ರಾಮೀಣ ಮಹಿಳೆ ಹಾಗೂ ಪುರುಷರ ಬಾಯಿಂದಲೂ ಮೂಡಿ ಬಂದವುಗಳಾಗಿವೆ. ಕಾಳು ಹಸನು ಮಾಡುವುದನ್ನು ಹಿಡಿದುಕೊಂಡು, ಮದುವೆ, ಮುಂಜಿ ಮುಗಿಯುವವರೆಗೂ ವಿವಿಧ ರೀತಿಯ ಹಾಡುಗಳನ್ನು ನಮ್ಮ ಗ್ರಾಮೀಣ ಮಹಿಳೆಯರು ಹಾಡುವುದನ್ನು

ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡೆನು. ವಾಲ್ಮೀಕಿ ಸಮುದಾಯದವರನ್ನು ಹೊರತುಪಡಿಸಿ ಆಯಾ ಊರುಗಳಲ್ಲಿ ಇತರೆ ಸಮುದಾಯದ ಕಲಾವಿದರನ್ನು ಸಂದರ್ಶಿಸಬೇಕಾಯಿತು. ಏಕೆಂದರೆ ವಾಲ್ಮೀಕಿ ಸಮುದಾಯದ ಕಲಾವಿದರು ಇತರೆ ಕಲಾವಿದರೊಂದಿಗೆ ಸೇರಿಕೊಂಡು ಹಾಡು ಹೇಳುವುದು, ಕುಣಿಯುವುದು, ನಾಟಕವಾಡುವುದನ್ನು ರೂಢಿಸಿಕೊಂಡು ಬಂದಿದ್ದಾರೆ.

ಸರ್ವಜ್ಞನೆಂಬುವನು, ಗರ್ವದಿಂದಾದವನೆ |

ಸರ್ವರೊಳಗೊಂದೊಂದು ನುಡಿಗಲಿತು ವಿದ್ಯೆಯಮಹಾ

ಪರ್ವತವೇ ಆದ ಸರ್ವಜ್ಞ

ಎಂಬಂತೆ ನಮ್ಮ ಗ್ರಾಮೀಣ ಮಹಿಳೆಯ ಬಾಯಲ್ಲಿ ಅಡಗಿರುವ ಸಾಹಿತ್ಯದ ಬಗ್ಗೆ ಗರ್ವವೆಂಬುದೇ ಇಲ್ಲ. ಬೀಸುವಾಗ, ಕುಟ್ಟುವಾಗ, ಕಂದನನ್ನು ತೊಡೆಯ ಮೇಲೆ, ತೊಟ್ಟಿಲೊಳಗೆ ಮಲಗಿಸುವಾಗ ಹಾಡು ಹೊರಬರುತ್ತದೆ.

ಏಸೊತ್ತು ಬೀಸಿದರೂ ಬ್ಯಾಸರಕಿ ನನಗಿಲ್ಲ

ಕೂಸು ನನ ತೊಡಿಮ್ಯಾಲೆ ಆಡಿದರ ಬಂದಂಥ ಬ್ಯಾಸರ ಬಯಲಾಗಿ

ಎಂದು ಹಾಡುತ್ತಾಳೆ. ಇದೇ ಪ್ರಕಾರ ತಮ್ಮ ತಮ್ಮ ಊರಿನ ದೇವರನ್ನು ನೆನೆಯುವಾಗ ಕೂಡ ಹಾಡು ಕಟ್ಟಿ ಹಾಡುತ್ತಾಳೆ. ಕ್ಷೇತ್ರಕಾರ್ಯಕ್ಕೆಂದು ತ್ಯಾವರಟ್ಟಿಗೆ ಹೋದಾಗ ಮಹಿಳೆಯೊಬ್ಬಳು,

ಸುತ್ತು ಹತ್ತು ಹಳ್ಯಾಗ ಮುತ್ತ ನನ್ನ ತೇವರಟ್ಟಿ

ನತ್ತ ಇಟ್ಟ್ಯಾಳ ಮೂಗಿನಾಗ |

ಕರಿಯಮ್ಮ ಹೊತ್ತೇರುವರೊಳಗೆ ನೆನದೇವ ||

ಆದರೆ ಇಂದು ಯಾಂತ್ರಿಕ ಯುಗದಲ್ಲಿ ಬೀಸುವ ಕಲ್ಲುಗಳು ಎಲ್ಲೆಲ್ಲೂ ಮಾಯವಾಗಿವೆ. ಆದರೆ ಅಥಣಿ ಪರಿಸರದಲ್ಲಿ ಇಂತಹ ದೇಸಿ ಸಾಮಾನುಗಳು ತಮ್ಮ ಜೀವಂತಿಕೆಯನ್ನು ಉಳಿಸಿಕೊಂಡುಬಂದಿವೆ. ಎಲ್ಲರ ಮನೆಯಲ್ಲಿಯೂ ಬೀಸುವಕಲ್ಲು ಒಳಕಲ್ಲುಗಳು ಇವೆ.

ಇನ್ನು ಈ ಭಾಗ ಜನಪದ ಸಾಹಿತ್ಯದಲ್ಲಿ ಕಡಿಮೆಯಿಲ್ಲ. ರಂಟೆ, ಕುಂಟೆಗಳನ್ನು ಹೊಡೆಯುವುದನ್ನು ಹಿಡಿದುಕೊಂಡು, ಬಿತ್ತುವುದು, ಬೆಳೆಕೊಯ್ಯುವುದು, ಕಣ ಮಾಡುವುದು, ಹಂತಿಕಟ್ಟಿ ರಾಶಿ ಮಾಡುವುದು, ರಾಶಿಯನ್ನು ಮನೆಗೆ ತರುವವರೆಗೂ ಹಾಡಿದ್ದೇ ಹಾಡಿದ್ದು, ಹಾಡುವಾಗ

ಬೆಳ್ಳಾನ ಬಿಳಿಎತ್ತು| ಬೆಳ್ಳಿಯ ಬಾರಕೋಲು

ಹಳ್ಳದ ಮಳಿಗೆ ಹರಗ್ಯಾವ |

ನಮ್ಮೆತ್ತ ತೆಳ್ಳನಾ ಹೊಟ್ಟೆ ಹಸದಾವ

ಎಂದು ತನ್ನ ಎತ್ತುಗಳನ್ನು ನೋಡಿ ಹಾಡುತ್ತಾನೆ.

ಇದೇ ತೆರನಾಗಿ,

ಆಜೂರು ಭೂಮ್ಯಾಗ ಅಡ್ನಾಡಿ ಮೇದಾನ

ಅರಗಾಣಿ ನೀರ ಕುಡದಾನ |

ಖಿಳೆಗಾಂವಿ ಬಸವಣ್ಣ ಆರಂಭ ನೋಡಿ ನೆನೆದಾನ.

ಬೀಸುವ, ಕುಟ್ಟುವ ಹಾಡುಗಳಿಲ್ಲದೆ ಮದುವೆಯ ಸಮಾರಂಭದಲ್ಲಿ ಒಳ್ಳುಕಲ್ಲು ಪೂಜೆ, ಬೀಸುವ ಕಲ್ಲು ಪೂಜೆ, ಹಂದರ ಹಾಕುವುದು, ಹಾಲುಗಂಬ, ಐರಾಣಿಯ ತರುವುದು, ಸುರಿಗೆ ಎರೆಯುವುದು, ನೂಲುಸುತ್ತುವುದು, ಅರಿಷಿಣೆ ಹಚ್ಚುವುದು, ದಾರಿ ಎರೆಯುವುದು ಅಕ್ಷತಾ ಹಾಕುವ, ಮದುಮಕ್ಕಳ ಕಾಲು ತೊಳೆಯುವ, ಸೀಮಂತ, ನಾಮಕರಣ, ಋತುಮತಿಯಾದ ಸಂದರ್ಭದ ಕಾರ್ಯಗಳಲ್ಲಿ ಮಹಿಳೆಯು ಹಾಡನ್ನು ಹಾಡುವುದನ್ನು ನಾವು ಕಾಣಬಹುದು.

ಹಾಗೆಯೇ ಹಬ್ಬ ಹರಿದಿನಗಳಲ್ಲಿ ವಿಶೇಷವಾಗಿ ವಾಲ್ಮೀಕಿ ಸಮುದಾಯದ ಪುರುಷರು ಕಾರಹುಣ್ಣಿಮೆಯ ಹಾಡು, ಹೋಳಿಹುಣ್ಣಿಮೆಯ ಹಾಡು, ಮೊಹರಂ ರಿವಾಯತ್ ಹಾಡುಗಳು, ಡೊಳ್ಳಿನ ಹಾಡುಗಳು, ಗೀಗೀ (ಡಪ್ಪಿನ) ಹಾಡು, ಲಾವಣಿ ಪದಗಳು, ಹೀಗೆ ವಿವಿಧ ಪ್ರಕಾರದ ಹಾಡುಗಳನ್ನು ಹಾಡುವುದನ್ನು ಕಾಣುತ್ತೇವೆ. ಗೊಂದಲಿಗರ ಕಥೆ ಹೇಳುವ ಹಾಡುಗಳನ್ನು ಈ ಸಮುದಾಯದವರು ರೂಢಿಸಿಕೊಂಡು ಹಾಡುತ್ತಾ ಬಂದಿದ್ದಾರೆ. ಜನಪದ ಕಲೆಯ ಪ್ರಮುಖ ಅಂಶಗಳಾದ ಸಣ್ಣಾಟ, ದೊಡ್ಡಾಟ, ಡಪ್ಪಿನ ಆಟ, ಶ್ರೀಕೃಷ್ಣಪಾರಿಜಾತ, ಮುಂತಾದ ಬೈಲಾಟಗಳಲ್ಲಿ ಅಭಿನಯಿಸುವಂತಹ ಕಲಾವಿದರನ್ನು ಆ ಸಮುದಾಯದಲ್ಲಿ ಕಾಣಬಹುದು.

ಜನಪದ ಸಾಹಿತ್ಯದ ಸೊಗಡನ್ನು ಅಥಣಿ ತಾಲೂಕಿನ ಪ್ರತಿ ಗ್ರಾಮದಲ್ಲಿಯೂ ಕಾಣುತ್ತೇವೆ. ಗೀಗೀ ಪದ (ಡಪ್ಪಿನ)ಗಳ ಜನಕ ಎನ್ನುವ ಕೀರ್ತಿಗೆ ಪಾತ್ರರಾದವರು ಅಥಣಿಯ ಬಳ್ಳಿಗೇರಿ ಗ್ರಾಮದವರು ಎಂದು ತಿಳಿಯುತ್ತದೆ. ಇವತ್ತಿನ ಇವರ ಶಿಷ್ಯಬಳಗದ ಕೆಲವರು ವಾಲ್ಮೀಕಿ ಸಮುದಾಯದಲ್ಲಿ ಇದ್ದು ಇವರನ್ನು ಸ್ಮರಿಸಿಕೊಳ್ಳುತ್ತಾರೆ.

ಕೊಟ್ಟಲಗಿ ಗೌರಮ್ಮನವರು ಗೀಗೀ ಪದಗಳನ್ನು ಸ್ವಾರಸ್ಯವಾಗಿ ಹಾಡಿಕೊಂಡು ಬಂದಿರುವುದು ಕಂಡುಬರುತ್ತದೆ. ಮೋಳೆಗ್ರಾಮದ ದಿವಂಗತ ರಾಮಣ್ಣ ಕಾರಂಜಿಯವರು ಸುಮಧುರವಾದ ಸ್ತ್ರೀಕಂಠದಿಂದ ಪಾರಿಜಾತದ ಕೊರವಂಜಿ ಮತ್ತು ಸತ್ಯಭಾಮ ಪಾತ್ರಗಳನ್ನು ಭಾವಪೂರ್ಣವಾಗಿ ಅಭಿನಯಿಸುತ್ತಿದ್ದರು ಎಂದು ಕ್ಷೇತ್ರಕಾರ್ಯ ಕೈಗೊಂಡಾಗ ಆ ಊರಿನ ಹಲವರು ನೆನಪಿಸಿಕೊಂಡರು. ಖವಟಕೊಪ್ಪ ಗ್ರಾಮದ ದಿವಂಗತ ರಾಮಣ್ಣ ಕೂಡ ಶ್ರೀಕೃಷ್ಣ ಪಾರಿಜಾತದ ಕೃಷ್ಣನ ಪಾತ್ರವನ್ನು ಕಟಗೇರಿ, ಕವಲಗುಡ್ಡ,

ಬಳ್ಳಿಗೇರಿಗಳಲ್ಲಿ, ಬೇವನೂರ, ನಂದಗಾಂವ್, ಕಕಮರಿ, ಕೋಹಳ್ಳಿ ಮುಂತಾದ ಗ್ರಾಮಗಳಲ್ಲಿ ಅಭಿನಯಿಸಿ ಪಾರಿಜಾತ ಕಲೆಯನ್ನು ಉಳಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

ಅಥಣಿ ಪರಿಸರದ ಅರಟಾಳ ಗ್ರಾಮದವರು ಡೊಳ್ಳಿನ ಹಾಡುಗಳಲ್ಲಿ ಮಾಳಿಂಗರಾಯನ ಪರಂಪರೆಯನ್ನು ಹಾಡಿದರೆ, ಹುಲುಗಬಾಳಿ ಗ್ರಾಮದವರು ಬೀರದೇವರ ವಂಶಾವಳಿಯನ್ನು ಹಾಡುತ್ತಾರೆ. ಬೇವನೂರು, ಮೋಳೆ, ಐನಾಪುರ, ಮದಭಾವಿ, ಮುರಗುಂಡಿ, ಅಥಣಿ ಮುಂತಾದ ಕಡೆಯಲ್ಲಿ ಅಮೋಘ ಸಿದ್ದೇಶ್ವರ ಹಾಗೂ ಸಿದ್ದೇಶ್ವರನನ್ನು ಕುರಿತು ಹಾಡುವ ಹಾಡುಗಳು ಕಂಡುಬರುತ್ತವೆ. ಭಜನೆಗಳಲ್ಲಿಯೂ ಈ ತೆರದ ಹಾಡುಗಳನ್ನು ಹಾಡುತ್ತಾರೆ. ಈ ಹಿನ್ನೆಲೆಯಲ್ಲಿ ತೇವರಟ್ಟಿಯ ಸುಭಾನಂದ ಮದಭಾವಿಯವರು ಪ್ರಸಿದ್ಧರು. ಅಥಣಿ ಪರಿಸರದಲ್ಲಿ ಜನಪದ ಕಲೆಯು ಉತ್ತರ ಹಾಗು ಪೂರ್ವ ಭಾಗಗಳಲ್ಲಿ ಹೆಚ್ಚಾಗಿ ಕಂಡುಬಂದರೂ, ಪಶ್ಚಿಮ ಹಾಗೂ ದಕ್ಷಿಣ ಭಾಗದಲ್ಲಿ ಇಲ್ಲವೆಂದಲ್ಲ. ಪಶ್ಚಿಮದ ಶೇಡಬಾಳದಲ್ಲಿ ಆಗಿಹೋದಂತಹ ಸಮಗ್ರ ಪ್ರಶಸ್ತಿ ವಿಜೇತ ಹೆಸರಾಂತ ಸಾಹಿತಿ ದಿವಂಗತ ಮಿರ್ಜಿ ಅಣ್ಣಾರಾಯರು ಚಿರಸ್ಮರಣೀಯ. ತಾಲೂಕುಸ್ಥಳವಾದ ಅಥಣಿಯಲ್ಲಿ ಗೀಗಿಮೇಳ, ಡೊಳ್ಳಿನ ಹಾಡುಗಾರರ ಸಂಘ, ಗೊಂದಲಿಗರ ಹಾಡಿನ ಮೇಳ ಹೀಗೆ ವಿವಿಧ ಕಲೆಗಾರರ ಸಂಘಗಳನ್ನು ಹುಟ್ಟುಹಾಕಿದ್ದಾರೆ. ಕೇಸರಾಳದ ಗೀಗೀ ಮೇಳವಂತೂ ಅಥಣಿಯಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಒಗಟು, ಒಡಪು, ವೀರಭದ್ರದೇವರ ಒಡಪುಗಳು ಸಹ ಜನಪದ ಸಾಹಿತ್ಯದ ತುಣುಕುಗಳೆಂದೇ ಕರೆಯಬಹುದು. ಏಕತಾರಿ ಪದಗಳು, ದಾಸರಪದ, ಶರಣರ ವಚನಗಳನ್ನು ಕೂಡ ಇಲ್ಲಿಯ ಕಲಾವಿದರು ಹಾಡಿಕೊಂಡು ಬಂದಿದ್ದಾರೆ. ಒಗಟುಗಳಲ್ಲಿ ಗುಡಾರ್ಥ ಅಡಗಿದ್ದರೆ, ಒಡಪುಗಳಲ್ಲಿ ಪತಿ-ಪತ್ನಿಯರ ಹೆಸರು ಹೇಳುತ್ತಾರೆ. ಈ ಕುರಿತ ವಿವರಣೆಯ ಉದಾಹರಣೆ ಮುಂದೆ ಒದಗಿಸಿರುತ್ತೇನೆ. ಹೀಗೆ ಒಟ್ಟಾರೆ ಜನಪದ ಕಲೆ ಮತ್ತು ಕಲಾವಿದರ ಕುರಿತು ಎಷ್ಟು ಹೇಳಿದರೂ ಕಡಿಮೆಯೇ, ಕಾರಣ ನಾನು ನನ್ನ ಅಧ್ಯಯನದ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ವಿಶೇಷವಾಗಿ ವಾಲ್ಮೀಕಿ ಸಮುದಾಯದವರ ಕಲಾವಿದರನ್ನು ಪರಿಚಯಿಸುವ ಸಣ್ಣ ಪ್ರಯತ್ನವಿದು.

ಅಥಣಿ ಪರಿಸರದ ಕೊಕಟನೂರು ಗ್ರಾಮದ ಖಾಜಿಸಾಬ ಮುಲ್ಲ, ಸತ್ಯಪ್ಪ ಸುಬಾನ ತಳವಾರ, ಸಿದ್ದಪ್ಪ ಮುರಿಗೆಪ್ಪಾ ಕುಂಬಾರ, ಶೌಕಲ್ ಅಬ್ದುಲ್‌ಸಾಬ್ ಮುಲ್ಲ ಇವರುಗಳು ಕೃಷ್ಣ ಪಾರಿಜಾತ ಬೈಲಾಟದ ಜೊತೆಗೆ, ಭೀಮಸೇನ ಮತ್ತು ಇತರ ಬೈಲಾಟಗಳನ್ನು ಪ್ರದರ್ಶಿಸಿ ತಮ್ಮ ಪ್ರದರ್ಶನಾ ಚಾತುರ್ಯವನ್ನು ಮೆರೆದಿದ್ದಾರೆ. ಹೀಗೆ ಹೇಳುವಲ್ಲಿ ಯಾವುದೇ ಒಂದು ಊರಿನಲ್ಲಿ ಕೇವಲ ಒಂದು ಸಮುದಾಯದವರಷ್ಟೇ ಸೇರಿ ಇಂತಹ ಪ್ರದರ್ಶನ ಕಲೆಯನ್ನು ಪ್ರದರ್ಶನ ಮಾಡಲು ಆಗುವುದಿಲ್ಲ. ಬದಲಾಗಿ ತಮಗೆ ಸಮೀಪದ ಸಮುದಾಯದ ಕಲಾವಿದರನ್ನು ಒಟ್ಟುಗೂಡಿಸಿಕೊಂಡು ಕಲೆಯನ್ನು ಮೆರೆಯುತ್ತಾರೆ. ಅಂತೆಯೇ ನಾನು ವಾಲ್ಮೀಕಿ ಸಮುದಾಯ ಅಧ್ಯಯನ ಮಾಡಲು ತೊಡಗಿ, ಈ ಸಮುದಾಯವು ಇತರರ ಜೊತೆಗೆ ಹೇಗೆ ಹೊಂದಾಣಿಕೆಯನ್ನು ಮಾಡಿಕೊಂಡು ಕಲೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ ಎಂದು ತಿಳಿಯುವುದರ ಜೊತೆಗೆ ಇತರ ಸಮುದಾಯದ ಕಲಾವಿದರನ್ನು ಪರಿಚಯಿಸುವುದು ನನ್ನ ಧರ್ಮವಾಗಿರುತ್ತದೆ.

ಕೊಂಬುಗಳ ಕರೆದಾವ | ಕಾಳಿಗಳು ಊದ್ಯಾವ

ದಿಮ್ಮಿ ಕರಡೆಲ್ಲ ಕಣೆ ಕಣೆಸಿ-ನಿಬ್ಬಣದ

ಅಬ್ಬರ, ಸಂಭ್ರಮ ಕೇಳ್ಯಾವ.

ಜನಪದ ಕಲಾಪ್ರಪಂಚ ಜನಜೀವನದಷ್ಟೇ ವಿಶಾಲವಾದದ್ದು, ವ್ಯಾಪಕವಾದದ್ದು, ಪ್ರಾಚೀನವಾದದ್ದು. ಆಯಾ ಕಾಲದ ಮಾನವನ ಅಗತ್ಯಗಳು ಕಲೆಗಳ ಉಗಮ ವಿಕಾಸ ವೈವಿಧ್ಯಗಳಿಗೆ ಕಾರಣವಾಗಿವೆ. ನಿಜವಾದ ಕಲೆ ಪುಸ್ತಕ ಜ್ಞಾನದಿಂದಾಗಲಿ, ಶಾಲೆ ಕಲಿಕೆಯಿಂದಾಗಲೀ ಅವಿರ್ಭವಿಸುವಂಥದ್ದಲ್ಲ. ಅಂತಃ ಸ್ಫೂರ್ತಿಯಿಂದ, ಲೋಕಾನುಭವದಿಂದ ಉದಯವಾಗತಕ್ಕದ್ದು ಎಂಬುದಕ್ಕೆ ಇವು ನಿದರ್ಶನವಾಗಿವೆ. ಜನಪದ ಹಾಡು-ಕುಣಿತಗಳು ಜಲಮೂಲ, ನಮ್ಮ ಅನಕ್ಷರಸ್ಥ ಗ್ರಾಮೀಣರ ಅಂತರಂಗ, ಅವು ಬೆಳೆದುದು ಲೋಕಕ್ಕೆ ಅನ್ನ ಬೆಳೆದುಕೊಡುವ ರೈತರ ಅಂಗಳದಲ್ಲಿ ನಮ್ಮ ಜನಪದ ಬದುಕಿಗೆ ಹುಟ್ಟಿದ ಪರಿಸರವೇ ಶಾಲೆ, ಪಟ್ಟ ಅನುಭವವೇ ಗುರು.

ದೈವಿ ಆರಾಧನೆಗಾಗಿ ಹುಟ್ಟಿಕೊಂಡ ಈ ಹಾಡು-ಕುಣಿತಗಳಲ್ಲಿ ಕೆಲವು ಕಾಲಗತಿಯಲ್ಲಿ ಮನರಂಜನೆಯ ಮಾಧ್ಯಮವಾದುವು, ಮತ್ತೆ ಕೆಲವು ಉಪಜೀವನದ ಮಾರ್ಗವಾದವು. ದೇವರ ಆರಾಧನೆಗಿರಲಿ, ದುಡಿಮೆಯ ಬೇಸರ ಪರಿಹಾರಕ್ಕಿರಲಿ, ನಮ್ಮ ಜನ ಸೃಷ್ಟಿಸಿದ ಸಾಹಿತ್ಯ ಮತ್ತು ಕಲೆಗಳ ಮೌಲ್ಯ ಜನರ ಅಸಾಧಾರಣ ಪ್ರತಿಭೆಯ ವಿರಾಟ ದರ್ಶನವೇ ಆಗುತ್ತದೆ. ಅವರ ಒಂದೊಂದು ನುಡಿಗೂ, ಒಂದೊಂದು ಕಲೆಗೂ ಅರ್ಥಪೂರ್ಣ ಹಿನ್ನೆಲೆಯಿದೆ. ಸಮಷ್ಟಿ ಕ್ಷೇಮದ ಚಿಂತನೆಯಿದೆ. 'ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎಂಬ ಕವಿರಾಜ ಮಾರ್ಗಕಾರನ ಮಾತು ಸಾಹಿತ್ಯಕ್ಕಿಂತಲೂ ಜನಪದ ಕಲಾಪ್ರಪಂಚಕ್ಕೆ ಅತ್ಯುಚಿತವಾಗಿ ಅನ್ವಯಿಸುತ್ತದೆ. ಜನಪದ ಕಲಾವಿದರು, ವ್ಯವಸ್ಥಿತವಾದ ಯಾವ ಶಾಲೆಗೆ ಹೋಗದಿದ್ದರೂ ಅವರ ಸೃಜನಸಾಮರ್ಥ್ಯ ಹತ್ತಾರು. ನಾಲೆಗಳ ಮೂಲಕ ತುಂಬು ಹೊಳೆಯಾಗಿ ಪ್ರವಹಿಸುವುದನ್ನು ಕಾಣಬಹುದು. "ಅಗತ್ಯವೇ ನಿರ್ಮಿತಿಯ ತಾಯಿ" ಎಂಬ ಆರ್ಷವಾಣಿಯನ್ನು ಜನಪದ ಕಲೆಗಳು ನೆನಪಿಗೆ ತಂದುಕೊಡುತ್ತವೆ.

ಇಂತಹ ಸೃಜನಾತ್ಮಕ ಸಾಹಿತ್ಯ ಮತ್ತು ಕಲೆಗಳ ಗತಿ ಕ್ರಮೇಣ ಏನಾಯಿತು? ಆಧುನಿಕ ನಾಗರೀಕತೆ ತಲೆಯೆತ್ತುತ್ತಿದ್ದಂತೆ ಈ ಜನಪದ ಸಾಹಿತ್ಯ ಮತ್ತು ಕಲೆಗಳಿಗೆ ಗ್ರಹಣ ಬಡಿಯತೊಡಗಿತು. ಇದನ್ನು ಆರಾಧಿಸಿಕೊಂಡು ಬಂದ ಜನರಿಗೆ ಸಾರ್ವಜನಿಕ ಮನ್ನಣೆ ಕಡಿಮೆಯಾಯಿತು. ನವೀನ ನಾಟಕ, ಸಂಗೀತ, ಚಲನಚಿತ್ರಗಳ ಬಿರುಗಾಳಿಯಿಂದ ಎದ್ದ ಧೂಳಿನಲ್ಲಿ ಬಹುಪಾಲು ಜನಪದಕಲೆಗಳು ಕೊಳೆತು ಹೋದವು. ಇತ್ತೀಚಿನ ಪರಿಸ್ಥಿತಿಯಲ್ಲಿ ಒಂದು ಆಶಾಭಾವನೆ ಮೂಡುತ್ತಿದೆ. ಬತ್ತಿ ಹೋಗುತ್ತಿದ್ದ ಜಾನಪದ ಜ್ಯೋತಿಯನ್ನು ಮತ್ತೆ ಬೆಳಗಿಸುವ ಪ್ರಯತ್ನ ಆರಂಭವಾದಂತಿದೆ. ಕಳೆದ ಮೂರು ನಾಲ್ಕು ದಶಕಗಳಿಂದ ಜನಪದ ಸಾಹಿತ್ಯ ಸಂರಕ್ಷಣೆಗೆ ಸಾಕಷ್ಟು ಜನಕೆಲಸ ಮಾಡುತ್ತಿದ್ದಾರೆ. ಈ ಕ್ಷೇತ್ರದಲ್ಲಿ ನಮ್ಮ ವಿಶ್ವವಿದ್ಯಾಲಯಗಳು ಇಟ್ಟಿರುವ ಹೆಜ್ಜೆ ಗಮನಾರ್ಹವಾದುದು. ಜನಪದ ಗೀತೆಗಳ ಒಳ್ಳೊಳ್ಳೆಯ ಸಂಗ್ರಹಗಳು, ವಿಮರ್ಶಾ ಲೇಖನಗಳು, ಕಥಾ ಸಂಗ್ರಹಗಳು ಸಾಕಷ್ಟು ಸಂಖ್ಯೆಯಲ್ಲಿ ಹೊರಬರುತ್ತಿವೆ.

ಮೊದಲ ಹೆಜ್ಜೆಯಾಗಿ ಕರ್ನಾಟಕದ ಮೂಲೆ ಮೂಲೆಯಲ್ಲಿರುವ ಜನಪದ ಕಲೆಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಜಾನಪದ ಪರಿಷತ್ತು ವ್ಯವಸ್ಥಿತ ಕಾರ್ಯಕ್ರಮವೊಂದನ್ನು ಹಾಕಿಕೊಂಡಿತು. ಇದಕ್ಕಾಗಿ ಜಾನಪದ ವಿಷಯವನ್ನೇ ವಿಶೇಷವಾಗಿ ಅಧ್ಯಯನ ಮಾಡಿ ಸ್ನಾತಕೋತ್ತರ ಪದವಿ ಪಡೆದ ಕೆಲವು ಯುವಕರನ್ನು ನೇಮಿಸಿ ಮೂರು ನಾಲ್ಕು ತಿಂಗಳ ಕಾಲ ನಡೆದ ಈ ಕ್ಷೇತ್ರಕಾರ್ಯದಲ್ಲಿ ೩೨ ಜನ ಮಾಹಿತಿ ಸಂಗ್ರಹಕಾರರು ಗ್ರಾಮಾಂತರ ಪ್ರದೇಶದಲ್ಲಿ ಪ್ರವಾಸ ಮಾಡಿ ಸುಮಾರು ೧೦,೦೦೦ಕ್ಕೂ ಹೆಚ್ಚು ಕಲಾತಂಡಗಳನ್ನು ಭೇಟಿ ಮಾಡಿ ೧೪೫೫ಕಲೆಗಳ ಬಗ್ಗೆ ಸಾಧ್ಯವಾದಷ್ಟು ಮಾಹಿತಿ ಸಂಗ್ರಹಿಸಿದ್ದಾರೆ. ಜನಪದ ಕಲಾಪ್ರಪಂಚ ಜನಜೀವನದಷ್ಟೇ ವಿಶಾಲವಾದದ್ದು, ವ್ಯಾಪಕವಾದದ್ದು, ಪ್ರಾಚೀನವಾದದ್ದು. ಆಯಾಕಾಲದ ಮಾನವನ ಅಗತ್ಯಗಳು ಕಲೆಗಳ ಉಗಮ, ವಿಕಾಸ ವೈವಿಧ್ಯಗಳಿಗೆ ಕಾರಣವಾಗಿವೆ. ನಿಜವಾದ ಕಲೆ, ಪುಸ್ತಕ ಜ್ಞಾನದಿಂದಾಗಲಿ, ಶಾಲೆಯ ಕಲಿಕೆಯಿಂದಾಗಲಿ ಅವಿರ್ಭವಿಸುವುದಿಲ್ಲ. ಅಂತಃಸ್ಫೂರ್ತಿಯಿಂದ ಲೋಕಾನುಭವದಿಂದ ಉದಯವಾಗತಕ್ಕದ್ದು ಎಂಬುದಕ್ಕೆ ಇವು ನಿದರ್ಶನವಾಗಿವೆ.

ಈ ಹಿನ್ನೆಲೆಯಲ್ಲಿ ವಾಲ್ಮೀಕಿ ಸಮುದಾಯದವರ ಪ್ರದರ್ಶನ ಕಲೆಗಳನ್ನು ಇಲ್ಲಿ ನೋಡಬಹುದು. ಇಲ್ಲಿ ವಾಲ್ಮೀಕಿ ಸಮುದಾಯದವರ ಪ್ರದರ್ಶನ ಕಲೆ ಎಂದಕೂಡಲೇ ಒಂದು ಗ್ರಾಮದಲ್ಲಿ ಕೇವಲ ಒಂದು ಸಮುದಾಯದವರು ಮಾತ್ರ ತಮ್ಮ ಕಲೆಯನ್ನು ಪ್ರದರ್ಶಿಸುವುದು ದುರ್ಲಭ. ಕಾರಣ ಇವರು ಇತರೆ ಸಮುದಾಯದವರೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದು ಪರಸ್ಪರ ಅನ್ಯೋನ್ಯತೆಯಿಂದ ಸಾಮರಸ್ಯದಿಂದ ಜೀವನ ನಡೆಸಿಕೊಂಡು ಬಂದವರಾಗಿದ್ದು ಕಲಾಪ್ರದರ್ಶನದೊಳಗೆ ಒಮ್ಮೊಮ್ಮೆ ಪ್ರಮುಖ ಕಲಾವಿದನಾಗಿ ಕಂಡುಬಂದರೆ, ಅಂದರೆ ತಂಡದ ನಾಯಕನಾಗಿ ಕಂಡುಬಂದು, ಮತ್ತೊಮ್ಮೆ ಒಂದು ಪ್ರದರ್ಶನ ಕಲಾತಂಡದಲ್ಲಿ ಸಂಗಡಿಗನೂ ಆಗಿರಬಹುದು. ವಾಲ್ಮೀಕಿ ಸಮುದಾಯದವರು ಇತರೆ ಸಮುದಾಯದವರೊಡಗೂಡಿ, ನಾಟಕ ಪ್ರದರ್ಶನ, ಇಲ್ಲವೇ ಕೋಲಾಟ, ಕರಡಿಮಜಲು, ಡೊಳ್ಳುಕುಣಿತದಲ್ಲಿ ಪಾಲ್ಗೊಂಡು ಕಲೆಯನ್ನು ಆರಾಧಿಸಿಕೊಂಡು ಬಂದಿರಬಹುದಾದ ಸಾಧ್ಯತೆಗಳು ಇಲ್ಲಿ ಹೆಚ್ಚು ಕಂಡುಬರುತ್ತವೆ. ಆದ್ದರಿಂದ ಕೇವಲ ವಾಲ್ಮೀಕಿ ಸಮುದಾಯದವರೊಂದೇ ಯಾವುದೇ ಕಲಾಪ್ರದರ್ಶನದಲ್ಲಿ ಇದ್ದಾರೆ ಎಂದಾಗಲಿ ಅಥವಾ ಇತರರ ಜೊತೆ ಸೇರಿಲ್ಲ ಎಂದಾಗಲಿ ತಿಳಿದುಕೊಳ್ಳುವುದು ಉಚಿತವೆನಿಸುವುದಿಲ್ಲ. ಒಟ್ಟಾರೆ ಬುಡಕಟ್ಟು ಸಮುದಾಯದವರು ಇಂತಹ ಎಲ್ಲಾ ಕಲಾಪ್ರಕಾರಗಳನ್ನು ಇದುವರೆಗೂ ಹೆಚ್ಚಿನ ರೀತಿಯಲ್ಲಿ ಪ್ರದರ್ಶನ ಮಾಡಿಕೊಂಡು ಬಂದಿದ್ದಾರೆ ಎನ್ನುವುದು ವಿಶೇಷ. ಈ ಹಿನ್ನೆಲೆಯಲ್ಲಿ ಕೃಷ್ಣ ಕಿತ್ತೂರಿನ ಜನರು ನಾಟಕ ಪ್ರದರ್ಶನದಲ್ಲಿ ಎತ್ತಿದ ಕೈ, ಹಾಗೆಯೇ ಐನಾಪುರದ ರಾಜು ನಾಯಕ ಎನ್ನುವ ಪ್ರಾಥಮಿಕ ಶಿಕ್ಷಣವನ್ನಷ್ಟು ಪಡೆದು ಈತ 'ಸೈಕಲ್‌ರೈಸ್' ಕಲೆಯನ್ನು ಮೈಗೂಡಿಸಿಕೊಂಡು ಬಂದು ರಾಜ್ಯ, ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಪಡೆದುಕೊಂಡಿರುವುದು ಗಮನಾರ್ಹ. ಹಲವಾರು ಬೆಳ್ಳಿ, ಬಂಗಾರದ ಪಾರಿತೋಷಕಗಳನ್ನು ಪಡೆದು ಈ ಪರಿವಾರಕ್ಕೆ ಕೀರ್ತಿ ತಂದಿದ್ದಾನೆ.

ಹೀಗೆ ಪ್ರತಿಯೊಬ್ಬರಲ್ಲಿಯೂ ಒಂದೊಂದು ಕಲೆಯು ಇರುತ್ತದೆ. ಅದನ್ನು ಸೂಕ್ತ ಸಮಯದಲ್ಲಿ ಹೊರಹಾಕುವ ಪ್ರಯತ್ನ ಮಾಡಬೇಕು. ಕಲೆಯನ್ನು ಸರಿಯಾಗಿ ಬಳಸಿಕೊಂಡು ಹೊರಗಿನ ಪ್ರಪಂಚಕ್ಕೆ

ಅನಾವರಣಗೊಳಿಸಿದಾಗ ಅದಕ್ಕೆ ಒಂದು ಮೆರಗು ಬರುತ್ತದೆ. ಆಗ ಆ ಕಲಾಭಿಸಕ್ತಿ ಎಂಥದ್ದು ಎಂದು ತಿಳಿಯುತ್ತದೆ. ಕಲೆಯು ಮಾನವಹುಟ್ಟುಗುಣ. ಯಾವುದಾದರೊಂದು ಕಲೆಯು ಆತನಲ್ಲಿ ಮನೆಮಾಡಿರುತ್ತದೆ. ಇಂತಹ ಜನಪದ ಕಲೆಗಳನ್ನು ಅವುಗಳ ಪರಿಸರ ಸಂದರ್ಭಗಳಿಂದ ಹೊರತಾಗಿ ಅಥವ ಬೇರ್ಪಡಿಸಿ ನೋಡಲಾಗುವುದಿಲ್ಲ. ಕಾರಣ ಇಲ್ಲಿ ಅಥಣಿ ಪರಿಸರದ ಒಟ್ಟಾರೆ ಪ್ರದರ್ಶನ ಕಲೆಗಳೊಂದಿಗೆ ವಾಲ್ಮೀಕಿ ಸಮುದಾಯವು ಹಾಸುಹೊಕ್ಕಾಗಿ ಬೆರೆತುಕೊಂಡು ಇತರರೊಡಗೂಡಿ ಪ್ರದರ್ಶಿಸುತ್ತಾ ಬಂದಿದ್ದಾರೆ.

ಗೀಗೀ ಮೇಳ

ಉತ್ತರ ಕರ್ನಾಟಕದ ಜನಪ್ರಿಯ ಕಲೆ 'ಗೀಗೀ ಮೇಳ' ಹಾಡಿನ ಪ್ರತಿ ಸಾಲಿನ ಕೊನೆಯಲ್ಲೂ 'ಗೀಯಗೀಯ ಗಾಯ' ಎಂದು ಹಾಡುವುದರಿಂದ ಇವರು 'ಗೀಗಿ ಮೇಳ'ದವರೆಂದೇ ಹೆಸರಾಗಿದ್ದಾರೆ. ಗೀಗೀ ಮೇಳದವರು ಹಾಡುಗಳ ಮೂಲಕ ಜನರಿಗೆ ಧರ್ಮತತ್ವ ಮತ್ತು ನೀತಿಬೋಧಿಸುತ್ತಾರೆ. ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮೊದಲಾದ ಇತಿಹಾಸದ ನೂರಾರು ಕತೆಗಳನ್ನು ವಿವಿಧ ಮಟ್ಟಗಳಲ್ಲಿ ಹಾಡುವ ಈ ಕಲಾವಿದರು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಎಷ್ಟೋ ಗೀತೆಗಳನ್ನು ಹಾಡುತ್ತಾರೆ. ಅಷ್ಟೇ ಅಲ್ಲ, ಸಮಕಾಲೀನ ಜೀವನದ ರೀತಿ, ನೀತಿಗಳ ಬಗೆಗೂ ಸ್ವಾರಸ್ಯವಾದ ಪದಗಳನ್ನು ಕಟ್ಟಿ ಹಾಡುತ್ತಾರೆ. ಗೀಗೀ ಪದಗಳಲ್ಲಿ ಸುದೀರ್ಘ ಪದಗಳಿಗಿಂತ ಸಣ್ಣ ಹಾಡುಗಳೇ ಹೆಚ್ಚು.

ಗೀಗೀ ಮೇಳದಲ್ಲಿ ಸಾಮಾನ್ಯವಾಗಿ ಮೂರುಜನ ಕಲಾವಿದರಿರುತ್ತಾರೆ. ತಲೆಗೊಂದು ರುಮಾಲು ಕಾಸೆಯುಟ್ಟು, ಬಿಳಿಯದೋತ್ರ ಬಿಳಿಯ, ನಿಲಿಯಜುಬ್ಬ ಅದರ ಮೇಲೊಂದು ತೋಳಿಲ್ಲದ ಅರಕೋಟು ಸೊಂಟಕ್ಕೆ ಕೆಂಪುವಸ್ತ್ರದ ಪಟ್ಟಿ ಇವು ಮೇಳದವರ ಸಾಮಾನ್ಯವೇಷ. ಪ್ರಧಾನ ಗಾಯಕ ಹಲಗೆ ಅಥವಾ ಡಪ್ಪ ಭಾರಿಸುತ್ತಾ ಹಾಡಿದರೂ ಉಳಿದಿಬ್ಬರು ಏಕತಾರೀ ಅಥವಾ ತಂಬೂರಿ ಬಾರಿಸುತ್ತಾ ಹಿಮ್ಮೇಳ ಒದಗಿಸುತ್ತಾ ಸಾಲಿಗೊಮ್ಮೆ 'ಗೀಯ ಗೀಯ, ಗೀಯ' ಎಂದು ಹೇಳುತ್ತಾರೆ. ಮೇಳದ ಸೊಗಸಿರುವುದೇ ಆ ಅಂತ್ಯದ ಸೊಲ್ಲಿನಲ್ಲಿ. ಹಾಡಿನ ಮಧ್ಯ ನಾಯಕನನ್ನು ಪ್ರಚೋದಿಸಲು ಸಹಾಯಕರು 'ಹಾಂ, ಹೇಳಪ್ಪಾ' ಇತ್ಯಾದಿ ಮಾತುಗಳನ್ನು ಹೇಳುತ್ತಾರೆ.

ಗ್ರಾಮೀಣರು ಹಬ್ಬ ಹರಿದಿನಗಳಲ್ಲಿ ಜಾತ್ರೆ ವಿಶೇಷಗಳಲ್ಲಿ ಗೀಗೀ ಮೇಳದವರನ್ನು ಊರಿಗೆ ಕರೆಯಿಸಿಕೊಂಡು ಅವರಿಂದ ಹಾಡನ್ನು ಹಾಡಿಸಿಕೇಳಿ ಸಂತೋಷಪಡುತ್ತಾರೆ. ಈ ಕಲೆಯನ್ನು ದಕ್ಷಿಣ ಕರ್ನಾಟಕದಲ್ಲಿ ಪ್ರಮುಖವಾಗಿ ಕಂಡರೂ ಉತ್ತರ ಕರ್ನಾಟಕದ ಗಡಿಭಾಗದ ಅಥಣಿ ತಾಲ್ಲೂಕಿನ ಶ್ರೀಮತಿ ಗೌರಮ್ಮ ಕೊಟ್ಟಲಗಿಯವರು ಪುರುಷರಿಗೆ ಏನು ಕಡಿಮೆ ಎನ್ನುವ ನಿಟ್ಟಿನಲ್ಲಿ ಒಂದು ತಂಡವನ್ನು ಕಟ್ಟಿಕೊಂಡು ಈ ಕಲೆಯನ್ನು ಇನ್ನೂ ಜೀವಂತವಾಗಿ ಉಳಿಸಿಕೊಂಡು ಹೋಗುತ್ತಿದ್ದಾರೆ. ಅದೇ ರೀತಿ ಅಥಣಿ ತಾಲ್ಲೂಕಿನ ಪರಶುರಾಮ ಬಡಿಗೇರ ಹಾಗೂ ಸುಖದೇವ ಸಾವಳಗಿಯವರು ತಮ್ಮದೇ ಆದಂತ ತಂಡವನ್ನು ಕಟ್ಟಿಕೊಂಡು ಈ ಕಲೆಯನ್ನು ಪೋಷಿಸಿಕೊಂಡು ಹೋಗುತ್ತಿದ್ದಾರೆ. ಮತ್ತು ತೆಲಸಂಗಗ್ರಾಮದ ಬೈರಪ್ಪಾ ಮಾದರ, ಸೋಮಣ್ಣ ಮಾದರ ಅಣ್ಣಪ್ಪಾ ಕುಮಠಳ್ಳಿ ಇವರ ಗೀಗೀ ಪದಗಳು ಸುಪ್ರಸಿದ್ಧವಾಗಿದೆ.

ಕರಡಿ ಮಜಲು

ಉತ್ತರ ಕರ್ನಾಟಕದ ಭಾಗದಲ್ಲಿ ಕಂಡುಬರುವ ಜನಪ್ರಿಯ ಕಲೆ. 'ಕರಡಿ ಮಜಲು' ಇದನ್ನು ದಕ್ಷಿಣ ಕರ್ನಾಟಕದ ಕಡೆ 'ಕರಡಿ ಮೇಳ' ಎಂದು ಕರೆಯುತ್ತಾರೆ. ಇದು ಉದ್ಯೋಗಿ ಕಲೆಯಾಗಿ ಬೆಳೆದು ಬಂದಿದೆ. ಜಾತ್ರೆ, ಉತ್ಸವಗಳಲ್ಲಿ ದೇವರ ಪೂಜಾ ಸಮಯದಲ್ಲಿ ಮತ್ತು ಧಾರ್ಮಿಕ ಗುರುಗಳನ್ನು ಊರೊಳಗೆ ಬರಮಾಡಿಕೊಳ್ಳುವಾಗ ಕರಡಿವಾದ್ಯ ಬಳಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಮದುವೆ, ಹೂಮುಡಿಸುವ ಕಾರ್ಯ, ನಾಮಕರಣ ಮುಂತಾದ ಮಂಗಳ ಕಾರ್ಯಗಳಲ್ಲೂ ಬಳಕೆಯಲ್ಲಿದೆ. ಕರಡಿ ವಾದ್ಯದ ಜೊತೆಯಲ್ಲಿ ಸನಾದಿ ಶೃತಿ ತಾಳಗಳನ್ನು ಬಳಸಿದರೆ ಮತ್ತೆ ಕೆಲವು ಕಡೆ ದಿಮ್ಮು ಚೌಡಿಕೆಗಳನ್ನು ಬಳಸುತ್ತಾರೆ. ಕರಡಿ ವಾದ್ಯದ ಕಲಾವಿದರೂ ಕಾಸೆ ಪಂಚೆ, ಕಾಸೆ, ಅಂಗಿ, ತಲೆಗೆ ಪೇಟ, ಹಣೆಗೆ ವಿಭೂತಿ ಧರಿಸಿರುತ್ತಾರೆ. ನಡುವಿಗೆ ಕೆಂಪು ವಸ್ತ್ರವನ್ನು ಕಟ್ಟಿರುತ್ತಾರೆ. ನಂದೀಧ್ವಜ ಕುಣಿಲಿಕ್ಕೆ ಕರಡಿ ವಾದ್ಯದ ಮೇಳ ಬೇಕೇಬೇಕು. ನಿಧಾನವಾಗಿ ಪ್ರಾರಂಭವಾದ ಕರಡಿಮಜಲಿನ ಗತ್ತು-ಗತಿಗಳು ಹಂತಹಂತವಾಗಿ ಏರಿ ಕ್ರಮೇಣ ಅದೇ ಗತಿಯಲ್ಲಿ ನಿಧಾನವಾಗಿ ಮುಕ್ತಾಯವಾಗುತ್ತವೆ. ಇದರಲ್ಲಿ ಒಂದೆಜ್ಜೆ ಕುಣಿತ ಎರಡೆಜ್ಜೆ ಕುಣಿತ ಮೂರೆಜ್ಜೆ ಕುಣಿತ ಮಂಡಲ ಕುಣಿತ ಮುಂತಾದ ಗತ್ತುಗಳಿವೆ.

ಈ ಕಲೆಯನ್ನು ನಾವು ಅಥಣಿ ಪರಿಸರದಲ್ಲಿ ಕೂಡಾ ಕಾಣುತ್ತೇವೆ. ದರಿಗೌಡ ಇವರು ಇಲ್ಲಿ ಪ್ರಸಿದ್ದರು ಎಂದು ಹೇಳುತ್ತಾರೆ. ಇಂತಹ ಇನ್ನೂ ಅನೇಕ ಕಲಾವಿದರು ಕರಡಿ ಮಜಲು ಕಲೆಯನ್ನು ಬೆಳೆಸಿಕೊಂಡು ಹೋಗುತ್ತಿದ್ದಾರೆ. ಅಂತಹವರಲ್ಲಿ ಇನ್ನೋರ್ವರೆಂದರೆ ಶಿವಪ್ಪ ಕುಂಬಾರ ಇವರು ಕೂಡಾ ಈ ಕಲೆಯನ್ನು ಪೋಷಿಸಿಕೊಂಡು ಹೋಗುತ್ತಿದ್ದಾರೆ.

ಡೊಳ್ಳು ಕುಣಿತ

ಜನಪದ ಕಲೆಗಳಲ್ಲಿಯೇ 'ಗಂಡು ಕಲೆ' ಎನಿಸಿರುವ ಡೊಳ್ಳು ಕುಣಿತ ಪುರುಷರಿಗೆ ಮೀಸಲಾದ ಕಲೆ. ಆದರೆ ಈಗ ಶಿವಮೊಗ್ಗ ಜಿಲ್ಲೆಯಲ್ಲಿ ಮಹಿಳೆಯರ ಡೊಳ್ಳು ಕುಣಿತ ತಂಡಗಳನ್ನು ನಾವಿಂದು ಕಾಣಬಹುದು. ಈ ಕಲೆಯನ್ನು ನಾವು ಹೆಚ್ಚಾಗಿ ಉತ್ತರ ಕರ್ನಾಟಕದಲ್ಲೂ ಅದರಲ್ಲೂ ಗಡಿಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ತಲೆತಲಾಂತರಗಳಿಂದ ದೈವೀ ಆರಾಧನೆಯ ಸಾಧನವಾಗಿ ಬೆಳೆದು ಬಂದು ಈ ಕಲೆ ಇತ್ತೀಚೆಗೆ ಮನರಂಜನೆಯ ಮಾಧ್ಯಮವಾಗಿ ಮನ್ನಣೆಯನ್ನು ಗಳಿಸಿದೆ. ಡೊಳ್ಳು ಕುಣಿತವನ್ನು ಚೆನ್ನಾಗಿ ಮೈಗೂಡಿಸಿಕೊಂಡು ಪರಿಣತಿಯನ್ನು ಸಾಧಿಸಿರುವವರೆಂದರೆ ಕುರುಬ ಜನಾಂಗ. ಬಿಡುವು ದೊರೆತಾಗಲೆಲ್ಲ ಅದರ ಅಭ್ಯಾಸವನ್ನು ಮಾಡುತ್ತಾರೆ.

ಡೊಳ್ಳು ಕುಣಿತದ ತಂಡದಲ್ಲಿ ಸಾಮಾನ್ಯವಾಗಿ ನಾಲ್ಕು ಜನರಿಂದ ಹಿಡಿದು ಹತ್ತು ಹನ್ನೆರಡು ಜನರಿರುತ್ತಾರೆ. ಹಿನ್ನೆಲೆಯಲ್ಲಿ ತಾಳ ತಪ್ಪಡಿ ನಿಪ್ಪರೆ (ಕಹಳೆ) ಜಾಗಟೆಗಳನ್ನು ಬಳಸುತ್ತಾರೆ. ಅದಕ್ಕಾಗಿಯೇ ಒಂದು ಗಾದೆಯಿದೆ. 'ದಿಳ್ಳಿಗೆ ಹೋದರೂ ಡೊಳ್ಳಿಗೆ ಒಂದೇ ಪೆಟ್ಟು' ಎಂದು ಹೇಳುತ್ತಾರೆ. ಡೊಳ್ಳು ಕುಣಿತದಲ್ಲಿ ನಾನಾ ರೀತಿಗಳಿವೆ. ಪ್ರಮುಖವಾದವೆಂದರೆ ಕುಳಿತು ಭಾರಿಸುವುದು, ಲಾಗೆ ಹಾಕುವುದು,

ಹಾರಿ ಭಾರಿಸುವುದು ಮಂಡಿಮಡಚಿ, ಮರಗಾಲು ಬಡಿತ, ಗಾಡಿ ಚಕ್ರದ ಬಡಿತ ಮುಂತಾದ ವಿಧಗಳನ್ನು ಕಾಣಬಹುದು. ಕುರುಬರಿಗೆ ಡೊಳ್ಳು ಕುಣಿತ 'ದೇವರ' ಭಜನೆ ಇದ್ದಂತೆ ಎಂದು ಹೇಳುತ್ತಾರೆ. ಈ ಕಲೆಯಲ್ಲಿ ಕುಣಿತವಷ್ಟೇ ಅಲ್ಲ, ಒಳ್ಳೆಯ ಸಾಹಿತ್ಯವೂ ಇದೆ. ಈ ಹಾಡುಗಳಲ್ಲಿ ಹಾಲುಮತ ಪುರಾಣ, ಅನುಸೂಯ ಪದ, ಮಾರ್ಕಾಂಡೇಯ ಚರಿತ್ರೆ, ನಿಂಬೆಕ್ಕನ ಪದ, ಪಾಂಡವರ ಪದ, ಬಸವಲಿಂಗೇಶ್ವರ ಪದ, ಇಂತಹ ಹಲವಾರು ಪ್ರಸಂಗಗಳು ಸೇರಿವೆ.

ಸ್ವಾಮಿ ನಮಃ ದೇವರು ಬಂದಾರು ಬನ್ನಿರೋ

ಶಿವ ಶಿವ ನಮಃ ದೇವರು ಬಂದಾವು ಬನ್ನಿರೋ

ಹೀಗೆ ಸಾಮಾನ್ಯವಾಗಿ ಪ್ರತಿ ಪದ್ಯದ ಪ್ರಾರಂಭದಲ್ಲಿ ಬರುವ ಗಣಸ್ತುತಿಯ ನಂತರ ಕಥಾಭಾಗ ಪ್ರಾರಂಭವಾಗುವುದು, ಆರಂಭದಲ್ಲಿ ಡೊಳ್ಳಿನ ಗತ್ತು, 'ಬ್ರಹ್ಮದೊಡ್ಡಾವ' ಎಂಬ, ಘೋಷಣೆಯನ್ನು ಹುಟ್ಟಿಸಿದರೆ ಮುಕ್ತಾಯಕ್ಕೆ ಬರುವ ಹೊತ್ತಿಗೆ 'ಹಿಡಿದ್ಹಾಂಗ ಬಿಟ್ಹಾಂಗ' ಎಂಬಂತೆ ಕೇಳುವ ಪೆಟ್ಟು ಹಾಕುತ್ತಾ 'ಡುಬ್ಬದ್ಡುರಿ ಡುಬ್ಬದ್ಡುರಿ' ಎಂದು ತೀರ್ಮಾನ ಹೇಳುವಂತೆ ಗತ್ತನ್ನು ಮುಗಿಸುತ್ತದೆ.

ಈ ಡೊಳ್ಳಿನ ಕಲಾವಿದರನ್ನು ನಾವು ಅಥಣಿ ತಾಲ್ಲೂಕಿನಲ್ಲಿಯೇ ಅನೇಕ ಜನರನ್ನು ಕಾಣುತ್ತೇವೆ. ಅಂತಹವರಲ್ಲಿ ಪ್ರಮುಖರಾದವರು ಬಹು ಸೊಗಸಾದ ರೀತಿಯಲ್ಲಿ ತಮ್ಮ ಕಲೆಯನ್ನು ವ್ಯಕ್ತಪಡಿಸುತ್ತಾರೆ. ಮತ್ತು ಮದಬಾವಿ, ಆರಟಾಳ, ಮುರಗುಂಡಿ, ಕಟಗೇರಿ, ಶಿವನೂರ ಗ್ರಾಮಗಳಲ್ಲಿ ಅನೇಕ ಕಲಾವಿದರು. ಈ ಡೊಳ್ಳು ಕುಣಿತ ಕಲೆಯನ್ನು ಉನ್ನತೀಕರಿಸುತ್ತಿದ್ದಾರೆ.

ಬಯಲಾಟ

ಬಯಲಾಟ ಕರ್ನಾಟಕ ಜನಪದ ಕಲೆಗಳಲ್ಲಿ ಅತ್ಯಂತ ವೈವಿಧ್ಯದಿಂದ ಕೂಡಿದ ಗಂಡು ಕಲೆ. ಇದರಲ್ಲಿ ಸಾಹಿತ್ಯ, ಸಂಗೀತ ನೃತ್ಯಗಳು ಮುಪ್ಪರಿಗೊಂಡಿದೆ. ಪ್ರಾಚೀನ ಕಾಲದಿಂದಲೂ ಗ್ರಾಮೀಣರಿಗೆ ಮನರಂಜನೆ ಒದಗಿಸಿಕೊಂಡು ಬರುತ್ತಿರುವ ಹವ್ಯಾಸಿ ಕಲೆ ಬಯಲಾಟ.

ಬಯಲಾಟದಲ್ಲಿ 'ದೊಡ್ಡಾಟ' ಮತ್ತು 'ಸಣ್ಣಾಟ'ಗಳೆಂದು ಸ್ಥೂಲವಾಗಿ ಎರಡುಭಾಗ ಮಾಡಿಕೊಳ್ಳಬಹುದು. ಬಯಲಾಟದಲ್ಲಿ 'ದೊಡ್ಡಾಟ'ವನ್ನು 'ಮೂಡಲಪಾಯ' 'ಅಟ್ಟದಾಟ ಬೈಲ್ಕತೆ' ಎಂದು ಕರೆಯುತ್ತಾರೆ. 'ಪೌರಾಣಿಕ ಪ್ರಸಂಗಗಳನ್ನು ಹೊಂದಿರುವ ಈ ಆಟಗಳು ರಾತ್ರಿಯೆಲ್ಲಾ ನಡೆದು ಸೂರ್ಯೋದಯದ ವೇಳೆಗೆ ಮಹಾಭಾರತದಿಂದ ಆರಿಸಿಕೊಂಡು ಸಣ್ಣಾಟವನ್ನು ಆಡಲು ಪ್ರಾರಂಭಿಸಿದರು. ಈ ಸಣ್ಣಾಟವನ್ನು ಉತ್ತರ ಕರ್ನಾಟಕದಲ್ಲಿ ನಾವು ಕಾಣುತ್ತೇವೆ.

ಬಯಲಾಟಕ್ಕೆ ಹೆಸರುವಾಸಿಯಾಗಿರುವ ಕಲಾ ತಂಡಗಳಲ್ಲಿ ಅಥಣಿ ತಾಲ್ಲೂಕಿನಲ್ಲಿರುವ ಸಂಕೋನಟ್ಟಿಯ ಶ್ರೀ ಬಸವೇಶ್ವರ ನಾಟ್ಯಸಂಘವು ಒಂದು. ಮತ್ತು ಅಥಣಿ ತಾಲ್ಲೂಕಿನಲ್ಲಿರುವ ನಾಟಕ ಕಂಪನಿಗಳಿಂದ ಶ್ರೀಕೃಷ್ಣ ಪಾರಿಜಾತ, ದೇವಿ ನಾಟಕ ಮುಂತಾದ ನಾಟಕದ ತಂಡಗಳನ್ನು ನಾವು ಅಥಣಿ

ಸುತ್ತಮುತ್ತಲಿನಲ್ಲಿ ಕಾಣುತ್ತೇವೆ. ಇಂತಹ ಕಲಾವಿದರಿರುವರಿಂದಲೇ ಇನ್ನು ಇಂತಹ ನಾಟಕಗಳು ಉಳಿದಿವೆ ಎಂದು ಹೇಳಬಹುದು.

ಚಿಮಕೇರಿ ಗ್ರಾಮದ ಶ್ರೀ ಶಿವಪ್ಪಾ ಕುಂಬಾರ ಹಾಗೂ ಸಂಗಡಿಗರು ನಡೆಸಿಕೊಡುವ ರಾಧಾನಾಟಕ ಬಹುಪ್ರಸಿದ್ಧಿಯನ್ನು ಪಡೆದಿದೆ. ಮಲ್ಲಯ್ಯಸ್ವಾಮಿಗಳು, ಅಥಣಿ ಇವರ ಶ್ರೀಕೃಷ್ಣ ಪಾರಿಜಾತ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಕಟಗೇರಿಯಲ್ಲಿಯೂ ಕೂಡಾ ಶಿವಯೋಗಿ ಮುರುಘೇಂದ್ರ ಜನಪದ ಕಲಾಸಂಘ ಜನಪದ ಕಲೆಯನ್ನು ಬೆಳೆಸಿಕೊಂಡು ಬರುವಲ್ಲಿ ಮಹತ್ವವನ್ನು ಪಡೆದಿವೆ ಬಡಚಿಗ್ರಾಮದಲ್ಲಿಯ ಬಯಲಾಟ ಕಂಪನಿಗಳು ಸತ್ಯವಾನ ಸಾವಿತ್ರಿ ಮಾರ್ಕಂಡೇಯ ಪುರಾಣ ಮುಂತಾದ ಪೌರಾಣಿಕ ನಾಟಕಗಳನ್ನಾಡುತ್ತಾರೆ.

ಹಲ್ಯಾಳಗ್ರಾಮದ ಶ್ರೀ ಶಶಿಧರ ಸಾಮಪ್ಪಾ ಭಜಂತ್ರಿ ಹಾಗೂ ಸಂಗಡಿಗರು, ಈ ಕಲೆಯನ್ನು ಬೆಳೆಸುತ್ತಾ ಪೋಷಿಸಿಕೊಂಡು ಹೊರಟಿರುವವರು ಒಟ್ಟು ಈ ತಂಡದಲ್ಲಿ ೬ ಜನರಿದ್ದು ಈ ವಾದನವನ್ನು ಕೇಳುವವರಿಗೆ ಬಹಳ ಮನಮೋಹಕವಾಗಿ ಮನಸ್ಸಿಗೆ ಹಿತವೆನಿಸುತ್ತದೆ. ಈ ಕಲೆಯು ಈ ಭಾಗದಲ್ಲಿ ಬಹುವಿಶಿಷ್ಟತೆಯನ್ನು ಪಡೆದುಕೊಂಡಿದೆ.

ಭಜನೆ

ದೈವಾರಾಧನೆಯಲ್ಲಿ ಭಜನೆಗೆ ಮಹತ್ವವಾದ ಸ್ಥಾನವಿದೆ. ದೇವರನ್ನು ಕುರಿತು ಒಂಟಿಯಾಗಿಯೋ ಗುಂಪಿನಲ್ಲೋ ಭಕ್ತಿಯಿಂದ ಸ್ತುತಿಸುವ ಕ್ರಮಕ್ಕೆ 'ಭಜನೆ' ಎನ್ನುತ್ತಾರೆ. ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಭಜನಾಮಂಡಳಿಗಳಿವೆ. ಭಜನೆಯಲ್ಲಿ ಮಕ್ಕಳಿಂದ ಮುದುಕರವರೆಗೆ ಎಲ್ಲಾವಯಸ್ಸಿನವರೂ ಸೇರಿಕೊಳ್ಳಬಹುದು. ಹಾರ್ಮೋನಿಯಂ, ತಾಳ, ತಬಲ, ದಮ್ಮಡಿ, ಏಕತಾರಿ, ಮುಂತಾದ ವಾದ್ಯಗಳ ಹಿನ್ನೆಲೆಯಲ್ಲಿ ದೇವರಸ್ತುತಿ, ತತ್ವಶೀಲತೆ, ವಚನ ಮೊದಲಾದವನ್ನು ಹಾಡುತ್ತಾರೆ. ಭಜನೆ ಪ್ರಾರಂಭಿಸುವಾಗ ಮತ್ತು ಪ್ರತಿಯೊಂದು ಹಾಡು ಪದ ಮುಗಿದ ಕೂಡಲೇ ಶಿವಭಜನೆಯಲ್ಲಾದರೆ 'ಜಯಾಜಯ ನಮಃ ಪಾರ್ವತಿ ಪತೇ' ಎಂದು ಮುಖಂಡನಾದವನು ಹೇಳಿದರೆ ಉಳಿದವರು 'ಹರಹರ ಮಹಾದೇವ' ಎಂದು ಒಟ್ಟಿಗೆ ಹೇಳುತ್ತಾರೆ.

ಅಥಣಿ ನಗರದಲ್ಲಿ ಮತ್ತು ಅಥಣಿ ತಾಲ್ಲೂಕಿನಲ್ಲಿ ಅನೇಕ ಭಜನಾ ಮಂಡಳಿಗಳನ್ನು ನಾವು ನೋಡುತ್ತೇವೆ. ಅಂತಹ ತಂಡಗಳಲ್ಲಿ ಪ್ರಮುಖರೆಂದರೆ ಶ್ರೀ ಸುಭಾನಂದ ಮಧಬಾವಿ ಹಾಗೂ ತಂಡದವರ ಶಿವಭಜನೆ ಅತ್ಯಂತ ಮನಸ್ಸಿಗೆ ಮುದನೀಡುವಂತ ಭಜನಾ ತಂಡ. ಮತ್ತು ಶಿವನೂರ ಗ್ರಾಮದ ಭಜನಾ ಮಂಡಳಿ ಮತ್ತು ಕಟಗೇರಿ ಗ್ರಾಮದ ಭಜನಾ ಮಂಡಳಿಗಳು ಭಜನೆಯ ಮುಖಾಂತರ ಗ್ರಾಮೀಣ ಭಾಗದ ಜನರಿಗೆ ಆಧ್ಯಾತ್ಮಿಕ ರುಚಿಯನ್ನು ತೋರಿಸುತ್ತಾ ಮನರಂಜನೆಯನ್ನು ಒದಗಿಸುತ್ತಾ ಸಾಗುತ್ತಿದ್ದಾರೆ.

ಖಣಿ ವಾದನ

ಅನೇಕ ಕಲೆಗಳಲ್ಲಿ ಖಣಿವಾದನ ಕೂಡ ಒಂದು. ಅಥಣಿ ಪರಿಸರದಲ್ಲಿ ಈ ಖಣಿವಾದನ ಪ್ರಮುಖವಾದದ್ದು. ಈ ಖಣಿವಾದನವನ್ನು ಶ್ರೀ ತಮ್ಮಣ್ಣಗಾಡಿವಡ್ಡರ ಹಾಗೂ ಸಂಗಡಿಗರು ಬಾರಿಸುತ್ತಾ

ಜನರನ್ನು ಆಕರ್ಷಿಸುತ್ತಾ ಬಂದಿದ್ದಾರೆ. ಶ್ರೀ ತಮ್ಮಣ್ಣಪ್ಪ ಗಾಡಿವಡ್ಡರ ಅವರು ತಮ್ಮ ಈ ಇಳಿವಯಸ್ಸಿನಲ್ಲಿಯೂ ಕೂಡಾ ಈ ಕಲೆಯನ್ನು ಬೆಳೆಸಿಕೊಂಡು ಹೋಗುತ್ತಿರುವುದು ಒಂದು ವಿಶೇಷವೇ ಸರಿ ಎಂದು ಹೇಳಬಹುದು. ಈ ತಂಡದಲ್ಲಿ ೬ ಜನ ಕಲಾವಿದರಿದ್ದು ಅವರ ಮತ್ತು ಆ ಕಲೆಯನ್ನು ಬೆಳೆಸಿರುವ ಶ್ರೀತಮ್ಮಣ್ಣಪ್ಪಾ ಗಾಡಿವಡ್ಡರ ಕಾರ್ಯ ಶ್ಲಾಘನೀಯ.

ಚೌಡಿಕೆ

ಶಕ್ತಿ ದೇವತೆಯ ಆರಾಧನಾ ಸಂಪ್ರದಾಯದಲ್ಲಿ ದೇವಿಯ ಮಹಿಮಾವಳಿಗಳನ್ನು ಭಕ್ತಿಯಿಂದ ಸ್ತುತಿಸುವಾಗ ಹಿನ್ನಲೆಯಲ್ಲಿ ನುಡಿಸುವ ವಾದ್ಯವೇ 'ಚೌಡಿಕೆ' ಈ ಕಲೆಯನ್ನು ನಾವು ಹೆಚ್ಚಾಗಿ ಕಾಣವುದು ಬೆಳಗಾವಿ ಜಿಲ್ಲೆಯಲ್ಲಿಯೇ. ಬೆಳಗಾವಿ ಜಿಲ್ಲೆಯ ಸವದತ್ತಿ ರೇಣುಕೆಯನ್ನು ಕುರಿತು ಪದಗಳನ್ನು ರಚಿಸಿ ಅವುಗಳನ್ನು ಚೌಡಿಕೆ ವಾದ್ಯದೊಂದಿಗೆ ಹಾಡುತ್ತಾರೆ. ಚೌಡಿಕೆ ನುಡಿಸುವವರನ್ನು 'ಜೋಗಿ', 'ಜೋಗತಿ' ಎಂದು ಕರೆಯುತ್ತಾರೆ. ಇವರು ಎಲ್ಲಮ್ಮದೇವಿಯ ಸೇವೆಗಾಗಿ ದೀಕ್ಷೆ ಪಡೆದವರು.

ಚೌಡಿಕೆಯವರು ರೇಣುಕೆಯ ಮಹಿಮಾವಳಿಗಳನ್ನು ಹಾಡುವುದರ ಜೊತೆಗೆ ಜನಪದ ಕಥಾ ಪ್ರಸಂಗಗಳನ್ನು ನಡೆಸುತ್ತಾರೆ. ಪ್ರಧಾನ ಗಾಯಕನು ಚೌಡಿಕೆ ಹಿಡಿದು ಹಾಡಲು ಪ್ರಾರಂಭಿಸುತ್ತಾನೆ. ಅವನ ಅಕ್ಕ ಪಕ್ಕದಲ್ಲಿ ವೃತ್ತಿಗಾಯಕ ಮತ್ತು ಹಿಮ್ಮೇಳಕ್ಕೆ ಇಬ್ಬರೂ ನಿಂತಿರುತ್ತಾರೆ. ಪ್ರಧಾನಗಾಯಕನು

ಆದಿಯಲ್ಲಿ ರೇಣುಕೆಯಾಗಿ

ತ್ರೇತದೊಳಗೆ ಜಾನಕಿಯಾಗಿ

ದ್ವಾಪರದಲ್ಲಿ ದ್ರೌಪದಿಯಾಗಿ

ಕಲಿಯುಗದಲ್ಲಿ ಎಲ್ಲಮ್ಮನೆನಿಸಿದೆ

ಹೀಗೆ ಹಾಡಿದ ನಂತರ ಕಥೆಯ ಮುಕ್ತಾಯದಲ್ಲಿ "ಉಧೋ ಉಧೋ" ಎಂದು ನುಡಿಯುತ್ತಾರೆ.

ಇಂತಹ ಚೌಡಿಕೆ ಪದಗಳನ್ನು ಹಾಡುವವರಲ್ಲಿ ಮಹಿಳೆಯರು ಹೆಚ್ಚಾಗಿ ಕಾಣುತ್ತಾರೆ. ಅಥವಾ ತಾಲ್ಲೂಕಿನ ಕೊಕಟನೂರ ಎಲ್ಲಮ್ಮದೇವಿಯ ಪುಣ್ಯಸ್ಥಾನ. ಈ ಕೊಕಟನೂರ ಗ್ರಾಮದ ಶ್ರೀ ರಾಧಾಬಾಯಿ ಮಾದರ ಹಾಗೂ ಸಂಗಡಿಗರು, ಚೌಡಿಕೆ ಪದವನ್ನು ತುಂಬಾ ಸೊಗಸಾಗಿ ಹಾಡುತ್ತಾರೆ. ಅದೇ ರೀತಿ ಮಧಬಾವಿ ಗ್ರಾಮದ ಶ್ರೀಮತಿ ಕಮಲವ್ವ ಶಿವಪ್ಪ ಕಾಂಬಳೆ ಹಾಗೂ ಸಂಗಡಿಗರು ನಡೆಸಿಕೊಡುವ ಚೌಡಕಿ ಪದಗಳು ತುಂಬಾ ಪ್ರಸಿದ್ಧಿಯನ್ನು ಪಡೆದಿವೆ. ಅಥಣಿ ತಾಲ್ಲೂಕಿನ ಅನಂತರಪುರ, ಕೊಕಟನೂರ, ಮದಬಾವಿ ಮತ್ತು ಅಥಣಿ ನಗರದಲ್ಲಿಯೂ ಕೂಡಾ ಈ ಚೌಡಿಕೆಯವರನ್ನು ನಾವು ಕಾಣುತ್ತೇವೆ. ಈ ಭಾಗದಲ್ಲಿ ಅಂದರೆ ಕಾಗವಾಡ ಭಾಗದಲ್ಲಿ ಚೌಡಿಕೆಯನ್ನು ತೆಗೆದುಕೊಂಡು ಬರುವ ಜೋಗತಿಯರ ಜೋಗತಿ ಕುಣಿತ ಅದೇ ಹೆಸರಿನಿಂದ ಪ್ರಸಿದ್ಧಿಯನ್ನು ಪಡೆದುಕೊಂಡಿದೆ.

ಹಲಗೆ ವಾದನ

ಅಥಣಿ ತಾಲ್ಲೂಕಿನ ಮೋಳೆ ಗ್ರಾಮದ ಗೋಪಾಲಮಾದರ ಬಾರಿಸುವ ಹಲಗೆವಾದನ ಜನರ

ಮೆಚ್ಚುಗೆಯನ್ನು ಪಡೆದಿದೆ. ಹಲಗೆವಾದನಕ್ಕೆ ಎಂತವನ ಮನಸ್ಸಾದರೂ ಸೋಲಬೇಕು ಅಂತಹ ವಾದನವನ್ನು ಹಲಗೆ ಬಾರಿಸುವವರು ಬಾರಿಸುತ್ತಾರೆ.

ಸುಗಮ ಸಂಗೀತ

ಸುಗಮ ಸಂಗೀತದಲ್ಲಿ ತೇವರಟ್ಟಿ ಗ್ರಾಮದ ಶ್ರೀ ಕೈಲಾಸ ಮದಬಾವಿ ಇವರು ೫ ಜನರ ತಂಡವನ್ನು ಕಟ್ಟಿಕೊಂಡು ಆ ಕಲೆಯನ್ನು ಬೆಳೆಸುತ್ತಾ ಸಾಗುತ್ತಿದ್ದಾರೆ. ಶ್ರೀ ಶೈಲ ಮದಬಾವಿಯವರು ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಾ ಈ ಕಲೆಯನ್ನು ಪೋಷಿಸಿಕೊಂಡು ಹೋಗುತ್ತಿರುವರು. ಇಂತಹ ಅನೇಕ ಜನಪದ ಕಲೆಗಳನ್ನು ಅಥಣಿ ನಗರ ಮತ್ತು ಅಥಣಿ ತಾಲ್ಲೂಕಿನ ಅನೇಕ ಕಲಾವಿದರು ಕಲೆಯನ್ನು ಬೆಳೆಸುತ್ತಾ ಪೋಷಿಸುತ್ತಾ ಸಾಗಿಸುತ್ತಿದ್ದಾರೆ. ಅಥಣಿ ತಾಲ್ಲೂಕಿನ ಕಟಗೇರಿ ಗ್ರಾಮದಲ್ಲಿ ಸ್ಥಾಪಿತವಾಗಿರುವ ಶ್ರೀ ಶ್ರೀಶೈಲ ಕಂಬಾಣಿಯವರ ನೇತೃತ್ವದಲ್ಲಿ ಸಾಗಿಸುತ್ತಿರುವ ಶ್ರೀ ಶಿವಯೋಗಿ ಮುರುಘೇಂದ್ರ ಜನಪದ ಕಲಾ ಸಂಘವು ಕೂಡಾ ಜನಪದ ಕಲೆಗಳನ್ನು ಬೆಳೆಸಿಕೊಂಡು ಹೋಗುವಲ್ಲಿ ವಿಶಿಷ್ಟತೆಯನ್ನು ಪಡೆದುಕೊಂಡಿದೆ. ಈ ಜನಪದ ಕಲೆಯ ಬಗ್ಗೆ ಎಷ್ಟು ಹೇಳಿದರೂ ಕಡಿಮೆ.

ಸಾಹಿತ್ಯ, ಸಂಗೀತ, ಕಲೆಗಳು ವ್ಯಕ್ತಿಯೊಬ್ಬನ ನಿರ್ಮಿತಿಗಳೆ ಆಗಿದ್ದು ರಚನಾಕಾರನಿಗೆ ಮತ್ತು ಸಹೃದಯರಿಗೆ ತತ್‌ಕ್ಷಣದಲ್ಲಿ ಆನಂದ, ಸಂತೋಷ, ರಸಾನಂದಗಳನ್ನುಂಟು ಮಾಡುತ್ತವೆ. ಅಲ್ಲದೆ ಇವು ಬ್ರಹ್ಮಾನಂದ ಸ್ವರೂಪದವುಗಳಾಗಿ ಮೋಕ್ಷವನ್ನು ಗುರಿಯಾಗಿಸಿಕೊಂಡಿರುತ್ತವೆ. ಜನಪದರು ಈ ಕಲೆಗಳನ್ನು ಎಂದಿನಿಂದ ಕರಗತ ಮಾಡಿಕೊಂಡರು ಎಂಬುದಕ್ಕೆ ಗ್ರಂಥಸ್ಥ ಆಧಾರಗಳಿಲ್ಲ. ಹಾಗೆ ಹುಡುಕುವುದು ತಪ್ಪು. ಆದರೆ ಅವರ ಬದುಕೆ ಇದಕ್ಕೆ ಆಧಾರವಾಗಿ ನಿಲ್ಲುತ್ತದೆ.

ಆದಿ ಮಾನವನಿಗೆ ಬೇಟೆ ಸಿಕ್ಕಾಗಿನ ಸಂತೋಷ ಮತ್ತು ಅದನ್ನು ಸುಡುವಾಗ ಬೆಂಕಿಯ ಸುತ್ತ ಅವರೆಲ್ಲರು ಚಪ್ಪಾಳೆ ತಟ್ಟುತ್ತಾ ನಲಿದಾಡುವಾಗಿನ ಆನಂದವೆ ಕಲೆಯಾಗಿ ಅರಳಿದೆ ಎಂಬುದು ಎಲ್ಲರೂ ಒಪ್ಪತಕ್ಕ ಸಂಗತಿಯೇ ಆಗಿದೆ. ಗಾಳಿ, ಮಳೆ, ಸಿಡಿಲುಗಳ ಭಯದಿಂದ ಆರಾಧನೆ, ಪೂಜೆ, ಅರ್ಪಣೆಗಳಿಂದಲೂ ಈ ಕಲೆಗಳು ಜನ್ಮತಾಳಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಸಂತೋಷ ಮತ್ತು ಕಷ್ಟ ಪರಿಹಾರಕ್ಕಾಗಿ ಜನ್ಮತಾಳಿದ ಜನಪದ ಕಲೆ ಶಿಷ್ಟ ಜನಪದ ಕಲೆಗಿಂತ ಪ್ರಾಚೀನವಾದುದು. ಪ್ರಸ್ತುತ ವಾಲ್ಮೀಕಿ ಸಮುದಾಯದ ಕಲಾವಿದರು ಎಂಬ ವಿಷಯವನ್ನು ಅಧ್ಯಯನಕ್ಕೆ ಒಳಪಡಿಸುವಾಗ ಗಮನಿಸಿಬೇಕಾದ ಅಂಶವೊಂದಿದೆ. ಅದೇನೆಂದರೆ, ಡೊಳ್ಳಿನ ಪದ ಎಂದಾಗ ಕುರುಬ ಸಮುದಾಯ, ಚೌಡಕಿ ಪದ ಎಂದಾಗ ದೇವದಾಸಿ ಸಮುದಾಯ, ಕಸೂತಿ ಕಲೆ ಎಂದಾಗ ಲಂಬಾಣಿ ಸಮುದಾಯ, ಗೊಂದಲಿಗರ ಪದ ಎಂದಾಗ ಗೊಂದಲಿಗ ಸಮುದಾಯ, ನೆನಪಾಗುವಂತೆ ವಾಲ್ಮೀಕಿ ಸಮುದಾಯದ್ದೇ ಎಂದು ಹೇಳಬಹುದಾದ ಕಲೆ ಇಲ್ಲವೆನಿಸುತ್ತದೆ. 'ಬೇಡರ ಕುಣಿತ' ಎಂಬುದೊಂದು ಕಲೆ ಉತ್ತರ ಕನ್ನಡ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಮಾತ್ರ ಕಂಡುಬರುತ್ತದೆ. ಹೋಳಿ ಹಬ್ಬದಲ್ಲಿ ಮನರಂಜನೆಗಾಗಿ ಕುಣಿಯುವ ಈ ಕಲೆ ಅಖಂಡ ಕರ್ನಾಟಕದ ಮಟ್ಟಿಗೆ ಬೆಳೆದು ಸಮುದಾಯದ ಕಲೆ ಎಂದು ಗುರುತಿಸುವಷ್ಟು ವ್ಯಾಪಕವಾಗಿ ಅದು ಬೆಳೆದಿಲ್ಲ ಎಂಬುದು ಖೇದಕರ ಸಂಗತಿಯೇ ಹೌದು.

ವಾಲ್ಮೀಕಿ ಸಮುದಾಯದ ಕಲಾಕಾರರು ವ್ಯಕ್ತಿಗತ ಆಸಕ್ತಿ ಹವ್ಯಾಸಗಳಿಂದ ಜನಪದ ಕಲೆಗಳಲ್ಲಿ ತಮ್ಮನ್ನು ಗುರುತಿಸಿಕೊಂಡು ಪ್ರಸಿದ್ಧಿ, ಪ್ರಶಸ್ತಿ ಉತ್ತಮ ಅವಕಾಶಗಳನ್ನು ಪಡೆದುಕೊಂಡಿದ್ದಾರೆ ಎಂಬುದು ಈ ಪ್ರಬಂಧಕ್ಕಾಗಿ ಕೈಗೊಂಡು ಕ್ಷೇತ್ರಕಾರ್ಯದಿಂದಾಗಿ ಮನದಟ್ಟಾದ ಅಂಶ.

ಕರ್ನಾಟಕದಲ್ಲಿ ಲಿಂಗಾಯತ, ಕುರುಬ, ದಲಿತ ಸಮುದಾಯದಷ್ಟು ಸಂಖ್ಯಾಬಲದ ವಾಲ್ಮೀಕಿ ಸಮುದಾಯ ಇಲ್ಲ. ಅದೇ ರೀತಿಯಾಗಿ ಅಥಣಿ ತಾಲೂಕಿನಲ್ಲಿ ಬಡಚಿ, ಕಟಗೇರಿ, ಚಮಕೇರಿ, ಶೇಡಬಾಳ, ಉಗಾರ, ಐನಾಪುರ, ಹಲ್ಯಾಳಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದು, ಇತರೆಡೆ ಕಡಿಮೆ ಪ್ರಮಾಣದಲ್ಲಿ ಇದ್ದಾರೆ. ಕಲ್ಲೊತ್ತಿ, ಬೇಡರಹಟ್ಟಿ, ರಡ್ಡೇರಹಟ್ಟಿ, ನಂದೇಶ್ವರ, ಅಡಾಳಟ್ಟಿ ಕೆಲವು ಹಳ್ಳಿಗಳಲ್ಲಿ ಮಾತ್ರ ಈ ಸಮುದಾಯದವರು ವ್ಯವಸಾಯವನ್ನೇ ನಂಬಿಕೊಂಡು ಬದುಕಿದ್ದಾರೆ. ಆಧುನಿಕ ಸಂಶೋಧನೆಗಳಿಂದ, ವ್ಯಾವಹಾರಿಕವಾದ ಒತ್ತಡದ ಇಂದಿನ ಜೀವನ ಶೈಲಿಯಲ್ಲಿ ಜನಪದ ಕಲೆ, ಸಾಹಿತ್ಯ ನಶಿಸಿ ಹೋಗುತ್ತಿರುವ ಸಂದರ್ಭದಲ್ಲಿ ಸಂಘ-ಸಂಸ್ಥೆಗಳು ವಿಶ್ವವಿದ್ಯಾಲಯಗಳು ಅದನ್ನು ಉಳಿಸಿಕೊಳ್ಳಲು ಹರಸಾಹಸ ಪಡುತ್ತಿರುವಂತೆಯೇ ಕಲಾಕಾರರೂ ಸಹ ತಮ್ಮ ಕಲೆಯನ್ನು ಉಳಿಸಿಬೆಳೆಸಿಕೊಂಡು ಬರುತ್ತಿದ್ದಾರೆ ಎಂಬುದು ಸಮಾಧಾನವನ್ನು ತರುವ ಸಂಗತಿಯಾಗಿದೆ. ಇಂಥ ಕಲಾಕಾರರ ಪಟ್ಟಿಯಲ್ಲಿ ವಾಲ್ಮೀಕಿ ಸಮುದಾಯದ ಕಲಾಕಾರರ ಹೆಸರುಗಳು ಅಗ್ರಸ್ಥಾನದಲ್ಲಿ ನಿಲ್ಲುತ್ತದೆ.

ಶಿಷ್ಟ ಕಲೆಗಳಿಗೆ ಎಣಿಕೆಯ ಮಿತಿ ಇರುವಂತೆ ಜನಪದ ಕಲೆಗಳಿಗೆ ಮಿತಿ ಎಂಬುದೇ ಇಲ್ಲ. ಅದು ಸಾಗರವಿದ್ದಂತೆ. ಹೆಕ್ಕಿದಷ್ಟು ಸಿಗುವ ಆಳವನ್ನು ಹೊಂದಿದ್ದು, ಬಹುಮಟ್ಟಿನ ಕಲೆಗಳಲ್ಲಿ ವಾಲ್ಮೀಕಿ ಸಮುದಾಯದವರು ಕಂಡುಬರುತ್ತಾರೆ.

ಅಡಾಳಟ್ಟಿಯ ಮಾರುತಿ ನಿಂಗಪ್ಪ ನಾಯಕ, ಹಣಮಂತ ಧರ್ಮಣ್ಣ ನಾಯಕ, ಗುರಪ್ಪ ನಾಯಕ, ಶಿವಾನಂದ ನಾಯಕ ಕಲಾವಿದರು ಮುಸ್ಲೀಮರ ಮೊಹರಂ ಹಬ್ಬದ ಸಂದರ್ಭದಲ್ಲಿ ಕರ್ಬಲ್ ಗೀತೆಗಳನ್ನು ಹಾಡುತ್ತಾರೆ. ಈ ತಂಡದವರು ಪೈಗಂಬರರ ಮೊಮ್ಮಕ್ಕಳಾದ ಹಸೇನ ಹುಸೇನರ ಹೆಸರಿನ ಮೇಳದ ಪರವಾಗಿ ಹಾಡಿದರೆ ಇವರ ವಿರುದ್ಧವಾಗಿ ನಂದೇಶ್ವರದ ಮಾರುತಿ ಹಳಮನಿ ಇವರು 'ಯಜೀದನ' ಮೇಳದಲ್ಲಿ ಹಾಡುತ್ತಾರೆ. ಪರಸ್ಪರ ವಿರುದ್ಧದ ಹಾಡುಗಳು ಹುಸೇನರು ಕರ್‌ಬಲ್ ಮರುಭೂಮಿಯಲ್ಲಿ ತನ್ನ ಅರವತ್ತು ಜನರ ಅನುಯಾಯಿಗಳೊಂದಿಗೆ 'ಯಜೀದನ' ಸೈನ್ಯದೊಡನೆ ಹೋರಾಡುತ್ತ ಸಾವನ್ನಪ್ಪಿದ ಸಂಗತಿಗಳೆಲ್ಲವನ್ನು ನೆನಪಿಗೆ ತರುತ್ತವೆ. ಹಸೇನ-ಹುಸೇನ ಮೇಳವು ಸಂಪೂರ್ಣವಾಗಿ ವಾಲ್ಮೀಕಿ ಸಮುದಾಯದ ಕಲಾಕಾರರಿಂದ ಕೂಡಿದ್ದರೆ ಯಜೀದನ ಮೇಳದಲ್ಲಿ ಜೈನ ಸಮಾಜದವರಿದ್ದಾರೆಂಬುದೊಂದು ವಿಶೇಷ. ಪ್ರಮುಖವಾಗಿ ತೇರದಾಳ ತುಕಾರಾಮ ಬರೆದ ಹಾಡುಗಳನ್ನು ಹಸೇನ ಹುಸೇನ ಮೇಳದವರು ಹಾಡುತ್ತಾರೆ. ಇದರೊಂದಿಗೆ ಹಿಡಕಲ್, ನಾಗರಾಳ, ಶಿರೂರ, ದಿಗ್ಗೇವಾಡಿ ಗುರುಗಳು ಬರೆದ ಹಾಡುಗಳನ್ನು ಹಾಡುತ್ತಾರೆ.

ಕಟಗೇರಿಯ ನಾಗಪ್ಪ ಆಲಕನೂರು ಇವರು ಹಂತಿಹಾಡು, ಡೊಳ್ಳಿನ ಹಾಡು, ಕುಬಸದ ಹಾಡು, ಸೋಬಾನದ ಹಾಡು, ಕರ್ಬಲ ಹಾಡುಗಳನ್ನು ಹಾಡುವ ಪ್ರಮುಖ ಕಲಾವಿದರು. ಬೇರೆ ಊರುಗಳಿಗೂ ಹೋಗಿ ಇವರು ಕಲಾ ಮೇಳಗಳನ್ನು ನಡೆಸಿಕೊಡುತ್ತಾರೆ.

ಆಡಾಳಟ್ಟಿಯ ಗೌರವ್ವಾ ಧಾ ನಾಯಕ, ಸೌಮಿತ್ರಿ ಸಿ ನಾಯಕ, ಕಾಶವ್ವ ಮ.ನಾಯಕ, ಕಾಸವ್ವ ನಿಂ.ನಾಯಕ ಮಹಿಳೆಯರು ಸೋಬಾನೆ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುವಲ್ಲಿ ಪ್ರಸಿದ್ಧರು. ಮುಂಡ ಪದ್ಯಗಳನ್ನು ಹಣಮಂತ ನಾಯಕ ಹಾಡುತ್ತಾರೆ.

ಹಲ್ಯಾಳ ಗ್ರಾಮದ ಶಿವಪ್ಪ ಪರಸಪ್ಪ ಬಿಸಲನಾಯಕ ಇವರು ಹುಟ್ಟು ಕಲಾವಿದರು. ಅನೇಕ ವೃತ್ತಿಗಳನ್ನು ಕೈಗೊಂಡಂತೆ ಅನೇಕ ಕಲೆಗಳಲ್ಲಿ ಇವರು ಸಿದ್ಧಹಸ್ತರು. ಇವರೊಂದಿಗೆ ವಿಠಲ ಬ ನಾಯಕ ಜೊತೆಗಾರರು. ಕರ್ಬಲ್ ಗೀತೆಗಳನ್ನು ಜಿಲ್ಲಾಮಟ್ಟದವರೆಗೂ ಹಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕರ್ಬಲ್ ಗೀತೆಗಳನ್ನು ಹಾಡುವುದರಲ್ಲಿ ಬೆಳಗಾವಿ ಜಿಲ್ಲಾ ಮಟ್ಟದ ಮೇಳದಲ್ಲಿ ಸತತ ಮೂರು ವರ್ಷ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ. ಈ ಮೇಳದಲ್ಲಿ ಬೇರೆ ಸಮಾಜದ ಕಲಾವಿದರು ಇದ್ದಾರೆ ಎಂಬುದು, ವಾಲ್ಮೀಕಿ ಸಮುದಾಯದವರು ಬೇರೆ ಸಮಾಜದವರೊಂದಿಗೆ ಅನ್ಯೋನ್ಯವಾಗಿದ್ದಾರೆಂಬುದನ್ನು ತಿಳಿಸಿ ಕೊಡುತ್ತದೆ.

ಶಿವಪ್ಪ ಪ.ನಾಯಕ ಇವರು ಭಜನಾ ತಂಡ ಕಟ್ಟಿ ಸ್ಥಾನಿಕವಾಗಿ ಭಜನಾ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ. ಲೇಜಿಮ್ ಆಡುತ್ತ ಹಗ್ಗ ಹೊಸೆವ ಆಟದಲ್ಲಿ ಇವರು ಪ್ರವೀಣರಾದಂತೆಯೇ ಕೈಕಾಲುಗಳನ್ನು ನೆಲಕ್ಕೆ ತಾಗಿಸದೆ ಅಂದರೆ ತಿಕದಿಂದಲೇ ಜಿಗಿಯುತ್ತಾ ನಂದೇಶ್ವರದ ವಿಶಾಲವಾದ ಹನುಮಂತ ದೇವರ ಗುಡಿಯನ್ನು ಮೂರು ಸಲ ಸುತ್ತು ಹಾಕಿದ್ದಾರೆ ಎಂಬುದನ್ನು ಅಲ್ಲಿಯ ಜನಪದರು ಇನ್ನು ಸ್ಮರಿಸಿಕೊಳ್ಳುತ್ತಾರೆ. ಕರ್ಬಲ್‌ದಲ್ಲಿ ಬರುವ ದಂಗಲ್ ಮೇಳಕ್ಕೆ ಇವರು ಹೆಜ್ಜೆ ಹಾಕುವ ಕಲೆಯನ್ನು ಹೇಳಿಕೊಡುತ್ತಾರೆ. ಈ ಎಲ್ಲ ಕಲೆಗಳಿಂದ ಹಲ್ಯಾಳದ ಜನರು ಇವರನ್ನು 'ಮಾಸ್ತರ' ಎಂದೇ ಗೌರವಿಸುತ್ತಾರೆ. ಗ್ರಾಮದ ಪ್ರತಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಇವರು ಕಡ್ಡಾಯವಾಗಿ ಇರಲೇಬೇಕು ಎಂಬಷ್ಟು ಪ್ರಖ್ಯಾತಿಯನ್ನು ಪಡೆದಿದ್ದಾರೆ. ನಂದೇಶ್ವರದ ದಿ.ರಾಮಪ್ಪ ಶಿವಲಿಂಗ ಭೋಜನ್ನವರ, ಪರಗೊಂಡ ಹಲ್ಯಾಳ, ರಾಮಪ್ಪ ಗೋಜನ್ನವರ, ಗಂಗಪ್ಪ ಜೋಗನ್ನವರ, ಈರಪ್ಪ ಬಸಲನಾಯಕ ಇವರು ಕರ್ಬಲ್ ಹಾಡುಗಳಿಗೆ, ಲೇಜಿಮ್ ಆಟಕ್ಕೆ ಸಿದ್ಧಹಸ್ತರು. ಲೇಜಿಮು ನೃತ್ಯದೊಂದಿಗೆ ಹಗ್ಗ ಹೊಸೆವ ಕಲೆಯಲ್ಲಿ ನೈಪುಣ್ಯತೆಯನ್ನು ಸಾಧಿಸಿದವರು.

ಮಾರುತಿ ಬೋಜನ್ನವರ, ಕಲ್ಲಪ್ಪ ಹಲ್ಯಾಳ, ರಾಮಪ್ಪ ಜೋಗನ್ನವರ, ವಿಠಲ ಹಲ್ಯಾಳ, ಭಜನಾ ತಂಡವನ್ನು ಕಟ್ಟಿಕೊಂಡು ಮೇಲಿಂದ ಮೇಲೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾರೆ. ಪ್ರಮುಖವಾಗಿ ನಿಜಗುಣ ಶಿವಯೋಗಿಗಳ ಕೈವಲ್ಯ ಪದಗಳಿಗೆ ಮತ್ತು ಪುರಂದರದಾಸರ ಕೀರ್ತನೆಗಳನ್ನು ಹಾಡುತ್ತಾರೆ. ಬ್ಯಾಡರಹಟ್ಟಿಯ ದಿ.ಗುರುಬಸಪ್ಪ ಮಾದಪ್ಪಗೋಳ, ವಾದನ ನುಡಿಸುವುದರಲ್ಲಿ ಜನರ ಪ್ರೀತಿಗೆ ಪಾತ್ರವಾಗಿದ್ದರು. ಹಲ್ಯಾಳ ಗ್ರಾಮದ ಮುತ್ತಪ್ಪ ಹಲ್ಯಾಳ ಇವರು ಭಜನಾ ಪದ, ಕೈಪಟ್ಟ ವಾದನ, ಕರಡಿ ಮಜಲಿನಲ್ಲಿ ತಾಳ ಬಾರಿಸುವುದರೊಂದಿಗೆ ವಿವಿಧ ಕಲೆಗಳನ್ನು ಕರಗತಮಾಡಿಕೊಂಡಿದ್ದಾರೆ. ಆಡಾಳಹಟ್ಟಿಯ ಲಕ್ಕಪ್ಪ ಗುಂಡಪ್ಪ ನಾಯಕ ಇವರು 'ಬಸವೇಶ್ವರ ಭಜನಾ ಮೇಳ'ವನ್ನು ಕಟ್ಟಿ ಆಕಾಶವಾಣಿ ಧಾರವಾಡ

ಕೇಂದ್ರದಿಂದ ಸಾಕಷ್ಟು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಈ ತಂಡದ ಕೆಲವರಿಗೆ ಆಕಾಶವಾಣಿ ಕೇಂದ್ರದಿಂದ ಸಂಭಾವನೆ ಬರುತ್ತದೆ ಎಂಬುದು ಅವರ ಕಲಾ ಪರಿಣತಿಯನ್ನು ಸೂಚಿಸುತ್ತದೆ.

ಶಕ್ತಿ, ಸಾಮರ್ಥ್ಯ, ನೈಪುಣ್ಯತೆಯ ಪ್ರತೀಕವಾದ ಡೊಳ್ಳು ಕುಣಿತದಲ್ಲಿಯೂ ವಾಲ್ಮೀಕಿ ಸಮುದಾಯದವರು ಸಾಕಷ್ಟು ಹೆಸರು ಮಾಡಿದ್ದಾರೆ. ರಡ್ಡೇರಹಟ್ಟಿಯ ಜ್ಞಾನೇಶ್ವರ ಅಪ್ಪಣ್ಣ ಪೂಜಾರಿ ಮತ್ತು ಸಂಗಡಿಗರು ಕಲೆಯಲ್ಲಿ ಪಳಗಿದವರು. ಹಳ್ಯಾಳ ಗ್ರಾಮದ ಹಣಮಂತ ಪರಸಪ್ಪ ಬಿಸಲನಾಯಕ ಇವರು ಬೇರೆ ಸಮಾಜದವರ ತಂಡದಲ್ಲಿ ಕೂಡಿಕೊಂಡು ಡೊಳ್ಳುಕುಣಿತ ಮತ್ತು ಪದಗಳನ್ನು ಹೇಳುವಲ್ಲಿ ನಿಪುಣರಾಗಿದ್ದಾರೆ. ಕಟಗೇರಿಯ ನಾಗಪ್ಪ ಆಲಕನೂರು ಇವರು ಸಹ ಡೊಳ್ಳಿನ ಹಾಡುಗಳನ್ನು ಹಾಡುತ್ತಾರೆ.

ನಾಟಕ ಕಲಾ ಕ್ಷೇತ್ರಕ್ಕೆ ವಾಲ್ಮೀಕಿ ಸಮುದಾಯದ ಕಲಾಕಾರರು ವಿಶಿಷ್ಟವಾದ ಕೊಡುಗೆಗಳನ್ನು ನೀಡುತ್ತಿದ್ದಾರೆ. ಅಡಾಳಟ್ಟಿಯ ಮಾರುತಿ ನಿಂಗಪ್ಪ ನಾಯಕ ಇವರು 'ಕಂಗೆಟ್ಟ ಹುಲಿ' ನಾಟಕದಲ್ಲಿ ಖಳನಾಯಕನ ಪಾತ್ರವನ್ನು ಜೀವ ತುಂಬಿ ಅಭಿನಯಿಸುವ ಕಲಾವಿದರು. ದುಃಖ, ಸಂತೋಷಗಳ ಏಕಾಭಿನಯ ಮಾಡುತ್ತಾರೆ. ನಂದೇಶ್ವರದ ಬಿ.ಆರ್.ಬೋಜನವರ ಸಿಂಧೂರ ಲಕ್ಷ್ಮಣ, ಕೆಟ್ಟಮೇಲೆ ಬುದ್ಧಿಬಂತು, ರೀತಿ ತಪ್ಪಿದರೂ ನೀತಿ ಬಿಟ್ಟಿಲ್ಲ ಮುಂತಾದ ನಾಟಕಗಳಲ್ಲಿ ಅಭಿನಯಿಸುವುದರೊಂದಿಗೆ, ನಿರ್ದೇಶಕರಾಗಿಯೂ ಕೆಲಸ ಮಾಡುತ್ತಾರೆ. ಇವರು ವೃತ್ತಿಯಿಂದ ಪ್ರೌಢಶಾಲಾ ಶಿಕ್ಷಕರಾಗಿದ್ದರೂ ತಮ್ಮ ಕಲಾ ಆಸಕ್ತಿಯನ್ನು ಜೀವಂತವಾಗಿರಲು ಖಿಳೇಗಾಂವ, ರಬಕವಿಗಳಲ್ಲಿ ನಾಟಕ ಪ್ರಯೋಗಗಳನ್ನು ನಡೆಸಿದ್ದಾರೆ. ಗಿರೀಶ ಬಸಲನಾಯಕ ಇವರು ಚಿಕ್ಕೋಡಿ ಶೈಕ್ಷಣಿಕ ವಲಯದಲ್ಲಿ ದೈಹಿಕ ಶಿಕ್ಷಕರು. ಜಿಲ್ಲಾ ಶಿಕ್ಷಕ ಸಂಘದ ಅಧ್ಯಕ್ಷರು, ಕರ್ನಾಟಕ ರಾಜ್ಯ ಶಿಕ್ಷಕ ಪ್ರತಿಭಾ ಪರಿಷತ್ತಿನ ನಿರ್ದೇಶಕರು. ಇವರು ಭಜನೆ, ಕರ್ಬಲ, ಹಲಗೆ, ಲೇಜಿಮು ಕುದುರೆ ಕುಣಿತ ಮುಂತಾದ ಕಲೆಗಳನ್ನು ಮೈಗೂಡಿಸಿಕೊಂಡು ತಾವೊಬ್ಬ ಅಪ್ಪಟ ಕಲಾವಿದರೆಂದು ಗುರುತಿಸಿಕೊಂಡಿದ್ದಾರೆ.

ಹಳ್ಯಾಳ ಗ್ರಾಮದ ಪರಸಪ್ಪ ಬಿಸಿಲನಾಯಕ ಇವರು 'ಸಂಗ್ಯಾಬಾಳ್ಯಾ' ಬಯಲಾಟದಲ್ಲಿ ಬಾಳ್ಯಾನ ಪಾತ್ರವನ್ನು ಮಾಡುತ್ತಾರೆ. ಶ್ರೀಕೃಷ್ಣ ಪಾರಿಜಾತ ಬಯಲಾಟದ ಭಾಗವತನ ಪಾತ್ರ ಮಾಡಿದ್ದಾರೆ. ನಾಟಕ ಕಂಪನಿಯನ್ನು ಕಟ್ಟಿ ಸತತವಾಗಿ ಹನ್ನೆರಡು ವರ್ಷಗಳವರೆಗೆ ಈ ಕಂಪನಿಯನ್ನು ನಡೆಸಿಕೊಂಡು ಬಂದಿದ್ದಾರೆ. ರಾಯಭಾಗ ತಾಲೂಕಿನ ಮೊರಬ ಗ್ರಾಮದಲ್ಲಿ ಮೋಹರಂ ಹಬ್ಬಕ್ಕೆ ಸತತವಾಗಿ ಐದುವರ್ಷ ಈ ಆಟವನ್ನು ಆಡಿದ್ದಾರೆ. ಇದು ಸತತ ಏಳು ದಿನಗಳವರೆಗೂ ಆಡುವ ಆಟವಾಗಿದೆ. ಇವರು ಸಿಂಧೂರ ಲಕ್ಷ್ಮಣ ನಾಟಕದಲ್ಲಿ ನರಸ್ಯಾನ ಪಾತ್ರವನ್ನು ಮಾಡುವುದಲ್ಲದೆ ಸಂಪೂರ್ಣ ಚರಿತ್ರೆಯನ್ನು ತೊಂಡಿಯಲ್ಲಿಯೇ ಹೇಳುತ್ತಾರೆ.

ನಂದೇಶ್ವರದ ಕಲಾವಿದರು 'ಕೌರವರು ಪಾಂಡವರು ಬಯಲಾಟವನ್ನು ಆಡುತ್ತಾರೆ. ಸದಾಶಿವ ನಿಡೋಣಿ ದುರ್ಯೋಧನನ ಪಾತ್ರದಲ್ಲಿ, ಭೀಮಪ್ಪ ಕಲ್ಲಪ್ಪ ಬಿಸಿಲನಾಯಕ ಧೃತರಾಷ್ಟ್ರನ ಪಾತ್ರದಲ್ಲಿ, ಹಣಮಂತ ಅಡಳ್ಳಿ ಕೃಷ್ಣನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಾರೆ. ಗಂಗಪ್ಪ ಹಲಗಲಿ, ಹಾಸ್ಯಪಾತ್ರವನ್ನು

ನಿರ್ವಹಿಸುತ್ತಾರೆ. ಹಣಮಂತ ಅಡಳ್ಳಿ ಇವರು ಕೃಷ್ಣನ ಪಾತ್ರದೊಂದಿಗೆ ಹಾಸ್ಯಪಾತ್ರವನ್ನು ಮಾಡಿ ತಮ್ಮ ಬಹುಮುಖ ಅಭಿನಯ ಪ್ರತಿಭೆಯನ್ನು ಹೊರಹಾಕುತ್ತಾರೆ. ಈ ರೀತಿಯಾಗಿ ವಾಲ್ಮೀಕಿ ಸಮುದಾಯದ ಕಲಾವಿದರು ಜನಪ್ರಿಯ ಕಲೆಗಳಲ್ಲದೆ ಕುದುರೆ ಕುಣಿತ, ಹಂತಿ ಪದ, ಸೋಬಾನೆ ಹಾಡು, ಮುಂತಾದ ಜನಪದ ಕಲೆಗಳನ್ನು ತಮ್ಮ ಜೀವನದ ಉಸಿರಾಗಿಸಿಕೊಂಡಿದ್ದಾರೆ.

೭.೨. ಅಥಣಿ ಪರಿಸರದ ಜನಪದ ಕ್ರೀಡೆಗಳು

ವಾಲ್ಮೀಕಿ ಸಮುದಾಯಕ್ಕೆ ಸಂಬಂಧಿಸಿದಂತೆ

ಭಾರತವು ಹಳ್ಳಿಗಳ ನಾಡು. ಇಲ್ಲಿಯ ಗ್ರಾಮ ಸಮಾಜ ತನ್ನದೇ ಆದ ಹತ್ತು ಹಲವು ವೈಶಿಷ್ಟ್ಯಗಳನ್ನು ಹೊಂದಿದೆ. ಕೃಷಿ ಪ್ರಧಾನವಾದ ಭಾರತದ ಗ್ರಾಮ ಸಮಾಜವು ತನ್ನದೇ ಆದ ರೀತಿಯಲ್ಲಿ ಕೃಷಿ ಪರವಾದ ಹಬ್ಬಗಳನ್ನು, ಆಚರಣೆಗಳನ್ನು, ಕ್ರೀಡೆಗಳನ್ನು ಮುಂದುವರೆಸಿಕೊಂಡು ಬಂದಿದೆ. ಇದೇ ರೀತಿಯಲ್ಲಿ ಅಥಣಿ ಪರಿಸರದ ವಾಲ್ಮೀಕಿ ಸಮುದಾಯವು ಅನುಸರಿಸಿಕೊಂಡು ಅಥವಾ ಆಡಿಕೊಂಡು ಬಂದ ಗ್ರಾಮೀಣ ಕ್ರೀಡೆಗಳು ಕೃಷಿ ಪರವಾಗಿಯೇ ಇವೆ. ಇಲ್ಲಿನ ಕೃಷಿ ಚಟುವಟಿಕೆಗಳೇ ಹಬ್ಬವಾಗಿ, ಕ್ರೀಡೆಯಾಗಿ ಆಚರಿಸಿಕೊಂಡು ಬಂದಿದ್ದಾರೆ. ಅಲ್ಲದೇ ಇಲ್ಲಿ ಕಂಡುಬರುವ ಗ್ರಾಮಗಳ ಸಂಸ್ಕೃತಿಯು ಸರಿಹೊಂದುವಂತಹ ಆಟಗಳನ್ನು ಇವರು ಇದುವರೆಗೂ ಕಾಪಾಡಿಕೊಂಡು ಬಂದಿದ್ದಾರೆ.

ಗ್ರಾಮೀಣ ಆಚರಣೆಗಳು ಎಂದರೆ ಜನಪದ ಆಟಗಳೇ ಆಗಿವೆ. ಆಧುನಿಕ ಸಂದರ್ಭದಲ್ಲಿ ನಾವು ಕ್ರಿಕೆಟ್ ಮತ್ತು ಬೇಸ್‌ಬಾಲ್‌ನಂತಹ ಆಟಗಳನ್ನು ನೋಡುತ್ತಿದ್ದೇವೆ. ಅವುಗಳು ನಮ್ಮ ಗ್ರಾಮೀಣರಿಗೆ ಪರಿಚಿತವಿರುವ ಚಿನ್ನಿದಾಂಡು ಮತ್ತು ಚೆಂಡು ಆಟಗಳ ವಿಕಾಸ ಸ್ವರೂಪಗಳು ಎಂಬುದು ಆಶ್ಚರ್ಯಕರವಾದರೂ ಸತ್ಯ.

ಜನಪದ ಆಟಗಳು ಬಹುತೇಕ ಅನುಕರಣೆಯಿಂದ, ಪೀಳಿಗೆಯಿಂದ ಪೀಳಿಗೆಗೆ, ಉಳಿದುಕೊಂಡು ಬಂದಂತವುಗಳು. ಹಾಗೆಯೇ ಸಾಮಾಜಿಕ ಅಗತ್ಯಗಳನ್ನು ಪೂರೈಸುವ ಕಾರಣದಿಂದ ಕಲಿಕೆಯಾಗಿ ಮೈಗೂಡಿಸಿ ಕೊಂಡಂತವುಗಳು. ಉದಾ. ಮಣ್ಣಿನಲ್ಲಿ ಆಡುವ ಮಣ್ಣಾಟ ಮಕ್ಕಳಿಗೆ ಪ್ರಿಯ. ಮಣ್ಣಿನಿಂದ ಮಡಿಕೆ, ಕುಡಿಕೆ ಇತ್ಯಾದಿಗಳನ್ನು ಇಂದಿನ ತನಕವು ಕುಂಬಾರರು ಮಾಡಿಕೊಂಡು ಬಂದಿರುವುದನ್ನು ನಾವು ಕಾಣಬಹುದು. ಹಾಗೆಯೇ ಮಣ್ಣನ್ನು ಹದಗೊಳಿಸಿ ಆಟಿಕೆಗಳನ್ನು ಆ ಸಮುದಾಯದ ಮಕ್ಕಳು ಹಾಗೂ ಇತರೆ ಸಮುದಾಯದ ಮಕ್ಕಳು ಕೂಡ ಸೃಷ್ಟಿಸಿ ಬಿಡುತ್ತಾರೆ. ಅಂತೆಯೇ ಬಿಲ್ಲುಗಾರಿಕೆ, ಗುರಿಗಾರಿಕೆ, ಇತ್ಯಾದಿಗಳು ಅಗತ್ಯವನ್ನು ಪೂರೈಸಲು ಬೆಳೆದು ಬಂದ ಗ್ರಾಮೀಣ ಆಟಗಳಾಗಿವೆ.

ಕ್ರೀಡೆ ಅಥವಾ ಆಟವೆಂಬುದು ಏಕಘಟಕ ಕ್ರಿಯೆಯಲ್ಲ. ಅಂದರೆ ಇಲ್ಲಿ ನಿರ್ಧಿಷ್ಟವಾಗಿ ಇಬ್ಬರು ಅಥವಾ ಮುಖಾಮುಖಿಯಾಗಿ ಎರಡು ತಂಡಗಳು ಬೇಕಾಗುತ್ತವೆ. ಇಬ್ಬರಲ್ಲು ಸ್ಪರ್ಧೆ ಇರುತ್ತದೆ. ಸೋಲು ಗೆಲುವು ಎಂಬುದೇ ಇಲ್ಲಿನ ನಿರ್ಣಾಯಕ. ಯಾವುದೇ ಗ್ರಾಮೀಣ ಆಟದಲ್ಲಿ ಸಂವಹನ ಮತ್ತು ಕ್ರಿಯೆಗಳ ಸಹಚರ್ಯ ಇದ್ದೇ ಇರುತ್ತದೆ. ಈ ಸಂವಹನವು ಕ್ರಿಯಾತ್ಮಕವಾಗಿ ಆಟಗಾರರ ಚಾತುರ್ಯ ಬುದ್ಧಿ,

ಸಾಂಘಿಕತೆ, ಶಿಸ್ತು, ನೀತಿ, ನಿಯಮಾವಳಿಗಳನ್ನು ಪ್ರಚೋದಿಸುತ್ತದೆ. ಸಮಾಜದಲ್ಲಿ ಸಮಚಿತ್ತತೆಯ ಮನೋಭಾವವನ್ನು ರೂಪಿಸಿಕೊಳ್ಳಬೇಕೆಂಬ ಪಾಠವನ್ನು ಪರೋಕ್ಷವಾಗಿ ವರ್ಧಿಸುವಂತೆ ಮಾಡುತ್ತದೆ. ಅಂದರೆ ಮನಸ್ಸನ್ನು ಹದಗೊಳಿಸುವ ಮಾಧ್ಯಮವಾಗಿ ಜನಪದ ಆಟಗಳು ಕೆಲಸ ಮಾಡುತ್ತವೆ. ಜನಪದ ಆಟಗಳು ಕೇವಲ ಮನೋರಂಜನೆಯನ್ನು ಉಂಟು ಮಾಡುವುದಲ್ಲದೆ ಸಮಾಜದೊಳಗಿನ ಏರುಪೇರುಗಳನ್ನು ಸರಿಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಗ್ರಾಮೀಣ ಪರಿಸರದ ಆಟಗಳು ಮನುಷ್ಯನ ಮಾನಸಿಕ ಬೆಳವಣಿಗೆಗೆ, ಆಂತರಿಕ ವಿಕಾಸಕ್ಕೆ ಕಾರಣವಾಗುತ್ತವೆ ಎಂಬುದು ಸತ್ಯ. ಅಂದರೆ ಇಂತಹ ಆಟಗಳು ಸಾಂದರ್ಭಿಕ ಅಗತ್ಯಕ್ಕಾಗಿ ಅನೇಕ ಮಾರ್ಪಾಡುಗಳನ್ನು ಪಡೆದವು. ಉದಾ. ಕೋಟೆ ಕಾಳಗ ಎಂಬುದು ಯುದ್ಧದ ಸಂದರ್ಭದಲ್ಲಿ ಬಳಕೆಯಾಗಿರುವ ಯುದ್ಧ ವಿಧಾನಗಳಲ್ಲಿ ಒಂದು. ಕೋಟೆಯ ಮೇಲಿನ ಸೈನಿಕರು ಕೆಳಗಿರುವ ವೈರಿಗಳನ್ನು ಕಲ್ಲು ಎಸೆಯುವ ಮೂಲಕ ಹಿಮ್ಮೆಟ್ಟಿಸುತ್ತಿದ್ದರು. ಇಲ್ಲಿನ ಕಲ್ಲು ಎಸೆಯುವ ಕ್ರಿಯೆಯು ಗುರಿಯನ್ನು ಹೊಡೆಯುವ ತಂತ್ರಗಾರಿಕೆಯನ್ನು ಸೂಚಿಸುತ್ತದೆ. ಅಂದರೆ ಕವಣೆ ಕಲ್ಲಾಟ, ಕಲ್ಲು ಬೀಸುವಾಟ, ಗುರಿಯಿಟ್ಟು ತೆಂಗಿನಕಾಯಿ ಒಡೆಯುವಾಟ. ಗುರಿಯಿಟ್ಟು ಒಬ್ಬರಿಂದೊಬ್ಬರಿಗೆ ಚಂಡಿನಿಂದ ಬಡಿದಾಡುವಾಟ, ಇತ್ಯಾದಿಗಳಲ್ಲಿ ಈ ತಂತ್ರಗಾರಿಕೆ ಕಂಡುಬರುತ್ತದೆ. ಬಿಲ್ಲುಗಾರಿಕೆಯು ಇಂತದೇ ಪ್ರಯತ್ನದ ಫಲವಾಗಿದೆ. ಪ್ರಾಣಿಯನ್ನು ಕೊಲ್ಲುವುದಕ್ಕಾಗಿ ಬಿಲ್ಲುಗಾರಿಕೆಯ ಕಲಿಕೆಯು ಆರಂಭವಾಗಿದೆಯಾದರೂ ಕ್ರಮೇಣ ರಕ್ಷಣೆಯ ತಂತ್ರಗಾರಿಕೆಯಾಗಿಯೂ ಬಳಕೆಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಜನಪದ ಆಟಗಳು ಬಹಳಷ್ಟು ವೈವಿಧ್ಯಮಯವಾಗಿರುವುದನ್ನು ಕಾಣಬಹುದು. ಆಟಕ್ಕೆ ಬಳಸುವಂತ ವಸ್ತುಗಳನ್ನು ಆಧರಿಸಿ ಹೇಳುವುದಾದರೆ, ಹರಳಾಟ, ಬೆರಳಾಟ, ತುಳಿದಾಟ, ಸುತ್ತಾಟ, ಹುಡುಕಾಟ, ಕುಂಟಾಟ, ಮುಟ್ಟಾಟ, ಎಳೆದಾಟ, ಗುರಿಯಾಟ, ಚೆನ್ನಮಣೆವಾಟ, ಅನುಕರಣದ ಆಟ, ಗೋಲಿಗುಂಡಿನಾಟ, ಚಿಣ್ಣಿದಾಂಡಿನಾಟ, ಬುಗುರಿಯಾಟ, ಕಬ್ಬಡ್ಡಿಯಾಟ ಇತ್ಯಾದಿಗಳು. ಇವುಗಳಲ್ಲಿ ಬುದ್ಧಿಯಾಟವು ಮತ್ತು ಭಾವದಾಟಗಳು ಹಾಗೂ ಶಕ್ತಿ ಪ್ರದರ್ಶನದ ಆಟಗಳು ಎಂದು ವಿಂಗಡಿಸಬಹುದು. ಇಂತಹ ಎಲ್ಲಾ ಆಟಗಳು ಅಥಣಿ ಪರಿಸರದ ವಾಲ್ಮೀಕಿ ಸಮುದಾಯದಲ್ಲಿ ನಾವು ಕಾಣಬಹುದು. ಯಾವುದೇ ರೀತಿಯ ಜನಪದ ಕ್ರೀಡೆಗಳು ಗ್ರಾಮೀಣರ ಬದುಕಿನೊಂದಿಗೆ ಬೆರೆತುಕೊಂಡು ಬಂದಿರುತ್ತವೆ. ಅವುಗಳು ಮನೋರಂಜನೆಗೆ ಇರಬಹುದು ಇಲ್ಲವೆ ಏಕಕಾಲಕ್ಕೆ ಬಲಸಂವರ್ಧನೆಗೂ ಇರಬಹುದು. ಈ ಎರಡಕ್ಕೂ ಇವು ಸಹಾಯಕವಾಗಿ ಕೆಲಸ ನಿರ್ವಹಿಸುತ್ತವೆ. ಹಳ್ಳಿಯ ಮಕ್ಕಳು ಚಿಕ್ಕವರಿರುವಾಗಲೇ ಸಹಾಯಕರಾಗಿ ಕೆಲಸ ನಿರ್ವಹಿಸುತ್ತವೆ. ಹಳ್ಳಿಯ ಮಕ್ಕಳು ಚಿಕ್ಕವರಿರುವಾಗಲೇ ಕೇವಲ ಮನೋರಂಜನೆಗಾಗಿ ಆಟಗಳನ್ನು ಆಡುತ್ತಿರುತ್ತಾರೆ. ಆ ನಂತರ ಈ ಮಕ್ಕಳು ಮನುಷ್ಯನ ಹುಟ್ಟು ಪ್ರವೃತ್ತಿಯಾದ ಸ್ಪರ್ಧಾ ಮನೋಭಾವನೆಯನ್ನು ಜಾಗೃತಗೊಳಿಸುತ್ತಾ ಹೋಗುತ್ತವೆ. ಪ್ರಾಯಕ್ಕೆ ಬಂದಂತೆ ಈ ಸ್ಪರ್ಧಾ ಮನೋಭಾವನೆ ಗಟ್ಟಿಗೊಳ್ಳುತ್ತಾ ಹೋಗುತ್ತದೆ.

ಇಂತಹ ಜನಪದ ಆಟಗಳು ಕೆಲವು ನಿತ್ಯದಂತೆ ನಡೆಯುತ್ತಿದ್ದರೆ, ಇನ್ನು ಕೆಲವು ಹಬ್ಬ-ಹರಿದಿನಗಳಿಗೆ ಸಂಬಂಧಿಸಿದಂತೆ ಆಯಾ ಹಬ್ಬಗಳಲ್ಲಿ ಇನ್ನೂ ಕೆಲವು ಕೆಲಕಾಲದಲ್ಲಿ, ಕೆಲ ಸಮಯದಲ್ಲಿ ನಡೆಯುತ್ತವೆ.

ಇಂತಹ ಆಟಗಳನ್ನು ಗಂಡಸರು, ಹೆಂಗಸರು ಹಾಗೂ ಮಕ್ಕಳು ಕೂಡ ಆಡಿಕೊಳ್ಳುತ್ತಾ ಬಂದಿರುವುದನ್ನು ನಾವು ಕರ್ನಾಟಕದ ತುಂಬೆಲ್ಲಾ ಕಾಣುತ್ತಾ ಬರುತ್ತೇವೆ. ಇದಕ್ಕೆ ಅಥಣಿ ಪರಿಸರದ ವಾಲ್ಮೀಕಿ ಸಮುದಾಯವು ಹೊರತಲ್ಲ. ಈ ಹಿನ್ನೆಲೆಯಲ್ಲಿ ಬರುವ ಈ ಸಮುದಾಯದ ಕ್ರೀಡೆಗಳನ್ನು ಕುರಿತು ವಿವರಿಸುವುದು ಇಲ್ಲಿನ ಉದ್ದೇಶವಾಗಿದೆ.

ಇಲ್ಲಿನ ಈ ಸಮುದಾಯದವರು ಆಡುವ ಆಟಗಳನ್ನು,

೧. ಚಿಕ್ಕ ಮಕ್ಕಳು ಆಡುವ ಆಟಗಳು

೨. ಗಂಡಸರು ಆಡುವ ಆಟಗಳು

೩. ಹೆಂಗಸರು ಆಡುವ ಆಟಗಳು

೪. ಪ್ರಾಣಿ ಸಂಬಂಧಿ ಆಟಗಳು ಎಂದು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು.

೭.೨.೧.ಚಿಕ್ಕ ಮಕ್ಕಳು ಆಡುವ ಆಟಗಳು

ಮಕ್ಕಳ ಆಟಗಳು ಕೇವಲ ಮನೋರಂಜನೆಯನ್ನು ಮಾತ್ರ ಗುರಿಯಾಗಿಸಿಕೊಂಡಿರುತ್ತವೆ. ಮಕ್ಕಳು ಸಂತೋಷದಿಂದ ಆಡುತ್ತಾ ಬೆಳೆಯಬೇಕೆಂಬುದೇ ಇಲ್ಲಿಯವರ ಸಾಮಾಜಿಕ ಪ್ರಜ್ಞೆಯಾಗಿರಬೇಕು. ಈ ಮಕ್ಕಳ ಆಟಗಳಲ್ಲಿ ಸ್ಪರ್ಧೆ ಇರುವುದಿಲ್ಲವೆನಿಸಿದರೂ ಕೆಲ ಆಟಗಳಲ್ಲಿ ಸ್ಪರ್ಧೆಯನ್ನು ಕಾಣಬಹುದು. ಹೊಳೆ-ಹಳ್ಳಗಳ ದಂಡೆಯ ಮೇಲೆ ಮತ್ತು ಯಾರಾದರೂ ಮನೆಯನ್ನು ಕಟ್ಟಲು ಉಸುಕನ್ನು ತಂದು ಅಂಗಳದಲ್ಲಿ ಸುರಿವಿದ್ದರೆ ಅಂತಹ ಉಸುಕಿನ ಮೇಲೆ ಕಾಲನ್ನು ಇಟ್ಟು, ಗುಬ್ಬಿ ಮತ್ತು ಕಾಗೆಯಂತೆ ಗೂಡನ್ನು ಕಟ್ಟುವ ರೀತಿಯಲ್ಲಿ ಸಣ್ಣ-ಸಣ್ಣ ಮನೆಯನ್ನು ಕಟ್ಟುವುದಾಗಿರಬಹುದು. ಗಾಳಿಪಟವನ್ನು ಹಾರಿಸುವುದಿರಬಹುದು, ಕಲ್ಲಿನ ಎತ್ತುಗಳನ್ನು ಮಾಡಿಕೊಂಡು ಹೊಲವನ್ನು ಊಳುವ ತೆರದಿ ಮನೆಯ ಹಿತ್ತಲಿನಲ್ಲಿ ಆಡುವುದು, ಇಂತಹ ಕಡೆ ಬಹುತೇಕ ಸ್ಪರ್ಧೆ ಇರುವುದಿಲ್ಲವೆನಿಸಿದರೂ, ಯಾರ ಮನೆಯು ಎಷ್ಟು ಸುಂದರವಾಗಿವೆ, ಯಾರ ಗಾಳಿಪಟ ಎಷ್ಟು ಎತ್ತರ ಹಾರುವುದು, ಯಾರ ಕಲ್ಲಿನ ಎತ್ತುಗಳು ಸುಂದರವಾಗಿವೆ ಎನ್ನುವುದನ್ನು ಬೇರೆಯವರು ತಿಳಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆಂದು ಮಕ್ಕಳು ಹಿರಿಯರಲ್ಲಿ ಆಸೆ ಪಡುತ್ತವೆ. ಶಬಾಶ್‌ಗಿರಿಯು ಸಿಕ್ಕ ಮಕ್ಕಳು ಕುಣಿದಾಡುತ್ತವೆ. ಈ ನಿಟ್ಟಿನಲ್ಲಿ ಇಂತಹ ಆಟಗಳನ್ನು ವಾಲ್ಮೀಕಿ ಸಮುದಾಯದ ಮಕ್ಕಳೂ ಆಡಿಕೊಂಡು ಬಂದಿರುವುದನ್ನು ಈ ಪರಿಸರದಲ್ಲಿ ಕಾಣಬಹುದು. ಅಲ್ಲದೆ ಈ ಸಮುದಾಯದ ಮಕ್ಕಳು ಬಳೆಚೂರಿನ ಆಟ, ಕುಂಟಿಬಿಲ್ಲೆಯ ಆಟ, ಕಣ್ಣ ಮುಚ್ಚಾಲೆಯಾಟ, ಮುಟ್ಟಾಟ, ಕಪ್ಪೆಯ ಆಟ, ಗಿಡಮಂಗನಾಟ, ಬುಗುರಿಯಾಟ, ಗೋಲಿಗುಂಡಿನಾಟ, ಅಂಟ್ಯಾಳ ಆಟ (ಕಲ್ಲು ತೂರುವ ಆಟ) ಮುಂತಾದ ಸ್ಪರ್ಧಾರಹಿತ ಹಾಗು ಸ್ಪರ್ಧಾಸಹಿತ ಆಟಗಳನ್ನು ಆಡಿಕೊಂಡು ಬಂದಿರುವುದನ್ನು ನಾವು ಕಾಣಬಹುದು.

ನಂತರ ಟೊಪ್ಪಿಗೆಯಾಟ, ಲಡ್ಡು-ಲಡ್ಡು ತಿಮ್ಮಣ್ಣ ಮುಂತಾದ ಮನೋರಂಜನೆಯ ಆಟಗಳನ್ನು ನಾವು ಕ್ಷೇತ್ರಕಾರ್ಯಕ್ಕೆ ಹೋದ ಸಮಯದಲ್ಲಿ ಕಂಡೆವು. ಅಲ್ಲದೆ ಹಗ್ಗದ ಆಟ, ಲಗೋರಿ ಆಟ,

ಉಪ್ಪುಮಾರುವ ಆಟ, ಜೋಟಿ ಆಟ, ಈಜುವುದು ಮುಂತಾದ ಆಟಗಳನ್ನು ಈ ಪರಿಸರದ ಗ್ರಾಮೀಣ ಮಕ್ಕಳಲ್ಲಿ ಪ್ರಚಲಿತದಲ್ಲಿರುವುದು ಕಂಡುಬರುತ್ತದೆ.

೭.೨.೨.ಗಂಡು ಮಕ್ಕಳ ಆಟಗಳು

ಗಂಡಸರ ಆಟಗಳಲ್ಲಿ ಶಾರೀರಿಕ ಶ್ರಮ ಹೆಚ್ಚಿರುತ್ತದೆ. ಹಾಗೆಯೇ ಬೌದ್ಧಿಕ ಕಸರತ್ತು ಪ್ರಧಾನವಾಗಿರುತ್ತದೆ. ಗಂಡಸು ನಮ್ಮ ಜನಪದರಲ್ಲಿ ದುಡಿದು ತಂದು ಹಾಕುವವ. ಅವನು ಬಲಾಢ್ಯನಾಗಿ ಇರಬೇಕು. ಹೀಗಾಗಿ ಜಾಣ್ಮೆ, ತಂತ್ರಗಾರಿಕೆ, ಸಾಹಸ, ಶಕ್ತಿ ಪ್ರಧಾನವಾದ ಆಟಗಳೆಲ್ಲ ಗಂಡಸರ ಆಟಗಳಾಗುತ್ತವೆ. ಗೋಲಿಯಾಟ, ಗಜ್ಜುಗದಾಟ, ಕಬ್ಬಡ್ಡಿಯಾಟ, ಕಂದುಕದಾಟ, ಗೂಳಿಕಾಳಗ, ಪಗಡೆಯಾಟ, ಚದುರಂಗ, ಬಿಲ್ಲುಗಾರಿಕೆ, ಗುಂಡುಕಲ್ಲು ಎತ್ತುವುದು, ಕುಸ್ತಿ, ಕಾಲಿಗೆ ಕಲ್ಲು ಕಟ್ಟಿಕೊಂಡು ಎತ್ತುವುದು, ಉಸುಕಿನ ಚೀಲವನ್ನು ಬೆನ್ನಮೇಲೆ ಹೊತ್ತು ನಿರ್ದಿಷ್ಟಗುರಿ ಮುಟ್ಟುವುದು ಮುಂತಾದ ಕ್ರೀಡೆಗಳಲೆಲ್ಲಾ ಶಕ್ತಿ, ತಂತ್ರ-ಬುದ್ಧಿ, ಪ್ರಧಾನವಾಗಿ ಕೆಲಸ ಮಾಡುವುದನ್ನು ನಾವು ಕಾಣಬಹುದು. ಇವುಗಳೆಲ್ಲವೂ ಹೊರಾಂಗಣದ ಆಟಗಳು ಆಗಿವೆ.

ಅಥಣಿ ಪರಿಸರದ ವಾಲ್ಮೀಕಿ ಸಮುದಾಯದವರು ಈ ರೀತಿಯ ಆಟಗಳನ್ನು ಆಡಿಕೊಂಡು ಬಂದಿರುವುದನ್ನು ಕಾಣಬಹುದು. ಇವುಗಳಲ್ಲಿ ದಿನನಿತ್ಯದಂತೆ ಮತ್ತು ಹಬ್ಬ ಹರಿದಿನಗಳಲ್ಲಿ ಆಡಿಕೊಂಡು ಬಂದಿರುವುದು ರೂಢಿಯಾಗಿದೆ. ದಿನನಿತ್ಯದಲ್ಲಿ ಚಿಣ್ಣಿದಾಂಡುವಿನ ಆಟ, ಮರಕೋತಿ ಆಟ, ಹುಲಿಮನಿಯಾಟ, ಲಗ್ಗಿಯಾಟ, ಗಜ್ಜಗದಾಟ, ಕಬ್ಬಡ್ಡಿ ಮುಂತಾದ ಆಟಗಳನ್ನು ಈ ಸಮುದಾಯದ ಗಂಡಸರು ಆಡಿಕೊಂಡು ಬಂದಿದ್ದಾರೆ. ನಾಲ್ಕು ಜನರು ಹೊಲ ಮನೆಗಳಲ್ಲಿ ಕೆಲಸ ಮಾಡಿ ದಣಿದುಕೊಂಡು ಬಂದು ಊರಿನ ಯಾವುದಾದರೂ ದೇವಸ್ಥಾನದಲ್ಲಿಯೋ ಅಥವ ಬಯಲಿನಲ್ಲಿಯೋ ವಿಶ್ರಾಂತಿಗೆಂದು ಬಂದು ಸೇರಿಕೊಂಡಾಗ ಒಬ್ಬರಿಗೊಬ್ಬರು ಮಾತಾಡಿಕೊಂಡು ಅಲ್ಲಿಯೇ ಒಂದು ಹುಲಿಮನಿಯಾಟವನ್ನೋ, ಗಜ್ಜುಗದ ಆಟವನ್ನೋ ಪ್ರಾರಂಭಿಸಿ ಬಿಡುತ್ತಾರೆ. ಹೆಚ್ಚು ಹೆಚ್ಚು ಇಂತಹ ಆಟಗಳನ್ನು ಆಡಿದಂತೆ ವಿಶೇಷ ರೀತಿಯ ಪರಿಣಿತಿಯು ಇವರಿಗೆ ಬಂದು ಬಿಡುತ್ತದೆ. ಇದಕ್ಕಾಗಿ ಇವರು ವಿಶೇಷವಾಗಿ ತಾಲೀಮು ಮಾಡಬೇಕಾಗಿ ಬರುವುದಿಲ್ಲ.

ಇನ್ನು ಪ್ರತಿದಿನ ಸಾಯಂಕಾಲದ ಸಮಯದಲ್ಲಿ ಇಲ್ಲವೇ ರಾತ್ರಿಯ ಸಮಯದಲ್ಲಿ ಊರೊಳಗೆ ಯುವಕರನ್ನು ಸೇರಿಸಿಕೊಂಡು ವಯಸ್ಕರು ಕಬ್ಬಡ್ಡಿ ಆಟವನ್ನು ಪ್ರಾರಂಭಿಸುತ್ತಾರೆ. ಇದು ಸಂಪೂರ್ಣ ಸ್ಪರ್ಧಾ ಸಹಿತವಾಗಿದ್ದು, ಸೋತವರು ಇಂತಿಷ್ಟು ಹಣವನ್ನು ಊರಿನ ಗ್ರಾಮದೇವತೆಯ ಹುಂಡಿಗೆ ಹಾಕಬೇಕು ಎಂದು ಶರತ್ತು ಮಾಡಿರುತ್ತಾರೆ. ಅದರಂತೆ ಸೋತಥರು ಊರಿನ ದೇವತೆಯ ಹುಂಡಿಗೆ ಹಣವನ್ನು ಹಾಕುವುದು ಈ ಭಾಗದ ಕೆಲವು ಕಡೆ ಪದ್ಧತಿಯಾಗಿ ನಡೆದುಕೊಂಡು ಬಂದಿದೆ. ಹೀಗೆ ಇನ್ನು ಎಷ್ಟೋ ಆಟಗಳಲ್ಲಿ ಸೋತವರು ದೇವರಿಗೆ ಇಂತಿಷ್ಟು ಹಣವನ್ನು ಒಪ್ಪಿಸಬೇಕು ಎನ್ನುವುದರ ಹಿನ್ನೆಲೆಯಲ್ಲಿ ದೇವತಾ ಕಾರ್ಯಗಳಿಗೆ ಉಪಯೋಗವಾಗುವಂತೆ ಹಣವನ್ನು ಕೂಡಿಸಲು ಸಹಾಯಕವಾಗುವಂತೆ ಆಟಗಳನ್ನು ಆಡಿಕೊಂಡು ಬಂದಿದ್ದಾರೆ.

ಇನ್ನು ಹಬ್ಬ ಹರಿದಿನಗಳಲ್ಲಿ ಗ್ರಾಮೀಣ ಜನರ ಆಟಗಳು ವಿಶೇಷವಾಗಿ ನಡೆಯುತ್ತವೆ. ಉತ್ಸವ, ಜಾತ್ರೆ, ಓಕುಳಿಯಂತಹ ಸಂದರ್ಭದಲ್ಲಿ ಈ ಸಮುದಾಯದವರು ಆಟವಾಡಲು ಮುಂದಾಗುತ್ತಾರೆ. ಅಥಣಿ ತಾಲೂಕಿನ ರಡ್ಡೇರಹಟ್ಟಿಯಲ್ಲಿ ವಾಲ್ಮೀಕಿ ಸಮುದಾಯದವರು ಹನುಮಪ್ಪದೇವರ ಉತ್ಸವವನ್ನು ಓಕುಳಿಯಾಡುವುದರ ಮೂಲಕ ಯುಗಾದಿಯ ಸಂದರ್ಭದಲ್ಲಿ ನೆರವೇರಿಸುತ್ತಾರೆ. ಹನುಮಪ್ಪನ ಗುಡಿಯ ಮುಂದಿನ ಹೊಂಡಕ್ಕೆ ರಾತ್ರಿಯೆಲ್ಲಾ ಕೊಡಗಳನ್ನು ತೆಗೆದುಕೊಂಡು ಯುವಕರು, ಹಿರಿಯರು, ಸ್ತ್ರೀಯರು ಎನ್ನದೇ ಎಲ್ಲರೂ ಬಾವಿಗಳಿಂದ, ನಳಗಳಿಂದ, ಹಳ್ಳ-ಕೊಳ್ಳಗಳಿಂದ ನೀರನ್ನು ತಂದು ತುಂಬಿಸುತ್ತಾರೆ. ಹೊಂಡಕ್ಕೆ ಹಂದರವನ್ನು ಹಾಕಿ ಯುಗಾದಿಯ ಪಾಡ್ಯದ ಮರುದಿನ ಓಕುಳಿಯಾಡುತ್ತಾರೆ. ಇದರಲ್ಲಿ ಹೊಂಡದ ನೀರನ್ನು ಕೊಡ ಮತ್ತು ಬಕೆಟ್ಟುಗಳಲ್ಲಿ ತುಂಬಿಕೊಂಡು ಊರೊಳಗೆ ಎಲ್ಲರೂ ಒಬ್ಬರಿಗೊಬ್ಬರು ಮೈಮೇಲೆ ಎರಚಿಕೊಳ್ಳುತ್ತಾರೆ. ಇಲ್ಲಿ ಯಾವುದೇ ತರಹದ ಬೇದ-ಭಾವಗಳು ಇರುವುದಿಲ್ಲ. ಊರಿನ ಎಲ್ಲಾ ಮತದ ಧರ್ಮದ, ವರ್ಗದ ಜನರಲ್ಲಿ ಗಟ್ಟಿಗರೆನಿಸಿರುವವರು ಸಂಗ್ರಾಮದ ಕಲ್ಲುಗಳನ್ನು ಎತ್ತುವುದು ಒಂದು ಶಕ್ತಿ ಪ್ರದರ್ಶನದ ಕ್ರೀಡೆಯಾಗಿದೆ. ಇದರಲ್ಲಿ ಬಹಳಷ್ಟು ಆಸಕ್ತಿಯುಳ್ಳ ಜಟ್ಟಿಗಳು ಭಾಗವಹಿಸುತ್ತಾರೆ. ಇವರು ಮೊದಲೇ ತಾಲೀಮು ಮಾಡಿದವರಾಗಿರುತ್ತಾರೆ. ಇಂತಹ ಸಾಲಿಗ್ರಾಮದ ಕಲ್ಲುಗಳನ್ನು ನಾವು ವಿಶೇಷವಾಗಿ ಅಥಣಿ ತಾಲೂಕಿನ ಕೋಹಳ್ಳಿ ಗ್ರಾಮದಲ್ಲಿ ಕಾಣಬಹುದು. ಇವುಗಳಲ್ಲಿ ದೊಡ್ಡ-ದೊಡ್ಡ ದುಂಡಾದ ಕಲ್ಲುಗಳು, ಡಂಬಲ್ಸ್ ಮಾದರಿಯ ಕಲ್ಲುಗಳು ಇರುತ್ತವೆ. ಇಂತಹ ಭಾರಿ ತೂಕದ ಕಲ್ಲುಗಳನ್ನು ಕೋಹಳ್ಳಿಯ ವಾಲ್ಮೀಕಿ ಸಮುದಾಯದ ಯುವಕರು, ನಡು ವಯಸ್ಸಿನವರು, ಅವರವರ ಶಕ್ತಿಗೆ ಅನುಗುಣವಾಗಿ ಕಲ್ಲುಗಳನ್ನು ಎತ್ತುತ್ತಾರೆ. ಇದು ಕೂಡ ಒಂದು ರೀತಿಯ ಸ್ಪರ್ಧಾತ್ಮಕ ಕ್ರೀಡೆಯಾಗಿದೆ. ಅತೀ ಹೆಚ್ಚು ಭಾರವಿರುವ ಕಲ್ಲನ್ನು ಯಾರು ಎತ್ತುವರೋ ಅವರಿಗೆ ವಿಜಯದ ಮಾಲೆಯನ್ನು ಹಾಕುವರು. ಅಲ್ಲದೇ ಅವರಿಗೆ ಉಡುಗೊರೆಯಾಗಿ, ಬಹುಮಾನವೆಂದು ಬೆಳ್ಳಿಯ/ಕಂಚಿನ ಕಾಲುಕಡಗವನ್ನು ನೀಡುವುದು ರೂಢಿಯಾಗಿದೆ.

ಅಲ್ಲದೆ ಗಂಡಸರು ಕ್ರೀಡೆಯಲ್ಲಿ ಭಾಗವಹಿಸಲು ಇಚ್ಛಿಸುವವರಿಗೆ ಕಣ್ಣುಕಟ್ಟಿ ಮೂರು ಸುತ್ತು ತಿರುಗಿಸಿ ಊರಿನ ಯಾವುದೋ ಮೂಲೆಯಿಂದ ಅವರನ್ನು ಕೈಬಿಟ್ಟು ಊರಿನಲ್ಲಿರುವ ಆಂಜನೇಯನ ದೇವಸ್ಥಾನದಲ್ಲಿನ ಘಂಟೆಯನ್ನು ಭಾರಿಸುವಂತೆ ಪ್ರೇರೇಪಿಸುತ್ತಾರೆ. ಇದು ಮನೋರಂಜನೆಯನ್ನುಂಟು ಮಾಡುವ ಆಟವಾಗಿದೆ. ಇದನ್ನು ಸ್ತ್ರೀ ಪುರುಷರು ಕೂಡ ಆಡಬಹುದು. ಅಲ್ಲದೆ ಪಂಚಮಿ ಹಬ್ಬದಂತಹ ಸಂದರ್ಭದಲ್ಲಿ ನಿಂಬೆಹಣ್ಣನ್ನು ಇಂತಿಷ್ಟು ಎಸೆತದಲ್ಲಿ ಇಂತಿಷ್ಟು ದೂರ ಎಸೆಯಬೇಕು ಎನ್ನುವ ಜೂಜಾಟವನ್ನು ಈ ಪರಿಸರದ ಜನರು ಆಡುತ್ತಾ ಬಂದಿರುವುದು ತಿಳಿಯುತ್ತದೆ. ಯುವಕರು, ಹಿರಿಯರು ಎನ್ನದೇ ಕೋಲಾಟದಂತಹ ಆಟಗಳನ್ನು ಈ ಪರಿಸರದೊಳಗೆ ತಂಡಗಳನ್ನು ಕಟ್ಟಿಕೊಂಡು ಪ್ರತಿದಿನ ಸಾಯಂಕಾಲ ಇಲ್ಲವೇ ಹಬ್ಬ ಹರಿದಿನಗಳಲ್ಲಿ ಆಡಿಕೊಂಡು ಬಂದಿರುವುದು ತಿಳಿಯುತ್ತದೆ.

ಇನ್ನು ಹೊಲಗದ್ದೆಗಳಲ್ಲಿಯೂ ಕೆಲಸಮಾಡುವ ಸಮಯದಲ್ಲಿ ಕೂಲಿಗಾಗಿಯೂ ಶ್ರಮದಾಯಕವಾದ ಆಟಗಳನ್ನು ಆಡಲು ಮುಂದಾಗುತ್ತಾರೆ. ಹೇಗೆಂದರೆ ಒಂದು ಎಕರೆ ಭೂಮಿಯಲ್ಲಿನ ಸುಲುಗಾಯಿ

(ಹಸಿಕಡ್ಡಿಯನ್ನು) ಒಬ್ಬರೇ ಒಂದು ಘಂಟೆ ಇಲ್ಲವೆ ಎರಡು ಘಂಟೆಯಲ್ಲಿ ಕೀಳುವುದು ಇದು ಶಕ್ತಿ ಪ್ರದರ್ಶನದ ಆಟವೇ ಸರಿ. ಇದರಿಂದ ಅವರಿಗೆ ಕಡಿಮೆ ಸಮಯದಲ್ಲಿ ಬಹಳ ಹಣವನ್ನು ಸಂಪಾದಿಸಲು ಸಾಧ್ಯ. ಇಂತಹ ಇನ್ನು ಇತರೆ ಸಂದರ್ಭಗಳಲ್ಲಿಯೂ ನಡೆಯುತ್ತದೆ. ಗೆದ್ದವರನ್ನು ಊರಿನವರು ಹಾಡಿಹೊಗಳುತ್ತಾರೆ.

೭.೨.೩.ಹೆಂಗಸರ ಆಟಗಳು

ನಮ್ಮ ಭಾರತೀಯ ಪರಂಪರೆಯಲ್ಲಿ ಲಿಂಗ ತಾರತಮ್ಯಭಾವವಿರುವುದನ್ನು ನಾವು ಅತ್ಯಂತ ಸಹಜ ಎಂದೇ ಸ್ವೀಕರಿಸಿದ್ದೇವೆ. ಜನಪದ ಆಟಗಳಲ್ಲಿಯೂ ಸಹ ಹೆಣ್ಣು ಮಕ್ಕಳ ಆಟಗಳು, ಗಂಡಸರ ಆಟಗಳು ಎಂದು ವಿಂಗಡಿಸುತ್ತಾರೆ. ಹೆಣ್ಣು ಮಕ್ಕಳು ಆಡುವ ಆಟಗಳನ್ನು ಗಂಡುಮಕ್ಕಳು ಆಡಿದರೆ ಗೇಲಿ ಅಥವಾ ಟೆಂಗಲ್ ಮಾಡುವುದು. ಗಂಡುಮಕ್ಕಳು ಆಡುವ ಆಟಗಳನ್ನು ಹೆಂಗಸರು ಆಡಿದರೆ ಗಂಡು ಬಸವಿ ಎಂದು ಕರೆಯುವುದು ಸಾಮಾನ್ಯ. ಇಲ್ಲಿ ಹೆಣ್ಣು-ಗಂಡುಗಳ ಶಾರೀರಿಕ ರಚನೆ ಮತ್ತು ದುಡಿಮೆಯ ನಿರೀಕ್ಷೆಗೆ ತಕ್ಕಂತೆ ಆಟಗಳು ಸೃಷ್ಟಿಯಾಗಿವೆ. ಅಥವಾ ಬಳಕೆಗೊಂಡು ಆಟಗಳನ್ನು ಆಡಿಕೊಂಡು ಬಂದಿರುವುದು ಸರಿ ಎನಿಸುತ್ತದೆ.

ಸಾಮಾನ್ಯವಾಗಿ ನಾವುಗಳು ಕುಟುಂಬ ವ್ಯವಸ್ಥೆಯನ್ನು ಒಪ್ಪುವ, ಪ್ರೀತಿಸುವ ಜನರು. ಕುಟುಂಬದ ವ್ಯವಸ್ಥೆಯಲ್ಲಿ ಪ್ರಧಾನಪಾಲು ಸಲ್ಲುವುದು ತಾಯಿಗೆ ಮಾತ್ರ. ಅಂತೆಯೇ ಆಕೆಯ ಮನಸ್ಸು ಕೂಡ ಮೃದು, ಹಾಗೂ ಕೋಮಲವೂ ಆಗಿರುತ್ತದೆ. ನಡವಳಿಕೆಯಲ್ಲಿ ನಯ-ನಾಜೂಕು ಇರುತ್ತದೆ. ಆಲೋಚನಾ ಕ್ರಮದಲ್ಲಿಯೂ ತಾಯ್ತನದ ಸ್ವಭಾವ ಇರುತ್ತದೆ. ಮನೆಯೊಳಗಣ ಕಸುಬು ಅಚ್ಚುಕಟ್ಟಾಗಿ ಹೆಣ್ಣಿಗೆ ಸೇರಿರುವುದರಿಂದ ಅವಳ ಆಟಗಳ ಸ್ವರೂಪ ಮತ್ತು ಆಟವಾಡುವ ಪರಿವೇಶವು ಒಳಾಂಗಣಕ್ಕೆ ಮೀಸಲು. ಕುಂಟಾಬಿಲ್ಲೆಯಂತಹ ಆಟವು ಮನೆಯ ಮುಂದಿನ ಅಂಗಳವಾಯ್ತೆ ಹೊರತು, ಬೀದಿಯಾಗುವುದಿಲ್ಲ. ಆಕೆಯ ಸ್ವತಂತ್ರವಾದ ಹೊರಗಿನ ಕೆಲಸವು ಹೆಚ್ಚೆಂದರೆ ಹೊಲ-ಗದ್ದೆಗಳ ಕೆಲಸವಾಗಿರುತ್ತದೆ. ಹೀಗಾಗಿ ಅವಳ ಆಟಗಳು ಹೆಚ್ಚು ಶ್ರಮದಾಯಕವಲ್ಲದ, ಬೌದ್ಧಿಕ ಕಸರತ್ತು ಇಲ್ಲದ ಆಟಗಳೇ ಆಗಿರುತ್ತವೆ.

ಗಂಡಸರಿಗೆ ಹೋಲಿಸಿದರೆ ಹೆಂಗಸರ ಆಟಗಳು ಕಡಿಮೆ ಎಂದೇ ಹೇಳಬಹುದು. ಇದಕ್ಕೆ ಕಾರಣವು ಇಲ್ಲದಿಲ್ಲ. ಸನಾತನ ಭಾರತೀಯ ಪರಂಪರೆಯಲ್ಲಿ ಅದರಲ್ಲೂ ಕನ್ನಡ ಸಂಸ್ಕೃತಿಯ ಹಿನ್ನೆಲೆಯಲ್ಲಿ ಹೆಣ್ಣು ಮಕ್ಕಳನ್ನು ಬೇಗನೆ ಮದುವೆ ಮಾಡುವುದು ನಮ್ಮ ಹಳ್ಳಿಗಳಲ್ಲಿ ಇಂದಿಗೂ ರೂಢಿಯಾಗಿ ಬಂದಿದೆ. ಹುಡುಗಿಯೊಬ್ಬಳು ದೊಡ್ಡವಳಾದ ಮೇಲೆ ಓಣಿಯಲ್ಲಿ, ಬೀದಿಯಲ್ಲಿ, ನಿಂತು-ಕುಂತು ಆಟವಾಡುವುದನ್ನು ನಮ್ಮ ಜನಪದ ಸಂಸ್ಕೃತಿಯು ಒಪ್ಪುವುದಿಲ್ಲ. ಇದು ಸರಿಯೋ? ತಪ್ಪೋ? ಆದರೂ ೧೩-೧೪ನೇ ವರ್ಷಕ್ಕೆ ಹೆಣ್ಣು ಮಕ್ಕಳ ಕ್ರೀಡಾಲೋಕ ನಮ್ಮ ಜನಪದರಲ್ಲಿ ಬಹುಮಟ್ಟಿಗೆ ಕುಂಠಿತವಾಗುತ್ತದೆ. ಆದಾಗ್ಯೂ ಮುಕ್ತ ಜನಪದರಲ್ಲಿ ಇಂದಿಗೂ ಹಬ್ಬ-ಹರಿದಿನಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಆಟಗಳು ಮುಂದುವರಿದುಕೊಂಡು ಬಂದಿವೆ.

ಕುಂಬಳಿಕಾಯಿ ಆಟ, ಓಡಾಟ, ಕುಂಟಾಟ, ಅಸಿ-ಬಿಸಿ ಆಟ (ಕಾಲು ತೆವಳುತ್ತ ಆಡುವುದು) ಈ ಆಟದಲ್ಲಿ ಸೋತವರು ಸವತಿಯರು ಗೆದ್ದವರು ಗೆಳತಿಯರು ಎನ್ನುವ ಮಾತಿದೆ. ಈ ಹಿನ್ನೆಲೆಯನ್ನೊಳಗೊಂಡ ಈ ಆಟವನ್ನು ರಡ್ಡೇರಹಟ್ಟಿಯ ವಯಸ್ಸಾದ ಮಹಿಳೆಯು ವಿವರಿಸಿದ್ದುಂಟು. ಅಂದಹಾಗೆ ಈ ಆಟವು ಸಂಪೂರ್ಣ ಸ್ಪರ್ಧಾಭಾವನೆಯ ಆಟವಾಗಿದೆ. ನಂತರ ಕಣ್ಣುಕಟ್ಟಿಕೊಂಡು ಗೆಳತಿಯರನ್ನು ಮುಟ್ಟುವುದು, ಕಣ್ಣಮುಚ್ಚಾಲೆ ಆಟ ಉಪ್ಪಮ್ಮೋ ಉಪ್ಪು ಎಂದು ನಾಲ್ಕು ಕಂಬಗಳ ನಡುವೆ ಓಡಾಡಿಕೊಂಡು ಆಡುವ ಆಟ. ಖೋ ಖೋ, ಕುಂಟುತ್ತಾ ಮುಟ್ಟುವ ಆಟ, ಜೋಕಾಲಿ ಜೀಕುವ ಆಟ, ನಿಂಬೆಹಣ್ಣನ್ನು ಚಮಚದಲ್ಲಿ ಇಟ್ಟುಕೊಂಡು ಅದು ಬೀಳದಂತೆ ನಿಗದಿತ ಗುರಿಯನ್ನು ಮುಟ್ಟಲು ಓಡುವುದು, ಮುಂತಾದ ಕ್ರೀಡೆಗಳು ನಾವು ಈ ಭಾಗದ ವಾಲ್ಮೀಕಿ ಸಮುದಾಯದಲ್ಲಿ ಕಂಡು ಬರುತ್ತವೆ.

ಅಂಟ್ಯಾಳ (ಕಲ್ಲುಗಳನ್ನು ತೆಗೆದುಕೊಂಡು ಕೈಯಿಂದ ತೂರಿ ಹಿಡಿಯುವ ಆಟ) ಬಳೆಚೂರಿನಾಟ, ಸರಿಬೆಸದಾಟ, ಪಗಡೆಯಾಟ, ಚಕ್ಕದಆಟ, ಮುಂತಾದವುಗಳನ್ನು ನಮ್ಮ ಹೆಂಗಸರು ಆಡುತ್ತಲೇ ಬಂದಿದ್ದಾರೆ. ಆದರೆ ಪುರುಷರು ದಟ್ಟೈಟಿ ಆಟವಾಡಿದಂತೆ ನಮ್ಮ ಮಹಿಳೆಯರಿಗೆ ಆಟವಾಡಲು ಆಗುತ್ತಿಲ್ಲವೆಂದೇ ಹೇಳಬಹುದು. ಇತ್ತಿತ್ತಲಾಗಿ ಮುಂದುವರಿಯುತ್ತಿರುವ ಈ ಸಂದರ್ಭದಲ್ಲಿ ಇಂದು ಗ್ರಾಮೀಣ ಯುವಶಕ್ತಿ ಕ್ರೀಡಾಸಕ್ತಿಗೆ ಮಹತ್ವ ಕೊಡುತ್ತಿರುವುದರಿಂದ ಎಲ್ಲಾ ತರಹದ ಕ್ರೀಡೆಗಳಲ್ಲಿ ಮಹಿಳೆಯರು ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಆದರೆ ಅಥಣಿ ಪರಿಸರದಲ್ಲಿ ವಾಲ್ಮೀಕಿ ಸಮುದಾಯದ ಮಹಿಳೆಯರು ಅಷ್ಟಾಗಿ ಮುಂದುವರಿದಿಲ್ಲ ವೆಂದೇ ಹೇಳಬಹುದು. ಆದಾಗ್ಯೂ ಗ್ರಾಮೀಣ ಕ್ರೀಡೆಗಳಲ್ಲಿ ಹೆಂಗಸರು ಪ್ರತಿನಿಧಿಸುತ್ತಲೇ ಬಂದಿದ್ದಾರೆ. ಬೀಸುವ, ಕುಟ್ಟುವ ಕ್ರಿಯೆಗಳು ಸಹಜ ಕ್ರಿಯೆಗಳಾಗಿದ್ದರೂ, ಅವುಗಳಲ್ಲದೇ ಕ್ರೀಡಾ ಅಥವಾ ಸ್ಪರ್ಧಾ ಭಾವನೆಯನ್ನು ನಾವು ಈ ಭಾಗದ ಮಹಿಳೆಯರಲ್ಲಿ ಕಾಣಬಹುದು. ಅಲ್ಲದೇ ಅಥಣಿ ಪರಿಸರದಲ್ಲಿ ಕಾಣದೊರೆಯುವ ಕೋಹಳ್ಳಿ, ರಡ್ಡೇರಹಟ್ಟಿ, ಬೇಡರಹಟ್ಟಿ, ಶೇಡಬಾಳ, ಅಡಳಹಟ್ಟಿ, ಊರುಗಳಲ್ಲಿ ವಾಲ್ಮೀಕಿ ಸಮುದಾಯದ ಮಹಿಳೆಯರು ನೀರು ಎರಚಾಡುವುದನ್ನು ನೋಡಲು ಕಣ್ಣಿಗೆ ಮನೋರಂಜನೆಯನ್ನು ನೀಡುವಂತೆ ಇರುತ್ತದೆ.

೭.೨.೪.ಪ್ರಾಣಿ ಸಂಬಂಧಿ ಆಟಗಳು

ತಮ್ಮ ಒಡನಾಟದ ಪ್ರಾಣಿಗಳನ್ನು ತಮ್ಮ ಬದುಕಿನ ಒಂದು ಭಾಗವೆಂದೇ ತಿಳಿದಿರುವ ಈ ಸಮುದಾಯದ ಜನರು ಈ ಪರಿಸರದಲ್ಲಿ ಸಾಕು ಪ್ರಾಣಿಗಳ ಮುಖಾಂತರವೂ ತಮ್ಮ ಕ್ರೀಡಾ ಮನೋಭಾವನೆಯನ್ನು ಮೆರೆಯುತ್ತಾರೆ. ಇಂತಹ ಆಟಗಳು ಬೇರೆಕಡೆಯಲ್ಲಿಯೂ ನಡೆಯುತ್ತವೆ. ಪ್ರಾಣಿಗಳಲ್ಲಿ ಎತ್ತುಗಳಿಗೆ ಸಂಬಂಧಿಸಿದಂತೆ ಕ್ರೀಡೆಗಳು ಇಲ್ಲಿ ಕಂಡುಬರುತ್ತವೆ. ಉದಾ. ಕಾರಹುಣ್ಣಿಮೆಯ ದಿನದಂದು ಎತ್ತುಗಳಿಂದ ಕರಿ ಹರಿಯುವ ಒಂದು ಪದ್ಧತಿ.

ಈ ಸಂದರ್ಭದಲ್ಲಿ ಹಳ್ಳಿಗಳ ಬಹಳಷ್ಟು ಎತ್ತುಗಳನ್ನು ಊರಮುಂದಿನ ಅಗಸಿ ಬಾಗಿಲಿಗೆ ತಂದು ಅಲಂಕಾರಗೊಳಿಸಿ, ಒಂದು ನಿಗದಿತ ದೂರದಲ್ಲಿ ಊರಿನ ಒಂದು ಬೀದಿಯಲ್ಲಿ ಹೂ-ತೋರಣ ಕಟ್ಟಿ,

ಅಲ್ಲಿ ಜನರೆಲ್ಲರೂ ಕಾದು ನಿಂತಿರುತ್ತಾರೆ. ಈ ಕಡೆ ಎತ್ತುಗಳನ್ನು ಹುರಿದಿಂಬಿಸುವುದರ ಮುಖಾಂತರ ಎತ್ತುಗಳ ಮಾಲೀಕರು ಅವುಗಳ ಹಿಂದೆ ಓಡುತ್ತಾ ಬರುತ್ತಾರೆ. ಯಾರ ಎತ್ತು, ಯಾವ ಬಣ್ಣದ ಎತ್ತು ಕರಿಹರಿಯುತ್ತದೆಯೋ ಅವರನ್ನು ಆ ಎತ್ತನ್ನು ಪೂಜಿಸಿ ಮೆರವಣಿಗೆಯ ಮುಖಾಂತರ ಅವರ ಮನೆಗೆ ಕರೆತರುತ್ತಾರೆ. ಅಲ್ಲದೇ ಯಾವ ಬಣ್ಣದ ಎತ್ತನ್ನು ಕರೆ ಹರಿಯುತ್ತದೆಯೋ ಆ ಬಣ್ಣದ ಮಾಸೂಲು ಹುಲುಸಾಗಿ ಬೆಳೆಯುತ್ತದೆ ಎನ್ನುವ ನಂಬಿಕೆ ಇವರದು. ಹಾಗೂ ಬಿಳಿಯ ಎತ್ತು ಕರಿಹರಿದರೆ ಮುಂಗಾರು ಬೆಳೆ, ಕಪ್ಪು ಅಥವಾ ಕೆಂಪು ಎತ್ತು ಕರಿಯನ್ನು ಹರಿದರೆ ಹಿಂಗಾರು ಬೆಳೆಗಳು ಹುಲುಸಾಗಿ ಬೆಳೆಯುತ್ತವೆ ಎನ್ನುವ ನಂಬಿಕೆಯು ಇವರದು. ಅಲ್ಲದೆ ಟಗರುಗಳ ಗುದ್ದಾಟ, ಕೋಳಿಗಳ ಜಗಳವನ್ನು ಇಲ್ಲಿ ಕಾಣಬಹುದು.

ಒಟ್ಟಾರೆಯಾಗಿ ಜನಪದ ಆಟಗಳೆಲ್ಲವೂ ದೇಶಿಯ ನೆಲೆಗಳಾಗಿವೆ. ಏಕೆಂದರೆ ಬಹುತೇಕ ಆಟಗಳು ಧಾರ್ಮಿಕ ಉತ್ಸವದ ಅಂಗವಾಗಿಯೇ ನಡೆದುಕೊಂಡು ಬಂದಿವೆ. ಕ್ರೀಡೆಗಳು ಪುರಾತನದ ಮತಾಚರಣೆ, ವಿವಾಹಾದಿ ವಿಧಿಕ್ರಿಯೆಗಳು, ಹಾಗೂ ಅಲೌಕಿಕ ಶಕ್ತಿಗಳ ಸಂಬಂಧವಾದ ನಂಬಿಕೆಗಳು ಹಾಗೂ ಕೃಷಿ ಸಂಬಂಧವಾದ ಆಚರಣೆಗಳೊಂದಿಗೆ ತಳಕು ಹಾಕಿಕೊಂಡಿರುವುದು ಕರ್ನಾಟಕದ ಯಾವ ಭಾಗದಲ್ಲಿಯೇ ಆಗಲಿ ಕಂಡುಬರುತ್ತದೆ. ಇದಕ್ಕೆ ಅಥಣಿ ಪರಿಸರವು ಹೊರತಲ್ಲ. ಉದಾ. ಓಕುಳಿಯಾಟ, ಹೋಳಿ ಹಬ್ಬದ ಜೊತೆಯಲ್ಲಿ ಬರುವಂತದು. ಎತ್ತಿನ ಗಾಡಿಯಾಟ ಸಂಕ್ರಾಂತಿಯ ಹಬ್ಬದಲ್ಲಿ ಹೆಚ್ಚಾಗಿ ಜರುಗುತ್ತದೆ. ಓಕುಳಿಯಾಟದಂತಹ ಆಟವು ಶೌರ್ಯ ಸಂಕೇತವೇ ಆಗಿದ್ದರೂ ಶುಭದ ಸಂಕೇತವಾಗಿಯೇ ದೇವಾಲಯಗಳಲ್ಲಿ ನಡೆದುಕೊಂಡು ಬಂದಿದೆ.

ಅಧ್ಯಾಯ ಎಂಟು

ಜನಪದ ಸಾಹಿತ್ಯ

ಅಧ್ಯಾಯ ಎಂಟು

ಜನಪದ ಸಾಹಿತ್ಯ

ಜಾನಪದರ ಹಾಡು, ಕುಣಿತ, ಆಚರಣೆ, ಕಥೆ, ನಂಬಿಕೆ, ಒಗಟು, ಒಡಪುಗಳು, ಲಾವಣಿ ಮುಖಾಂತರ ಅವರ ಜೀವನ ವಿಧಾನವನ್ನು ಅಥವಾ ಒಂದು ಸಮುದಾಯದವರ ಜೀವನದ ವಿಧಾನವನ್ನು ಅರಿಯಬಹುದು. ಜನಪದ ಸಾಹಿತ್ಯವೆನ್ನುವುದು ಈ ರೀತಿಯ ವಿವಿಧ ಪ್ರಕಾರಗಳನ್ನು ಒಳಗೊಂಡಿದ್ದು, ಇಂಥಹ ಸಾಹಿತ್ಯಕ್ಕೂ ಇಲ್ಲಿ ವಾಸಿಸುವ ಪರಿಸರಕ್ಕೂ, ಒಂದು ಬಗೆಯ ಸಂಬಂಧ ಇದ್ದೇ ಇರುತ್ತದೆ. ಮನುಷ್ಯನ ಬಹುಮುಖ್ಯ ಉದ್ದೇಶವೆಂದರೆ ತಾನು ಹುಟ್ಟಿದಾಗಿನಿಂದ, ಸಾವಿನವರೆಗೂ ಹಲವಾರು ಮಜಲುಗಳ ಮಧ್ಯೆ ಬದುಕಿ, ಅನುಭವಗಳನ್ನು ಪಡೆದು ಅಂತಹ ಅನುಭವದ ಸಾರವನ್ನು ತಾನು ಕಂಡುಕೊಂಡಿರುವ ಮಾಧ್ಯಮ ಅಥವಾ ಸಾಹಿತ್ಯದ ಯಾವುದಾದರೂ ಪ್ರಕಾರದಲ್ಲಿ ಅಭಿವ್ಯಕ್ತಪಡಿಸುವುದು ಆಗಿದೆ. ಈ ಹಿನ್ನೆಲೆಯಲ್ಲಿ ಹುಟ್ಟಿ ಬಂದವುಗಳೇ ಕಥೆ, ಹಾಡು ಕುಣಿತ. ಎಲ್ಲವೂ ಸಮುದಾಯದಲ್ಲಿ ಸಂಭವಿಸುವ ಘಟನೆಗಳೇ ಇಲ್ಲಿ ಸಾಹಿತ್ಯವಾಗಿ ಹೊರಬರುತ್ತದೆ. ಸಾಹಿತ್ಯವು ಸಮುದಾಯದ ಪ್ರತಿನಿಧಿಕರಣದ ಕನ್ನಡಿಯಾಗಿದೆ. ಹಾಗಾಗಿ ಸಾಮಾಜಿಕ ಚಿತ್ರಣಕ್ಕೂ ಮತ್ತು ವಾಸ್ತವಿಕ ಸಮಾಜದ ಸ್ವರೂಪಕ್ಕೂ ಸಾಮ್ಯತೆಗಳಿರುವುದು ಕಂಡುಬರುತ್ತದೆ. ಕಾರಣ ಜನಪದ ಸಾಹಿತ್ಯವೆಂಬುದು ಸಮುದಾಯವನ್ನು ಹೊರತುಪಡಿಸಿ ಇರುವುದಿಲ್ಲ. ಸಾಹಿತ್ಯದ ಮೂಲಕ ಸಮುದಾಯದ ವಾಸ್ತವಿಕತೆಯನ್ನು ಅರಿಯಬಹುದಾಗಿದೆ. ಇಲ್ಲಿ ಸಾಹಿತ್ಯ ಎಂದ ಕೂಡಲೇ ಶಿಷ್ಟ, ಜಾನಪದವೆಂದು ವಿಭಾಗಿಸಿಕೊಂಡು ಬಂದ ಕ್ರಮಗಳು ನಮ್ಮಲ್ಲಿ ಕಂಡುಬಂದರೂ ಜಾನಪದೀಯ ಅಧ್ಯಯನ ಕೈಗೊಂಡ ಹಿನ್ನೆಲೆಯಲ್ಲಿ ಜಾನಪದ ಸಾಹಿತ್ಯಕ್ಕೆ ಮಹತ್ವವನ್ನು ಕೊಡಲಾಗಿದೆ.

ಜಾನಪದ ಅಧ್ಯಯನ ಕ್ಷೇತ್ರದಲ್ಲಿ ಶ್ರೀ ದೇ.ಜವರೇಗೌಡರು, ಸೋಮಶೇಖರ ಇಮ್ರಾಪುರ, ದೇವೇಂದ್ರಕುಮಾರ ಹಕಾರೆ, ಎಂ.ಎಸ್.ಲಠ್ಠೆ, ಎಂ.ಎಸ್.ಸುಂಕಾಪುರ, ಶ್ರೀ ಬಿ.ಎಸ್.ಗದ್ದಗಿಮಠರು, ಕಂಬಾರರು ಮುಂತಾದವರನ್ನು ಒಳಗೊಂಡಂತೆ ಜನಪದ ಸಾಹಿತ್ಯ ಸಂಗ್ರಹಕಾರ್ಯ ಭರದಿಂದ ಸಾಗಿದೆ. ಜೊತೆಗೆ ಈ ಸಂಗ್ರಹಿತ ಪಠ್ಯಗಳನ್ನು ವಿಶ್ಲೇಷಿಸುವ ಪ್ರಯತ್ನಗಳು ನಡೆದಿವೆ. ಆದರೂ ಅಕಾಡೆಮಿಕ್ ವಲಯದಲ್ಲಿ ಲಿಖಿತ ಆಕರಗಳಿಗೆ ದೊರೆತ ಆದ್ಯತೆ ಮತ್ತು ಮನ್ನಣೆ ಅಷ್ಟಾಗಿ ದೊರೆತಿಲ್ಲ.

ಮೌಖಿಕ ಸಾಹಿತ್ಯ ಅಥವಾ ಜನಪದ ಸಾಹಿತ್ಯ ಎಂದು ಕರೆಯಲ್ಪಡುವ ಸಾಹಿತ್ಯ ಜಾನಪದದ ಒಂದು ಪ್ರಕಾರವಾಗಿದೆ. ಜನಪದರಿಂದ ಮೌಖಿಕ ರೂಪದಲ್ಲಿ ರಚನೆಗೊಂಡ ಪ್ರಕಟಿತ ಅಥವಾ ಅಪ್ರಕಟಿತ ರೂಪದಲ್ಲಿರುವ ಸಾಹಿತ್ಯವು ಗಾದೆ, ಗೀತೆ, ಒಗಟು, ಒಡಪು, ಲಾವಣಿ, ಖಂಡಕಾವ್ಯ, ಮಹಾಕಾವ್ಯ,

ಐತಿಹ್ಯ, ಪುರಾಣ ಹೀಗೆ ಮುಂತಾದ ರೂಪದಲ್ಲಿರುತ್ತವೆ. ಜಾನಪದ ಸಾಹಿತ್ಯವೆಂಬುದು ಜನರ ನಿತ್ಯ ಜೀವನದ ನೋವು ನಲಿವಿನ ಸಂಗತಿಗಳನ್ನು ದಾಖಲಿಸಿಕೊಂಡ ಆಕರವೇ ಆಗಿದೆ. ಈ ಕುರಿತು ಅನೇಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹಾಗಾಗಿ ವಿದ್ವಾಂಸರ ವಲಯದಲ್ಲಿ ಜಾನಪದ ಸಾಹಿತ್ಯ ಕುರಿತಂತೆ ಇರುವ ವಿಚಾರಗಳನ್ನು ತಿಳಿಯಬಹುದು.

ಜಾನಪದ ಸಾಹಿತ್ಯವೆಂದರೆ ಕೇವಲ ಹಾಡಲ್ಲ. ಅದರಲ್ಲಿ ದೇವರ ಧ್ಯಾನ, ಭಕ್ತಿ, ಚಿಂತನೆಯಷ್ಟೇ ಇರುವುದಿಲ್ಲ. ಧಾರ್ಮಿಕ ಆಚರಣೆ, ನಡೆ, ನುಡಿ, ಕಲೆ, ಸಾಹಿತ್ಯ, ಸಂಗೀತಗಳಲ್ಲದೇ ಅದು ಒಂದು ಸಮುದಾಯದ ಸಮಗ್ರ ಜೀವನದ ಜೀವಂತ ಚಿತ್ರಣವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಿದ್ವಾಂಸರುಗಳು ಈ ವಿಶೇಷವಾದ ಮೌಖಿಕ ಸಾಹಿತ್ಯದಲ್ಲಿ ಆಸಕ್ತಿ ತಳೆದು ಜಾನಪದೀಯ ಅಧ್ಯಯನ ಕೈಗೊಂಡು ಹಲವಾರು ಗ್ರಂಥಗಳನ್ನು ಹೊರತಂದಿದ್ದಾರೆ. ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಹಾಗೆಯೇ ಕಥೆ, ಲಾವಣಿ ಮುಂತಾದವುಗಳನ್ನು ಭರದಿಂದ ಸಂಗ್ರಹಿಸುವ ಕೆಲಸ ಮಾಡಿದ್ದಾರೆ. ಅಲ್ಲದೆ ಜಾನಪದದ ಸಮರ್ಪಕ ಅಧ್ಯಯನದ ದೃಷ್ಟಿಯಿಂದ ಕರ್ನಾಟಕ ಜಾನಪದ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು, ಯಕ್ಷಗಾನ ಅಕಾಡೆಮಿಗಳು, ಜಾನಪದ ಟ್ರಸ್ಟ್, ಜಾನಪದ ಪತ್ರಿಕೆ ಮುಂತಾದವು ಬೆಳಕಿಗೆ ಬಂದು ಕಾರ್ಯ ನಿರ್ವಹಿಸುತ್ತವೆ.

ಅನೇಕ ಜಾನಪದ ವಿದ್ವಾಂಸರುಗಳು ಇಂತಹ ಸಮಿತಿಗಳ ಮುಖ್ಯಕಾರ್ಯ ನಿರ್ವಾಹಕರಾಗಿ ಜಾನಪದ ಅಧ್ಯಯನಕ್ಕೆ ಪೂರಕವಾಗಿ ಉತ್ತೇಜನ ನೀಡಲು ಜಾನಪದ ಸಂಸ್ಕೃತಿ ಆಧಾರಿತ ಗ್ರಂಥಗಳು ಅಪಾರ ಪ್ರಮಾಣದಲ್ಲಿ ಪ್ರಕಟಗೊಳ್ಳುವಂತೆ ಮಾಡಿದ್ದಾರೆ. ಇಂದು ಕನ್ನಡ ವಿಶ್ವವಿದ್ಯಾಲಯದಲ್ಲಿ ಜಾನಪದದ ಬಗ್ಗೆ ಸಂಶೋಧನೆ ನಡೆಯುತ್ತಿದ್ದು, ತನ್ನಮಿತ್ತ ಅನೇಕ ಸಂಶೋಧನಾತ್ಮಕ ಪ್ರಬಂಧಗಳು ಹೊರಬರುತ್ತಲಿರುವ ಸಂದರ್ಭದೊಳಗೆ ಅಥಣಿ ಪರಿಸರವನ್ನು ಆಯ್ಕೆಮಾಡಿಕೊಂಡು ಇಲ್ಲಿನ ವಾಲ್ಮೀಕಿ ಸಮುದಾಯದವರ ಮೌಖಿಕ ಸಾಹಿತ್ಯದ ಕುರಿತು ವಿವೇಚಿಸುವುದು ಇಲ್ಲಿನ ಉದ್ದೇಶವಾಗಿದೆ.

ಈ ಸಮುದಾಯದವರಲ್ಲಿ ಇತರೆ ಸಮುದಾಯದಲ್ಲಿಯಂತೆ ಇವರಲ್ಲಿಯೂ, ಮೈನೆರೆಯುವುದು, ಮದುವೆ, ಸೀಮಂತ, ಹುಟ್ಟಿನ ಸಂದರ್ಭ, ಒಕ್ಕಲುತನದ ಕೆಲಸಕಾರ್ಯದ ರಾಶಿಯ ಸಂದರ್ಭ, ಬಿಡುವಿನ ಸಂದರ್ಭ, ಹಬ್ಬ-ಹರಿದಿನದಂತಹ ಸಮಯದಲ್ಲಿ ಇವರ ಬಾಯಲ್ಲಿ ಹಾಡುಗಳು ತಾನೇ ತಾನಾಗಿ ಹರಿದು ಬರುವುದನ್ನು ಕಾಣಬಹುದು.

೮.೧. ಹಾಡುಗಳು

ಜಾನಪದ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿರುವ ಈ ಜನಪದ ಹಾಡು, ಜನಪದ ಸಂಸ್ಕೃತಿಯ ಅಂಗವು ಹೌದು, ಇದು ಗ್ರಾಮೀಣ ಅನಕ್ಷರಸ್ಥರ ಸೃಷ್ಟಿಯಾದುದರಿಂದ ಇದನ್ನು ಹಳ್ಳಿಯ ಹಾಡು ಎಂದು ಕರೆಯಲಾಗಿದೆ. ಪಲ್ಲವಿಯ ಮೂಲಕ ಕಟ್ಟಿದ ಈ ಹಾಡು ಕರ್ಣಾ-ಕರ್ಣಿಯಾಗಿ ತಲೆಮಾರಿನಿಂದ ತಲೆಮಾರಿಗೆ ಕಾಣಬರುವಾಗ ಆಸಕ್ತಿಯುಳ್ಳ ತೀಕ್ಷ್ಣಮತಿಗಳ ನಾಲಗೆಯ ಮೇಲೆ ನಲಿಯುತ್ತದೆ. ಸಾಮಾನ್ಯವಾಗಿ

ಜನರು ಹೇಳುವಂತೆ ಇದು ಒಂದು ಪದ ಅಥವಾ ಹಾಡು. ಹಳ್ಳಿಯ ಅವಿದ್ಯಾವಂತ ಜನರು ಈ ಹಾಡನ್ನು ಮೈಗೂಡಿಸಿಕೊಂಡವರಿಗೆ ಒಂದು ಪದ ಹೇಳು, ಒಂದು ಹಾಡೇಳು ಎನ್ನುತ್ತಾರೆ. ಆದ್ದರಿಂದ ಹಳ್ಳಿಗರ ಬಾಯಲ್ಲಿ ಹಾಡಾಗಿ ಹರಿಯುವ ಇದು ಕಂಠಸ್ಥಪರಂಪರೆಯ ಜೀವಾಳವೂ ಹೌದು.

ಪರಿಸರಕ್ಕನುಗುಣವಾಗಿ ಹಾಡುವ ದಾಟಿಯಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಒಂದೇ ಜನಪದ ಗೀತೆಯನ್ನು ಒಂದೊಂದು ಕಡೆಯವರು ಒಂದೊಂದು ರೀತಿಯಲ್ಲಿ ಧ್ವನಿ ವ್ಯತ್ಯಾಸ ಮಾಡಿ ಹಾಡಿದ್ದುಂಟು.

ಈ ಹಾಡುಗಳನ್ನು ಅವಲೋಕಿಸಿದಾಗ

೧. ಕೆಲಸದ ಹಾಡುಗಳಲ್ಲಿ

- ೧. ಹಂತಿಯ ಹಾಡುಗಳು
- ೨. ಬೀಸುವ ಪದಗಳು
- ೩. ಕುಟ್ಟುವ ಪದಗಳು

೨. ಹಬ್ಬದ ಹಾಡುಗಳು

- ೧. ಗುಳ್ಳವನ ಪದಗಳು
- ೨. ಹೋಳಿ ಹಬ್ಬದ ಹಾಡುಗಳು
- ೩. ಗುರ್ಚಿ ಪದಗಳು
- ೪. ಮೊಹರಂ ಪದಗಳು
- ೫. ಜೋಕುಮಾರನ ಹಾಡುಗಳು

೩. ಜೀವನ ಚಕ್ರದ ಮುಖ್ಯ ಘಟ್ಟಗಳಲ್ಲಿ

- ೧. ಬಾಲ್ಯ, ಯೌವ್ವನ, ಮದುವೆ
- ೨. ಸಾವಿನ ಹಾಡುಗಳು
- ೩. ಜೋಗುಳ ಹಾಡುಗಳು
- ೪. ಸೋಬಾನೆ ಪದಗಳು
- ೫. ಮದುವೆ ಹಾಡುಗಳು
- ೬. ಸಾವಿನ ಸಂದರ್ಭದ ಹಾಡುಗಳು

೪. ಕುಣಿತದ ಹಾಡುಗಳು

- ೧. ಕೋಲಾಟದ ಹಾಡುಗಳು
- ೨. ಡೊಳ್ಳಿನ ಹಾಡುಗಳು

೫. ದೇವರ ಸ್ತುತಿಸುವ ಹಾಡುಗಳು

೧. ದೇವರ ಕುರಿತು

೨. ನಾಮಸ್ಮರಣೆ ಮಾಡುವ ಹಾಡುಗಳು

ಈ ರೀತಿಯಾಗಿ ಹಲವಾರು ಪ್ರಕಾರಗಳಲ್ಲಿ ಹಾಡುಗಳು ಕಂಡುಬರುತ್ತವೆ. ಈ ಮುಂದೆ ಒಂದೊಂದಾಗಿ ನೋಡಬಹುದು.

ಕೆಲಸದ ಹಾಡುಗಳಲ್ಲಿ

೮.೧.೧. ಹಂತಿಯ ಹಾಡು

ಸಾಮಾನ್ಯವಾಗಿ ರೈತರು ಈಗಿನ ಹಾಗೆ ತಾಂತ್ರಿಕ ವ್ಯವಸ್ಥೆ ಮುಂದುವರೆಯದ ಪ್ರಾಚೀನ ಕಾಲದಲ್ಲಿ ತಮ್ಮ ಹೊಲಗಳಲ್ಲಿ ಎಲ್ಲ ದಾನ್ಯಗಳನ್ನು ರಾಶಿ ಮಾಡುವ ಸಂದರ್ಭದಲ್ಲಿ ರೈತಾಪಿ ಜನರು ಬೇಜಾರು ಕಳೆಯುವಂತೆ ತಮ್ಮದೆ ಆದ ದಾಟಿಯಲ್ಲಿ ಮುಂಜಾವಿನ ಸಮಯದಲ್ಲಿ ಎದ್ದು ಎತ್ತುಗಳಿಂದ ಧಾನ್ಯಗಳ ತೆನೆಗಳನ್ನು ತುಳಿಸುವ ಸಂದರ್ಭದಲ್ಲಿ ಹೇಳುತ್ತಿದ್ದ ಹಾಡು ಈ ರೀತಿಯಾಗಿದೆ.

ಹಂತಿ ಹೊಡೆಯುತ, ಎಂತವನ ನೆನಿಬೇಕು
ಗಂತಪಿತನಾದ ಗಣಪನೆ | ಗಂತಪಿತನಾದ ಗಣಪನ
ನೆನೆದರ ತಪ್ಪತ್ತಿನ ಹಂತಿ ತುಳದಾವೊ ||

ತಮ್ಮ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವದಕ್ಕೆ ವಿಘ್ನವಿನಾಶಕ ಗಣಪನನ್ನು ಸ್ಮರಿಸುವ ಪರಿಪಾಠವು ಇದ್ದುದು ಇದರಿಂದ ಕಂಡುಬರುತ್ತದೆ.

ಗುಡ್ಡದ ವಾರ್‍ಯಾಗ ಗುಗ್ಗಳ ಹೋಗಿ ಎದ್ದ
ಅಪ್ಪ ಬಸವಯ್ಯನ ಶಿವಪೂಜೊ ಅಪ್ಪಬಸವಯ್ಯ
ನ ಶಿವಪೂಜಿ ಆಗುವಾಗ ಆಕಾಶದ ಗಂಟಿ ನುಡಿದಾವೊ

ಈ ರೀತಿ ಬಸವನ ಪೂಜೆಯ ಸಂದರ್ಭವನ್ನು ಅನುಸರಿಸಿ ಹಾಡು ಹೇಳುವುದುಂಟು. ಇನ್ನು ಒಕ್ಕಲಿಗನಿಗೆ ಪವಿತ್ರವಾದ ಆಕಳು (ಗೋಮಾತೆ) ಕುರಿತ ಪದ.

ಆಕಳ ಕರ ಬಿಟ್ಟು ನಾಲ್ಕು ಮೂಲಿಗಿ ನಿಂತು
ಯಾಕ ಗೊಪ್ಯವ ಕರಿವಲ್ಲಿ ನಿನ್ನಮಗ
ಹಾಲಿಲ್ಲದ ಬಾನ ಉಣವಲ್ಲ.

ಬಬಲಾದ ಅಯ್ಯನವರ ಬಗಿನಮಗ ತಿಳಿಲಿಲ್ಲ
ನೆಲಬಂರಿವಾರದೊಳಗ ಶಿವಪೂಜೆ| ನೆಲಬರಿವಾರದೊಳಗ
ಶಿವಪೂಜೆ ಮಾಡಿಕೊಂಡ ಆಕಾಶದ ಗಂಟೆ ನುಡಿಶ್ಯಾರೊ

ಅಂಗಿಯ ಕಳದಾನ ಅಂಗಳಕ ನಿಂತಾನ
ಅಂಗೈಯ್ಯಾಗ ಅಡಿಕಿ ಒಡದಾನ| ಅಂಗೈಯ್ಯಾಗ
ಅಡಿಕಿ ಒಡದಾನ ಗಂಗಯ್ಯ ಸ್ವಾಮಿ ಹಾದಹೋಗ್ಯಾನ
ಜಳಕಕ

ಕಲ್ಲ ಕಡಬಿನ ಮಾಡಿ ಮುಳ್ಳ ಶ್ಯಾವಿಗಿಮಾಡಿ
ಬನ್ನಿ ಎಲಿಯ ಪತ್ರೇಳ್ಯೊ ಪಾಂಡವರ ಉಣ್ಣದೇ
ಹೋಗ್ಯಾರು ವನವಾಸ

ಹಸರ ಕುಬಸಚೆಂದ, ಬಸರ ಹೆಂಗಸ ಚೆಂದ, ಹೆಸರಾಗಿ
ಚೆಂದ ಬಬಲಾದ್ಯ, ಬಬಲಾದಿ ಉಡಕಿರ ಹಸರ ಯಾಲಕ್ಕಿ
ಗೊನಿ ಚೆಂದ

ಬಾಯಾಗ ಹಲ್ಲಿಲ್ಲ, ಎದಿಮ್ಯಾಲ ಮಲಿಯಿಲ್ಲ
ಎಷ್ಟು ಹಡದೆವ್ವ ಕೋಳೆವ್ವ, ನಿನ್ನ ಜನ್ಮಕ
ತಿಪ್ಪಸವರದ ಬಿಡಲಿಲ್ಲ

ಈ ರೀತಿಯ ಹಲವಾರು ಪದ್ಯಗಳನ್ನು ಹೇಳುತ್ತ ಹಂತಿಯನ್ನು ಕಟ್ಟಿ ಹೊಡೆಯುವುದು ವಾಡಿಕೆಯಾಗಿದೆ. ಅದರಂತೆ ಬೀಸಲು ಕುಳಿತಾಗ ಹಾಡುವ ಹಾಡು.

ಬೀಸುಕಲ್ಲಿಗಿ ಶರಣ, ಗೋಧಿಮುಕ್ಕಿಗಿ ಶರಣ
ಆಗು ಮುಕ್ಕಿಗೆ ಶಿವಶರಣ ಬಿಸಾಕ ಕುಂತಿನಿ
ಚಂದಾನ ಬದುಕಲ್ಲ ಬಂಗಾರ ಬಿಳಿಜೋಳ
ತಾಸ ಹೊತ್ತಿನಾಗ ತಿರವಿನ ಬಿಸಾಕ ಕುಂತಿನ

ಮತ್ತೊಂದು ಪದ್ಯದಲ್ಲಿ

ಆಕಳ ಹೆಂಡಿತಂದ ಆದುಮನಿ ಸಾರಿಸಿ
ಗೋಪಿ ತಾಯಿಗಿ ತರಿ ಹೊಡದ ಬಿಸಾಕ ಕುಂತಿನ
ಆಕಳ ಹೊಟ್ಟೆಲಿ ಹುಟ್ಯಾನ್ರಿ ಬಸವಣ್ಣ
ತರಿಹೊಡದ ನೀರ ಕುಡಸಿನ ಬಿಸಾಕಕುಂತಿನ

ಸಾಮಾನ್ಯವಾಗಿ ಬೀಸುವ ಸಂದರ್ಭದಲ್ಲಿ ಹೆಣ್ಣು ಮಗಳಿಗೆ, ಮನೆಗೆ ಜನರು ಬಂದಿರುವ ಸಂದರ್ಭದಲ್ಲಿ ಅವರಿರುವ ಸಂದರ್ಭದಲ್ಲಿ ಎಷ್ಟು ಜನರು ಎಂಬುದನ್ನು ಹೇಳಿ ಅಷ್ಟು ಅಡಿಗೆ ಮಾಡುವೆ ಎಂದು ಹೇಳುವ ಸೂಚನೆ ಈ ಕೆಳಗಿನ ಪದ್ಯದಲ್ಲಿ ಕಾಣಬಹುದು.

ಬೀಸಲಾಕ ಕುಂತಿವರಿ ಬಗದಿಡಿರಿ ನಿಮ್ಮಕುದರಿ

ನಮಗೆಳತಿ ಏಸ ಮಂದ್ಯಾರ, ಏಸ ನಿ ಮಂದ್ಯಾರ

ನಮಗೇಳ ಸಂಗಯ್ಯ ಸ್ವಾಮಿ ನಿಡತಿವರಿ ನೋಡಿ

ಬಂದಡಿಗೆ

ಇನ್ನು ಬೀಸುವ ಕಾರ್ಯ ಮುಕ್ತಾಯವಾಗುವ ಸಂದರ್ಭಕ್ಕೆ ಈ ರೀತಿಯಾಗಿ ಹೇಳುತ್ತಾರೆ.

ಆಗು ಮುಕ್ಕಿಗಿ ಶರಣ, ಗೋಧಿಕಲ್ಲಿಗಿ ಶರಣ

ಶಿವಶರಣ ಅತ್ತಿಮಾವರಿಗೆ

ಅತ್ತೆ ಮಾವರಿಗೆ ಶಿವಶರಣ ಬೀಸಿದ ಹಿಟ್ಟ

ಕೊಡ ಶಿವನ ಉಣ್ಣವರಿಗಾಸೆ

ಇನ್ನು ಬದುಕಿನಲ್ಲಿ ಹಲವಾರು ವ್ಯಕ್ತಿಗಳಲ್ಲಿ ಹಲವಾರು ರೀತಿಯ ಗುಣಗಳನ್ನು ಹಲವಾರು ರೀತಿಯ ವ್ಯಕ್ತಿತ್ವವನ್ನು ನಾವು ಕಾಣಬಹುದಾಗಿದೆ. ಅಂತಹದರಲ್ಲಿ ವಿಶ್ವಾಸವಿರದ ವ್ಯಕ್ತಿಯ ಗೆಳೆತನದ ಕುರಿತು ಹೇಳುವ ಪದ್ಯ.

ಹಸುವ ಇಲ್ಲದ ಊಟ

ಕುಸಿಯ ಇಲ್ಲದ ನಗೆಯ

ವಿಶ್ವಾಸವಿಲ್ಲದವರ ಗೆಳೆತನ/ಕಟ್ಟಿದರ

ಬಿಸಲಾಗ ಹಾದಿ ನಡದಂಗ

ಹೀಗೆ ಬೀಸುವ ಕಲ್ಲಿನ ಮುಂದೆ ಕುಳಿತ ಗರತಿಯರು ನಮ್ಮ ಭಾರತೀಯ ಸಂಸ್ಕೃತಿಯ ಪುರಾಣದ ಪುಣ್ಯ ಪುರುಷರನ್ನೆಲ್ಲ ಸ್ಮರಣೆ ಮಾಡುತ್ತಾ ಹಾಡತೊಡಗುತ್ತಾರೆ. ದೇವಾನು ದೇವತೆಗಳ ಸ್ಮರಣೆ ಮಾಡುತ್ತ ಆ ಸಂಸ್ಕೃತಿ ಅಳಿಯದೆ ನಿರಂತರವಾಗಿ ಉಳಿಯುವಂತೆ ಮಾಡಿದ್ದಾರೆ. ಹಾಡುಗಳ ಮೂಲಕ ನಮ್ಮ ಬದುಕಿಗೆ ಸುಖ ಕೊಡು ಎಂದು ದೇವತೆಗಳನ್ನು ಬೇಡಿದ್ದಾರೆ.

ಶರಣೆಂದೆ ಶಿವನಿಗೆ, ಶರಣೆಂದೆ ಗುರುವಿಗೆ

ಶಿವನ ಮಡದಿಗೆ/ ಗುರುವಿಗೆ

ಶರಣೆಂದು ಕಲ್ಲು ಹಿಡಿದೇನು

ಹೀಗೆ ಹಲವಾರು ರೀತಿಯಲ್ಲಿ ದೇವರನ್ನು ಸ್ತುತಿಸುವುದು ಕಾಣುತ್ತೇವೆ.

೮.೧.೨. ಕುಟ್ಟುವ ಹಾಡುಗಳು

ಓಂ ಎಂದು ಕುಟ್ಟುವೆ | ಸೊಂ ಎಂದು ಬೀಸುವೆ

ಓಂ ಸೊಂ ಎರಡು ತಿಳಿಯಬೇಕು ನಾರಿ

ಹಾಕವ್ವ ಹೇರಿ

ಓಂಮನೆಂದು ಅಕ್ಕಿ ತರಿಸಿ

ಸೂಕ್ಷ್ಮನೆಂದು ಹಳ್ಳಗಳೆದು

ಓಂ ಸೊಂ ಅನ್ನ ಮಾಡಿ

ಗುರವಿಗಿ ಎಡಿ ಮಾಡಿ ಹಾರವ್ವ ಹೇರಿ

ಇನ್ನೂ ಈ ರೀತಿಯಾಗಿ ಬೀಸುವ ಸಂದರ್ಭದಲ್ಲಂತೂ ತನ್ನ ಗುರುವಿನ ದೈವದ ಸ್ಮರಣೆ ಮಾಡುತ್ತಾ ಕಾರ್ಯಮಾಡುವುದು ಅವಿಸ್ಮರಣೀಯ. ಹಬ್ಬ ಹರಿದಿನಗಳಂತೂ ಪ್ರತಿಯೊಂದಕ್ಕೂ ಅರ್ಥಪೂರ್ಣವಾದ ಹಾಡುಗಳನ್ನು ಹಾಡುತ್ತ ತನ್ನ ಬದುಕು ಸುಂದರವಾಗಿ ಹಾಗೂ ಸಂತೋಷವಾಗುವತ್ತ ಸಾಗಿದ್ದು ಕಂಡುಬರುತ್ತದೆ.

೮.೧.೩. ಹೋಳಿ ಹುಣ್ಣಿಮೆಯಲ್ಲಿ ಹಾಡುವ ಪದಗಳು

ಹೋಳಿ ಹುಣ್ಣಿಮೆ ಬತ್ತು ಹೊಳಿಗಿ ಮಾಡುದ ಬತ್ತು

ಬೊಳೆಮ್ಮ ತುಪ್ಪ ಕಾಶ್ಯಾಳ | ಬೊಳೆಮ್ಮ ತುಪ್ಪ

ಕಾಶ್ಯಾಳ ಎಲೆ ಹುಡುಗಿ ಹೊಳ ಬಾಯಿ ಹಿಡಿದ

ಸುರವ್ಯಾಳ.

ಇನ್ನು ದೀಪಾವಳಿ ಹಬ್ಬದಲ್ಲಿ ಒಕ್ಕಲಿಗರ ಮಕ್ಕಳು ಆಡು, ಎಮ್ಮೆ, ಎತ್ತು ಇವುಗಳಿಗೆ ತೊಂದರೆ ಬರದಿರಲಿ ಎಂದು "ಆಡಿ-ಪಿಡಿ" ಬೆಳಗುವ ಸಂದರ್ಭ ಇದೆ. ಆವಾಗ ಹಾಡುವ ಹಾಡು ಈ ಕೆಳಗಿನಂತಿದೆ.

ಆಡಾಪಡಾ ತಂದಿರಬೇಕ ಸಾರಬರ ಹಿಂಡಿರಬೇಕ

ಒಲಿಮ್ಯಾಗ ಇಟ್ಟಿರಬೇಕ, ಬೆಕ್ಕ ಬಂದ ಕುಡಿದಿರಬೇಕ

ಆಯ ಬಂದ ಬಡದಿರಬೇಕ, ಮುತ್ಯಾ ಬಂದ ಬಿಡಿಸಿರ

ಬೇಕ ಆಡಿ ಪಿಡಿ ಮಂತ್ರೇಷೆ.

ಇದು ಆಡಿನ ಬಗ್ಗೆ ಹಾಡುತ್ತಾರೆ. ಇನ್ನು ಎಮ್ಮೆಯ ಕುರಿತು ಹೊತ್ತ ಮುಣಗಿತೊ ಹೊಲೆ ಎಲ್ಲ. ಹನ್ನೆಡೆತ್ತಿನ ಬಾಲ, ಬಾಲಮ್ಯಾಲ ಬಂಡಿ ಬಂಡಿಮ್ಯಾಗ ನವಿಲ, ನವಲಪುಚ್ಚತೊಡಿ ಚಿಗರಿ ಕೊಡಿಗಿ ಹಾಕಿ ಚಿಗರಿಹೋಗೋ ಜಾಣಾ ಅದಕೆನ ದಾಡಿ ಹುಣಚಿನ ರಾಡಿ ಆಡಿ ಪಿಡಿ ಮಂತ್ರೇಷೆ. ಸಾಮಾನ್ಯವಾಗಿ ಮೋಡ, ಮಳೆ, ಬೆಳೆ ಎಲ್ಲ ದೇವರ ಕೊಡುಗೆಗಳು ಎಂಬ ನಂಬಿಗೆ ಜನಪದರಲ್ಲಿ. ಹೀಗೆ ಮಳೆಯಾಗದ ಸಂದರ್ಭದಲ್ಲಿ ಗುರ್ಚಿ ಎಂದು ಆಕಳ ಸೆಗಣಿಯಿಂದ ದುಂಡಗೆ ಆಕಾರ ಮಾಡಿ ಕಪ್ಪೆಯನ್ನು ಆ ಸೆಗಣಿಯಲ್ಲಿ ಕೂಡಿಸಿ ಅದನ್ನು ರೊಟ್ಟಿ ಬೇಯಿಸುವ ತವೆಯ ಮೇಲೆ ಇಟ್ಟುಕೊಂಡು ಮನೆಮನೆಗೆ

ಹೋಗಿ ನೀರು ಹಾಕಿಸಿಕೊಳ್ಳುವ ಪದ್ಧತಿ ಈ ಸಂದರ್ಭದಲ್ಲಿ ತವೆಯನ್ನು ಹೊತ್ತ ಮಗು ಬರಿಮೈಯಿಂದ ಇರುತ್ತದೆ. ಆವಾಗ ಹಾಡುವ ಹಾಡು,

ಗುರ್ಚಿ ಗುರ್ಚಿ ಎಲ್ಲಾಡಿ ಬಂದಿ
ಹಳ್ಳಾ ಕೊಳ್ಳಾ ಹರದ್ಯಾಡಿ ಬಂದಿ
ಕಾರ ಮಳಿಯ ಕಪಾಟ ಮಳಿಯ
ಬಣ್ಣ ಕುಡತನ ಬಾ ಮಳಿಯ ಬಾ ಮಳಿಯ
ಸುಣ್ಣಾ ಕುಡತನ ಸುರಿಮಳೆಯ ಸುರಿಮಳಿಯ

ಎಂದು ಹಾಡುತ್ತ ಮನೆ-ಮನೆಗೆ ತಿರುಗಾಡುವುದುಂಟು.

೮.೧.೪. ಸೋಬಾನೆ ಪದಗಳು

ಹೆಣ್ಣುಮಗಳು ಮೈನೆರೆದಾಗ ಪ್ರಬುದ್ಧ ಅವಸ್ಥೆಗೆ ಬಂದುದರ ಬಗ್ಗೆ ಅರಿವಿಗೆ ಬಂದಾಗ, ಒಮ್ಮೊಮ್ಮೆ ಮದುವೆಯಾಗಿದ್ದು, ಮೈನೆರೆಯದಿದ್ದಾಗ ಸೋಬಾನೆ ಮಾಡುತ್ತಾರೆ. ಆವಾಗ ಕೂಡ ಈ ಹಾಡುಗಳನ್ನು ಹಾಡುತ್ತಾರೆ. ಕೆಲವೊಂದು ಸಂದರ್ಭಗಳಲ್ಲಿ ಬಾಲ್ಯ ವಿವಾಹವಾಗಿದ್ದರೆ ಮದುವೆ ನಂತರ ಮೈನೆರೆದರೆ ಸೋಬಾನೆ ಕಾರ್ಯ ನಡೆಯುತ್ತದೆ. ಆ ಸಂದರ್ಭದಲ್ಲಿ ಕೆಳಗಿನಂತೆ ಹಾಡು ಹಾಡುತ್ತಾರೆ.

ಸೀರಿ ಉಡುಸಿರಿ ನನ್ನ ಶೀಲ ಮಲ್ಲಮ್ಮಗ
ಕುಬಸ ತೊಡಿಸಿರಿ ನನ್ನ ಕೂಸ ಮಲ್ಲಮ್ಮಗ
ಅರಿಷಿಣ ಹಚ್ಚಿರಿ ನನ್ನ ಸರಸ ಮಲ್ಲಮ್ಮಗ
ದಂಡಿ ಕಟ್ಟಿರಿ ನನ್ನ ದುಂಡ ಮಲ್ಲಮ್ಮಗ
ಹುಚ್ಚ ಭರಮರೆಡ್ಡಿ ಮಡದಿಗೆ ಸೊ ||

೮.೧.೫. ಲಾವಣಿ ಪದಗಳು

ಪರಗಣೆ ಜತ್ತಿ ಉಮರಾಣಿ, ದೇಶಕಾ
ಆಳುವಂತ ಧಣಿ ಥಪ್ಪಳೆ ಸರಕಾರ
ಜತ್ತಿ ಸಂಸ್ಥಾನ ಪೈಕಿ ಸಣ್ಣಹಳ್ಳ ಸಿಂಧೂರ ||ಪ||

ಸಿಂಧೂರಾಗ ಲಕ್ಷ್ಮಣ ಹುಟ್ಯಾನು ಬಂಟ ಅನಸ್ಯಾನು
ಕೊಟ್ಟ ವಚನ ಹುಟ್ಟ ತಪ್ಪಲಿಲ್ಲ, ಹುಟ್ಟತಪ್ಪಲಿಲ್ಲ
ಘಟ ಹೋಗುವ ತನಕ ಹಿಡಿದ ಹಟ ಬಿಡಲಿಲ್ಲ ||೧||

ಒಬ್ಬ ಐನವರ ಕಾಲಾಗ ಬಿದ್ದಿತಮರ್ಮ
ಮಾಡಿದಿಪರಿತ ಒಂದಿನ ಲಕ್ಷ್ಮಣನ ಮ್ಯಾಲ
ಐನವರ ತಳ್ಳಿ ಮಾಡ್ಯಾನಲ್ಲ ಐನರ ಇವರು
ಬಂದರ ರಿಪೋಟ ಕಳಿಸ್ಯಾರ ಇನ್ಸಪೆಕ್ಟರಗ

ಇನ್ಸ್‌ಪೆಕ್ಟರ್ ಸಿಂಧೂರಿಗೆ ಬಂದಾ ಲಕ್ಷ್ಮಣನ ಕರಿಯಾಕ ಕಳಿಸಿದ
ಬಂದನಿತ್ತ ಲಕ್ಷ್ಮಣ ಹೇಳಿದ್ದ ಬಾಳಹುಶ್ಯಾರದಿಂದ ಬಾ ಮುಂದ
ಲಕ್ಷ್ಮಣಗ ಇನ್ಸ್‌ಪೆಕ್ಟರಗ ವಾದ ಆದಿತ್ತಲ್ಲ
ಇನ್ಸ್‌ಪೆಕ್ಟರ್ ಲಕ್ಷ್ಮಣನ ಮ್ಯಾಲ ಏರಿ ಹೋದನಲ್ಲ
ಲಕ್ಷ್ಮಣ ಚಾವಡಿ ಜಿಗದ ಓಡಿ ಹೋದನಲ್ಲ
ಕರಕರ ತಿಂದೋ ಹಲ್ಲ.

ಮರುದಿನ ಲಕ್ಷ್ಮಣನ ನೆದರ ಇಟ್ಟನಲ್ಲ
ಲಕ್ಷ್ಮಣ ಕಲ್ಲೊಳ್ಳಿ ಗುಡ್ಡ ಸೇರ್‍ಯನಲ್ಲ
ಕಟಕ ಇನ್ಸ್‌ಪೆಕ್ಟರಗ ಅಂವಗ ವಾದ ಆದಿತಲ್ಲ
ನಾಳಿ ಹುಶ್ಯಾರದಿಂದ ಇರೋ ಗುಡ್ಡದೊಳಗ

ಸಾಖ್ಯಾಗೋಪಾಲ್ಯಾ, ನರಸ್ಯಾ, ಮೂವರು ಕೂಡಿ ಮಾತಾಡ್ಯಾರೊ
ತಮ್ಮ ಮನಿಯಾಗ, ನಾಳೆ ತುರಗ ಮುರದ ತರುನು
ಮಾಮಗ ಇಷ್ಟ ಹೇಳಿ ಹೊಂಟರಲ್ಲ, ಲಕ್ಷ್ಮಣನ
ಮ್ಯಾಲ ಅವರ ಜೀವ

ಮರುದಿನ ಜತ್ತಿಗೆ ಹೋದರಲ್ಲ, ತುರಗ ಮುಂದಾರಲ್ಲ
ಕಟಕಪೇಚಾರನ ಜಗ್ಗಿತಗದ ಕಡದಾರಲ್ಲ
ಬೆಳಗಾಗುದರೊಳಗ ಜತ್ತಿ ಅಗಸಿಗಿ ಚಂಡ
ಕಟ್ಯಾರಲ್ಲ

ಅಲ್ಲಿಂದ ಮುಂದ ನಡದಾರಲ್ಲ ಅರಬಾವಿ ಮಠಸೇರ್‍ಯಾರಲ್ಲ
ಅಜ್ಜನವರ ಆಶಿರ್ವಾದ ಪಡೆದವರಲ್ಲ ಗುಣದಾಳ, ಗದ್ಯಾಳ
ಗೊಠೆ ಮೇಲಿಂದ ಹಾದ ಗಲಗಲಿಗೆ ಹೊಗ್ಯಾರಲ್ಲ, ಗುಜ್ಜರ
ಮನಿ ಒಡದ ಅನ್ನ ಕೊಟ್ಟವರಿಗಿ ದಾನ ಮಾಡ್ಯಾರಲ್ಲ

ನಿಡೋಣಿ ದುಂಡ್ಯಾಬಂದ ಕುಡ್ಯಾನಲ್ಲ ಒಳ್ಳೆಜೀವನ ಮಿತ್ರ
ಕಲ್ಲೊಳ್ಳಿ ಗುಡ್ಡದಾಗ ತಿರಗ್ಯಾರಲ್ಲ, ಜಮಖಂಡ್ಯಾಗ ಅಡ್ಯಾಡರಲ್ಲಿ
ಹಲ್ಲಿಗಿ ಬಂಗಾರ ಬಡಿಸಿಕೊಂಡಾರಲ್ಲ, ಲಕ್ಷ್ಮಣನ ಹಲ್ಲ ಮುರಿತ
ಮನಸಿಗಿ ಸಂಶಯ ತಂದರಲ್ಲ.

ಗೌವರ್ನರ ನೆದರ ಇಟ್ಯಾನಲ್ಲ, ಅಲ್ಲಿಂದ ಜಾಗ ಬಿಟ್ಯಾನಲ್ಲ
ಮರುದಿನ ಬಂದ ಮುತ್ತಿಗಿ ಹಾಕ್ಯಾರಲ್ಲ, ಗುಂಡ ಹಾರಿಸ್ಯಾರಲ್ಲ
ಸಪ್ಪಳಕ ಎದ್ದ ನಾಲ್ಕ ಅರಡಿ ಬಾವಿ ಜೀಗದ ಓಡಿ
ಹೋದರಲ್ಲ.

ಹಿಂಬರಕಿ ಓಡುವಾಗ ಕವಣಿಕಲ್ಲ ಒಗದಕುದರಿಕಾಲ
ಮುರದರಲ್ಲ, ಗವರ್ನರ ತಿರುಗಿ ಹೊದನಲ್ಲ, ಗವರ್ನರ
ಪಿತೂರಿ ನಡಸ್ಯಾನಲ್ಲ, ತೆಗ್ಗಿ ನಾಯ್ಕಗ ಗುಂಡಿಗೆ ಬಿದ್ದನಲ್ಲ
ಪಿತೂರಿ ನಡಸ್ಯರಲ್ಲ

ಕಪ್ಪರ ಪಡಿಯವ್ವನ ಗುಡಿಯಲ್ಲಿ
ಜಾತ್ರೆ ನೇಮಿಷ್ಯರಲ್ಲ, ಊಟಕ ಹೇಳ್ಯಾನಲ್ಲ
ಸೋಮಲ್ಯಾ ಲಾಟನ ಇಟ್ಟ ತೋರ್ಯಾನಲ್ಲ
ಲಕ್ಷ್ಮಣಗ ಎದಿ ಒಳಗ ಗುಂಡ ಬಡದಾರಲ್ಲ

ಸಾಖ್ಯಾಗೊ ಪಾಲ್ಯಾನರಸ್ಯಾ ಓಡಿಹೋದರಲ್ಲ ಬೇಕಂತ ಹೋಗಿ
ಸಿಕ್ಕರಲ್ಲಾ ಅವರ್ನ ಓದ ಒಗದಾರೊ ಜಮಖಂಡಿ ಝುಲ

ಸಿಂಧೂರ ಲಕ್ಷ್ಮಣನ ಈ ಗೀತೆ ವೀರ ಲಾವಣಿ ಆಗಿದ್ದು ವಾಲ್ಮೀಕಿ ಸಮುದಾಯದಲ್ಲಿ ಜನಿಸಿದ ಈತ ಅಥಣಿ ತಾಲೂಕಿಗೆ ಹತ್ತಿರದ ಹಳ್ಳಿ ಮಹಾರಾಷ್ಟ್ರದ ಸಿಂಧೂರಿನವನು. ಆದರೆ ಇಂಡೀ ಗಡಿಭಾಗದ ಈ ಹಳ್ಳಿಯ ಜನಕ್ಕೆ ಆತನ ಶೂರತನ ಬಹಳಷ್ಟು ಮಾರ್ಗದರ್ಶಕರವೆಂದೆ ಹೇಳಬೇಕು. ಅಲ್ಲದೆ ಆದರ್ಶವೆಂದೂ ತಿಳಿಯಬೇಕು.

ಕರ್ನಾಟಕದ ಅಥಣಿಯಲ್ಲಿ ಗಮನ ಹರಿಸಿದಾಗ ಲಾವಣಿಯು ವಿಶಿಷ್ಟ ರೂಪ ತಾಳಿರುವುದು ಕಂಡುಬರುತ್ತದೆ. ಹೇಗೆಂದರೆ ಛಂದಸ್ಸು ಹಾಡಿನ ರೀತಿ, ಹಿಮ್ಮೇಳ ಮೊದಲಾದವುಗಳಿಂದ ಸಮರ್ಥವಾದ ಲೋಕರಂಜನೆಯ ಸತ್ವವನ್ನು ಒಳಗೊಂಡಿದೇ ಲಾವಣಿಯ ರಚನೆಯಲ್ಲಿ ಪಲ್ಲವಿ, ಚೇಕುಗಳು ಕಂಡುಬರುವುದು ಅಷ್ಟೇ ಅಲ್ಲ ಲಾವಣಿಗಳನ್ನು ಹಾಡುವಾಗ ಹಿಗ್ಗಿಸುವ ಮತ್ತು ಕುಗ್ಗಿಸುವ ಸಂಪ್ರದಾಯವುಂಟು. ಡಾ.ಎಂ.ಎಸ್.ಸುಂಕಾಪುರ ಮತ್ತು ಡಾ.ಬೆಟಗೇರಿ ಕೃಷ್ಣಶರ್ಮರು ಹಾಡುಗಳನ್ನು

ಐದು ವಿಧಗಳಲ್ಲಿ ವಿಂಗಡಿಸಿದ್ದು ಈ ಮೇಲಿನ ಸಿಂಧೂರ ಲಕ್ಷ್ಮಣನ ಹಾಡು ವೀರ ಲಾವಣಿಯಲ್ಲಿ ಬರುತ್ತದೆ.

೮.೧.೬. ಮದುವೆಯಲ್ಲಿ ಹಾಡುವ ಪದಗಳು

ಮದುಮಕ್ಕಳಿಗೆ ಎಣ್ಣಿ ಹಚ್ಚುವ ಸಂದರ್ಭದಲ್ಲಿ ಈ ರೀತಿಯಾಗಿ ಹಾಡನ್ನು ಹಾಡುತ್ತಾರೆ.

ನಿ ಎಣ್ಣಿ ನಿ ಎಣ್ಣಿ ಯಾವ ದೇವರೆಣ್ಣಿ
ತಂದಿ ಬಸವಣ್ಣಾ ನೇಯ ಎಣ್ಣಿ
ತಂದಿ ನಿ ಬಸವಣ್ಣನ ನಿ ಎಣ್ಣಿ ಏರ್‍ಯಾವ
ಐವತ್ತೊಂದೈದ ಗಳಿಗ್ಯಾಗ

ಇನ್ನು ಎಣ್ಣಿ ಇಳಿಸುವ ಸಂದರ್ಭದಲ್ಲಿ

ನಿ ಎಣ್ಣಿ ನಿ ಎಣ್ಣಿ ಯಾವ ದೇವರೆಣ್ಣಿ
ತಂದಿ ಗಿರಿವಾಸ್ಯಾಗ ನೇಯಾ ಎಣ್ಣಿ
ತಂದಿ ನಿ ಎಣ್ಣಿ ಇಳಿದಾವ
ನಾಲವತ್ತೊಂದನಾಕ ಗಳಿಗ್ಯಾಗ

ಹೀಗೆ ಮದುವೆಯಲ್ಲಿ ಎಣ್ಣಿ ಏರಿಸುವ ಸಂದರ್ಭದಲ್ಲಿ ಐವತ್ತೊಂದೈದಗಳಿಗೆ ಹಾಗೂ ಇಳಿಸುವ ಸಂದರ್ಭದಲ್ಲಿ ನಾಲವತ್ತೊಂದನಾಕ ಗಳಿಗೆಯ ಹಾಡು ಹೇಳುತ್ತಾರೆ. ಇನ್ನು ಸ್ತ್ರೀಯಳು ಗರ್ಭಿಣಿಯಾದ ಸಂದರ್ಭದಲ್ಲಿ ಅವಳನ್ನು ಕುರಿತು ಹಾಡುವ ಹಾಡಂತು ಬಹು ಮಾರ್ಮಿಕವಾದದ್ದು.

ಇಂದ್ರ ಜಾನಕಿ ನಿನಗ ಚಂದ್ರ ಮೂಡಿದನೆನ
ನಾರಿ ಜಾನಕಿ ನಿನಗ ಸೂರ್ಯ ಮೂಡಿದನೆನ
ಒಂದೊಂದು ತಿಂಗಳಿಗಿ ಒಂದೆನ ಬಗಸ್ಯಾಳ
ಒಂದೇಲಿ ಮರದ ಎಳಿಹುಣಚೇಳವ್ವ ತಾಯಿ ||೧||
ಎರಡೆಂಬು ತಿಂಗಳಿಗೆ ಎರಡೆನ ಬಗಸ್ಯಾಳ
ಎರಡೆಲಿ ಬರದ ಎಳಿಹುಣಚೆಳವ್ವ ತಾಯಿ ||೨||
ಮೂರೆಂಬು ತಿಂಗಳಿಗೆ ಮೂರೆನ ಬಗಸ್ಯಾಳ
ಮೂಡಲದಾಗ ಹರಿವ ತಿಳಿನಿರ ಏಳವ್ವ ತಾಯಿ ||೩||
ನಾಕಂಬು ತಿಂಗಳಿಗೆ ನಾಕೆನ ಬಗಸ್ಯಾಳ
ಕಾಕಮಿ ಹಣ್ಣಾ ಕೈತುಂಬೆಳವ್ವ ತಾಯಿ ||೪||

ಐದಂಬು ತಿಂಗಳಿಗೆ ಐದೆನ ಬಗಸ್ಯಾಳ
ಕೊಯ್ದು ಮಲ್ಲಿಗಿ ನೆನೆದಂಡೆಳವ್ವ ತಾಯಿ ||೫||
ಆರಂಬು ತಿಂಗಳಿಗೆ ಆರೆನ ಬಗಸ್ಯಾಳ
ಹಾರಕದ ಬಾನ ಕೆನಿ ಮಸರೆಳವ್ವ ತಾಯಿ ||೬||
ಏಳೊಂಬು ತಿಂಗಳಿಗೆ ಏಳೆನ ಬಗಸ್ಯಾಳ
ಹೇಳಿ ಕಳವ್ಯಾಳ ತವರಿಗೆಳವ್ವ ತಾಯಿ ||೭||
ಎಂಟೆಂಬು ತಿಂಗಳಿಗೆ ಎಂಟನೆ ಬಗಸ್ಯಾಳ
ಕಂಟಲ ಎತ್ತಿ ಕರಿ ಬರಲೇಳವ್ವ ತಾಯಿ ||೮||
ಒಂಬತ್ತ ತಿಂಗಳಿಗಿ ಒಂಬತ್ತನ ಬಗಸ್ಯಾಳ
ಸಂದಿನ ಸಂದೆಲ್ಲ ಕಿರಿಬ್ಯಾನೆಳವ್ವ ತಾಯಿ ||೯||
ಹತ್ತಂಬು ತಿಂಗಳಿಗಿ ಹತ್ತೆನ ಬಯಸ್ಯಾಳ
ಮುತ್ತಿನಂತ ಮಗನ ಬಗಲಾಗೆಳವ್ವ ತಾಯಿ ||೧೦||

ಈ ರೀತಿಯಾಗಿ ಗರ್ಭಿಣಿ ಸ್ತ್ರೀಯಳು ಗರ್ಭಧರಿಸಿದಂದಿನಿಂದ ಮಗುವನ್ನು ಹೆರುವವರಿಗೆ ತನ್ನ ಬಯಕೆಗಳನ್ನೆಲ್ಲ ತಾಯಿಯ ಮುಂದೆ ವರ್ಣಿಸುವ ರೀತಿಯನ್ನು ಮೇಲಿನ ಹಾಡಿನಲ್ಲಿ ಬಹು ಸುಂದರವಾಗಿ ಕಾಣಬಹುದಾಗಿದೆ. ಇನ್ನು ಸಿಮಂತದ ಸಂದರ್ಭದಲ್ಲಿ ಅಳಿಯನಿಗೆ ಆಹೆರ ಮಾಡುವ ಬೀಗರ ಕುರಿತು ಈ ರೀತಿಯಾಗಿ ಹೇಳುತ್ತಾರೆ. ಬೀಗರನ್ನು ಟೀಕೆ ಮಾಡುವ ರೀತಿ ಕೂಡ ಹೇಗೆ ಎಂಬುದು ಈ ಕೆಳಗಿನ ಹಾಡಿನಿಂದ ಕಂಡುಬರುತ್ತದೆ.

ಹೇ ರಾಮವ್ವ ಹೆಣ್ಣ ಕೊಟ್ಟವರೆನಕೆಟ್ಟವ್ವ
ಹೆಣ್ಣ ಕೊಟ್ಟವರೆನಕೆಟ್ಟ ಮುನ್ನುರಂಬರಸೀರಿಉಟ್ಟ
ಟೋಪ ಸೆರಗ ಮೇಲಮಾಡಿ ಟಿಪನಾಗಿ ನಿಂತಾಳ
ಕೈಯಾಗ ಗಡಿಯಾರ ತರಲಿಲ್ಲ
ರಂಗಿನ ಮಾತೊಂದೇಳಲಿಲ್ಲ
ಟೊಪಸೆರಗ ಮೇಲೆ ಮಾಡಿ
ಟಿಪನಾಗಿ ನಿಂತಾಳ
ಹೇ ಚಂದ್ರವ್ವ ಹೆಣ್ಣ ಕೊಟ್ಟವ್ವಗೆನ ಕೆಟ್ಟ
ಕೈಯಾಗ ಉಂಗುರಾ ತರಲಿಲ್ಲ

ಏನ ಹೇಳಲವ್ವ ಹೆಣ್ಣಕೊಟ್ಟವರೆನ ಕೆಟ್ಟವ್ವ

ಕೊಳ್ಳಗ ಚೈನ ತರಲಿಲ್ಲ

ರಂಗಿನ ಮಾತೊಂದೇಳಲಿಲ್ಲ

ಟೊಪಸೆರಗ ಮಲ್‌ಮಾಡಿ

ಟಿಪನಾಗಿ ನಿಂತಾಳ

ಹೆಣ್ಣಕೊಟ್ಟವರೆನ ಕೆಟ್ಟವ್ವ

೮.೧.೭. ಜೋಗುಳ ಪದಗಳು

ಈ ಹಾಡುಗಳು ಸಾಮಾನ್ಯವಾಗಿ ಗಂಡುಮಗು ಹುಟ್ಟಿದ ಹನ್ನೆರಡನೇ ದಿನ ಹೆಣ್ಣು ಹುಟ್ಟಿದ ಹದಿಮೂರನೇ ದಿನ ಹೀಗೆ ಈ ನಾಮಕರಣದ ಸಂದರ್ಭದಲ್ಲಿ ಹಾಡುತ್ತಾರೆ.

ತೂಗಿರಿ ರಂಗನ ತೂಗರಿ ಕೃಷ್ಣನ

ತೂಗಿರಿ ಅಚ್ಯುತನಂತನ

ನಾಗಲೋಕದೊಳಗ ನಾರಾಯಣ ಮಲಗ್ಯಾರ

ನಾಗಗನ್ಯಕ್ಯಾರು ತೂಗಿರೆ | ನಾಗಗನ್ಯಕಾರು ನಲರಾವ

ಪಾಡಿರಿ ಸ್ವಾಮಿಯ ತೊಟ್ಟಿಲ ತೂಗಿರೆ

ಇಂದ್ರ ಲೊಕದೊಳಗ ಮಂದಾರ ಮಲಗ್ಯಾರ

ಬಂದೊಮ್ಮೆ ತೊಟ್ಟಿಲ ತೂಗಿರೆ | ಬಂದೊಮ್ಮೆ ತೊಟ್ಟಿಲು

ಚಂದದಿಂದಲಿ ನೀವು ಚಂದಿರನ ತೊಟ್ಟಿಲು

ತೂಗಿರಿ

ಶಾಶಲ ಮಡಿಮ್ಯಾಲ ಸೂಸಿಲ ಹೊಯ್ದಂಗ

ಲೇಸಗಾರನ್ನು ಸರ್ವೆದ್ದು

ಬರುವಾಗ ಗಿರಿಜನ ತೊಟ್ಟಿಲ ತೂಗಿರೆ

ಹುಲಿಯ ಉಗುರದ ಮೇಲೆ ಕೊರಳ ಪಾದರದಲ್ಲಿ

ತಿರುಳ ತೊಟ್ಟಿಲು ತೂಗಿರೆ | ತಿರುಳನ ತೊಟ್ಟಿಲ

ಪುರಂದರ ವಿಠ್ಠಲನ | ಸ್ವಾಮಿಯ ತೊಟ್ಟಿಲ ತೂಗರೆ

ತಾಯಂದಿರು ಮಕ್ಕಳನ್ನು ಆಡಿಸುವ ಸಂದರ್ಭದಲ್ಲಿ ಹಾಡುವ ಅಕ್ಕರೆಯ ಹಾಡುಗಳು

ಆಡಿ ಬಾ ನನ ಕಂದ ಅಂಗಾಲ ತೊಳದೆನ

ತೆಂಗಿನ ಕಾಯಿ ತಿಳಿನೀರ ತಕ್ಕೊಂಡು | ನಿನ
ಬಂಗಾರ ಮೊರೆ ತೊಳೆದೇನು

ಹಾಲ ಕುಡದ ಬೆಕ್ಕ ಬೂದ್ಯಾಗ ಮಲಗ್ಯೆತಿ
ಬೆಳ್ಳಂತ ಕಣ್ಣ ತಗದ್ಯೆತಿ
ಬೆಳ್ಳಂತ ಕಣ್ಣ ತಗದ್ಯೆತಿ ನನ್ನ ಮಗನ
ಆಡುವ ಬಾ ಎಂದು ಕರದ್ಯೆತಿ

ನನ್ನ ಮಗ ಎಂದರ ಸೂರ್ಯ ಚಂದರ
ಅಂದದೊಳಗ ಅಂದ ಚೆಂದ |

ಹೀಗೆ ಹಲವಾರು ರೀತಿಯಲ್ಲಿ ಹಾಡುತ್ತಾ ಹೇಳುತ್ತಾಳೆ.

ಮುರುಕು ತೊಟ್ಟಿಲಗೊಂದು ಹರಕು ಚಾಪೆಯ ಹಾಸಿ
ಅರಚು ಪಾಪನ ಮಲಗಿಸಿ | ಅವರಕ್ಕ ಕಲಕೇತ
ಹಾಡಿ ಹಿಗ್ಗ್ಯಾಳ

ಕೌಟುಂಬಿಕ ಜೀವನದಲ್ಲಿ ನಿತ್ಯ ಹಲವಾರು ಸಮಸ್ಯೆಗಳು ಬರುವುದು ಸ್ವಾಭಾವಿಕ. ಅದನ್ನು ಗರತಿ ಸಹಿಸಿಕೊಂಡು ಬದುಕುವುದು ಅವಳ ತಾಳ್ಮೆಯ ಗುಣದ ಪ್ರತೀಕ. ಹೀಗೆ ಮಕ್ಕಳಾಗಲಿಲ್ಲವೆಂದೋ, ಹಿರಿಯ ಹೆಂಡತಿ ಚೆಲುವೆಯಲ್ಲವೆಂದೇ ಆತ ಇನ್ನೊಬ್ಬಳನ್ನು ಮದುವೆಯಾಗಲು ಹೊರಟಾಗ ಆಕೆ ಅವನಲ್ಲಿ ಹೇಳುವಂತಹ ಮಾತು ಹೊಟ್ಟೆಯೊಳಗಿನ ಹರಳು ಕರಗಿಸುವಂತದು. ಅವಳ ಹೃದಯದ ಮಾತು ಅವನ ಹೃದಯಕ್ಕೆ ಅರ್ಥವಾಗಬೇಕು.

ರಾಯ ಬರತಾರಂತ ರಾತ್ರೀಲಿ ನೀರಿಟ್ಟ
ರನ್ನ ಬಟ್ಟಲಕ ಮಣಿಹಾಕಿ | ಕೇಳೇನ
ಸಣ್ಣವಳ ಮ್ಯಾಗ ಸವತ್ಯಾಕ

ಅಂಗೀಯ ಮ್ಯಾಲಂಗಿ ಛಂದೇನೋ ನನರಾಯ
ರಂಬಿಮ್ಯಾಲ ರಂಬಿ ಪ್ರತಿರಂಬಿ | ಬಂದರ
ಛಂದೇನೊ ರಾಯಾ ಮನಿಯಾಗ

ನಾನಿನ್ನು ಚಿಕ್ಕವಳು ಮಕ್ಕಳಾಗಲಿಲ್ಲವೇ? ಕಾಲ ಮೀರಿಲ್ಲ ಬೇರೊಬ್ಬ ಸ್ತ್ರೀಯ ತರುವ ಅವಶ್ಯಕತೆ ಏನಿದೆ? ಎಂದು ಕೇಳುತ್ತ ಇನ್ನೊಬ್ಬಳನ್ನು ಬಯಸಿದರೂ ಸಹನೆಯಿಂದಿರುವುದು ಕಂಡುಬರುತ್ತದೆ.

ಇನ್ನೊಂದು ಪದ್ಯದಲ್ಲಿ ಗಂಡನನ್ನ ಹೊಗಳುವ ಗರತಿಯ ಮಾತುಗಳನ್ನು ಕಂಡಾಗ ಗಂಡನಿಗೆ ಕೊಟ್ಟ ಸ್ಥಾನಮಾನದ ಅರಿವು ಉಂಟಾಗುತ್ತದೆ.

ಎಲ್ಲೆಲ್ಲಿ ನೋಡಿದರ ನಲ್ಲನಂತವರಿಲ್ಲ
ಹಲ್ಲು ನೋಡಿದರ ಹವಳದ ನಲ್ಲನ

ಸೊಲ್ಲು ಕೇಳಿದರ ಸಮಾದಾನ
ಸರದಾರ ನಿಮ್ಮಿಂದ ಸರುವೆಲ್ಲ ಮರೆತೆನ
ಸರದಾಗ ಇರುವ ಗುಳಿದಾಳ ನಿಮ್ಮಿಂದ
ಸರುವ ಬಳಗೆಲ್ಲ ಮರೆತೇನ

ಎಂದು ನುಡಿಯುವ ಪ್ರೀತಿಗೆ ಆಸರೆಯಾಗಿದ್ದು ಸಹಜ. ತನ್ನ ಬಂದು ಬಳಗವನ್ನೆಲ್ಲ ಮರೆತು ನೆಮ್ಮದಿಯ ಬಾಳ್ವೆ ನಡೆಸುತ್ತಾಳೆ. ಆಕೆ ಪ್ರೇಮದ ಖಣಿ. ಕೂಲಿ ಮಾಡಿದರೂ ಕುಂಬಳಿ ಮಾಡಿದರೂ ಗರತಿಗೆ ಆಕೆಯ ಪತಿಯು ಸರದಾರನೇ, ಅರಸನೇ, ಮಾರಾಯರೇ. ಆತನು ಹಾಕಿದ ಕೊರಳಿನ ಸರದಲ್ಲಿ ಇರುವ ಬಳಗವನ್ನು ಮರೆಯುವಳು. ಅರಸರ ದಯದಿಂದ ದೊರಕದಂತಹ ಅರಿಶಿಣ, ಕುಂಕುಮ ಇವೇ ಆಕೆಯ ಸಕಲ ಐಶ್ವರ್ಯ ಎಲ್ಲಕ್ಕೂ ಹಾಡುಕಟ್ಟಿ ಗಂಡನ ಸ್ಥಾನಕ್ಕೆ ಬೆಲೆ ತಂದಿದ್ದಾರೆ.

ಇನ್ನೊಂದು ಪದ್ಯದಲ್ಲಿ ತವರುಮನೆ ಹಾಗೂ ಸಹೋದರರು, ತವರುಮನೆಯ ಆಶ್ರಯ ಇವನ್ನು ಕುರಿತು ಹಾಡಿ ಹೊಗಳುವ ರೀತಿ ಈ ಕೆಳಗಿನಂತಿದೆ.

ಹೆಣ್ಣೀನ ಜನುಮಾಕ ಅಣ್ಣತಮ್ಮರು ಬೇಕು
ಬೆನ್ನ ಕಟ್ಟುವರು ಸಭೆಯೊಳಗ| ಸಾವಿರ
ಹೊನ್ನ ಕಟ್ಟುವರು ಉಡಿಯೊಳಗೆ

ಈ ಹಾಡು ಹೆಣ್ಣಿಗೆ ಬೇಕಾದಂತಹ ಸಹಕಾರ, ಸಂಪತ್ತು ಎಲ್ಲವನ್ನು ಸಹೋದರರು ಇಂದಿಗೂ ಎಂದೆಂದಿಗೂ ನೀಡುವುದು ಸಹಜವಾದುದಾಗಿದೆ. ಅವಳಿಗೆ ಬೇರೆಯವರಿಂದ ಅನ್ಯಾಯವಾದಾಗ ಸಹೋದರರು ಬೆನ್ನೆಲುಬಾಗಿ ನಿಂತು ಹೋರಾಡುತ್ತಾರೆ. ಏಕೆಂದರೆ ಅದು ಕರುಳ ಬಳ್ಳಿಯ ಸಂಬಂಧ. ಅವಳ ಏಳಿಗೆಗೆ ತಮ್ಮ ಸಂಪತ್ತನ್ನು ಧಾರೆ ಎರೆಯುತ್ತಾರೆ. ಆದರೆ ವಿಧಿ ವಿಲಾಸ ಅರಿಯುವವರಾರು? ಅದೆಷ್ಟೋ ಹೆಣ್ಣು ಮಕ್ಕಳಿಗೆ ತವರಿಂದ ಸುಖವಿಲ್ಲ, ಕೆಲವು ಕಾಲ ಅನಿವಾರ್ಯದ ಸಂದಿಗ್ಧ ಪರಿಸ್ಥಿತಿಯಲ್ಲಿ ತವರಿನಲ್ಲಿ ಉಳಿದುಬಿಟ್ಟರೆ "ಗಂಜಿ ಕುಡಿದಾದರೂ ಗಂಡನ ಮನೆ ಲೇಸು" ಎಂಬ ಸ್ಥಿತಿ ಒದಗುತ್ತದೆ. ಇವು ಒಂದಲ್ಲ ಒಂದು ಹೆಣ್ಣಿಗೆ ಅವರ ಬದುಕಿನಲ್ಲಿ ನಡೆದಿರುವಂತವುಗಳೇ. ಹೆಣ್ಣಿಗೆ ಗಂಡನೇ ಸರ್ವಸ್ವ. ಅವನೆ ಅವಳ ಬಾಳಿನ ಆಧಾರ. "ಕೊಟ್ಟ ಹೆಣ್ಣು ಕುಲದಿಂದ ಹೊರಗೆ" ಎಂಬ ಸಮಾಜದ ನೀತಿಗನುಗುಣವಾಗಿ ಅವನನ್ನೇ ಆಶ್ರಯಿಸಬೇಕು.

೮.೨. ಕಥೆಗಳು

ಜಾನಪದ ಕಥೆಗಳು ಮೂಲತಃ ವೈಯಕ್ತಿಕ ಹಾಗೂ ಸಾಮಾಜಿಕ ಅವಶ್ಯಕತೆಯ ಫಲಗಳು. ಮುಖ್ಯವಾಗಿ ಪುರಾತನ ಸಂಸ್ಕೃತಿ ಹಾಗೂ ಪರಂಪರೆಯ ಮೇಲೆ ಹೆಚ್ಚು ಬೆಳಕು ಚೆಲ್ಲುತ್ತವೆ. ಹೊಸ ಸಂಸ್ಕೃತಿಯ ನಿರ್ಮಾಣಕ್ಕೆ ಯುಕ್ತ ಹಿನ್ನೆಲೆಯನ್ನು ಒದಗಿಸುತ್ತವೆ. ಕಥೆಗಳನ್ನು ಹೇಳುವ ಮತ್ತು ಕೇಳುವ ಮಾನವ ಪ್ರವೃತ್ತಿಯು ಮಾನವ ಸಮಾಜದಷ್ಟೇ ಪುರಾತನವಾದದ್ದು. ನಿತ್ಯದುಡಿಮೆಯ ಶ್ರಮವನ್ನು ಮರೆಯಲು,

ಬಿಡುವಿನ ವೇಳೆಯನ್ನು ನಿರಾಳವಾಗಿ ಕಳೆಯಲು ಏಕತಾನದ ಬದುಕಿಗೆ ರಂಜನೆಯನ್ನು ದೊರಕಿಸಿಕೊಳ್ಳಲು ಕಥೆಗಳು ಬೆಳೆದು ಬಂದವು. ಕಥೆಯನ್ನು ಹೇಳುವ ಕಥೆಗಾರನು ಕೇಳುಗರ ಕುತೂಹಲವನ್ನು ಕೆರಳಿಸಿಕೊಂಡು ಹೇಳುತ್ತಾ ಹೋಗಬೇಕಾಗುತ್ತದೆ. ಇಂತಹ ಕಥೆಗಳನ್ನು ಹೇಳುವವರು ಇಂಥವರೆ ಎಂದು, ಕೇಳುವವರು ಇಂಥವರೇ ಎಂದು ಹೇಳಲಿಕ್ಕೆ ಬಾರದು, ಕಥೆಗಳನ್ನು ಏಕಕಾಲಕ್ಕೆ ಮಹಿಳೆಯರು, ಪುರುಷರು ಹೇಳಬಹುದು, ಕೇಳಬಹುದು.

ಕಥೆಗಳು ಎಲ್ಲಾ ಕಾಲಗಳಲ್ಲಿಯೂ ಜನರ ಬಾಯಿಂದ ಬಾಯಿಗೆ ಉಳಿದುಕೊಂಡು ಬಂದಿವೆ. ಇಂತಹ ಕಥೆಗಳನ್ನು ಕೇಳಿಯಾದ ಮೇಲೆ ಅದನ್ನು ಹೇಳುವ ಸಮಯ ಬಂದಾಗ ಅದನ್ನು ಹೇಗೆ ನೆನಪಿಟ್ಟುಕೊಳ್ಳಲಾಗಿರುತ್ತದೆಯೇ ಹಾಗೆಯೇ ಪುನರುಚ್ಚರಿಸಬಹುದು. ಇಲ್ಲವೇ ಕಥೆಯನ್ನು ಹೇಳುವವ ಚಾಣಾಕ್ಷನಾಗಿದ್ದರೆ ಕಥೆಯ ಪಾತ್ರಗಳನ್ನು ಸಾಮಾಜಿಕರಿಗೆ ಹೋಲಿಸಿ ಹೇಳುವುದುಂಟು. ಆದರೆ ಇಲ್ಲಿ ಕಥೆಗಾರನ ನೆನಪಿನ ಶಕ್ತಿ, ಕಲ್ಪನಾ ಸಾಮರ್ಥ್ಯ ಅನುಭವಗಳಿಗನುಗುಣವಾಗಿ ಬೆಳೆಯುತ್ತಾ ಸಾಗುತ್ತದೆ. ಇಲ್ಲಿ ಮೂಲ ಕಥೆಯಲ್ಲಿನ ಕೆಲ ಅಂಶ ಬಿಟ್ಟು ಹೋಗಲುಬಹುದು, ಕೆಲವು ಅಂಶಸೇರಿಕೊಳ್ಳಲುಬಹುದು. ಒಟ್ಟಿನಲ್ಲಿ ಕಥೆಯ ಗರ್ಭದೊಳಗೆ ಕಾಲಕಾಲದ ನಂಬಿಕೆಗಳು, ಧಾರ್ಮಿಕ ಸಾಮಾಜಿಕ ಮೌಲ್ಯಗಳು, ಪರಂಪರೆಯಲ್ಲಿನ ವಿವಿಧ ಪದ್ಧತಿಗಳು, ತುಂಬಿಕೊಂಡಿರುತ್ತವೆ. ಇಂತಹ ಕಥೆಗಳಲ್ಲಿ ನೀತಿ ಬೋಧನೆ ಹಾಗು ಮನೋರಂಜನೆಗಳು ಕಂಡು ಬಂದರೂ ಅವುಗಳ ಆಳದಲ್ಲಿ ಅನ್ಯಾಯದ ವಿರುದ್ಧದ ಪ್ರತಿಭಟನೆಯ ಎಳೆಗಳನ್ನು ಕಾಣಬಹುದು. ಅಲ್ಲದೆ ಮೌಢ್ಯವನ್ನು ಸದಾ ರಕ್ಷಿಸುವ ಕುರುಡು ನಿಷ್ಠೆಯು ಇವುಗಳಲ್ಲಿರುತ್ತದೆ. ಜನಪದ ಕಥೆಗಳಲ್ಲಿ ಕಂಡುಬರುವ ಮತ್ತೊಂದು ಸರ್ವಸಾಮಾನ್ಯವಾದ ಲಕ್ಷಣವೆಂದರೆ ಅವುಗಳ ಸಮರೂಪತೆ.

ಕಥೆಗಳು ಇದ್ದಕ್ಕಿದ್ದಂತೆ ಯಾವುದೇ ಒಂದು ಕ್ರಿಯೆಯಿಂದ ಪ್ರಾರಂಭವಾಗುವುದಿಲ್ಲ. ಹಾಗೆಯೇ ದಿಢೀರನೆ ಮುಕ್ತಾಯವಾಗುವುದಿಲ್ಲ. ದಿನಗಟ್ಟಲೇ ವಾರಗಟ್ಟಲೇ ತಿಂಗಳುಗಟ್ಟಲೇ ಕತೆಯನ್ನು ಹೇಳುವುದುಂಟು. ವಿಸ್ತಾರವಾದ ಕಥೆಗಳು ನಮ್ಮ ಜನಪದರಲ್ಲಿದೆ. ಈ ಹಿನ್ನೆಲೆಯಲ್ಲಿ ವೈಜ್ಞಾನಿಕವಾಗಿ ಮುದುವರಿದು ಹಲವಾರು ಮಾಧ್ಯಮಗಳ ಭರಾಟೆಗೆ ಒಳಗಾಗಿರುವ ಈ ಸಂದರ್ಭದಲ್ಲಿ ಕಥೆಯನ್ನು ಹೇಳುವವರು ಮತ್ತು ಕೇಳುವವರು ಅಥಣಿ ಪರಿಸರದ ವಾಲ್ಮೀಕಿ ಸಮುದಾಯದಲ್ಲಿ ಕಂಡುಬರುತ್ತಾರೆ. ಇವರು ತಮ್ಮ ಕಥೆಗಳಲ್ಲಿ ಹೆಚ್ಚಾಗಿ ಧಾರ್ಮಿಕ ಕಥೆಗಳು, ನೈತಿಕ ಕಥೆಗಳು ಬುದ್ಧಿವಂತಿಕೆಯ ಕಥೆಗಳು, ಪುರಾಣ ಮೂಲದ ಕಥೆಗಳನ್ನು ಮತ್ತು ಆರಾಧ್ಯ ದೈವದ ಪವಾಡದ ಕಥೆಗಳನ್ನು, ಹೇಳುತ್ತಾ ಬರುತ್ತಾರೆ. ಇವರ ಕಥೆಗಳಲ್ಲಿ ಮನುಷ್ಯರ ಜೊತೆಗೆ ದೇವತೆ, ರಾಕ್ಷಸ, ದೆವ್ವ, ಬೇತಾಳ, ಪ್ರಾಣಿ, ಪಕ್ಷಿಗಳು, ಪಾತ್ರಗಳಾಗಿ ಕಂಡುಬರುತ್ತಾರೆ. ಮಾಟ-ಮಂತ್ರ, ಮಾಯೆ, ಕುತಂತ್ರ ಇವುಗಳು ತಾನೇ ತಾನಾಗಿ ಹರಿದು ಬರುತ್ತವೆ. ಹೀಗೆ ಈ ಪರಿಸರದ ಜನರು ತಮ್ಮ ಇಡೀ ಬದುಕಿನ ದಣಿವನ್ನು ರಾತ್ರಿ ತಮ್ಮ ಮನೆಯ ಮುಂದಿನ ಅಂಗಳದಲ್ಲಿ ಚಾಪೆ ಹಾಸಿಕೊಂಡು ಕಥಾ ಹಂದರವನ್ನು ಬಿಚ್ಚುತ್ತಾ ಹೋಗುತ್ತಾರೆ. ಹೀಗೆ ಕಥೆಗಳು ಒಳಗೊಳ್ಳುವ ವಿಷಯಗಳಲ್ಲಿ ಇವು ಪರಂಪರೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬರುವಲ್ಲಿ

ಪ್ರಮುಖ ಪಾತ್ರ ವಹಿಸುತ್ತವೆ. ಲೌಕಿಕ-ಅಲೌಕಿಕ, ಮಾನುಷ-ಅತಿಮಾನುಷ ಅಷ್ಟೇ ಅಲ್ಲ ಕಾಲ್ಪನಿಕ ಜಗತ್ತಿನ ವಿಸ್ಮಯಕಾರಿ ಅಂಶಗಳು ಪ್ರಾಣಿ ಪ್ರಪಂಚದ ಅದ್ಭುತ ಸಂಗತಿಗಳು ಅಲ್ಲಿ ಹುಟ್ಟಿಕೊಳ್ಳುತ್ತವೆ. ಈ ಸಮುದಾಯದವರು ಹೇಳುವ ಕಥೆಯನ್ನು ಕೇಳುತ್ತಾ ಹೋದರೆ ಒಂದು ಸಮುದಾಯವನ್ನು ಅರ್ಥಮಾಡಿಕೊಳ್ಳುವಲ್ಲಿ ಸಹಾಯಕವಾಗುತ್ತವೆ. ಅಲ್ಲದೆ ಶಿಷ್ಟ ಸಾಹಿತ್ಯದ ಮೂಲಕ ಮೆಲ್ಲನೆ ಜನರ ಬಾಯಿಗೆ ಬಂದಂತಹ ಕಥೆಗಳು ಇಂದು ಜನಪದ ಕಥೆಗಳಾಗಿಯೇ ಬೆಳೆದುಕೊಂಡು ಬರುತ್ತವೆ. ಪಂಚತಂತ್ರದಂತಹ ಕಥೆಗಳು ಬಹಳ ಕಡೆಗೆ ಚಾಲ್ತಿಯಲ್ಲಿವೆ.

ಜನರು ಇಂತಹ ಕಥೆಗಳನ್ನು ಹೊಲಗದ್ದೆಗಳಲ್ಲಿ ಕೆಲಸಮಾಡಿಕೊಂಡು, ಶ್ರಮ ನಿವಾರಣೆಗೆ ಗುಂಪಾಗಿ ಕುಳಿತು ಕೆಲಸ ಮಾಡುವಾಗ ಯಾರದರೊಬ್ಬರು ಕಥೆಯನ್ನು ಸುರುಮಾಡುತ್ತಾರೆ.

೮.೩. ಗಾದೆಗಳು

ಗಾದೆಯು Englishನ Proverbಗೆ ಸಂವಾದಿಯಾಗಿ ಬಂದಿದೆ. ಇದು ಜಾನಪದದ ಬಹುಮುಖ್ಯ ಪ್ರಕಾರಗಳಲ್ಲಿ ಒಂದಾಗಿದೆ. ನಿತ್ಯ ಭಾಷೆಯಂತೆಯೇ ಸಹಜವಾಗಿ, ಅನಿವಾರ್ಯವಾಗಿ ಜನ ಜೀವನದೊಡನೆ ಗಾದೆಗಳು ಬೆಳೆದುಕೊಂಡು ಬಂದಿವೆ. ನಿತ್ಯ ಜೀವನದಲ್ಲಿ ಎಲ್ಲಾ ಸಂದರ್ಭಗಳಲ್ಲಿಯೂ ಅವಶ್ಯಕತೆಗೆ ಅನುಗುಣವಾಗಿ ಜನರ ಅನುಭವದ ಸಂಪತ್ತನ್ನು ನೆನಪಿಡಲು ಸುಲಭವಾಗುವಂತೆ ಪ್ರಾಸಬದ್ಧವಾದ ಚಿಕ್ಕ ಚಿಕ್ಕ ವಾಕ್ಯಗಳಾಗಿ ಕಂಡು ಬಂದರೂ ಅವುಗಳಲ್ಲಿ ಅಗಾಧವಾದ ಶಕ್ತಿಯನ್ನು, ವಿವರವನ್ನು ವಿಶಾಲತೆಯನ್ನು ಹೊಂದಿವೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎನ್ನುವ ಮಾತು ವಿಶ್ವಾಸನೀಯ. ಹಾಗೆ ವೇದಗಳ ಕಾಲದಿಂದಲೂ ಇಂದಿನ ತನಕವು ಅವು ಎಲ್ಲಾ ಕಾಲಗಳಲ್ಲಿ ಬಳಕೆಯಲ್ಲಿದ್ದರೂ ಅವು ಯಾವಾಗ ಹುಟ್ಟಿಕೊಂಡವು ಎಂದು ಹೇಳಲಿಕ್ಕಾಗದು. ಇವುಗಳು ಪುರಾಣ, ಚರಿತ್ರೆ, ಸ್ಥಳಗತೆ, ಅನುದಿನದ ಘಟನೆಗಳು, ಕಷ್ಟ, ಸುಖ, ಸಂತೋಷದ ಸಂದರ್ಭದಲ್ಲಿಯೂ, ಹುಟ್ಟಿಕೊಳ್ಳಬಹುದು. ಒಂದು ಸಮುದಾಯದ ಮನಸ್ಸನ್ನು ಗಾದೆಗಳಿಂದ ಅರ್ಥಮಾಡಿಕೊಳ್ಳಬಹುದು. ಗಾದೆಗಳು ಸಮಾಜದಲ್ಲಿ ಹಲವಾರು ಬಗೆಯ ಕಾರ್ಯಗಳನ್ನು ನಿರ್ವಹಿಸುತ್ತವೆ. ಒಂದು ಪ್ರದೇಶದ ನಿಜವಾದ ಬಣ್ಣ, ಬದುಕು, ಅಲ್ಲಿನ ಗಾದೆಗಳ ಮೂಲಕ ಬಯಲಾಗುತ್ತದೆ. ಜನತೆಯ ಕಳೆದ ದಿನಗಳ ರೋಷ, ಕೆಚ್ಚು, ಮೌಢ್ಯ, ಮಾನಸಿಕ ವಿಕಾರ, ನಗೆ, ನೋವು, ನ್ಯಾಯ, ಅನ್ಯಾಯ ಮೊದಲಾದ ಎಲ್ಲಾ ಸಂಗತಿಗಳ ಮಡುವಾಗಿವೆ ಈ ಗಾದೆಗಳು. ಇವನ್ನೆಲ್ಲ ವಿಂಗಡಿಸಿ ನಿತ್ಯದ ಬದುಕಿಗೆ ಅಳವಡಿಸಿಕೊಳ್ಳಬೇಕು ಎನ್ನುವ ಸೂಕ್ಷ್ಮ ತಿಳುವಳಿಕೆಯನ್ನು ಈ ಗಾದೆಗಳು ಕೊಡುತ್ತವೆ. ಗಾದೆಗಳಲ್ಲಿ ಉಪಮೆ, ವಿರೋಧಬಾಸ, ಅತ್ಯುಕ್ತಿ ಮೊದಲಾದ ಅಲಂಕಾರಗಳು, ಪ್ರಾಸ, ಅನುಪ್ರಾಸ, ಪುನರಾವರ್ತನೆ, ಸಾಮತೂಕ ಮುಂತಾದ ವಿಶಿಷ್ಟ ಗುಣಗಳು ಅಡಕವಾಗಿರುತ್ತವೆ.

೧. ಎಳಲಾರದ ಎತ್ತು
ಮೇಳಿ ಮೇಲೆ ಬಿತ್ತು

೨. ಅತ್ತೆ ಮನೇಲಿ ಹೆಂಗಿದ್ದೆ ಮಗಳ ಅಂದ್ರ

ಮಲ್ಯಾಗ ಹಾದಿ ನಡದ್ಹಂಗ

ಮಳಕೈಗೆ ಚಿಲಕ ಬಡದಂಗ

೩. ಎಲ್ಲರ ಮನೆಯ ದೋಸೆಯು ತೂತು

೪. ಆಳ ನೋಡಿ ಅನ್ನ ಹಾಕು

ಪಾತ್ರ ನೋಡಿ ಬಿಕ್ಷಾ ಹಾಕು

೫. ಬಾಯಿ ಉಳ್ಳವ ಬರಗಾಲ್ದಲ್ಲೂ ಗೆದ್ದ

೬. ಗಂಜಿ ಕುಡಿದರೂ ಗಂಡನ ಮನೆ ಲೇಸು

೭. ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ

೮. ಆಷಾಢದಾಗ ಹೊಲ್ಯಾ ಸಿತನಿ ಬೇಡದಾ

೯. ಗೌಡನ ಲೆಕ್ಕದಾಗಿಲ್ಲ, ಶ್ಯಾನು ಭೋಗನಬುಕ್ಕಿನಾಗಿಲ್ಲ

೧೦. ಆಕಳ ಹೊಟ್ಟೇಲಿ ಅಚ್ಚೇರ ಬಂಗಾರ

೧೧. ಒಕ್ಕಲಿಗ ಒಕ್ಕದಿದ್ದರೆ ಜಗವೆಲ್ಲ ಬಿಕ್ಕುವದು.

೧೨. ನಡೆನುಡಿ, ಇದೆ ಜನ್ಮ ಕಡೆ.

ಪ್ರಯೊಂದು ವರ್ಗದ ಗುಣಸ್ವಭಾವ, ನೈತಿಕತೆ, ಸತ್ಯಸಾಧಕ ನೈಜ ಬದುಕಿನ ಹಲವು ಮುಖಗಳನ್ನು ಅರಿವಿಗೆ ತಂದುಕೊಡುತ್ತದೆ. ಈ ಗಾದೆ. ಜೊತೆಗೆ ಪ್ರಾಸಬದ್ಧವಾದ ಈ ಗಾದೆಗಳು ಕೇಳುಗರಿಗೆ ಆಳವಾದ ಪ್ರಭಾವದ ಜೊತೆಗೆ ಅರ್ಥಗರ್ಭಿತ ಭಾವ ಹೊಂದಿರುತ್ತದೆ. ಹೀಗಾಗಿ ಗಾದೆಯ ಮುಖ್ಯ ಲಕ್ಷಣ ಲೋಕಪ್ರಿಯತೆ. ಏಕೆಂದರೆ ಸಮಸ್ತ ಜನರ ಮುದ್ರೆ ಅದರ ಮೇಲೆ ಬಿದ್ದು ಚಲಾವಣೆಯ ಮೂಲಕ ತನ್ನ ಮೌಲ್ಯ ಕಾಪಾಡಿಕೊಳ್ಳುತ್ತದೆ.

೮.೪. ಒಗಟು

ಸವಾಲು ಹಾಕು ಜಾಣ್ಮೆಯಿಂದ ಪ್ರಶ್ನಿಸು ಎಂಬರ್ಥದಲ್ಲಿಯೇ ಒಗಟು ಜನಪದ ಸಾಹಿತ್ಯದಲ್ಲಿ ಜನಪ್ರಿಯವಾಗಿರುವುದು. ಒಗಟುಗಳು ವಿಶೇಷವಾದವುಗಳು. ವಸ್ತುನಿಷ್ಠವೂ, ಪ್ರಾಬಲ್ಯವೂ ಮತ್ತು ಅರ್ಥಪೂರ್ಣವೂ ಆದ ಪದಬಂಧಗಳನ್ನು ಜನಪದ ಸಾಹಿತ್ಯದಲ್ಲಿ ಒಗಟುಗಳೆಂದು ಕರೆಯಲಾಗಿದೆ. ಗ್ರಾಮೀಣ ಪರಿಸರದ ವಿವಿಧ ವಸ್ತುಗಳ ಲಕ್ಷಣಗಳನ್ನು ಒಗಟುಗಳು ಸಾರುತ್ತವೆ. ಸಾಮಾನ್ಯವಾಗಿ ಮದುವೆ ಸಮಾರಂಭಗಳಲ್ಲಿ, ಮಗುವಿಗೆ ಹೆಸರಿಡುವಾಗ, ಹೆಣ್ಣಿಗೆ ಹೂಮುಡಿಸುವಾಗ, ಸಂತೋಷ ಸಡಗರದ ಸಮಾರಂಭಗಳಲ್ಲಿ ಗಂಡು-ಹೆಣ್ಣುಗಳು ಪರಸ್ಪರ ಜಾಣತನದ ಒಗಟುಗಳನ್ನು ಹಾಕುವುದುಂಟು. ಮದುವೆಯಾದ ಸುಮಂಗಲೆ ತನ್ನ ಗಂಡನ ಹೆಸರು ಹೇಳುವಾಗ ಕೊಂಕಿನಿಂದ ಕೊರಳು ಹೊರಳಿಸಿದರೂ, ಬಿಂಕದಿಂದ ಬೀಗಿದರೂ, ಅಂತರಂಗದ ಅವಳ ಸೊಗಸೇ ಬೇರೆಯಾಗಿರುತ್ತದೆ. ಗಂಡನ ಹೆಸರು ನೇರವಾಗಿ

ಹೇಳುವಂತಿಲ್ಲ, ಅಲಂಕಾರಿಕ ಭಾಷೆಯಲ್ಲಿ, ಶೃಂಗಾರ ಶೈಲಿಯಲ್ಲಿ ಒಗಟನ್ನು, ಒಡಪನ್ನು ಜೋಡಿಸಿಕೊಂಡು ಗಂಡನ ಮೇಲಿನ ತನ್ನ ಪ್ರೀತಿಯನ್ನು, ಆದರ, ಗೌರವವನ್ನು ಪರೋಕ್ಷವಾಗಿ ವ್ಯಕ್ತಗೊಳಿಸುವುದು ಪರಂಪರಾಗತವಾಗಿ ನಡೆದುಕೊಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಈ ಭಾಗದಲ್ಲಿ ರೂಢಿಯಲ್ಲಿರುವ ಒಗಟುಗಳು, ಒಡಪುಗಳು ಈ ರೀತಿಯಾಗಿವೆ.

೧. ನೆಟ್ಟನ್ನ ಗಿಡಕ ನೆರಳಿಲ್ಲ

ದಾರಿ

೨. ಕರಿ ಹೊಲ್ದಾಗ ಕಡತಾರ ಬಿದ್ದೈತೆ

ಬೈತಲೆ

೩. ಗಿಡ್ಡ ಗಿಡಕ್ಕೆ ಗಿಣಿ ಮುಕರ‍್ಯಾವ

ಕಡ್ಲೆಗಿಡ

೪. ಗುಡಿಯ ಹಿಂದೆ ಗುಂಡಕಲ್ಲು ಬಿದ್ದೈತಿ

ಹೆಣ್ಣು ಮಕ್ಕಳ ತುರುಬ

೫. ದಾಮ್ಮಾನ ಡುಮ್ಮ್ಯಾರ ಇವರಿಬ್ಬರೂ ಚೆಂದಾನ ಚೆಲವ್ಯಾರ ಇವರಿಬ್ಬರಾ ಹುಳಕಾನ ಟೊಕರ‍್ಯಾರ ಇವರಿಬ್ಬರಾ?

ಕಡಬು, ಹೋಳಿಗೆ, ದೋಸೆ.

೬. ಕೆಗ್ಗರ ಬಗ್ಗರ ಮೈಯಾಕಿ, ಕೆಸರಾಗ ಕಾಲ ಕಿಸಗೊಂಡ ಕುಂತಾಳ

ಕಪ್ಪೆ

೭. ಹಗ್ಗ ಹಾಸ್ಯೆತಿ, ಗೂಳಿ ಮಲಗ್ಯೆತಿ

ಕುಂಬಳ ಬಳ್ಳಿ, ಹಾಗೂ ಕಾಯಿ

೮. ಒಂಟಿಕಾಲ ಬೆಳ್ಳಕ್ಕಿ, ಸಾವಿರಾರು ರೆಕ್ಕಿ

ತೆಂಗಿನ ಮರ

೯. ಕರಿ ಕಂಬ್ಳಿ ನೆಂಟ, ಸರ್‍ಹೊತ್ತಿನಲ್ಲಿ ಹೊಂಟ

ಹೆಗ್ಗಣ

೧೦. ಹಸಿರು ಗಿಡದಲ್ಲಿ ಮೊಸರು ಚೆಲ್ಲಿದಂತೆ

ಮಲ್ಲಿಗೆ ಹೂವು

೧೧. ಕರಿ ಸೀರಿ ಉಟ್ಟಾಳ ಕಾಲುಂಗರ ತೊಟ್ಟಾಳ, ಮೇಲೆ ಹೋಗ್ತಾಳ, ಕೆಳಗೆ ಬರ‍್ತಾಳ

ಒನಕೆ

೧೨. ಆರ ಕಾಲ, ನೆತ್ಯಾಗ ಬಾಲ

ತಕ್ಕಡಿ

೧೩. ಕೆರೆಗೆ ನೀರು ತರೋಕೆ ಮೂರು ಹುಡುಗೀರು ಹೋಗ್ತಾರೆ, ಒಬ್ಬಳು ಕರಗ್ತಾಳೆ, ಒಬ್ಬಳು ಮುಳುಗುತ್ತಾಳೆ, ಇನ್ನೊಬ್ಬಳು ತೇಲುತ್ತಾಳೆ. ಏನದು?

ಎಲೆ, ಅಡಿಕೆ, ಸುಣ್ಣ.

೧೪. ಬಾವಿಯೊಳಗೆ ಬೆಳ್ಳಿ ಬಟ್ಟಲು ತೇಲಾಡುತ್ತೆ

ಚಂದ್ರ

೧೫. ತುಂಬಿದ ಕೊಳ, ಅರ್ಧ ಕೊಳ, ಬರಿಕೊಳ!

ಎಳನೀರು, ಕಾಯಿ, ಕೊಬ್ಬರಿ

೧೬. ಬಾಲ ಇದೆ ಹನುಮಂತನಲ್ಲ, ಹಾರುತ್ತದೆ ಪಕ್ಷಿಯಲ್ಲ, ಮೇಲೆರಡು ಕೊಂಬುಂಟು, ವೃಷಭನೂ ಅಲ್ಲ. ಏನದು?

ಗಾಳಿಪಟ

೧೭. ಆರು ಗೆರೆಯುಂಟು ಹೀರೆಕಾಯಲ್ಲ, ಹುಳಿಯುಂಟು ನಿಂಬೆಹಣ್ಣಲ್ಲ, ಹಸಿರಾಗಿದೆ ಹುಣಸೆಕಾಯಿ ಕೂಡ ಅಲ್ಲ.

ನೆಲ್ಲಿಕಾಯಿ

೧೮. ಸುತ್ತಮುತ್ತ ಸುಣ್ಣದ ಗೋಡೆ, ಎತ್ತ ನೋಡಿದ್ರೂ ಬಾಗಿಲಿಲ್ಲ.

ಕೋಳಿಮೊಟ್ಟೆ

೧೯. ಮಹಡಿ ಮೇಲೆ ಮಹಡಿ ಕಟ್ಟಿ, ಮರಿಸ್ವಾಮಿ ಗುಡಿಕಟ್ಟಿ ಕೊಂಬೆ ಮೇಲೆ ಕೂತವನೆ ಕೊರಮಶೆಟ್ಟಿ

ಜೇನು

೨೦. ಚಿನ್ನದ ಕೋಟೆಯೊಳಗೆ ಬೆಳ್ಳಿಯ ಲಿಂಗ ಏನದು?

ಬಾಳೆ ಹಣ್ಣು

೨೧. ಅಜ್ಜಿಯ ಕೂದಲು ಕೋಟೆಯೊಳಗೆ ಹಸಿರಾಗಿ ಹರಡಿದೆ

ಸಬ್ಬಸಿಗೆ ಸೊಪ್ಪು

೨೨. ಯಾರಿಗೂ ಸಿಗಲಾರದ ನೇತಾಡುವ ಮನೆ. ಅದೇನು?

ಗೀಜಗನ ಗೂಡು

೨೩. ಒಂದುಗಳೆ ಒಡೆದು ಒಂಬೈನೂರು ಭಾಗ ಮಾಡಿ ಹರದನಹಳ್ಳಿ ತೇರು ಕಟ್ಟಿ ತುದಿಯನ್ನು ಸೇರಿಸಿದೆ

ಬಿದಿರು

೨೪. ಹೊತ್ತು ಗೊತ್ತಿಲ್ದೆ ಊರೆಲ್ಲ ಸುತ್ತುತ್ತೆ, ನೀರು ಕಂಡರೆ ನಿಲ್ಲುತ್ತೆ.

ಚಪ್ಪಲಿ

೨೫. ಕಪ್ಪೆ ಮುಟ್ಟದ ಕೈಲಾಸದ ನೀರು

ಎಳೆನೀರು

೨೬. ಮುಳ್ಳಿನ ಗಿಡದಲ್ಲಿ ಚಿನ್ನದ ಮೊಟ್ಟೆಯಿದೆ

ನಿಂಬೆಹಣ್ಣು

೨೭. ನೀರಲ್ಲೆ ಹುಟ್ಟಿ, ನೀರಲ್ಲೆ ಬೆಳೆದು, ಊರಲ್ಲಿ ಬಂದು, ಗಂಟಲು ಹರಿಯುವಂತೆ ಕೂಗ್ತೀನಿ

ಶಂಖ

೨೮. ಒಂದು ಗುಂಡೀಲಿ ಒಂದು ಮೀನು

ನಾಲಿಗೆ

೨೯. ಮನೆಯಲ್ಲಿದ್ರೆ ಮೊಗ್ಗ, ಹೊರಕ್ಕೆ ಬಂದರೆ ಹೂವು

ಛತ್ರಿ

೩೦. ಹಿಡಿಯೋಣವೆಂದರೆ ಸಿಗುವುದಿಲ್ಲ, ನೋಡೋಣವೆಂದರೆ ಕಾಣುವುದಿಲ್ಲ

ಗಾಳಿ

೩೧. ಕೆರೆಯೂ ಅಲ್ಲ, ಬಾವಿಯೂ ಅಲ್ಲ, ಆದರೂ ನನ್ನಲ್ಲಿ ಸಿಹಿನೀರುಂಟು

ತೆಂಗಿನಕಾಯಿ

೩೨. ಬಾನೆಲ್ಲಾ ಚೆಲ್ಲಿದೆ ತೆಗೆದು ಕೊಳ್ಳೋರು ಯಾರಿಲ್ಲ

ಬೆಳದಿಂಗಳು

೩೩. ಸುತ್ತಾಮುತ್ತಾ ಬೇಲಿ ಕಟ್ಟಿ, ಸುವಾಲಮ್ಮನ ಕಾವಲು ಇರಿಸಿ, ಹೂವು ಬಿಟ್ಟರೆ ತೋಟ ಹಾಳು

ಕಣ್ಣು

೩೪. ಚಿಕ್ಕ ಮನೆ ತುಂಬ ಚೆಕ್ಕೆ ತುಂಬಿದೆ

ಬಾಯಿ

೩೫. ಬಿಳಿ ಮನುಷ್ಯ, ಕರಿ ಕೋಟು

ಬೆಂಕಿಕಡ್ಡಿ

೩೬. ಮೂರು ಕಣ್ಣುಂಟು ಶಿವನಲ್ಲ, ಜುಟ್ಟುಂಟು ಪೂಜಾರಿಯಲ್ಲ, ನೀರುಂಟು ಬಾವಿಯಲ್ಲಿ

ತೆಂಗಿನಕಾಯಿ

೩೭. ನನಗೊಂದು ಅಜ್ಜಿ, ಮೈತುಂಬ ಕಜ್ಜಿ, ನಾನು ಯಾರಜ್ಜಿ?

ಹಾಗಲಕಾಯಿ

೩೮. ನಿನ್ನ ಹತ್ತಿರ ಇದೆ, ನಿನ್ನನ್ನೇ, ಬಡಿಯುತ್ತದೆ

ಕಣ್ಣಿನ ರೆಪ್ಪೆ

೩೯. ಒಂದು ಮರ ಹುಟ್ಟಿ ಹನ್ನೆರಡು ಕವಲು, ಕವಲು ಕವಲಿಗೂ ೧೫ ಕರಿ ಎಲೆ, ೧೫ ಬಿಳಿ ಎಲೆ

ಅಮವಾಸ್ಯೆ, ಹುಣ್ಣಿಮೆ

೪೦. ಬೆಳ್ಳಿ, ತಟ್ಟೆ ಮೇಲೆ ಕರಿಲಿಂಗ

ಕಣ್ಣು

೪೧. ಕತ್ತರಿಸಿದರೆ ಬಾಡುವುದಿಲ್ಲ, ನೆಟ್ಟರೆ ಬೆಳೆಯುವುದಿಲ್ಲ

ಉಗುರು, ಕೂದಲು

೪೨. ಮಣಿ ಮಣಿಗೆರ ಶೃಂಗಾರ, ನೋಡಲು ಮನೋಹರ, ಮುಟ್ಟಿದರೆ ಹರೋಹರ

ಚೇಳು

೪೩. ಅಕ್ಕ, ಅಕ್ಕ ಬಾವಿ ನೋಡು, ಬಾವಿಯೊಳಗೆ ನೀರು ನೋಡು, ನೀರಿನೊಳಗೆ ಬಳ್ಳಿ ನೋಡು, ಬಳ್ಳಿಗೊಂದು ಹೂ ನೋಡು

ದೀಪ

೪೪. ಕಾಲ ಮೇಲೆ ಮರ, ಮರದ ಮೇಲೆ ಬಳ್ಳಿ, ಬಳ್ಳಿ ಮೇಲೆ ಬೆರಳು

ವೀಣೆ

೪೫. ಮೂರು ಕಾಸಿನ ಕುದುರೆಗೆ ಮಾರುದ್ದ ಲಗಾಮು

ಸೂಜಿ, ದಾರ

೪೬. ಹಸಿರು ಕುಡಿಕೆಯ ತುಂಬಾ, ಕರಿ ಮೆಣಸು ತುಂಬಿದೆ

ಪಪ್ಪಾಯಿ

೪೭. ಅಪ್ಪ ಆಕಾಶಕ್ಕೆ, ಅವ್ವ ಪಾತಾಳಕ್ಕೆ, ಮಗ ವ್ಯಾಪಾರಕ್ಕೆ, ಮಗಳು ಮದುವೆಗೆ

ಅಡಕೆ ಮರ

೪೮. ಪೂರಸೀ, ಹೊರಸೀ, ಬಳಸೀ ಈ, ಮೂರು ವಸ್ತುಗಳನ್ನು ತನ್ನಿರಿ

ಕಲ್ಲು, ಸಕ್ಕರೆ, ಖರ್ಜೂರ, ಬಾದಾಮಿ

೪೯. ಎಲೆಗೊಂದ್ಕಾಯಿ, ತಲೆಗೊಂದ್ಕಾಯಿ, ಜಾಣನಿಗೊಂದ್ಕಾಯಿ, ಜಗದೀಶನಿಗೊಂದ್ಕಾಯಿ!

ಉಪ್ಪಿನಕಾಯಿ, ಸೀಗೆಕಾಯಿ, ಪಗಡೆಕಾಯಿ, ತೆಂಗಿನಕಾಯಿ

೫೦. ಶಿವನಿಗೆ ತಂದೆಯಾದೆ, ಪಾರ್ವತಿಯ ಗಂಡನಾದೆ,. ಕಲಿಯದೆ ಡಾಕ್ಟರನಾದೆ

ಡಾ.ರಾಜಕುಮಾರ

೫೧. ಅನ್ನ ತಿನ್ನಲ್ಲ ನೀರು ಕುಡಿಯಲ್ಲ ಆದ್ರೆ ಬುದ್ದಿಲಿ ಮಾತ್ರ ಅದನ್ನು ಮೀರಿಸುವವರೇ ಇಲ್ಲ ಏನಿದು

ಕಂಪ್ಯೂಟರ್

೫೨. ಬಿಸಿಲಲ್ಲಿ ಕಾಣಿಸಿಕೊಳ್ಳುತ್ತೆ ಗಾಳಿ ಬೀಸಿದ್ರೆ ಮಾಯ ಆಗುತ್ತೆ

ಬೆವರು

೫೩. ಹೋಗ್ತಾನೆ ಬರ್ತಾನೆ ತಿಮ್ಮಪ್ಪ ಒಂಟಿ ಕಾಲಲ್ಲಿ ನಿಂತವ್ನೆ ತಿಮ್ಮಪ್ಪ

ಬಾಗಿಲು

೫೪. ನಿನ್ನೂರಲ್ಲಿ ನನ್ನೂರು ಹೋದರೆ ಎಷ್ಟು ಉಳಿಯುತ್ತೆ?

ಸೊನ್ನೆ (ನಿನ್ನ ನೂರಲ್ಲಿ ನನ್ನ ನೂರು)

೫೫. ಹಸಿರು ಕೋಟೆ ಬಿಳಿರಾಜ ಅವನನ್ನು ತಿಂದರೇ ಬರುತಾನೆ ಕರಿರಾಜ

ಸೀತಾಫಲ

೫೬. ಕಲ್ಲರಳಿ ಹೂವಾಗಿ, ಎಲ್ಲರಿಗೆ ಬೇಕಾಗಿ, ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ ಬಲ್ಲವರು ಹೇಳಿ

ಸುಣ್ಣದ ಹರಳು

೫೭. ಕಚ್ಚಿದರೆ ಕಚ್ಚುವುದು ಕಿಚ್ಚ ಚೇಳಲ್ಲ, ಅಚ್ಚರಿಯಿದಲ್ಲ, ಅರಿದಲ್ಲ ಈ ಮಾತು ನಿಶ್ಚಯ ಬಲ್ಲವರು ಹೇಳಿ

ಮೆಣಸು

೫೮. ಹತ್ತು ಸಾವಿರ ಕಣ್ಣು ನೆತ್ತಿಲಾದರು ಬಾಲ, ಹತ್ತಿಯ ಹುಳುವ ಹಿಡಿಯುವುದು ಕವಿಜನರ ಹೊತ್ತವಿದ ಹೇಳಿ

ನವಿಲು

೫೯. ಹಲವು ಮಕ್ಕಳ, ತಂದೆ ತಲೆಯಲ್ಲಿ ಜುಟ್ಟುವಿ ಸಲೆಗಳಿಗೆ ಜಾವವರಿವನ ಹೆಂಡತಿಗೆ ಮೂಲೆಯಿಲ್ಲ ನೋಡು.

ಹುಂಜ

೬೦. ಎಂಟು ಒಳ್ಳದ ನಾವು ಗಂಟಲಲಿ ಮುಳ್ಳುಂಟು, ಒಂಟರನು ಹಿಡಿದು ಒಡಿಸುವದು ಕವಿಗಳಲ್ಲಿ ಒಂಟರಿದುದು ಯಾವುದು ಹೇಳಿ

ಇಕ್ಕಳ

೬೧. ಕಡೆ ಬಿಳಿದು, ನಡು ಕಪ್ಪು ಉಳುವ ವಸ್ತ್ರವದಲ್ಲ, ಬಿಡದೇ ನೀರುಂಟು ಮಾಡುವದಲ್ಲ ಕವಿಗಳಲಿ ಅರಿದವರು ಹೇಳಿ

ಕಣ್ಣು

೬೨. ಕಾಲಿಲ್ಲ, ಕೊಂಬುಂಟು, ಬಾಲದ ಪಕ್ಷಿಯದು, ಮೇಲೆ ಹಾರುವುದು ಹದ್ದಲ್ಲ, ಕವಿಗಳಲಿ ಬಾಲರಿಯದವರು ಹೇಳಿ

ಪಟ

೬೩. ನೆತ್ತಿಯಿಂದ ಉಣ್ಣುತ್ತದೆ, ಸುತ್ತೆಲ್ಲ ಸುರಿಸುತ್ತದೆ ಎತ್ತಿದರೆ ಎರಡು ಹೋಳಾಗುತ್ತದೆ. ಉತ್ತರ .... ಅವರು ಇದರ ಹೆಸರನ್ನು ಹೇಳವದಿರುತ್ತದೆ.

ಬೀಸುವಕಲ್ಲು

೬೪. ಕರವುಂಟು ಕಾಲಿಲ್ಲ, ಶಿರವರಿದ ಮುಂಡವದು ನರದಿ ಬಿಗಿದಾರು, ತುಡದಕ ಕವಿಗಳು ಅರಿದವರು ಹೇಳಿ.

ಅಂಗಿ

೬೫. ಕಣ್ಣುಂಟು ಕಾಣದದು, ಕಣ್ಣೆರೆದು ನೋಡುವುದು, ಮಣ್ಣಿನಲಿ ಹುಟ್ಟಿ ಬೆಳಗಿದುದು ಇದನ್ನು ಬಲ್ಲವರು ಹೇಳಿ.

ಬೆಳಕಿಂಡಿ.

೫೫. ಹಸಿರು ಕೋಟೆ ಬಿಳಿರಾಜ ಅವನನ್ನು ತಿಂದರೇ ಬರುತಾನೆ ಕರಿರಾಜ

ಸೀತಾಫಲ

೫೬. ಕಲ್ಲರಳಿ ಹೂವಾಗಿ, ಎಲ್ಲರಿಗೆ ಬೇಕಾಗಿ, ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ ಬಲ್ಲವರು ಹೇಳಿ

ಸುಣ್ಣದ ಹರಳು

೫೭. ಕಚ್ಚಿದರೆ ಕಚ್ಚುವುದು ಕಿಚ್ಚ ಚೇಳಲ್ಲ, ಅಚ್ಚರಿಯಿದಲ್ಲ, ಅರಿದಲ್ಲ ಈ ಮಾತು ನಿಶ್ಚಯ ಬಲ್ಲವರು ಹೇಳಿ

ಮೆಣಸು

೫೮. ಹತ್ತು ಸಾವಿರ ಕಣ್ಣು ನೆತ್ತಿಲಾದರು ಬಾಲ, ಹತ್ತಿಯ ಹುಳುವ ಹಿಡಿಯುವುದು ಕವಿಜನರ ಹೊತ್ತವಿದ ಹೇಳಿ

ನವಿಲು

೫೯. ಹಲವು ಮಕ್ಕಳ, ತಂದೆ ತಲೆಯಲ್ಲಿ ಜುಟ್ಟುವಿ ಸಲೆಗಳಿಗೆ ಜಾವವರಿವನ ಹೆಂಡತಿಗೆ ಮೂಲೆಯಿಲ್ಲ ನೋಡು.

ಹುಂಜ

೬೦. ಎಂಟು ಒಳ್ಳದ ನಾವು ಗಂಟಲಲಿ ಮುಳ್ಳುಂಟು, ಒಂಟರನು ಹಿಡಿದು ಒಡಿಸುವದು ಕವಿಗಳಲ್ಲಿ ಒಂಟರಿದುದು ಯಾವುದು ಹೇಳಿ

ಇಕ್ಕಳ

೬೧. ಕಡೆ ಬಿಳಿದು, ನಡು ಕಪ್ಪು ಉಳುವ ವಸ್ತ್ರವದಲ್ಲ, ಬಿಡದೇ ನೀರುಂಟು ಮಾಡುವದಲ್ಲ ಕವಿಗಳಲಿ ಅರಿದವರು ಹೇಳಿ

ಕಣ್ಣು

೬೨. ಕಾಲಿಲ್ಲ, ಕೊಂಬುಂಟು, ಬಾಲದ ಪಕ್ಷಿಯದು, ಮೇಲೆ ಹಾರುವುದು ಹದ್ದಲ್ಲ, ಕವಿಗಳಲಿ ಬಾಲರಿಯದವರು ಹೇಳಿ

ಪಟ

೬೩. ನೆತ್ತಿಯಿಂದ ಉಣ್ಣುತ್ತದೆ, ಸುತ್ತೆಲ್ಲ ಸುರಿಸುತ್ತದೆ ಎತ್ತಿದರೆ ಎರಡು ಹೋಳಾಗುತ್ತದೆ. ಉತ್ತರ .... ಅವರು ಇದರ ಹೆಸರನ್ನು ಹೇಳವದಿರುತ್ತದೆ.

ಬೀಸುವಕಲ್ಲು

೬೪. ಕರವುಂಟು ಕಾಲಿಲ್ಲ, ಶಿರವರಿದ ಮುಂಡವದು ನರದಿ ಬಿಗಿದಾರು, ತುಡದಕ ಕವಿಗಳು ಅರಿದವರು ಹೇಳಿ.

ಅಂಗಿ

೬೫. ಕಣ್ಣುಂಟು ಕಾಣದದು, ಕಣ್ಣೆರೆದು ನೋಡುವುದು, ಮಣ್ಣಿನಲಿ ಹುಟ್ಟಿ ಬೆಳಗಿದುದು ಇದನ್ನು ಬಲ್ಲವರು ಹೇಳಿ.

ಬೆಳಕಿಂಡಿ.

೬೬. ಕಾಲುಂಟು ನಡೆಯದದು, ಮೊಲೆಯಲೆ ಕಟ್ಟಿಹುದು, ಬಾಲಕರ ಸೊಮ್ಮಡೊರುಹುದು, ಕವಿಗಳು ಬಾಲರಿದ ಹೇಳಿ.

ತೊಟ್ಟಿಲು

೬೭. ಮೀನು ಮುಟ್ಟಿದ ವಾರಿ, ದಾನವರ ವೈರಿ, ತಾ ಮಾನವರಿಗಾಗಿ ಹಿಡಿದಿಹೆನು ಕವಿಗಳಲ್ಲಿ ಮಾನಸರು ಹೇಳಿ

ತೆಂಗಿನಕಾಯಿ

೬೮. ಭೂತಳದಲ್ಲಿ ಇರುವುದು ಪಾತಾಳಕ್ಕೆ ಇಳಿಯುವುದು ಶೀತಳ ತರುವುದು ಇದನ್ನು ತಿಳಿದು ಹೇಳಲಿಕ್ಕೆ ನನ್ನ ಪತಿ........ಯ ಬುದ್ದಿಗೆ ತೂಗದು

ಕಪ್ಪಲಿ

೬೯. ಕಾಲಿಲ್ಲದೆ ಹರಿಯುವುದು ತೋಳಿಲ್ಲದೇ ಒತ್ತುವುದು ನಾಲಿಗೆ ಇಲ್ಲದೇ ಉಲಿಯುವುದು ನಮ್ಮಕ..............ಇದನ್ನು ಒಡೆದು ಹೇಳಿದರೆ ಒಳಿತಾಗುವುದು.

ನದಿ

೭೦. ಮಡಿ-ಮೈಲಿಗೆ ಅರಿಯದು, ಅಡುಗೆ ಮನೆ ಸೇರುವುದು, ಮಾಡಿ ದಡಿಗೆಯ ಮೊದಲು ತಾನುಣ್ಣುವುದು ಇದನ್ನೋಡೆದು...........ಅವರು ಹೇಳುವುದು.

ನೊಣ

೭೧. ಹಗ್ಗವಿಲ್ಲದ ಕಟ್ಟು, ಕೋಲಿಲ್ಲದ ಪೆಟ್ಟು, ಏನಿದರ ಗುಟ್ಟು.............ನಮ್ಮಾಕೆ ಹೇಳಲಿ ಕಷ್ಟ ಪಟ್ಟು

ಮಾರ್ಮಿಕ ಮಾತು

೭೨. ಕೆಗ್ಗರ ಬಗ್ಗರ ಮೈಯಕ್ಕಿ, ಗುಲಗಂಜಿ ಹಂತಾ ಕಣ್ಣೆನಕಿ
ಕೆಸರನ್ಯಾಗ ಕಾಲ ಕಿಸಗೊಂಡ ಕುಂತಾಳ

ಕಪ್ಪೆ

೭೩. ತಾತಾಗಂಡಿ, ತಾಮ್ಮಗಿಂಡಿ, ಬಿಚ್ಚಿನೋಡಿದರ ಬೆಳ್ಳಿಗಿಂಡಿ

ತೆಂಗಿನ ಕಾಯಿ

೭೪. ಕರಿಹೊಲ್ದಾಗ ಕಡತಾರ ಬಿದ್ಯೆತಿ

ಬೈತಲೆ

೭೫. ಸಾಲಗಡಕ ಸಪ್ಪಳಾಗೊದಿಲ್ಲ

ಹಾದಿ

೭೬. ಅಣ್ಣ ಅತ್ತರೆ ತಮ್ಮನೂ ಅಳುತ್ತಾನೆ.

ಕಣ್ಣು

೭೭. ಅಂಕುಡೊಂಕಾದ ಬಾವಿಲಿ ಒಂದು ತೊಟ್ಟು ನೀರಿಲ್ಲ.

ಕಿವಿ

೭೮. ಈ ಕೋಣೆ ಕೆಲಸ ಮಾಡಿದ ಮೇಲೆ ಮೂಲೇಲಿ ನಿಲ್ಲುವ ಈ ಜಾಣೆ ಯಾರು?

ಪೊರಕೆ (ಕಸಬರಗಿ)

೭೯. ಕಪ್ಪು ಮೈದಾನ ಬಿಳಿ ರಸ್ತೆ

ಬೈತಲೆ

೮೦. ಕಡಿದರೆ ಹಾಲು ಹೊಡೆದರೆ ಹಾಲು, ಒಳಗಡೆ ಸಾವಿರ ಮಕ್ಕಳು ಇದನ್ನು ತಿಂದರೆ ರುಚಿ ಇದು ಏನು?

ಹಲಸಿನ ಹಣ್ಣು

೮೧. ಮನೆ ಮನೆಗೆರೆಡು ಬಾಗಿಲು ಬಾಗಿಲ ಮುಂದೆ ಬಾವಿ ಇವು ಮುಚ್ಚಿದರೆ ಹಾನಿ ಇದೇನು?

ಮೂಗು, ಬಾಯಿ

೮೨. ಪ್ರತಿ ಮನೆಯಲ್ಲಿ ಕೆಂಪು ಹುಡುಗಿ

ಬೆಂಕಿ

೮೩. ಬಿಳಿ ಕುದುರೆಗೆ ಹಸಿರು ಬಾಲ

ಮೂಲಂಗಿ

೮೪. ಹುಲಿಯ ಚಿಕ್ಕಮ್ಮ ಇಲಿಯ ಮುಕ್ಕಮ್ಮ

ಬೆಕ್ಕು

೮೫. ಇದ್ದಲ ನುಂಗತ ಗದ್ದಲ ಮಾಡುತ ಉದ್ದಕ್ಕೂ ಓಡುತ

ರೈಲು

೮೬. ಪ್ರಾಣವಿಲ್ಲ ಹಾರುತ್ತೆ ಜೀವವಿಲ್ಲ ಕೂಗುತ್ತೆ

ವಿಮಾನ

೮೭. ಹುಟ್ಟುತ್ತಲೇ ಹುಡುಗ ತಲೆಯಲ್ಲಿ ಟೋಪಿ ಹಾಕಿರುತ್ತೆ

ಬದನೆಕಾಯಿ

೮೮. ಬಂಗಾರದ ಗಿಣಿ ಬಾಗಿಲು ಕಾಯುತ್ತೆ

ಬೀಗದ ಕೈ

೮೯. ಎಂಟು ಕಂಬಗಳಿಗೆ ಒಂದೇ ಆಧಾರ

ತಕಡಿ

೯೦. ಚಿಕ್ಕ ಮಕ್ಕಳಿಗೆ ಮೈ ತುಂಬಾ ಬಿಳಿ ಬಟ್ಟೆ

ಬೆಳ್ಳುಳ್ಳಿ

೯೧. ಗಿಡ ಕೊಡಲಾರದು ಮರ ಬೆಳೆಸಲಾರದು ಅದಿಲ್ಲದೇ ಊಟ ಸೇರಲಾರದು

ಉಪ್ಪು

೯೨. ತಾತನ ತಟ್ಟೆ ಥಳ ಥಳ ಹೊಳೆಯುತ್ತೆ

ಚಂದ್ರ

೯೩. ಬೆಳ್ಳಿ ಚಡಿ ನೆಲಕ್ಕೆ ಹೊಡಿ

ಸಿಂಬಳ

೯೪. ಗಿಡ್ನ ಹುಡುಗ ಅಡ್ನ ಬಿದ್ನ

ಹೊಸಲಿ

೯೫. ಅಪ್ಪನಿಗೆ ಮೂರು ಅವ್ವನಿಗೆ ಒಂದು

ವಿಭೂತಿ ಪಟ್ಟೆ, ಕುಂಕುಮ

೯೬. ನಮಗಿಂತ ಇತರರೇ ಹೆಚ್ಚು ಬಳಸುತ್ತಾರೆ ಏನು?

ಹೆಸರು

೯೭. ನೀಲಿ ಸಾಗರದಲ್ಲಿ ಬೆಳ್ಳನೆ ಮೀನುಗಳು ನಾನ್ಯಾರು?

ತಾರೆ, ನಕ್ಷತ್ರ

೯೮. ಹಿಡಿದರೆ ಹಿಡಿ ತುಂಬ ಬಿಟ್ಟರೆ ಮನೆ ತುಬ ಇದು ಹೇಳುವವನಿಗೆ ಎಲ್ಲಿಲ್ಲದ ಜಂಭ

ಬೆಳಕು

೯೯. ಮೂಲೇಲಿ ಮುದುಕಿ ಕೂತವಳೇ ಮುಟ್ಟಿದರೆ ರಾಗ ಹಾಡ್ತಾಳೆ

ತಂಬೂರಿ

೧೦೦. ಒಂಟಿಗಾಲಿನ ಕುಂಟ ನಾನ್ಯಾರು?

ಬುಗುರಿ

೧೦೧. ಕಾಲಿಲ್ದ ಹುಡುಗಿಗಿ ಮಾರುದ್ದ ಕಡಿವಾಣ

ಸೂಜಿ

೧೦೨. ಚಿನ್ನದ ಹಕ್ಕಿಯು ಬಾಲದಿಂದ ನೀರನ್ನು ಕುಡಿಯುತ್ತದೆ.

ದೀಪ

೧೦೩. ಒಂಟಿಗಣ್ಣಿನ ಪೋರಿ ಊರೆಲ್ಲವನ್ನು ಸುತ್ತಾಡುತ್ತೇ

ಸೂಜಿ

೧೦೪. ಚೋಟುದ್ದ ಸಿಪಾಯಿಗಳು ಒಬ್ಬೊಬ್ಬರೇ ಬರ್‍ತಾರೆ ಉರಿದು ಬಿದ್ದು ಸಾಯ್ತಾರೆ

ಬೆಂಕಿಕಡ್ಡಿ

೧೦೫. ಆಕಾಶದೊಳಗಿನ ಗಿಣಿ ಊಟದ ಹೊತ್ತಿಗೆ ರಾಣಿ

ಬಾಳಿಎಲೆ

೧೦೬. ರಾಜಾ ರಾಜಾ ಅಂಗಳದಲ್ಲಿ ಬೇರಿಲ್ಲದ ಮರ ಹುಟ್ಟಿ ಊರೊರಿಗೆಲ್ಲ ಸಂಗತಿ

ರಥ

೧೦೭. ಗಿಡದ ತುಂಬಾ ಬೆಳ್ಳಿಯ ಹೂವು ಆರಿಸೋಕೆ ಆಗಲ್ಲ ಎಣಿಸೋಕೆ ಆಗಲ್ಲ

ನಕ್ಷತ್ರ

೧೦೮. ಐದು ಜನ ಆಡಿಸುತ್ತಾರೆ ಮೂವತ್ತೆರಡು ಜನ ಮಗಚಾಕ್ತಾರೆ ಒಬ್ಬಾತ ರುಚಿ ನೋಡ್ತಾನೆ

ಬೆರಳು ಹಲ್ಲು ನಾಲಿಗೆ

೧೦೯. ಹೊಳೆಯ ಬಾಳೇಕಾಯಿ ನಾನ್ಯಾರು ಹೇಳಿ ನೋಡೋಣ

ಮೀನು

೧೧೦. ಹಳ್ಳಿ ಗಡಿಯಾರ ಒಳ್ಳೇ ಆಹಾರ

ಕೋಳಿ

೧೧೧. ಹಗಲು ನಿದ್ರೆ ರಾತ್ರಿ ಓಡಾಟ

ಇಲಿ

೧೧೨. ಕಪ್ಪು ಗುಡ್ಡೆ ಮೇಲೆ ಪುಟಾಣಿ ಚೋರ

ಹೇನು

೧೧೩. ಓಡಿ ಹೋಗುತ್ತೆ ತೆಕ್ಕ ಹಾಕಿ ಮಲಗುತ್ತೆ

ಹಾವು

೧೧೪. ಕರಿ ಹೊಲದಲ್ಲಿ ಕರಿ ದನ ಮೇಯುತ್ತೆ

ಹೇನು

೧೧೫. ಒಂದು ಗಿಡಕ್ಕೆ ಒಂದೇ ಪದಕ

ಉಗುರು

೧೧೬. ಹಾಲಲ್ಲಿ ಕಪ್ಪು ಚುಕ್ಕಿ ಬಿದ್ದಿದೆ

ಕಣ್ಣುಗುಡ್ಡೆ

೧೧೭. ಬೆಳಿಗ್ಗೆ ಬೀಳುತ್ತೆ ಸಂಜೆಗೆ ಏಳುತ್ತೆ

ಚಂದ್ರ

೧೧೮. ಕಣ್ಣಿಗೆ ಕಾಣುತ್ತೆ ಕೈಗೆ ಸಿಕ್ಕಿಲ್ಲ

ನೆರಳು

೧೧೯. ಅಕ್ಕನ ಮೇಲೆ ಛತ್ರಿ

ರೆಪ್ಪೆ

೧೨೦. ಒಂದೇ ದೋಸೆ ಸಾವಿರ ಜನ ತಿಂತಾರೆ

ಜೇನು

೧೨೧. ಗುಂಡಾಕಾರ ಮೈಯೆಲ್ಲಾ ತೂತು

ದೋಸೆ

೧೨೨. ಅಡ್ಡ ಗೋಡೆ ಮೇಲೆ ಸಾಣ್ಕ ಕೂತಿದೆ ಇದು ಏನು?

ಕುಂಕುಮ

೧೨೩. ಮನೆ ಮೇಲೆ ಮಲ್ಲಿಗೆ ಹೂವು

ಮಂಜು

೧೨೪. ಅಂಗೈ ಕೊಟ್ಟರೆ ಮುಂಗೈ ನುಂಗುವುದು ಇದು ಏನು?

ಅಂಗಿ

೧೨೫. ಅಳತೆ ನೋಡುವ ದರ್ಜಿ ಇಲ್ಲ, ಲೆಕ್ಕ ನೋಡುವ ಕಾರಕೂನ ಇಲ್ಲ

ಕೂದಲು

೧೨೬. ಸಣ್ಣ ಕೋಣೆಯಲ್ಲಿ ದಂತದ ಬೇಲಿ

ಹಲ್ಲು

೧೨೭. ಕಣ್ಣಿಗೆ ಕಾಣುತ್ತೇ ಕೈಗೆ ಬರಲ್ಲ

ಪ್ರತಿಬಿಂಬ

೧೨೮. ಪಾತಾಳದಲ್ಲಿ ಬೆಳ್ಳಿ ಮೇಲೆ ಕಳ್ಳಿ

ಗೆಣಸು

೧೨೯. ಮನೆಮಂದಿ ಎದುರೇ ಮಗಳ ಕೈಯನ್ನು ಹಿಡಿತಾನ

ಬಳೆಗಾರ

೧೩೦. ಕಣ್ಣಿಲ್ಲ ಕಾಲಿಲ್ಲ ಆದರೂ ನಡೆಯುತ್ತೆ

ಗಡಿಯಾರದ ಮುಳ್ಳು

೧೩೧. ಒಂದೇ ಕಣ್ಣು ಒಂದೇ ಬಾಲ

ಸೂಜಿ

೧೩೨. ಬಂಗಾರದ ಗುಬ್ಬಿ ಬಾಲದಿಂದ ನೀರನ್ನು ಕುಡಿಯುತ್ತೆ

ನಂದಾದೀಪ

೧೩೩. ಆಕಾಶದಾಗೆ ಅಪ್ಪಣ್ಣ ಕೆಳಗೆ ಬಿದ್ದರೆ ದುಪ್ಪಣ್ಣ ಹುಲ್ಲಿನಲ್ಲಿ ಅಡಗಣ್ಣ ಮಾರ್ಕೆಟಿನಲ್ಲಿ ಮಾರಣ್ಣ

ಮಾವಿನಹಣ್ಣು

೧೩೪. ಹೋಗುತ್ತಾ ಹೋಗುತ್ತಾ ಕೊಯ್ತತೆ, ಬರುತ್ತ ಬರುತ್ತ ಕೊಯ್ಯದೆ ನಾನು ಯಾರು ಹೇಳಿ ಅತ್ತೆ?

ಗರಗಸ

೧೩೫. ನೀರಿಗೆ ಹೋಗಲ್ಲ ನೀರು ಮುಟ್ಟುವುದಿಲ್ಲ ನೀರು ತರ್‍ತೀನಿ

ತೆಂಗಿನಕಾಯಿ

೧೩೬. ಅಡ್ಡಗೋಡೆ ಮೇಲೆ ದೀಪ ಉರಿತಿದೆ

ಮೂಗುಬೊಟ್ಟು

೧೩೭. ಆನೆಗಾತ್ರ ದೇಹ ಎಲ್ಲಿ ಚುಚ್ಚಿದರು ಒಂದು ತೊಟ್ಟು ರಕ್ತ ಇಲ್ಲ

ಕಲ್ಲುಬಂಡೆ

೧೩೮. ಕಿತ್ತರೆ ಬಾಡುವುದಿಲ್ಲ ನೆಟ್ಟರೆ ಹುಟ್ಟುವುದಿಲ್ಲ ಇದು ಏನು?

ಕೂದಲು

೧೩೯. ಹಕ್ಕಿ ತಿನ್ನುವವನಿಗೆ ಕೆಂಪು ಪುಕ್ಕ

ಕೋಳಿ

೧೪೦. ಸುಟ್ಟ ಹೆಣ ಮತ್ತೆ ಸುಡ್ತಾರೆ

ಇದ್ದಿಲು

೧೪೧. ಹಗಲಲ್ಲಿ ಮಾಯೆ ರಾತ್ರಿಯಲ್ಲಿ ಪ್ರತ್ಯಕ್ಷ ನಾನ್ಯಾರು ಹೇಳಿ?

ನಕ್ಷತ್ರ

೧೪೨. ಕಡಿದರೆ ಕಚ್ಚಾಗುವುದಿಲ್ಲ ಹಿಡಿದರೆ ಹಿಡಿಯಾಗುವುದಿಲ್ಲ

ನೀರು

೧೪೩. ಹಾರಿದರೆ ಹನುಮಂತ ಕೂಗಿದರೆ ಶಂಖ

ಕಪ್ಪೆ

೧೪೪. ಕಂಬದ ಮೇಲೆ ನಿಂಬೆಕಾಯಿ ನಾನ್ಯಾರು ಹೇಳಿ

ಲವಂಗ

೧೪೫. ಹುಲ್ಲು ಹಾಕಿದರೆ ಹಾಲು ಕೆಡಲ್ಲ ಕಲ್ಲು ಹಾಕಿದರೆ ಹಾಲು ಕೆಡುತ್ತೆ

ಕಳ್ಳಿ

೧೪೬. ಗುಡ್ಡದ ಹಿಂದೆ ಗುಂಡಕಲ್ಲು

ತುರುಬ

೧೪೭. ಬಡ ಬಡ ಬಂದ ಅಂಗಿ ಕಳಚಿ ಬಾವಿಯೊಳಗೆ ಬಿದ್ದ

ಬಾಳೆಹಣ್ಣು

೧೪೮. ಅಂಗಡಿ ಒಳಗಿಟ್ಟು ಮಾರುವುದಿಲ್ಲ ತಕ್ಕಡಿ ಒಳಗಿಟ್ಟು ತೂಗುವುದಿಲ್ಲ, ಅದಿಲ್ಲದೇ ಹಬ್ಬ ಆಗುವುದಿಲ್ಲ

ಸೆಗಣಿ

೧೪೯. ಕರಿ ಸೀರೆ ಉಟ್ಟಾಳ ಕಾಲುಂಗರ ಇಟ್ಟಾಳ ಮೇಲಕೆ ಹೋಗಿ ಕೆಳಕೆ ಬರ್‍ತಾಳೆ

ಒನಕೆ

೧೫೦. ಅಂಗಿ ಬಿಚ್ಚಿ ಬಾವಿ ಹಾರು

ಬಾಳೇಹಣ್ಣು

೧೫೧. ಕೆಮ್ಮಣ್ಣು ಗುಂಡಿಯಲ್ಲಿ ಸಾವಿರಾರು ಜನ ಸೈನಿಕರು ಕೋಟೆಯಂತೆ ನಿಂತಿದ್ದಾರೆ.

ದಾಳಿಂಬೆ

೧೫೨. ಬಂಡಿ ತಿರುಗತ್ತೈತಿ ಭಂಡಾರ ಚೆಲ್ಲತ್ತೈತಿ

ಬೀಸುವ ಕಲ್ಲು

೧೫೩. ಸಂತೆಯೊಳಗಿಂದ ತರಕಾರಿ ತಂದು ಮುಂದೆ ಇಟ್ಟುಕೊಂಡು ಅಳತಾರೆ

ಈರುಳ್ಳಿ

೧೫೪. ಮುಂಜಾನೆ ಬರತ್ತೈತಿ ಸಂಜೆಗೆ ಹೋಗತ್ತೈತಿ

ಸೂರ್ಯ

೧೫೫. ಅಡ್ಡ ಗೋಡೆ ಮೇಲೆ ಗಿಡ್ಡಪ್ಪ ಕೂತಾಗ ಬಂದವರಿಗೆಲ್ಲಾ ಬೆಂಕಿ ಕೊಡುತ್ತಾನೆ.

ಚೇಳು

೧೫೬. ಹಸಿರು ಗಿಡದ ಮೇಲೆ ಮೊಸರು ಚೆಲ್ಲಿದೆ

ಮಲ್ಲಿಗೆ ಹೂ

೧೫೭. ಸುತ್ತಮುತ್ತ ಸುಣ್ಣದ ಗೋಡೆ ಯಾವ ಕಡೆಗೂ ಬಾಗಿಲು ಇಲ್ಲ

ಕೋಳಿಮೊಟ್ಟೆ

೧೫೮. ಸಂಜೆತನಕ ಬಡಿದರೂ ಸದ್ದೇ ಆಗದು

ಕಣ್ಣುರೆಪ್ಪೆ

೧೫೯. ಮರದೊಳಗೆ ಮರಹುಟ್ಟಿ ತಿನ್ನಬಾರದಂತ ಹುಣ್ಣಾಯಿತು

ಮಗು

೧೬೦. ಚಿಕ್ಕ ಮನೆಯೊಳಗೆ ಚಕ್ಕೆ ತುಂಬಿವೆ

ಹಲ್ಲುಗಳು

೧೬೧. ಅಪ್ಪ ಅಂದರೆ ಕೂಡುವುದು ಅವ್ವ ಅಂದರೆ ಕೂಡಲ್ಲ

ತುಟಿ

೧೬೨. ಬಗ್ಗಿದರೆ ಬಾಯಿಗೆ ಬರುವುದು

ತಾಳಿ

೧೬೩. ನಕ್ಕರೆ ನಗುವುದು ಅತ್ತರೆ ಅಳುವುದು ಬಿಟ್ಟರೆ ಚೂರಾಗುವುದು

ಕನ್ನಡಿ

೧೬೪. ಬಾ ಅಂದರೆ ಬರುವುದಿಲ್ಲ ಹೋಗು ಅಂದರೆ ಹೋಗೋದಿಲ್ಲ

ನೆರಳು

೧೬೫. ಅಂಗಣ್ಣ ಮಂಗಣ್ಣ ಅಂಗಿ ಕಳೆದು ನುಂಗಣ್ಣ

ಬಾಳೇ ಹಣ್ಣು

೧೬೬. ಒಂದು ಹಕ್ಕಿಗೆ ಮೈ ತುಂಬಾ ರೆಕ್ಕೆ

ಪುಸ್ತಕ

೧೬೭. ಅಂದ ಹಾಗೆ ಅನ್ನುವುದು ಆದರೆ ಯಾರಿಗೂ ಕಾಣದು

ಪ್ರತಿಧ್ವನಿ

೧೬೮. ಅಂತರದ ಬಲೆ ಹಾಕಿ ಹಾರುವವರ ಹಿಡಿಯುವನು

ಜೇಡರ ಬಲೆ

೧೬೯. ಚುಕ್ಕಿ ಇಟ್ಟ ಅಂಗಳ ಚಂಗ ಚಂಗನೆ ಓಡುವುದು

ಜಿಂಕೆ

೧೭೦. ಅಡಿಕೆ ಎಣಿಸಲಾರೆ ಎಲೆ ಮುಡಿಸಲಾರೆ

ಆಕಾಶ ನಕ್ಷತ್ರ

೧೭೧. ಒಂಟಿ ಕಾಲಿನ ಕೊಕ್ಕರೆ ನೆತ್ತಿಯ ಮೇಲೆ ಮೊಟ್ಟೆ ಇಡುತ್ತದೆ.

ತೆಂಗಿನಮರ

ಹೀಗೆ ಒಗಟುಗಳು ಛಂಧೋಬದ್ಧ ಅಭಿವ್ಯಕ್ತಿಯಾಗಿ ಕಂಡುಬರುತ್ತಿವೆ. ಒಗಟು ಸಂಕ್ಷಿಪ್ತರೂಪದ ಒಂದು ಆಕರ್ಷಕ ರಚನೆ. ಅದರಲ್ಲೂ ಜನಪ್ರಿಯ ಒಗಟುಗಳು ತೀರಾ ಚಿಕ್ಕವು ಬಹುತೇಕ ಕಾವ್ಯಾತ್ಮಕವಾದವು. ಇನ್ನು ಗರತಿಯು ಗಂಡನ ಹೆಸರು ಹೇಳುವಾಗ ಬಳಸುವ ಒಡಪುಗಳು ಈ ರೀತಿ ಇವೆ.

೧. ಹೊಳೆಯ ದಂಡೆಯಲ್ಲಿ ಬಿದಿರು ಬಹಳ,
ನಮ್ಮ ಚಪಾತಿಗೆ ಪದರು ಬಹಳ,
ನಮ್ಮ ರಾಯರಿಗೆ ನೆದರು ಬಹಳ

೨. ಗುಲಗಂಜಿ ಗುಂಪ, ಮಲ್ಲಿಗಿ ಹೂವಿನ ತಂಪ,
ನಮಕ್ಕಿಂತ ನಮ್ಮ ರಾಯರ ಕೆಂಪ

೩. ಹಸಿ ಹಾಲ, ಬಿಸಿ ಅನ್ನ, ತುತ್ತಿಗೊಮ್ಮೆ
ತುಪ್ಪ ಬೇಡತಾರ

೪. ಕಾಲಾಗ ಭೂಟ, ಕೈಯಾಗ ನೂರರ ನೋಟ
ಕಾರಗಾಡಿ ತೊಗೊಂಡ ಕರ್‍ಯಾಕ ಬರಾತರ

೫. ಕಟಕರೊಟ್ಟಿ, ತಟಕ ಎಣ್ಣಿ,
ಕಟಗೊಂಡ ಹೊಗೊಂದರ ಸೆಟಗೊಂಡ ಹೊಗತಾರ

೬. ಧ್ವಜದ ಕಟ್ಟೆ ಮೇಲೆ ಇರುವದು ವಂದೇ ಮಾತರಂ

............ರ ಹೆಸರು ಹೇಳತೀನಿ ಸುಸ್ವಾಗತಂ

೭. ಆನೆಗೆ ಇರುವದು ಸೊಂಡೆ, ಬಾಗಿಲಿಗೆ ಇಡುವುದು ಕೊಂಡೆ
ಹೆಸರ ಕೇಳೋರ ಬಾಯಾಗ ಉಂಡೆ

೮. ಸಾಟಿ ಸೀರಿ ಪ್ಯಾಟಿದ ಊರ, ಗೋಟ ಮಾಡಸೂದ ಅಂದ್ರ
ನೋಟ ಮುರಿಸುದ ಬ್ಯಾಂಡ ಅಂತಾರ...............

೯. ಅರ್ಧ ರೊಟ್ಟಿ, ಅವರಿಕಾಳ ವನಗಿ
ಅರಮನ್ಯಾಗ ಕುತ್ತ ಆರ್ಭಟ ಮಾಡ್ತಾರ..............

೧೦. ಅಂಗೈಯಾಗ ಆರುಗಿಸಿ ಮುಂಗೈಯಾಗ ಮೂರ ಗಿಸಿ
ಪಲ್ಲಕ್ಕಾಗ ಕುತ್ತ, ಪಗಡಿ ಆಡ್ತಾರ................

೧೧. ಅಣೆದ ಬಂಗಾರ ಪೂಣೆದ ಪತ್ತಾರ
ಸಂಕೇಶ್ವರದಾಗ ಕುತ್ತ ವಂಕಿ ಮಾಡಸ್ತಾರ..............

೧೨. ಆಜಗಲ್ಲ, ಜೂಜಗಲ್ಲ, ಪಂಚಗಲ್ಲ, ಪಗಡಿಗಲ್ಲ, ಸಿರುಳ, ಶಿರಟಿ,
ನಂದ್ಯಾಳ, ನವಲಗುಂಜ, ಚಿಕನೂರ, ಪ್ಯಾಟ್ಯಾಗ ಕುತ್ತ ಚಕ್ಕಾ...ಆಡ್ತಾರ

೧೩. ಉಂಡು, ತಿಂದು, ಹೇಳುವೇನು ತಂದೆ ತಾಯಿ ಹೆಸರು
ಉಟ್ಟು ತೊಟ್ಟು ಹೇಳುವೇನು ಅಣ್ಣ ತಮ್ಮಂದಿರ ಹೆಸರು
ಜನ್ಮ ಜನ್ಮಾಂತರ ಹೇಳುವೇನು........ಹೆಸರು.

೧೪. ದಾರಿ ಎರಿದು ಕೊಟ್ಟ ಕೂಡಲೆ ದೂರವಾದರು ತಾಯಿ ತಂದೆ
.........ರ ಹೆಸರು ಹೇಳತೀನಿ ನಿಮ್ಮ ಮುಂದೆ

೧೫. ಗಾಂಧೀಜಿಯವರು ಬೇಡುವುದು ಒಕ್ಕಟ್ಟು
ನಾಗರಿಕರು ಬೇಡುವುದು ಚಹಾ ಉಪ್ಪಿಟ್ಟು
....................ರ ಹೆಸರು ಹೇಳತೀನಿ ಒಪ್ಪಿಟ್ಟು.

೧೬. ಕಷ್ಟದಲ್ಲಿ ಕಲ್ಲಾದೆ, ಬೆಟ್ಟದಲ್ಲಿ ಹುಲ್ಲಾದೆ, ಮನೆಗೆ ಮಲ್ಲಿಗೆಯಾದೆ
..............ರ ಮನ ಮೆಚ್ಚಿದ. ಮಡದಿಯಾದೆ

೧೭. ಜಗತ್ತಿನಲ್ಲಿರೋದು ವಿಜ್ಞಾನದ ರಾಕೆಟು.
.............ರ ಕಿಸೆಯಲ್ಲಿ ಹಾಕುವೇನು ವರದಕ್ಷಿಣೆ ಪಾಕೀಟು.

೧೮. ಕಾಶಿಕ್ಷೇತ್ರ, ಗಂಗಾ ಪಾತ್ರ, ವಿಶ್ವನಾಥನ ಸ್ತೋತ್ರ ಮಾಡುವರು ಜನ್ಮ ಪವಿತ್ರ
..............ರು ನನ್ನ ಕೊರಳಿಗೆ ಕಟ್ಟಿದ್ದು ಮಂಗಳ ಸೂತ್ರ.

೧೯. ಎಲಿ ತೋಟದಾಗ ಗಾಳಿ ಬಿಟ್ಟೈತಿ ತಣ್ಣಗ
.........ರು ಬಿಡಬಾರ ನನ್ನ ಸೆರಗ

೨೦. ಅಡಕಿ ಅಂಬೋರಾ, ಬಾಟಲಿ ಶಂಬೋರಾ

ಅಥಣಿ ಊರಾಗ ಒನ್ನೆ ನಂಬರ.............

೨೧. ಗಣೇಶನು ಹೊಳೆಯಲ್ಲಿ ಬೀಳುವಾಗ ಚಂದ್ರ ನೋಡಿ ನಕ್ಕ

...............ಹೆಸರು ಹೇಳತೀನಿ............ಅಕ್ಕ

೨೨. ನಾನು ಕಲಿತದ್ದು ಕನ್ನಡ ಶಾಲೆ

ಮುತ್ತೈದೆಯರ ಕಿವಿಯಲ್ಲಿರುವುದು ಮುತ್ತಿನ ವಾಲೆ

..................ರಿಗೆ ಬರೆಯುವೇನು ನಾನು ಪ್ರೇಮದ ಓಲೆ

೨೩. ವಸಂತ ಋತುವಿನಲ್ಲಿ ಚೆನ್ನಾಗಿ ಚಿಗುರುವುದು ಮಾವಿನ ಮಗುಳು

.................ರ ಹೆಸರ ಹೇಳತಿನರಿ...............ಜುಗುಳು.

೨೪. ಗಾಂಧೀಜಿಯವರು ಉಡುವದು ಮೂರು ಮಳ ಪಂಚೆ

ನಾವು ನಡೆಯುವದು ಅತ್ತಿ ಮಾವಂದಿರಗೆ ಅಂಜಿ

............ರ ಹೆಸರು ಹೇಳತಿನರಿ ಮುರುಸಂಜೆ

೨೫. ವಿಘ್ನೇಶ್ವರನನ್ನು ಪೂಜೆ ಮಾಡುವುದು ವಿಘ್ನ ವಿನಾಶಕ್ಕಾಗಿ.

ಸರಸ್ವತಿಗೆ ಪೂಜೆ ಮಾಡುವುದು ವಿದ್ಯೆಗಾಗಿ, ಲಕ್ಷ್ಮೀಪೂಜೆ ಮಾಡುವರು

ಭಾಗ್ಯಕ್ಕಾಗಿ ಪತಿದೇವರ ಪೂಜೆ ಮಾಡುವುದು ಮಾಂಗಲ್ಯ ಭಾಗ್ಯಕ್ಕಾಗಿ...........

೨೬. ಹಣೆಗೆ ಕುಂಕುಮ ಶೋಭೆ ಕಣ್ಣಿಗೆ ಕಾಡಿಗೆ ಶೋಭೆ| ಪದಕ ಕೊರಳಿಗೆ

ಶೋಭೆ| ಹೂವು ಹೆರಳಿಗೆ ಶೋಭೆ ನಾನು ನಮ್ಮ....................ರಿಗೆ ಶೋಭೆ

೨೭. ನೀರು ಎರೆದು ಗಿಡ ಬೆಳೆಯಿತು

ಜನ ನೆರೆದು ಊರ ಬೆಳೆಯಿತು

ಧಾರೆ ಎರೆದು ಲಗ್ನ ವಾಯಿತು..........ಕೈ ಹಿಡಿದು ನನ್ನ

ಬಾಳು ಪವಿತ್ರವಾಯಿತು.

೨೮. ಈಶ್ವರನಿಗೆ ಧರಿಸುವುದು ಮೂರು ದಳದ ಪತ್ರಿ..............ಹೆಸರು

ಹೇಳುವೆ ನಾ.................ರ ಪುತ್ರಿ

೨೯. ಬಸವಣ್ಣನವರು ಮಾಡಿದ್ದು ಧರ್ಮೋದ್ಧಾರ, ಗಾಂಧೀಜಿ ಮಾಡಿದ್ದು

ಸಮಾಜೋದ್ಧಾರ....................ಮಾಡಿದರು ನನ್ನ ಉದ್ಧಾರ.

೩೦. ಮಗು ಬೆಳೆದು ಮಾನವನಾಗಲು ಉತ್ತಮ ತಂದೆ-ತಾಯಿ ಬೇಕು

ಜನ ಬೆಳೆದು ಜನಾಂಗವಾಗಲೂ ಒಳ್ಳೆಯ ನಾಗರಿಕತೆ ಬೇಕು............

ಕೀರ್ತಿಸಾಲಿ ಯಾಗಲೂ ಗುರು-ಹಿರಿಯರ ಆಶೀರ್ವಾದಬೇಕು

೩೧. ಶಿವನ ಜಡೆಯಲ್ಲಿರುವಳು ಗಂಗಾ, ಶಿಭಕ್ತರ ಕೊರಳಿಲ್ಲಿರುವುದು

ಲಿಂಗ............ಮಾಡುವುದು ಸತ್ಕ ವಂತರ ಸಂಗ

೩೨. ಆಕಾಶದಲ್ಲಿ ಹೊಳೆಯುವುದು ನಕ್ಷತ್ರ, ಬೀಗತನದಲ್ಲಿ ವಿಚಾರಿಸುವುದು ಕುಲಗೋತ್ರ ನನಗೆ................ರು ಶುಭಮೂರ್ತದಲ್ಲಿ ಕಟ್ಟಿದ್ದು ಮಂಗಳ ಸೂತ್ರ.

೩೩. ಗಾಂಧೀಜಿಯವರು ಹೇಳಿದ್ದು ಶಾಂತಿ, ಸುಭಾಸ ಚಂದ್ರ ಭೋಸ ಮಾಡಿದ್ದು ಕ್ರಾಂತಿ....................ರಿಗೆ ಬೇಕು ಈಗ ವಿಶ್ರಾಂತಿ

೩೪. ಶ್ರೀ ಕೃಷ್ಣ ಕೊಳನೂದಿದ್ದು ಬೆಳಗಿನ ಹೊತ್ತಿನಲ್ಲಿ.............. ಹೆಸರು ಹೇಳುವನು ಮುತ್ತೈದೆಯರ ಗುಂಪಿನಲ್ಲಿ

೩೫. ಲಿಂಗವಿದ್ದರೆ ಪೂಜೆ ಚೆಂದ, ಹೂವು ಇದ್ದರೆ ತೋಟ ಚೆಂದ......... ಕಟ್ಟಿದ ಮಂಗಳ ಸೂತ್ರವು ನನ್ನ ಕೊರಳಿಗೆ ಬಲು ಚೆಂದ

೩೬. ದೇವರು ಕೊಟ್ಟ ವರವನ್ನು ಗುರುವು ಕೊಟ್ಟ ವಿದ್ಯೆಯನ್ನು ತಂದೆ ಕೊಟ್ಟ ಭಾಗ್ಯವನ್ನು, ತಾಯಿ ಕೊಟ್ಟ ಜನ್ಮವನ್ನು ನೀ ನಿಟ್ಟ ಪ್ರೀತಿಯನ್ನು ಎಂದಿಗೂ ಮರೆಯಲಾರೆ..............

೩೭. ಸ್ವಾತಿ ಮಳೆಗಾಗಿ ಕಾಯುತ್ತಿರುವ ಸಿಂಪಿಯಂತೆ ಸೂರ್ಯೋದಯಕ್ಕೆ ಕಾಯುತ್ತಿರುವ ಕಮಲದಂತೆ ವಸಂತ ಋತುವಿಗಾಗಿ ಕಾಯುತ್ತಿರುವ ಕೋಗಿಲೆಯಂತೆ ನಾನು ನಿನ್ನ ಪತ್ರದ ದಾರಿ ಕಾಯುತ್ತೇನೆ.

೩೮. ಒನಕ್ಕೆ ಗಿಡಗಳು ಚಂದ| ಬಳ್ಳಿ ವೃಕ್ಷಕ್ಕೆ ಚೆಂದ| ಶೀಲ ನಾರಿಗೆ ಚೆಂದ ತಾಳ ಹಾಡಿಗೆ ಚೆಂದ| ನಾ ಚಂದ ನಮ್ಮ.................ರಿಗೆ||

೩೯. ಚೆಂದದಿ ಹರಿಯುವ ತುಂಗೆಯ ನೋಟ| ಹರಿಹರೇಶ್ವರನ ನೋಟಕ್ಕೆ ಬಲು ಮಾಟ...........ಹೆಸರು ಹೇಳುವನು ನಿಲ್ಲಿಸಿರಿ ನಿಮ್ಮ ಹುಡುಗಾಟ.

೪೦. ರಘುಕುಲಕೆ ಶ್ರೀರಾಮ, ಯದು ಕುಲಕೆ ಘನಶ್ಯಾಮ ಹೇಳುವೆ..............ರ ಪ್ರಿಯನಾಮ.

೪೧. ಬಂದ ಕಂಟಕ ದೂರ ಮಾಡುವವ ವಿಘ್ನೇಶ್ವರ, ಪರ್ವತ ರಾಜನ ಮಗಳು ಪಾರ್ವತಿಯನ್ನು ಮದುವೆಯಾದನು ಪರಮೇಶ್ವರ ನನಗೆ.................ಪಾದವೇ ಕಾಶೀ ರಾಮೇಶ್ವರ

೪೨. ಸೂರ್ಯ-ಚಂದ್ರನಿಂದಲೇ ಲೋಕಕ್ಕೆ ಆರೋಗ್ಯ................ರಿಂದಲೇ ಸಕಲ ಸೌಭಾಗ್ಯ

೪೩. ರೂಪದಲ್ಲಿ ಮನ್ಮಥರು, ವಿನಯದಲ್ಲಿ ಶೀಲರು ದಯಾ ಗುಣದಲ್ಲಿ ತೀರ್ಥರು............ ....ನನ್ನ ಪ್ರೇಮದ ಮಂದಿರದ ಸಂಭಾವಿತರು.

೪೪. ಆಕಾಶದಲ್ಲಿರುವುದು ನಕ್ಷತ್ರಗಳ ರಾಶಿ ಹಿಂದುಗಳಿಗೆ ಪವಿತ್ರ ಕಾಶೀ ನಾನಾದೇ ....ರ ಚರಣದಾಸಿ

೪೫. ಶ್ರೀಕೃಷ್ಣ ಹುಟ್ಟಿದ್ದು ಗೋಕುಲದಲ್ಲಿ, ಬೆಳೆದದ್ದು ಮಥುರೆಯಲ್ಲಿ.................... ಹೆಸರು ಹೇಳುವೆನು ಮದುವೆ ಮಂಟಪದಲ್ಲಿ.

೪೬. ಸಿರಸಂಗಿಯ ಲಿಂಗರಾಜರು ಮಾಡಿದರು ಅನ್ನದಾನ ನನ್ನ ತವರೂರವರು ಮಾಡಿದರು.................ಕನ್ಯಾದಾನ

೪೭. ಹಾದ್ಯಾಗ ಇರುವುದು ಹಾಲಕ್ಕಿ ಹಾವೇರ್‍ಯಾಗ ಇರುವುದು ಯಾಲಕ್ಕಿ............ ಕೊಡುವೆನು ಚಹ ಅವಲಕ್ಕಿ.

೪೮. ಸೀತಾ ಸ್ವಯಂವರದಲ್ಲಿ ಶ್ರೀರಾಮನು ಮುರಿದದ್ದು ಧನಸ್ಸು...............ಹೆಸರು ಹೇಳುವನು ಇತ್ತ ಇಡಿರಿ ನಿಮ್ಮ ಮನಸ್ಸು

೪೯. ಶಿವನಿಗೆ ಗಂಗೆ ಬೇಕು, ಶೈವರಿಗೆ ಲಿಂಗ ಬೇಕು, ಆಪ್ತರಿಗೆ ಹಂಗುಬೇಕು ನಮ್ಮ................ರ ಬೆರಳಿಗೆ ಉಂಗುರಬೇಕು.

೫೦. ಅಶನಕ್ಕೆ ಹರಿಯದೆ, ವ್ಯಸನಕ್ಕೆ ಕುಡಿಯದೆ, ಆಸನಾಕ್ಷ ನುಡಿಗಳನ್ನು ಹಸನಾಗಿ ನೆನೆಯುತ್ತ ಸಿಶೀಲರಾಗಿದ್ದಾರೆ, ನಮ್ಮ......................ವರು.

೫೧. ಪರರನ್ನು ನಿಂದಿಸುವುದಿಲ್ಲ ಗುರುವಿಲ್ಲದೆ ನಡೆಯುವುದಿಲ್ಲ, ಪರನಾರಿಯರನ್ನು ಕಣ್ಣೆತ್ತಿ ನೋಡುವುದಿಲ್ಲ ನಮ್ಮ..................ವರು

೫೨. ವಿಚಾರಗೇಡಿಗಳ ಸಭೆಗೆ ಹೋಗಬಾರದು, ಆಚಾರಹೀನರ ಮನೆಯಲ್ಲಿ ಊಟ ಮಾಡಮಾಡಬಾರದು, ಯೋಚಿಸಿ ಹೇಳಿದ ನಮ್ಮ...................ವರ ಮಾತು ಮೀರಬಾರದು.

೫೩. ವಿಲಾಸಗಾರರಿಗೆ ಹಣದ ಮಹತ್ವವಿಲ್ಲ, ಆಲಸಿಗಳಿಗೆ ಮಳೆಯ ಮಹತ್ವ ವಿಲ್ಲ, ಕೆಲಸ ಮಾಡುವಾಗ ನಮ್ಮ................ರಿಗೆ ಶ್ರಮದ ಮಹತ್ವವಿಲ್ಲ.

೫೪. ಬಲ್ಲವರಿಗೆ ಬಿಲ್ಲಾಗಿ ಮಣಿಯುತಾರೆ, ಎಲ್ಲರಿಗೂ ಬೇಕಾಗುತ್ತಾರೆ. ಸಲ್ಲುವ ವಸ್ತ್ರಾಭರಣಗಳಿಂದ ಎಲ್ಲರನ್ನು ಸತ್ಕರಿಸುತ್ತಾರೆ.................ಅವರು

೫೫. ಒಂಕೆ ತೋಳಿಗೆ ಚೆಂದ, ಬಿಂಕು ಬೀಗುವ ಬೀಗರಿಗೆ ಚೆಂದ, ನಮ್ಮ............ ವರಿಗೆ ನಾನು ಹಚ್ಚುವ ಕುಂಕುಮ ಚೆಂದ

೫೬. ಗುಡಿ ಗುಂಡಾರಗಳ ಊರು, ಲಕ್ಕುಂಡಿ ಬೆಳಗಾವಿ ಜಿಲ್ಲೆಯಲ್ಲಿ ಇರುವುದು ಗೋಕಾಕ...............ರಿಗೆ ಪ್ರೀತಿಯಿಂದ ಕೊಡುವನು ರವೆ ಉಂಡಿ.

೫೭. ಸಖಿಯರೆಲ್ಲ ಹೋದರು, ಶಕುಂತಲೆಯ ಹಿಂದೆ...............ರ ಹೆಸರು ಹೇಳುವೆನು ತಮ್ಮೆಲ್ಲರ ಮುಂದೆ

೫೮. ಸಿದ್ಧಾರೂಢರ ಮಠದಲ್ಲಿರುವುದು ಶಾಂತಿ............ರ ಮುಖದ ಮೇಲಿರುವುದು ಕಾಂತಿ.

೫೯. ಆನೆಗೆ ಅಂಕುಶ ಮೇಲು, ಸೂರ್ಯನಿಗೆ ಕಿರಣ ಮೇಲು, ಭೂಮಿಗೆ ಆಕಾಶ ಮೇಲು ದಾನಪ್ಪದಾನ ಮೇಲು ನನಗೆ............ಪಾದಸೇವೆಯೇ ಮೇಲು

೬೦. ಹುಬ್ಬಳ್ಳಿಯಲ್ಲಿರುವುದು ಮೂರುಸಾಮಿಯ ಮಠ, ಧಾರವಾಡದಲ್ಲಿರುವುದು ಮುರುಘಾ ಮಠ ನಮ್ಮವರು ಮಾಡುವರು ಬಹಳ ಹಠ.

೬೧. ಕೊಲ್ಹಾಪುರ ಮಹಾಲಕ್ಷ್ಮೀ ಮಂದಿರದಲ್ಲಿರುವುದು ಬಂಗಾರ ತೋರಣ........... ಹೆಸರು ಹೇಳುವೆನು ಆರತಿ ಮಾಡಿದ ಕಾರಣ.

೬೨. ಮಳೆ ಬಂದರೆ ಆಗುವುದು ಹಸಿ, ಪೆನ್ನಿನಲ್ಲಿರುವುದು ಮಸಿ..............ಹೆಸರು ಹೇಳುವೆನು.............ರ ಸೋಸಿ

೬೩. ಮಹಾತ್ಮಗಾಂಧಿ ಅವರು ಭಾರತದ ಪುಣ್ಯಮೂರ್ತಿ ನನ್ನ ತವರೂರವರು.................. ರಿಗೆ ಕೊಟ್ಟು ಪಡೆದದು ಕೀರ್ತಿ.

೬೪. ಹಣೇಬರಹ ತಿದ್ದೋದು ಹಡೆದವ್ವನಿಗೂ ಆಗದು, ಗುಣಗೇಡಿಗೆ ತಿದ್ದೂದು ಬ್ರಹ್ಮನಿಗೂ ಆಗದು, ಒಣಹಾಲಿನ ನಮ್ಮ.................ರನ್ನು ತಿದ್ದುವುದು ಯಾರಿಂದಲೂ ಆಗದು.

೬೫. ವಿಘ್ನೇಶ್ವರನ ಪೂಜೆ ಮಾಡುವುದು, ವಿಘ್ನನಾಶಕ್ಕಾಗಿ ನನ್ನ ಪತಿ.........ಯವರ ಪೂಜೆ ಮಾಡುವುದು ಮಾಂಗಲ್ಯ ಭಾಗ್ಯಕ್ಕಾಗಿ.

೬೬. ಪಾರ್ವತಿಗೆ ಶಿವನು ಶೋಭೆ, ಹಸಿರು ಭೂಮಿಗೆ ಶೋಭೆ..........................ಯವರಿಗೆ ನಾನು ಶೋಭೆ.

೬೭. ಲಕ್ಷ್ಮೀ ಇರುವುದು ಕಮಲದಲ್ಲಿ ಕಮಲ ಇರುವುದು ಸರೋವರದಲ್ಲಿ.......................... ತೇಜವಿರುವುದು ನನ್ನ ಕುಂಕಮದಲ್ಲಿ.

೬೮. ನೀರಿನಿಂದ ಗಿಡ ಬೆಳೆಯಿತು. ಜನರಿಂದ ಊರು ಬೆಳೆಯಿತು. ಧಾರೆಯಿಂದ ಲಗ್ನವಾಯಿತು..........................ರಿಂದ ಜನ್ಮ ಪಾವನವಾಯಿತು.

೬೯. ಬಸವಣ್ಣನವರು ಮಾಡಿದ್ದು ಧರ್ಮೋದ್ಧಾರ ಗಾಂಧೀಜಿಯವರು ಮಾಡಿದ್ದು ಸಮಾಜೋದ್ಧಾರ.................ರಿಂದ ನನ್ನ ಬಾಳಿನ ಉದ್ಧಾರ.

೭೦. ವಿದ್ಯಾರಣ್ಯರಿಂದ ವಿಜಯನಗರ ಸಾಮ್ರಾಜ್ಯ....................ರಿಂದ ನನ್ನ ಬಾಳಿನ ಸ್ವರಾಜ್ಯ.

೭೧. ರಘು ಕುಲಕ್ಕೆ ಶ್ರೀರಾಮ, ಯದುಕುಲಕ್ಕೆ ಘನಶಾಮ ನಾ ಹೇಳುವೇ...........ರ ಪ್ರಿಯ ನಾಮ.

೭೨. ಆಕಾಶದಲ್ಲಿ ಹೊಳೆಯುವುದು ನಕ್ಷತ್ರ, ಬೀಗತನದಲ್ಲಿ ವಿಚಾರಿಸುವುದು ಕುಲಗೋತ್ರ....................ರು ಕಟ್ಟಿದರು ನನಗೆ ಮಂಗಳ ಸೂತ್ರ.

೭೩. ಪರಮೇಶ್ವರನ ಪತ್ನಿ ಪಾರ್ವತಿ, ಬ್ರಹ್ಮನ ಸತಿ ಸರಸ್ವತಿ.........................ರೇ
ನನ ಗಾಗಬೇಕು ಜನ್ಮ ಜನ್ಮಕೂ ನನ್ನ ಪತಿ.

೭೪. ಬಸವಣ್ಣನವರು ಹುಟ್ಟಿದ್ದು ಬಾಗೇವಾಡಿಯಲ್ಲಿ ಅಕ್ಕಮಹಾದೇವಿಯು ಹುಟ್ಟಿದ್ದು
ಉಡುತಡಿಯಲ್ಲಿ..................ಹೆಸರು ಹೇಳುವನು ಆರತಿಯ ಸಮಯದಲ್ಲಿ

೭೫. ಸಿರಸಂಗಿಯ ಲಿಂಗರಾಜರು ಮಾಡಿದರು, ಅನ್ನದಾನ, ಗುರುಗಳು ಮಾಡಿದರು
ವಿದ್ಯದಾನ, ನನ್ನ ತವರುವರು..................ರಿಗೆ ಕನ್ಯಾದಾನ

೭೬. ಲಿಂಗಾಯತರು ಹಾಕುವುದು ಶಿವದಾರ, ಬ್ರಾಹ್ಮಣರು ಹಾಕುವುದು
ಜನಿವಾರ ನಮ್ಮ..............ರು ಇರುವರು ಹವಲ್ದಾರ

೭೭. ಬ್ರಹ್ಮನ ಮಡದಿ ಸರಸ್ವತಿ, ಹರಿಶ್ಚಂದ್ರನ ಮಡದಿ ಚಂದ್ರಮತಿ, ಪಾಂಡವರ
ಮಡದಿ ದ್ರೌಪತಿ, ಸತ್ಯವಾನನ ಮಡದಿ ಸಾವಿತ್ರಿ...............ರಿಗೆ ನಾನಾದೇ
ನಲುಮೆಯ ಸತಿ.

೭೮. ಅಂಗಕ್ಕೆ ಲಿಂಗ ಶ್ರೇಷ್ಠ
ಲಿಂಗಕ್ಕೆ ಜಂಗಮ ಶ್ರೇಷ್ಠ
............ರು ನನಗೆ ಶ್ರೇಷ್ಠ

೭೯. ಕೈಯಾಗ ಹತ್ತರ ನೋಟ
ಕಾಲಾಗ ಕಪ್ಪರ ಬೂಟ
ಕಾರನ್ಯಾಗ್ ಕುತ್ತ ಕರ‍್ಯಾಕ್ ಬರ‍್ತಾನ...............

೮೦. ಶಿವಶಿವ ನಮ್ಮ ಅತ್ತಿ
ಶಿವಬತ್ತಿ ನಮ್ಮ ಮಾವ
ಮಜಕೂರ ನಮ್ಮ ಮೈದ್ನ
ನಿಜಕೂರ ನಮ್ಮ ನೆಗ್ಯಾನಿ
ಸತ್ಯಭಾಮಾ ನಮ್ಮ ಸವತಿ
ರುಕ್ಮಿಣಿ ನನ್ನ ಗೆಳತಿ
ಪಾತರಗಿತ್ತಿ ಕರಕೊಂಡ ಪರಾಳ ಮಾಡತಾನ............

೮೧. ವನವನನಾರಿ
ವನ ಸಿಂಗನಾರಿ
ವನದಾಗ ಇರುವುದು ಗರುಡಪಕ್ಷಿ
ಅವ್ವ ಇಂತವರ ಮಗಳ ಬಂದಿನಿ
ಕಟ್ಟಿನ ಗೌರಿ ಬಂದಿನಿ

ಕಮಲದ ಹೂವ ತಂದೀನಿ
ಎಡಕ್ಕೆ ಎಣ್ಣೆಯ ದೀವಿಗೆ
ಬಲಕ್ಕೆ ತುಪ್ಪದ ದೀವಿಗೆ
ಶಿವಗದಿಮೇಲಕುತ್ತ ಶಿವಪೂಜೆ ಮಡ್ಕೊತ್ತಾರ.........

೮೨. ದೇವದೇವರದವರು
ದೇವಲೋಕದವರು
೫ ಮಂದಿ ಮುತ್ತೈದೆಯರು
ಸೆರಗ ಹಿಡಿದು ಕೇಳುವಾಗ
ನಮ್ಮ ರಾಯರ ಹೆಸರು ನಾವೇನು ಬಲ್ಲೇವು

೮೩. ಹಡೆದಂತ ತಾಯಿ ಹಿಡಿದುಕೊಡುವಾಗ
ಬ್ರಹ್ಮದೇವರು ಬ್ರಹ್ಮಗಂಟು ಹಾಕಿ
ಮಡಿಯನ್ನು ಧರಿಸಿ...............ರವರ ಹೆಸರು ಹೇಳುತ್ತೇನೆಮಂಗಲಧರಿಸಿ

೮೪. ಅಕ್ಕಮಹಾದೇವಿಯು ಚಿಕ್ಕಂದಿನಲ್ಲಿ ಕಳೆದದ್ದು ವೈರಾಗ್ಯ
................ರಿಂದ ನನಗೆ ಸಕಲ ಸೌಭಾಗ್ಯ

೮೫. ಆಕಾಶಕ್ಕೆ ಚಂದಿರ ಭೂಷಣ
ನಮ್ಮವರು ನನಗೆ ಭೂಷಣ

೮೬. ಆರತಿಯ ಮೇಲೆ ಇರುವುದು ತಂದೆ-ತಾಯಿಯರ ಹೆಸರು
ಬಿಂದಿಗೆಯ ಮೇಲೆ ಇರುವುದು ಅತ್ತೆ-ಮಾವಂದಿರ ಹೆಸರು
ಮಾಂಗಲ್ಯದ ಮೇಲೆ ಇರುವುದು..............

೮೭. ಹೇಳಲಿಕೆ ಹೆಸರು ಚಂದ
ಕೇಲಲಿಕೆ ಕಥೆ ಚೆಂದ
ರಾಮನಿಗೆ ಸೀತಾ ಚೆಂದ
ನಮ್ಮವರಿಗೆ ನಾನೇ ಚೆಂದ

೮೮. ಸತ್ತಗಂಡನ ಮತ್ತೆ ಪಡೆದಳು ಸತ್ಯಸಾವಿತ್ರಿ
..............ರವರ ಹೆಸರು ಹೇಳುವೆನು............ರವರ ಪುತ್ರಿ

೮೯. ಅಂಗೈಯಾಗ ಅರಗಿಣಿ
ಮುಂಗೈಯಾಗ ಮೂರಗಿಣಿ
ಪಲ್ಲಕ್ಕಿಯಾಗ ಕುಂತ ಪಗಡಿಯಾಡತ್ತಾನ.

೯೦. ಅಡಕಿ ತಿಂದಾವ್ರ ಖಡತ ಆಗ್ಯಾರ

ಲವಂಗ ತಿಂದಾವ್ರ ಲಾಲ್ ಆಗ್ಯಾರ
ಚೌಕಿ ಮನಿಮ್ಯಾಗ ಕುತ್ತ ಚೌಕಾಶಿಮಾಡ್ತಾನ.

೯೧. ಸೆರಗಿನ ಸಿಂಬಿ ಅರಗಿನ ಕೊಡ
ದಾರಿಬೀಡ ಅಂದ್ರ ಮಾರಿ ನೋಡ್ತಾನ.........

೯೨. ಹತ್ತು ಬಟ್ಟಿಗಿ ಹತ್ತುಂಗರ
ನಡುವಿನ ಬಟ್ಟಿಗೆ ಸುತ್ತುಂಗರ
ಹತ್ತ ಮಂದ್ಯಾಗ ಕುತ್ತ ನ್ಯಾಯ ಹರಸತಾನ..............

೯೩. ಸರಸ್ವತಿ ಪೂಜೆ ಮಾಡುವುದು ವಿದ್ಯೆಗಾಗಿ
ಲಕ್ಷ್ಮೀ ಪೂಜೆ ಮಾಡುವುದು ಭಾಗ್ಯಕ್ಕಾಗಿ
ರಾಯರ ಪೂಜೆ ಮಾಡುವುದು ಪತಿವ್ರತದರ್ಮಕ್ಕಾಗಿ

೯೪. ದೀಪ ಉರಿಯುವುದು ಎಣ್ಣೆ ಇರುವ ತನಕ
..................ರವರ ಹೆಸರು ಹೇಳುತ್ತೇನೆ
ನನ್ನ ಉಸಿರು ಇರುವ ತನಕ.

೯೫. ಬೆಳ್ಳಿ ಟೇಬಲ ಬಂಗಾರ ಕುರ್ಚಿ
ಬಂಗ್ಲೆದಾಗ ಕುತ್ತ ಇಂಗ್ಲೀಷ ಓದತ್ತಾರ...........

೯೬. ಬಂಗಾರ ಅಂಗಿ ಬಳಚೂರ ಕಿಸೆ
ಅಂಗಳದಾಗ ನಿಂತ ತಂಗಿನ ಕರಿತಾನ................

೯೭. ಸೈನ ಅಂಗಿ ತೊಟ್ಟಾರು
ಸಡಕಿನ ಹಾದಿ ಹಿಡಿದಾರು
ಬಕ್ತಿಯಿಂದ ಬಸದಿಗೆ ಹೋಗ್ತಾರ............

೯೮. ಬಡತನವಿರಲಿ, ಭಾಗ್ಯವಿರಲಿ
ಕುಂಕುಮಕ್ಕೆ ಸೌಭಾಗ್ಯವಿರಲಿ
...........ಕಟ್ಟಿದ ತಾಳಿ ಕಡೆತನಕವಿರಲಿ.

೯೯. ಸರೋವರದಲ್ಲಿ ಶಂಕರನು ಶಿಶುವಾಗಿ ಬೆಳೆದದ್ದು
ಪಾರ್ವತಿಯ ಸಲುವಾಗಿ
ತಂದೆಯವರ ಮನೆಯಲ್ಲಿ ಬೆಳೆದದ್ದು
..................ರವರ ಸಲುವಾಗಿ

೧೦೦. ಕಷ್ಟ ಬಂದರೆ ಮನಸ್ಸು ಕಲ್ಲು ಮಾಡಬೇಕು
ಬೆಟ್ಟ ಬಂದರೆ ಮನಸು ಬೆಲ್ಲವಾಗಬೇಕು

ಮನದೊಳಗೆ ಮನಸ್ಸು ಮಲ್ಲಿಗೆಯಾಗಬೇಕು
.........ರವರ ಸೇವೆಗೆ ಮನಸ್ಸು ಹೊಂದಿರಬೇಕು.

೧೦೧. ಆಲದ ಎಲೆಯ ಮೇಲೆ ಶ್ರೀಕೃಷ್ಣ ಮಲಗಿದ್ದು ಬಲು ಚಮತ್ಕಾರ
ರಾಯರ ಹೆಸರು ಹೇಳುವೆನು ಎಲ್ಲರಿಗೂ ನಮಸ್ಕಾರ

೧೦೨. ಅರಗಿಣಕೊಡ, ಸೆರಗಿನ ಸಿಂಬೆ
ಶೀಲವಂತರ ಮಗಳು ಸೀತಾದೇವಿ
ದಾರಿ ಬೀಡ ಅಂದ್ರ ಮಾರಿ ನೋಡ್ತಾನ

೧೦೩. ಕೋಗಿಲೆ ಕೂಗುವುದು ಕುಹೂ ಕುಹೂ
ಮಗು ಕೂಗುವುದು ಅಮ್ಮಾ ಎಂದು.
ರಾಯರು ಕೂಗುವುದು ....ಎಂದು

೧೦೪. ಕಡಲಿರುವುದು ನೀರಿಗಾಗಿ
ಕವಿ ಇರುವುದು ಕವಿತೆಗಾಗಿ
ನಾನಿರುವುದು ನಮ್ಮ ಯಜಮಾನರಿಗಾಗಿ

೧೦೫. ಹವೆಯ ಗುಣ ಹಾವು ಬಲ್ಲದು
ವೇಳೆಯ ಗುಣ ಕೋಳಿ ಬಲ್ಲದು
ಸಕ್ಕರೆ ಗುಣ ಇರುವೆ ಬಲ್ಲದು

೧೦೬. ಕಬ್ಬು ಬೆಳೆಯುವುದು ಕರಿಮಣ್ಣಿನಲ್ಲಿ
ವಿದ್ಯೆ ಇರುವುದು ಬುದ್ಧಿವಂತರಲ್ಲಿ
ನಿದ್ದೆ ಇರುವುದು ದರಿದ್ರರಲ್ಲಿ

೧೦೭. ಹಾವಿಗೆ ಹೆಡೆ ಚೆಂದ
ಮೂಗಿಗಿ ಮೂಗುತಿ ಚೆಂದ
ಹೆಣ್ಣಿನ ಕೊರಳಿಗೆ ಮಾಂಗಲ್ಯ ಚೆಂದ
ನಮ್ಮ ಕಣ್ಣಪ್ಪನ ಭಕ್ತಿಯೇ ಚಂದ

೧೦೮. ರಾಶಿ ಮೊರದಲ್ಲಿ ಶ್ರೀಕೃಷ್ಣದೇವರ ಕದ್ದಿದ್ದು ಬೆಣ್ಣೆ
................ಅವರು ಹಚ್ಚಿಕೊಳ್ಳುವುದು ಸುವ್ವಾಸದೆಣ್ಣೆ

೧೦೯. ಮಿರಿಮಿರಿ ಮಿಂಚುವುದು ನಾಗರ ಹೆಡಿ
ನಾವು ಉಟ್ಟಿದ್ದು ಪೀತಾಂಬರ ಮಡಿ
...........ಅವರ ಕಾಂಗ್ರೆಸಿಗರ ನುಡಿ

೧೧೦. ಕಂಟರಬಿ ಸಾಲಗಟ್ಟಿರಲಿ, ಹುಬ್ಬಳ್ಳಿಕ್ಕಿನ ಇಟ್ಟಿರಲಿ

ಧಾರವಾಡದಕ್ಕಿನ ಬಿಟ್ಟಿರಲಿ ನನಮ್ಯಾಲೆ ಮನಸ ಇಟ್ಟಿರಲಿ

೧೧೧. ಗುಂಡ ಹೂ ಗುಲಾಲ ಹೂ ಚಂಡ ಹೂ ಚಲ್ಲಾಟ ಹೂ

ಗಂಡ ಮಗನ ಬೇಡಿ ಚೆಂಡ ಚೆತ್ತಾಸ ಹಾರಿಸರದೇವರಿಗಿ............

೧೧೨. ಅರಿಷಿಣ ಪತ್ತಲ ಅರವತ್ತ ನಿರಿಗಿ ಅರಸನ ಮಗಳ

ಆರತಿ ತೊಗೊಂಡು ಬರತಾಳ ದಾರಿ ಬಿಡಂದರ ಮಾರಿ

ನೋಡತಾಳ

೧೧೩. ತೆಳ್ಳನರೊಟ್ಟಿ ಬೆಳ್ಳನ್ನ ಮಸರ, ನೆಳ್ಳಾಗ ಕುತ್ತ ನ್ಯಾರಿ ಮಾಡತಾರ................

೧೧೪. ಬಟಾಟಿ ಬಜಿ, ಸಣ್ಣಕ್ಕಿ ಪಾಣಿ, ರಾಣಿ...............

ಚೈನಿ

೧೧೫. ಹತ್ತು ಬಳ್ಳಾಗ ಹತ್ತುಂಗರ ನಡುವಿನ ಬಳ್ಳಾಗ ಸುತ್ತುಂಗರ

ಹತ್ತ ಮಂದ್ಯಾಗ ಕುತ್ತ ಹೌಂದ ಅನಸಗೊತಾರ

೧೧೬. ಅಡವಿಯಲ್ಲಿ ವನ ಚಂದ, ಮನೆಯಲ್ಲಿ ಮಗ ಚೆಂದ

೧೧೭. ಹಣೆಗೆ ಕುಂಕುಮ ಚೆಂದ

ಮೂಗಿಗೆ ಮೂಗುತಿ ಚೆಂದ

ಕೊರಳಿಗೆ ಮಾಂಗಲ್ಯ ಚೆಂದ

ಕೈಗೆ ಬಳೆಯೇ ಚೆಂದ

ಕಾಲಿಗೆ ಕಾಲುಂಗರ ಚೆಂದ

ನಮ್ಮ ರಾಯರ ಮಾತಿಗೆ ನಾನೆ ಚೆಂದ

೧೧೮. ಹಾಗಲ ಬಳ್ಳಿಗೆ ಹಂದರವೇ ಚೆಂದ

ದ್ರಾಕ್ಷಿಬಳ್ಳಿಗೆ ಗೋಣೆಯೆ ಚೆಂದ

ನಮ್ಮ ರಾಯರಿಗೆ ನಾವೇ ಚೆಂದ

೧೧೯. ಅಕ್ಕಿಗೆ ಅಗಳು ಹೆಚ್ಚು

ಚಪಾತಿಗೆ ಪದರು ಹೆಚ್ಚು

ನಮ್ಮ ರಾಯರಿಗೆ ನಾವೇ ಹೆಚ್ಚು

೧೨೦. ಚೈನಂಗಿ ನೈನಹಾದಿ ಭಕ್ತಿಯಿಂದ ಬಸವೇಶ್ವರನಿಗೆ

ಹೋಗುತ್ತಾರೆ.

೧೨೧. ಆಲದ ಬಲೆಯ ಮೇಲೆ ಕೃಷ್ಣ ಮಲಗಿದ್ದು ಬಲು

ಚಮತ್ಕಾರ

ನಮ್ಮ ರಾಯರ ಹೆಸರು ಹೇಳುತ್ತೇವೆ. ನಿಮ್ಮೆಲ್ಲರಿಗೂ

ನಮಸ್ಕಾರ

೧೨೨. ಸಾಲಗೀಡ ಸೀರೆಟಿಕಾಯಿ

ಮರಾಠಿ ಕಲಿತು ಮನಿಗೆ ಬರುತ್ತಾರೆ.

೧೨೩. ಆನೆಗೆ ಇರುವುದು ಸೊಂಡೆ

ಬಾಗಿಲಿಗೆ ಇರುವುದು ಕೊಂಡೆ

ನಮ್ಮ ರಾಯರ ಕೈಯಲ್ಲಿರುವುದು ಬೇಶನ್ ಉಂಡೆ

೧೨೪. ಅರಗೀಣ ಕೊಡ ಸೇರಗೀಣ ಸಿಂಬೆ

ಶೀಲವಂತಿಯ ಮಗಳು ಸೀತಾದೇವಿ

ದಾರಿಬೀಡು ಅಂದ್ರೆ ಮಾರಿ ನೋಡುತ್ತಾರೆ.

೧೨೫. ಅಂಗೈಯಲ್ಲಿ ಅರಗೀಣಿ, ಮುಂಗೈಯಲ್ಲಿ ಮುರುಗೀಣ

ಪಲ್ಲಕ್ಕಿಯೊಳಗೆ ಕುಳಿತು ಮಗನನ್ನು ಆಡಿಸುತ್ತಾರೆ.

೧೨೬. ಕಾಣೆಕಾಗದ ದೇಶೀಪುಸ್ತಕ ದೇಶಮ್ಯಾಗ ಹೋಗಿ

ಪಾಸಾಗಿಬರುತ್ತಾರೆ.

೧೨೭. ಕರಿಕೋಟು ಕಾಲಾಗಬೂಟ ಪ್ಯಾಟ್ಯಾಗ ನಿಂತ

ಪೋಟೋ ತಗಿಸಿಕೊಳ್ಳುತ್ತಾರೆ

೧೨೮. ವಿಜಾಪುರದಲ್ಲಿರುವುದು ಗೋಳಗುಮ್ಮಟ

ನಮ್ಮ ರಾಯರ ಜೇಬಿನಲ್ಲಿರುವುದು ಸಂಬರ ನೋಟ

೧೨೯. ಬಾದಾಮಿ ಬನಶಂಕರಿಯ ಮೂಗಿನಲ್ಲಿರುವುದು

ವಜ್ರದ ನಂತ್ತ

ನಮ್ಮ ರಾಯರ ಹೆಸರು ಹೇಳುತ್ತೆವ್ರು ಅಮೃತ ದತ್ತ.

೧೩೦. ಕೋಲ್ಹಾಪುರದ ಮಹಾಲಕ್ಷ್ಮಿ ಬಾಗಿಲಿಗಿರುವುದು ನಾನಾ

ತರದ ತೋರಣ

ನಮ್ಮ ರಾಯರ ಹೆಸರು ಹೇಳುತ್ತೇವ್ರು..........ಕಾರಣ

೧೩೧. ರಾಮನ ಪಕ್ಕದಲ್ಲಿರುವುದು ಸೀತೆ

ಈಶ್ವರನ ಪಕ್ಕದಲ್ಲಿರುವುದು ಪಾರ್ವತಿ

ನಮ್ಮವರ ಪಕ್ಕದಲ್ಲಿರುವುದು ನಾನು

೧೩೨. ಹಿತ್ತಾಳೆಯ ಕೊಡದ ಮೇಲೆಯಿರುವುದು ತಂದೆ

ತಾಯಿರ ಹೆಸರು

ಅರಿಸೀಣ ಸೀರೆಯ ಮೇಲಿರುವುದು ಅತ್ತೆ-ಮಾವನ

ಹೆಸರು

ಮಾಂಗಲ್ಯ ಸೂತ್ರದ ಮೇಲಿರುವುದು............ಅವರ

ಹೆಸರು

೧೩೩. ಗಿಳಿಯಿರುವುದು ಪಂಜರದಲ್ಲಿ

ಪಂಜರವಿರುವುದು ಅರಮನೆಯಲ್ಲಿ

ಅರಮನೆಯಿರುವುದು ಮೈಸೂರಿನಲ್ಲಿ

................ಅವರು ಇರುವುದು ನಮ್ಮ ಹೃದಯದಲ್ಲಿ

೧೩೪. ಅಂಗಳಕ್ಕೆ ರಂಗೋಲಿ ಚಂದ

ಆಕಾಶಕ್ಕೆ ಚುಕ್ಕಿಚೆಂದ

ನಮ್ಮ ರಾಯರಿಗೆ ನಾನೇ ಚೆಂದ

೧೩೫. ಉದುರು ಉಪ್ಪಿಟ

ಪದರ ಚಪಾತಿ

ಚೌಕಮಸಿಯ್ಯಾಗ ಕುಳಿತ ಚೌಕಾಸಿ ಮಾಡುತ್ತಾರೆ

೧೩೬. ಕಲ್ಲು ಕಲ್ಲಾಗಿ ಬಾ, ಕಲ್ಲು ಸಕ್ಕರೆಯಾಗಿ ಬಾ

.............ಅವರ ಮಗಳಾಗಿ ಬಾ............ಅವರ

ತಂಗೆಯಾಗಿ ಬಾ...................ಅವರ ಸೊಸೆಯಾಗಿ ಬಾ

..............ಅವರ ಪತ್ನಿಯಾಗಿ ಬಾ...........

೧೩೭. ಒಂದೂರ ಬಂದೂರು

ಎರಡೂರ ಎಡೂರ

ಮೂರೂರ ಮುತ್ತೂರು

ನಾಕುರ ಸಾಕುರ

ಐದೂರ ಸೈದೂರ

ಆರೂರ ಬೇರೂರ

ಏಳೂರ ಬಿಳ್ಳುರ

ಎಂಟೂರ ಗಂಟೂರ

ಒಂಬತ್ತೂರ ತುಂಬಿದೂರ

ಹತ್ತೂರ ಕಿತ್ತೂರ

ಕಿತ್ತೂರ ಕೋಟೆ ಮೇಲೆ ನಿಂತ ಮಗನನ್ನು ಆಡಿಸುತ್ತಾರೆ.

೧೩೮. ಮನಸ್ಸೆಂಬ ಮಂದಿರದಲ್ಲಿ
ಕನಸೆಂಬ ಸಾಗರದಲ್ಲಿ
ಪ್ರೀತಿಯೆಂಬ ಅಲೆಯಲ್ಲಿ
ಧ್ರುವತಾರೆ ಎಂಬ ನಕ್ಷತ್ರದಲ್ಲಿ
ಮಿನುಗುತಿಯೆ ನೀನು

೧೩೯. ಹಾಲು ಹಾಲಾದೆ ನೀರು ನೀರಾದೆ............................ಅವರ
ಮಗಳಾದೆ.............ಅವರ ಸೊಸೆಯಾದೆ.............
ಅವರ ಪತ್ನಿಯಾದೆ

೧೪೦. ಶಿವನ ಜಡೆಯಲ್ಲಿ ಸ್ಥಿರವಾಗಿ ನಿಂತಿರುವಳು
ಗಂಗೆ.........ಅವರ ಹೆಸರು ಹೇಳುತ್ತೇನೇ........
ಅವರ ತಂಗಿ

೧೪೧. ಶಾಲೆಯಲ್ಲಿ ಸರಸ್ವತಿ ಪುರಾಣದಲ್ಲಿ ಪಾರ್ವತಿ
ಪಲ್ಲಕ್ಕಿಯಲ್ಲಿ ಕುಳಿತು ಪಗಡೆ ಆಡುತ್ತಾರೆ..........

೧೪೨. ಸಾಲುಗಿಡ ಸರಂಡಿ ಕಾಯಿ ಮರಾಠಿಕಲಿತು ಮನೆಗೆ
ಬರುತ್ತಾರೆ...................

೧೪೩. ಗುಂಡು ಹೂ ಗುಲಾಬಿ ಹೂ ಗಂಡುಮಗನನ್ನು ತಗೊ
ಂದು ದಂಡವತ ಹಾಕುತ್ತಾರೆ..............

೧೪೪. ಹಾಗಲ ಬಳ್ಳಿಗೆ ಹಂದರ ಚೆಂದ ದ್ರಾಕ್ಷಿಬಣಕ್ಕೆ
ಗೊಂಚಲು ಚೆಂದ...........ಅವರಿಗೆ ನಾವು ಚೆಂದ

೧೪೫. ಬೆಳ್ಳಾನೆ ರೊಟ್ಟಿ ಬೆಳ್ಳಾನೆ ಮಸರಾ ಕಟಕೊಂಡು
ಹೋಗಂದ್ರ ಸಟಕೊಂಡ ಹೋಗತಾರ...........

೧೪೬. ಅಡಕಿ ತಿಂದಾವ್ರ ಕಡಕಬಾಳ, ಲಾವಂಗ ತಿಂದಾವ್ರ
ಕೆಂಪಬಾಳ ಶೀಲವಂತರ ಮಗಳ ಶೀತಾದೇವಿ
ದಾರಿ ಬೀಡಂದ್ರ ಮಾರಿ ನೋಡ್ತಾರ............

೧೪೭. ಜಾಲಿಕುಡಿ ಜಗ್ಗಿಹಿಡಿ, ಮುತ್ತಿನ ಕುದರಿ ಮುಂದ
ಅಣ್ಣಾ..............ಮನೆಗೆ ಹೆಣ್ಣು ಕೇಳಲಿಕ್ಕೆ ಬರುತ್ತಾರೆ.

ಪುರುಷರ ಒಡಪುಗಳು

೧. ಗೋಡ್ಮೇಲೆ ಕುತ್ಗಂತು

ಮಾಡ್ಲಿ ಬುಕ್ತಾಳು.........

೨. ಹಗ್ಗಲೊಡೆದರೆ
ಮಗ್ಗಲಿಗೆ ಬರುತಾಳು.......

೩. ಒಲೆಮುಂದೆ ಕುತ್ಗಂಡು
ಮೊಲೆ ನೋಡ್ಕೋತಾಳೆ.........

೪. ಉಂಗರು ಗೂದಲು
ಬಂಗಾರದ ಬೈತಲೆ
ಅಂಗಳದಾಗ ಕುತ್ಗಂಡು
ರಂಗೋಲಿ ಹಾಕ್ತಾಳು.........

೫. ಗಣಕೀಲಿ ಹೊಡೆದರೆ
ಕುಣುಕೋತ ಬರತಾಳ........

೬. ಅರಿಮ್ಯಾಲೆ ಅರಿ
ಉಳ್ಳಾಗಡ್ಡಿ ಪರಿ
ಹೆಸರು ಕೇಳೋರ
ಕುಂಡಿಮ್ಯಾಲೆ ಮೂರು ಬರಿ

೭. ನೆಲಕ್ಕೊದೋದು ಸೆಗಣಿ
ಗೋಡೆಗೊರಸೋದು ತಗಣಿ
ನನ್ನ ಹೆಂಣ್ತಿ ಹೆಸರು
ಕೇಳೋಕಿ ಬಲು ಹಗಣಿ (ಮಾವ ಸೊಸೆಗೆ ತಮಾಸೆಗೆ ಹೇಳುವುದು)

೮. ಮಂದಿ ಎದುರಿಗೆ ಬೈಸಿಕೋತಾಳು
ಒಳಗೋಗಿ ಬೈತಾಳು...........

೯. ನನ್ನ ಹೆಣ್ತಿ ಮನಿ ಅಡ್ಡ ಹೆಸರು ಜಾಲಿ (ಮುಳ್ಳುಗಿಡ)
ನನ್ನ ಹೆಣ್ತಿ ಅದಾಳು ಕಜ್ಜಾಲಿ (ಜಿಡ್ಡು ಮುಳ್ಳಿನ ಗಿಡ, ಜಗಳಗಂಟಿ)
ನನ ಜೊತೆಗಿದಾಳು ಜಾಲಿ..................(ಚೈನಿ)

ಹೀಗೆ ಈ ಭಾಗದಲ್ಲಿ ಜನತೆಯ ಬಾಯಲ್ಲಿ ಇಂದು ಜನಪದ ಸಾಹಿತ್ಯವು ಹಚ್ಚ ಹಸುರಾಗಿ ರಾರಾಜಿಸುತ್ತಿದೆ. ಎಂತ ವ್ಯಕ್ತಿಗಳನ್ನಾದರೂ ಮಂತ್ರ ಮುಗ್ಧರನ್ನಾಗಿ ಮಾಡುತ್ತಾರೆ. ಏಕೆಂದರೆ ಜನಪದ ಸಾಹಿತ್ಯವು ನಮ್ಮ ಭಾರತೀಯ ಸಂಸ್ಕೃತಿಯ ಪ್ರತಿಕವೂ ಹೌದು. ನಮ್ಮ ಉದಾತ್ತ ಸಂಸ್ಕೃತಿಯನ್ನು ಭಾವಿ ಪ್ರಜೆಗಳಿಗೆ ಬೋದಿಸುವುದರ ಜೊತೆಗೆ, ಸಂಸ್ಕೃತಿಯ ವಾಹಕವಾದ ನಮ್ಮ ಪೀಳಿಗೆಗೆ ತರಬೇತಿ ನೀಡಲು ಕೂಡಾ ಸಹಾಯಕವೆಂದು ಹೇಳಬಹುದು. ಇಂತಹ ಉತ್ತಮವಾದ ಸಾಹಿತ್ಯವನ್ನು ಸಂಸ್ಕರಿಸಿದಾಗ ಅದು ಮುಂದಿನ ಪೀಳಿಗೆಗೆ ಸುಲಭವಾಗಿ ಲಭ್ಯವಾಗಲು ಸಾಧ್ಯ. ಸಹಾಯಕ ಎಂದು ಹೇಳಬಹುದು. ಆದರೆ ಜನಪದ ಸಾಹಿತ್ಯ ಇಂತಹ ಆಧುನಿಕ ಕಾಲದಲ್ಲಿ ಇಂದು ಪ್ರತಿಯೊಬ್ಬರಿಗೆ ತಲುಪಬೇಕಾಗಿದೆ.

ಅಧ್ಯಾಯ ಒಂಬತ್ತು

ಸಮಾರೋಪ

ಅಧ್ಯಾಯ ಒಂಬತ್ತು

ಸಮಾರೋಪ

ಶಿಷ್ಟ ಸಂಸ್ಕೃತಿಯೊಂದು ದಟ್ಟವಾಗಿ ಬೆಳೆದ ಮೇಲೂ ಜನಪದ ಸಂಸ್ಕೃತಿಯು ಯಾವುದೇ ರೀತಿಯಲ್ಲಿ ಸೊರಗಿಲ್ಲ. ಬದಲಾಗಿ ಶಿಷ್ಟ ಸಂಸ್ಕೃತಿಯನ್ನು ಪೋಷಿಸುತ್ತಾ ತನ್ನ ಪ್ರಭಾವವನ್ನು ಉಳಿಸಿಕೊಂಡು ಬರುವಲ್ಲಿ ಯಾವ ಜನಪದವು ಹಿಂದೆ ಬಿದ್ದಿಲ್ಲ. ನಾಗರೀಕ ಸಂಸ್ಕೃತಿಗೆ ಮೂಲವಾದ ಬೇಟೆ, ಪಶುಪಾಲನೆ, ಕೃಷಿಯನ್ನು ನಂಬಿಕೊಂಡು ಬಂದ ಸಮುದಾಯಗಳು ಇಂದು ನಮ್ಮ ನಡುವೆ ಪ್ರದೇಶದಿಂದ ಪ್ರದೇಶಕ್ಕೆ ಸ್ಥಳಾಂತರಗೊಳ್ಳುತ್ತಾ ನಗರೀಕರಣಕ್ಕೆ ಎಡೆಮಾಡಿಕೊಟ್ಟಿದೆ. ಜೊತೆಗೆ ತಮ್ಮ ರೀತಿ ನೀತಿಗಳಲ್ಲಿ, ಆಚರಣೆಗಳಲ್ಲಿ, ಸಂಪ್ರದಾಯಗಳಲ್ಲಿ ಇಂದಿಗೂ ಆಳವಾಗಿ ಬೇರುಬಿಟ್ಟು ಬದುಕಿನೊಡನೆ ಅರ್ಥಪೂರ್ಣವಾದ ಸಂಬಂಧವನ್ನು ಇಟ್ಟುಕೊಂಡೇ ಯಾವುದೇ ಸಮುದಾಯವು ಮುಂದೆ ಸಾಗುತ್ತಿದೆ. ಅಂತೆಯೇ ಅಥಣಿ ಪರಿಸರದ ವಾಲ್ಮೀಕಿ ಸಮುದಾಯವನ್ನು ಕುರಿತು ಅಧ್ಯಯನಕ್ಕೆ ತೊಡಗಿದಾಗ ತಮ್ಮ ಮೂಲಸಂಸ್ಕೃತಿಯನ್ನು ಇಂದಿಗೂ ಒಂದಲ್ಲಾ ಒಂದು ರೀತಿಯಲ್ಲಿ ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದು. ಕೃಷಿ, ಪಶುಪಾಲನೆ, ಕುರಿಸಾಕಾಣಿಕೆ, ಬೇಟೆಯನ್ನು ಆಶ್ರಯಿಸಿದ್ದಂತಹ ಬೇಡ ಸಮುದಾಯ ಇಂದಿಗೂ ಅಂತಹ ನೆನಪುಗಳನ್ನು ತಂದುಕೊಡುವ ರೀತಿಯಲ್ಲಿ ಈ ಪರಿಸರದೊಳಗೆ ವಾಸಿಸಿಕೊಂಡು ಬಂದಿರುವುದನ್ನು ನೋಡುವುದರ ಜೊತೆಗೆ ಈ ಸಮುದಾಯದಲ್ಲಿ ಮೌಖಿಕ ಪರಂಪರೆ ಬಳಕೆಯಲ್ಲಿ ಇಲ್ಲದಿದ್ದರು ಆಚರಣೆಯ ಒಂದು ಭಾಗವಾಗಿ ಹಬ್ಬ-ಹರಿದಿನಗಳಲ್ಲಿ, ಬೇಟೆ, ಯುದ್ಧ, ಕಾವಲು ಇತ್ಯಾದಿ ಸಂದರ್ಭದಲ್ಲಿ ಬಳಸ ಬಹುದಾಂದತಹ ಪರಿಕರಗಳು, ಉಡುಗೆ-ತೊಡುಗೆಗಳು, ಆಹಾರ ಪದ್ಧತಿ, ಆಚರಣೆ ನಂಬಿಕೆಗಳ ಮೂಲಕ ಸಮಗ್ರ ಸಂಸ್ಕೃತಿಯನ್ನು ರಚಿಸಲು ಸಾಧ್ಯ.

ಅಂತೆಯೇ ಉತ್ತರ ಕರ್ನಾಟಕವು ಸಂಶೋಧನೆಯ ಕನ್ನೆಲ, ಅದರಲ್ಲೂ ಬೆಳಗಾವಿ ಜಿಲ್ಲೆ, ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕು ಅಧ್ಯಯನದಿಂದ ದೂರ ಉಳಿದಿದೆಯೆಂತಲೇ ಹೇಳಬಹುದು. ತಾಲೂಕಿನಲ್ಲಿ ಸಿಕ್ಕುವ ಶಾಸನ ಸಮೀಕ್ಷೆಯು ಅಸ್ಪಷ್ಟ. ಅವುಗಳ ಪ್ರಕಟಣೆಯಂತೂ ದೂರವೇ ಉಳಿದಿದೆ. ಹೀಗೆ ಅಧ್ಯಯನದಿಂದ ದೂರುಳಿದ ಅಥಣಿ ಪರಿಸರವು ಸಾಂಸ್ಕೃತಿಕ, ಐತಿಹಾಸಿಕ, ಶೈಕ್ಷಣಿಕ, ಸಾಹಿತ್ಯಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಮೊದಲಾದ ಕ್ಷೇತ್ರಗಳ ಚರಿತ್ರೆಯನ್ನು ಕಟ್ಟಿಕೊಡುತ್ತದೆ. ಆದರೆ ನಾನು ಅಥಣಿ ತಾಲೂಕಿನ ಒಂದು ಸಮುದಾಯವನ್ನಷ್ಟೆ ಪ್ರಮುಖವಾಗಿ ಗಮನದಲ್ಲಿಟ್ಟುಕೊಂಡು ಅದಕ್ಕೆ ಪೂರಕವಾಗಿ ಅಥಣಿಯ ಒಟ್ಟು ಪರಿಚಯವನ್ನು ಇಲ್ಲಿ ಮಾಡಲಾಗಿದೆ.

ಯಾವುದೇ ಒಂದು ಸಂಸ್ಕೃತಿಯು ಒಂದು ಗೊತ್ತಾದ ಸಮುದಾಯದ ಜೀವನ ಕ್ರಮವೇ ಆಗಿರುತ್ತದೆ. ಒಂದು ವ್ಯವಸ್ಥಿತ ರೀತಿಯಲ್ಲಿ ಆ ಜನತೆಯ ಬದುಕು ಹೊಂದಾಣಿಕೆ, ಹೊಣೆಗಾರಿಕೆ ಮತ್ತು ಆಯ್ಕೆಯನ್ನು ಸರಿಸಿ ನಡೆಯುತ್ತದೆ. ಒಂದು ಸಮುದಾಯದಲ್ಲಿ ಕಂಡುಬರುವ ಸಾಧನ, ಸಲಕರಣೆಗಳು, ಮನೆ-ಮಠಗಳು, ಉಡುಗೆ-ತೊಡುಗೆಗಳು, ಆಯಾ ಸಮುದಾಯದ ಅಮೂರ್ತವಾದ ಮಾನಸಿಕ ವ್ಯಾಪಾರಗಳು ಅವರನ್ನು ಒಂದುಗೂಡಿಸುವ ಸಾಧನಗಳಾಗಿರುತ್ತವೆ.

ಅವುಗಳು ಪರಸ್ಪರ ಕ್ರಿಯಾನ್ವಿತಗಳಾಗಿದ್ದು ಆಯಾ ಸಮುದಾಯದಲ್ಲಿ ಮುಂದುವರಿಯುತ್ತವೆ. ಆದ್ದರಿಂದ ಒಂದು ಸಮುದಾಯದ ಸಂಸ್ಕೃತಿ ಎನ್ನುವಾಗ ಅದರಲ್ಲಿ ಸಮಸ್ತವು ಅಡಗಿರುತ್ತದೆ. ಈ ಕುರಿತು ಸಾಂಸ್ಕೃತಿಕ ಮಾಹಿತಿಯನ್ನು ಕಲೆಹಾಕುವಾಗ ಸಹಜವಾಗಿಯೇ ಇತರೆ ಸಮುದಾಯದ ಸಂಸ್ಕೃತಿ, ಆಚಾರ-ವಿಚಾರ, ಅವರೊಡನೆ ಹೊಂದಾಣಿಕೆ ಎಲ್ಲವು ಮುಖ್ಯವಾಗುತ್ತವೆ. ಯಾವುದೇ ಒಂದು ಸಮುದಾಯವೆಂದರೆ ಸಹಜವಾಗಿಯೇ ಆ ಸಮುದಾಯ ವಾಸಿಸುವ ಸ್ಥಳಗಳ ಹಿನ್ನೆಲೆಯನ್ನು ನೋಡಬೇಕಾಗುತ್ತದೆ. ಕಾರಣ ಮಾನವ ಸಂಘಜೀವಿ. ಆತ ಒಂಟಿಯಾಗಿ ಬಾಳಲಾರ. ಕೊಡುಕೊಳಿಗೆ ಉತ್ತಮ ಉದಾಹರಣೆ ಆತ. ಈ ಹಿನ್ನೆಲೆಯಲ್ಲಿ ಸಾಧ್ಯವಾದಲ್ಲಿ ಅಥಣಿ ಪರಿಸರದ ಸಂಕ್ಷಿಪ್ತ ಪರಿಚಯ ಅವಶ್ಯವೆನಿಸಿ ಇಡೀ ಅಥಣಿ ಪರಿಸರದ ಮೇಲೆ ಕಿರುನೋಟ ಬೀರಲಾಗಿದೆ.

ಯಾವುದೇ ಸಮುದಾಯವು ಆಯಾ ಗ್ರಾಮಗಳನ್ನು ಹೊರತುಪಡಿಸಿ ಇರಲಿಕ್ಕಿಲ್ಲ. ಕಾರಣ ಇಡೀ ಗ್ರಾಮವು ತನ್ನ ಒಡಲೊಳಗೆ ಎಲ್ಲಾ ಸಂಸ್ಕೃತಿಯನ್ನು ಹುದುಗಿಸಿಕೊಂಡಿರುತ್ತದೆ. ಒಂದು ಸಮುದಾಯದ ಅಧ್ಯಯನ ಕೈಗೊಂಡಾಗ ತಾವಾಗಿಯೇ ಇನ್ನೊಂದು ಸಮುದಾಯದ ಸಂಸ್ಕೃತಿಯು ಅಲ್ಲಿ ಮುಖ್ಯವೆನಿಸಬಹುದು.

ಅಥಣಿ ಪರಿಸರದ ವಾಲ್ಮೀಕಿ ಸಮುದಾಯವು ವಾಸಿಸುವ ಗ್ರಾಮಗಳು ನಗರೀಕರಣದ ಪ್ರಭಾವಕ್ಕೆ ಇಂದು ಒಳಗಾಗುತ್ತಿದ್ದು, ಆಧುನಿಕ ಸಂಸ್ಕೃತಿಯನ್ನು ರೂಢಿಸಿಕೊಳ್ಳುತ್ತಿದ್ದರೂ ಅಷ್ಟಾಗಿ ಈ ಸಮುದಾಯ ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಮುಂದೆ ಬರಲು ಪ್ರಯತ್ನಿಸದಿರುವುದು ಕಂಡುಬರುತ್ತದೆ. ಈಗ ತಾನೆ ಆಧುನಿಕತೆಗೆ ತಮ್ಮನ್ನು ತಾವು ಒಗ್ಗಿಸಿಕೊಳ್ಳುವ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಅನುಕೂಲವಾಗುವಂತೆ ಒಟ್ಟಾರೆ ಪ್ರಬಂಧವನ್ನು ಒಂಬತ್ತು ಅಧ್ಯಾಯಗಳಾಗಿ ಮಾಡಿಕೊಂಡು ವಿಸ್ತರಿಸಲಾಗಿದೆ.

ಮೊದಲನೆ ಅಧ್ಯಾಯವು 'ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ' ಎಂದಿದೆ. ಇಲ್ಲಿ ಅಧ್ಯಯನಕ್ಕಾಗಿ ತೆಗೆದುಕೊಂಡ ವಿಷಯವಸ್ತು, ಅಧ್ಯಯನಕ್ಕೆ ಒಳಪಡುವ ಮಾಹಿತಿಯನ್ನು ಕುರಿತು ಖಚಿತವಾಗಿ ವಿವರಿಸಲಾಗಿದೆ. ಎರಡನೆ ಅಧ್ಯಾಯವು ಅಥಣಿಯ ಪರಿಚಯದಿಂದ ಕೂಡಿದ್ದು, ಈ ಪರಿಸರದ ಒಟ್ಟು ಪರಿಚಯ ಹಾಗೂ ಅಥಣಿ ಪರಿಸರದ ಭೌಗೋಳಿಕ ಹಿನ್ನೆಲೆ ಅಥಣಿಯ ಸ್ಥಳನಾಮ, ಪದನಿಷ್ಪತ್ತಿಯನ್ನು ಐತಿಹಾಸಿಕ ಹಿನ್ನಲೆ ಕುರಿತು ವಿವೇಚಿಸಲಾಗಿದೆ. ಹಾಗೆಯೇ ಈ ಪರಿಸರದಲ್ಲಿ ಕಂಡುಬರುವ ಒಟ್ಟಾರೆ

ಸಮುದಾಯಗಳು, ಆ ಸಮುದಾಯಗಳು ನಿರ್ವಹಿಸಿಕೊಂಡು ಬಂದಿರುವ ವೃತ್ತಿಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಅಥಣಿ ಪರಿಸರದ ಚಾರಿತ್ರಿಕ ಹಿನ್ನೆಲೆ ಮತ್ತು ಮಠಮಾನ್ಯಗಳ ಪರಂಪರೆಯನ್ನು ಗುರುತಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಅಥಣಿ ಪರಿಸರದ ವಾಲ್ಮೀಕಿ ಸಮುದಾಯದವರು ವಾಸಿಸುವ ಗ್ರಾಮಗಳ ಪರಿಚಯವನ್ನು ಮಾಡಿಕೊಡಲಾಗಿದೆ. ವಾಲ್ಮೀಕಿ ಸಮುದಾಯದ ಮೂಲ ಮತ್ತು ವಿಕಾಸವನ್ನು ಕುರಿತು ಸಾಹಿತ್ಯಾಧಾರಗಳು ಹಾಗು ಶಾಸನಾಧಾರಗಳ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ. ಈ ಸಮುದಾಯದ ಇತಿಹಾಸ ಪರಂಪರೆ ಕುರಿತು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಸಮುದಾಯದ ಆಚರಣೆಗಳ ಜೊತೆಗೆ ನಂಬಿಕೆ, ವಿಧಿ-ನಿಷೇಧ ಹಾಗೂ ಹರಕೆಗಳನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಶೈಕ್ಷಣಿಕ ಜೀವನವನ್ನು ಕುರಿತು ಚರ್ಚಿಸಲಾಗಿದೆ. ನ್ಯಾಯ ಪದ್ಧತಿ, ಆಹಾರ ಪದ್ಧತಿ ಮುಂತಾದವುಗಳನ್ನು ವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ. ಉಡುಗೆ-ತೊಡುಗೆ, ವಿವಾಹ ಪದ್ಧತಿ, ಕುಟುಂಬ ವ್ಯವಸ್ಥೆ, ಬಹಿಷ್ಕಾರ ಈ ಹಿನ್ನೆಲೆಯೊಂದಿಗೆ ಮುಖ್ಯವಾಗಿ ಈ ಅಧ್ಯಾಯವು ಇವರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹಿಂದುಳಿಯಲು ಕಾರಣಗಳೇನು? ಅವರ ಮೂಲ ಕಸುಬು, ಹಾಗೂ ಕೂಲಿನಾಲಿಯಿಂದ ಕೆಳಮಟ್ಟದಲ್ಲಿಯೇ ಇರುವುದು ಏಕೆ? ಹಾಗೂ ಇವರು ಏಕೆ ಇಷ್ಟರಮಟ್ಟಿಗೆ ಶಿಕ್ಷಣದಿಂದ ಹಿಂದುಳಿದಿದ್ದಾರೆ? ಎಂದು ಚರ್ಚಿಸಲಾಗಿದೆ. ರಾಜಕೀಯವಾಗಿ ಹಿಂದುಳುವಿಕೆಗೆ ಕಾರಣಗಳನ್ನು ವಿವರಿಸಲಾಗಿದೆ.

ಅಧ್ಯಾಯ ಆರರಲ್ಲಿ ವಿಶೇಷವಾಗಿ ಅಥಣಿ ಪರಿಸರದಲ್ಲಿ ಹಲವಾರು ಸಮುದಾಯಗಳು ಕಂಡುಬರುತ್ತಿದ್ದು ಈ ಎಲ್ಲಾ ಸಮುದಾಯಗಳ ಜೊತೆಗೆ ವಾಲ್ಮೀಕಿ ಸಮುದಾಯವು ಹೇಗೆ ಸಾಮರಸ್ಯದಿಂದ ಹೊಂದಿಕೊಂಡು ಬಂದಿದೆ ಎನ್ನುವುದನ್ನು ಚರ್ಚಿಸಲಾಗಿದೆ.

ಅಧ್ಯಾಯ ಏಳರಲ್ಲಿ ವಿಶೇಷವಾಗಿರುವ ಸಮುದಾಯದ ಕಲೆ, ಕಲಾವಿದರು, ಕ್ರೀಡೆಗಳನ್ನು ಕುರಿತು ವಿವೇಚಿಸಲಾಗಿದೆ.

ಅಧ್ಯಾಯ ಎಂಟರಲ್ಲಿ ವಾಲ್ಮೀಕಿ ಸಮುದಾಯದ ಜನಪದ ಸಾಹಿತ್ಯ ಕುರಿತಾದ ಜನಪದ ಹಾಡು, ಕಥೆ, ಕುಣಿತ, ಕಲೆ, ಒಗಟು, ಒಡಪು, ಗಾದೆ ಮುಂತಾದವುಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಈ ಜನಪದ ಸಾಹಿತ್ಯದಲ್ಲಿ ಅವರ ಜೀವನಕ್ಕೆ ಸಂಬಂಧಪಟ್ಟಂತೆ ಇರುವ ಅಂಶಗಳನ್ನು ಆರಿಸಿಕೊಳ್ಳಲಾಗಿದೆ.

ಒಂಬತ್ತನೆಯ ಅಧ್ಯಾಯವು ಸಮಾರೋಪವಾಗಿದ್ದು. ಪ್ರಬಂಧದ ಕೊನೆಯ ಭಾಗವಾಗಿದೆ. ಇಲ್ಲಿ ಅಧ್ಯಯನದುದ್ದಕ್ಕೂ ಕಂಡುಕೊಂಡ ಫಲಿತಗಳನ್ನು ಹಾಗೂ ಇನ್ನು ಏನೇನು ಕೆಲಸ ಆಗಬೇಕಿತ್ತು. ಆಗಬೇಕಾದುದು ಏನು ಎನ್ನುವ ವಿಷಯವನ್ನು ತಿಳಿಸಲಾಗಿದೆ.

ಅಧ್ಯಯನದಿಂದ ಕಂಡುಕೊಂಡ ಅಂಶಗಳು

೧. ಅಥಣಿ ನಗರವು ಪ್ರಾಚೀನ ಅಥೇನ್ಸ್ ಎಂದು ಕರೆಯಿಸಿಕೊಂಡಿದ್ದು, ವ್ಯವಹಾರದ ಕೇಂದ್ರವಾಗಿದ್ದಿತು.

೨. ಅದು ಇಂದು ಕೂಡ ತನ್ನ ವ್ಯವಹಾರವನ್ನು ನೆರೆಯ ರಾಜ್ಯವಾದ ಮಹಾರಾಷ್ಟ್ರದ ಸಾಂಗ್ಲಿ, ಮೀರಜ್ ಪಟ್ಟಣಗಳ ಜೊತೆಯಲ್ಲಿ ನಡೆಸುತ್ತಿದೆ.

೩. ಅಥಣಿ ಪರಿಸರದಲ್ಲಿ ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹೆಚ್ಚಿನ ಸಂಶೋಧನೆ ಆಗಬೇಕಾಗಿದೆ.

೪. ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ ಹಲವಾರು ಅಂಶಗಳು ಕಂಡು ಬರುತ್ತವೆ.

೫. ಪುರಾಣ ಮೂಲದ ಐತಿಹ್ಯಗಳು, ರಾಮಾಯಣದ ರಾಮ, ಸೀತೆಯರ ಕುರಿತಿರುವ ಐತಿಹ್ಯದ ಊರುಗಳು, ಹಾಗೆಯೇ ಮಹಾಭಾರತದ ಅರ್ಜುನನ ಹೆಸರನ್ನು ಹೇಳುವ ಪಾರ್ಥನಳ್ಳಿ ಐತಿಹ್ಯಗಳು ಮುಖ್ಯವಾದವುಗಳು

೬. ಈ ಪರಿಸರವು ಆಧುನಿಕತೆಯ ಕಡೆಗೆ ಮುಖಮಾಡಿದ್ದರೂ, ಇಲ್ಲಿ ಮೂಲ ಸಂಸ್ಕೃತಿಗೆ ಧಕ್ಕೆ ತರುವ ಕೆಲಸ ನಡೆಯುವುದಿಲ್ಲ. ಧಾರ್ಮಿಕ ಪರಂಪರೆ ಮುಂದುವರಿದುಕೊಂಡು ಬಂದಿದೆ.

೭. ಅಥಣಿಯ ಸುತ್ತಮುತ್ತಲೂ ಹಳ್ಳಿಗಳಲ್ಲಿ ನಡೆಯುವ ಜಾತ್ರೆಗಳು, ಉತ್ಸವಗಳು, ಹಬ್ಬ-ಹರಿದಿನಗಳು ಬಹಳಷ್ಟು ಅನ್ಯೋನ್ಯತೆಯಿಂದ ಕೂಡಿವೆ.

೮. ಬಹಳಷ್ಟು ಸಂಖ್ಯೆಯಲ್ಲಿ ವಿಭಕ್ತ ಕುಟುಂಬಗಳು ಕಂಡು ಬಂದರೂ ತಮ್ಮ ಅನುಕೂಲಕ್ಕಾಗಿ ವಿರಳವಾಗಿ ಅವಿಭಕ್ತ ಕುಟುಂಬಗಳು ಹುಟ್ಟಿಕೊಂಡಿವೆ.

೯. ಅಥಣಿಯಲ್ಲಿ ವಿಮೋಚನಾ ಸಂಸ್ಥೆಯನ್ನು ಹುಟ್ಟುಹಾಕಿ ಅನಿಷ್ಟ ಪದ್ಧತಿಯನ್ನು ನಿವಾರಿಸುವಲ್ಲಿ ಪ್ರಯತ್ನ ನಡೆದಿದೆ.

೧೦. ವಾಲ್ಮೀಕಿ ಸಮುದಾಯದಲ್ಲಿ ಯಾವ ಊರುಗಳಲ್ಲಿಯೂ ದೇವದಾಸಿ ಪದ್ದತಿಯು ಅಷ್ಟಾಗಿ ಕಂಡುಬಂದಿಲ್ಲ.

೧೧. ಅಥಣಿಯ ತಾಲೂಕು ವಿಶೇಷವಾಗಿ ಎರಡು ವಿಧಾನ ಸಭಾ ಮತಕ್ಷೇತ್ರ ಹೊಂದಿರುವುದಾಗಿದೆ. ೧. ಕಾಗವಾಡ ೨. ಅಥಣಿ

೧೨. ಸರಳ ವಿವಾಹ ಪದ್ಧತಿಯು ಎಲ್ಲೆಲ್ಲೂ ಕಂಡುಬರುತ್ತದೆ.

೧೩. ಐನಾಪುರದಲ್ಲಿ ಹಲವಾರು ಜೈನಧರ್ಮಕ್ಕೆ ಸಂಬಂಧಿಸಿದ ಶಾಸನಗಳು ದೊರೆತಿರುವುದನ್ನು ಕಾಣಬಹುದು.

೧೪. ಪ್ರತಿ ಊರುಗಳಲ್ಲಿಯೂ ಆಂಜನೇಯನ ದೇವಸ್ಥಾನಗಳಿವೆ.

೧೫. ಅಥಣಿಯ ಸಿದ್ದೇಶ್ವರ, ಶಿವಯೋಗಿ, ಅವರಖೋಡ ಆಂಜನೇಯ, ಮಂಗಸೂಳಿಯ ಮಲ್ಲಯ್ಯ, ಮುರುಗಂಡಿಯ ಸಿದ್ದೇಶ್ವರ, ಶೇಡಬಾಳದ ಬಸವಣ್ಣ, ಖಿಳೆಗಾಂವ್ ಬಸವಣ್ಣ, ಕೋಹಳ್ಳಿಯ ಸಂಗಮೇಶ್ವರ, ಐನಾಪುರದ ಸಿದ್ದೇಶ್ವರ ದೇವರುಗಳ ಜಾತ್ರೆಗಳು ಮತೀಯ ಸಾಮರಸ್ಯ ಹಾಗೂ ಭಾವೈಕ್ಯತೆಯನ್ನು ತೋರುವ ಕೇಂದ್ರಗಳಾಗಿವೆ.

೧೬. ಇಲ್ಲಿ ಹಲವಾರು ಜನ ಕಲಾವಿದರು, ಶಿಕ್ಷಣ ತಜ್ಞರು, ಜಟ್ಟಿಗಳು, ಸೋಬಾನೆ ಪದ ಹಾಡುವವರು, ಕಣಿವಾದನ ನುಡಿಸುವವರು, ಡೊಳ್ಳಿನ ಪದ ಹಾಡುವವರು, ಹರದೇಶಿ-ನಾಗೇಶಿ ಹಾಡು ಹಾಡುವವರು, ಕ್ರೀಡಾಪಟುಗಳು, ಸಾಹಿತಿಗಳು ಇದ್ದಾರೆ.

೧೭. ವಾಲ್ಮೀಕಿ ಸಮುದಾಯದವರಲ್ಲಿ ಶಿಕ್ಷಣದ ಕೊರತೆ ಎದ್ದುಕಾಣುತ್ತದೆ. ಅದರಲ್ಲೂ ವೃತ್ತಿಪರ ಶಿಕ್ಷಣದ ಕುರಿತು ಮಾಹಿತಿಯು ಇಲ್ಲವೇ ಇಲ್ಲ. ಕಾಲೇಜು ಹಂತಕ್ಕೆ ಬರುವುದರಲ್ಲಿಯೇ ಶಿಕ್ಷಣಕ್ಕೆ ಅಂತ್ಯ ಹಾಡುತ್ತಾರೆ.

೧೮. ಆರ್ಥಿಕವಾಗಿಯೂ ಬಹುತೇಕ ಕುಟುಂಬಗಳು ಹಿಂದುಳಿದಿವೆ.

೧೯. ಮೂಢನಂಬಿಕೆ, ಅಂಧಕಾರ, ಮನೆಮಾಡಿದೆ.

೨೦. ಕೀಳರಿಮೆಗೆ ಒಳಗಾಗಿರುತ್ತಾರೆ.

೨೧. ಕ್ಷೇತ್ರಕಾರ್ಯದ ಸಮಯದಲ್ಲಿ ಸಂದರ್ಶನ ಮಾಡಲು ಹೋದರೆ ಭಯಭೀತರಾಗಿರುವುದು ಕಂಡುಬರುತ್ತದೆ.

೨೨. ಇತರೆ ಸಮುದಾಯದವರಿಗೆ ಎಲ್ಲಿಲ್ಲದ ಗೌರವ ಕೊಡುವುದನ್ನು ಕಾಣಬಹುದು.

೨೩. ಧಾರ್ಮಿಕ ಆಚರಣೆಗಳಲ್ಲಿ ಹುಚ್ಚೆದ್ದು ಕುಣಿಯುವುದನ್ನು ಕಾಣುತ್ತೇವೆ.

೨೪. ಸರಕಾರಿ ಸೌಲಭ್ಯಗಳನ್ನು ಪಡೆಯುವಲ್ಲಿ ಹಿಂದುಳಿದಿದ್ದಾರೆ.

೨೫. ಬ್ಯಾಂಕು ವ್ಯವಹಾರದ ಬಗೆಗೆ ಬಹುತೇಕ ಹಳ್ಳಿಗಳಲ್ಲಿ ಇವರಿಗೆ ಗೊತ್ತೇ ಇಲ್ಲ. ಉಳಿತಾಯ ಯೋಜನೆಯ ಕುರಿತು ಮಾಹಿತಿ ಇಲ್ಲವೇ ಇಲ್ಲ.

೨೬. ಕೆಲವೆಡೆ ಮಹಿಳೆಯರೆ ತಮ್ಮ ಗಂಡಂದಿರಿಗೆ ಕುಡಿಯುವುದಕ್ಕೆ ಪ್ರೋತ್ಸಾಹಿಸುವುದನ್ನು ಕಾಣಬಹುದು.

೨೭. ಯಾರಾದರೂ ಹೊಲಗದ್ದೆಗಳಲ್ಲಿ ಕಳುವಾದರೆ ಈ ಸಮುದಾಯದವರೇ ಕದ್ದಿದ್ದಾರೆ ಎನ್ನುವ ಅಪವಾದಕ್ಕೆ ಗುರಿಯಾಗುವುದು ಸಹಜವಾದುದಾಗಿದೆ.

೨೮. ಈ ಸಮುದಾಯದವರ ಮನೆಗಳು ಊರಿನ ಆಚೆಗೆ ಇರುವುದನ್ನು ನೋಡಬಹುದು.

೨೯. ಇವರಿಗೆ ರಾಜಕೀಯ ಪ್ರಜ್ಞೆ ಇಲ್ಲ. ಬಹುಪಾಲು ಜನರು ತಮ್ಮ ಮತಗಳನ್ನು ದುಡ್ಡಿಗೆ, ಸರಾಯಿಗೆ ಮಾರಿಕೊಂಡು ಬಿಡುತ್ತಾರೆ.

೩೦. ರಾಜಕೀಯವಾಗಿ ಮೀಸಲಾತಿ ಅಡಿಯಲ್ಲಿ ಗ್ರಾಮಪಂಚಾಯ್ತಿ, ತಾಲೂಕು ಪಂಚಾಯ್ತಿ, ಜಿಲ್ಲಾಪಂಚಾಯ್ತಿಯಲ್ಲಿ ಕಾಲಿಟ್ಟಿದ್ದಾರೆಯೇ ವಿನಃ ಅದರ ಬಗೆಗೆ ಏನು ತಿಳಿದುಕೊಂಡಿಲ್ಲ. ಇವರ ಶಿಕ್ಷಣದ ಮಟ್ಟ ಮೆಟ್ರಿಕ್ ಪೂರ್ವದ್ದು.

೩೧. ಇವರಲ್ಲಿ ಸಂಘಟನೆಗಳು ಕಡಿಮೆ.

೩೨. ದೇಶಸೇವೆಯ ಮನೋಭಾವ ಎದ್ದು ಕಾಣುತ್ತದೆ. ಬಹಳಷ್ಟು ಯುವಕರು ದೇಶಸೇವೆಯಲ್ಲಿ ತೊಡಗಿದ್ದಾರೆ.

೩೩. ಸಭೆ, ಸಮಾರಂಭಗಳಲ್ಲಿ, ಕಛೇರಿಗಳಲ್ಲಿ ಮಾತಾಡುವುದಕ್ಕೆ ಭಯ ಪಡುವರು.

೩೪. ಉಡುಗೆ-ತೊಡುಗೆಗಳಲ್ಲಿ ಸಾಂಪ್ರದಾಯಿಕತೆ ಇದ್ದು, ಆಧುನಿಕತೆಗೆ ಒಗ್ಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

೩೫. ಇಡೀ ಅಥಣಿ ಪರಿಸರದಲ್ಲಿ ವಾಲ್ಮೀಕಿ ಸಮುದಾಯದ ಶಾಲೆಗಳು, ಕಾಲೇಜುಗಳು ಇಲ್ಲದಿರುವುದನ್ನು ಕಾಣಬಹುದು.

ವಕ್ತೃ ವಿವರ

ವಕ್ತೃ ವಿವರ

ಕ್ರ.ಸಂ.	ಹೆಸರು	ಊರು	ವಯಸ್ಸು	ವೃತ್ತಿ
೦೧.	ಶ್ರೀಶೈಲ ಗೋಪಾಲನಾಯಕ	ಕಲ್ಲೊತ್ತಿ	೫೫	ವ್ಯವಸಾಯ
೦೨.	ಭಗವಂತ ನಾಯಕ	ಕಲ್ಲೊತ್ತಿ	೬೦	ಕೂಲಿ
೦೩.	ಗೋಪಾಲ ನಾಯಕ	ಕಲ್ಲೊತ್ತಿ	೬೫	ಕೂಲಿ
೦೪.	ರಾಮಪ್ಪ ನಾಯಕ	ಕಲ್ಲೊತ್ತಿ	೫೮	ವ್ಯವಸಾಯ
೦೫.	ಸದಾಶಿವ ನರಸಿಂಹ ಮಾಕಣ್ಣವರ	ಶೇಡಬಾಳ	೪೧	ದೈಹಿಕ ಶಿಕ್ಷಕರು
೦೬.	ಮಹದೇವ ಬಸಪ್ಪ	ಶೇಡಬಾಳ	೨೬	ಶಿಕ್ಷಕರು
೦೭.	ಶ್ಯಾಬು ಬಣಚೋಡಿ	ಶೇಡಬಾಳ	೬೦	ವ್ಯವಸಾಯ
೦೮.	ಸಂಜೀವ ಮಾರುತಿ ಬಡಚಿ	ಶೇಡಬಾಳ	೬೨	ಗ್ರಾ.ಪಂ.ಸದಸ್ಯರು
೦೯.	ಹನುಮಂತ ಸೊಟ್ಟರಾಯ	ಶೇಡಬಾಳ	೪೦	ಗ್ರಾ.ಪಂ.ಸದಸ್ಯರು
೧೦.	ರೇಖಾ ಬಾಳಪ್ಪ ತುಪ್ಪಣ್ಣವರ	ಶೇಡಬಾಳ	೪೫	ಗ್ರಾ.ಪಂ.ಉದಾಧ್ಯಕ್ಷರು
೧೧.	ಲಕ್ಷ್ಮೀ ಸುನಿಲ್ ನರಸಾಯಿ	ಶೇಡಬಾಳ	೪೮	ಗ್ರಾ.ಪಂ.ಅಧ್ಯಕ್ಷರು
೧೨.	ಗದುಗಯ್ಯ ಅ.ಹಿರೇಮಠ	ಶೇಡಬಾಳ	೬೫	ಅರ್ಚಕರು
೧೩.	ಭೀಮಣ್ಣ ಮಾರುತಿ ಗುರುವ	ಶೇಡಬಾಳ	೪೮	ಅರ್ಚಕರು
೧೪.	ಅಜಿತ್ ಅ.ಗುರುವ	ಶೇಡಬಾಳ	೪೮	ವ್ಯವಸಾಯ
೧೫.	ಸುನಿತ ಸ.ಮಾಕಣ್ಣವರ	ಶೇಡಬಾಳ	೩೮	ಜಿ.ಪಂ.ಸದಸ್ಯರು
೧೬.	ಸಿದ್ದಪ್ಪ ಸ.ಹಳಬರ	ಐನಾಪುರ	೪೫	ವ್ಯವಸಾಯ
೧೭.	ಸಿದ್ದರಾಯ ಲ.ದೊಡ್ಡಮನಿ	ಐನಾಪುರ	೫೫	ಕೂಲಿ
೧೮.	ಮುದುಕಪ್ಪ ಅ.ನಾಯಕ	ಐನಾಪುರ	೬೦	ವ್ಯವಸಾಯ
೧೯.	ಬೋಜನ್ನವರ	ಅಥಣಿ	೪೫	ಪೋಲೀಸ್ ಇಲಾಖೆ
೨೦.	ಡಾ.ಜೆ.ಪಿ.ದೊಡ್ಡಮನಿ	ಅಥಣಿ	೪೮	ಉಪನ್ಯಾಸಕರು
೨೧.	ಶಂಕರ ದು.ನಾಯಕ	ಅಥಣಿ	೩೮	ಶಿಕ್ಷಕರು
೨೨.	ರಮೇಶ ಸಿಂದಗಿ	ಅಥಣಿ	೪೦	ಪತ್ರಿಕಾ ವರದಿಗಾರರು

೨೩.	ಸತೀಶ ಸಿಂದಗಿ	ಅಥಣಿ	೪೨	ಹೊಟೆಲ್ ಮಾಲೀಕರು
೨೪.	ಶ್ರೀದೇವಿ ನಾಯಕ	ಅಥಣಿ	೫೦	ಪುರಸಭೆ ಸದಸ್ಯರು
೨೫.	ಸಿದ್ದಪ್ಪ ಬಿ.ಕಣಗಲಿ	ಐನಾಪುರ	೫೦	ಗ್ರಾ.ಪಂ.ಉಪಾಧ್ಯಕ್ಷರು
೨೬.	ಶ್ರೀಮತಿ ಸಾವು ದೊಡ್ಡಮನಿ	ಐನಾಪುರ	೬೮	ಗೃಹಿಣಿ
೨೭.	ಅಣ್ಣಾಸಾಬ್ ನಿಡೋಣಿ	ಐನಾಪುರ	೭೦	ವಿಶ್ರಾಂತಿ ಮಾಜಿ ಸೈನಿಕ
೨೮.	ಲಿಂಗಪ್ಪ ಮಾ.ಪೂಜಾರಿ	ಐನಾಪುರ	೪೫	ಅರ್ಚಕ
೨೯.	ಮುತ್ತಣ್ಣಾ ಬಣಜವಾಡ	ಬಣಜವಾಡ	೫೫	ಕೃಷಿ
೩೦.	ಉದಯ ಕುಲಕರ್ಣಿ	ಅಥಣಿ	೫೦	ವ್ಯಾಪಾರ
೩೨.	ಭಗವಂತ ನಾಯಕ	ಕೃಷ್ಣಕಿತ್ತೂರು	೬೨	ಕೂಲಿ
೩೩.	ಶಿವರುದ್ರಪ್ಪ ಭೀ.ನಾಯಕ	ಕೃಷ್ಣಕಿತ್ತೂರು	೫೫	ಕೂಲಿ
೩೪.	ಸದಾಶಿವ ನಾಯಕ	ಕೃಷ್ಣಕಿತ್ತೂರು	೫೮	ಕೂಲಿ
೩೫.	ಗೋವಿಂದ ನಾಯಕ	ಸುಟ್ಟಟ್ಟಿ	೬೪	ವ್ಯವಸಾಯ
೩೬.	ಸಾಬು ಬ.ನಾಯಕ	ಹಾರೋಗೇರಿ	೩೮	ವ್ಯವಸಾಯ
೩೭.	ಅಶೋಕ ವ್ಹಿ.ಕುರಣೆ	ಆಡಳ್ಳಿ	೩೮	ಉಪನ್ಯಾಸಕರು
೩೮.	ನಾರಾಯಣ ಸಂ.ನಾಯಕ	ಅಡಾಳಹಟ್ಟಿ	೨೬	ಹಿ.ದ.ಸಹಾಯಕ
೩೯.	ಸುಖದೇವ ಸ.ನಾಯಕ	ಐನಾಪುರ	೨೦	ವಿದ್ಯಾಭ್ಯಾಸ
೪೦.	ರಮೇಶ್ ಬಿ.ನಾಯಕ	ಐನಾಪುರ	೨೫	ಅಧ್ಯಕ್ಷರು, ವಾ.ಸ.ಸೇ. ಸಂಘ
೪೧.	ವಿಠಲ ರಾ.ನಾಯಕ	ಐನಾಪುರ	೨೭	ವ್ಯವಸಾಯ
೪೨.	ರಾಜು ಅ.ನಾಯಕ	ಐನಾಪುರ	೫೫	ವ್ಯವಸಾಯ
೪೩.	ಭೀಮು ಕ.ನಾಯಕ	ಐನಾಪುರ	೬೨	ಗೃಹಿಣಿ
೪೪.	ಚಂದ್ರವ್ವ ಭೀ.ನಾಯಕ	ಐನಾಪುರ	೫೦	ಗೃಹಿಣಿ
೪೫.	ಮಾಲವ್ವ ಶಾ.ನಾಯಕ	ಐನಾಪುರ	೭೦	ಕೂಲಿ
೪೬.	ಸಕ್ಕೂಬಾಯಿ ಅ.ನಾಯಕ	ಐನಾಪುರ	೫೦	ವ್ಯವಸಾಯ
೪೭.	ಶಿವರುದ್ರಪ್ಪ ಭೀ.ನಾಯಕ	ಹಾಲಕನೂರು	೫೦	ಕೂಲಿ
೪೮.	ಪ್ರಕಾಶ ಅ.ನಾಯಕ	ಅಡಾಳಹಟ್ಟಿ	೬೦	ವ್ಯವಸಾಯ
೪೯.	ಸತ್ಯಪ್ಪ ನಾಯಕ	ರಡ್ಡೇರಹಟ್ಟಿ	೫೮	ವಿಶ್ರಾಂತಿ
೫೦.	ಪರಮೇಶ್ವರಪ್ಪ ನಾಯಕ	ರಡ್ಡೇರಹಟ್ಟಿ	೭೦	ವ್ಯವಸಾಯ
೫೧.	ಶಂಕರ ನಾಯಕ	ಮಂಗಸೂಳಿ	೬೨	ವಿಶ್ರಾಂತಿ

೫೨.	ಗಣಪತಿ ಸಿದ್ದುನಾಯಕ	ಮಂಗಸೂಳಿ	೭೦	ಕೃಷಿ
೫೩.	ಪರಶುರಾಮ	ಮಂಗಸೂಳಿ	೬೨	ವ್ಯವಸಾಯ
೫೪.	ತಮ್ಮಣ್ಣ ನಾಯಕ	ಬಣಜವಾಡ	೬೦	ಕೂಲಿ
೫೫.	ಸಂಜು ನಾಯಕ	ಮಂಗಸೂಳಿ	೪೦	ವ್ಯವಸಾಯ
೫೬.	ಲಕ್ಷ್ಮಣ ಭರಮು ನಾಯಕ	ಮಂಗಸೂಳಿ	೭೦	ಕೂಲಿ
೫೭.	ಸಿದ್ದಪ್ಪ ಲ.ಬೋಜನ್ನವರ	ನೇಸೂರು	೬೦	ಕೂಲಿ
೫೮.	ಲಕ್ಷ್ಮಪ್ಪ ನಾಯಕ	ನೇಸೂರು	೬೫	ವ್ಯವಸಾಯ
೫೯.	ಪಾರವ್ವ ನಾಯಕ	ಕೊಕ್ಕಟನೂರು	೬೮	ಕೂಲಿ
೬೦.	ಸಕ್ಕೂಬಾಯಿ	ಕೊಕ್ಕಟನೂರು	೪೨	ಕೂಲಿ
೬೧.	ಸುವರ್ಣ	ಕಟಗೇರಿ	೩೦	ಉಪನ್ಯಾಸಕಿ
೬೨.	ಡಿ.ಬಿ.ಪೂಜಾರಿ	ಕಟಗೇರಿ	೩೦	ಉಪನ್ಯಾಸಕ
೬೩.	ನಾಮದೇವ ನಾಯಕ	ಕಟಗೇರಿ	೩೫	ಕೂಲಿ
೬೪.	ವಿಲಾಸ್ ಕಾಂಬಳೆ	ಮುರುಗುಂಡಿ	೩೦	ಕೃಷಿ
೬೫.	ಸುರೇಶ್ ವಾಗಮೋರೆ	ಮುರುಗುಂಡಿ	೩೦	ಉಪನ್ಯಾಸಕಿ
೬೬.	ಲಕ್ಕವ್ವ ಬೇರಡ	ಬ್ಯಾಡರಹಟ್ಟಿ	೬೫	ಕೃಷಿ
೬೭.	ಕಲ್ಲಪ್ಪ ಲಾ.ನಾಯಕ	ಬ್ಯಾಡರಹಟ್ಟಿ	೬೪	ಕೃಷಿ
೬೮.	ಸಕ್ಕೂಬಾಯಿ ಮ.ನಾಯಕ	ಬ್ಯಾಡರಹಟ್ಟಿ	೬೫	ಕೂಲಿ
೬೯.	ಚಂದ್ರಪ್ಪ ಕ.ದೊಡ್ಡಮನಿ	ಬ್ಯಾಡರಹಟ್ಟಿ	೫೮	ಕೃಷಿ
೭೦.	ಮಾರುತಿ ಲ.ನಾಯಕ	ಬ್ಯಾಡರಹಟ್ಟಿ	೪೫	ಕೃಷಿ
೭೧.	ಸಂಗಪ್ಪ ಅ.ನಾಯಕ	ಕಟಗೇರಿ	೫೦	ಕೃಷಿ
೭೨.	ಶ್ರೀಶೈಲ ಮ.ನಾಯಕ	ಕಟಗೇರಿ	೫೦	ಕೃಷಿ

ಆಧಾರ ಗ್ರಂಥಗಳು

ಆಧಾರ ಗ್ರಂಥಗಳು

೦೧. ಅರ್ಜುನ ಗೊಳಸಂಗಿ, ದಲಿತರ ಬದುಕು ಮತ್ತು ಸಂಸ್ಕೃತಿ, ಜಾನಪದೀಯ ಅಧ್ಯಯನ ವಿಮೋಚನಾ ಪ್ರಕಾಶನ, ಅಥಣಿ, ೨೦೦೦.

೦೨. ಅರವಿಂದ ಮಾಲಗತ್ತಿ, ಉತ್ತರ ಕನಾಟಕದ ಜನಪದ ಆಟಗಳು, ಪಿಎಚ್.ಡಿ. ಪ್ರಬಂಧ, ಕರ್ನಾಟಕ ವಿವಿ, ಧಾರವಾಡ.

೦೩. ಡಾ.ಅಶೋಕ ನರೋಡೆ, ಏಕಲವ್ಯ ಒಂದು ಅಧ್ಯಯನ, ಸಿದ್ದೇಶ್ವರ ಪ್ರಕಾಶನ, ಹಂದಿಗುಂದ, ೨೦೦೧.

೦೪. ಅಂಬಳಿಕೆ ಹಿರಿಯಣ್ಣ, ಜಾನಪದ ಕೆಲವು ವಿಚಾರಗಳು, ಚೇತನ ಬುಕ್ ಹೌಸ್, ಮೈಸೂರು, ೧೯೯೬.

೦೫. ಕರಿಶೆಟ್ಟಿ ರುದ್ರಪ್ಪ, ಮ್ಯಾಸನಾಯಕರು ಒಂದು ಜನಾಂಗಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫.

೦೬. ಡಾ.ಜಿ.ಎಸ್.ಗದ್ದಗಿಮಠ, ಗದ್ದಗಿಮಠದ ಬರಹಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿವಿ, ೨೦೦೭.

೦೭. ಗೊ.ರು.ಚನ್ನಬಸಪ್ಪ, ಜಾನಪದ ಲೋಕ, ಗ್ರಾಮ ಚೇತನ, ಅಭಿನಂಧನಾ ಗ್ರಂಥ, ಲಕ್ಷ್ಮಿ ಮುದ್ರಣಾಲಯ, ಬೆಂಗಳೂರು, ೨೦೦೫.

೦೮. ಗೊ.ರು.ಚನ್ನಬಸಪ್ಪ, ಕರ್ನಾಟಕದ ಜಾನಪದ ಕಲೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೦೯. ಡಾ.ಪಿ.ಎಸ್.ತಳವಾರ, ಚಿತ್ರದುರ್ಗ ಜಿಲ್ಲೆಯ ವಾಲ್ಮೀಕಿ ಜನಾಂಗದ ಧರ್ಮ ಮತ್ತು ಸಮಾಜ, ಕರ್ನಾಟಕ ವಿವಿ, ಧಾರವಾಡ ಪಿಎಚ್.ಡಿ. ಮಹಾಪ್ರಬಂಧ, ೨೦೦೭.

೧೦. ತಾರಾಮತಿ ಬಿ., ಕರ್ನಾಟಕದ ಖಾಟಿಕ್ ಸಮುದಾಯ, ಪಿಎಚ್.ಡಿ. ಮಹಾಪ್ರಬಂಧ, ಕವಿವಿ,ಹಂಪಿ. ೨೦೦೭-೦೮.

೧೧. ತಾರಿಹಳ್ಳಿ ಹನುಮಂತಪ್ಪ, ಏಳುಕೇರಿಗಳು ಒಂದು ಅಧ್ಯಯನ, ಕನ್ನಡ ವಿವಿ, ಹಂಪಿ.

೧೨. ನಾಗೇಶ್ ಹಾ.ವೆ, ಭಾರತೀಯ ಗ್ರಾಮ, ಮೈಸೂರು ವಿವಿ, ಮೈಸೂರು.

೧೩. ನಾರಾಯಣ ಆನಿಖಿಂಡಿ, ಪ್ರ.ಸಂ.ಸುವರ್ಣ ಸುಗಂಧ, ಸ್ಮರಣ ಸಂಚಿಕೆ, ಸಾಹಿತ್ಯ ಸಾಂಸ್ಕೃತಿಕ ಸಂಘ ಅಥಣಿ, ೨೦೦೫.

೧೪. ಶ್ರೀಮತಿ ಪ್ರಭಾ ಬಾ.ಬೋರಗಾಂವಕರ, ಶಿಲ್ಪಧಾರ ಜಗತ್ ಸ್ಮರಣ ಸಂಚಿಕೆ, ಲೇಖನ, ವಿಶ್ವಕರ್ಮ

ಮಹಿಳೆ ಮತ್ತು ಕಲೆ, ಕರ್ನಾಟಕ ವಿಶ್ವಕರ್ಮ ಸಾಹಿತ್ಯ ಕಲಾ ಅಕಾಡೆಮಿ, ಶಿಲ್ಪೋತ್ಸವ ೫ ಜೂನ್, ೧೯೯೪.

೧೫. ಪ್ರಭಾಕರ ಎ.ಎಸ್.ಸಂ, ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಪ್ರಸಾರಾಂಗ, ಕವಿವಿ, ಹಂಪಿ. ೨೦೦೪.

೧೬. ಬೋರಲಿಂಗಯ್ಯ ಹಿ.ಚಿ., ಕರ್ನಾಟಕ ಜಾನಪದ ಕಲೆಗಳ ಕೋಶ, ಕವಿವಿ, ಹಂಪಿ. ಹಂಪಿ, ೧೯೯೬.

೧೭. ಡಾ.ಮಂಜುನಾಥ ಬೇವಿನಕಟ್ಟಿ, ಡಾ.ತಾರಿಹಳ್ಳಿ ಹನುಮಂತಪ್ಪ, ವಾಲ್ಮೀಕಿ ಸಂಪದ, ವಿಶ್ವಾಸ ಪ್ರಿಂಟ್ಸ್, ಚಾಮರಾಜನಗರ, ಬೆಂಗಳೂರು.

೧೮. ಮಂಜುನಾಥ ಬೇವಿನಕಟ್ಟಿ, ವ್ಯಾಧಚರಿತೆ, ಪ್ರಸಾರಾಂಗ, ಕವಿವಿ, ಹಂಪಿ, ೨೦೦೭.

೧೯. ಮಂಜುನಾಥ ಬೇವಿನಕಟ್ಟಿ, ಕನ್ನಡ ಜನಪದ ನಂಬಿಕೆಗಳು, ಜ್ಯೋತಿ ಪ್ರಕಾಶನ, ಮೈಸೂರು, ೨೦೦೭.

೨೦. ಮಲ್ಲಿಕಾ ಸಂ.ಮೇತ್ರಿ, ಜಾನಪದ ಆಟಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೬.

೨೧. ಯು.ಮಲ್ಲಿಕಾರ್ಜುನ, ಹೊಸಪೇಟೆ ತಾಲೂಕಿನ ಗರಡಿ ಸಂಪ್ರದಾಯ, ಕನ್ನಡ ವಿವಿ, ಹಂಪಿ, ಪಿಎಚ್.ಡಿ. ಮಹಾಪ್ರಬಂಧ, ೨೦೦೧.

೨೨. ವ್ಹಿ.ಎಸ್.ಮಾಳಿ, ಅಥಣಿ ತಾಲೂಕ ಸಮಗ್ರ ದರ್ಶನ, ವಿಮೋಚನ ಸಂಸ್ಥೆ, ಅಥಣಿ-೨೦೦೭.

೨೩. ಸ.ಚಿ.ರಮೇಶ, ಜಾನಪದ ಕರ್ನಾಟಕ, ಪ್ರಸಾರಾಂಗ, ಕವಿವಿ, ಹಂಪಿ, ೨೦೦೪.

೨೪. ಸ.ಚಿ.ರಮೇಶ, ಜಾನಪದ ಕರ್ನಾಟಕ, ಸಂಪುಟ.೩, ಸಂಚಿಕೆ ೧.ಪ್ರಸಾರಾಂಗ, ಕವಿವಿ, ಹಂಪಿ, ೨೦೦೪.

೨೫. ಎಂ.ಬಿ.ರಾಜಮಾನೆ, ಆದಿವಾಸಿಗಳು, ಗ್ರಾಮ ಚೇತನ, ಅಭಿನಂಧನಾ ಗ್ರಂಥ, ಲಕ್ಷ್ಮಿ ಮುದ್ರಣಾಲಯ, ಬೆಂಗಳೂರು, ೨೦೦೫.

೨೬. ಲಕ್ಕಪ್ಪಗೌಡ ಎಚ್.ಜೆ, ಒಗಟುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿವಿ, ಮೈಸೂರು.

೨೭. ವಿಜಯಲಕ್ಷ್ಮಿ ಕೆ.ಎಂ., ಬುಡಕಟ್ಟು ಮಹಿಳೆ, ಗ್ರಾಮ ಚೇತನ, ಅಭಿನಂಧನಾ ಗ್ರಂಥ, ಲಕ್ಷ್ಮಿ ಮುದ್ರಣಾಲಯ, ಬೆಂಗಳೂರು, ೨೦೦೫.

೨೮. ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕವಿವಿ, ಹಂಪಿ, ೨೦೦೮.

೨೯. ಸಿದ್ದಲಿಂಗಯ್ಯ, ಗ್ರಾಮ ದೇವತೆಗಳು, ಮೂಲಭಾರತಿ ಪ್ರಕಾಶನ, ಬೆಂಗಳೂರು, ೧೯೯೭.

೩೦. ಸುಜಾತ ಅಕ್ಕಿ, ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ, ಕನ್ನಡ ವಿವಿ, ಹಂಪಿ, ಪಿಎಚ್.ಡಿ. ಮಹಾಪ್ರಬಂಧ, ೨೦೦೪.

೩೧. ಎಸ್.ಎಸ್.ಹಿರೇಮಠ, ಜಾತ್ರೆಗಳು, ಸಮತಾ ಪ್ರಕಾಶನ, ಹೊಸಪೇಟೆ, ೧೯೯೩.



ತೆಂಗಿನ ಕಾಯಿ ಹರಕೆಯನ್ನು ರಥಕ್ಕೆ ಒಪ್ಪಿಸುವುದು





ಮಧುಮಕ್ಕಳಿಗೆ ಅರಿಶಿಣ ಹಚ್ಚುವುದು



ವಧುವರನ ತಾಯಿಂದಿರು ನಿಶ್ಚಿತಾರ್ಥದ ದಿನ ತಾಂಬುಲ ಬದಲಾಯಿಸುವುದು



ವಧು ವರನ ತಂದೆಯರು ನಿಶ್ಚಿತಾರ್ಥದ ದಿನ ತಾಂಬುಲ ಬದಲಾಯಿಸುವುದು



ವದು ವರರಿಗೆ ನೀರುಹಾಕಲು ಸುರಿಗೆ ಸುತ್ತಿರುವುದು



ವಧು ವರರಿಗೆ ನೀರುಹಾಕಲು ಸುರಿಗೆ ಸುತ್ತಿರುವುದು



ಕುಂಬಾರರ ಮನೆಯಿಂದ ಐರಾಣಿ ತರುತಿರುವುದು




ಮಾಂಗಲ್ಯಧಾರಣ



ಕಾಲು ತೊಳೆಯುವ ಸಾಮಾನು ಒಪ್ಪಿಸುವುದು



ಕನ್ಯಾದಾನ ಮಾಡುವುದು




ವರನಿಗೆ ವಧುವಿನಿಂದ ಪೂಜೆ



ವಧುವಿಗೆ ವರನಿಂದ ಪೂಜೆ



ವಧು ವರರು ಹಾರ ಬದಲಾಯಿಸುದು



ಆರತಕತೆ



ಹಿರೆಯರಿಗೆ ನಮಸ್ಕರಿಸುವುದು



ಕಳ್ಳಕುಬುಸ ಮಾಡುವುದು



ಗರ್ಭಿಣಿ ಸ್ತ್ರೀಗೆ ಸೀಮಂತ ಮಾಡುವುದು



ಕುಬುಸ ಮಾಡುವುದು



ಮಗುವಿಗೆ ನಾಮಕರಣ ಮಾಡುತ್ತಿರುವುದು



ಮಗುವಿನ ಹುಟ್ಟುಹಬ್ಬ



ಸಮುದಾಯದ ಜಿಲ್ಲಾ ಪಂಚಾಯ್ತ್ ಸದಸ್ಯೆಯೊಬ್ಬರು ಬೋರನ್ನು ಹಾಕಿಸುತ್ತಿರುವುದು



ಸಾಮಾಜಿಕ ಕಾರ್ಯಗಳಿಗೆ ಪ್ರಶಸ್ತಿ ಪಡೆಯುತ್ತಿರುವುದು



ಸಮುದಾಯದ ಸೈಕಲ್ ಸವಾರರು



ದೇಶ ಸೇವೆಯಲ್ಲಿ ಸಮುದಾಯದ ಯೋಧರು



ವಾಲ್ಮಿಕಿ ಸಮಾಜಸೇವ ಸಂಘದ ಉಧ್ಘಾಟನೆ



ಸಂಶೋಧಕರು ಸಮುದಾಯ ಕುರಿತು ಉಪನ್ಯಾಸ ನೀಡುತಿರುವದು



ವಾಹನವನ್ನು ಲಕ್ಷ್ಮಿ ಎಂದು ಸೀರೆ ಉಡಿಸಿ ಪೂಜಿಸಿರುವುದು



ಸಮೂದಾಯದ ಹಿರಿಯ ದಂಪತಿಗಳು



ಋತುಮತಿಯಾದ ಬಾಲೆಗೆ ಸೋದರತ್ತೆ [illegible] ಮಾಡುವದು